ಸರಳೆ ಅಲಂಕಾರ, ಗೀತ, ಸ್ವರಜತಿ, ವರ್ಣಗಳು ಮತ್ತು ತ್ಯಾಗಯ್ಯರ್, ಪಟ್ಣಂ ಸುಬ್ರಹ್ಮಣ್ಯಯ್ಯರ್, ದೀಕ್ಷಿತರು, ಸದಾಶಿವರಾಯರು, ರಾಮಶಾಸ್ತ್ರಿಗಳು ಮೊದಲಾದ, ಸುಪ್ರಸಿದ್ಧ ಸಂಗೀತ ವಿದ್ವಾಂಸರ 106 ಕೃತಿಗಳೂ ಜಾವಡಿಗಳು ಸ್ವರಚಿಹ್ನ ಸಹಿತವಾಗಿ ಇದರಲ್ಲಿ ಕೊಡಲ್ಪಟ್ಟಿವೆ.

ಪಾಸಲು. 0—6—0 ಬೆಲೆ 2—4—0

ಹಾರ್ಮೋನಿಯಂ ಸ್ವಯಂಬೋಧೆ.

0—12—0.

ಹೆಚ್. ಎಸ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು ಚಿಕ್ಕಪೇಟೆ ಬೆಂಗಳೂರು ಸಿಟಿ,

ತಯಾರಾಗಿವೆ! ತಯಾರಾಗಿವೆ!!

ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

Edited Printed & Published by V. S. Kamath ...

[illegible] ರೂಪಾಯಿ 1-0-0 | [illegible] | [illegible] ರೂಪಾಯಿ 2-18-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯಮರ್ಹಾರ್ಣ್ಯಸ್ತುತುಷ್ಟುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ || ಸುಧಾಂ ವಿನಾ ನ ಪ್ರಯುಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರನಿಗವಂ | ತರುಷವಾಯಿತೆ! ಮತ್ತೆ ವಿಷವು ಸುಧುಕ ಬರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಸ್ವಸ್ಥರ ತೆರವಿ ಸಾಗಕರ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೩. | ಮಂಗಳೂರು, ತಾ. ೮ನೇ ಶುಕ್ರವಾರ ಮಾರ್ಚಿ ೧೯೨೯. | (8—3—'29.) | ಸಂಚಿಕೆ ೧೦

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR Mangalore
ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮಂಗಳೂರು

1. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000- 3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 96,600-
2. ತೆತ್ತ [illegible] ಮೂಲಧನ ರೂ. 1,99,650- 4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ್ದು ರೂ. 3,34,218-50-

Bank Receives,
Season Deposits at its Head Office and Branches for 3, 4, 5, & 6 months at $6\frac{1}{2}$ *p. c.*

ಬೇಂಕಿನ ಹೆಡ್ಡ ಆಫೀಸಿನಲ್ಲಿಯೂ ವ ಇದರ ಬ್ರಾಂಚ್ ಆಫೀಸುಗಳಲ್ಲಿಯೂ ಮುಸಂ ಠೇವಣಾತಿಗಳನ್ನು ತಿಂಗಳು 3, 4, 5, ಮತ್ತು 6ರ ಅವಧಿಗೆ ಶೇಕಡಾ $6\frac{1}{2}$ರ ಬಡ್ಡಿಯಿಂದ ಪಡ ಕೊಳ್ಳೋಣಾಗುತ್ತದೆ.

Office of the Corporation, UDIPI, 16-1-'29. **N. ANANDA RAO**, *Secretary*

ಅಮೃತಾಂಜನ.

[illegible] ನೆಗಡಿ [illegible] ಬೆಲೆ ಆಣೆ [illegible], ಬ. ಖ. ಬೇರೆ.

ರಿಂಗ್ ವರ್ಮ್ ಮುಲಾಮು:— [illegible] ಪಟ್ಟಿಗೆ ಆಣೆ 6, ಟ. ಖ. ಬೇರೆ.

ದಂತಮಂಜನ:— [illegible] ಪಟ್ಟಿಗೆ ಆಣೆ 2, ಟ. ಖ. ಬೇರೆ.

ಅಮೃತಾಂಜನ ಡಿಪೋ.
ಮದರಾಸು ಮತ್ತು ಬೊಂಬ್ಬಾ.

ಮಕ್ಕಳ ಸಲುವಾಗಿ.

ಡೋಂಗರ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲಿ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ದಿ ಊಲನ್ ವರ್ಕ್ಸ್, ಮಂಗಳೂರು.

ಬಹುಮಾನ! ಬಹುಮಾನ!

1929ನೇ ವರುಷದ ಸರಸ್ವತೀ ಕ್ಯಾಲೆಂಡರ್.

[illegible] ಕನ್ನಡ ಕಥೆ ಕಾವ್ಯ, ನಾಟಕ, ಕೀರ್ತನೆ, [illegible] ಪಟ್ಟಿಗೆ ಕೂಡಲೇ ಬರೆದು ತರಿಸಿಕೊಳ್ಳಿರಿ.

ಈ ವೇಳೆ [illegible] ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು.

ಸೌಭಾಗ್ಯ [illegible]	1—[illegible]—	[illegible]	—4—
[illegible] ದೇವಿ	—12—	[illegible]	1—12—
[illegible] ಭಾರತ	1—12—	[illegible] ರಾಮಾಯಣ	1—[illegible]—
ಆನಂದ ಮಠ	—12—	[illegible] ಭಾರತ	1—8—

ಲಾ ಪುಸ್ತಕಗಳು.

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4—[illegible]
	ಭಾಗ II	4—8—
ವ್ಯವಹಾರ ಲೇಖ್ಯ ಬೋಧಿನಿ		4—8—
ಕ್ರಿಮಿನಲ್ ಪ್ರೊಸೀಜರ್ ಕೋಡ್		3 [illegible]
ಇಂಡಿಯನ್ ಪೀನಲ್ ಕೋಡ್		

ಶ್ರೀ ಸರಸ್ವತೀ [illegible]
ಪ್ರಸಿದ್ಧ [illegible]
[illegible]
(ಕೃಷ್ಣಂಗಳಲ್ಲಿ ಇರುವ ಎಲ್ಲಾ ಪುಸ್ತಕಗಳು

[illegible]

[illegible] ಅಂದೇ ಭಾರತ ಮಾತೆಯು ತನ್ನ ವಿದ್ಯಾಲಯಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ [illegible] ಮಕ್ಕಳುಗಳನ್ನು ಕಾಲೇಜುಗಳನ್ನು ಬಿಟ್ಟು ತಾಯಿಯ ಸೇವೆಗಾಗಿ ಅಸಹಕಾರಯೋಗ ಗೈಯಲು ಗುಂಪು ಗುಂಪಾಗಿ ಹೊರಹೊರಟರು. ಅನಂತರಾಯನೂ ಅವರಲ್ಲಿ ಒಬ್ಬನು.

ಅನಂತರಾಯನು ಮಂಗಳೂರಿನ ಒಂದು ಹೊಸ್ಟೇಲಿನಲ್ಲಿದ್ದು ಅಲ್ಲಿಯ ಅವುದೋ ಒಂದು ಕಾಲೇಜಿನಲ್ಲಿ ಕಲಿಯುತ್ತಿದ್ದನು. ಆತನಿಗೆ ಊರಲ್ಲಿ ವೃದ್ಧ ತಾಯಿ ವೃದ್ಧ ತಂದೆಯೂ ಒಬ್ಬ ಅಣ್ಣನೂ ಇದ್ದರು. ಅಣ್ಣನ ಹೆಸರು ಶಿವರಾಯ. ಆತನು ಮಾತ್ರ ಮದ್ರಾಸಿನಲ್ಲಿ ಒಂದು ಸಣ್ಣ ಸರಕಾರಿ ಉದ್ಯೋಗಸ್ಥನಾಗಿದ್ದನು. ಆತನು ಕಳುಹಿಸಿದ ಹಣದಿಂದಲೇ ಇವರ ಕುಟುಂಬದ ಖರ್ಚೂ ಅನಂತರಾಯನ ವಿದ್ಯಾಭ್ಯಾಸದ ಖರ್ಚೂ ಹೋಗುತ್ತಿತ್ತು.

ಥಟ್ಟನೆ ಒಂದು ದಿವಸ ಅನಂತರಾಯನು ತಾನು ಇನ್ನು ಮುಂದೆ ಕಾಲೇಜಿಗೆ ಹೋಗುವುದಿಲ್ಲವಾಗಿಯೂ ಅದರ ಬದಲಾಗಿ ದೇಶಸೇವೆಯನ್ನು ಮಾಡುವುದಾಗಿಯೂ ಕಾಗದವನ್ನು ಬರೆದನು. ಆಗಲೇ ವೃದ್ಧ ಪಿತನು ಯೋಚಿಸಿಕೊಂಡಿದ್ದ ಸರ್ವ ಆಶಾ ಮಂದಿರಗಳೂ ಭಗ್ನವಾದಂತಾದುವು. ಅನಂತರಾಯನ ವಿಷಯದಲ್ಲಿ ಆತನು ಯಾವ ಆಕಾಂಕ್ಷೆಯನ್ನು ಬೆಳೆಸಿದ್ದನೋ ಅದೀಗ ಅನಂತರಾಯನ ಪತ್ರವನ್ನೋದಿದೊಡನೆಯೇ ಭಸ್ಮೀಭೂತವಾದಂತಾಯಿತು.

ವೃದ್ಧ ತಂದೆಯು ಪುತ್ರನ ಯೋಚನೆಯನ್ನು ಬದಲಾಯಿಸಲು ಹಲವು ಯತ್ನಗಳನ್ನು ಮಾಡಿದನು. ಕಿಂತು ಅನಂತರಾಯನ ನಿಶ್ಚಯವು ದೃಢವಾದುದರಿಂದ ಆತನ ಯತ್ನಗಳು ಪ್ರಯೋಜನವಾಗಲಿಲ್ಲ. ವೃದ್ಧನು ಇನ್ನು ಸುಮ್ಮಗಾದನು.

ಅನಂತರಾಯನೂ ಯೋಗ್ಯ ಸಂದರ್ಭವು ದೊರಕಿದುದರಿಂದ ಒಬ್ಬ ಪ್ರಮುಖ ದೇಶ ಹಿತೈಷಿಯಾಗಿದ್ದನು!

ಎರಡು.

ಹೀಗೆಯೇ ಮೂರು ನಾಲ್ಕು ವರುಷಗಳು ಕಳೆದುವು. ಈ ಕಾಲದಲ್ಲಿ ಅನಂತರಾಯನು ಒಮ್ಮೆಯಾದರೂ ಮನೆಗೆ ಬರಲಿಲ್ಲ. ಕೆಲವು ಸಾರಿ ಪಟ್ಟಣದಲ್ಲಿದ್ದುಕೊಂಡು ಕೆಲವು ಸಾರಿ ಗ್ರಾಮದಲ್ಲಿ ಸಂಚರಿಸಿ 'ಕಾಂಗ್ರೆಸ್ಸಿ'ನ ಕಡೆಯಿಂದ ಅನಂತರಾಯನು ಪೂರ್ಣೋದ್ಯಮದಿಂದ ಕೆಲಸವನ್ನು ನಡೆಯಿಸುತ್ತಿದ್ದನು. ಖದ್ದರಿನ ಪ್ರಚಾರ, ಗ್ರಾಮಸಂಸ್ಕಾರ, ಭಾಷಣಗಳ ಮೂಲಕ ಜನಮತಜಾಗೃತಿ, ರಾಷ್ಟ್ರವಿದ್ಯಾಲಯ, ಧರ್ಮ ಚಿಕಿತ್ಸಾಲಯ ಮುಂತಾದವುಗಳ ಉದ್ಬೋಧನ ಕಾರ್ಯದಲ್ಲೇ ಆತನು ವ್ಯಸ್ತನಾಗಿರುವನಲ್ಲದೆ ವೃದ್ಧ ತಂದೆತಾಯಿಗಳ ವಿಷಯವಾದ ಯೋಚನೆಯು ಕೂಡ ಆತನಲ್ಲಿ ಬರುತ್ತಿರಲಿಲ್ಲ. ವೃದ್ಧ ತಂದೆಯು ಅನಂತರಾಯನಿಗೆ ಒಮ್ಮೆಯಾದರೂ ಮನೆಗೆ ಬಂದು ಹೋಗಬೇಕೆಂಬುದಾಗಿ ಪತ್ರ ಬರೆದರೂ ಆತನಿಗೆ ಈಗ ಸಮಯವಿಲ್ಲ"ವೆಂಬುದಾಗಿ ಇಷ್ಟೇ ಉತ್ತರಕೊಟ್ಟು ಆ ಕಡೆಯ ಯೋಚನೆಯನ್ನು ಬಿಟ್ಟುಬಿಡುತ್ತಿದ್ದನು. ವಾಸ್ತವಿಕವಾಗಿಯೂ ಆತನಿಗೆ ಸಮಯವಿರಲಿಲ್ಲ. ಆತನು ಆಗ ಸ್ವಯಂಸೇವಕ ದಳಕ್ಕೆ ಯುವಕರನ್ನು ಕೂಡಿಸುವ ಕಾರ್ಯದಲ್ಲಿ ಮಗ್ನನಾಗಿದ್ದನು.

ಮೂರು.

ಪ್ರಭಾತದ ಬೆಳಕು ರಾತ್ರಿಯ ಅಂಧಕಾರದ ನಡುವಿನಿಂದ ಇನ್ನೂ ಉಜ್ವಲವಾಗಿ ಪ್ರಕಾಶಿತವಾಗಲಿಲ್ಲ. ಅನಂತರಾಯನು ಮಾತ್ರ ತನ್ನ ಹಾಸಿಗೆಯನ್ನು ಬಿಟ್ಟು ಹೊರಗೆ ಒಂದು ನಿಂತುಕೊಂಡು ಏನನ್ನೋ ಧ್ಯಾನಿಸುತ್ತಿದ್ದಂತೆ ತೋರುತ್ತಿದ್ದನು. ಧ್ಯಾನಿಸುವುದೇನೋ ನಾವರಿಯೆವು. ಅಷ್ಟರಲ್ಲಿ ಆ ಗ್ರಾಮದ ಟಪ್ಪಾಲು ಪೇದೆಯು ಅಲ್ಲಿಗೆ ಬಂದು ಅನಂತರಾಯನ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟನು. ಅದರಲ್ಲಿ ಹೀಗೆ ಉಲ್ಲೇಖಿತವಾಗಿದ್ದಿತು.

ಚಿರಂಜೀವಿ ಅನಂತಾ—

ನಿನ್ನ ಅಣ್ಣನಾದ ಶಿವನು ಮೊನ್ನೆಯ ರಾತ್ರಿ ವಿಷಮಜ್ವರದಿಂದ ಪೀಡಿತನಾಗಿ ನಮ್ಮೆಲ್ಲರನ್ನೂ ಶೋಕ ಸಾಗರದಲ್ಲಿ ಅದ್ದಿ ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗಿರುವನೆಂಬ [illegible] ನಿನಗೆ ತಿಳಿಸಲು ತುಂಬಾ ದುಃಖವಾಗುತ್ತದೆ. [illegible]ನಲ್ಲಿ ಒದಗಿದ ಈ ಪುತ್ರವಿಯೋಗ [illegible] ಎಷ್ಟು [illegible]

[illegible] ನಿನ್ನ ತಂದೆ.

ಅಗ್ರಜನ ಅಕಾಲ ಮೃತ್ಯುವನ್ನು ಕೇಳಿದುದರಿಂದ ಅನಂತರಾಯನು ದುಃಖಿತನಾಗಿ ಕಣ್ಣುಗಳಿಂದ ಅಶ್ರುಗಳ ಧಾರೆಯನ್ನು ಎರೆದುಬಿಟ್ಟನು; ಆದರೆ ದುಃಖಿಸುತ್ತ ಕುಳಿತುಕೊಳ್ಳಲು ಆತನಿಗೆ ಸಾಧ್ಯವಿಲ್ಲ. ಸನ್ಮುಖದಲ್ಲಿ ಮುಖ್ಯಕಾರ್ಯವಿದೆಯಲ್ಲವೇ! ಆಗ ಗ್ರಾಮದಲ್ಲಿ ದುರ್ಭಿಕ್ಷ, ಪ್ಲೇಗು, ವಾಂತಿಭೇದಿ, ಸಿಡುಬು, ಈ ನಾಲ್ಕು ರಕ್ಕಸರು ಸಮಸ್ತ ನರನಾರಿಯರ ಪ್ರಾಣಗಳನ್ನು ನುಂಗಲು ಬಾಯಿಯನ್ನು ತೆರೆದಿರುವುವು. ಅನಂತರಾಯನು ಈ ಸಮಯದಲ್ಲಿ ಹತಭಾಗ್ಯರಾದ ನರನಾರಿಯರಿಗೆ ಸಹಾಯ ಮಾಡುವುದರಲ್ಲೇ ವ್ಯಸ್ತನಾಗಿದ್ದನು. ಒಟ್ಟಾರೆ ಆತನ ಹಸ್ತ ಪಾದಗಳಿಗೆಂಬಂತೆ ಪ್ರಬಲವಾದ ಕೆಲಸವಿದೆ. ಆದುದರಿಂದ ತಂದೆಯು ಈ ಸಾರಿ ಬರೆದ ಪತ್ರಕ್ಕೆ ಅನಂತರಾಯನು "ಈಗ ಒಂದು ನಿಮಿಷವಾದರೂ ಸಮಯವಿಲ್ಲ" ಎಂದಿಷ್ಟೇ ಉತ್ತರವನ್ನು ಬರೆದನು.

ಪುತ್ರನ ಉತ್ತರವನ್ನೋದಿದೊಡನೆಯೇ ವೃದ್ಧ ತಂದೆಗೆ ಸಿಡಿಲು ಬಡಿದಂತಾಯಿತು. ಆತನು ಸುಮ್ಮನೆ ಕುಳಿತುಬಿಟ್ಟನು. ವೃದ್ಧ ತಂದೆತಾಯಿಗಳು ಪುತ್ರಶೋಕದಿಂದ ಹುಚ್ಚರಂತಾಗಿರುವರು.... ತಾಯಿಯಂತೂ ಮರುಗಿ ಮರುಗಿ ಅಂಧಳಾಗಿರುವಳು. ತಂದೆತಾಯಿಗಳನ್ನು ಒಮ್ಮೆಯಾದರೂ ನೋಡಿ ಹೋಗಲು ಬಾರದಂತೆ ಮಾಡುವ ಆ ದೇಶಸೇವೆಯು ಎಷ್ಟು ಪ್ರಬಲವಾಗಿರುವುದೋ ದೇವರೇ ಬಲ್ಲ!

ವೃದ್ಧ ಪಿತನು ಇನ್ನೊಂದು ಪತ್ರವನ್ನು ಬರೆದನು. ಈ ಬಾರಿಯ ಪತ್ರದಲ್ಲಿ ಆತನು "ಉಪಾರ್ಜನಕ್ಷಮ ಪುತ್ರನಿಲ್ಲದಿದ್ದುದರಿಂದ ಆತನ ಸಂಸಾರವು ಅಚಲವಾಗಿರುವುದಾಗಿಯೂ ಆತನು ಈಗ ಅವುದಾದರೂ ಚಾಕರಿಯನ್ನು ಮಾಡಿಯಾಗಲೀ ವ್ಯಾಪಾರವನ್ನು ಮಾಡಿಯಾಗಲೀ ವೃದ್ಧ ತಂದೆತಾಯಿಗಳನ್ನು ಸಾಕಬೇಕೆಂಬುದಾಗಿಯೂ, ಹೀಗೆ ಮಾಡಲು ತಪ್ಪಿದರೆ ತಾವು ಅನಾಥರಾಗುವೆವೆಂಬುದಾಗಿಯೂ" ಬರೆದಿದ್ದನು.

ಈ ಪತ್ರವನ್ನು ಓದಿ ಅನಂತರಾಯನು ನಡುಗಿದನು.

ಇದೇನು! ಈಗ ಸ್ವಾರ್ಥದಾಶೆಯ ವಿಷಯವು! ಈಗ ವಿನಾ ವಿರಾಮ ಹಣವನ್ನು ಸಂಪಾದಿಸ [illegible] ಚಾಕರಿಮಾಡ ಎಂಬ ಬೋಧನೆ! ಇವನ್ನು ಯೋಚಿಸಿ ಅನಂತರಾಯನು ತನ್ನ ಪ್ರಕೃತ ಈ ವೃದ್ಧ ತಂದೆತಾಯಿಗಳೇ ತಮ್ಮ ಮಕ್ಕಳ ಅಧೋಗತಿಗೆ ಕಾರಣಭೂತರಾಗಿರುವರು ಎಂದುಕೊಂಡನು. ಅವರೇ ತಮ್ಮ ಮಕ್ಕಳಿಗೆ ದಾಸತ್ವ ವೃತ್ತಿಗೆ ಕೈ ಹಚ್ಚಿಸ ಮಂಥರರು! ಅವನು ತನ್ನ ಸ್ವಾರ್ಥವನ್ನು ತೊರೆದು, ತನ್ನ ಸುಖದುಃಖಗಳನ್ನು ಕೂಡಾ ಅಲಕ್ಷಿಸಿ ದೇಶಸೇವೆಯನ್ನು ಮಾಡಿ ಭಾರತ ಭೂಮಿಯ ಯೋಗ್ಯ ಪುತ್ರನೆಂದೆನಿಸಿಕೊಂಡಿರುವನೋ ಅಂಥವನ ತಂದೆಯೇ ಇಂದು ಸಾಮಾನ್ಯ ಉದರ ಅನ್ನಕ್ಕಾಗಿ ಅಪರ ಚಾಕರಿಯನ್ನು ಮಾಡಲು ಅನುರೋಧಿಸುವುದೆಂದರೇನು? ಸ್ವಾರ್ಥತ್ಯಾಗದ ಅಭಿಧಾನ ಉದಾಹರಣೆಯನ್ನು ಪ್ರದರ್ಶಿಸಿ ಅವನು ಇಂದು ದೇಶದಲ್ಲೆಲ್ಲ ಯಥೇಷ್ಟ ಕೀರ್ತಿಯನ್ನು ಸಂಪಾದಿಸಿರುವನೋ ಅಂಥವನ ತಂದೆಯೇ ಇಂದು ಆ ಅಕಳಂಕ ವಿಮಲ ಕೀರ್ತಿಗೆ ಕಳಂಕವನ್ನು ತರಲು ಅಪೇಕ್ಷಿಸುವನೇ!

ಅನಂತರಾಯನು ಈ ಬಾರಿಯ ಪತ್ರಕ್ಕೆ ಉತ್ತರವನ್ನು ಕೊಟ್ಟನು. ಆತನ ಉತ್ತರದ ಸಾರಾಂಶವಿಷ್ಟೆ. ತಾನು ಎಂದೂ ಚಾಕರಿಯನ್ನು ಮಾಡಲಾರೆನೆಂದೂ ವ್ಯಾಪಾರ ಮಾಡಲಿಕ್ಕೆ ಸಾಧ್ಯವಿಲ್ಲವೆಂದೂ ಆತನ ಉತ್ತರದಲ್ಲಿದ್ದಿತು.

ನಾಲ್ಕು.

ಹೀಗೆಯೇ ಒಂದು ವರುಷ ಕಳೆದುಹೋಯಿತು. ಈ ಮಧ್ಯಕಾಲದಲ್ಲಿ ತಂದೆಯಿಂದ ಮಗನಿಗಾಗಲೀ ಮಗನಿಂದ ತಂದೆಗಾಗಲೀ ಒಂದೇ ಒಂದಾದರೂ ಪತ್ರವು ಬರಲಿಲ್ಲ. ಪುತ್ರ ವಿದ್ದೂ ಇಲ್ಲದಂತಾಯಿತು ಎಂದು ತಂದೆಯು ಭಾವಿಸಿಕೊಂಡನು. ಪುತ್ರನು ದೇಶಸೇವೆಯಲ್ಲಿ ಮಗ್ನನಾಗಿ ತಂದೆಗೆ ಒಂದು ಪತ್ರವನ್ನು ಬರೆಯುವಷ್ಟರ ಪುರುಸೊತ್ತಿನ ಸಮಯವು ಆತನಿಗೆ ದೊರಕಲಾರದೇ? ಆವ ಪುತ್ರನಿಂದ ಕಳುಹಿಸಲ್ಪಡುತ್ತಿದ್ದ ಹಣದಿಂದ ಸಂಸಾರವು ನಡೆಯುತ್ತಿತ್ತೋ ಅದೇ ಪುತ್ರನ ಅಭಾವದಿಂದ ಇಂದು ವೃದ್ಧನ ಸಂಸಾರವು ಅಚಲವಾಗಿದೆ. ಪ್ರಥಮದಲ್ಲಿ ಕೆಲವು ತಿಂಗಳು ಅಲಂಕಾರಾದಿಗಳ ವಿಕ್ರಯದಿಂದ [illegible]

[illegible] ಇಷ್ಟು ದಿನದ [illegible] ಕಷ್ಟ!

ಅಷ್ಟರಲ್ಲಿ ನಿರುಪಾಯನಾಗಿ ವೃದ್ಧ [illegible] ಪತ್ನಿಯ ಹಸ್ತವನ್ನು ಹಿಡಿದು ಹೊರಗೆ ಹೋಗಿ ಭಿಕ್ಷೆಯನ್ನು ಬೇಡಲು ಪ್ರಾರಂಭಿಸಿದನು. ಅಂದಿನಿಂದ ಆತನು ಆ ಗ್ರಾಮದಲ್ಲಿ ಆರಿಗೂ ಕಾಣಸಿಗಲಿಲ್ಲ.

ಐದು.

ಗ್ರಾಮದ ಹೆಸರು ಸೋಮೇಶ್ವರ. ಗ್ರಾಮದ ಅವಸ್ಥೆಯು ಅಷ್ಟೊಂದು ಚೆನ್ನಾಗಿಲ್ಲ. ಗ್ರಾಮದ ನಾಲ್ಕು ಬದಿಗಳಲ್ಲೂ ಭಯಂಕರ ಕಾಡು. ಪುಷ್ಕರಿಣಿಯಲ್ಲಾಗಲೀ, ಸಮೀಪದ ನದಿಯಲ್ಲಾಗಲೀ ಜಲವಿಲ್ಲ, ಗ್ರಾಮ ವಾಸಿಗಳ ಹೊಟ್ಟೆಗೆ ಅನ್ನವಿಲ್ಲ, ರೋಗಕ್ಕೆ ಚಿಕಿತ್ಸೆಮಾಡಲು ವೈದ್ಯರಿಲ್ಲ, ವಿದ್ಯಾಭ್ಯಾಸಕ್ಕೆ ಸರಿಯಾದ ಶಾಲೆಯಿಲ್ಲ. ಒಟ್ಟು ನಾಲ್ಕು ಕಡೆಗಳಿಂದಲೂ 'ಇಲ್ಲ' 'ಇಲ್ಲ' ಎಂಬ ರವವೇ ಕೇಳಬರುತ್ತಿದೆ.

ಅನಂತರಾಯನ ಸ್ವಯಂಸೇವಕ ದಳದವರು ಈ ಗ್ರಾಮಕ್ಕೆ ಬಂದು ಸಂಸ್ಕಾರ ಕಾರ್ಯವನ್ನು ಪ್ರಾರಂಭಿಸಿರುವರು. ಆಗ ಮಧ್ಯಾಹ್ನ ಎರಡು ಗಂಟೆಯಾಗಿರಬಹುದು. ಚೈತ್ರಮಾಸದ ಪ್ರಚಂಡ ಸೂರ್ಯನ ಉತ್ತಾಪದಿಂದ ದಗ್ಧವಾಗುತ್ತಿರುವುದಾದರೂ ಅನಂತರಾಯನು ತನ್ನ ಸ್ವಯಂಸೇವಕರೊಂದಿಗೆ ಜಲರಹಿತವಾದ ಪುಷ್ಕರಣಿಯನ್ನು ತೋಡುತ್ತಿರುವನು. ಇಷ್ಟರಲ್ಲಿ ಅರೆಸೀ ಒಬ್ಬನು ಬಂದು ಒಬ್ಬ ವೃದ್ಧ ಮನುಷ್ಯನೂ ಒಬ್ಬ ವೃದ್ಧ ಹೆಂಗಸೂ ರಸ್ತೆಯ ಪಾರ್ಶ್ವದಲ್ಲಿ ಸತ್ತುಬಿದ್ದಿರುವುದಾಗಿಯೂ ಬಿಸಿಲಲ್ಲಿ ಬಿದ್ದ ಅವರ ದೇಹಗಳು ಬಾಡುತ್ತಿರುವುವಾಗಿಯೂ ಹೇಳಿದನು. ಅದನ್ನು ಕೇಳಿದೊಡನೆಯೇ ಅನಂತರಾಯನು ನಾಲ್ಕೈದು ಮಂದಿ ಸ್ವಯಂಸೇವಕರನ್ನು ಸಂಗಡ ಕರೆದುಕೊಂಡು ಹೆಣಗಳನ್ನು ತೆಗೆಯಲಿಕ್ಕೆಂದು ಹೋದನು. ಅನಂತರಾಯನು ಎಂದು ಹೆಣಗಳ ಹತ್ತಿರ ಬಂದು ನಿಂತನೋ ಆಗ ಆತನ ಶ್ವಾಸವು ಕಟ್ಟಿದಂತಾಯಿತು. ಅಶ್ರುಗಳು ಆತನ ಕಣ್ಣುಗಳಿಂದ ಸುರಿದುವು. ಅವರೇ ಅನಂತರಾಯನ ವೃದ್ಧ ತಂದೆತಾಯಿಗಳು. ಭಿಕ್ಷೆ ಬೇಡುವುದಕ್ಕಾಗಿ ಈ ಗ್ರಾಮಕ್ಕೆ ಬಂದವರು.

ಅನಂತರಾಯನಿಗೆ ತಾನು ನಿಂತುಕೊಂಡ ಭೂಮಿಯು ಕಂಪಿಸಿದಂತಾಯಿತು. ಮಧ್ಯಾಹ್ನದ ಪ್ರಚಂಡ ಸೂರ್ಯನು ಕೆಂಡದ ಉಂಡೆಯಾಗಿ ತಿರುಗಿದಂತೆ ಕಾಣಿಸಿತು. ಆತನ ಹೊಟ್ಟೆಯಲ್ಲಿ ಸೂಜಿಯಿಂದ ಚುಚ್ಚಿದಂತೆ ಒಂದು ವಿಧ ವೇದನೆಯು ತೋರಿತು. ಅನಂತರಾಯನಿಗೆ ತನ್ನ ಸ್ಥಿತಿಕ್ಕೆ ಬರಲಿಲ್ಲ. ಅಲ್ಲೇ ಕೂತುಬಿಟ್ಟನು. ಆಗಲೇ ಒಂದು ಅಸ್ಫುಟ ಆರ್ತನಾದವು ಆತನ ವಕ್ಷವನ್ನು ಭೇದಿಸಿ ಹೊರಕ್ಕೆ ಹೋಯಿತು.

ಹಣ್ಣುಗಳ ಆವಶ್ಯಕತೆ.

ಆರೋಗ್ಯಕ್ಕೆ ಹಣ್ಣುಗಳ ತಿಂಬೋಣವು ಬಹು ಫಲಕಾರಿಯಾಗಿರುತ್ತದೆ. ಹಿರಿಯರ ಕಾಲದಿಂದಲೂ ಇದೇ ಅಭಿಪ್ರಾಯವು ನೆಲಸಿರುತ್ತದೆಂಬುದಕ್ಕೆ 'ಫಲಾಹಾರ' ಎಂಬ ಒಂದೇ ಶಬ್ದವೇ ಸಾಕಾಗಿದೆ. ಅಂತೆ ಫಲಗಳಿಗೆ ಅಷ್ಟು ಶ್ರೇಷ್ಠತ್ವವು ಪುರಾತನ ಕಾಲದಿಂದಲೂ ಕೊಡಲ್ಪಟ್ಟಿರುತ್ತದೆ. ಕಿತ್ತಳೆ, ದ್ರಾಕ್ಷಿ, ಸೇಬು ನೊರಂಜಿ ಹಣ್ಣುಗಳಿಂದ ಹೊಟ್ಟೆ ತುಂಬಲಾರದೆಂದೂ ಅವುಗಳ ರಸಸ್ವಾದನೆಗಾಗಿ ಹಲವು ಹಣ್ಣುಗಳನ್ನು ತಿನ್ನಬೇಕಾಗುವದೆಂಬುದೂ ನಿಜ. ಆದರೆ ಅವುಗಳ ರಸದಲ್ಲಿರುವ ಪ್ರಯೋಜನವು ಅಪರಿಮಿತವಾಗಿದೆ. ವನಸ್ಪತಿ ಆಹಾರವನ್ನೂ, ಫಲಾದಿಗಳನ್ನೂ ತಿನ್ನುವುದರಿಂದ ಮಾತ್ರವೇ ನಮ್ಮ ಶರೀರದಲ್ಲಿ ಶಕ್ತಿ ವರ್ಧಿಸುವುದು. ಹಣ್ಣುಗಳಿಂದಲೇ ರಕ್ತವು ಹೆಚ್ಚಾಗುವುದು. ರಕ್ತವು ಶುದ್ಧವಾಗುವುದು. ಇನ್ನೂ ಹೇಳುವುದಾದರೆ ಹಣ್ಣುಗಳ ರಸಕ್ಕೆ ಮನುಷ್ಯನ ಹೊಟ್ಟೆಯೊಳಗಿನ ಆಹಾರವನ್ನು [illegible]ದಲ್ಲಿಯೇ ಜೀರ್ಣಿಸುವ ಶಕ್ತಿಯಿರುತ್ತದೆ. ಆದುಕಾರಣ ಊಟವಾದ ಮೇಲೆ ಫಲಗಳನ್ನು ಭಕ್ಷಿಸುವ ಅಭ್ಯಾಸವು ಆರೋಗ್ಯಕ್ಕೆ ಹಿತಕರ. ಮಾಂಸಾಹಾರವನ್ನು ಭಕ್ಷಿಸುವುದಕ್ಕಿಂತಲೂ, ಸಸ್ಯಾಹಾರವನ್ನು ಭಕ್ಷಿಸುವುದರಿಂದ ಅದು ಬಹು ಬೇಗನೇ ಜೀರ್ಣವಾಗುವದು. ಆರೋಗ್ಯವು ಕೆಡದ ಮನುಷ್ಯನೂ ಸುಖವಾಗಿರುವನು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಆಯುರ್ವೇದೀಯವು [illegible] ಶಾಸ್ತ್ರೀಯ ಎಂಬ ಮಹರ್ಷಿಯಿಂದ [illegible]. ಅಧ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಯದವರಿಗೆಲ್ಲ ಬಹಳ ಅನುಕೂಲ ಮತ್ತು ಆರೋಗ್ಯತನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0. ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನಿತ್ಯಸೇವನೆಗೆ ಸಂದೇಹವಿಲ್ಲದೆ [illegible].

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಮಲದೋಷಗಳನ್ನು ಹೊರಗೆ ಹಾಕಿ ಪ್ರಸವದಿಂದ ಭ್ರಷ್ಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಣಿಗೊಳಿಸುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible]

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವ್ಯಾಪಾರಸ್ಥರು.

ESTD 1896.

[illegible]

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಬೆಳ್ಳಿ ವ್ಯಾಪಾರಿ,

24-3-'28 [illegible] (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1. ಮಾತ್ರ. ಇತರ ಮಾಹಿತಿಗೆ ಧರ್ಮಾರ್ಥ ಕೇಳಿರಿ. [illegible]

ಆತಂಕನಿಗ್ರಹ ಔಷಧಾಲಯ,

ನಂ. 26. ಬ್ರಾಡ್ವೇ, ಮದರಾಸು.

ಏಜಂಟರು:—

ಮೆಸ್ಸರ್ಸ್ ರೇಚಿಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds " 3,88,000—0—0	ರಿಸರ್ವು ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% " 1 Year	ಸ್ಥಾಯಿ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಇಡುವ ರೂ. 1000/-ದ ಮೇಲ್ಪಟ್ಟ ಋತು ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼

Current Account Deposits received and interest allowed on daily balance of Rs 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to—

Canara Bank Ltd. **K. Venkat Rao,**
Mangalore, 11—8—1929 *Secretary*

THE PANGAL NAYAK BANK, LTD.

Head Office: Udipi, S. K.] *Estd. 1920* [Branches: Mangalore & Cochin

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದ್ದು 1920. [ಬ್ರಾಂಚುಗಳು ಮಂಗಳೂರು ಮತ್ತು ಕೊಚ್ಚಿ ಬೇಂಕರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/

ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಕ್ಷೇಪಗಳು ರೂ. 1,19,000/

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼%, and for 24 months at 7% ,Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4 1/2%. CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಸ್ಥಾಯಿ ಠೇವಣಿಗಳು 3 ತಿಂಗಳುಗಳಿಗೆ ನೂ. ಕ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ನೂ. ಕ. 5½ ರಂತೆಯೂ 12, 15, 18, ಯಾ 21 ತಿಂಗಳುಗಳಿಗೆ ನೂ. ಕ. 6¼ ರಂತೆಯೂ, 24 ತಿಂಗಳುಗಳಿಗೆ ನೂ. ಕ. 6½ ರಂತೆಯೂ, ಪ್ರತಿ 3 ತಿಂಗಳುಗಳ [illegible] ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಋತು ಠೇವಣಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ನೂ. ಕ. 6¼ ರಂತೆಯೂ ಅಲ್ಪಾವಧಿ ಠೇವಣಿಗಳು ನೂ. ಕ. 4½ ರಂತೆಯೂ, ಸಂಚಯ ಠೇವಣಿಗಳು, ಪ್ರತಿಮಾಸದ [illegible], ಸೇವಿಂಗ್ಸ್ ಬೇಂಕ್ ಠೇವಣಿಗಳು ನೂ. ಕ. 4½ ರಂತೆಯೂ, ಚಾಲ್ತಿ ಠೇವಣಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ನೂ. ಕ. 3 ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ನೂ. ಕ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು, ಯೋಗ್ಯವಾದ ಜಾಮೀನಿನ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಹೆಚ್ಚಿನ ವಿವರಗಳಿಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರಾಂಚ್ ಆಫೀಸಿನ ಏಜಂಟರಿಗೂ ಬರೆಯಬಹುದು.

ಹೆಡ್ ಆಫೀಸು, ಉಡುಪಿ, } ತಾ. 1-2-'28

ಪಿ. ಲಕ್ಷ್ಮಣ ನಾಯಕ್,
ಜನರಲ್ ಸೆಕ್ರೆಟರಿ

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾಕ (first quality Selected) ಎನ್ನುವ ಸ್ವದೇಶದಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿಡಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲ್ಲರ್,
ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು. Diamonds

BOLA MANGESH ROW & Co.,
MANGALORE.

Agents & Direct Importers of Superior Diamonds of Antwerp

ಬೆಲ್ಜಿಯಂ, ಅಂಟ್ವರ್ಪಿನಿಂದ ತರಿಸುವ ವಜ್ರಗಳು — ದೊರೆಯುತ್ತವೆ. —

ಬೋಳ ಮಂಗೇಶ ರಾವ್,
ಮಂಗಳೂರು

ಮಹಾತ್ಮಾಜೀಯವರನ್ನು ಕೈದು ಮಾಡಿದುದು.

ದಿಲ್ಲಿಯಲ್ಲಿ ವ್ಯಾಸರಾಯರು ಮಹಾತ್ಮಾಜೀಯವರೊಡನೆ ಸಂಧಾನಿಸಿದುದೂ, ಕಲ್ಕತ್ತಾದಲ್ಲಿ ಪೋಲೀಸ್ ಕಮಿಷನರು ಮಹಾತ್ಮಾಜೀಯವರನ್ನು ಕೈದುಮಾಡಿಸಿದುದೂ, ಬ್ರಿಟಿಷ ಸಾಮ್ರಾಜ್ಯದ ರಾಜನೀತಿಯ ಧೋರಣದ ಎರಡು ತುದಿಗಳಾಗಿರುತ್ತವೆ. ಅತ್ಯಂತ ಶಕ್ತಿಶಾಲಿಯಾಗಿರುವ ಹಿಂದೀಯ ರಾಜಕೀಯ ವಾತಾವರಣದೊಡನೆ ಸಹಾನುಭೂತಿ ಸಹಿತವಾದ ಸಂಪರ್ಕವಿಡುವ ಆವಶ್ಯಕತೆ ಇದೆ ಎಂದು ವ್ಯಾಸರಾಯರ ಮನಸ್ಥಿತಿಯನ್ನು ತೆರೆಯುವ ಭಾಷಣವೂ, ಆ ಮೇಲೆ ಮಹಾತ್ಮಾಜೀಯವರೊಡನೆ ಅವರು ನಡೆಸಿದ ಸಂಭಾಷಣೆಯೂ ತೋರಿಸಿದ್ದುವು. ಆದರೆ ದಿಲ್ಲಿಯ ಹವೆಯೇ ಬೇರೆ; ಕಲ್ಕತ್ತದ ಹವೆಯೇ ಬೇರೆ. ವಿಚಾರಣೆಯಿಲ್ಲದೆ ಜೈಲಿಗೆ ನುಗ್ಗಿಸಿ ಭಟ್ಟಿ ಕಟ್ಟಿಹೋದ ಮನಸ್ಸಾಕ್ಷಿಯು ಬಂಗಾಳಕ್ಕೆ ಮಾತ್ರವೇ ಇದೆ; ಅದರಲ್ಲಿಯೂ ಅರ್ಲ ವಿಂಟರ್ಟನ್ನರು ಪರದೇಶ ವಸ್ತ್ರ ಬಹಿಷ್ಕಾರ ಚಳವಳದ ಪ್ರತಿಯಾಗಿ ಹಿಂದೀ ಸರಕಾರವು ಬಿಗಿಯಾಗಿ ವರ್ತಿಸುವುದಾಗಿ ಸೂಚಿಸಿ, ಬಂಗಾಳ ಸರಕಾರಕ್ಕೆ ಹೆಚ್ಚಿನ ಧೈರ್ಯವು ಉಂಟಾಗಿದೆ. ಅಲ್ಲದೆ ಬಂಗಾಳ ಸರಕಾರವು ಮಹಾತ್ಮಾಜೀಯವರಂತಹ ಶ್ರೇಷ್ಠತಮ ಹಿಂದೀಯರ ಮೇಲೆ ಕೈಯಾಡಿಸುವ ಸಮಯದಲ್ಲಿ ಲಾರ್ಡ ಇರ್ವಿನರ ಸರಕಾರದೊಡನೆ ಕೇಳಿರುವರೊ ಎಂದು ಹೇಳಲಾಗುವುದಿಲ್ಲ. ಎಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಇರ್ವಿನರ ಸರಕಾರವು ಬಂಗಾಳ ಸರಕಾರದ ಸ್ವತಂತ್ರ ವರ್ತನವಿದು ಎಂದು ಹೇಳಿರುತ್ತದೆ. ಹೇಗೂ ಇರಲಿ; ವ್ಯಾಸರಾಯರ ಸ್ನೇಹದ ಮಾತುಕತೆಗಳಾಗಲಿ, ಪೋಲೀಸರ ಬೆದರಿಕೆಯ ಆಜ್ಞೆಗಳಾಗಲಿ ಬರಲಿಕ್ಕೆ ಹೆಚ್ಚು ಅಂತರವಿಲ್ಲವೆಂದು ಕಲ್ಕತ್ತಾ ಘಟನೆಯು ತೋರಿಸುವುದು. ಪರದೇಶ ವಸ್ತ್ರ ಬಹಿಷ್ಕಾರವು ಇಂದಿನ ಮಾತಲ್ಲ; ಪರದೇಶ ವಸ್ತ್ರದಹನವೂ ಇಂದಿನ ಕಾರ್ಯಕ್ರಮವಲ್ಲ. ಆದರೆ ಅದಕ್ಕಾಗಿ ಶಿಕ್ಷಿಸಲು ಪೋಲೀಸು ಕಾನೂನೊಂದಿದೆಯೆಂಬುದು ತಿಳಿದುದು ಮಾತ್ರ ಈ ದಿನ. ಬಂಗಾಳ ಸರಕಾರದ ಈ ಮೊಂಡು ಬುದ್ಧಿಗಾಗಿ ನಾವು ಬಹಳ ಉಪಕೃತರಿದ್ದೇವೆ. ಈ ಬಹಿಷ್ಕಾರ ಚಳವಳವು ಈ ವರೆಗೆ ಅಲ್ಲಲ್ಲಿ ತಾತ್ಕಾಲಿಕವಾಗಿಯೂ ಸ್ಥಳೀಕವಾಗಿಯೂ ನಡೆಯುತ್ತಿದ್ದಿತು. ಈಗದಕ್ಕೆ ಅಖಿಲ ಹಿಂದೂಸ್ಥಾನದ ಪ್ರಬಲ ವ್ಯಾಪಕತೆಯು ಬಂದಿದೆ. ನಿದ್ರೆಯಿಂದಿದ್ದವರನ್ನೂ ಒಂದೇ ಬಾರಿ ಎಚ್ಚರಿಸಿಯದೆ. ವಸ್ತ್ರ ಬಹಿಷ್ಕಾರವು ಇನ್ನೂ ತೀಕ್ಷ್ಣವಾಗುವುದೆಂಬುದರಲ್ಲಿ ಸಂದೇಹವು ಕಾಣುವುದಿಲ್ಲ. ವಸ್ತ್ರದಹನವೂ ಈಗ ಹೆಚ್ಚಾಗುತ್ತ ಬಂದಿದೆ. ಅದು ಸಹ ಬೇಗನೆ ಉದ್ರೇಕಿತರಾಗುವ ಬಂಗಾಳ ಜನರ ಮಧ್ಯದಲ್ಲಿ. ಮಹಾತ್ಮಾಜೀಯವರ ವಿಚಾರಣೆಯು ಇದೇ ತಿಂಗಳ ತಾ. ೨೪ಕ್ಕೆ ಇಟ್ಟಿರುತ್ತದೆ. ಶಿಕ್ಷೆಯಾಗಲಿ ಬಿಡುಗಡೆಯಾಗಲಿ, ಚಳವಳಕ್ಕೆ ಸಹಾಯವು ಸಿಕ್ಕಿದಂತಾಯಿತು. ಬಂಗಾಳ ಸರಕಾರಕ್ಕೆ ಇದಕ್ಕಾಗಿ ನಮ್ಮ ಅಭಿವಂದನೆ ಇದೆ.

ಅಮೇರಿಕದ ಲೋಕಹಿತ ಪ್ರಯತ್ನಗಳು!

ಮಹಾ ಯುದ್ಧದ ಸಮಯದಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕದ ಆಗಿನ ಪ್ರೆಸಿಡೆಂಟರಾದ ವಿಲ್ಸನರ ಹದಿನಾಲ್ಕು ಪಾಯಿಂಟುಗಳಿಂದ ಆರಂಭವಾದ ಅಮೇರಿಕದ ಲೋಕಹಿತ ಸಾಧನೆಯು ಇನ್ನೂ ಮುಂದರಿಯುತ್ತಲೇ ಇದೆ! ಲೋಕದ ಎಲ್ಲಾ ಜನಾಂಗಗಳಿಂದಲೂ ಆ ಹದಿನಾಲ್ಕು ಪಾಯಿಂಟುಗಳೂ ಸ್ವೀಕೃತವಾದುವು; ಹಾಗೆಯೇ ಜನಾಂಗ ಸಂಘವು ರಚಿಸಲ್ಪಟ್ಟಿತು; ಆ ಮೇಲೆ ಆರ್ಮಮೆಂಟ ಪರಿಷತ್ತು ವಾಶಿಂಗ್ಟನ್ನಿನಲ್ಲಿ ಕೂಡಿತು; ಕಡೆಗೆ ಕೆಲ್ಲೊಗ್ ಶಾಂತಿ ಸಂಧಾನಕ್ಕೆ ಎಲ್ಲಾ ಜನಾಂಗಗಳ ಸಹಿ ಹಾಕಲ್ಪಟ್ಟಿತು. ಆದರೆ ಲೋಕೇತಿಹಾಸದಲ್ಲಿ ತಾತ್ವಿಕವಾಗಿ ಮಾತನಾಡುವುದಾದರೆ ಅಮೇರಿಕವೇ ಪ್ರಧಾನ ಲೋಕಹಿತ ಕಾರಕವಾಗಿರುವುದು. ಅದು ಹೊರಹರಿಸಿದ ಲೋಕಹಿತದ ಉದ್ದೇಶದ ಸತ್ಪರಾಶಿಯು ಬೇರಾವ ಜನಾಂಗವೂ ಕೊಟ್ಟಿಲ್ಲವೆನ್ನಬಹುದು. ಆದುಪರಿಂದಲೇ ಲೋಕದಲ್ಲಿ ಮಿಥ್ಯಾಚಾರಿ (Hypocrite) ಎಂಬ ಹೆಸರು ಯಾರಿಗಾದರೂ ಅನ್ವಯಿಸುವುದಾದರೆ ಅಮೇರಿಕದ ಹೆಸರನ್ನೇ ಮೇಲಿಡಬೇಕಾಗುವುದು. ಏಕೆಂದರೆ ಪ್ರಥಮದ ಆ ಹದಿನಾಲ್ಕು ಪಾಯಿಂಟುಗಳನ್ನೇ ಯುನೈಟೆಡ್ ಸ್ಟೇಟ್ಸ್ ರಕ್ಷಿಸಲಾರದೆ ಹೋಯಿತು. ನೌಕಾ ನಿರ್ಬಂಧ [illegible] (Limitations of Armaments)ಗಾಗಿ ಪ್ರಯ[illegible] ಮಿಲಿಯ ಕಟ್ಟಲೆಯಲ್ಲಿ ಡಾಲರನ್ನು ವ್ಯಯಿಸಿ [illegible] ಆದರೆ ಶಾಂತಿ ಸಂಧಾನದಲ್ಲಿ [illegible] ಸತು ನೂತನ ಶಾಂತಿಯ ರಚನೆಯಿಂದ ಆ ವಿಶ್ವಾಸವು ಹುಟ್ಟುವುದಿಲ್ಲ. ಶಾಂತಿ ಸ್ಥಾಪನೆಗೆ ಯುದ್ಧನಾವೆಗೆ [illegible] ಬೇಕಾದರೆ ಕೆಲ್ಲೊಗ್ಗರ Peace Pact ಶಾಂತಿ ಸಂಧಾನದ ಆವಶ್ಯಕತೆಯೇ ತಿಳಿದು ಬರುತ್ತಿಲ್ಲ. ಆದರೂ ಅಮೇರಿಕ ಒಂದು ಕೈಯಿಂದ ಶಾಂತಿ ಸಂಧಾನಕ್ಕೆ ಸಹಿಯನ್ನು ಹಾಕುತ್ತಿರುವಾಗ ಇನ್ನೊಂದು ಕೈಯಿಂದ ಶಸ್ತ್ರ ರಚನೆಯನ್ನು ಮಾಡುತ್ತದೆ. ಯುರೋಪೀಯ ಜನಾಂಗಗಳೂ ಈ ಶಾಂತಿ ಸಂಧಾನಕ್ಕೆ ಸಹಿಯನ್ನಿತ್ತಿರುವಂತಹದೂ ಅವರ ವಿಶ್ವಾಸವೂ, ಅದರ ಮೇಲೆ ಅಮೇರಿಕಕ್ಕಿದ್ದಷ್ಟಕ್ಕಿಂತ ಹೆಚ್ಚಿರಲಾರದು. ಮುಖ್ಯವಾಗಿ ಅಮೇರಿಕವು ಆರಂಭಿಸಿರುವ ಈ ಕಣ್ಣು ಮುಚ್ಚಾಟದಲ್ಲಿ ಇತರ ಜನಾಂಗಗಳೂ ಸೇರಿ ಆಟವಾಡಿ ನಗುತ್ತಿವೆಯೇ ವಿನಹ ಇದರಲ್ಲಿ ಪರಿಣಾಮಕಾರಿಯಾದ ಪ್ರಯೋಜನವಿದೆಯಾಗಿ ತಿಳಿದು ಬರುವುದಿಲ್ಲ. ಮುಸ್ಸೋಲೀನಿಯ ಸಾಮ್ರಾಜ್ಯಾಭಿಲಾಷೆಯು ಹೆಚ್ಚಾಗುತ್ತ ಬರುವಾಗ, ಮಧ್ಯ ಯುರೋಪು ಗುಟ್ಟಿನ ಸಂಧಿಗಳ ಜಾಲವಾಗಿ ಪರಿಣಮಿಸುತ್ತ ಬರುತ್ತಿದೆ. ರಶ್ಯಾದ ಪ್ರತ್ಯೇಕತೆಯೂ, ಜರ್ಮನಿಯ ಮೇಲಿನ ಮಿತ್ರ ರಾಷ್ಟ್ರಗಳ ಅಧಿಕಾರವೂ, ಫ್ರಾನ್ಸಿನ ಅತ್ಯಧಿಕ ಸ್ವಾರ್ಥವೂ, ಬ್ರಿಟಿಷರ ಸಾಮ್ರಾಜ್ಯ ಜವಾಬ್ದಾರಿಯೂ, ಯುರೋಪಿನ ರಾಜನೀತಿಯನ್ನು ಗಹನವಾಗಿ ಮಾಡುತ್ತ ಬರುತ್ತಿವೆ. ಮಧ್ಯದಲ್ಲಿ ಅಮೇರಿಕವು ತನ್ನ ದುಡ್ಡಿನ ದೊಡ್ಡಸ್ತಿಕೆಯನ್ನು ತೋರಿಸಲಿಕ್ಕಾಗಿ ಮುಂದೆ ಬರಲು ಪ್ರಯತ್ನಿಸಿ, ಆ ಪ್ರಯತ್ನದಲ್ಲಿ ತನಗಾವ ಹಾನಿಯೂ ಬರುವಂತಹ ಜವಾಬ್ದಾರಿಯಿರದಂತೆ ಎಚ್ಚರವಾಗಿ ದುಡುಕಿಕೊಳ್ಳುತ್ತಿದೆ. ಅಮೇರಿಕದ ಈ ಪ್ರಯತ್ನಗಳಿಗೆ ಎಂತಹ ಉಚ್ಚ ತತ್ವಗಳ ಆಧಾರಗಳಿಂಬಹುದಾದರೂ ನಾವವರನ್ನು ಅಭಿನಂದಿಸಲಾರೆವು

ಬೆಳಗಾಂವಿಯಲ್ಲಿ ಮರಾಠಿ.

ಶ್ರೀ. ಕೆ. ಎಸ್. ಪಾಟೀಲ ಬಿ. ಎ. ಎಲ್ಎಲ್. ಬಿ. ಮುಂತಾಗಿ ಹಲವರು ಸಹಿಹಾಕಿದ "ಬೆಳಗಾಂವಿಯ ಕನ್ನಡ ಮುಂದಾಳುಗಳಿಗೊಂದು ಮಾತು" ಎಂಬುದೊಂದು ಪತ್ರಕದ ಪ್ರತಿಯು ನಮ್ಮ ಕೈಸೇರಿರುತ್ತದೆ. ಬೆಳಗಾಂವಿಯಲ್ಲಿ, ಅಖಿಲ ಕರ್ನಾಟಕದ ನಿಷೇಧದ ಮುಂದೂ, ಮರಾಠಿ ಸಾಹಿತ್ಯ ಪರಿಷತ್ತನ್ನು ಜರಗಿಸುವ ಸಮಯಕ್ಕೆ ನಿಷೇಧವನ್ನು ವ್ಯಕ್ತಪಡಿಸಿ "ಕನ್ನಡ ತಾಯಿಯ ಅಪಮಾನವನ್ನು ತೊಳೆದು ತೆಗೆಯುವ ಯೋಜನೆಯನ್ನು ಮಾಡಿದ್ದರೆ ನಾವಾದರೂ ಬೆನ್ನ ಹಿಂದೆ ಬಾಲವೆಂಬಂತೆ ತಮ್ಮನ್ನು ಹಿಂಬಾಲಿಸುವೆವು" ಎಂದು ಹೇಳಿ ಮುಂದೆ "ಇಲ್ಲವಾದರೆ ನಮ್ಮ ಹಾದಿಯು ನಮಗೆ" ಎಂದೂ ಸೂಚಿಸಿ, ಈ ಮಾತುಗಳಿಗೆ ಒಂದು ವಾರದೊಳಗಾಗಿ ಏನೆಂಬುದನ್ನು ತಿಳಿಸುವ ಕೃಪೆಯಾಗಬೇಕು" ಎಂಬ ಸಮಯದ ಅವಧಿಯನ್ನು ಹಾಕಿ ಬೆಳಗಾಂವಿಯ ಹಿರಿಯರಿಗೆ ಜಾಹೀರು ಪ್ರಕಟಣೆ ಕೊಡಲ್ಪಟ್ಟಿದೆ. ಬೆಳಗಾಂವಿಯ ಕನ್ನಡ—ಮರಾಠಿ ವಾದ ಪಕ್ಷದಲ್ಲಿ ಈ ಪತ್ರವು ನೂತನ ದೃಷ್ಟಿಯನ್ನು ಕೊಡುತ್ತಿದೆ. ನಾವು ಬೆಳಗಾಂವಿಯಿಂದ ಇಷ್ಟು ದೂರವಿರುವುದರಿಂದ ಅಲ್ಲಿನ ಈ ವಾದವನ್ನು ಇನ್ನೂ ಚೆನ್ನಾಗಿ ತಿಳಿಯಲು ಶಕ್ತರಾಗಿಲ್ಲ. ಈ ಮೇಲಿನ ಪತ್ರದ ಅಷ್ಟರ ಒಕ್ಕಣೆಯಿಂದ, ಬೆಳಗಾಂವಿಯ ಕನ್ನಡ ಮುಂದಾಳುಗಳೇ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಒಪ್ಪಿಯನ್ನಿತ್ತಿರುವರೆಂದಾಗಲಿ, ಒಪ್ಪಿಗೆಯನ್ನಿತ್ತಿಲ್ಲವಾದರೆ ನಿಷೇಧವನ್ನು ತೋರಿಸುವಷ್ಟು ಕೂಡ ಮುಂದಾಗಿಲ್ಲವೆಂದಾಗಲಿ ತಿಳಿಯಬೇಕಾಗಿದೆ. ಬೆಳಗಾಂವಿಯ "ಕನ್ನಡ ಮುಂದಾಳುಗಳೇ" ಈ ರೀತಿಯಲ್ಲಿ ವರ್ತಿಸುವವರಾದರೆ ಕನ್ನಡದ ಈ ವಾದಕ್ಕೆ ಯಾವ ತರದ ರೂಪ ಬರುವುದೆಂದು ಹೇಳಲಾಗುವುದಿಲ್ಲ. ಬೆಳಗಾಂವಿಯ ಜನತೆಯೊಳಗಿನ ಅಧಿಕ ಸಂಖ್ಯಾಕರ ಅಭಿಪ್ರಾಯವೂ ಹೇಗಿರಬಹುದೆಂದೂ ಊಹಿಸಲಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದ ಮುಂದಾಳುಗಳು ಯಾರೆಂದು ಪುನಃ ಯೋಚಿಸಬೇಕಾಗಿ ಕರ್ನಾಟಕ ಅಖಂಡ ನಿಷೇಧವನ್ನು ಬೆಳಗಾಂವಿಯ ಮುಂದಾಳುಗಳು ವ್ಯಕ್ತಪಡಿಸಲಾರರಾದರೆ, ಅವರು ಕರ್ನಾಟಕಕ್ಕೆ ಮುಂದಾಳುಗಳಾಗಲಾರರು. ಬೆಳಗಾಂವಿಯ ಅಧಿಕ ಸಂಖ್ಯಾಕರು ಮರಾಠಿ ಸಾಹಿತ್ಯ ಪರಿಷತ್ತನ್ನು ಕೂಡಿಸಲು ಇಚ್ಛಿಸುವವರಾದರೆ ಬೆಳಗಾಂವಿಯಲ್ಲಿ ಕರ್ನಾಟಕದ ಅಭಿಮಾನವು ಇನ್ನೂ ಚೆನ್ನಾಗಿ ಪ್ರಸಾರಿತವಾಗಿಲ್ಲವೆಂದೂಹಿಸಬೇಕಾಗಿದೆ. ಅಧಿಕ ಸಂಖ್ಯಾಕರ ಸ್ವೇಚ್ಛೆಯ ಪ್ರೋತ್ಸಾಹವು ಈ ಪರಿಷತ್ತಿಗೆ ಇರುವುದಾದರೆ, ಚಿಕ್ಕ ನಿಷೇಧಸಭೆಯಿಂದ ಕರ್ನಾಟಕದ ಅಭಿಪ್ರಾಯವನ್ನು ಪ್ರಕಟಿಗೊಳಿಸುವುದು ಉಚಿತ; ಆದರೆ ತೀಕ್ಷ್ಣವಾದ ಪ್ರಕಟಣೆಗಳಿಂದ ಉದ್ದೇಶವು ಭಂಗವಾಗುವುದರಿಂದ

ಟಿಪ್ಪಣಿಗಳು
NOTES.

ಕಲ್ಕತ್ತಾದಲ್ಲಿ [illegible] ಕಾರ್ಯಗಳು [illegible] ಮುಂದರಿಯುತ್ತಲೇ ನಡೆಯುತ್ತಿವೆ. [illegible] ನಡೆಯುವ ಕಾಯಿದೆಗಳಲ್ಲಿ ಪೋಲೀಸರು ಹೊಸ ಕಾನೂನು [illegible] ಪ್ರಯತ್ನಿಸುತ್ತಾರೆ.

ಕಳೆದ ತಾ. ೪ಕ್ಕೆ ಕಲ್ಕತ್ತಾದಲ್ಲಿ ಶ್ರದ್ಧಾನಂದ ಪಾರ್ಕಿನಲ್ಲಿ ಸಭೆ ನೆರೆದು ವಸ್ತ್ರಗಳ ರಾಶಿ ಹಾಕಿ, ವಸ್ತ್ರಕ್ಕೆ ಬೆಂಕಿ ಹಾಕಲು, ಪೋಲೀಸರ ಪ್ರಯತ್ನ ಬೆಂಕಿಯನ್ನು ನಂದಿಸುವುದು.

ಪೋಲೀಸರು ಬೆಂಕಿಯನ್ನು ನಂದಿಸುವಾಗ್ಗೆ ಅಲ್ಲಿ ನೆರೆದ ಜನರು ಪುನಃ ಬೆಂಕಿ ಕೊಡುವದು. ಅಂತೂ ಜನರೊಳಗೂ ಪೋಲೀಸರೊಳಗೂ ಬೆಂಕಿಯ ಪಂದ್ಯಾಟ ನಡೆಯಿತು.

ಪಂದ್ಯಾಟದಲ್ಲಿ ಸೋತದ್ದು ಪೋಲೀಸರು. ವಿಲಾಯತಿಯಿಂದ ಬಂದ ಹಿರಿಯ ಅಪ್ಪಣೆಯಂತೆ, ಕಡೆಗೆ ಕೈಹಾಕಿದ್ದು ಕಾರ್ಯಮುಖಂಡರನ್ನು ಕೈದುಮಾಡುವದು.

ರಾತ್ರೆ ೧೨-೧೫ಕ್ಕೆ ಮಹಾತ್ಮಾ ಗಾಂಧಿಯವರನ್ನೂ ಕಿರಣ ಶಂಕರ ರೊಯ್‌ಯವರನ್ನು ಕೈದು ಮಾಡಿದರು. ಏನೋ ಒಂದು ಶರ್ತದ ಮೇಲೆ ಬಿಟ್ಟರು.

ಮಾರ್ಚ ತಾ. ೨೬ಕ್ಕೆ ಮಹಾತ್ಮಾಜಿಯವರ ನಂಬ್ರವು ತನಿಖೆಗಾಗಿ ಇಡಲ್ಪಟ್ಟಿದೆ. ಮಹಾತ್ಮಾಜಿಯವರು ನಂಬ್ರಕ್ಕೆ ತಪ್ಪದೆ ಹಾಜರಾಗುವಂತೆ ೫ ಜನರಿಂದ ೫೦ ರೂಪಾಯಿಯ ಜಾಮೀನು.

ಮಹಾತ್ಮಾಜಿಯವರನ್ನು ಕೈದು ಮಾಡಿದ ವಿಷಯ ಹೌಸ್ ಒಫ್ ಕೊಮನ್ಸಿನಲ್ಲಿ ಮಿ| ಸಕಲತ್‌ವಾಲರು ಎಮರ್ಜಂಟ್ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಶ್ನೆಗೆ ಉತ್ತರ ಕ್ಷಣದೊಳಗೆ ದೊರಕುವದು.

ಶಾಮೂರು ಪಳ್ಳಿಯ ಹತ್ತಿರದಿಂದ ಉರ್ವಕ್ಕೆ ಹೋಗುವ ರಸ್ತೆಯು ಕುದ್ರೋಳಿ ಸಂಕದ ವರೆಗೆ ಬಹಳ ಚಲೂ ರೀತಿಯಲ್ಲಿದೆ. ಸೈಕಲಿನಲ್ಲಿ ಹೋಗುವವರು ಕಪ್ಪೆ ಹಾರಿದ ಹಾಗೆ ಹೋಗಬೇಕಾಗಿದೆ.

ನಮ್ಮ ಮಂಗಳೂರಿಗೆ ಸೌತ್ ಇಂಡಿಯನ್ ರೈಲ್ವೆ ಕಂಪನಿಯವರು ಟಪ್ಪಾಲನ್ನು ಆದಷ್ಟು ಬೇಗನೇ ತಂದು ಮುಟ್ಟಿಸಬೇಕೆಂದು ಮೈಲಿನ ಟೈಮ್ ಬದಲಾವಣೆ ಮಾಡಿ ಮಂಗಳೂರಿಗೆ ತಲಪುವ ಸಮಯ ಸಾಯಂ. ಘಂಟೆ ನಾಲ್ಕು ಮಾಡಿದ್ದಾರೆ. ಘಂಟೆ ನಾಲ್ಕು ಬರೆ ಕಾಗದದಲ್ಲಿ ಮಾತ್ರ. ಮೈಲ್ ಬರುವದು ಐದು ಘಂಟೆಯ ನಂತರ.

ಯಾವಾಗ ನೋಡಿದರೂ ರೈಲ್ವೆ ಸ್ಟೇಶನಿನ ಬೋರ್ಡಿನಲ್ಲಿ ಲೇಟ್ ಎಂಬ ಶಬ್ದ ಅಳಿಸಿ ಹೋಗುವುದೇ ಇಲ್ಲ.

ಮುಂಬಾಯಿಯ ಗವರ್ನರರಿಗೆ ಅಲ್ಲಿಯ ಶಾಲೆಗಳು ಮತ್ತು ಕೋಲೇಜುಗಳ ವಿದ್ಯಾರ್ಥಿಗಳಿಗೆ ಬರೇ ಕಮ್ಮಿ ಸಂಬಳವನ್ನು ಇಟ್ಟಿರುತ್ತಾರಾಗ ಅಭಿಪ್ರಾಯವಿದೆ. ಹಿಂದೂಸ್ಥಾನದಲ್ಲಿ ಬಡಸ್ತಿಕೆ ಹೆಚ್ಚಿದ್ದುದು ಇವರ ತಲೆಗೆ ಹೋಗಿಲ್ಲವಾಗಿರಬಹುದು.

ಕೆನರಾ ಹ್ಯಾಸ್ಪಿಟಲ್ ಸೊಸೈಟಿಯು ಹಣವನ್ನು ಹಂಚಲು ಪ್ರಾರಂಭಿಸಿದ್ದಾರೆ. ಐದು, ಹತ್ತು ರೂಪಾಯಿ. ಒಂದವರು ಟಿಕೇಟು ತೆಗೆದುಕೊಂಡು ಸೊಸೈಟಿ ಆಫೀಸಿಗೆ ಹೋದರೆ ಟಿಕೇಟು ತಂದವರ ಒಟ್ಟಿಗೆ ಟಿಕೇಟಿನವರು ಇಂಥವರೇ ಎಂದು ಗುರುತಿಸುವವರು ಬೇಕಾಗಿದ್ದಾರಂತೆ.

ಒಟ್ಟಾರೆ, ರೂಪಾಯಿ ಬೇಕಾದರೆ ಗುರುತಿಸುವವರನ್ನು ಹುಡುಕಿದಂತಾಯಿತು.

ಸರಿಯಾದ ನಂಬ್ರದ ಟಿಕೇಟು ಇರುವಾಗ್ಯೆ ಮತ್ತು ಸೊಸೈಟಿಯವರು ಹಣ ಕೊಡಬೇಕಾದರೆ ಟಿಕೇಟನ್ನು ವಾಪಾಸು ತೆಗೆದುಕೊಳ್ಳುತ್ತಿರುವಾಗ್ಯೆ ಇನ್ನೊಂದು ಗಾದ್ರಿ ಮತ್ತು ಸಂಶಯ ಯಾಕೆಂದು ಜಟ್ಟಿ ಪ್ರಶ್ನೆ.

ಮನೋವೃತ್ತಿಯನ್ನು [illegible] ಮಾಡುವಂತಹ ವಾದದಿಂದ ಸ್ಥಳೀಕ ಸಹಾನುಭೂತಿಯನ್ನು ಕಳೆದುಕೊಳ್ಳದೆ ತೀವ್ರವಾದ ಪ್ರಚಾರ ಕಾರ್ಯಗಳ ಮೂಲಕವೇ ಬೆಳಗಾಂವನ್ನು ಉಳಿಸಿಕೊಳ್ಳುವುದು ಉತ್ತಮವೆಂದು ಕಾಣುವುದು. ಜನರ ಮಾನಸಿಕತೆಯು ಒಮ್ಮೆ ಕನ್ನಡವಾಯಿತೆಂದರೆ ಮರಾಠಿಗಳ ಯಾವ ಕುಯುಕ್ತಿಯೂ ಅವರಿಗೆ ಉಪಕಾರಿಯಾಗಲಾರದು.

[illegible]
[illegible] (ಸೂರ್ಯೋದಯ ...) [illegible]

[illegible]	[illegible]	[illegible]	[illegible]	[illegible]	[illegible]	ಉ	ಅ
[illegible]	[illegible]	[illegible]	[illegible]	[illegible]	[illegible]	6.44	6.39
10	[illegible]	[illegible]	[illegible]	[illegible]	[illegible]	6.43	6.39
11	[illegible]	[illegible]	[illegible]	[illegible]	[illegible]	6.42	6.39
12	[illegible]	[illegible]	[illegible]	[illegible]	[illegible]	6.42	6.39
13	[illegible]	[illegible]	ರೇವತಿ	[illegible]	[illegible]	6.41	6.40
14	[illegible]	[illegible]	ಅಶ್ವಿನಿ	[illegible]	[illegible]	6.40	6.40
15	[illegible]	[illegible]	ಭರಣಿ	[illegible]	[illegible]	6.40	6.40

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
1	90— 2	76— 9	—	—
2	90— 2	76— 3	—	—
3	90— 0	74— 9	—	—
4	91— 2	75— 0	—	—
5	90— 9	74— 5	—	—
6	90— 7	73— 9	—	—
7	96— 0	73— 7	—	—
				124-77

ಮಂಗಳೂರಿನ ಪೇಟೆ ಧಾರಣೆ.

ದೇನಸು		ಇಂದ ರೂ.	ಆ.	ವರೆಗೆ ರೂ.	ಆ.
ಮಸ್ಸಿ	...	7-	0	7 —	8
ಗುಡ್ಡ	...	6 —	4	6 —	8
ರಾಶಿ	...	5 —	8	6 —	2
ಊರ ಅವ್ವಲ್ ಬೆಳ್ತಿಗೆ	...	7 —	4	7 —	12
ರಂಗೂನು ಬೆಳ್ತಿಗೆ ಗೋಣಿ ಒಳ್ಳೆ	...	12 —	1[illegible]	13 —	
ಎಲ್ಲೂರು ಬೆಳ್ತಿಗೆ ಮುಡಿ ಒಳ್ಳೆ		6 —	4	6 —	8
ಗೋಧಿ ಗೋಣಿ ಒಳ್ಳೆ	..	18 —	12	20	0
ಹುರುಳಿ ಗೋಣಿ ಒಳ್ಳೆ	..	7 —	8	9	4
ಕಡಲೆ ಗೋಣಿ ಒಳ್ಳೆ	...	14 —	8	15	8
ತೊಗರಿ ಗೋಣಿ ಒಳ್ಳೆ	...	14 —	8	16 —	0
ತೊಗರಿಬೇಳೆ ಗೋಣಿ ಒಳ್ಳೆ	..	18 —	8	27 —	0
ಉದ್ದು ಗೋಣಿ ಒಳ್ಳೆ	..	16 —	6	16 —	12
ಹೆಸರು ಗೋಣಿ ಒಳ್ಳೆ	...	14	2	14	8
ಊರ ಬೆಲ್ಲ ಖಂಡಿ ಒಳ್ಳೆ	..	60 —	0	66	8
ಉಪ್ಪು ಗೋಣಿ ಒಳ್ಳೆ	..	4 —	6	5 —	0
ಸಕ್ಕರೆ ಖಂಡಿ ಒಳ್ಳೆ	...	93	0	100	
[illegible] ಖಂಡಿ ಖಂಡಿ ಒಳ್ಳೆ	...	36 —	0	—	
ಎಳ್ಳಿಂಡಿ ಖಂಡಿ ಒಳ್ಳೆ	...	42 —	8		
[illegible] ಎಣ್ಣೆ ಮುಡಿ ಒಳ್ಳೆ	...	6 —	14	8 —	4
ಎಳ್ಳೆಣ್ಣೆ ಮುಡಿ ಒಳ್ಳೆ	...	7 —	12	8	4
[illegible]ಎಣ್ಣೆ ಬುದ್ದಿಗೆ ಒಳ್ಳೆ	..	7 —	12	8	4
[illegible] ಕಲ್ಲಿ ಮುಡಿ ಒಳ್ಳೆ	...	3 —	11	3	12
ಕೋಸ ಮೆಣಸು	...	6 —	0	6 —	8
[illegible] ಊರ ಮೆಣಸಿನಕಾಯಿ ಮುಡಿ ಒಳ್ಳೆ		1 —	8	2 —	4
[illegible] ಮುಡಿ ಒಳ್ಳೆ	..	9 —	0	8	8
[illegible] ಮುಡಿ ಒಳ್ಳೆ	..	4 —	4	5 —	4
ಟಿಪ್ ಕಾಫಿ ಖಂಡಿ ಒಳ್ಳೆ	..	4[illegible]0 —	0	388 —	0
[illegible] ಅಡಿಕೆ ಖಂಡಿ ಒಳ್ಳೆ		146 —	[illegible]	185	0
[illegible]ಮೆಣಸು ಖಂಡಿ ಒಳ್ಳೆ	..	420 —	0	424 —	0
[illegible] ಮುಡಿ ಒಳ್ಳೆ	...	60 —	0	66 —	
[illegible] ಮುಡಿ ಒಳ್ಳೆ	...	3 —	6		
[illegible] ಖಂಡಿ ಒಳ್ಳೆ	...	42 —	0	45	8
[illegible] ಹಣ್ಣು ಒಳ್ಳೆ	...	19 —	12	13	8
[illegible] ಪಾತ್ರೆಗಳು [illegible] ಒಳ್ಳೆ	...	24 —	0	22 —	4
[illegible]	...	15 —	6	—	
[illegible] ಹಣ್ಣು ಮುಡಿ ಒಳ್ಳೆ	..	16 —	0	16 —	0
[illegible] ಒಳ್ಳೆ	...	13-9-0		—	
[illegible] ಖಂಡಿ ಒಳ್ಳೆ	..	30 —	0	36 —	8

ಶರೀರಕ್ಕೆ[illegible]! ಶಾಶ್ವತವಾಗುವದು!!
[illegible] ಅಗ್ನಿ [illegible] ಬಲಪುಷ್ಟಿಕರ

[illegible]ದುರ್ಗ ಅಮೃತೇಶ್ವರಿ ವೈದ್ಯಶಾಲಾ

[illegible], ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸ್ಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಸ್ತ್ರ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲ್ಪಡುತ್ತದೆ. ಎಲ್ಲಾ ತರದ [illegible], [illegible]ಗಳು, [illegible]ಗಳು, [illegible], [illegible], ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible], [illegible], [illegible] ಆಹಾರದ ಕ್ರಮ, [illegible] ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಬರುವದಾದರೆ ಆ ವಿವರ [illegible] ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವನೋ ಎಂಬ [illegible] [illegible] ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದಿದೆ ಎಂಬೀ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವದು [illegible] [illegible]. [illegible] ಸಂಗತಿಗಳಲ್ಲಿ [illegible] [illegible] [illegible] ನಡಿಸಿದಲ್ಲಿ [illegible] [illegible]. [illegible] ಅನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ಮದ್ದುಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮತ್ತು ಎರಡು ಅವನ್ನು [illegible] ಎಲ್ಲಾ [illegible]ಗಳನ್ನು [illegible] ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವುಳ್ಳವರಿಗೆ ಮದ್ದುಗಳನ್ನು [illegible] ಕೊಡುವರೆ [illegible] [illegible] [illegible] [illegible] ವಿವರಕ್ಕೆ [illegible] ಮುಖಾಂತರ ವ್ಯವಹಾರ ನಡಿಸಬಹುದು.
ವಾರದ ಪ್ರತಿ [illegible] [illegible] [illegible] ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
[illegible], ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ!
ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್ ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಕೃಪೆಯಿಟ್ಟು, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ
ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ
ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —
ಕ್ರಯವಾಗಲಿ ಅಂಚೆಖಾಸಲಾಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯು[illegible] [illegible] ಸಾರಸಂಗ್ರಹ
ರೂಪವಾಗಿರುವ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು [illegible] [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible] [illegible] [illegible]
[illegible] [illegible] [illegible]
ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಕೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!
572 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗ
ವಾದ ವಿಷಯಗಳುಳ್ಳ

1929ನೇ ಇಸವಿಯ
ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧ
ವಾದ [illegible] [illegible] [illegible]

ಮನಮೋಹನ ಪಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು.
ಈ [illegible], [illegible] [illegible] [illegible]
[illegible] [illegible], [illegible].
ಬಿ. ಗೂಲನ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.
(192[illegible] [illegible] [illegible] [illegible] [illegible] XXI ನೇ [illegible] [illegible] [illegible] [illegible])
ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.
ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಘದವರಿಗೂ ತಕ್ಕ ಆಯುರ್ವೇದ ಔಷಧಗಳ ಉಪಯೋಗವು [illegible] [illegible] ನಮ್ಮ "ಧನ್ವಂತರಿ"ಯಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸುವ ಔಷಧಗಳನ್ನು ಅಲ್ಪ ಬೆಲೆಗೆ [illegible] [illegible] [illegible] ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ವಿವರಕ್ಕಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

[illegible]

ವರ್ತಮಾನ ಪತ್ರಿಕೆ [illegible]
[illegible] ೩
[illegible] — [illegible], ಉಡುಪಿ, ಭಟ್ಕಳ [illegible] ೩
[illegible] ೬—೯
[illegible] (೪) ೨
[illegible] ೧೧
[illegible] ೧೫

ಸ್ವದೇಶಾಭಿಮಾನಿ.

ತಾರೀಕು ೮ನೇ ಶುಕ್ರವಾರ ಮಾರ್ಚ್ ೧೯೨೯

ಹಳೆಯದೂ ಹೊಸತೂ.

(೨)

ರಾಂತಿಕಾರಿಗಳಾದ ಶ್ರೀ ದೇಸಾಯಿಯವರು ದೇವನಾಗರಿ ಲಿಪಿಯನ್ನೇ ಇಡೀ ದೇಶದ ಲಿಪಿಯಾಗಿ ಮಾಡಬೇಕೆಂದು ಸೂಚಿಸುವದರಲ್ಲಿ ನಾವು ನಾಲಕ್ಕು ಕಾರಣಗಳನ್ನು ಕಾಣುವದಿಲ್ಲ. ಶ್ರೀಯುತರು ದೇವನಾಗರಿಯನ್ನು ಸರ್ವಸಾಮಾನ್ಯವಾಗಿ ಮಾಡಲಿಕ್ಕೆ ಅ, ಆ, ಇ, ಈ ಎಂದು ನಾಲ್ಕು ಕಾರಣಗಳನ್ನು ಕೊಟ್ಟರೂ ಅವುಗಳ ಮುಖ್ಯ ತತ್ವವು ಪುರಾತನ ಮತ್ತು ಎಲ್ಲರಿಗೂ ಗೊತ್ತಿರುವಂತಾದ್ದೆಂಬುದೇ ಆಗಿದೆ. ಆದರೆ ಇದ್ದ ಲಿಪಿಯನ್ನು ಏಕ ಲಿಪಿಯಲ್ಲಿ ಲಯ ಹೊಂದಿಸುವ ಯೋಚನೆಗೆ ಈ ಎರಡು ಕಾರಣಗಳು ಸಾಕಾಗಲಾರವು. ಭಾಷೆಯು ಹೇಗೆ ಆಯಾ ಜನರ ಮತ್ತು ಸಮಯದ ಸಂಸ್ಕೃತಿಗೆ ಅನುಕೂಲವಾಗಿ ರಚಿಸಲ್ಪಟ್ಟರೂ, ಲಿಪಿಯು ಕೂಡ ಬದಲಾಯಿಸುವಾಗ ಬದಲಾಯಿಸುವ ಸಮಯದ ಮತ್ತು ಆಗಿನ ಜನರ ಸಂಸ್ಕೃತಿಗೆ ಅನುಕೂಲವಾಗಬೇಕು.

ಹಿಂದೂಸ್ಥಾನದಲ್ಲಿ ಹಲವು ಸಂಸ್ಕೃತಿಗಳು ಬೆಳೆದಿರುವದಾದರೂ, ಮತ್ತು ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಪ್ರತ್ಯೇಕ ವೈಶಿಷ್ಟ್ಯವಿದ್ದು ಅವುಗಳ ನಾಶವು ಸಾಧ್ಯವಲ್ಲವಾದರೂ, ಆಧುನಿಕ ಜಗತ್ತಿನ ಪ್ರಬಲವಾದ ಸಂಸ್ಕೃತಿಗೆ ಈ ಹಲವು ಸಂಸ್ಕೃತಿಗಳು ತಂಗಿಯಿಟ್ಟು ಪ್ರತ್ಯೇಕವಾಗಲಾರವು. ಆಧುನಿಕ ವ್ಯಕ್ತಿಯು ಆಧುನಿಕ ಸಂಸ್ಕೃತಿಯನ್ನು ತಿರಸ್ಕರಿಸಲಾರನು. ಆದುದರಿಂದ ದೇಶಕ್ಕೊಂದು ಭಾಷೆಯೂ, ದೇಶಕ್ಕೊಂದು ಲಿಪಿಯೂ ಅಗತ್ಯವಿರುವುದಾದರೆ ಈ ಭಾಷೆಯೂ, ಈ ಲಿಪಿಯೂ ಆಧುನಿಕ ಸಂಸ್ಕೃತಿಯ ಸ್ವೀಕಾರಕ್ಕೆ ಅನುಕೂಲವಾಗಿರಬೇಕು.

ಕ್ರಾಂತಿಕಾರಕ ರಚನೆಗಳಿಗೆ ಪುರಾತನತ್ವವಾಗಲಿ ಅಧಿಕ ಸಂಖ್ಯಾಕರದೆಂಬುದಾಗಲಿ ಸಾಕಾದ ಕಾರಣವಾಗಲಾರದು. ಮುಖ್ಯತಃ ಸಮಗ್ರ ಹಿಂದೂಸ್ಥಾನಕ್ಕೆ ಒಂದೇ ಭಾಷೆಯನ್ನೂ ಒಂದೇ ಲಿಪಿಯನ್ನೂ ಕೊಡಲೆಳಸುವಾಗ, ಅಂತಹ ಪ್ರಯತ್ನದ ಕತ್ತರಿಸುವುದೇ ನಮ್ಮ ಏಕಮಾತ್ರ ಧ್ಯೇಯವಾಗಿರಬೇಕು. ಎಲ್ಲರಿಗೂ ಒಂದೇ ಭಾಷೆಯಾಗಬೇಕು; ಎಲ್ಲರಿಗೂ ಒಂದೇ ಲಿಪಿಯಾಗಬೇಕು. ಆ ಮೂಲಕ ಸರ್ವ ತರದ ವ್ಯವಹಾರಗಳೂ ಸುಲಭವಾಗಬೇಕು; ಜನತೆಗೆ ಆಧುನಿಕ ಸಂಸ್ಕೃತಿಯನ್ನು ಸ್ವೀಕರಿಸಲು ಸುಲಭವಾಗಬೇಕು. ಹಿಂದೀ ಭಾಷೆಯೂ, ದೇವನಾಗರಿ ಲಿಪಿಯೂ ಈ ಧ್ಯೇಯವನ್ನು ಹೊಂದಿಸುವುದೇ ಎಂಬುದೇ ಮುಖ್ಯ ಪ್ರಶ್ನೆಯಾಗಿದೆ.

ಹಿಂದೀ ಭಾಷೆಯು ಆಧುನಿಕ ಸಂಸ್ಕೃತಿಗೆ ಅನುಕೂಲವಾಗಿರಬಹುದು; ಇಲ್ಲವೆ ಅನುಕೂಲವಾಗಿ ಮಾಡಲೂಬಹುದು. ಆಧುನಿಕ ವೈಜ್ಞಾನಿಕ ಪುಸ್ತಕಗಳು ಹಿಂದೀಯಲ್ಲಿ ರಚಿಸಲ್ಪಟ್ಟಿವೆ; ಪಾಶ್ಚಾತ್ಯರ ಪ್ರಯತ್ನಗಳಿಂದಲೇ ಬೆಳೆದ ಆಧುನಿಕ ಸಂಸ್ಕೃ[illegible] ಪಾಶ್ಚಾತ್ಯ ಭಾಷೆಗಳಿಂದ ಹತಿರವಾ[illegible] [illegible]

[illegible] ಹಿಂದೂಸ್ಥಾನದ ಭಾಷೆಗಳು [illegible] ಆದರೆ [illegible] ಮೇಲೆ ಅವುಗಳನ್ನು [illegible] ರೀತಿಯಲ್ಲಿಯೇ [illegible] ಹೋಗಬೇಕಾಗುತ್ತಿತ್ತು. ವಿಜ್ಞಾನವು ಮೆಲ್ಲನೆ [illegible] ದುದು. ಆದರ ವಿಕಾಸವು ಪಾಶ್ಚಾತ್ಯ ಭಾಷೆಯ [illegible] ಮೂಲಕವೇ ಆದುದು. ಆ ವಿಕಾಸವು ಕ್ರಿಯೆಯಾಗಿ ಭಾಷೆಯ ಮೇಲೆ ಪ್ರೇರಣೆಯನ್ನುಂಟುಮಾಡಿದೆ. ಹೀಗೆ ಪರಸ್ಪರ ಪ್ರೇರಣೆಯಿಂದ ಭಾಷೆಯೂ ವಿಜ್ಞಾನವೂ ಒಟ್ಟಾಗಿ ಬೆಳೆದಿವೆ. ಆದುದರಿಂದ ಪಾಶ್ಚಾತ್ಯ ಸಂಸ್ಕೃತಿಯು ಪಾಶ್ಚಾತ್ಯ ಭಾಷೆಗಳಲ್ಲಿ ಸ್ಪಷ್ಟವಾಗುವಷ್ಟು ಹಿಂದೂಸ್ಥಾನದ ಭಾಷೆಗಳಲ್ಲಿ ಸ್ಪಷ್ಟವಾಗುವುದಿಲ್ಲ.

ಹಿಂದೀ ಭಾಷೆಯು ಈ ಕಷ್ಟವನ್ನು ಹೇಗೆ ಪರಿಹರಿಸಬಹುದೆಂದು ನಾವು ಹೇಳಲಾರೆವು. ಈ ನೂತನ ಭಾವನೆಯೇ ನಮಗೆ ಈಗ ಹಿಂದೀಯ ಮೇಲೆ ಒಂದಿಷ್ಟು ಅವಿಶ್ವಾಸವನ್ನುಂಟುಮಾಡಿರುತ್ತದೆ. ಹಳೆಯದೆಲ್ಲಾ ತಿರಸ್ಕರಣೀಯವೆನ್ನುವವರಲ್ಲಿ ನಾವಲ್ಲವೆಂದು ಹೇಳುವಾಗ ಹೊಸದೆಲ್ಲಾ ಕೆಟ್ಟದೆಂದು ಹೇಳುವವರೂ ನಾವಲ್ಲ. ಒಳ್ಳೆಯದಾಗಲಿ, ಕೆಟ್ಟದಾಗಲಿ ಆಧುನಿಕ ಸಂಸ್ಕೃತಿಯನ್ನು ನಾವು ತಿರಸ್ಕರಿಸಲಾರೆವು. ಅದರ ಆಶ್ರಯವನ್ನು ನಾವು ಪಡೆದು ಅದರ ಬೆಳವಣಿಗೆಯಲ್ಲಿ ನಾವೂ ಸಹಭಾಗಿಗಳಾಗಿ, ಪಾಶ್ಚಾತ್ಯರೊಡನೆ ಸಮಾನತೆಯನ್ನು ನಾವು ಹೊಂದಲೇ ಬೇಕು. ಈ ಧ್ಯೇಯಕ್ಕಾಗಿ ಹಿಂದೀ ಭಾಷೆಯು ಸಂಪೂರ್ಣವಾಗಿಯೂ ಸಹಾಯವನ್ನು ಮಾಡಬಲ್ಲುದಾದರೆ ಹಿಂದೂಸ್ಥಾನಕ್ಕೆ ಹಿಂದೀ ಭಾಷೆಗಿಂತ ಮಹತ್ವದ ಭಾಷೆಯು ಇನ್ನೊಂದಿರದು. ಆದರೆ ಮೇಲಿನ ಧ್ಯೇಯವನ್ನು ದೃಷ್ಟಿಸುವಾಗ ಹಿಂದೀ ಭಾಷೆಯು ಹಿಂದೂಸ್ಥಾನವನ್ನು ಆಧುನಿಕತೆಯಿಂದ ಕೆಲವು ವರುಷಗಳ ಹಿಂದೆ ಹಾಕುವುದಾದರೆ ಹಿಂದೀ ಭಾಷೆಯು ಪ್ರಾಂತಿಕ ಭಾಷೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ತಾಳುವ ಅವಶ್ಯಕತೆಯು ತೋರುವುದಿಲ್ಲ.

ಹಿಂದೀ ಭಾಷೆಯ ವಿಷಯದಲ್ಲಿ ನಾವು ನಮ್ಮ ಸಂದೇಹವನ್ನು ಕರವಾಗಿ ಮಾತನಾಡುವಾಗ ದೇವನಾಗರಿ ಲಿಪಿಯ ವಿಷಯದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬಲ್ಲೆವೆಂದೆನಿಸುವದು. ದೇವನಾಗರಿ ಲಿಪಿಗೆ ಪುರಾತನತ್ವದ ಹೊರತು ಬೇರೆ ತಿಫಾರಸು ಇರುವುದಿಲ್ಲ. ಮುದ್ರಣಕ್ಕೆ ಅದು ಬಹಳ ಅನಾನುಕೂಲ; ಈಗಿನ ತಂತೀ ವರ್ತಮಾನಗಳಿಗೆ ಪ್ರಯೋಜನವೇ ಇಲ್ಲ, ಟೈಪ್‌ರೈಟಿಂಗ್ ಅಸಾಧ್ಯ; [illegible] ಕಲಿಕ್ಕೆ ಕಷ್ಟ; [illegible] ಹೆಚ್ಚಿನ [illegible] ಇಲ್ಲ; [illegible] ಇರುವುದಿಲ್ಲ; ಬರೆಯಲಿಕ್ಕೆ ಕೂಡ ಬಹಳ ಕಷ್ಟವಿದೆ. ಆದುದರಿಂದ ದೇವನಾಗರಿ ಲಿಪಿಯು ಆಧುನಿಕ ಸಂಸ್ಕೃತಿಗೆ ಎಂದೂ ಅನುಕೂಲವಾಗಲ್ಲ. ಕೇಮಲ್‌ಪಾಶನಂತೆ ಹಿಂದೂಸ್ಥಾನವೂ ರೋಮನ್ ಲಿಪಿಯ ವಿಷಯ ಏಕೆ ಆಲೋಚಿಸಬಾರದೆಂದು ನಾವು ಈ ವಿಷಯದಲ್ಲಿ ಸೂಚಿಸುವೆವು. ಈ ಸೂಚನೆಯು ಕ್ರಾಂತಿಕಾರಕವಾದರೂ ಪ್ರಯೋಜನಕರವಾಗಬಹುದೆಂದು ಅನಿಸುತ್ತದೆ.

ವಿದೇಶ ವರ್ತಮಾನ.

— ಬ್ರಿಟಿಶ ಕಲ್ಲಿದ್ದಲಿನ ಗಣಿಗಳಲ್ಲಿ [illegible]. [illegible] ಜನರಿಗೆ ಈಗ [illegible] ಕೆಲಸ ಮಾಡುವ ಆವಶ್ಯಕತೆ ಬಂದೊದಗಿ [illegible] ಮೊದಲು ವಾರಕ್ಕೆ [illegible] ದಿನ ಕೆಲಸ ಮಾಡುತ್ತಿದ್ದ ಗಣಿಗಳಲ್ಲಿ ಈಗ ವಾರಕ್ಕೆ ಆರು ದಿನಗಳಲ್ಲೂ ಕೆಲಸವು ನಡೆಯುತ್ತಲಿದೆ. [illegible] ಆದಾಗಿರುವುದಿಲ್ಲ.

[illegible] "[illegible]" ಎಂಬ ಗ್ರೀಕ ವರ್ತಮಾನ ಪತ್ರಿಕೆಯಲ್ಲಿ ಲೇಖವನ್ನು ಬರೆದುದರ ಸಲುವಾಗಿ, ಕಾನ್‌ಸ್ಟಾಂಟಿನೋಪಲಿನ ಸ್ಟಾಂಬೂಲ್ ಯುನಿವರ್ಸಿಟಿಯ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳು [illegible] ಕಚೇರಿಗಳ ಮೇಲೆ ಕಲ್ಲುಗಳನ್ನು ಎಸೆದು ಸಂಪಾದಕನನ್ನು ಹಿಡಿದು ಹಿಂಸಿಸಿದರು.

[illegible] ರಾಜ್ಯದ ವೆರಾಕ್ರೂಜ್ ಎಂಬಲ್ಲಿ ರಾಜದ್ರೋಹದ ದಂಗೆ ಆಗಿರುತ್ತದೆಂದು ವರ್ತಮಾನದಿಂದ ರಾಜಧಾನಿಯಲ್ಲಿ ಗಲಭೆ ಎದ್ದಿರುತ್ತದೆ. [illegible] ಚಲಾವಣೆಯು ತಡೆಗಟ್ಟಲ್ಪಟ್ಟಿರುತ್ತದೆ.

— ಜೋಹಾನ್ಸಬರ್ಗಿನ ಬಹಿರಂಗವಾದ ರಸ್ತೆಯಲ್ಲಿ [illegible] ಮತ್ತು [illegible] ಎಂಬ ಎರಡು ಸಂಗಡಗಳೊಳಗೆ ಭಯಂಕರವಾದ ಜಗಳ ಪ್ರಾರಂಭವಾಯಿತು. ಚಾಕುಗಳು, ಬಾಟಲಿಗಳು, ಕಲ್ಲಿದ್ದಲಿನ ತುಂಡುಗಳೂ ಎರಡೂ ಪಕ್ಷದವರಿಂದ ಉಪಯೋಗಿಸಲ್ಪಟ್ಟವು. ಊರಲ್ಲಿದ್ದ ಪೋಲೀಸರೆಲ್ಲರೂ ಅಲ್ಲಿಗೆ ಕರೆಯಲ್ಪಟ್ಟರು.

[illegible] ಅವರು [illegible] ಆರೋಪಿಗಳನ್ನು [illegible] ಕೈದು ಮಾಡಲ್ಪಟ್ಟರು.

— ಇಂಗ್ಲಾಂಡಿನಲ್ಲಿ ಸರ್ ವಿಲಿಯಂ ಜೋಬ್‌ಹೇಮ ಎಂಬವರು ಸೆಕೆ ಕಾಲದಲ್ಲಿ ಇಂಗ್ಲಾಂಡಿನ ೧೧,೦೦೦ ಮಕ್ಕಳನ್ನು ಧರ್ಮಾರ್ಥವಾಗಿ ಸಮುದ್ರದಲ್ಲಿ ಕ್ರೀಡಿಸಿ ಆರೋಗ್ಯಗಳನ್ನು ಬೆಳೆಯಿಸುವರು. ಆ ಮಕ್ಕಳಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣ ಮಾಡುವ ಅಭಿರುಚಿಯು ಹುಟ್ಟಬೇಕೆಂಬುದೇ ಅವರ ಉದ್ದೇಶವಾಗಿದೆ.

— ಜರ್ಮನಿಯಲ್ಲಿ ಮುಖ್ಯವಾದೊಂದು ರಾಜಕೀಯ ದಸ್ತಾವೇಜಿನ ಕಳವಿಯಲ್ಲಿದ್ದ ಮೂವರು ರಕ್ಷಕರೂ ಒಬ್ಬ ಜರ್ಮನ ಹೆಂಗಸೂ ಕೈದು ಮಾಡಲ್ಪಟ್ಟಿರುವರು.

— ಪೋಲೆಂಡಿನ ಚಿಸ್ಸಿಲ್ ಎಂಬಲ್ಲಿ ಒಬ್ಬ ಯುವಕನು ತನ್ನ ಅಕ್ಕನನ್ನೇ ಮದುವೆಯಾಗಿರುವನು. ಒಬ್ಬ ಮನುಷ್ಯನು ಎರಡನೆಯ ಮದುವೆಯಲ್ಲಿ ನಾಲ್ವತ್ತೈದು ವರುಷ ಪ್ರಾಯದ ಹೆಂಗಸಿನ ಮಗಳಾದ ೨೦ ವರುಷದ ಯುವತಿಯನ್ನು ಮದುವೆಯಾದನು. ಆತನ ಮೊದಲನೆಯ ಹೆಂಡತಿಯ ಮಗನು, ತಂದೆಯ ಎರಡನೆಯ ಹೆಂಡತಿಯ ತಾಯಿಯನ್ನು ಕಂಡು ಮೋಹಿಸಿ, ಆಕೆಯನ್ನು ಮದುವೆಯಾದನು. ಮಗನು ತಂದೆಯ ಮಾವನಾದ ಹಾಗಾಯಿತು.

— ವಾರ್‌ವಿಕ್ ಶಾಯರಿನ ಕೋಲ್‌ಹಿಲ್ ಎಲಿಮೆಂಟರಿ ಶಾಲೆಯಲ್ಲಿ ನಡೆದ ಕೈಬರಹದ ಸ್ಪರ್ಧೆಯಲ್ಲಿ [illegible] ಎಂಬ ಹುಡುಗಿಯು ಸಂಪಾದಿಸಿರುವಳು. ಆ ಹುಡುಗಿಗೆ ಕೈಗಳಿರುವುದಿಲ್ಲವಂತೆ.

ಮಿ. ಸಿ. ಎಫ್. ಎಂಡ್ರ್ಯೂಸರವರು ಈಗ ಅಮೇರಿಕದಲ್ಲಿರುವರು. ಅಲ್ಲಿ ಅವರು ಮಾಡಿದ ಕೆಲಸಗಳ ಕುರಿತಾಗಿ ಅವರು ಮಹಾತ್ಮಾಜಿಯವರಿಗೆ ಎರಡು [illegible] ಕಳುಹಿಸಿರುವರು. ಹಿಂದೂಸ್ಥಾನದ ಜನರೊಂದಿಗೆ ಸಹಾನುಭೂತಿಯನ್ನೂ, [illegible] ಸಹೋದರ ಭಾವವನ್ನೂ ಅಮೇರಿಕನರು ವ್ಯಕ್ತಪಡಿಸುತ್ತಿರುವರಂತೆ.

— [illegible] ಬ್ರಿಟಿಶರಿಗೆ [illegible] ಸಹಾಯಕ್ಕಾಗಿ [illegible] ಬರಬೇಕೆಂದು [illegible] ಕೇವಲ ಅವರ ಸತ್ಕಾರದ ಸಲುವಾಗಿಯೇ [illegible] ದಿವಸಗಳು [illegible]

— [illegible] ಕೈಯಲ್ಲೇ [illegible] ಒಂದು [illegible] ಸಮಯವನ್ನು ತೋರಿಸುತ್ತದೆ.

— [illegible] ಒಂದು ಹೊಸ [illegible] ಮಾಡಿದ ಮುಖ್ಯ [illegible]

[illegible] ರಾಜದ್ರೋಹದ ಸಂಬಂಧದಲ್ಲಿ [illegible] ಎಂಬವನೂ, [illegible] ರಾಜ್ಯದ [illegible] ಅವರೊಡನೆ [illegible] ಇನ್ನೊಬ್ಬ [illegible] ಉದ್ದೇಶವಾಗಿರುತ್ತದೆ.

— [illegible] ಕಿಂಗ್ [illegible]

— [illegible] ಹವೆಯ [illegible] ಕಾಲದಿಂದ [illegible] ಮಾತ್ರ [illegible] ಹೆಂಡತಿಯೊಂದಿಗೆ ಯುರೋಪ [illegible]

— [illegible] ಕಡೆ [illegible] ಹಿಂದ [illegible] ಹುಟ್ಟಿದ [illegible] ಮಾರಾಟವಾದವು.

[illegible] ಈಗ ಪತ್ರಿಕಾಕರ್ತರಾಗಿರುವರು. ಅವರು ಬರೆದ [illegible] ತಿಂಗಳಿಗೆ [illegible] ಅವರಿಗೆ ದೊರೆಯುತ್ತದೆ.

— [illegible] ನಗರದ ಒಂದು [illegible] ಪಟ್ಟಣವು [illegible] ಎನ್ನುತ್ತಾರೆ. [illegible] ೩೦೦೦ ಅಡಿ [illegible] ಕೆಲವರು [illegible]. ಈ ಪಟ್ಟಣದ ಹೆಸರು [illegible] ಎಂದು. ಬ್ರಿಟಿಶರಲ್ಲಿ ರೋಮನರ ಆಧಿಪತ್ಯದ ಕಾಲದ ಪಟ್ಟಣದಲ್ಲಿ ೫೦,೦೦೦ ಮಂದಿ ರೋಮನರಿದ್ದರು. ಅಷ್ಟು ದೊಡ್ಡ ಪಟ್ಟಣದ ಭಾವಚಿತ್ರವನ್ನು ತೆಗೆದಿರುವರು. ಸಮ್ಮರ್‌ನಲ್ಲಿಯೇ ಈ [illegible] ಶೋಧಕ್ಕಾಗಿ ನೆಲವನ್ನು ಅಗೆಯಲು ಪ್ರಾರಂಭಿಸುವರು.

ಬ್ರಹದ್ದೇಶ ವರ್ತಮಾನ.

— [illegible] ಶ್ರೀ [illegible] ಅಯ್ಯರವರು [illegible] [illegible] ಹೆಸರು [illegible] [illegible] ನಾಸ್ತಿಕರಲ್ಲಿ ಅವರು [illegible].

— ಎಪ್ರಿಲ್‌ನಲ್ಲಿ ಸ್ಯೆಮನ್ ಕಮಿಟಿಯವರು ಸೆಂಟ್ರಲ್ ಮತ್ತು ಪ್ರಾಂತಿಕ ಕಮಿಟಿಯವರನ್ನು ಕೂಡಿಕೊಂಡು ಡಿಲ್ಲಿಯಲ್ಲಿ ಒಂದು ಕ್ಯಾಂಪ್ [illegible] ಜರಗಿಸುವರು. ಅದಕ್ಕಾಗಿ ಮಾರ್ಚಿ ತಿಂಗಳ ಸ್ಯಾಮನ್ ಕಮಿಟಿ ಯವರು ಡಿಲ್ಲಿಗೆ ಹೊರಟು ಹೋಗುವರು. ಅಲ್ಲಿಗೆ ಹೋಗಬೇಕಾದರೆ ಮೊದಲು ಬೇರೆ ಬೇರೆ ಪ್ರಾಂತಿಕ ಕಮಿಟಿಗಳ ಜನರು ಒಟ್ಟಾಗಿ ಒಂದು ಸಭೆ ಜರಗಿಸುವದು ಒಳ್ಳೆದಾಗಿದೆಯೆಂದು ಸರ್. ಎ. ಶಾಸ್ತ್ರಿಯವರು ಬೇರೆ ಬೇರೆ ಪ್ರಾಂತಿಕ ಕಮಿಟಿಗಳ ಅಧ್ಯಕ್ಷರುಗಳೊಡನೆ ಪತ್ರವ್ಯವಹಾರಾದಿ ಗಳನ್ನು ನಡಿಸುತ್ತಿರುವರಂತೆ.

— ಮಹಾತ್ಮಾ ಗಾಂಧಿಗಳವರು ಡಿಲ್ಲಿಯನ್ನು ಸಂದರ್ಶಿಸಿದಾಗ ಅಮೇರಿಕನ್ ಸ್ಪ್ರಿಂಗ್ ಯುನಿವರ್ಸಿಟಿಯ ಪ್ರೊಫೆಸರನೊಬ್ಬನು ತನ್ನ ವಿದ್ಯಾರ್ಥಿಗಳೊಂದಿಗೆ ಮಹಾತ್ಮಾಜಿಯವರ ಭೇಟಿಯನ್ನು ಮಾಡಿದನು. ಅವರಲ್ಲಿ ಮೂವತ್ತು ಮಂದಿ ವಿದ್ಯಾರ್ಥಿನಿಯರಿದ್ದರು. ಅವರ ಕುರಿತಾಗಿ ಅಮೇರಿಕನ್ ವಿದ್ಯಾರ್ಥಿಗಳ ಅಭಿಪ್ರಾಯವೇನಂದರೆ “ಇಂದು ನಾವು ಜಗತ್ತಿನ ಶ್ರೇಷ್ಠ ಪುರುಷನು ಏಕೀ ದೈರಾಸುಟ್ಟಾಗಲೀ ಕಂಡೆವು. ಮಹಾ ತ್ಮಾಜಿಯವರ ವಿಷಯವಾಗಿ ನಾವು ಈ ಮೊದಲೇ ಕೇಳಿದ್ದು. ಅವರ ಕಡೆಗೆ ಪೂಜ್ಯಭಾವವನ್ನು ಕಳೆದಿದ್ದೆವು ಇಂದು ಅವರನ್ನು ಪ್ರತ್ಯಕ್ಷ ನೋಡಿದೆವು. ಅವರ ಆಚಾರ, ನಡತೆಗಳಿಂದ ಮರುಳಾದೆವು. ಯಾವ ದೇಶವನ್ನು ಸಂಚರಿಸಿದರೂ, ಧಕ್ಕೆ ವಿಚಾರಿಸದೆ ದೇಶದ ಕುರಿತಾಗಿ ಅಭಿ ಪ್ರಾಯಗಳನ್ನು ಪ್ರಕಟಿಸುವದು ಸಮಂಜಸವಲ್ಲವೆಂದು ನಮಗವರು ಬೋಧಿಸಿದುದಕ್ಕಾಗಿ ನಾವು ಅವರಿಗೆ ಆಭಾರಿಗಳಾಗಿರುವೆವು” ಎಂದು. ಮಹಾತ್ಮಾಜಿಯವರು ರಂಗೂನನ್ನು ಸಂದರ್ಶಿಸುವಾಗ ರಂಗೂನ್ ಕಾರ್ಪೊ ರೇಶನಿನವರ ಖರ್ಚಿನಲ್ಲಿ ಅವರಿಗೊಂದು ಖುಸ್ಸಾಗಳ ಸೂಚಕವಾದ ಮಾನ ಪತ್ರವನ್ನು ಅರ್ಪಿಸಬೇಕೆಂದು ನಿರ್ಣಯವಾಗಿರುತ್ತದೆ.

— ಹಿಂದೂ ಮಹಾಸಭೆಯ ಹದಿನೆರಡನೆಯ ಅಧಿವೇಶನವು ತಾರೀಕು ೩೯, ೩೦, ೩೧ ಈ ದಿನಗಳಲ್ಲಿ ಸೂರತ್ತಿನಲ್ಲಿ ಜರಗುವದು. ಅಧ್ಯಕ್ಷತನಕ್ಕೆ ಹಲವು ಮಹನೀಯರುಗಳ ಹೆಸರುಗಳು ಸೂಚಿಸಲ್ಪಟ್ಟವು. ಹೆಚ್ಚಾಗಿ ಕಲಕತ್ತೆಯ ‘ಮೊಡರ್ನ್ ರಿವ್ಯೂ’ ಪತ್ರಿಕೆಯ ಸಂಪಾದಕ ರಾದ ಶ್ರೀ ರಾಮಾನಂದ ಚಟರ್ಜಿಯವರ ಹೆಸರಿಗೆ ಹುಂಬಾ ಮತಗಳು ದೊರೆತವೆ.

— “ವೀರಕೇಸರಿ” ಎಂಬ ಕರ್ನಾಟಕ ದೈನಿಕ ಪತ್ರಿಕೆಯನ್ನು ಪ್ರಕ ಟಿಸಲು ಶ್ರೀ ಸೀತಾರಾಮ ಶಾಸ್ತ್ರಿಗಳವರಿಗೆ ಕೊಡಲ್ಪಟ್ಟ ಹುಕುಮು ಸರಕಾರದವರಿಂದ ಹಿಂತೆಗೆಯಲ್ಪಟ್ಟಿರುತ್ತದೆ.

— ಕೊಯಿಂಬತ್ತೂರಿನ ಸೆಂಟ್ರಲ್ ಜೈಲ್ ಕೈದಿಗಳು ಪ್ರಾರಂಭ ಸಿದ್ದ ಮುಷ್ಕರವು ಈಗ ಕೊನೆಗಂಡಿರುತ್ತದೆ.

— ಬರುವ ಸಪ್ಟಂಬರ ೩೦ನೇ ತಾರೀಕಿನ ದಿನ ಮಹಾತ್ಮಾಜಿಯವ ರಿಗೆ ೬೦ ವರುಷಗಳು ಪೂರ್ಣವಾಗುವವು. ಅದೇ ದಿನ ಆಲ್ ಇಂಡಿಯ ಸ್ಪಿನ್ನರ್ಸ್ ಎಸೋಸಿಯೇಶನಿನ ಚಾಲ್ಲಿ ವರುಷವು ಪೂರ್ಣವಾಗುವದು. ಖಾದಿಯನ್ನು ಹೆಚ್ಚಾಗಿ ವಿಕ್ರಯಿಸುತ್ತಾ ಹೋಗಿ, ಅವರ ಜನ್ಮ ದಿನಾ ಚರಣೆಯ ದಿನ ಅವರಿಗೆ ಹುಂಬಾ ಸಂತೋಷವನ್ನುಂಟುಮಾಡಬೇಕೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರ ಸೂಚನೆ.

— ಮದರಾಸಿನಲ್ಲಿ ಸ್ಯಾಮನ್ ಕಮಿಶನು ಬಂದಾಗ ಬಹಿಷ್ಕಾರದಲ್ಲಿ ಭಾಗಿಗಳಾದ ಮೂವರು ಲಾ ಕಾಲೇಜಿನ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಹಾಕಲಾಗಿತ್ತು. ಈಗ ಅವರಲ್ಲಿ ಇಬ್ಬರನ್ನು ಪುನಃ ಸೇರಿಸಿ ಕೊಂಡಿರುವರಂತೆ.

— ಮುಂಬಾಯಿಯ ಹೊಸ ಗವರ್ನರರು ಮುಂಬಾಯಿ ಸಂಸ್ಥಾ ನದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ವಸೂಲುಮಾಡಲ್ಪಡುತ್ತಿರುವ ಸಂಬಳವು ತೀರ ಕಡಿಮೆಯೆಂದು ತಿಳಿಯುತ್ತಿರುವರಂತೆ. ಹಿಂದೂಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತುಕೊಳ್ಳುವ ಹಿತೈಷಿಗಳಾದರೆ, ಹೀಗೆ ತಿಳಿದು ಕೊಳ್ಳುವದರಲ್ಲಿ ಆಶ್ಚರ್ಯವಿಂದು.

— ಏಸಿ ಜಮುನಾಲಾಲ ಬಜಾಜರ ಹಿಂದೀ ಪ್ರಚಾರ ಕಾರ್ಯವು ಕೊನೆಗಂಡಿತು. ಅವರು ದೆನಸಿದಷ್ಟು ಪ್ರಯೋಜನವು ಅದರ ಸಂಚಾರ ದಿಂದ ಉಂಟಾಗದಾದರೂ ಹಿಂದೀ ಪ್ರಚಾರ ಕಾರ್ಯಕ್ಕಾಗಿ ಸುಮಾರು ೧೫೦೦೦ ರೂಪಾಯಿಗಳು ಜಮೆಯಾಗಿರುತ್ತವಂತೆ. ಹಿಂದೀ ಪ್ರಚಾರದ ಸಲುವಾಗಿ ಉಪಾಧ್ಯಾಯರ ತರಬೇತಿಗಾಗಿ ಎರಡು ಟ್ರೈನಿಂಗ್ ಶಾಲೆಗಳು ತೆರೆಯಲ್ಪಡುವದು ಒಳ್ಳೆಕೆಂದು ಯೋಚಿಸಲ್ಪಡುತ್ತದೆ.

— ಯಂಗ್ ಇಂಡಿಯಾದಲ್ಲಿ ಒಂದು ಆಶ್ಚರ್ಯಕರ ವಾರ್ತೆಯು ಪ್ರಕಟಿಸಲ್ಪಟ್ಟಿರುತ್ತದೆ. ೩೩ ವರುಷ ಪ್ರಾಯದ ಒಬ್ಬ ಹೆಂಗಸು ಹಲವು ರೋಗಗಳಿಂದ ನರಳುತ್ತಿದ್ದಳಂತೆ. ಅವಳು ೧೫ ದಿವಸಗಳ ಪರಿಯಂತರ ಉಪವಾಸವನ್ನು ಆಚರಿಸಿದನಂತರ ಅವಳಿಗೆ ಶಾರೀರಿಕ ಆರೋಗ್ಯವೂ ಮಾನಸಿಕ ಶಾಂತಿಯೂ ಸುಲಭದಲ್ಲಿ ಲಭಿಸಿದವು.

— ಮಹಾತ್ಮಾಜಿಯವರು ತನ್ನ ಬರ್ಮಾ ದೇಶದ ಸಂಚಾರವನ್ನು ಮುಗಿಸಿದೊಡನೆ ಆಂಧ್ರ ದೇಶದಲ್ಲಿ ಸಂಚರಿಸುವರು. ಮೇ ಜೂನ್ ತಿಂಗಳುಗಳಲ್ಲಿ ಸಂಯುಕ್ತ ಪ್ರಾಂತಗಳನ್ನು ಸಂದರ್ಶಿಸುವರು.

— ಮದರಾಸಿನ ಟ್ರಿಪ್ಲಿಕೇನಿನಲ್ಲಿ ಖಾದಿಯು ಈಗ ಹೆಚ್ಚೆಚ್ಚು ವಿಕ್ರ ಯವಾಗುತ್ತಾ ಬರುತ್ತಿದೆಯೆಂದು ತಿಳಿದು ಬರುತ್ತದೆ.

— ನೇಪಾಳ ಸರಕಾರದವರು ಖಾದೀ ಪ್ರಚಾರ ಕಾರ್ಯವನ್ನು ಮನಮುಟ್ಟಿ ಮಾಡುತ್ತಿರುವರು. ಅವರ ರಾಜ್ಯದಲ್ಲಿ ಖಾದೀ ನೈಗೆ ಯನ್ನು, ಚರಕದಲ್ಲಿ ನೂಲುವದನ್ನು ಪ್ರಚಾರಕ್ಕೆ ತರುವ ಸಲುವಾಗಿ ೬ ಜನರು ನೇಮಿಸಲ್ಪಟ್ಟಿರುವರು. ಸಬರಮತಿ ಆಶ್ರಮದಲ್ಲಿ ನೂಲುವ ದನ್ನು, ನೇಯುವದನ್ನು ಕಲಿತು ಸುರಿತನೊಬ್ಬನು ಅವರ ಮೇಲ್ವಿಚಾರ ಣೆಗಾಗಿ ನೇಮಿಸಲ್ಪಟ್ಟಿರುವನು. ನೇಪಾಳದ ಒಳಗಿನ ಸ್ಥಳಗಳಲ್ಲಿಯೂ ಕಟಮಂಡು ಮೊದಲಾದ ಸ್ಥಳಗಳಲ್ಲಿಯೂ ಸುಮಾರು ೫೦೦ ಚರಕಗಳು ಕೆಲಸ ಮಾಡುತ್ತಿವೆ. [illegible] ಹೆಂಗಸರೂ, [illegible] ಮಗುಗಳೂ [illegible] [illegible] ಸಿಕ್ಕಿ [illegible] [illegible] ಹೇಗೆ [illegible] [illegible] ತಿಳಿದಿದ್ದಾರೆ.

— ಡಾಕ್ಟರ್ ಸತ್ಯೇಂದ್ರನಾಥ ಠಾಗೋರರವರು ಮುಂಬಾಯಿಯಿಂದ ಹಡಗಿನಲ್ಲಿ ಯುರೋಪು ಖಂಡಕ್ಕೆ ತೆರಳಿ ಹೋದರು.

— ಮದರಾಸು ನ್ಯಾಯವಿಧಾಯಕ ಸಭೆಯು ಇದೇ ಎಪ್ರಿಲ್ ೨೫ನೇ ತಾರೀಕಿನಿಂದ ೨ ತಿಂಗಳುಗಳ ವರೆಗೆ ಮುಲ್ತವಿಯಾಗುವದು.

— ಬರ್ಮಾ ತೈಲ್ ಆಯಿಲ್ ಕಂಪೆನಿಯವರ ಪೆಟ್ರೋಲಿನ ಕ್ರಯವು ಗ್ಯಾಲನಿಗೆ ಎರಡಾಣೆ ಪ್ರಕಾರ ಇಳಿದಿರುತ್ತದೆ.

— ಕೆಲವು ಸಮಯದ ಹಿಂದೆ ಕಲ್ಲಿಕೋಟೆಯ ಇಬ್ಬರು ಹಿಂದೂ ಗಳು ಕ್ರಿಸ್ತೀ ಮತಕ್ಕೆ ಸೇರಿದ್ದರು. ಆದರೆ ಅವರು ಹಿಂದುಗಳಾಗ ಬೇಕೆಂದು ಪುನಃ ಅಭಿಪ್ರಾಯಪಟ್ಟದರಿಂದ ಕಲ್ಲಿಕೋಟೆಯ ಆರ್ಯ ಸಮಾಜದವರು ಅವರನ್ನು ಪುನಃ ಹಿಂದೂ ಮತಕ್ಕೆ ಸೇರಿಸಿಕೊಂಡರು.

ಮೈಸೂರು ಮಹಾರಾಜರು ಕೆಲವು ದಿನಗಳ ಹಿಂದೆ ಉದಕ ಮಂಡ ಲಕ್ಕೆ ಹೋಗಿದ್ದವರು ಪುನಃ ಮೈಸೂರಿಗೆ ಹಿಂತಿರುಗಿರುವರು.

— ಮೈಸೂರು ದಿವಾನರಾದ ಮಿ॥ ಮಿರ್ಜಾರವರು ಡಿಲ್ಲಿಗೆ ಹೋಗಿದ್ದ ವರು ಹಿಂತಿರುಗಿರುವರು. ಸ್ಯಾಮನ್ ಕಮಿಶನನ್ನು ಎದುರುಗೊಳ್ಳಲು ಮಾಡಿದ ತಯಾರಿಗಳೆಲ್ಲವನ್ನು ನೋಡಿ ಬೆಂಗಳೂರಿಗೆ ತೆರಳಿದರು.

— ಕಲಕತ್ತೆಯ ಆನಂದ ಬಜಾರ ಪತ್ರಿಕೆಯಲ್ಲಿ ‘ಬಂಗಾಳದ ಸ್ವಾತಂತ್ರ್ಯ ಚಳವಳಿ’ ಮೊದಲಾದ ಲೇಖನಗಳನ್ನು ಬರೆದುದಕ್ಕಾಗಿ, ಸಂಪಾ ದಕರಾದ ಶ್ರೀ ಸತ್ಯೇಂದ್ರನಾಥ ಮುಜುಮದಾರರ ಮೇಲೆ ಮೊಕದ್ದಮೆ ಯಾಗಿರುತ್ತದೆ.

— ಮದರಾಸು ಸ್ಯಾಮನ್ ಕಮಿಟಿ ಮೆಂಬರರ ದಿನವಹಿ ಭತ್ತೆ ಯನ್ನು ೪೦ ರೂಪಾಯಿಗಳಿಗೆ ಏರಿಸುವ ಯೋಜನೆ ನಡೆಯುತ್ತಿದೆ. ನ್ಯಾಯ ವಿಧಾಯಕ ಸಭೆಯಲ್ಲಿ ಒಂದು ಪ್ರಶ್ನೆಗೆ ಈ ಮೆಂಬರುಗಳಿಗೆ ರೂಪಾಯಿ ೧೦ ಮಾತ್ರ ಕೊಡಲ್ಪಡಬೇಕೆಂದು ಉತ್ತರವು ದೊರಕಿತು. ಆದರೆ ಇದು ತೀರ ಕಡಿಮೆಯೆಂದು ಕೆಲವು ಮೆಂಬರರು ಭತ್ತೆಯನ್ನು ಪಡಕೊಂಡಿಲ್ಲ.

— ತಾರೀಖು ೩೦ ಮತ್ತು ೩೧ನೇ ದಿನಗಳಲ್ಲಿ ನಡೆಯುವ ಬೀಹಾರು ಪ್ರಾಂತಿಕ ಪರಿಷತ್ತಿಗೆ ಪಿ. ಎನ್. ಸಿ. ಕೇಳಕರರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

— ಮಕ್ಕಳನ್ನು ಕೊಂಡೊಯ್ಯುವರೆಂಬ ಗಲಭೆಯು ಮೊದಲಾಗಿ ಮುಂಬಾಯಿಯಲ್ಲಿ ನಡೆಯಿತು. ತದನಂತರ ಬೆಂಗಳೂರಿನಲ್ಲಿ ಉಂಟಾಯಿತು. ಈಗ ವೆಲ್ಲೂರಿನಲ್ಲಿ ಉಂಟಾಗುತ್ತಿದೆ. ಒಬ್ಬ ನಾಲ್ವತ್ತು ವರುಷಪ್ರಾಯದ ಹೆಂಗಸು ತನ್ನ ಮನೆಯಿಂದ ಒಬ್ಬ ಹುಡುಗ ನನ್ನು ಕದ್ದೊಯ್ಯುವಳೆಂದು ಒಬ್ಬ ಸಿಪಾಯಿಯು ಹೇಳಿದುದರಿಂದ ಹೆಂಗಸನ್ನು ಹುಡುಕಿ, ಹಿಡಿದು ಬಂಧಿಸಿದರು. ಅವಳು ಬಂಧಿಸಲ್ಪಟ್ಟೊಡನೆ ಊರ ಲ್ಲೆಲ್ಲ ಗಲಭೆಯುಂಟಾಗಿತ್ತಿದೆ.

— ಸರಕಾರಿ ನೌಕರರ ಉಡುಪಿಗಾಗಿ ಖಾದಿಯನ್ನು ಉಪಯೋಗಿಸ ಬೇಕೆಂದು ಅಸ್ಸಾಮ ಕೌನ್ಸಿಲಿನಲ್ಲಿ ಮಂಜೂರಾಗಿರುತ್ತದೆ. ಇದು ಮಾತ್ರವಲ್ಲದೆ ಉಳಿದ ಸಾಮಗ್ರಿಗಳನ್ನು ತಯಾರಿಸುವುದಕ್ಕೆ ಹಿಂದೂಸ್ಥಾ ನದ ಉಳ್ಳನ್ನು ಬಳಸಿಕೊಳ್ಳಬೇಕೆಂದು ಅಲ್ಲಿ ನಿರ್ಣಯವಾಗಿರುತ್ತದೆ.

— ಜಾನಶೂರದ ಒಂದು ಗಿರಣಿಯಲ್ಲಿ ಆಕಸ್ಮಾತ್ ಒಂದು ಮುಷ್ಕ ರವು ನಡೆಯಿತು. ಇಬ್ಬರು ಕೆಲಸಗಾರರ ನಡತೆಯು ದೋಷದ ಕಾರಣ ದಿಂದ ಅವರು ಕೆಲಸದಿಂದ ಹೊರ ಹಾಕಲ್ಪಟ್ಟರು. ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳದ ವಿನಹ ತಾವು ಕೆಲಸವನ್ನು ಮಾಡಲಾರೆವೆಂದು ಉಳಿದವರು ಮುಷ್ಕರವನ್ನಾರಂಭಿಸಿದರು. ಅದಕ್ಕಾಗಿ ಅಧಿಕಾರಿಗಳು ಗಿರಣಿಯ ಎರಡು ಬಾಗಿಲುಗಳನ್ನು ಮುಚ್ಚಿಬಿಟ್ಟರು.

— ಬೆಂಗಳೂರಿನಲ್ಲಿ ಗಣಪತಿಯ ಗಲಾಟೆಯ ನಡೆದಂದಿನಿಂದ ಮೈಸೂರಿನ “ಮೈಸೂರ್ ಸ್ಟಾರ್” ಪತ್ರಿಕೆಯು ದೈನಿಕ ಸಂಚಿಕೆಗಳನ್ನು ಹೊರಡಿಸುತ್ತಲಿದ್ದಿತು. ಇದೇ ೫ನೇ ತಾರೀಕಿನಿಂದ ದೈನಿಕ ಸಂಚಿಕೆ ಗಳನ್ನು ಅದು ಹೊರಡಿಸುವುದಿಲ್ಲವಂತೆ.

— ಹೈದರಾಬಾದ ರಾಜ್ಯದ ನಂದೂಡ ಎಂಬಲ್ಲಿ ಗಣಪತಿಯ ಮೆರವಣಿಗೆಯು ಹೋಗುತ್ತಿರುವಾಗ ಆಕಸ್ಮಾತ್ ಹಿಂದೂ ಮುಸಲ್ಮಾ ನರು ಜಗಳಾಡಿದರು. ಸರಕಾರದವರು ಎರಡು ಪಕ್ಷದವರ ಮೇಲೆಯೂ ಮೊಕದ್ದಮೆಯನ್ನು ಮಾಡಿದರು. ಆದರೆ ಹಿಂದೂ ಮುಸಲ್ಮಾನರು ತಮ್ಮೊಳಗೆ ರಾಜಿಮಾಡಿಕೊಂಡು, ತಮ್ಮ ಮೇಲಿನ ಮೊಕದ್ದಮೆಯನ್ನು ಹಿಂತೆಗೆಯ ಬೇಕೆಂದು ಸರಕಾರದವರನ್ನು ಪ್ರಾರ್ಥಿಸಿಕೊಂಡರು. ಸರಕಾರದವರು ಒಮ್ಮೆ ವಿಧಿಸಿದ ಶಿಕ್ಷೆಯನ್ನು ಹಿಂತೆಗೆಯಲಾಗುವುದಿಲ್ಲವೆಂದು, ೧೧ ಮಂದಿ ಮುಸಲ್ಮಾನರಿಗೂ, ೧೧ ಮಂದಿ ಹಿಂದೂಗಳಿಗೂ ಕೈದು, ದಂಡನೆ ಮೊದ ಲಾದವುಗಳನ್ನು ವಿಧಿಸಿದರು.

ದಕ್ಷಿಣ ಕನ್ನಡ.

ಮಂಗಳೂರು — ನೆಹರೂ ಕಮಿಟಿಯ ವರದಿಯ ಪ್ರಾಮುಖ್ಯ ತತ್ವಗಳನ್ನು ಜನರೊಳಗೆ ಪ್ರಚಾರ ಮಾಡುವರೆ ತಾರೀಕು ೧೧-೩-’೨೯ನೇ ಆದಿತ್ಯವಾರ ಸಾಯಂಕಾಲ ೪ಗಂಟೆ ೩೦ಕ್ಕೆ ಟೈನು ಮೈದಾನ ದಲ್ಲಿ ಪುರಜನರ ಮಹಾ ಸಭೆಯು ಕೂಡುವುದು. ಮೆರವಣಿಗೆಯು ಅದೇ ದಿನ ಸಾಯಂಕಾಲ ೪-೩೦ಕ್ಕೆ ಕೊಡಿಯಾಲ್ ಬೈಲಿನಲ್ಲಿರುವ ಕೊಂಗ್ರೆಸ್ ಆಫೀಸಿನಿಂದ ಹೊರಟು ಪಟ್ಟಣದ ಕೆಲವು ಮುಖ್ಯ ರಸ್ತೆಗಳಿಂದ ಹೋಗಿ ೬ ಘಂಟೆಯೊಳಗೆ ಮೈದಾನಿಗೆ ಹೋಗಿ ತಲ್ಪುವದು.

ಶ್ರೀಯುತ ಅತ್ತಾವರ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯವು ನಡೆಯುವದು. ಶ್ರೀಮತಿ ಕಮಲಾದೇವಿ ಚಟ್ಟೋ ಪಾಧ್ಯಾಯರೂ, ಶ್ರೀಯುತರುಗಳಾದ ಆ. ಶ್ರೀನಿವಾಸ ಪೈ, ಗಂಗೊಳ್ಳಿ ಕೃಷ್ಣರಾವ್ ವ ಇತರರು ಭಾಷಣ ಮಾಡುವರು. ಎಲ್ಲರಿಗೂ ಸ್ವಾಗತವಿದೆ.

ಯುಗಾದಿ ವಯಾನಂದ ಸರಸ್ವತಿಗಳ ಬೋಧೋತ್ಸವವು ನಾಡದು [illegible] ನೆಯ ತಾರೀಕಿನ ದಿನ ಶನಿವಾರ ಆರ್ಯಸಮಾಜದ ಮಂದಿರದಲ್ಲಿ ೫-೧೫ಕ್ಕೆ ಜರಗಿಸಲ್ಪಡುವುದು. ಕಲ್ಲಿಕೋಟೆಯ ‘ಕೈಸಿಂಗ್‌ಸ್ಟಾರ್’ ಎಂಬ ಪತ್ರಿಕೆಯ ಸಂಪಾದಕರಾದ, ಆರ್ಯಸಮಾಜ ಪ್ರಚಾರಕರಾದ ಸಾಧು ಶಿವಪ್ರಸಾದರು ಅಧ್ಯಕ್ಷಸ್ಥಾನವನ್ನು ವಹಿಸುವರು. ಶ್ರೀ ಪಂಡಿತ ಅನಂತ ಉಪಾಧ್ಯಾಯರು, ಶ್ರೀ ಸಿ. ಆರ್. ಕೃಷ್ಣರಾವ್, ಪಿ. ಮುತ್ತಪ್ಪ, ಶ್ರೀ ರಾಮಕೃಷ್ಣ ಭಟ್ಟ, ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಮೊದಲಾದ ಮಹನೀಯರು ಋಷಿಗಳ ತತ್ವಸಂದೇಶಗಳ ವಿಷಯವಾಗಿ ಮಾತಾಡುವರು. ೧೦ನೆಯ ತಾರೀಕು ಆದಿತ್ಯವಾರ ೮-೩೦ ಗಂಟೆಗೆ ಸಮಾಜ ಸುಧಾರಕ ಪರಿಷತ್ತು ಜರಗುವದು. ಸಾಧು ಶಿವಪ್ರಸಾದರು ಅಧ್ಯಕ್ಷರಾಗುವರು. ಸಮಾಜ ಸುಧಾರಣೆಯ ವಿಷಯವಾಗಿ ಶ್ರೀಮತಿ ವಸಂತಿ ದೇವಿ, ಶ್ರೀ ಕಾರ್ನಾಡು ಸದಾಶಿವರಾವ್, ಶ್ರೀ ಜ್ಞಾನೇಂದ್ರಪ್ರಭು, ಪಂಡಿತ ಧರ್ಮದೇವ ವೇದವಾಚಸ್ಪತಿ ಮಾತಾಡುವರು. ಶ್ರೀ ಜ್ಞಾನೇಂದ್ರ ಪ್ರಭುಗಳು (ಮೊದಲು ಜೋನ್ ಡಿಸೋಜ) ‘ವೈದಿಕ ಧರ್ಮ ಮತ್ತು ಕ್ರೈಸ್ತಮತ’ ಇವರ ವಿಷಯವಾಗಿ ಸೋಮವಾರ ಸಾಯಂಕಾಲ ೫-೩೦ ಗಂಟೆಗೆ ವ್ಯಾಖ್ಯಾನವನ್ನು ಕೊಡುವರು. ಮಹನೀಯರೆಲ್ಲಾ ಈ ಮೂರು ದಿವಸ ಸಮಾರಂಭಗಳಿಗೂ ಕುಟುಂಬ ಇಷ್ಟಮಿತ್ರರೊಡನೆ ಬರ ಬೇಕಾಗಿ ಕಾರ್ಯದರ್ಶಿಯವರಾದ ಎನ್. ಮಾಧವರಾವ್, ವಕೀಲ್ ಇವರು ತಿಳಿಸುವರು.

ಬೋಳೂರಲ್ಲಿರುವ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆ ಯಲ್ಲಿ ಕಳೆದ ಫೆಬ್ರುವರಿ ತಿಂಗಳಲ್ಲಿ ಚಿಕಿತ್ಸಿಸಲ್ಪಟ್ಟ ೩೫೧ ಹೊಸ ವ್ಯಾಧಿ ಗ್ರಸ್ತರ ಪೈಕಿ ೨೦೦ ಹಿಂದೂ ೧೧೯ ಕ್ರಿಶ್ಚನ್ನರು ಸೇರಿ ಶೇಕಡ ಸ್ವಲ್ಪ ಮತ್ತು ೩೨ ಮುಸ್ಲಿಮ್ ಜನರಾಗಿದ್ದರು. ದಿನವಹಿ ಸರಾಸರಿ ಹಾಜರು ೬೩.೧ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ. ೧೯—೨—’೨೯ ರಲ್ಲಿ ಹೆಚ್ಚಾಗಿ ಹಾಜರಾದ ರೋಗಿಗಳ ಸಂಖ್ಯೆ ೮೬.

ಮಂಗಳೂರು ಮುನಿಸಿಪಾಲಿಟಿಯೊಳಗೆ ಇದೇ ಮಾರ್ಚ ತಿಂಗಳಲ್ಲಿ ಸ್ನಾನದ ದಿನ, ಬೇಂಕ್ ದಿನ, ಆದಾಯ ಸೂಚಕ ದಿನ, ಇವು ತಿಂಗ ಳಿನ ಪ್ರತಿದಿನ ಇಡೀ ರಾತ್ರಿ ಉರಿಸಲ್ಪಡುವವು. ಗೇಸ್ ದೀಪಗಳು, ರಾತ್ರಿ ೧೨ ಘಂಟೆಯ ತನಕ ಉರಿಸಲ್ಪಡುವವು. ಸಾಮಾನ್ಯ ದೀಪಗಳು, ತಾರೀಕು ೯, ೧೮, ೧೧, ೧೨ ಮತ್ತು ೧೩ ಈ ದಿನಗಳಲ್ಲಿ ಇಡೀ ರಾತ್ರಿಯೂ, ಉಳಿದ ದಿನಗಳಲ್ಲಿ ಸಮಯಾನುಸಾರವೂ ಉರಿಸಲಾಗುವವು.

ತಾರೀಕು ೨—೩—’೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗ ಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೭ ಮರಣಗಳೂ, ೩೬ ಜನನಗಳೂ ಆದವು. ಮರಣಗಳ ಪೈಕಿ ಜ್ವರದಿಂದ ೨, ಕ್ಷಯರೋಗದ ರೋಗ ದಿಂದ ೨, ಇತರ ಎಲ್ಲಾ ಕಾರಣಗಳಿಂದ ೧೩, ಶಿಶು ಮರಣಗಳು ೬.

ಶ್ರೀ ವಗೆರ ಶ್ರೀನಿವಾಸ ನಾಯರು ಬೆಂಚ್ ಕೋರ್ಟಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ.

ಮಂಗಳೂರಿನಲ್ಲಿ ಕನ್ನಡಪ್ಲೇಗು ಬಂದ ಕೈಗಾರಿಕ ಶಾಲೆಯ ತೆರೆಯಲ್ಪಡುವುದಂತೆ.

ಉಡುಪಿ — ಇದೇ ತಾ. ೩-೩-’೨೯ರಲ್ಲಿ ಶ್ರೀ ಮಧ್ವಾಚಾರ್ಯ ಕೃತ ಮೂಲಾಚಾರ್ಯ ವಿದ್ಯಾರ್ಥಿ ಸಂಘದವರು ತಮ್ಮ ವಿದ್ಯಾಗುರು ಗಳಾದ ಲಕ್ಷ್ಮೀನಾರಾಯಣ ಕಲ್ಲೂರಾಯ ತೀರ್ಥರ ಸ್ವಾಗತ ಸಮಾರಂಭ ವನ್ನು ಚೊಕ್ಕವಾಗಿ ಜರಗಿಸಿದರು. ಅಭಿನಂದನೆಯ [illegible] ಡಿಸ್ಟ್ರಿಕ್ಟ್ ಇನ್‌ಸ್ಪೆಕ್ಟರ್, ಶ್ರೀ ಲಕ್ಷ್ಮಣ ಭಟ್ಟ. ಬಿ. ಎ. ಎಲ್. ಟಿ ಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ವಿದ್ಯಾರ್ಥಿ ಸಂಘದ ವರು ತಾವು ಮೊದಲೇ ತರಿಸಿದ್ದ ಪುಷ್ಪಕ ಭಾಂಡಾರವನ್ನು ವಿದ್ಯಾಗುರು ಸ್ಮಾರಕವಾಗಿ ಅವರ ಹೆಸರಿಟ್ಟು (ಶ್ರೀ ಲಕ್ಷ್ಮೀನಾರಾಯಣ ಭಂಡಾರ ಎಂದು) ಅದನ್ನು ಅಭಿವೃದ್ಧಿಗೊಳಿಸುವದಾಗಿ ನಿವೇದಿಸಿದ ಬಳಿಕ ಅಧ್ಯಕ್ಷರು “ಶ್ರೀ ಲಕ್ಷ್ಮೀನಾರಾಯಣ ಲೈಬ್ರರಿ” ಯನ್ನು ಉದ್ಘಾಟನೆಮಾಡಿದರು. ತದನಂತರ ಒಬ್ಬ ವಿದ್ಯಾರ್ಥಿಯು ವಿದ್ಯಾಗುರು ಮೂಲಾಚಾರ್ಯ [illegible] ಗಳಾದ ಶ್ರೀ ವೆಂಕಟರಾಯ [illegible] ವಿದ್ಯಾಗುರು ಚರಿತ್ರೆಯನ್ನು ಸಮರ್ಪಿಸಿದನು. ಸಭಿಕರಿಗೂ ಅದನ್ನು ಹಂಚಿದ ಬಳಿಕ ಕೆಲವು ವಿದ್ಯಾರ್ಥಿಗಳು ಅದನ್ನು ಬರೆದ [illegible] ಹಾಡಿ ತೋರಿಸಿದರು. ಬಾದಮನ ಶ್ರೀಗಳವರ ಎಸ್ ವಿ ಫಣಿಯಾರಿ, ಮುಖ್ಯಪಾಧ್ಯಾಯರು [illegible] ಕೆ. ರಾಮಚಂದ್ರ ರಾಯ, ಇವರೇ ಮೊದಲಾದವರು ವಿದ್ಯಾಗುರು ಗುಣ ಕಥನ ಮಾಡಿದರು. ಅಧ್ಯಕ್ಷರು ಸಂಘದ ಈ ಕಾರ್ಯಭಾಗವನ್ನು ಶ್ಲಾಘಿಸಿ ಭಾಷಣಗೈದರು. ಈ ಸಮಾರಂಭವು ಜಯಶೀಲವಾಗಿ ನೆರವೇರಿ ದಂತೆ ನೆರವಾದವರೆಲ್ಲರಿಗೂ ಧನ್ಯವಾದಗಳೊಡನೆ ಮಕ್ಕಳಿಗೆ ತಿಂಡಿ ಹಂಚಿ ಸಭಾವಿಸರ್ಜನೆಯಾಯಿತು.

ಫರಂಗಿಪೇಟೆ — ಇದೇ ತಾರೀಕು ೧ನೇ ದಿನ ಮಂಗಳೂರು ಗವರ್ನಮೆಂಟು ಕೊಲೇಜಿನ ಪ್ರಿನ್ಸಿಪಾಲರೊಂದಿಗೂ ಗವರ್ನಮೆಂಟ್ ಉಪಾಧ್ಯಾಯ ಮಂಡಳಿಯ ವಿಚಾರಕ್ಕಾಗಿ ತಾ. ೧ನೇ ಸಾಯಂಕಾಲ ಇಲ್ಲಿಯ ಟ್ರೈನಿಂಗ್ ಬಂಗ್ಲೆಯಲ್ಲಿ ಬಂದಿಳಿದು ತಾ. ೩ನೇ ದಿನ ಸಾಯಂಕಾಲ ಹಿಂದಕ್ಕೆ ತೆರಳಿ ದರು. ಅಧಿಕಾರವನ್ನು ಲೆಕ್ಕಿಸದೆ ಉಪಾಧ್ಯಾಯರಲ್ಲಿ ಪರಸ್ಪರ ಪ್ರೀತಿ ಯಿಂದೊಡಗೂಡಿದ ಒಳ್ಳಿಟ್ಟು ಸಭ್ಯಲು ಇದೊಂದು ಒಳ್ಳೆಯ ಉದಾಹರಣೆ.

ಮಳೆಗಾಲದಲ್ಲಿ ಗ್ರಾಮಸ್ಥರಿಗೆ ಅತ್ಯಂತ ತೊಂದರೆಯಾಗುವ ಹೊಳೆ ದೋಣಿಗೆ ಈ ವರ್ಷ ಸರಕಾರದ ಉದಾರ ಸಹಾಯದಿಂದ ಸಂಕವು ಕಟ್ಟಲ್ಪಡುತ್ತದೆ. ಆದಾಯದಾಗದಂತೆ ಎರಡು ಬದಿಯಲ್ಲಿಯೂ ಯೋಗ್ಯ ಅವರಣಗಳನ್ನು ಕಾಲುವೆ ಅಗತ್ಯವಾಗಿ ತೋರುತ್ತದೆ.

ವಿವಿಧ ಸಮಾಚಾರಗಳು.

ಮಹಾತ್ಮಾಜಿಯವರನ್ನು ಕೈದುಮಾಡಿದರು!

ಕಲಕತ್ತೆಯ ಶ್ರದ್ಧಾನಂದ ಪಾರ್ಕಿನಲ್ಲಿ ವಿದೇಶಿ ವಸ್ತ್ರಗಳನ್ನು ಸುಟ್ಟು ಹಾಕುವಾಗ ಪೋಲೀಸರು ಬಂದು ತಡೆಗಟ್ಟಲು ಮಹಾತ್ಮಾಜಿಯ ವರು ಅವರಿಗೆ ವಿಧೇಯವಾಗಿ ವರ್ತಿಸದ ಕಾರಣ ಪೋಲೀಸರು ಮಹಾತ್ಮಾಜಿ ಯವರನ್ನು ಕೈದುಮಾಡಿದರು. ಆದರೆ ಕೆಲವು ಸಮಯದ ತರುವಾಯ ಜಾಮೀನಿನ ಮೇಲೆ ಬಿಡುಗಡೆಹೊಂದಿದರು. ಅವರು ಮಾರ್ಚ ೨೬ನೇ ತಾರೀಕಿನ ದಿನ ಅಧಿಕಾರಿಗಳ ಮುಂದೆ ಕಲಕತ್ತೆಯಲ್ಲಿ ಹಾಜರಾಗ

ಕರ್ನಾಟಕ ಎಗ್ಯೂ ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್ಫ್ಲುಯೆಂಝಾ, ಬಹು ದಿನದ ಜ್ವರ, ಪಾಲಿಜ್ವರ ಇವುಗಳ ಮೇಲೆ ಅತಿ ಉತ್ತಮವಾದ ಔಷಧವು. ಇದರಿಂದ ಚಳಿ, ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦

ಎಲ್ಲ ಕಡೆಗೂ ಔಷಧವನ್ನು ಮಾರುವಿಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟು: ಗೂಲನ್ ಮಾರ್ಟ್, ಮಂಗಳೂರು. | ಕರ್ನಾಟಕ ಬ್ರದರ್ಸ್, ಗಿರಗಾಂವ, ಮುಂಬಯಿ.

Famous

Mysore Perfumes.

Best incense sticks (Agar Bathis)

Maharaja Bathi	per seer	(24 Tolas)	Rs	20
Darbar	,,	,,	,,	15
Ananda	,,	,,	,,	12
Manmohan	,,	,,	,,	10
Musk Heena	,,	,,	,,	8
Dilchaman	,,	,,	,,	8
Kasthur Javaji		,,	,,	10
Ambor	,,	,,	,,	8
Rose	,,	,,	,,	6
Jasmin	,,	,,	,,	5
Punugu (Civet)		,,	,,	4
Heena	,,	,,	,,	3
A Tin Case containing 300 Assorted Bathis of 12 kinds			,,	6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೆಡಿಸುವದು—ಧಾನಿಕಾ ವಾತ ದಿಂದ ನಿಮಗೆ ಬರುವ ಕಷ್ಟವನ್ನು ದೂರವಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯು ವದು. ಅನೇಕರಿಗೆ ನಮ್ಮ 'ತಾ ಯಿ ತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ, ಧೈರ್ಯಶಕ್ತಿಯು, ಒಂದು ಸಾರಿ ಪರಿಕ್ಷಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ಕೆಂಗಿನಮನೆ,
ಸಕ್ಕಟ್ಟಲ್ ಪೋಸ್ಟು ಕಾರ್‍ವಾರ್ ಡಿಸ್ಟ್ರಿಕ್ಟು

...ಔಷಧಗಳು.

[illegible]

Liberal Discount to Trade

ಕಾರಖಾನೆ:-Cawashapur, Bombay.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲೀವಾಲಾ ಸನ್ಸ್ ಎಂಡ್ ಕೋ., ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಿಯರಿಕ್ಕೆ ಸವಾನವಾಯು' ಎಂದೂ, ಇನ್ನು ಕೆಲವರು 'ರಕ್ಷಣಕವಾದ ಅಧಿಂಖ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಬಿಳಿ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ದೇಹದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಜ್ವರ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

Telegrams:—"KESARI" ಆಯುರ್ವೇದ ಔಷಧಶಾಲಾ, P. B: 752, ಎಗ್ಮೋರು, ಮದರಾಸು.

15-4-'27 ಬ್ರಾಂಚ್ – 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಗೂಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಧಿಕ ಉತ್ತಮ ತಯಾರಿಯ, ಪೋಕೆಟುಗಳೂ, ಕಿಲ್ಲೀಕಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಪ್‍ರೈಟರು, ಗ್ರಾಮೋಫೋನು ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಅವನ್ನು ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ಕಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆಲ್ಲಾ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಆಯುರ್ವೇದ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಪಂಡಿತ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ನಡೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ [illegible] ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಭಸ್ಮಗಳು, ಚೂರ್ಣ, ವಟಿಕ್ಕ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಥಾಯೋಗ್ಯ ಸಿಕ್ಕುತ್ತವೆ. [illegible]

[illegible]

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್, ಕಾಂಞಂಗಾಡ (ದ. ಕ.)

ತಯಾರಾಗಿವೆ — ತಯಾರಾಗಿವೆ!.

ಕಾಫಿ ಪ್ಲೆಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಪಟ್ಟಿ, ಇತರ ವಿವರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯ ವಾಗಲಿ | ಉಚಿತವಾಗಲಿ

[illegible]

ವೈದ್ಯವಿದ್ಯ

ಎಂಬ ಪುಸ್ತಕವನ್ನು [illegible]

ರಾಜವೈದ್ಯ ನಾರಾಯಣಾಚಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ [illegible]

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]

ವಿ. ಗುಲಾಬ್ ವರಾಜ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(192[illegible] [illegible] XXI [illegible])

ಬಡಬಗ್ಗರಿಗೆ ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ವೈದ್ಯರಿಗೂ, [illegible] ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible]

ಏಜಂಟರು ಬೇಕಾಗಿರುವರು..

ವಿಶೇಷ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.



ಫುಸ್ಸಿಫೂಟ್ ಜೊನ್ಸನ್.

ಮದ್ಯಪಾನ ನಿಷೇಧದ ಚಳವಳಿಗಳಲ್ಲಿ ನಿರತರಾದವರಿಗೆ ಫುಸ್ಸಿಫೂಟ್ ಜೊನ್ಸನ್ ಎಂಬವರು ಅಪರಿಚಿತರಾಗಿರಲಾರರು. ಇತಿಹಾಸಗಳಲ್ಲಿಯೇ ಮಗ್ನರಾದ ಪಾಶ್ಚಾತ್ಯರು ಪರಮಾರ್ಥವನ್ನು ತಿಳಿಯಲಾರರು ಎಂದು ಹಿಂದೀಯರದೊಂದು ಸುಳ್ಳು ಹೆಗ್ಗಳಿಕೆ ಇದೆ. ಆದರೆ ಕಾರ್ಯಕಾರಿಯೂ, ಪರಿಣಾಮಕಾರಿಯೂ ಆದ ಪರಮಾರ್ಥವನ್ನು ಪೌರ್ವಾತ್ಯರಿಗಿಂತಲೂ ಪಾಶ್ಚಾತ್ಯರು ಹೆಚ್ಚು ಚೆನ್ನಾಗಿ ಸಾಧಿಸಬಲ್ಲರೆಂಬುದು ಫುಸ್ಸಿಫೂಟ್ ಜೊನ್ಸನರಿಂದ ತಿಳಿದುಕೊಳ್ಳಬೇಕು. ಕೆಲವು ವರ್ಷಗಳ ಮೊದಲು ಅಮೇರಿಕದಂತಹ ಬರೇ ವಹಿವಾಟೀ ರಾಜ್ಯವು ಡೊಲ್ಲರ ದೃಷ್ಟಿನ ಮದೋನ್ಮತ್ತತೆಯಲ್ಲಿ ಮದ್ಯಪಾನವನ್ನು ನಿರಾಕರಿಸಬಲ್ಲರೆಂಬುದನ್ನು ಯಾರೂ ವಿಶ್ವಾಸಮಾಡುತ್ತಿರಲಿಲ್ಲ. ಆದರೂ ಅಂತಹ ಆಶ್ಚರ್ಯ ಘಟನೆಯು ಯುನ್ಯಾಟೆಡ್ ಸ್ಟೇಟ್ಸ್ ಒಫ್ ಅಮೇರಿಕದಲ್ಲಿ ಸಂಭವಿಸಿ ಬಿಟ್ಟಿತು. ಅದಕ್ಕೆ ಈ ಫುಸ್ಸಿಫೂಟ್ ಜೊನ್ಸನ್‌ರೆಂಬವರೇ ಮುಖ್ಯ ಕಾರಣರಾಗಿರುವರು. ಯುನ್ಯಾಟೆಡ್ ಸ್ಟೇಟ್ಸನಲ್ಲಿ ಮದ್ಯಪಾನ ನಿಷೇಧದ ಸರಕಾರೀ ಕಾನೂನು ಜಾರಿಗೆ ಬರುವ ಮೊದಲು ಅದರ ಚಳವಳವನ್ನು ಹೂಡಿದವರು ಇವರೇ. ಇವರಿಗೆ ಮೊದಲು ಮೊದಲು ಬಲವಾದ ಪ್ರತಿರೋಧಿಗಳಿದ್ದರು. ಆದರೆ ಇವರ ಅವಿಶ್ರಾಂತ ಪರಿಶ್ರಮವು ಇವರ ಕಡೆಗೆ ಜನತೆಯನ್ನು ಒಲಿಸಿತು. ಮತ್ತು ಕಟ್ಟ ಕಡೆಗೆ ಅಮೇರಿಕವು ಮದ್ಯಪಾನ ನಿಷೇಧವನ್ನು ರಾಷ್ಟ್ರದ ಕಾನೂನಾಗಿಯೇ ಮಾಡಿಬಿಟ್ಟಿತು. ಅಮೇರಿಕದ ಮದ್ಯಪಾನ ನಿಷೇಧವು ಬರೇ ಸುಳ್ಳೆಂದೂ, ಗುಟ್ಟಿನಲ್ಲಿ ಬೇಕಷ್ಟು ಕುಡಿಯುವಿಕೆ ನಡಿಯುತ್ತಿದೆಯೆಂದೂ, ಆದುದರಿಂದ ಕಾನೂನಿನಿಂದ ಏನೂ ಲಾಭವಾಗಿಲ್ಲವೆಂದೂ ಕೆಲವು ವಿರೋಧಾಭಿಪ್ರಾಯದ ಜನರು ಅನ್ನುವರು; ಮತ್ತೂ ಕೆಲವರು ಈ ನಿಷೇಧದಿಂದ ಅಪರಾಧಿಗಳು ಹೆಚ್ಚಿರುವರೆಂದು ಹೇಳಿ ನಿಷೇಧವು ವ್ಯರ್ಥವೆಂದು ತೋರಿಸಲೆತ್ನಿಸುವರು; ಇನ್ನೂ ಕೆಲವರು ಮದ್ಯಪಾನ ನಿಷೇಧದಿಂದ ಸರಕಾರೀ ನೌಕರರೊಳಗೆ ಮಿಥ್ಯಾಚಾರವು ಹೆಚ್ಚಿದೆಯೆಂದು ಅದರ ಪ್ರಾಮುಖ್ಯತೆಯನ್ನು ಕಡಿಮೆಮಾಡುವರು. ಆದರೆ ಇವೆಲ್ಲ ಕೇವಲ ಕುಡುಕರ ಅಥವಾ ಸ್ವಾರ್ಥಿಗಳ ಅಂಬೋಣವಲ್ಲದೆ ವಸ್ತುಸ್ಥಿತಿಯು ಹಾಗಿರುವುದಿಲ್ಲ. ಮದ್ಯಪಾನದ ಅಯಾಸ ಪರಿಹಾರ ಅಥವಾ ಶಕ್ತಿದಾಯಕ ಗುಣವನ್ನು ಲೋಕದೊಳಗೆ ಅಗ್ರಸ್ಥಾನ ವಹಿಸಿದ ಕೈಗಾರಿಕೆ ರಾಜ್ಯವಾದ ಅಮೇರಿಕವೇ ಇಷ್ಟು ವರ್ಷಗಳಿಂದ ಮದ್ಯಪಾನ ನಿಷೇಧವನ್ನು ಆಚರಿಸಿ, ಕೈಗಾರಿಕೆಗೆ ಬಾಧೆಯನ್ನನುಭವಿಸದೆ ಸುಳ್ಳೆಂದು ತೋರಿಸಿಯದೆ. ಪ್ರತಿಯಾಗಿ ನಿಷೇಧದ ಗುಣಗಳು ವರ್ಷ ವರ್ಷವೂ ಹೆಚ್ಚಾಗಿ ಕಂಡುಬಂದಿವೆ. ವಿದ್ಯಾಭ್ಯಾಸವು ಹೆಚ್ಚಿರುತ್ತದೆ; ಕ್ರಿಮಿನಲ್ ಅಪರಾಧಗಳು ಕಡಿಮೆಯಾಗಿವೆ; ಅರ್ಜನೆಯ ಶಕ್ತಿಯು ಬೆಳೆದಿದೆ; ವ್ಯಯಕ್ಕೆ ಸೌಲಭ್ಯವು ಉಂಟಾಗಿರುತ್ತದೆ. ಆದುದರಿಂದ ಈ ದುರ್ವ್ಯಸನವನ್ನು ತಳ್ಳಿ ಬಿಡಲಿಕ್ಕೆ ಅಮೇರಿಕವು ಅತ್ಯಂತ ಶ್ರೇಷ್ಠವಾದ ಆದರ್ಶವಾಗಿದೆ. ಆ ಆದರ್ಶದ ಸಂದೇಶವನ್ನು ತೆಗೆದುಕೊಂಡು ಫುಸ್ಸಿಫೂಟ ಜೊನ್ಸನರು ಹಿಂದೂಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಇವರ ಸಂದೇಶವನ್ನು ತೆಗೆದುಕೊಂಡು ಹಿಂದೀಯರು ಅನುಸರಿಸಲು ಯತ್ನಿಸುವುದು ಅಗತ್ಯವಿರುತ್ತದೆ.

ಸ್ವಾಭಿಮಾನ ಚಳವಳ.

ಸ್ವಾಭಿಮಾನವು ಪ್ರತಿ ಒಬ್ಬನಿಗೂ ಇರಬೇಕಾದದ್ದೇ; ಆದರೆ ಅದಕ್ಕೊಂದು ಪ್ರತ್ಯೇಕ ಚಳವಳವು ಅಗತ್ಯವಾಗಿದೆಯಾಗಿ ನಮಗೆ ಈ ವರೆಗೆ ಅನ್ನಿಸಿರಲಿಲ್ಲ. [illegible] ಬ್ರಾಹ್ಮಣ ವಿದ್ವೇಷದಸ್ರಾವವಿದೆಯಲ್ಲಿ ಕಣ್ಣು ಕುರುಡಾದ ದಕ್ಷಿಣ ಹಿಂದೂಸ್ಥಾನದಲ್ಲಿ ಯಾವುದು ಸಾಧ್ಯವುಂಟು ಯಾವುದು ಸಾಧ್ಯವಿಲ್ಲವೆನ್ನಲಾಗುವುದಿಲ್ಲ. ಆದರೆ ಇಂತಹ ಘಟನೆಗಳು ಈ ದಕ್ಷಿಣಹಿಂದೂಸ್ಥಾನದಲ್ಲಿ ಒಂದೊಂದಾಗಿ ಬರಲಾರವು. ಸ್ವಾಭಿಮಾನ ಚಳವಳ ಒಂದು; ಅದರ ಜೋಡಿಯಾಗಿ ಅದಕ್ಕೆ ವಿರೋಧ ಚಳವಳವೊಂದು. ದಕ್ಷಿಣ ಹಿಂದೂಸ್ಥಾನದ ಅತ್ಯಂತ ಸಂಕುಚಿತವಾದ ದ್ರಾವಿಡ ಮಾನಸಿಕತೆಯುಳ್ಳವರಾದರೆ ಈ ಚಳವಳಗಳಿಗೆ ಯಾವ ಅರ್ಥವೂ ಸಿಗುವಂತಿಲ್ಲ. ಪುರೋಹಿತ ಪ್ರಧಾನವಾದ ಹಿಂದೂ ಮತಾಚರಣೆಗಳ ಚೇಷ್ಟೆಗಳಿಗೆ [illegible] ವವರಲ್ಲ; ಹಿಂದೂ ಮತಗಳಲ್ಲಿ ಬ್ರಾಹ್ಮಣ ವಿಧಿತ ಚೇಷ್ಟೆಗಳು ಹಿಂದೂ ಮತದ ಉಚ್ಚ ತತ್ವಗಳಿಗೂ ಸಾಮಾನ್ಯರ ಸಾಮಾನ್ಯ

[illegible]

ವಿಶ್ವವಿದ್ಯಾಲಯದಲ್ಲಿ ವ್ಯಕ್ತಿಯು ಸಮಾಜದೊಡನೆ ಕೆಡುವನು. ಈಗ ಬೇಕಾದುದು ಹಿಂದೂಮತದಿಂದ ಉತ್ಕ್ರಾಂತಿಯಲ್ಲ, ಹಿಂದೂಮತದ ಸುಧಾರಣೆ ಮತ್ತು ಪುನರ್ಘಟನ. ಈ ಕೆಲಸವನ್ನು ಕೆಲವು ಹಿಂದೂ ಧುರೀಣರು ಸಾಧಿಸುತ್ತಿರುವರು. ಹಾಗೆಯೇ ಬ್ರಾಹ್ಮಣೇತರ ಧುರೀಣರು ಇಂತಹ ಚಳವಳದ ಮೂಲಕ ಸುಧಾರಣೆಯನ್ನು ಮಾಡಿಕೊಳ್ಳಬಹುದು; ಬ್ರಾಹ್ಮಣೇತರರ ಚಳವಳವು ಕೂಡ ಈ ನಾಡುಗಳಲ್ಲಿ ಪ್ರಚಾರವಿದ್ದು ಸ್ವಾಭಿಮಾನವನ್ನು ಹೆಚ್ಚಿಸುತ್ತಾ ಇವೆ. ಆದರೆ ಇದೊಂದು ಚಳವಳವು ಮೇಲೇಳಿತೆಂದು ಅದರ ವಿರೋಧದ ಚಳವಳವನ್ನು ಹೂಡುವುದರಲ್ಲಿಯೂ ಪ್ರಯೋಜನವು ಕಾಣುವುದಿಲ್ಲ. ದಕ್ಷಿಣ ಹಿಂದೂಸ್ಥಾನದ ಹಲವು ಚಳವಳಗಳನ್ನು ನೋಡಿದರೆ ಬರೇ ಒಂದು ಮಿಥ್ಯಾಚಾರದಿಂದ ಇನ್ನೊಂದು ಮಿಥ್ಯಾಚಾರಕ್ಕೆ ಕೈಯಿಕ್ಕುವಂತೆ ತೋರುತ್ತಿದೆಯೇ ವಿನಹ ಸರಿಯಾದ ಮೇಲ್ಮೈಯ ಹಾದಿಯನ್ನು ಯಾರೊಬ್ಬರೂ ಅನುಸರಿಸಲು ಉತ್ಸಾಹಿತರಾಗಿರುವಂತೆ ತೋರುವುದಿಲ್ಲ. ಕೆಲವರಲ್ಲಿ ಸ್ವಾಭಿಮಾನವು ಕಡಿಮೆಯಾಗಿದ್ದರೆ, ಅದನ್ನು ಚಳವಳಗಳ ಮೂಲಕವೇ ಹೊಂದಬೇಕಾಗಿದ್ದರೆ ಅವರನ್ನು ಅಂತಹ ಪರಿಶ್ರಮಕ್ಕೇನೆ ಬಿಡುವುದೊಳ್ಳೆಯದು.

ಕೃಷಿ ಸುಧಾರಣೆ.

ಲಿನ್‌ಲಿತ್‌ಗೌ ಕಮಿಶನ್ನಿನ ವರದಿಯು ಪ್ರಕಟಿಸಲ್ಪಟ್ಟ ಮೇಲೆ ಅದರ ಕೆಲವು ಸ್ಥೂಲ ಸೂಚನೆಗಳು ಸರಕಾರದಿಂದ ಜಾರಿಗೆ ಬರುವಂತಿವೆ. ಆದರೆ ಲಿನ್‌ಲಿತ್‌ಗೌ ಕಮಿಶನ್ನಿನ ವರದಿಗೂ ರೈತರ ಸಂಪದಭಿವೃದ್ಧಿಗೂ ಸಮಯಾಂತರವು ಬಹಳವಿರುತ್ತದೆ. ರೈತರ ಅಭಿವೃದ್ಧಿಯು ದೇಶದಲ್ಲಿ ಅಲ್ಲಲ್ಲಿ ಇರುವ ರೈತರ ಮತ್ತು ಜಮೀನುದಾರರ ಸಂಬಂಧದ ಮೇಲೂ, ಸ್ಥಳ ವೈಶಿಷ್ಟ್ಯದ ಮೇಲೂ ಹೊಂದಿಕೊಂಡಿರುತ್ತದೆ. ವ್ಯಕ್ತಿಯ ಅರ್ಜನೆಯ ಮಾನವು ಪಾಶ್ಚಾತ್ಯ ದೇಶಗಳಲ್ಲಿ ಹಿಂದೂಸ್ಥಾನದ ವ್ಯಕ್ತಿಗಿಂತ ಎಂಟು ಹತ್ತು ಪಾಲಿದ್ದರೂ, ಅಲ್ಲಿಯ ಕೃಷಿ ಉತ್ಪನ್ನವು ಇಲ್ಲಿಯ ಅಗ್ಗ ಮಜೂರರ ಕೆಲಸದಿಂದ ಉಂಟಾಗುವ ಕೃಷಿ ಉತ್ಪನ್ನದೊಡನೆ ಸುಲಭವಾಗಿ ಸ್ಪರ್ಧಿಸುತ್ತಿದೆಯೆನ್ನುವಾಗ ಪಾಶ್ಚಾತ್ಯರ ಕೃಷಿ ವ್ಯವಸಾಯವು ಪ್ರಚಂಡವಾಗಿ ಮುಂದರಿದಿದೆ ಎನ್ನಬೇಕಾಗುತ್ತದೆ. ವಸ್ತುತಃ ಅಲ್ಲಿಯ ಜನರು ಶೋಧಗೃಹಗಳಲ್ಲಿ ದೊರೆತ ವೈಜ್ಞಾನಿಕ ಜ್ಞಾನವನ್ನು ಕಾರ್ಯಕ್ಷೇತ್ರದಲ್ಲಿ ಲಾಭಕರವಾಗಿ ಉಪಯೋಗಿಸಬಲ್ಲರಾದುದರಿಂದಲೇ ಕೃಷಿಯು ಅಷ್ಟು ಚೆನ್ನಾಗಿ ಅಭಿವೃದ್ಧಿಯನ್ನು ಹೊಂದಿರುತ್ತದೆ. ಹಿಂದೂಸ್ಥಾನದಲ್ಲಿಯೂ ಶೋಧಗೃಹಗಳಿಲ್ಲವೆಂದಿಲ್ಲ. ಆದರೆ ಅವುಗಳ ಉಪಯೋಗವು ಸರಿಯಾಗಿ ನಡಿಯುವುದಿಲ್ಲ. ಅಂತೂ ಕೃಷಿ ಶೋಧಗೃಹಗಳೂ, ರಾಸಾಯನಿಕ ಶೋಧಗೃಹಗಳೂ, ಯಂತ್ರಾಲಯಗಳೂ ಪರಸ್ಪರ ಸಹಕಾರದಿಂದ ಕೃಷಿಯನ್ನು ಯುರೋಪ ಅಮೇರಿಕಗಳಲ್ಲಿ ಬೆಳೆಸಿ ಬಹಳ ಲಾಭಕರವಾಗಿ ಮಾಡಿವೆ. ಅಮೇರಿಕವು ಅತೀ ವಿಶಾಲವಾದ ರಾಷ್ಟ್ರವಾಗಿದ್ದು ಅಲ್ಲಿ ಕೃಷಿಗಾಗಿ ವಿಸ್ತಾರವಾದ ಜಮೀನುಗಳಿವೆ. ಅಮೇರಿಕವು ಎಲ್ಲಾ ತರದ ಕೃಷಿ ವ್ಯವಸಾಯವನ್ನು ನಡೆಸಿ ಯುರೋಪ ಖಂಡಗಳ ಅವಶ್ಯಕತೆಗಳಿಗಾಗಿ ಪೌರ್ವಾತ್ಯರೊಡನೆ ಸ್ಪರ್ಧಿಸುತ್ತಿದೆ. ಅನ್ಯವಾಗ ಔದ್ಯೋಗಿಕ ಬೆಳವಣಿಗೆಯಿಂದ ವೈಯಕ್ತಿಕ ಅರ್ಜನೆಯನ್ನು ಹೆಚ್ಚಿಸಿರುವ ಆ ರಾಷ್ಟ್ರದ ವ್ಯಕ್ತಿಯ ಕೃಷಿ ಉತ್ಪನ್ನವು ಅಷ್ಟೇ ತರಗತಿದ್ದಾಗಿದ್ದರೆ [illegible]ಯಾಗಲಿ ಸ್ಪರ್ಧೆಯಾಗಲಿ ಸಾಧ್ಯವಾಗುತ್ತಿರಲಿಲ್ಲ. ಹಿಂದೂಸ್ಥಾನದಲ್ಲಿ ಕೃಷಿಮೂಲಕವಾದ ವ್ಯಕ್ತಿಯ ಮಜೂರಿ ಉತ್ಪನ್ನವು ದಿನಕ್ಕೆ ನಾಲ್ಕಾಣೆಯ ಮಾನದಷ್ಟಾಗಿದೆ. ಹಾಗಾದರೂ ಹಿಂದೂಸ್ಥಾನವು ಅವರೊಡನೆ ಸ್ಪರ್ಧಿಸಲಾರದು. ಆದುದರಿಂದ ಹಿಂದೂಸ್ಥಾನದ ಕೃಷಿ ಅಭ್ಯಾಸಗಳು ಮಾರ್ಪಾಡಾಗುವ ಅವಶ್ಯಕತೆಯುದೆ. ಯಂತ್ರಗಳ ಉಪಯೋಗವು ಹೆಚ್ಚಾಗಬೇಕು; ಗೊಬ್ಬರಗಳ ಪರೀಕ್ಷೆಯೂ ಮಣ್ಣಿನ ಪರೀಕ್ಷೆಯೂ ಇನ್ನೂ ಚೆನ್ನಾಗಿ ನಡೆಯಬೇಕು. ಪ್ರಯೋಗ ಕ್ಷೇತ್ರಗಳು ಪ್ರತಿ ಊರಲ್ಲಿಯೂ ಇರಬೇಕು. ಯಂತ್ರ ವಿಜ್ಞಾನ ಮತ್ತು ಕೃಷಿ ವಿಜ್ಞಾನ ಇವೆರಡರಲ್ಲಿಯೂ ನಿರಂತರ ಪ್ರಚಾರಕರೂ ಅವಶ್ಯವಿದೆ. ಮತ್ತು ಕೃಷಿಯು ಸ್ಥಳೀಕ ಪರಿಸ್ಥಿತಿಯನ್ನೂ ಲೋಕದ ಅವಶ್ಯಕತೆಗಳನ್ನೂ ಲಕ್ಷಿಸಿ ರೂಪಿಸಲ್ಪಡಬೇಕು. ಆಗ ಮಾತ್ರವೇ ಹಿಂದೂಸ್ಥಾನದ ಕೃಷಿ ಸಂಪತ್ತು ಬೆಳೆಯಬಲ್ಲುದು.

[illegible]

NOTES

[illegible] ಕಾರಣದಿಂದ [illegible] ಪಂಚಾಯತಿಯವರ [illegible] ಕೆಲಸ ಮಾಡಲು ಕಂಪೆನಿಯವರ ಮತ್ತು ನೌಕರರ ನಡುವೆ [illegible] ಒಪ್ಪಂದವಾಗಿರುವುದಿಲ್ಲ.

• • • •

ಕಳೆದ ವಾರ ರಂಗೂನಿನಲ್ಲಿ ಒಂದು ದೊಡ್ಡದಾದ [illegible] ಎಣ್ಣೆಯ ಟಾಂಕಿಗೆ ಬೆಂಕಿ ತಗಲಿಯುತ್ತದೆ. ೭೦೦ ಜನರು ನೊಂದಿನ ಪ್ರಯತ್ನಿಸಲು ಬೆಂಕಿಯು ಪ್ರಕಾಶ ತೋರು. ಪೆಟ್ರೋಲಿನ ಲಾಭ ಈ ಬೆಂಕಿಯಿಂದ ಜಮೆ.

• • • •

[illegible] ಒಫ್ ಕೊಮನ್ಸನಲ್ಲಿ ಮಿ॥ ಕಲಾಕ್‌ವಾಲರಿಗೆ ಗಾಂಧಿಜಿಯವರನ್ನು ಕೈದು ಮಾಡಿದ್ದು ಕ್ರಮವಾದ ಕೆಲಸ್ ಎಂದು ಉತ್ತರ ದೊರಕಿದೆ, ನಡೆದ ಕಾರ್ಯ ಹುಳುಂಸಂತೆಯೇ

• • •

ಪರದೇಶಿ ವಸ್ತ್ರದ ದಹನ ಪ್ರ್ಯೈವೇಟ್ ಸ್ಥಳಗಳಲ್ಲಿ ನಡೆಯಲು ಸಮ್ಮತಿ. ಅದಕ್ಕೆ ಯಾವ ಆಕ್ಟ್ ಬಾಧಿ ಇಲ್ಲ. ಪಬ್ಲಿಕ್ ಸ್ಥಳಗಳಲ್ಲಿ ಆಕ್ಟ ಇದ್ದೇ ಇದೆ.

• • •

ಕೂಚ್ ಬಿಹಾರಿನ ಮಹಾರಾಣಿಯವರ ಮೇಲೆ ೯೦ ಸಾವಿರಕ್ಕೆ ಒಬ್ಬ ಕಂಟ್ರಾಕ್ಟರರ ದಾವೆ. ಊಟಿಯಲ್ಲಿ ವಿಶ್ರಾಂತಿಯ ಬಗ್ಗೆ ಬಂಗ್ಲೆ ಕಟ್ಟಲು ಕಂಟ್ರಾಕ್ಟು. ಮಹಾರಾಣಿಯವರ ಹಣ ವಸೂಲಾಗಲು ಕಂಟ್ರಾಕ್ಟುದಾರರಿಗೆ ಮದ್ರಾಸು ಹೈಕೋರ್ಟಿಗೆ ಅಗತ್ಯ.

• • •

ಬೆಂಗಳೂರಿನಿಂದ ಸ್ವಾಮಿನರ ಪಂಗಡವು ಮೈಸೂರಿಗೆ ಹೋಗುವಾಗ ಅಲ್ಲಿಯ ಮೆಜಿಸ್ಟ್ರೇಟರು ವಿದು ಜನ ಮುಖಂಡರಿಗೆ ಪೋಲೀಸ್ ನಿಬಂಧನೆ ೩೬ನೇ ಪ್ರಕರಣೆಯ ಪ್ರಕಾರ ಬಾಷಣಗಳನ್ನು ಕೊಡಬಾರದಾಗಿ ಬಾಯಿಗೆ ಬೀಗ, ಮೆರವಣಿಗೆಗೆ ಹೋಗಬಾರದಾಗಿ ಆಜ್ಞೆ, ಬೊಂಬೆಗಳನ್ನು ಅಥವಾ ಪ್ರಕಟಣೆಗಳನ್ನು ಪ್ರಕಟಿಸಬಾರದಾಗಿ ಆರ್ಡರು. ಬೆಂಗಳೂರು ಘಲಾಟೆ ನಂಬ್ರಗಳು ಮುಗಿಯುತ್ತಾ ಬಂದಿರುವಾಗ್ಗೆ, ಸ್ವಾಮಿನರ ಆಗಮನದ ನಂಬ್ರಗಳು ಆದ ಹಾಗೆ, ಪೋಲೀಸರು ಮುಂದಾಗಿಯೇ ತಯಾರು.

• • • •

ಬೆಂಗಳೂರು ಘಲಾಟೆಯ ಸಮಯದಲ್ಲಿ ಪೋಲೀಸರಿಗೆ ಯಾವ ಆಕ್ಟು ಜಾರಿಗೆ ತರಲು ತಲೆಗೆ ಹೊಕ್ಕಲಿಲ್ಲ. ಈ ಸಲ ಮುಂದಾಗಿ ಹೊಕ್ಕಿದೆ.

• • • •

ಏಳು ಜನರ ಆಗಮನಕ್ಕೆ ವಿದು ಜನರ ದಿಗ್ಬಂಧನ ಸಾಕೆ?

• • • •

ಮೈಸೂರು ಸರಕಾರಕ್ಕೆ ಪತ್ರಿಕೆಗಳ ಹೆದರಿಕೆ ಜಾಸ್ತಿ. ಪತ್ರಿಕಾ ಸಂಪಾದಕರಿಗೆ ಸಾಹೇಬರ ಆಗಮನದಲ್ಲಿ ಎಡೆಯಿಲ್ಲ.

• • • •

ಇಷ್ಟರ ವರೆಗೆ ತಗಡೂರ ರಾಮಚಂದ್ರರಾಯರ ಪತ್ರಿಕೆ ಮತ್ತು ಪ್ರೆಸ್ ಮಾತ್ರ ಪೋಲೀಸರು ಕಸಕೊಳ್ಳುತ್ತಿದ್ದರು. ಈ ಸಲ ರಾಮಚಂದ್ರರಾಯರನ್ನೇ ಪೋಲೀಸರು ತೆಗೆದುಕೊಂಡು ಹೋದರು, ನಂಬ್ರ ಮುಂದಕ್ಕೆ.

• • • •

ಮಂಗಳೂರಿನಲ್ಲಿ ಕೆಲ ಮಾರ್ಗಗಳಲ್ಲಿ ಬಸ್ಸುಗಳು ಚಲಾವಣೆಯಾಗಬಾರದಾಗಿ ಮುನ್ಸಿಪಲ್ ಮತ್ತು ಕಲೆಕ್ಟರ ಒರ್ಡರು ಮುಂಚಿನಿಂದಲೆ ಇದೆ. ಇತ್ತಲಾಗೆ ಕೆಲ ಕಾಫಿ ಮತ್ತು ಇತರ ಸಾಮಾನು ತುಂಬಿಸುವ ಲೋರಿಗಳು ಮನಬಂದ ರಸ್ತೆಗಳಲ್ಲಿ ಹೋಗುತ್ತವೆ. ಇದಕ್ಕೆ ಏನಾದರೂ (Road Restriction) ಇಲ್ಲವೆ?

• • •

ಮುನ್ಸಿಪಲ್ ಅಧಿಕಾರಿಗಳಿಗೆ ಒಂದು ಸೂಚನೆ, ರಸ್ತೆಗಳಿಗೆ ನೀರು ಹಾಕುವ ಲೋರಿಗಳಿಗೆ ಸ್ಪೀಡು ಸ್ವಲ್ಪ ಕಡಿಮೆ ಮಾಡಬೇಕಾಗಿ. ಒಂದೊಂದು ಕಡೆಯಲ್ಲಿ ಇಂಥಿಷ್ಟೆ ಘಂಟೆಯ ಸಮಯದಲ್ಲಿ ನೀರು ಹಾಕುವದು ಮತ್ತು ಪ್ರತಿದಿನವು ಸರಿಯಾಗಿ ನೀರಿನ ವಿಲವಾರಿ ನಡೆಯುವಂತೆ ಮಾಡುವದು. ಈಗಿನ ಕ್ರಮ ಮನಬಂದಂತೆ ನಡಿಯುತ್ತದೆ. ಒಂದು ಕಡೆಗೆ ಹಾಕಿದರೆ ಇನ್ನೊಂದು ಕಡೆಗೆ ಹಾಕುವುದಿಲ್ಲ.

• • •

ಬೆಳಗಾಂವಿನಲ್ಲಿ ಬಿದ್ದದೆ ಮರಾಠರಿಗೂ ಕನ್ನಡಿಗರಿಗೂ ಗುದ್ದಾಟ. ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನವು ಬೆಳಗಾಂವಿನಲ್ಲಿ ಕೂಡಬೇಕೆಂದು ಮರಾಠಿಗರು, ಕೂಡಬಾರದಾಗಿ ಕನ್ನಡಿಗರು, ಅಂತೂ ಗೆಲ್ಲುವುದು ಯಾರೆಂದು ತಿಳಿಯುವುದು, ಸಮ್ಮೇಲನ ನಡೆದ ಮೇಲೆ.

ಶಾಲಿವಾಹನ ಶಕ ೧೮೫೦ನೆಯ ವಿಭವ ಸಂವತ್ಸರದ ಫಾಲ್ಗುಣ [illegible] ಪಂಚಾಂಗ

(ಗ್ರಾಹಕರ ಶುಂಠ (ಎರಡ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
16	[illegible]	[illegible]	[illegible]	ಕೃತ್ತಿಕಾ	[illegible]	[illegible]	6.39	6 40
17	[illegible]	[illegible]	[illegible]	ರೋಹಿಣೀ	[illegible]	[illegible]	6	6 40
18	ಸೋಮ	[illegible]	[illegible]	ಮೃಗಶಿರಾ	[illegible]	[illegible]	6.38	6 40
19	ಮಂಗಳ	[illegible]	[illegible]	ಆರ್ದ್ರಾ	[illegible]	[illegible]	6 33	6.40
20	ಬುಧ	[illegible]	[illegible]	ಪುನರ್ವಸು	[illegible]	[illegible]	6 37	6 40
21	ಗುರು	[illegible]	[illegible]	ಪುಷ್ಯ	[illegible]	[illegible]	6.37	6 41
22	ಶುಕ್ರ	[illegible]	[illegible]	ಆಶ್ಲೇಷಾ	[illegible]	[illegible]	6.36	6.41

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಶಾಖ) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
8	99— 7	72— 5	—	—
9	93— 6	74— 0	—	—
10	91— 3	75— 3	—	—
11	90— 0	77— 1	—	—
12	91— 0	78— 2	—	—
13	90— 3	76— 3	—	—
14	90— 1	78— 4	—	—
				124-77

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮುಷ್ಟಿ	...	6— 12	7— 6
ಗುಡ್ಡು	...	6— 4	6— 8
ರಾಶಿ	...	5— 6	6— 0
ಊರ ಅವಲ್ ಬೆಲ್ತಿಗೆ	..	7— 4	7— 12
ರಂಗೂನು ಬೆಲ್ತಿಗೆ ಗೋಣಿ ಗಳ್ಳೆ	.	12— 1	13—
ಎಲ್ಲೂರು ಬೆಲ್ತಿಗೆ ಮುಡಿ ಗಳ್ಳೆ	.	6— 4	6— 8
ಗೋದಿ ಗೋಣಿ ಗಳ್ಳೆ	...	18— 12	20 0
ಹುರುಳಿ ಗೋಣಿ ಗಳ್ಳೆ	..	7— 8	8— 4
ಕಡಲೆ ಗೋಣಿ ಗಳ್ಳೆ	..	14— 8	15— 8
ತೊಗರಿ ಗೋಣಿ ಗಳ್ಳೆ	..	14— 8	16— 0
ತೊಗರಿಬೇಳೆ ಗೋಣಿ ಗಳ್ಳೆ	...	18— 8	27 0
ಉದ್ದು ಗೋಣಿ ಗಳ್ಳೆ	..	15— 6	16 12
ಹೆಸರು ಗೋಣಿ ಗಳ್ಳೆ	...	14 2	14 8
ಊರು ಬೆಲ್ಲ ಖಂಡಿ ಗಳ್ಳೆ	...	6[illegible]— 0	65— 8
ಉಪ್ಪು ಗೋಣಿ ಗಳ್ಳೆ	...	4— 6	5— 0
ಚೂಡಿ ಖಂಡಿ ಗಳ್ಳೆ	...	93— 0	100—
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ	...	32— 0	—
ಎಳ್ಳಿಂಡಿ ಖಂಡಿ ಗಳ್ಳೆ	...	42— 8	
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ	...	6— 10	8— 4
ಎಳ್ಳೆಣ್ಣೆ ಮುಡಿ ಗಳ್ಳೆ	—	7— 12	8— 4
ಹರಳೆಣ್ಣೆ ಪೆಟ್ಟಿಗೆ ಗಳ್ಳೆ	..	7— 12	8— 4
ಮೋರಿಸ ಸಕ್ಕರೆ ಮುಡಿ ಗಳ್ಳೆ	...	3— 11	3— 12
ಹೊಸ ಮೆಣಸು	...	5— 4	6— 8
ಹಳ್ಳ ಊರ [illegible] ಮುಡಿ ಗಳ್ಳೆ		1— 8	2— 4
ಸಾಸಿವೆ ಮುಡಿ ಗಳ್ಳೆ	...	8— 0	8— 8
ಕೊತ್ತುಂಬರಿ ಮುಡಿ ಗಳ್ಳೆ	...	4— 4	5— 4
ನೆಲೆಟ್ ಕಾಫಿ ಖಂಡಿ ಗಳ್ಳೆ	...	395— 0	415— 0
ಹಳೆಗೋಡು ಅಡಿಕೆ ಖಂಡಿ ಗಳ್ಳೆ	..	140— 0	185— 0
ಕಾಳುಮೆಣಸು ಖಂಡಿ ಗಳ್ಳೆ	...	420— 0	424— 0
ಯೇಲಕ್ಕಿ ಮುಡಿ ಗಳ್ಳೆ	...	55— 0	75—
ಗೇರುಬೀಜ ಮುಡಿ ಗಳ್ಳೆ	...	3— 6	
ಕಬ್ಬಿಣ ಖಂಡಿ ಗಳ್ಳೆ	...	42— 0	46 8
ತಾಂಬ್ರ ತಗಡು ಗಳ್ಳೆ	...	19— 12	13 8
ತಾಂಬ್ರ ಪಾತ್ರೆಗಳು ಮುಡಿ ಗಳ್ಳೆ	..	24— 0	22— 4
ಚೀನಿಬೆಳ್ಳಿ ಸೇರು ಗಳ್ಳೆ	...	15— 6	—
ಹಿತ್ತಾಳೆ ತಗಡು ಮುಡಿ ಗಳ್ಳೆ	.	16— 0	16— 0
ಪವನು ಗೆಳ್ಳೆ	...	13—0—0	—
ಹುಣಸೆಹುಳಿ ಖಂಡಿ ಗಳ್ಳೆ	...	30— 0	36— 8

ಶಂಕಿಸಬೇಡಿ! ಆಶ್ಚರ್ಯಗೊಳ್ಳುವರು!!
ಕೇಳುವುದು ಅಪ್ಪ ಫಲಪ್ರಾಪ್ತಿ ಆಗ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರಿಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಥಾ ರೀತಿಯಲ್ಲಿ ತಯಾರಾಗುವವು. [illegible] ರೋಗಿಗಳು ಮತ್ತು ರೋಗದ ವಿವರವಾದ ಲಕ್ಷಣಗಳು, ಕೊಡಬೇಕಾದ [illegible] ಪದಾರ್ಥಗಳ ಅಭ್ಯಾಸ [illegible]

[illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚರ್ ರೋಲ್ ಗಳು

ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ
ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಶ್ರಾಯವಾಗಲಿ | ಆಚಿಕಾಸವಾಗಲಿ

ಇಲ್ಲದೆ ದ. ಭಾಷೆಗೆ [illegible] ಸಾರಸಂಗ್ರಹ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು [illegible] ಓದಿ [illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ [illegible] ಮತ್ತು [illegible]

1929ನೇ ಇಸವಿಯ ಡೈರಿ

ಒಂದು [illegible] ನಮ್ಮ [illegible] ಪ್ರತಿ

ಮದನಮಂಜರಿ ಮಾತ್ರೆಗಳು

[illegible]

ಪಿ. ಸುಬ್ಬರಾವ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಬಂಧಿಗಳಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ [illegible] ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟವಾಗುವಂತೆ [illegible] ಕಾರ್ಯಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿ [illegible] ನಡೆದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು..

ವಿಶೇಷ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

[illegible]

[illegible]
ಕಲೆಗಳು ಕಸ್ತೂರಿ [illegible] ... ೨
ಕಾಂಗ್ರೆಸ್ಸಿನ ವರ್ತಮಾನ ... ೧೯
[illegible] ... ೧೯
ಶಾಸ್ತ್ರ ಮತ್ತು [illegible] ... ೨
ಸ್ತ್ರೀಯರು ... ೨
ಮುಂಗೆಳೆಯರು ದಕ್ಷಿಣ ಕನ್ನಡ ಅಸ್ಪೃಶ್ಯ ಸಮಿತಿಯ ವರದಿ
ವೃತ್ತಿ ... ೨
ವಿದ್ಯಾರ್ಥಿಗಳಿಗೊಂದು ಮಾತು ... ೧೨

ಸ್ವದೇಶಾಭಿಮಾನಿ.

ತಾರೀಕು ೧೫ನೇ ಶುಕ್ರವಾರ ಮಾರ್ಚಿ ೧೯೨೯.

ಒಂದು ರೂಪಾಯಿಯ ಗ್ರೇಂಟು.

ಹಿಂದೀ ಸರಕಾರವನ್ನು ಖಂಡಿಸಿ, ಅದು ಹಿಂದೀಯರ ಇಚ್ಛೆಗೆ ಒಪ್ಪತಕ್ಕದಲ್ಲವೆಂದು ಬಹಿರಂಗವಾಗಿಯೂ ಅಧಿಕಾರ ಪೂರ್ವಕವೂ ತೋರಿಸಲಿಕ್ಕೆ ಮೋತಿಲಾಲ ನೆಹರೂರವರು ಎಸೆಂಬ್ಲಿಯ ಬಜೆಟು ಚರ್ಚೆಯ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿದರು. ಎಸೆಂಬ್ಲಿಯು ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರವು ಬೇಕೆಂದು ಕೇಳಿಕೊಂಡು ಹಲವು ವರ್ಷಗಳಾದರೂ, ಸರಕಾರವು ಅವರ ಆಶಯವನ್ನು ತೀರಾ ತಿರಸ್ಕರಿಸಿ ಸ್ವೇಚ್ಛೆಯಿಂತೆಯೇ, ಹಿಂದೂಸ್ಥಾನವನ್ನು "ತರಬೇತು" ಪಡಿಸುವುದಾಗಿ ಹೇಳಿಕೊಂಡು ಸೈಮನ್ ಸಮಿತಿಯನ್ನು ನೇಮಿಸಿ ಹಿಂದೀಯ ಹಣವನ್ನು ದುರ್ವ್ಯಯಪಡಿಸಿ ಕಾಲಹರಣವನ್ನು ಮಾಡಿ ಬ್ರಿಟಿಷ ವ್ಯಾಪಾರದ ಹಿತಗಳನ್ನು ಸಾಧಿಸಿ ಹಿಂದೀಯರ ಮೇಲೆ ಆಳುವಿಕೆಯ ಬಲವನ್ನು ಮತ್ತಷ್ಟು ಭದ್ರ ಮಾಡುತ್ತಾ ಬರುತ್ತಿದೆ. ದೇಶದ ಶ್ರೇಷ್ಠವರ್ಗದ ರಾಜನೀತಿಜ್ಞರೂ ಕೂಡಿರುವ ಎಸೆಂಬ್ಲಿಯು ಅಧಿಕಾರ ಪೂರ್ವಕವಾಗಿ ಸರಕಾರದೊಡನೆ ದೇಶದ ನಿರ್ಧಾರವನ್ನು ವ್ಯಕ್ತಪಡಿಸಿದುದು ಮಾತ್ರವಲ್ಲದೆ, ಅದನ್ನು ವರ್ಷವರ್ಷವೂ ಸರಕಾರದ ಮುಂದೆ ಹಾಕಿ ಸರಕಾರದ ಅಲಕ್ಷ್ಯಕ್ಕಾಗಿ ಅದನ್ನು ಖಂಡಿಸಬಲ್ಲದೆಂಬುದು ಹಿಂದೂಸ್ಥಾನಕ್ಕೇನೇ ಬಹಳ ಗೌರವಕರವಾಗಿದೆ.

ಪ್ರಾಂತಿಕ ಕೌನ್ಸಿಲುಗಳ ಗತಿಪ್ರಗತಿಗಳನ್ನು ನಾವು ಕಂಡಿರುವೆವು. ಅಲ್ಲಿಯ ಠರಾವುಗಳ ಏರಿಳಿತಗಳನ್ನೂ ನೋಡಿರುವೆವು. ಹಾಗೆಯೇ ಎಸೆಂಬ್ಲಿಯ ನಿರ್ಧಾರಗಳನ್ನೂ ಅವುಗಳ ಬಾಳುವಿಕೆಗಳನ್ನೂ ನೋಡಿರುವೆವು. ಈ ತುಲನೆಯಲ್ಲಿ ಪ್ರಾಂತಿಕ ಕೌನ್ಸಿಲುಗಳ ಅಲ್ಪತೆಯೂ ಕ್ಷುದ್ರತೆಯೂ ವ್ಯಕ್ತವಾಗುವದು. ವೈಯಕ್ತಿಕ ಸ್ವಾರ್ಥಗಳೂ ದುರಭಿಮಾನಗಳೂ ಪ್ರಾಂತಿಕ ಕೌನ್ಸಿಲುಗಳ ನಿರ್ಧಾರಗಳನ್ನು ಅವಮಾನಿಸುತ್ತಿವೆ. ಇಂದಿನ ನಿರಾಕರಣೆಯ ಠರಾವು ಮುಂದೆ ಪ್ರೋತ್ಸಾಹದ್ದಾಗಿಯೇ ಬರುವುದು; ಪುನಃ ನಿರಾಕರಣೆಯದ್ದಾಗಿರುವುದು. ಆದರೆ ಎಸೆಂಬ್ಲಿಯು ದೇಶದ ಸ್ವಾತಂತ್ರ್ಯ [illegible]ಯನ್ನು ಹೇಗೆ ವ್ಯಕ್ತಪಡಿಸಿತೂ ಹಾಗೆಯೇ ಅದನ್ನು ಕಾಯ್ದಿಡಬಲ್ಲದೆಯೆಂಬುದು, ಆ ನಿರ್ಧಾರದ ಹಿಂದಿನ ಮಹತ್ವವನ್ನು ಸರಕಾರಕ್ಕೆ ಸರಿಯಾಗಿ ತೋರಿಸದಿರದು.

ಮಾರ್ಚಿ ೫ನೇ ಗುರುವಾರ ದಿಲ್ಲಿಯಲ್ಲಿ ಎಸೆಂಬ್ಲಿಯಲ್ಲಿ ನಡೆದ [illegible] ಚರ್ಚೆಯಲ್ಲಿ ಎಸೆಂಬ್ಲಿಯು ತನ್ನ ನಿರ್ಧಾರಗಳ ಸಾಧಿಕ್ಯವನ್ನು ಸ್ಪಷ್ಟಪಡಿಸಿತು. ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರ ಬೇಕೆಂದು ಹಲವು ವರ್ಷಗಳ ಹಿಂದೆಯೇ ನಾವು ಠರಾಯಿಸಿದರೂ ಸರಕಾರವು ಆ ಬಗ್ಗೆ ಏನೂ ಪ್ರಯತ್ನ ಮಾಡಿಲ್ಲ. ಬದಲಿಗೆ ಆ ನಿರ್ಧಾರವನ್ನು ತಿರಸ್ಕರಿಸಿಯೇ ಬಿಟ್ಟಿದೆ. ಅದರಿಂದ ಈ ಸರಕಾರವನ್ನು ನಾವು ಮನ್ನಿಸಲಾರೆವು; ಎಂದು ಎಸೆಂಬ್ಲಿಗೆ ಸೂಚಿಸಬೇಕಾಗಿತ್ತು. ಸರಕಾರದ ೧೯೨೯—೩೦ನೇ

[illegible] ಸರಕಾರದ ಎಕ್ಸಿಕ್ಯುಟಿವ್ [illegible] ಒಂದು ರೂಪಾಯಿಗೆ ಇಳಿಸಿ ಈ ಮೂಲಕ ಸರಕಾರದ ಮೇಲಿನ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕಾಗಿ ಪಂಡಿತ ಮೋತಿಲಾಲ ನೆಹರೂರವರು ಠರಾವನ್ನು ತಂದರು.

ದೇಶದಲ್ಲಿ ಈಗ ಪ್ರಬಲವಾಗಿ ತೋರಿರುವ ಹಿಂದೂ-ಮುಸಲ್ಮಾನ ಭೇದಗಳನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಸರಕಾರವು ಹಿಂದೆಗೆಯಲಿಲ್ಲ. ಅವರಿಗೆ ಅನುಕೂಲವಾಗಿ ಅವರ ಹೊಗಳಿಕೆಯನ್ನೇ ಹೊಂದಿಕೊಳ್ಳಲು ಪ್ರಯತ್ನಿಸುವ ಹಲವು ಮುಸಲ್ಮಾನರೂ ಈ ಪ್ರಯತ್ನಗಳಲ್ಲಿ ಭಾಗಿಗಳಾಗಿದ್ದರು. ಆದರೆ ಈ ಸಂದರ್ಭದಲ್ಲಿ ಮಿ। ಜಿನ್ನಾರವರು ಮೋತಿಲಾಲ ನೆಹರೂರವರೊಡನೆ ತನಗಿದ್ದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸದಿರಲಾರಂಭಿಸಿದರೂ ಸ್ಪಷ್ಟವಾಗಿ ಮೋತಿಲಾಲನೆಹರೂರವರ ಠರಾವಿಗೆ ತಮ್ಮ ಅನುಮೋದನೆಯನ್ನು ಕೊಟ್ಟು ಮುಸಲ್ಮಾನರು ಅನುಸರಿಸತಕ್ಕ ಸರಿ ಹಾದಿಯನ್ನು ತೋರಿಸಿದರು.

ಮಿ। ಜಯಕರರೂ ಈ ಠರಾವನ್ನು ಅನುಮೋದಿಸುವಾಗ ಬಹಳ ಚೆನ್ನಾಗಿ ಮಾತನಾಡಿದರು. ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರವೂ, ಡೊಮಿನಿಯನ್ ಸರಕಾರವೋ ಈಗಲೇ ಬೇಕೆಂಬುದು ಏಕೆಂಬುದನ್ನು ಸರಿಯಾಗಿ ತೋರಿಸಿದರು. ಮೇಲಾಗಿ ಶ್ರೀ. ಶ್ರೀನಿವಾಸ ಅಯ್ಯಂಗಾರರ ಭಾಷಣವು ಎಸೆಂಬ್ಲಿಯ ಯುರೋಪಿಯನ್ ಸದಸ್ಯರ ಗುಟ್ಟನ್ನು ಹೊರಗೆ ಹಾಕಿತಲ್ಲದೆ, ಬ್ರಿಟಿಷರೂ, ಹಿಂದೀ ಸರಕಾರವೂ ಹಿಂದೀಯರನ್ನು ಮೋಸಗೊಳಿಸಲಿಕ್ಕೇನೇ ಪ್ರಯತ್ನಿಸುತ್ತಿವೆ ಎಂಬುದನ್ನು ಸರಿಯಾಗಿ ಸ್ಪಷ್ಟಪಡಿಸಿದರು.

ಒಟ್ಟು ಅನುಕೂಲ ಮತದೊಡನೆಯೂ ೫೮ ಪ್ರತಿಕೂಲ ಮತದೊಡನೆಯೂ ಹಿಂದೂಸ್ಥಾನದ ಸರಕಾರದ ಎಕ್ಸಿಕ್ಯುಟಿವ್ ಕೌನ್ಸಿಲಿನ ಖರ್ಚಿಗೆ ಬರೀ ಒಂದು ರೂಪಾಯಿಯನ್ನು ಎಸೆಂಬ್ಲಿಯು ಮಂಜೂರು ಮಾಡಿತು. ಈ ಮಂಜೂರಾತಿಯನ್ನು ತೆಗೆದುಹಾಕಿ, ಸರಕಾರಕ್ಕೆ ಬೇಕಷ್ಟು ರಕಮನ್ನು ಕೊಡಲು ವ್ಯಾಸರಾಯರುವರಿಗೆ ಅಧಿಕಾರವಿದ್ದು, ವ್ಯಾಸರಾಯರವರು ತಮ್ಮ ಸರ್ಟಿಫಿಕೇಶನ್ ಅಧಿಕಾರದ ಮೂಲಕ ಸರಕಾರವು ಕೇಳಿದ ರಕಮನ್ನು ಮಂಜೂರು ಮಾಡುವರೇನೊ, ನಿಜ. ಆದರೆ ಇಡೀ ಹಿಂದೂಸ್ಥಾನದಲ್ಲಿ ಹಿಂದೂ-ಮುಸಲ್ಮಾನರೆನ್ನದೆ ಎಲ್ಲರೂ ಜವಾಬ್ದಾರ ಸರಕಾರವು ಹಿಂದೂಸ್ಥಾನಕ್ಕೆ ಬೇಕೆಂದು ಕೇಳಿಕೊಳ್ಳುತ್ತಿರುವರು ಮಾತ್ರವಲ್ಲದೆ, ಆ ಬಗ್ಗೆ ಕಾಯಿದೆಶೀರಾದ ಎಲ್ಲಾ ತರದ ಪ್ರಯತ್ನವನ್ನೂ ಸರಕಾರದ ಮೇಲೆ ಹಾಕುವರೆಂಬುದು ಇದರಿಂದ ಇಡೀ ಲೋಕಕ್ಕೇನೇ ತಿಳಿಯದಿರದು.

ವಿದೇಶ ವರ್ತಮಾನ.

— ಯುರೋಪಿಯನರು ಮೂಲನಿವಾಸಿಗಳನ್ನು ಯಾವ ರೀತಿಯಾಗಿ ಪೀಡಿಸುವರೆಂಬುದರ ಬಗ್ಗೆ ನ್ಯಾರೋಬಿಯಿಂದ ಒಂದು ವಿಶೇಷ ಧ್ಯಾನ ಸಮಾಚಾರವು ದೊರಕಿರುತ್ತದೆ. ರೊಬರ್ಟ ಒಕ್ಲೆ ಎಂಬ ಹೆಸರಿನ ಯುರೋಪಿಯನನೊಬ್ಬನು ಒಬ್ಬ ಮೂಲನಿವಾಸಿಯನ್ನು ಹಿಡಿಸಿ ಆತನನ್ನು ಕೊಂದು ಹಾಕಿದನು. ಮೂಲನಿವಾಸಿಯನ್ನು ಆತನು ಹಿಡಿಸಿ ಕೈದು ಮಾಡಿಸಿ ಪೋಲೀಸ್ ಸ್ಟೇಶನಿಗೆ ಕೊಂಡೊಯ್ಯುವ ಬದಲಾಗಿ ಬೇರೊಂದೆಡೆಗೆ ಕೊಂಡೊಯ್ದು ಒಂದು ಬಳ್ಳಿಯ ಬೇರೆ ಬೇರೆ ಎರಡು ಕೊಂಬೆಗಳನ್ನು ಆತನ ಎರಡೂ ಕೈಗಳಿಗೆ ಕಟ್ಟಿ ಬಳ್ಳಿಯನ್ನು ಚೆನ್ನಾಗಿ ಜಗಿಯುತ್ತಾ ಆತನ ಬೆರಳುಗಳನ್ನು ಬೇರ್ಪಡಿಸಿದನು. ಆತನ ಈ ಭಯಂಕರ ಕೃತ್ಯದ ಸಲುವಾಗಿ ವಿಚಾರಣೆಯಾಗಲಿದೆ. ಆದಕ್ಕೆ ಯುರೋಪಿಯನನು ಮಾತ್ರ [illegible].

— ಲಂಡನ್‌ನಿಂದ ಹಿಂದೂಸ್ಥಾನಕ್ಕೆ [illegible] ಪ್ರಾರಂಭಿಸಲು ತಯಾರಿಗಳೆಲ್ಲ ನಡೆದಿರುತ್ತವೆ. [illegible] ವಿಮಾನವೊಂದು ಮಾರ್ಚ ೩೦ನೇ ತಾರೀಕಿನ ದಿನ ಕ್ರೊಯಿಡನ್‌ನಿಂದ ಹೊರಡುವದು. ಎಪ್ರಿಲ್ ೬ನೇ ತಾರೀಕಿನ ದಿನ ಅದು ಕರಾಚಿಗೆ ಬಂದು ತಲುಪುವದು. ಪ್ರಯಾಣಿಕರಿಂದ ಹಲವು ಅರ್ಜಿಗಳು ಈಗಲೇ ಬಂದಿರುತ್ತವಂತೆ. ಆದರೆ ಮೊದಲನೆಯ ತಿಂಗಳಲ್ಲಿ ಟಪ್ಪಾಲು ಮಾತ್ರ ಒಯ್ಯಲ್ಪಡುವದು. ಮೊದಲನೆಯ ಸಲ ಹಾರುವಾಗ, ಒಂದು ಟನ್ನಿಗೆ ಮಿಕ್ಕಿದ್ದ ಭಾರವುಳ್ಳ ಟಪ್ಪಾಲು ಒಯ್ಯಲ್ಪಡುವದೆಂದು ಹೇಳಲು ಬಲವಾದ ನಿದರ್ಶನಗಳಿರುತ್ತವೆ.

— ಲೇಡಿ ಸ್ಯಾಮುನರು ಅವರ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ "ಹಿಂದೂಸ್ಥಾನದ ಸ್ತ್ರೀಯರು ಎಂದು ಎಮಗೆ ಬಂದು ಬಹಿರಂಗವಾದ ಕಾರ್ಯಕ್ಷೇತ್ರಕ್ಕಿಳಿದು, ಚಳವಳಗಳಲ್ಲಿ ಭಾಗಿಗಳಾಗುವರೋ, ಅಂದೇ ಹಿಂದೂಸ್ಥಾನದ ದೊಡ್ಡಸ್ಥಿತಿಯು, ಪರರಾಷ್ಟ್ರಗಳ ಮುಂದೆ ಒಳಿತು ಕಾಣುವದು" ಎಂದು ಬರೆದಿರುವರು. ಹಿಂದೂಸ್ಥಾನದ ಹೆಂಗಸರ ಅಭಿವೃದ್ಧಿಯು ಈಗ ತಕ್ಕಮಟ್ಟಿಗೆ ಆಗಿರುತ್ತದೆ. ಇನ್ನು ಚೆನ್ನಾಗಿ ಆಗಬೇಕಾಗಿದೆ, ಎಂಬುದೇ ಅವರ ಅಭಿಪ್ರಾಯವಾಗಿರುತ್ತದೆ.

— ಟಿಬೇಟಿನ ಹೊಸ ವರುಷವು ಬಹು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಒಂದು ತಿಂಗಳ ವರೆಗೆ ಅಲ್ಲಿ ಬಹಳ ಗದ್ದಲವಿರುತ್ತ

[illegible]

— [illegible] ಇಂಗ್ಲಿಷ ಭಾಷೆಯಲ್ಲಿ ಹಾಸ್ಯ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬಾರದೆಂದು ಹೇಳಿದರು. ಪ್ರಾಂತ ಭಾಷೆಯಲ್ಲಿ ಮಾತಾಡಬಾರದೆಂದೂ, ಇಂಗ್ಲಿಷು ಭಾಷೆಯಲ್ಲಿ ಮಾತಾಡಬೇಕೆಂದು ಕೋರ್ಟಿನ ಪ್ರಧಾನರು, ಮೆಜಿಸ್ಟ್ರೇಟರು ಹೇಳಿದರೂ ಆ ವಕೀಲರು ಒಪ್ಪಲಿಲ್ಲ. ಇದರಿಂದ ಕೋರ್ಟಿನಲ್ಲಿ ಸ್ವಲ್ಪ ಗಲಿಬಿಲಿ ಉಂಟಾಯಿತು.

— ನ್ಯೂಜಿಲೆಂಡಿನ ಕೆಂಟರ್ ಬರಿ ಪ್ರಾಂತ್ಯದಲ್ಲಿ ಒಂದು ಭೂಕಂಪವಾಯಿತು. ವೆಲ್ಲಿಂಗ್ಟನ್ ನಗರದ ಕಟ್ಟಡಗಳಲ್ಲಿಯೂ ಈ ಭೂಕಂಪದಿಂದ ಆಘಾತವಾದ ನಷ್ಟವು ಸಂಭವಿಸಿತು. ಭೂಕಂಪವುಂಟಾದ ಸ್ಥಳದಲ್ಲಿ ಎಲ್ಲ ಕಟ್ಟಡಗಳೂ ಬಿದ್ದು ಹೋಗಿರುವವು. ಆದರೆ ಮನುಷ್ಯರಾರಿಗೂ ಅಪಾಯವಾಗಿಲ್ಲ.

— ಹೊಂಗ್ ಕೊಂಗಿನ ಕಿಂಗ್ ಎಡ್ವರ್ಡ್ ಹೋಟೆಲಿನಲ್ಲಿ ಬೆಂಕಿಯುಂಟಾಗಿ ಎಂಟು ಮಂದಿ ಸತ್ತುಹೋದರು. ಹಲವರು ಗಾಯ ಹೊಂದಿರುತ್ತಾರೆ. ಸತ್ತವರಲ್ಲಿ ಒಬ್ಬನು ಫ್ರೆಂಚನು, ಒಬ್ಬನು ಅಮೇರಿಕದವನು, ಒಬ್ಬಳು ಇಂಗ್ಲಿಷ ಹೆಂಗಸು, ಒಬ್ಬನು ಜಪಾನಿಯು, ನಾಲ್ವರು ಚೀನೀಯರು. ಮೇಲಿನ ಮಾಳಿಗೆಯಿಂದ ಬೆಂಕಿಯ ಭಯದಿಂದ ಕೆಲವರು ಕೆಳಕ್ಕೆ ಹಾರಿ ಪ್ರಾಣಗಳನ್ನು ಕಳಕೊಂಡರು.

— ರಾಜಕೀಯ ಕಾರ್ಯಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸುವಂಥವರನ್ನು ಆರು ತಿಂಗಳುಗಳ ಶಿಕ್ಷೆಗೆ ಗುರಿಪಡಿಸಬೇಕೆಂದು ಇಜಿಪ್ತ ಸರಕಾರದವರು ಒಂದು ಹುಕುಮು ಕೊಟ್ಟಿರುವರು. ವಿದ್ಯಾರ್ಥಿಗಳ ಮುಷ್ಕರದ ವಿಷಯವನ್ನು ಪ್ರಕಟಿಸುವವರಿಗೆ, ಇದೇ ಶಿಕ್ಷೆಯು ವಿಧಿಸಲ್ಪಡುವುದಂತೆ.

— ಮದ್ರಿದಿನಲ್ಲಿ ಶಾಲೆಗಳಲ್ಲಿ ರೋಮನ್ ಕೆಥೋಲಿಕರಿಂದ ಕೊಡಲ್ಪಡುವ ಡಿಗ್ರಿಗಳು ಬೆಲೆಯುಳ್ಳವುಗಳಲ್ಲವೆಂದು ವಿದ್ಯಾರ್ಥಿಗಳು ಮುಷ್ಕರವನ್ನಾರಂಭಿಸಿದರು. ಮುಷ್ಕರವು ಕೊನೆಗೆ ಪ್ರಬಲವಾಗಿ ಬೆಳೆದುದರಿಂದ ಪೋಲೀಸರ ಅವಶ್ಯಕತೆಯುಂಟಾಯಿತು. ಪೋಲೀಸರು ಬಂದು ಗುಂಡು ಹೊಡೆದುದರಿಂದ ಒಬ್ಬ ವಿದ್ಯಾರ್ಥಿಯು ಸತ್ತು ಹೋದನು. ಹಲವರಿಗೆ ಜಖಮಾಯಿತು. ೨೮ ಮಂದಿ ವಿದ್ಯಾರ್ಥಿಗಳು ಕೈದು ಮಾಡಲ್ಪಟ್ಟರು.

— ಫೆಬ್ರವರಿ ತಿಂಗಳಲ್ಲಿ ಬ್ರಿಟನಿನ ಆಮದು ೧೧,೩೪೪,೦೦೦ ಪವನು ಬೆಲೆಯವುಗಳು. ರಫ್ತು ೫೫,೬೬೯,೦೦೦ ಪವನುಗಳಷ್ಟು. ಅಂದರೆ ಕಳೆದ ವರುಷದ ಫೆಬ್ರವರಿ ತಿಂಗಳಲ್ಲಿ ಆದುದಕ್ಕಿಂತ ಆಮದು ೩,೫೦೪,೦೦೦ ಪವನುಗಳಷ್ಟು, ರಫ್ತು ೧,೫೬೧,೦೦೦ ಪವನುಗಳಷ್ಟು ಕಡಿಮೆಯಾದಹಾಗಾಯಿತು.

— ಮಾರ್ಚ ೪ನೇ ತಾರೀಕಿನ ದಿನ ಬ್ರಿಟನಿನಲ್ಲಿ ನಿರುದ್ಯೋಗಿಗಳಾಗಿದ್ದವರ ಸಂಖ್ಯೆ ೧,೪೬೬,೩೦೦ ಆಗಿತ್ತು. ಕಳೆದ ಸಲ ತೆಗೆದ ನಿರುದ್ಯೋಗಿಗಳ ಲೆಕ್ಕಕ್ಕಿಂತ ಇದು ೪೫,೧೦೮ರಷ್ಟು ಕಡಿಮೆಯಾದ ಹಾಗಾಯಿತು.

— ಅರಬರು ಈಗ ಮೊಲ್ಲನ ಜೊತೆಗೆ ಹೋಗಲು ತಕ್ಕವರಾಗಿರುವರು. ಇನ್ನು ಒಂದು ತಿಂಗಳ ಒಳಗೆ ಅವರು ರಾಜ್ಯದ ಕಾರ್ಯಗಳಲ್ಲಿ ಕೈಹಾಕಲು ಶಕ್ತರಾಗುವರೆಂದು ನಂಬಲಾಗಿದೆ.

ಒಳದೇಶ ವರ್ತಮಾನ.

— ಜಬಲಪುರದಲ್ಲಿ ಭಯಂಕರವಾದ ಬರವು ಬಿದ್ದಿರುತ್ತದೆ. ಸಹಾಯಕ್ಕಾಗಿ ನೇಮಿಸಲ್ಪಟ್ಟ ಕಮಿಟಿಯ ಪ್ರೆಸಿಡೆಂಟರಾದ ಸೇಠ್ ಗೋವಿಂದ ದಾಸರು ಮೊನ್ನೆತಾನೆ ಜಬಲಪುರವನ್ನು ಸಂಚರಿಸಿದರು. ಹಳ್ಳಿಯ ಜನರು ನಾಲ್ಕು ರೋಟಿಗಳ ಮೇಲೆ ನಾಲ್ಕು ಮಾಡಿ ಅವುಗಳನ್ನು ಮಾರಿ ಹಣ ಸಂಪಾದಿಸಬೇಕೆಂದು ಅವರು ಜನರಿಗೆಲ್ಲ ಬೋಧಿಸಿದರು.

— ವಿ.ಜಾಲ್ಪಾಹಯವರನ್ನು ಕೈದು ಮಾಡಿದಂದಿನಿಂದ ಬಂಗಾಳದಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರ ಚಳವಳವು ಇನ್ನಷ್ಟು ಚೆನ್ನಾಗಿ ನಡೆಯತೊಡಗಿರುತ್ತದೆ. ವಿದೇಶಿ ವಸ್ತ್ರಗಳ ರಾಶಿಗಳು ಪ್ರತಿದಿನವೂ ಹೋಮವಾಗುತ್ತವೆ. ಕಲಕತ್ತೆಯಲ್ಲಿಯೂ ಕೂಡ ವಿದೇಶಿ ವಸ್ತ್ರಗಳ ಬಹಿಷ್ಕಾರವನ್ನು ಚೆನ್ನಾಗಿ ನಡೆಯಿಸಬೇಕೆಂದು ಬೇರೆ ಬೇರೆ ಸಭೆಗಳನ್ನು ನಡೆಯಿಸಿ ಧುರೀಣರು ಭಾಷಣಗಳನ್ನು ಕೊಡತೊಡಗಿರುವರು.

— ಪಂಜಾಬು ಸರಕಾರದವರು ಜುಗಾರಾಡುವದನ್ನು ತಡೆಗಟ್ಟಲು ಚೆನ್ನಾಗಿ ಪ್ರಯತ್ನಿಸುತ್ತಾರೆ. ಜುಗಾರಾಟವನ್ನು ನಿಷೇಧಿಸಿ ಅವರು ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿರುತ್ತದೆ.

— ಶಿವರಾತ್ರಿಯ ಸಮಯ ಹುಬ್ಬಳ್ಳಿಯಲ್ಲಿ ಇಬ್ಬರು ಕ್ರಿಶ್ಚಿಯನ ಮಿಶನರಿಗಳು ತಮ್ಮ ಮತ ಸಂಬಂಧವಾಗಿ ಬೋಧನೆ ಕೊಟ್ಟು ಜನರನ್ನು ಮರುಳುಗೊಳಿಸುತ್ತಿರುವಾಗ, ಹುಬ್ಬಳ್ಳಿಯ ಫಸ್ಟ ಕ್ಲಾಸ ಮೆಜಿಸ್ಟ್ರೇಟರು ೧೪೪ನೇ ಸೆಕ್ಷನಿನ ಪ್ರಕಾರ ಅವರು ಮಾತನಾಡದಂತೆ ಹುಕುಮು ಕೊಟ್ಟರು. ಹುಬ್ಬಳ್ಳಿಯ ಯುವಕರ ಪ್ರೆಸಿಡೆಂಟರಾದ ದಾ। ಹರ್ಡೀಕರರ ಮೇಲೂ, ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ, ವೈಸ್ ಪ್ರೆಸಿಡೆಂಟ ಮತ್ತು ಇನ್ನಿಬ್ಬರ ಮೇಲೂ ಇದೇ ತರಹದ ಹುಕುಂ ಕೊಡಲ್ಪಟ್ಟಿತು.

— ಹಿಂದೂಸ್ಥಾನದ ಉತ್ತಮ ವಸ್ತು ಪ್ರದರ್ಶನಾಲಯಗಳಲ್ಲಿ ಒಂದಾದ ಪಾಟನದ ಹೊಸ ವಸ್ತುಪ್ರದರ್ಶನಾಲಯವನ್ನು ಬಿಹಾರಿನ ಗವರ್ನರ ದೊರೆಗಳವರು ತೆರೆದರು. ಅದು ನೋಗರಾಯ ರೀತಿಯಲ್ಲಿ ಕಟ್ಟಲ್ಪಟ್ಟಿರುತ್ತದೆ. ಮೂರು ಲಕ್ಷ ರೂಪಾಯಿಗಳಿಗೆ ಮೀರಿಬಿಟ್ಟು ಅದಕ್ಕೆ ಖರ್ಚಾಗಿರುತ್ತದೆ.

— ದಾರ್ಜೀಲಿಂಗಿನಲ್ಲಿ ಇತ್ತೀಚೆಗೆ ಕೈದಿನಲ್ಲಿ ಒಂದು ಕಳವು ನಡೆದುದರಿಂದ ಕೈದಿನ ಅಧಿಕಾರಿಗಳು ಕೈದಿನಲ್ಲಿ ಕಾವಲಿರಲು ಸ್ಪೆಶಲ್ ವಾರ್ಡರುಗಳನ್ನು ನೇಮಿಸಿರುತ್ತಾರೆ.

[illegible]

— [illegible] ಪರಿಷತ್ತು ದೋಷಾಕ ಎಂಬ ಸ್ಥಳದಲ್ಲಿ [illegible] "ಎಲ್ಲರೂ [illegible] ದೇಶದ ರೈತರುಗಳೇ, ಸ್ವಾತಂತ್ರ್ಯದ [illegible]" ಎಂಬುದೇ ಸ್ವಾಗತಾಧ್ಯಕ್ಷರಾದ [illegible] ಭಾಷಣದ ಧ್ವನಿಯು ವಾಕ್ಯವಾಗಿತ್ತು. [illegible] ಉಂಟಾದ ಅವನತಿಯನ್ನು [illegible] ಎಂಬುದೇ ಅವರ ಭಾಷಣದ ಸಾರವಾಗಿತ್ತು.

— ಮೌಲಾನಾ ಮಹಮ್ಮದ್ ಅಲಿಗಳವರು ಕಳೆದ ೧೧ನೇ ತಾರೀಕಿನ ದಿನ ರಂಗೂನನ್ನು ಸಂದರ್ಶಿಸಿದರು. ಕೊರ್ಪೊರೇಶನಿನ ಪ್ರೆಸಿಡೆಂಟರು ಅವರ [illegible] ಗೃಹಸ್ಥರೂ, ಅವರನ್ನು ಎದುರುಗೊಂಡರು. [illegible]ಯಿಂದ ಅವರಿಗೆ ಅಲಂಕರಿಸೋಣಾಯಿತು. ಮೆರವಣಿಗೆಯಿಂದ ಕೊಂಡೊಯ್ದು ರಂಗೂನ್ ನಾಗರಿಕರ ಪರವಾಗಿ ಅವರಿಗೆ ಒಂದು ಮಾನಪತ್ರವು ಸಮರ್ಪಿಸೋಣಾಯಿತು. ಮೌಲಾನಾ ಮಹಮ್ಮದ್ ಅಲಿಗಳವರು ಸುಮಾರು ೧೦ ದಿನಗಳವರೆಗೆ ಅಲ್ಲಿ ಉಳಕೊಳ್ಳುವರು.

— ಪ್ರೊಫೆಸರ್ ರಖಲ್ ದಾಸ್ ಬನರ್ಜಿಯೆಂಬವರು ಒರಿಸ್ಸಾದ ಕಾಡುಗಳಲ್ಲಿ ಎರಡು ಬಹು ಹಳೇ ದೇವಸ್ಥಾನಗಳನ್ನು ಕಂಡು ಹಿಡಿದಿರುವರು, ಅವುಗಳು ಸುಮಾರು ೬ನೇ ಶತಮಾನದಲ್ಲಿ ಕಟ್ಟಲ್ಪಟ್ಟಿದ್ದುವೆಂದು ತಿಳಿಯಲಾಗಿದೆ. ಭೋಧ ಎಂಬ ಪಟ್ಟಣದಲ್ಲಿ ಅದೇ ಪ್ರೊಫೆಸರರು ಒಂದು ಬುದ್ಧನ ಪ್ರತಿಮೆಯನ್ನು ಕಂಡುಹಿಡಿದಿರುವರು. ಇದು ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿರುತ್ತದೆ. ಕುಳಿತುಕೊಂಡು ಅದಿ ಉದ್ದವಾಗಿರುತ್ತದೆ. [illegible] ಶತಮಾನದಲ್ಲಿ ಮಾಡಲ್ಪಟ್ಟಿತಂತೆ.

— ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿದಂತೆ ತಾರೀಕು [illegible] ಶಿಕ್ಷೆಯ ಸ್ವೀಮಿನ ಸಂಬಂಧದಲ್ಲಿ ಪಂಡಿತ ಮದನಮೋಹನ ಮಾಲವೀಯರವರು ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೩ನೇ ತಾರೀಕಿನ ದಿನ [illegible] ದಿನವಾಗಿ ಆಚರಿಸುವರು.

— ರಂಗೂನಿನಿಂದ ಹೊರಟು ಹೋಗುತ್ತಿದ್ದ ಒಂದು ರೈಲುಬೇ ಗಾಡಿಯು ಮೂರನೇ ತರಗತಿಯ ಗಾಡಿಯೊಂದಕ್ಕೆ ಧಕ್ಕನೆ ಬೆಂಕಿ ಹಿಡಿಯಿತು. [illegible] ಸುಟ್ಟುಹೋಯಿತು. ರೈಲು ನಿಂತು ಗಾಡಿಯನ್ನು ಬಿಂಗಡಿಸೋಣಾಯಿತು. ರೈಲು ಓಡುತ್ತಿರುವಾಗಲೇ ಆ ಗಾಡಿಯಲ್ಲಿದ್ದವರು ಪ್ರಾಣಭಯದಿಂದ ಕೆಳಕ್ಕೆ ಹಾರಿದರು. ಸುಮಾರು ನಾಲ್ವತ್ತು ಜನರಿಗೆ ಗಾಯವು ಆಗಿರುತ್ತದೆ. ಪ್ರಯಾಣಿಕರಲ್ಲಿ ಆರೋ ಬಟ್ಟನ [illegible]

[illegible]

— ಮುಸಲ್ಮಾನರು ರಮ್ಜಾನ್ ಸಮಯದಲ್ಲಿ ಉಡಿಗೆರೆಗಳನ್ನು ಕೊಡುವ ಪದ್ಧತಿ ಇರುತ್ತದೆ. [illegible] ಎಂಬ ಹಳ್ಳಿಯ [illegible] ಶಂಕರ್ ಎಂಬವರು ಖಾದಿಯನ್ನು ಪಡೆದು ಉಡುಗೆರೆಗಳನ್ನು ಕೊಡುತ್ತಿರುವರು. ರಮ್ಜಾನ್ ತಿಂಗಳಲ್ಲಿ ಪ್ರತಿವರುಷ ಅವರು ೨೦೦೦ ರೂಪಾಯಿಗೆ ಮಿಕ್ಕಿದ ಮೌಲ್ಯದ ಖಾದಿಯನ್ನು ಕೊಂಡುಕೊಳ್ಳುವರು. ಈ ವರುಷವು ಅವರು ಇದೇ ರೀತಿ ಖಾದಿಯನ್ನು ಕೊಂಡುಕೊಂಡಿರುವರಂತೆ. ಕಾಂಗ್ರೆಸ್ [illegible] ಅವರು ಯಾವಾಗಲೂ ತುಂಬಾ ಸಹಾಯವನ್ನು ಮಾಡುವವರು. ಮಾತೃಭೂಮಿಯ ಮೇಲೆ ಅವರಿಗೆ ಬಹಳ ಪ್ರೀತಿಯಿರುತ್ತದೆ.

— ಈಸ್ಟರ್ ವಾರದಲ್ಲಿ ಮುಂಬಾಯಿಯ ಪ್ರಾರ್ಥನಾ ಸಮಾಜದವರ ಆಶ್ರಯದಲ್ಲಿ ಒಂದು ಪರಿಷದವು ನಡೆಯುವದು. ಜಾತೀಯ ಕಲಹಗಳ ವಿಷಯವು ಈ ಸಭೆಯಲ್ಲಿ ಚರ್ಚಿಸಲ್ಪಡುವದು. ಮಾತೃಭೂಮಿಯ ಮೇಲೆ ಎಲ್ಲರಿಗೂ ಪ್ರೇಮವನ್ನು ಹುಟ್ಟಿಸುವುದೇ ಈ ಪರಿಷದದ ಮುಖ್ಯ ಉದ್ದೇಶವಾಗಿರುತ್ತದೆ.

— ಬರಿಸಾಲದ ಸಬ್ ಇನ್ಸ್‌ಪೆಕ್ಟರಾಗಿದ್ದ ಮಿ. ಜ್ಯೋತಿಷ ಚಂದ್ರ ರ್‍ಯಾ ಎಂಬವರು ಅಕಸ್ಮಾತ್ ತಿವಿಯಲ್ಪಟ್ಟಿರುವರು. ಒಬ್ಬ ಅಲ್ಲಿಯ ಶಾಲೆಯ ಹುಡುಗನ ಮೇಲೆ ಸಂಶಯ ಬಿದ್ದು ಅತನನ್ನು ಕೈದು ಮಾಡಿರುವರು. ಇನ್ನೂ ಹೆಚ್ಚು ಕೊಲಂಕುಶಗಳು ತಿಳಿದು ಬರುವುದಿಲ್ಲ.

ದಕ್ಷಿಣ ಕನ್ನಡ.

ಮಂಗಳೂರು — ಮಾರ್ಚ ೧೮ನೇ ತಾರೀಕಿನ ಆದಿತ್ಯವಾರ ಸ್ವರಾಜ್ಯ ದಿನವು ಮಂಗಳೂರಲ್ಲಿಯೂ ಚೆನ್ನಾಗಿ ಆಚರಿಸಲ್ಪಟ್ಟಿತು. ಸುಮಾರು ೫ ಘಂಟೆಯ ಹೊತ್ತಿಗೆ ಕೊಡಿಯಾಲಬೈಲಿನಲ್ಲಿರುವ ಕಾಂಗ್ರೆಸ್ ಕಾರ್ಯಾಲಯದಿಂದ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳನ್ನು ಹಾದು ಸುಮಾರು ೬ ಘಂಟೆಯ ಹೊತ್ತಿಗೆ ಮೈದಾನಿಗೆ ತಲುಪಿತು. ಹಿಂದುಗಳೂ ಮುಸಲ್ಮಾನರೂ, ಕ್ರೈಸ್ತರೂ ಸಭೆಗೆ ಬಂದಿದ್ದರು. ಶ್ರೀ ಅ. ಶ್ರೀನಿವಾಸ ಪೈಗಳವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಪ್ರಾರಂಭ ಭಾಷಣವಾದೊಡನೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ವಕೀಲ್ ಶ್ರೀ ಎಮ್. ಮಾಧವ ರಾವ್ ಇವರು ನೆಹರು ವರದಿಯ ಕುರಿತಾಗಿ ಭಾಷಣಗಳನ್ನು ಮಾಡಿದರು. ತದನಂತರ, ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸನ್ನು ಶೀಘ್ರದಲ್ಲಿಯೇ ಕೊಡಬೇಕೆಂಬ ಠರಾವನ್ನು ಶ್ರೀ ಕೆ. ಆರ್. ಕಾರಂತರೂ, ಶ್ರೀ ಗಂಗೊಳ್ಳಿ ಕೃಷ್ಣರಾಯರೂ ಸಭೆಯ ಮುಂದಿಟ್ಟರು. ಇದು ಸರ್ವಾನುಮತದಿಂದ ಮಂಜೂರಾತಿಯನ್ನು ಹೊಂದಿತು. ಅಧ್ಯಕ್ಷರಿಗೆ ಕೃತಜ್ಞತಾ ವಂದನೆಗಳ ಸಮರ್ಪಣವಾದವು. ಅನಂತರ ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯು ನಿರ್ಣಯಿಸಿದಂತೆ ವಿದೇಶಿ ವಸ್ತ್ರ ಬಹಿಷ್ಕಾರ, ಶಾರೀರಿಕ ಶಿಕ್ಷಣ, ಇವುಗಳ ಕುರಿತಾಗಿ, ತಾರೀಕು ೧೬, ೨೪, ಮತ್ತು ೩೧ನೇ ಆದಿತ್ಯವಾರಗಳಲ್ಲಿ ಮೈದಾನದಲ್ಲಿ ಸಭೆ ಜರಗಿಸಬೇಕೆಂದು ಶ್ರೀ ಕೆ. ಆರ್. ಆಚಾರರು ಸಭಿಕರಿಗೆ ಹೇಳಿದರು.

ತಾರೀಕು ೯-೩-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೧ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೧, ಇನ್‌ಫ್ಲುಯೆಂಜಾ ಜ್ವರದಿಂದ ೧, ಅತಿಸಾರದಿಂದ ೧, ಶ್ವಾಸಕೋಶದ ರೋಗಗಳಿಂದ ೪೧, ಸಿಡುಬಿನಿಂದ ೧, ಇತರ ಎಲ್ಲಾ ಕಾರಣಗಳಿಂದ ೧೩, ಶಿಶು ಮರಣಗಳು ೬, ಜನನ ಸಂಖ್ಯೆ ೩೪

ಮಂಗಳೂರು ತಾಲೂಕ ಬೋರ್ಡಿನ ಕಡೆಯ ಬರುವ ಸಾಧಾರಣ ಸಭೆಯು ಮಂಗಳೂರು ತಾಲೂಕ ಬೋರ್ಡ ಆಫೀಸಿನಲ್ಲಿ ಇದೇ ಬರುವ ಮಾರ್ಚ ೨೬ನೇ ಗುರುವಾರ ಮಧ್ಯಾಹ್ನ ಘಂಟೆ ೩ಕ್ಕೆ ಜರುಗುವದು.

ಮುಂಬಾಯಿಯ ದಿ ಬಿರ್ಮಿಂಗ್ ಹ್ಯಾಮ್ [illegible] ಕಳೆದ ವರುಷ [illegible] ಪತ್ರಿಕೆಯಲ್ಲಿ [illegible] ತಿಳಿಸುತ್ತಾರೆ.

ಇದೇ ಬರುವ ತಾರೀಕು ೧೬—೩—'೨೯ನೇಯ ಭಾನುವಾರ ಘಂಟೆ ೫ಗಂಟೆಗೆ ಇಲ್ಲಿಯ ಬಲ್ಮಠ ರಸ್ತೆಯಲ್ಲಿ ಹೊಸತಾಗಿ ದಿ ಕೆನರಾ ಸ್ಪಿನಿಂಗ್ ಸ್ಕೂಲ್ ಎಂಬ ಹೊಲಿಗೆಯ ಶಾಲೆಯು ಸ್ಪಿನಿಂಗ್ ಇನ್ಸ್‌ಪೆಕ್ಟರ ಶ್ರೀ ಎಸ್. ಎಸ್. [illegible] ತೆರೆಯಲ್ಪಡುವದು.

ಬೋಳಾರ ಹಳೆಕೋಟೆ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ಈ ವರ್ಷ ಉತ್ಸವವು ತಾ. ೨೬-೩-'೨೯ರಿಂದ ೨-೪-'೨೯ರ ವರೆಗೆ ೮ ದಿನಗಳು ನಡೆಯುವದು. ಎಲ್ಲರೂ ಶ್ರೀ ದೇವಿಯ ಸೇವೆಗೆ ಬಂದು ಶ್ರೀ ದೇವಿಯ ಪ್ರಸಾದವನ್ನು [illegible] ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಮೇಲ್ ಮೊಕ್ತೇಸರರ [illegible] ತಿಳಿಸುತ್ತಾರೆ.

[illegible]

ಸಭೆಯವರ [illegible] ಧನ ಸಂಗ್ರಹ [illegible] ಮುಂದೆ ನಡೆಯಲಿಕ್ಕಿರುವ ಕಾರ್ಯವೆಲ್ಲವೂ ಸಾಂಗವಾಗಿ ನೆರವೇರುವಂತೆ ಪ್ರಯತ್ನ ಪಡಬೇಕೆಂದು ನಿರ್ಣಯವಾಯಿತು. ಆ ಮೇಲೆ ಸಭಾ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯವರನ್ನು [illegible] ಉಪಚಾರದಿಂದ ಸತ್ಕರಿಸಿ ಸಭೆಯು ಮುಕ್ತಾಯವಾಯಿತು.

ಕಾಸರಗೋಡು — ಮೇಯೂರು ಗ್ರಾಮದ ಅಂದಾಮಾನೆ ಬ್ಯಾರಿಯನ್ನು ಕೊಂದ ಕೊಲೆಕೇಸಿನ ಸಂಬಂಧ [illegible] ಯಾಗಿದ್ದ ಸೀದಿಬ್ಯಾರಿಯೆಂಬವನನ್ನು ಮೊನ್ನೆ ಪೋಲೀಸ್ ಅಧಿಕಾರಿಗಳ ಅಪೇಕ್ಷೆಯಂತೆ ಶ್ರೀ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಹೆಚ್ಚಿನ ಸಾಹಸದಿಂದ ಹಿಡಿದುಕೊಟ್ಟಿರುವುದು ಬಹಳ ಶ್ಲಾಘನೀಯವಾಗಿದೆ.

ನಂದಳಿಕೆ — ಇಲ್ಲಿಯ ಶ್ರೀ ಮಹಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಉತ್ಸವವು ತಾ. ೨೨-೩-'೨೯ನೇ ಶುಕ್ರವಾರದಿಂದ ಒಂಭತ್ತು ದಿವಸಗಳ ಪರಿಯಂತರ ನಡೆಯುವುದು. ತಾ. ೨೫ನೇ ಸೋಮವಾರ ಜಾತ್ರೆ. ಬೆಂಗ್ರೆ ದೇವರು ಮೂಲಸ್ಥಾನಕ್ಕೆ ಹೋಗಿ ಬರುವರು; ರಾತ್ರಿ ಉತ್ಸವವು; ಭಕ್ತ ಜನರೆಲ್ಲರೂ ಬಂದು ದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಸ್ಥಳವನ್ನು ಬೆಳಗಿಸಬೇಕಾಗಿ ವಿನಂತಿ.

ಹೊಸ ಮೊಕ್ತೇಸರರ ಆಡಳಿತೆಯಲ್ಲಿ ಈ ವರೆಗಿನ ಕೃತಿಗಳಲ್ಲಿ ಹೆಚ್ಚಿನ ಬದಲಿಲ್ಲ. ಅವರ ಉತ್ಸಾಹವನ್ನು ನೋಡುವಾಗ ಉತ್ಸವವು ಉಜ್ವಲ ರೀತಿಯಲ್ಲಿ ಕೊನೆಗಾಣುವುದೆಂದು ತೋರುತ್ತದೆ.

ಪುತ್ತೂರು — ಇಲ್ಲಿ ತಾ. ೮—೩—'೨೯ ಶುಕ್ರವಾರ ಮಧ್ಯಾಹ್ನ ೨ ಘಂಟೆಯ ಸಮಯ ಪೇಟೆಯಲ್ಲಿ ಕೋಟಿ ಬ್ರಾಹ್ಮಣರ ಊಟದ ಹೋಟೆಲು ೧, ಮತ್ತು ಮುಸಲ್ಮಾನ ಮತಸ್ಥರ ಮನೆಗಳು ೨, ಕ್ರೈಸ್ತ ಮತಸ್ಥರ ಮನೆಗಳು ೨, ಕಡಪಾ ೫ ಮನೆಗಳು ಒಟ್ಟು [illegible] ಕಾರಣಗಳಿಲ್ಲದೆ ಅಕಸ್ಮಾತ್ತಾಗಿ ಅಗ್ನಿ ದೇವರಿಗೆ ಸಮರ್ಪಣೆಯಾಗಿ ಭಸ್ಮೀಭೂತವಾಗಿ ಹೋದವು.

ಬೆಂಕಿಯನ್ನು ನಂದಿಸಿ, ಅಕ್ಕಪಕ್ಕದ ಮನೆಗಳನ್ನು ಉಳಿಸಲು ಬೇಕಾಗಿ [illegible] ಬಹಳ ಶ್ರಮವಹಿಸಿದವರಿಗೆ [illegible] ಅಭಿವಂದನೆಗಳು.

[illegible] ಹೋಟೇಲಿನವರು ಪರಮ ಬಡವರು. ನಿರ್ಗತಿಕ [illegible] ಬಹಳ ಕಷ್ಟದಿಂದ ಜೀವನ ನಡೆಸಿಕೊಂಡಿದ್ದರು.

ಬಾಕಿ ಮನೆಯವರು [illegible] ಸಾಧಾರಣ ಒಟ್ಟು ೬೦೦-೭೦೦ ರೂಪಾಯಿಯ ನಷ್ಟವುಂಟಾಗಿರಬಹುದು [illegible] ಗೃಹಸ್ಥ [illegible] ಬಹಳ ಕಷ್ಟ [illegible] ಸಂಗತಿಯಾದ್ದರಿಂದ [illegible] ಉದಾರ ಮನಸ್ಸಿನಿಂದ ಸಹಾಯ ಮಾಡುವರೆಂದು ನಮ್ಮ ಸಂಪೂರ್ಣ ವಿಶ್ವಾಸವು.

ಅಜೆಕಾರು — ಇದೇ ತಾ. ೧೦—೩—'೨೯ನೇ ಆದಿತ್ಯವಾರ [illegible] ಸಹಕಾರ ಸಂಘದ ಮಹಾಸಭೆಯು [illegible] ಅಧ್ಯಕ್ಷತೆಯಲ್ಲಿ ಜರಗಿ [illegible] (Co-operative Buildings) [illegible]

[illegible]

ಪೊಳಲಿ — ಶ್ರೀ [illegible] ಸಂಘಕ್ಕೆ ಇದೇ [illegible]

[illegible]

ಕರ್ನಿಕ ಎಗ್ಯೂಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್ಫ್ಲುಯೆಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಜ್ವರದಿಂದ ಬರುವ ಬಲಹೀನತೆ ಬಿಟ್ಟುಹೋಗಿ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦

ಎಲ್ಲ ಅಡಕೆಯೂ ಔಷಧವನ್ನು ಮಾರುವುದಕ್ಕೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಯೂನಿಯನ್ ಸ್ಟೋರ್ಸ್,
ಮಂಗಳೂರು.

ಕರ್ಣೀಕ ಬ್ರದರ್ಸ,
ಗಿರಿಗಾಂವ, ಮುಂಬಯಿ.

Famous

Mysore Perfumes.

Best Incense sticks (Agar Bathis)

Maharaja Bathi	per seer	(24 Tolas)	Rs	20
Darbar	"	"	"	15
Ananda	"	"	"	12
Manmohan	"	"	"	10
Musk Heena	"	"	"	8
Dilchaman	"	"	"	8
Kasthur Javaji	"	"	"	10
Amber	"	"	"	8
Rose	"	"	"	6
Jasmin	"	"	"	5
Punugu (Civet)	"	"	"	4
Heena	"	"	"	3
A Tin Case containing 300 Assorted Bathis of 15 kinds			"	6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೆಡಿಸುತ್ತಿರುವ [illegible] ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವುದು. [illegible] ಬಾಲಗ್ರಹ ಬಾಧೆಯಿಂದ [illegible] [illegible] [illegible] ನಂದಿಕೆಯನ್ನುಂಟು ಮಾಡುತ್ತದೆ.

[illegible] ನಂಬ್ರ ೧ರ ರೂಪಾಯಿ, ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. [illegible] ರೂಪಾಯಿ [illegible] ರೂಪಾಯಿ ವರೆಗೆ. ದ್ರವ್ಯಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ನಿಮಗೆ ತಿಳಿಯುವದು. ಅಂಚೆ ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
[illegible]

[illegible] ಲೋಕಪ್ರಸಿದ್ಧ ಔಷಧಗಳು.

[illegible]

LIBERAL DISCOUNT TO TRADE

[illegible]-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14

ಜೆಟ್‌ಪ್ರೋಲಿನ ರಾಜರು ಬರೆಯುವರು.

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಇತರ ಔಷಧಿಗಳಿಗಿಂತ ಅರ್ಕವು ತುಂಬಾ ಪ್ರಯೋಜನಕಾರಿಯಾಗಿ ಉಪಕಾರಿಯಾಗಿದೆ. ಅರ್ಕ, ಲೋಧ್ರ, ಮತ್ತು ಅಮೃತ ಇವುಗಳ ನಿಸ್ಸಂಶಯವಾದ ಪ್ರಯೋಜನಕಾರಿತೆಯಿಂದ, ಇಲ್ಲಿನ ಜನರೊಳಗೆ ನಿಮ್ಮ ಔಷಧಿಗಳ ಮೇಲೆ ವಿಶೇಷ ಮತ್ತು ಪೂರ್ಣ ನಂಬಿಗೆಯು ಉಂಟಾಗಿರುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಇರುತ್ತದೆ.

ಕೇಸರಿ ಕುಟೀರಮ್.

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್,

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ದರ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

[illegible] ಗಡಿಯಾರಗಳೂ, ಟೈಮ್ ಪೀಸ [illegible] ಸಾಮಾನುಗಳೂ ಮಾರಾಟಕ್ಕಿವೆ.

[illegible] ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

[illegible] ಮತ್ತು ಬೆಳ್ಳಿಯ [illegible], ಇವುಗಳನ್ನು [illegible] ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ [illegible] ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ. – ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಹಾಕಿಸಿ ಸ್ವಚ್ಛಮಾಡಿಸುವುದರಿಂದ ಸರಿಯಾದ ಸಮಯವು ದೊರಕುವುದು.

ವಿವಿಧ ಸಮಾಚಾರಗಳು.

ಇಂಗ್ಲೆಂಡಿನಲ್ಲಿ ಬಾಲ್ಯವಿವಾಹ ನಿಷೇಧ.

ಹೆಣ್ಣಾಗಲಿ, ಗಂಡಾಗಲಿ, ಹದಿನಾರು ವರುಷ ವಯಸ್ಸಿನ ಮೊದಲು ಮದುವೆಯಾದರೆ ಆ ಮದುವೆಯು ಕಾನೂನು ಪ್ರಕಾರ ಮದುವೆಯಾಗ ಲಾರದೆಂಬ ಠರಾವು ಇಂಗ್ಲೆಂಡಿನ ಹೌಸ್ ಆಫ್ ಲೋರ್ಡ್ಸ್ ಇದರ ಮುಂದಕ್ಕೆ ತರಲ್ಪಟ್ಟಿತು. ಈ ಠರಾವನ್ನು ಸಮರ್ಥಿಸಿ ಲೋರ್ಡ್ ಬಕ್ ಮಾಸ್ಟರ್‌ರವರು ಒಂದು ಭಾಷಣವನ್ನು ಮಾಡಿದರು:- 'ಇಂಗ್ಲೆಂಡ್ ಬಹಳ ನಾಗರಿಕತೆಯನ್ನು ಹೊಂದಿರುತ್ತದಾದರೂ, ಮದುವೆಯ ವಿಷಯ ದಲ್ಲಿ ಮಾತ್ರ ಹಳೆ ಪದ್ಧತಿ ಉಳಿದಿರುತ್ತದೆ. ಸುಮಾರು ನಾಲ್ಕು ನೂರು ವರುಷ ಗಳ ಹಿಂದೆ ಹುಡುಗರೂ ಹುಡುಗಿಯರೂ ಬೇಗನೆ ಪ್ರೌಢಾವಸ್ಥೆಯನ್ನು ಪಡೆಯುತ್ತಿದ್ದದರಿಂದ ಚಿಕ್ಕಂದಿನಲ್ಲೇ ಅವರೊಳಗೆ ಮದುವೆಯಾಗುತ್ತಿದ್ದಿತು. ಆದರೆ ಈಗಿನ ಕಾಲಕ್ಕೆ ಅದು ಸೇರಬೇಕಲ್ಲವು. ಹದಿನಾರು ವರುಷಗಳಿಗೆ ಕಡಿಮೆಯಾದ ಹುಡುಗನಾಗಲೀ ಹುಡುಗಿಯಾಗಲೀ ಮದುವೆ ಯಾಗಿ ಸಂಸಾರ ಮಾಡುವುದೆಂದರೆ ನಾಚಿಕೆಗೇಡು. ಜೀವನದ ಜವಾಬ್ದಾರಿಯನ್ನು ಅರಿಯದವರನ್ನು ವಿವಾಹ ಬಂಧಿತರನ್ನಾಗಿ ಮಾಡುವುದು ಕೇವಲ ಅನ್ಯಾಯ. ನೋರ್ವೆ ದೇಶದಲ್ಲಿ ಮದುವೆಯ ಪ್ರಾಯವು ೨೦ ಮತ್ತು ೧೮ ಆಗಿರುತ್ತದೆ. ಸ್ವೀಡನಿನಲ್ಲಿ ೨೧ ಮತ್ತು ೧೮. ಹಿಂದೂ ಸ್ಥಾನದಲ್ಲಿಯೂ ಕೂಡ ಬಾಲ್ಯ ವಿವಾಹ ಪದ್ಧತಿಯು ಹಿಂದಕ್ಕೆ ಸರಿಯುತ್ತಿದೆ. ಪ್ರೌಢ ವಿವಾಹ ಪದ್ಧತಿಯು ತಲೆದೋರುತ್ತಾ ಬಂದಿರುತ್ತದೆ. ಈ ವಿಷಯದಲ್ಲಿ ನಾವು ಹಿಂದೀಯರಿಗಿಂತಲೂ ಕಡಿಮೆ ಯೋಗ್ಯತೆಯವರಾಗಿ ರುತ್ತೇವೆ. ಜಿನೇವದಲ್ಲಿ ಸದ್ಯದಲ್ಲಿಯೇ ಕೂಡಬಹುದಾದ ಪರಿಷತ್ತಿನಲ್ಲಿ ಸರ್ವರೂ ಒಪ್ಪಿಗೆಯಿಂದ ಸರ್ವ ರಾಷ್ಟ್ರಗಳ ಜನರಿಗೂ ಒಂದೇ ಮದುವೆಯ ಪ್ರಾಯವನ್ನಾಗಿ ನಿಶ್ಚಯಿಸಬೇಕು. ಚಿಕ್ಕಂದಿನಲ್ಲಿ ಹುಡುಗಿಯರಿಗೆ ಮದು ವೆಯನ್ನು ಮಾಡಬಹುದಾದ ಕಾನೂನಿದೆಯಾದರೆ ಅದರಲ್ಲಿ ಅನ್ಯಾಯ ಗಳು ಹೆಚ್ಚಬಹುದು. ಉದಾಹರಣೆಗಾಗಿ, ನಾಲ್ಕೈದು ವರುಷಗಳ ಹಿಂದೆ ಒಬ್ಬ ೨೯ ವರುಷ ಪ್ರಾಯದ ಯುವಕನು ೧೩ ವರುಷ ಪ್ರಾಯದ ಹುಡುಗಿ ಯೊಡನೆ ಬಲಾತ್ಕಾರದಿಂದ ಅನ್ಯಾಯವನ್ನು ನಡೆಸಿದನು. ಆತನ ಮೇಲೆ ಸಹಜವಾಗಿಯಾದರೆ ಮೊಕದ್ದಮೆಯಾಗಿ ಆತನು ಹಲವು ವರುಷಗಳ ಶಿಕ್ಷೆಗೆ ಗುರಿಪಡಿಸಲ್ಪಟ್ಟು, ಕಾರಾಗೃಹದಲ್ಲಿ ಕೊಳೆಯಬೇಕಾಗಿದ್ದಿತು. ಆದರೆ ಆತನೇ ಆ ಹುಡುಗಿಯನ್ನು ಮದುವೆಮಾಡಿಕೊಳ್ಳುವೆನೆಂಬ ಪ್ರಸ್ತಾಪವಾ ಯಿತು. ಅವರಿಬ್ಬರೊಳಗೆ ಮದುವೆಯು ನಡೆಯಿತು. ಇದರಿಂದ ಆ ಚಿಕ್ಕ ಹುಡುಗಿಯು ಆ ಯುವಕನ ಮೇಲೆ ಮೊಕದ್ದಮೆಯನ್ನು ಮಾಡ ದಂತೆ ತಡೆಗಟ್ಟಲ್ಪಟ್ಟಿತು. ಆ ಚಿಕ್ಕ ಹುಡುಗಿಯು ಯುವಕನ ವಿಷಯ ಲಾಲಸೆಗೆ ಬಲಿಬಿದ್ದು ಕಷ್ಟಪಡಬೇಕಾಯಿತು. ಇದೇ ರೀತಿ ಇಂಗ್ಲೆಂಡಿ ನಲ್ಲಿ ಎಷ್ಟೋ ಜನ ಯುವಕರು ಚಿಕ್ಕ ಚಿಕ್ಕ ಹುಡುಗಿಯರನ್ನು ಕೆಡಿಸಿ, ಅದನ್ನು ಮರೆಮಾಚುವದಕ್ಕಾಗಿ ಅವರನ್ನು ಮದುವೆಯಾಗಿ ಬಿಡುವರು. ಆದರೆ ಇದರಿಂದ ಹುಡುಗಿಯ ಜೀವನವು ಯಾವ ರೀತಿಯಲ್ಲಿ ಕೆಡುವದು ಎಂಬು ದನ್ನು ಅವಳ ಹೆತ್ತವರು ವಿಚಾರಿಸುವುದಿಲ್ಲ. ಇದುವರೆಗೆ ಈ ವಿಷಯವು ನಮ್ಮ ಮನಸ್ಸಿಗೆ ಹೊಳೆದಿಲ್ಲ. ಈಗ ತಿಳಿದಿರುತ್ತದೆ. ರಾಷ್ಟ್ರಕ್ಕೆ ಉಪ ಕಾರವಾಗುವ ಈ ಮಸೂದೆಗೆ ಸರ್ವರೂ ಸಮ್ಮತಿಯನ್ನೀಯಬೇಕು. ಈ ಮಸೂದೆಯನ್ನು ಜ್ಯಾರಿಗೆ ತರುವದು ನ್ಯಾಯವಾಗಿರುತ್ತದೆಂದು ಯಾವ ನೊಬ್ಬನೂ ತಿಳಿಯದಿರನು ಎಂದು ನನಗೆ ದೃಢವಾದ ನಂಬಿಗೆಯಿರುತ್ತದೆ" ಎಂಬುದೇ ಅವರ ಭಾಷಣದ ಮುಖ್ಯ ಸಾರಾಂಶವಾಗಿದ್ದಿತು.

ಪಂಜಾಬದ ರಾಜಕೀಯ ಪರಿಷತ್ತು.

ಪಂಜಾಬದ ರಾಜಕೀಯ ಪರಿಷತ್ತಿನ ಎರಡನೆಯ ಅಧಿವೇಶನವು ಜೋಹಾಕಿನಲ್ಲಿ ಶ್ರೀ ಪಂಡಿತ ಮೋತಿಲಾಲ ನೆಹರೂಗಳವರ ಅಧ್ಯಕ್ಷತೆ ಯಲ್ಲಿ ನಡೆಯಿತು. ಲಜಪತರಾಯರವರ ನಿಧನದ ಸಲುವಾಗಿ ಮೊದ ಲೊಂದು ದುಃಖಸೂಚಕ ಠರಾವು ಮಂಜೂರಾಯಿತು. ಲಾಹೋರಿನಲ್ಲಿ ಅಂದು ಲಾಲಾಜಿಯವರನ್ನು ಪೋಲೀಸರು ಹೊಡೆದುದನ್ನೂ, ಸೋಂಡರ್ಸ್‌ರ ವಧೆಯಲ್ಲಿ ಪಂಜಾಬದ ಯುವಕರ ಕೈಯಿರಬಹುದೆಂದು ಪೋಲೀಸರು ಅವರನ್ನು ಹಿಡಿದುದನ್ನೂ ಖಂಡಿಸಿ, ಲಾಲಾ ದುನೀಚಂದರು ಮಾತ ನಾಡಿದರು. ಸರಕಾರದವರು ಎಂಥ ಕಷ್ಟಕ್ಕೊಳಪಡಿಸಿದರೂ, ಸ್ವಾತಂತ್ರ್ಯದ ಚಳವಳವು ಅಳಿಸಿ ಹೋಗಲಾರದೆಂದರು.

ಪಂಡಿತ ಮೋತಿಲಾಲ ನೆಹರುಗಳವರು ತನ್ನ ಅಧ್ಯಕ್ಷ ಭಾಷಣದಲ್ಲಿ 'ಈ ಸಂದರ್ಭದಲ್ಲಿ ನಾವು ಸಾವನ್ನು ಕೂಡ ಪರಿಗಣಿಸದೆ ಸ್ವಾತಂತ್ರ್ಯದ ಸಲುವಾಗಿ ಹೋರಾಡಬೇಕು. ಸ್ವರಾಜ್ಯದ ಸಲುವಾಗಿ ಸಾಯುವದೆ ನಿಜ ವಾದ ಮೃತ್ಯು. ಹಾಗೆ ಸತ್ತವರ ಹೆಸರು ಅಖಂಡವಾಗಿ ಸ್ಥಿರವಾಗಿ ಉಳಿಯುವದು. ಕೋಟ್ಯಾವಧಿ ನಮ್ಮ ಜನರನ್ನು ಕೆಲವೇ ವಿದೇಶಿಯರು ಆಳುವದೆಂದರೆ ನಮಗೆದೇ ಅವಮಾನಕರ. ಆದು ಕಾರಣ ಸ್ವರಾಜ್ಯವನ್ನೇ ನಮ್ಮ ಧ್ಯೇಯವನ್ನಾಗಿ ಇಟ್ಟುಕೊಂಡು ಹೋರಾಡಬೇಕು, ಎಂದು ಮಾತ ನಾಡಿದರು. ಪಂಜಾಬು ಕೌನ್ಸಿಲಿನಲ್ಲಿ ರಾಷ್ಟ್ರೀಯ ಪಕ್ಷದ ಮುಖಂಡರಾದ ಡಾ। ಆಲಮ್‌ರವರು ಹಾರ್ಟಮಂಡು ಕಾಂಗ್ರೆಸ್ ನಿರ್ಣಯವನ್ನು ಅಲ್ಲ ಗಳೆಯುವುದಾದರೆ, ಪಂಜಾಬು ಸತ್ಯಾಗ್ರಹವನ್ನು ಆಚರಿಸಲು ಸಿದ್ಧವಿರು ತ್ತದೆ ಎಂಬ ಠರಾವನ್ನು ಮುಂದಕ್ಕೆ ತಂದರು. ತದನಂತರ ಪಂಡಿತ ಜವಾಹಿರಲಾಲ ನೆಹರುಗಳವರ ಭಾಷಣವಾಯಿತು. ಧೈರ್ಯದಿಂದ ಮಾತ್ರವೇ ಸ್ವರಾಜ್ಯವು ಸಾಧಿಸಲ್ಪಡಲಾರದು; ಅವರು ಎಷ್ಟು ಅಕ್ರಮ ವನ್ನು ಮಾಡಿದರೂ ಸ್ವರಾಜ್ಯವು ಸಿಕ್ಕದು. ಹಾಗೆ ಸಿಕ್ಕುವದಾದರೆ ಮಹಾತ್ಮಾಜಿಯವರೊಬ್ಬರ ಪ್ರಯತ್ನಗಳೇ ಸಾಕಾಗಬಹುದಿತ್ತು. ಸರ್ವರೂ ಒಟ್ಟಾಗಿ, ಕಾಂಗ್ರೆಸಿನವರ ನಿರ್ಣಯವನ್ನು ಒಪ್ಪಿಗೆ ಆಚರಣೆಗೆ ತಂದ ಹೊರತು ದಶಂಬರ ೩೧ರೊಳಗೆ ಸ್ವರಾಜ್ಯವು ದೊರಕುವದೆಂಬುದು ತೀರ ದುರ್ಲಭ. ಮೊದಲಾಗಿ ಸ್ವರಾಜ್ಯವು ಬೇಕಾದುದೇ ಬಡ ಜನರ ಸಲುವಾಗಿ ಅವರ ಬಡತನವನ್ನು ಹೋಗಲಾಡಿಸಬೇಕಾದರೆ ಸ್ವರಾಜ್ಯವೇ ಸಿಕ್ಕಬೇಕು ಎಂಬುದೇ ಅವರ ಭಾಷಣದ ತತ್ವವಾಗಿದ್ದಿತು.

ಅಫಘಾನದ ಗಡಿಬಡಿಗಳು.

ಲಾಹೋರಿನ 'ಜಮೀನ್ದಾರ್' ಎಂಬ ಪತ್ರಿಕೆಯ ಫಾಲ ವಾರ್ತಾ ಹಾರರಿಂದ ಜನರಲ್ ನಾದಿರ್ ಖಾನರು ಕೊಸ್ಟ್ರಾಂತ್ಯದ ಸೇನೆಯವ ರಿಂದ ಕೊಂದುಹಾಕಲ್ಪಟ್ಟರೆಂದು ವಾರ್ತೆಯು ಬಂದಿತು. ಈ ಸುದ್ದಿಯು ಶಿಂತಿಯಂತೆ ಬಹಳ ಬೇಗ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿತು. ಶಾಂತಿಸ್ಥಾಪನೆಗಾಗಿ ಬಂದದ್ದ ನಾದಿರಖಾನರಿಗೇ ಇಂತಹ ಅವಸ್ಥೆಯು ಸಂಭವಿಸಿತಲ್ಲಾ ಎಂದು ಅಫಘಾನದ ಮೇಲೆ ಅಭಿಮಾನ ವುಳ್ಳವರು ಚಿಂತೆಗೊಳಗಾದರು.

ಬಾಚಾ-ಇ-ಸಾಕೋವು ಕಾಬೂಲಿನಲ್ಲಿರುವ ನಾದಿರಖಾನರ ಸ್ವತ್ತು ಗಳನ್ನೂ ಮನೆಗಳನ್ನೂ ಅಪಹರಿಸಬೇಕೆಂದು ಹುಕುಂ ಕೊಟ್ಟನಾಗಿ ಬೇರೊಂದು ವರ್ತಮಾನ. ಕಾಬೂಲನ್ನು ಆಕ್ರಮಿಸುವ ಸಲುವಾಗಿ ಅಮಾ ನುಲ್ಲಾರವರ ಸೈನ್ಯಗಳ ಗಜನಿಯ ಕಡೆಗೆ ನಡೆದಿರುವವಂತೆ.

ಕೊಸ್ಟ್ರಾಂತದ ತುಂಗಲರಿಂದ ಜನರಲ್ ನಾದಿರಖಾನರೂ ಅವರ ಸಹೋದರರೂ ಕೈದುಮಾಡಲ್ಪಟ್ಟರೆಂದು ಬೇರೊಂದು ವರ್ತಮಾನ. ಯಾವ ವರ್ತಮಾನವೂ ಖಂಡಿತವೆಂದು ನಂಬಲು ಸರಿಯಾದ ಆಧಾರ ಗಳಿರುವುದಿಲ್ಲ.

ನಾದಿರಖಾನರು ಕೊಲ್ಲಲ್ಪಟ್ಟರೆಂಬ ವರ್ತಮಾನವು ಸುಳ್ಳು. ಕಾಬೂ ಲಿನಲ್ಲಿ ಅವರನ್ನು ಎದುರುಗೊಳ್ಳುವುದಕ್ಕಾಗಿ ಸರ್ವ ಸನ್ನಾಹಗಳೂ ನಡೆ ದಿದ್ದವು. ಆದರೆ ಅವರು ಕಾಬೂಲಿಗೆ ಬಾರದಿದ್ದುದರಿಂದ ಅವರ ಸ್ವತ್ತು ಗಳು ಅಪಹರಿಸಲ್ಪಡಬೇಕೆಂದು ಅಮೀರರ ಹುಕುಮಾಯಿತು. ಅಫಘಾ ನದ ದಂಗೆಯಲ್ಲಿ ಹೆಚ್ಚು ಭಾಗಿಯಾಗಿದ್ದ ಹಜರತ್ ಸಾಹೇಬರೆಂಬವರು ಈಗ ಅಕಸ್ಮಾತ್ ಕಾಬೂಲಿನಿಂದ ಮಾಯವಾಗಿರುವರು. ಬಾಚಾ-ಇ- ಸಾಕೋವು ತನ್ನ ಕಡೆಗೆ ಸೈನಿಕರನ್ನು ಕೂಡಿಸುತ್ತಾ ಇರುವನು.

ಕಂದಹಾರಿನಿಂದ ದೊರೆಯುವ ಕೊನೆಯ ವರ್ತಮಾನದಿಂದ, ಅಮಾನುಲ್ಲಾರವರ ಬಲವು ಅಲ್ಲಿ ದಿನೇ ದಿನೇ ಅಭಿವೃದ್ಧಿಹೊಂದುತ್ತ ಬರುತ್ತಿರುವದೆಂದು ತಿಳಿಯಬರುತ್ತದೆ. ಹಲವರು ಅವರಿಗೆ ಸಹಾಯ ಮಾಡುವದಾಗಿ ಪ್ರತಿಜ್ಞೆಮಾಡಿರುವರು. ಅವರ ಹೊರತು ಇನ್ನೂ ನಾಲ್ಕೈದು ಸಾವಿರ ಜನರು ಸೇನೆಗೆ ಸೇರಿಸಲ್ಪಟ್ಟಿರುವರು. ರಮ್‌ಜಾನ್ ಮುಗಿದೊಡನೆ ಸೇನೆಗಳ ಚಲನೆಗೆ ಪ್ರಾರಂಭವಾಗುವುದಂತೆ.

ಜನರಲ್ ನಾದಿರಖಾನರು ಕೊಸ್ಟ್ರಾಂತ್ಯವನ್ನು ಪ್ರವೇಶಿಸಿದೊಡನೆ ಅವರಿಗೆ ಉತ್ತಮ ರೀತಿಯ ಸ್ವಾಗತವು ಅರ್ಪಿಸಲ್ಪಟ್ಟಿತು. ಎಲ್ಲಾ ಕಡೆಗಳ ಜನರು ಅವರನ್ನು ಸಂತೋಷದಿಂದ ಎದುರುಗೊಂಡರು. ಅವರು ಕೊಲ್ಲಲ್ಪಟ್ಟರೆಂಬ ವರ್ತಮಾನವು ತೀರಾ ಸುಳ್ಳಾಗಿರುತ್ತದೆ. ಜಲಾಲಾ ಬಾದಿನ ಸಮೀಪದ ಹದ್ದಾ ಎಂಬಲ್ಲಿ ೧೬ನೇ ತಾರೀಕಿನ ದಿನ ಒಂದು ಜಿರ್ಗಾ ಸಭೆಯು ನಡೆಯುದಾಗಿಯೂ ಅದಕ್ಕೆ ಹಾಜರಾಗಬೇಕಾಗಿಯೂ ಅಲ್ಲಿಯ ಉಲೇಮಾರಿಂದ ಬೇರೆ ಬೇರೆ ಕಡೆಗಳ ಉಲೇಮಾರವರಿಗೆ ಆಮಂತ್ರಣ ಪತ್ರಿಕೆಗಳು ಬಂದಿದ್ದವು. ಅಮಾನುಲ್ಲಾರವರು ಪ್ರಾರಂಭಿಸಿದ ಸುಧಾರಣೆಗಳು, ಅವರ ಮತಕ್ಕೆ ವಿರೋಧವಾಗಿಲ್ಲವೆಂದು ಉಲೇಮರು ಮೊದಲೇ ಹಸ್ತಪತ್ರಿಕೆಗಳನ್ನು ಛಾಪಿಸಿ ಪ್ರಕಟಿಸಿದ್ದರು.

ಬರ್ಮಾದಲ್ಲಿ ಮಹಾತ್ಮಾಜೀಯವರು.

ರಂಗೂನಿನಿಂದ ಹೊರಟು ಮಹಾತ್ಮಾಜಿಯವರು ನಾತ್ರೆ ಮಾರ್ಟ ಬಾನಿನ ಕಡೆಗೆ ತೆರಳಿದರು. ರಾತ್ರಿಯಾಗಿದ್ದರೂ ಪ್ರತಿ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದು ಮಹಾತ್ಮಾಜಿಯವರ ದರ್ಶನವನ್ನೊದ್ದು ಪಡೆಯಬೇಕೆಂದು ಬಹು ಉತ್ಸುಕತೆಯಿಂದ ಕಾದಿದ್ದರು. ಥೋಂಗ್ ಎಂಬ ಸ್ಥಳದಲ್ಲಿ ಒಂದು ವಿಶೇಷ ಸಂಗತಿಯು ನಡೆಯಿತು. ಬರ್ಮೀಯ ಹೆಂಗ ಳೆಯರನೇಕರು ಒಟ್ಟಾಗಿ ಮಹಾತ್ಮಾಜಿಯವರಿಗೆ ಪುಷ್ಪಗಳನ್ನರ್ಪಿಸಿ ಅವರ ಪದ್ಧತಿ ಪ್ರಕಾರ ಪ್ರಣಾಮಗಳನ್ನು ಮಾಡಿದರು. ಮಾರ್ಟಬಾನಿನಲ್ಲಿಯೂ ತುಂಬ ಜನರು ನೆರೆದಿದ್ದರು. ಮಳೆಯು ಬರುತ್ತಲಿದ್ದಿತು. ಆದರೂ ಜನರು ಕಡಿಮೆಯಾಗಿರಲಿಲ್ಲ. ಮಾರ್ಟಬಾನಿನಲ್ಲಿ ಮೌಲ್‌ಮೈನ್ ಮುನಿಸಿ ಪಾಲಿಟಿಯ ಚೆಯರ್‌ಮನರು ಅವರನ್ನು ಎದುರುಗೊಂಡು ಮುನಿಸಿಪಾಲಿ ಟಿಯ ಪರವಾಗಿಯೂ ಊರವರ ಪರವಾಗಿಯೂ ಒಂದೆ ಮಾನಪತ್ರವನ್ನು ಮರದ ಕರಡಿಗೆಯಲ್ಲಿಟ್ಟು ಅವರಿಗೆ ಸಮರ್ಪಿಸಿದರು. ಗಾಂಧಿಯವರ ಅಹಿಂಸಾತತ್ವದ ಶ್ರೇಷ್ಠತ್ವ, ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಅವರು ಕೈಕೊಂಡ ಮಹತ್ಕಾರ್ಯ ಇವೇ ಮೊದಲಾದ ವಿಷಯಗಳನ್ನು ಕುರಿತು ಮಾನ ಪತ್ರದಲ್ಲಿ ಚೆನ್ನಾಗಿ ಹೊಗಳಿ ಬರೆದಿದ್ದರು. ಇಷ್ಟು ಮಾತ್ರವಲ್ಲದೆ ಅವರು ಮಾಡಿದ ಎಲ್ಲಾ ಸತ್ಯಾಗ್ರಹಗಳ ಕುರಿತಾಗಿಯೂ ದೇಶಸೇವೆಯ ಕುರಿ ತಾಗಿಯೂ ಮಾನಪತ್ರದಲ್ಲಿ ಉಲ್ಲೇಖಿಸಿದ್ದರು. ಮಹಾತ್ಮಾಜಿಯವರು ನೆರೆದವರಿಗೆ ಕೃತಜ್ಞತೆಯನ್ನು ಸೂಚಿಸಿ, ೧೯೧೫ನೇ ಇಸವಿಯಲ್ಲಿ ತಾನು ಮೌಲ್‌ಮೈನನ್ನು ಸಂದರ್ಶಿಸಿದ್ದೆನೆಂದು ಹೇಳಿದರು. ಮಾನಪತ್ರದ ಸಮ ರ್ಪಣೆಯಾದ ತರುವಾಯ ಅಸಂಖ್ಯಾತ ಬರ್ಮೀಯ ಹೆಂಗಸರು ಎದುರಿಗೆ ಬಂದು ಅವರಿಗೆ ಪುಷ್ಪಾದಿಗಳನ್ನು ಸಮರ್ಪಿಸಿದರು. ತದನಂತರ ಗಾಂಧಿ ಜಿಯವರು ಮೋಟಾರುಕಾರಿನಲ್ಲಿ ಮುನಿಸಿಪಾಲಿಟಿಯ ಪ್ರಸಿಡೆಂಟರೊಂದಿಗೆ ಊರನ್ನು ಸಂದರ್ಶಿಸಿದರು. ಮಳೆಯು ಚೆನ್ನಾಗಿ ಬರುತ್ತಿ ದ್ದರೂ ಮೋಟಾರುಕಾರಿನ ಹಿಂದೆ ಜನರು ಗುಂಪುಗುಂಪಾಗಿ ಹೋಗುತ್ತಿ ದ್ದರು. ಕೊನೆಗವರು ಡಾ। ಪಿ. ಜೆ. ಮೇಥ್ಯೂರವರ ನಿವಾಸದಲ್ಲಿ ಉಳಕೊಂಡರು.

ಮರುದಿನ ಬೆಳಿಗ್ಗೆ ಊರವರ ಮಾನಪತ್ರಕ್ಕಾಗಿ ತನ್ನ ಉತ್ತರವನ್ನು ಭಾಷಣರೂಪವಾಗಿ ಕೊಟ್ಟರು. ಬುದ್ಧನ ತತ್ವಗಳನ್ನು ಹೊಗಳಿದರು. ತತ್ವದ ಮೇಲೆ ಅತಿಶಯ ಪ್ರೇಮವಿರುವುದರಿಂದ ಅಹಿಂಸೆಯನ್ನು ಆಚರಿಸ ಬೇಕಾಗುವದೆಂದೂ, ದೇವರನ್ನು ಸಮೀಪಿಸಬೇಕಾದರೆ ಅಹಿಂಸೆಯನ್ನು ಆಚರಿಸಬೇಕೆಂದೂ ವಿವರವಾದ ಭಾಷಣವನ್ನು ಮಾಡಿದರು. ಸಾಯಂ ಕಾಲ ಅವರು ಶಾಲೆಗಳನ್ನು ಸಂದರ್ಶಿಸಿದರು. ಹೋದಲ್ಲೆಲ್ಲ ಅವರಿಗೆ ಮಾನಪತ್ರಗಳು ಸಮರ್ಪಿಸಲ್ಪಟ್ಟವು. ಗುಜರಾತಿ ಶಾಲೆಯನ್ನು ಸಂದ ರ್ಶಿಸಿ ಸ್ವರಾಜ್ಯನಿಧಿಗೆ ಗುಜರಾತಿಗಳು ಸಹಾಯಮಾಡಬೇಕೆಂದು ಕೇಳಿ ಕೊಂಡರು. ೭೦೦೦ ರೂಪಾಯಿ ಕೊಡುವದಾಗಿ ನೆರೆದಿದ್ದವರು ವಾಗ್ದಾನ ಮಾಡಿದರು. ಹೆಂಗಸರ ಪ್ರತಿನಿಧಿಗಳ ಸಭೆಗೂ ಗಾಂಧಿಜಿಯವರು ಹೋಗಿ ದ್ದರು. ಅವರಿಗೆ ಅಲ್ಲಿ ೫೫೦ ರೂಪಾಯಿಗಳು ಕೊಡಲ್ಪಟ್ಟವು.

ಸಿನೇಮಾ ಫಿಲ್ಮುಗಳಿಂದ ಸಮಾಜಶಿಕ್ಷಣ.

ರಷ್ಯಾದೇಶದಲ್ಲಿ ಸಿನೆಮಾ ಫಿಲ್ಮುಗಳ ಮೂಲಕ ಸಮಾಜದ ಜನರ ಶಿಕ್ಷಣೆಯಾಗುವ ತೆರದಲ್ಲಿ ಪ್ರಯತ್ನಿಸುತ್ತಾರೆ. ಪ್ರತಿಯೊಂದು ಫಿಲ್ಮಿನಲ್ಲಿಯೂ ಶಿಕ್ಷಣೆಗೆ ಸಂಬಂಧವಾದ ವಿಷಯಗಳು ಇದ್ದೇ ಇರುವವು. ಅವರು ಫಿಲ್ಮುಗಳನ್ನು ತಯಾರಿಸಲು ಕಥೆಯನ್ನು ಹುಡುಕುವ ಕ್ರಮವು ಈ ರೀತಿಯಾಗಿರುತ್ತದೆ—

ಮೊದಲಾಗಿ ಒಂದು ಸಭೆಯು ಜರಗಬೇಕೆಂದು ನಿಶ್ಚಯಿಸಲ್ಪಡು ವದು. ಚಿತ್ರ ತಯಾರಿಸುವವರು, ಫೋಟೋಗ್ರಾಫರರು, ಕಥೆ ಬರೆಯು ವವರು, ಕೆಲಸಗಾರರು, ಇನ್ನು ರೈತರು, ಕೆಲವು ಸರಕಾರಿ ಉದ್ಯೋಗಸ್ಥರೂ ಈ ಸಭೆಯಲ್ಲಿ ಭಾಗ ವಹಿಸುವರು. ಮಧ್ಯದಲ್ಲಿ ಒಂದು ದೊಡ್ಡ ಮೇಜ ಯನ್ನಿಟ್ಟು ಸುತ್ತಲೂ ಕೂಡಿದವರು ಕುಳಿತುಕೊಳ್ಳುವರು. ಅಲ್ಲಿ ಚಾ ಮೊದಲಾದವುಗಳನ್ನು ಕುಡಿಯುತ್ತಾ ಯಾವ ಕಥೆಯನ್ನು ಆರಿಸಬೇಕು ಎಂಬುದರ ಬಗ್ಗೆ ಅವರೊಳಗೆ ಚರ್ಚೆಯು ನಡೆಯುವದು. ಬೇರೆ ಬೇರೆ ಜನರು ಬೇರೆ ಬೇರೆ ತರದ ವಿಷಯಗಳನ್ನು ಸೂಚಿಸುವರು. ಬಹಳ ಸಮಯದ ವರೆಗೆ ಚರ್ಚೆಯು ನಡೆಯುವದು. ಕೊನೆಗೆ ಅವರಲ್ಲಿ ಥಕ್ಕನೆ ಒಬ್ಬ ಕೆಲಸಗಾರನು ಎದ್ದುನಿಂತು ತಾನು ಚಾ ಕುಡಿಯುವ ತಟ್ಟೆ ಯನ್ನು ನೋಡಿ 'ಈ ಕುಪ್ಪಿಯ ತಟ್ಟೆಯನ್ನು ಹೇಗೆ ಮಾಡಿದರು? ಅದನ್ನು ಚಿತ್ರಗಳಮೂಲಕ ಪ್ರದರ್ಶಿಸಬೇಕು' ಎನ್ನುವನು. ಒಡನೆಯೇ ಎಲ್ಲವ ರಿಗೂ ಈ ಆಲೋಚನೆಯು ಸಮಂಜಸವೆಂದು ತೋರಿ, ಅವರೆಲ್ಲರೂ ಕುಪ್ಪಿಯ ತಟ್ಟೆ ಮೊದಲಾದವುಗಳನ್ನು ತಯಾರಿಸುವ ಕಾರಖಾನೆಯವರಲ್ಲಿಗೆ ತೆರಳುವರು. ಅಲ್ಲಿ ನಡೆಯುವ ಕೆಲಸಗಳ ಫಿಲ್ಮು ತಯಾರಿಸಲು ಎಲ್ಲಾ ಸನ್ನಾಹಗಳು ಮಾಡಲ್ಪಡುವವು. ಇದೇ ಕಾರಖಾನೆ, ಕಾರಖಾನೆಯಲ್ಲಿ ನಡೆಯುವ ವಿವಿಧ ಕೆಲಸಗಳು, ಕುಪ್ಪಿಯನ್ನು ಕರಗಿಸಿ ಬೇರೆ ಬೇರೆ ಆಕಾ ರಕ್ಕೆ ತರುವ ವಿಧ ಇವುಗಳೆಲ್ಲವೂ ಕೂಡಿರುವ ಒಂದು ಫಿಲ್ಮು ಬಹು ಶೀಘ್ರವಾಗಿಯೇ ತಯಾರಿಸಲ್ಪಡುವದು. ಈ ಚಿತ್ರವು ಕೊನೆಗೆ ಎಲ್ಲ ಕಡೆ ಗಳಲ್ಲಿಯೂ ಪ್ರದರ್ಶಿಸಲ್ಪಡುವದು. ಕುಪ್ಪಿ ತಯಾರಿಸುವದರ ವಿಷಯ ದಲ್ಲಿ ಮಾತ್ರ ಚಿತ್ರ ತೆಗೆವುದಲ್ಲ. ಹೀಗೆಯೆ ಹಲವು ಬಗೆಯ ಕಾರಖಾನೆ ಗಳಲ್ಲಿ ನಡೆಯುವ ಕಾರ್ಯಕಲಾಪಗಳ ಫಿಲ್ಮುಗಳು ತಯಾರಿಸಲ್ಪಡುವವು. ಇಂತಹ ಫಿಲ್ಮುಗಳನ್ನು ತಯಾರಿಸುವದರಿಂದ ಈ ವಿಷಯಗಳಲ್ಲಿ ಯಾವ ಅರಿವೂ ಇಲ್ಲದ ಮನುಷ್ಯನಿಗೆ ಚೆನ್ನಾಗಿ ಈ ವಿಷಯಗಳು ತಿಳಿಯುವವು.

ಪ್ರಕಟಣೆ.

ಮಂಗಳೂರಲ್ಲಿ 1928ನೇ ಇಸವಿ ಮೇ ೬ ತಿಂಗಳಲ್ಲಿ ಜರು ಗಿದ ಚತುರ್ಥ ಕರ್ನಾಟಕ ಪ್ರಾಂತಿಕ ಆಯುರ್ವೇದೀಯ ಸಮ್ಮೇಳನ ಮತ್ತು ಪ್ರದರ್ಶನಗಳ ಬಗ್ಗೆ ರೂಪಾಯಿ 5-0-0 ಯಷ್ಟು ಅದಕ್ಕಿಂತ ಹೆಚ್ಚಿಗೆ ಮೊಬಲಗನ್ನು ವಂತಿಗೆಯಾಗಿ ಕೊಟ್ಟಿರುವ ಪ್ರತಿನಿಧಿ ಕನ್ನಡಾ ಜಿಲ್ಲೆಯ ಸಮಸ್ತರಿಗೆ. ಈ ಮೂಲಕ ತಿಳಿ ಸುವದೇನೆಂದರೆ—

ಕೆಳಗೆ ಕಾಣಿಸುವ ವಿಷಯಗಳನ್ನು ಕುರಿತಾಗಿ ಪರ್ಯಾ ಲೋಚನೆ ಮಾಡಲು ಮೇಲ್ಕಂಡ ಸಮ್ಮೇಳನ ಪ್ರದರ್ಶನಗಳ ಸ್ವಾಗತ ಮಂಡಲದ ಒಂದು ಅಧಿವೇಶನವು ಇದೇ ಮಾರ್ಚ ತಾ. ೨೪ನೇ ರವಿವಾರ ಹಗಲು ಘಂಟೆ ೮-೩೦ಕ್ಕೆ ಮಂಗಳೂರು ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರುವದು. ಆ ಪ್ರಕಾರ ಕೂಡುವ ಸಭೆಯಲ್ಲಿ ಕೂಡಿ ಆ ಸಭೆಯ ಪರ್ಯಾಲೋಚನೆಗೆ ಬರಲಾಗುವ ವಿಷಯಗಳು.—

1. ಸ್ವಾಗತ ಮಂಡಲದ ಕಾರ್ಯನಿರ್ವಾಹಕ ಸಮಿತಿಯು ಬರೆದ, ಸದರಿ ಸಮ್ಮೇಳನ ಪ್ರದರ್ಶನಗಳ ಮತ್ತು ಅವುಗಳಿಗೆ ಸಂಬಂಧಪಟ್ಟ ಕಾರ್ಯವೃತ್ತಾಂತವನ್ನು ಪರ್ಯಾ ಲೋಚಿಸುವದು.

2. ಲೆಕ್ಕ ಪತ್ರಗಳ ತನಿಖೆಯಾಗಿರುವ ಲೆಕ್ಕ ಪರಿಶೋಧ ಕರು ಬರೆದ ತಖ್ತೆಯು ಮಾರ ಸ್ಟೇಟ್‌ಮೆಂಟನ್ನು ಪರ್ಯಾಲೋಚಿ ಸುವದು.

3. ಶಿಲ್ಕು ಮೊಬಲಗಿನ ವಿನಿಯೋಗ ವ್ಯವಸ್ಥೆ ಮಾಡು ವದು.

4. ಸದರಿ ಸಮ್ಮೇಳನ ಪ್ರದರ್ಶನಗಳಿಗೆ ಸಂಬಂಧ ಪಟ್ಟಿರುವದಾಗಿ ಸಭೆಯ ಮುಂದೆ ಬರುವ ಇತರ ಚಿಲ್ಲರೆ ವಿಷ ಯಗಳು.

5. ಸ್ವಾಗತ ಮಂಡಲ ವ ಕಾರ್ಯನಿರ್ವಾಹಕ ಮಂಡಲಗಳನ್ನು ಮುಕ್ತಾಯಗೊಳಿಸುವದು.

N. M. Shetty, B. R. Haridas.

ಗೌರವ ಕಾರ್ಯದರ್ಶಿಗಳು.



Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,

MANGALORE

[illegible] Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯುವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಸುಪ್ರಸಿದ್ಧ ಧರ್ಮಸ್ಥಳ [illegible] 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಮಂಜೇಶ್ವರ, [illegible] ಗೋಕರ್ಣ, [illegible] ಕನ್ನನ್ನೂರು [illegible] ಅದೇ ದಿನವೇ ತೊಂದರೆ ಇಲ್ಲದೆ ಸುಲಭವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ [illegible] 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಬಿಡದೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಬಿಜಾಪೂರ್ ಗೋವಾ, ಬೆಳಗಾಂವ್, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರಿಯ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮ್ಯಾನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಜೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಂತವರು ಪ್ರತಿದಿನವೂ ಮುಂಜಾನೆ [illegible] ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 [illegible] ಪ್ರಸಿದ್ಧವಾದ [illegible]

[illegible]

ಪ್ರತಿಮೆಯನ್ನು ನೋಡಲು [illegible] ಬಸ್ಸುಗಳು [illegible] ಹೊರಟು ಮೂರೇ ತಾಸುಗಳ [illegible] ಕಾರ್ಕಳಕ್ಕೆ ತಲುಪುವವು.

[illegible] ದೇವಾಲಯ

[illegible] ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

ಸುಬ್ರಹ್ಮಣ್ಯಕ್ಕೆ ಹೋಗ[illegible] ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

[illegible] ಶಂಕರಾಚಾರ್ಯರ [illegible] ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ [illegible] ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

[illegible] ದೇವಸ್ಥಾನದಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

ಮಲೇರಿಯಾನ

ಸರ್ವಜ್ವರಸಂಹಾರಿಣಿ

ಯುವಕರ ವಿದ್ಯಾರ್ಥಿಯು ಲಕ್ಷ್ಯಕ್ಕೆ ತಕೊಳ್ಳಬಾರದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಇಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ ತೇರ್ಗಡೆಹೊಂದಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿ ಬಲವಾಗಿಯೂ ಇರಬೇಕು. ಕಂಪೆನಿಯ ಸಿರಪ್ ನಾಲಿಸವನ ಎಂಬ ಅವ್ಯಕವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ಕಲಿಯಲಿಕ್ಕೆ ಬಹಳೊಂದು ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಬಿಸಿಯಾಗಿ ತಲೆ ಸಿಡಿತ, ಕಣ್ಣು ನೋವು, ದೃಷ್ಟಿಮಾಂದ್ಯ, ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಅವಸ್ಥೆ ರೋಗಗಳು ಪರಿಹಾರವಾಗುವಂತೆಯೂ ಅಥವಾ ಅಂಥಾ ಅವಸ್ಥೆ ರೋಗಗಳು ಹುಟ್ಟದಂತೆಯೂ ಅಪ್ಲೆಕಟ್ಟಿನ ಪಿಕ್ಸ್ ಕ ಮನ [illegible] ತೈಲದ ಉಪಯೋಗವು ಬಹು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ನಿದ್ರೆ ಕೆಡುವ ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಶ್ರೇಷ್ಠ ಕಾಲದಲ್ಲಿ ಯುಕ್ತ ರೀತಿ ಅನುಸರಿಸುವದು, [illegible] ಯುವಕರ ಬುದ್ಧಿವಂತಿಕೆಯಾಗಿದೆ

ಕ್ರಯ 8 ಔನ್ಸಿಗೆ ರೂ. [illegible]

ವಿಶೇಷ ಮಾಹಿತಿಗೂ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, [illegible] ಮತ್ತು ಹೋಮಿಯೋಪತಿ ಮದ್ದುಗಳಿಗೂ ನಮೂನೆ [illegible] ಕೆಳಗಿನ ಎಡ್ರೆಸಿಗೆ ಬರೆಯಿರಿ.

ಮಲೇರಿಯಾನ ಕಂಪೆನಿ,

ಮಂಗಳೂರು

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮಂಗಳ ಕಸಿಗಳೂ, ಸಪ್ಪೋಟಿಲ್ಲಾ, ಪೇರಳೆ, ಚಿಕ್ಕಳೆ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವವು, ಗಿಡಗಳು ನಮ್ಮಲ್ಲಿ ಬೇಕಾದವು ಕಸಿಗಳಿಂದ ಮಾಡಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಬೇಗನೆ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗದೆ ಸರಿಯಾಗಿ ಫಲಬಿಡುವದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು ಕಾರ್ ಸ್ಟ್ರೀಟ್ ಸೋಮವಾರದಲ್ಲಿ ದೊರೆಯುವವು.

ಕೆ. ಮಧ್ವಪ್ಪ ಶೆಟ್ಟಿ, ದಿ. ಕೆನರಾ ನರ್ಸರಿ, [illegible], 13-1-928	ಕೆ. ವಾಮನ ಶೆಣೈ C/o ಶಾರದಾ ಫಾರ್ಮಸಿ, ರಥಬೀದಿ, ಮಂಗಳೂರು. ದ. ಕ.

THE COMMONWEALTH ASSURANCE CO., LIMITED, POONA CITY

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ,

ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂತಹ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಅನಸ್ಥಿತ, ಪ್ರಸಿದ್ಧರೂ ಆದ ಡೈರೆಕ್ಟರರು.

3 ಹಿಂದಿನ ಅನುಭವದ ವೈದ್ಯಾಧಿಕಾರಿ, ದಿವಾಣನು ಮತ್ತು ಸೌಹಾರ್ದ ಅಧಿಕಾರಿ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಶರ್ತುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ನಂಬಿಗಸ್ಥ ಮತ್ತು ಚಾರಿತ್ರವುಳ್ಳ ಏಜಂಟರುಗಳು ಬೇಕಾಗಿರುವರು.

ಪ್ರಾಸ್ಪೆಕ್ಟಸಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, ಸ್ಪೆಶಿಯಲ್ ಏಜಂಟ್, ಪತ್ರಕೃತ್ ಗ್ರಾಮ, ಬೆಳ್ತಂಗಡಿ ತಾಲ್ಲೂಕು, ದ. ಕ.	ಅಥವಾ	ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪೆನಿ, ಮ್ಯಾನೇಜಿಂಗ್ ಏಜಂಟ್ಸ್.

ಅತ್ಯಾಶ್ಚರ್ಯ! ಜ್ಯೋತಿಶ್ಶಾಸ್ತ್ರಾಧಾರದಿಂದ ಅತ್ಯದ್ಭುತ!!

ಮಹಾತ್ಮಾ ಗಾಂಧಿಜೀಯವರ ಬಂಧವಿಮೋಚನೆಯನ್ನು ನಿರ್ಣಯಿಸಿದುದು.

ನಿಮ್ಮ ಭವಿಷ್ಯವನ್ನು ತಿಳಿಯಲಿಚ್ಛೆಯಿದೆಯೆ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ. ಪ್ರತಿ ತಿಂಗಳ ಕೂಲಂಕುಷ ವಿಚಾರವುಳ್ಳ ಒಂದು ವರ್ಷದ ಜಾತಕ ಫಲ ರೂ. ೨. ಐದು ವರ್ಷದ ಫಲ ರೂ. ೭॥. ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲಾ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣಾದಿ ತಾಯಿತಕ್ಕೆ ಕ್ರಯ ರೂ. ೨. ನಿಮಗಾಗಿಯೆ ಬೇರೆ ಜಾದಾ ತಾಯಿತ ಯಂತ್ರಕ್ಕೆ ರೂ. ೫. ಯಾವ ಉದ್ದೇಶಕ್ಕಾಗಿ ಈ ಯಂತ್ರವೆಂದು ತಿಳಿಸಬೇಕು. ಟಪ್ಪಾಲು ಖರ್ಚು ಪ್ರತ್ಯೇಕವಿದೆ.

ಇಂಗ್ಲಿಷಿನಲ್ಲಿ ಮಾತ್ರವೇ ಪತ್ರವ್ಯವಹಾರ ನಡೆಯಿಸತಕ್ಕದ್ದು.

ಆಂಧ್ರ ಪತ್ರಿಕೆ—(ತೆಲುಗು ದೈನಿಕ ಪತ್ರಿಕೆ) ಮದ್ರಾಸು. ತಾ. ೮—೧—1921ರಲ್ಲಿ [illegible] ಹನುಮಾನ್ ಜ್ಯೋತಿಷಾಲಯದ ಹನುಮದುಪಾಸಿ ವಿ. ಕೆ. ಶತಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. [illegible] 1923ರ [illegible] 1924ನೇ [illegible] ತಾ. 5ರಲ್ಲಿ ಬೆಳಗ್ಗೆ 7 ಗಂಟೆಗೆ [illegible] ನಾವು [illegible] ಮಾಡುತ್ತೇವೆ.

ಸ್ವದೇಶ ಮಿತ್ರನ್—(ತಮಿಳು ಪತ್ರಿಕೆಗಳಲ್ಲಿ ಮೊದಲನೆಯದು)—ಜ್ಯೋತಿಶ್ಶಾಸ್ತ್ರ [illegible] ವಿ. ಕೆ. ಶತಗೋಪಾಚಾರ್ಯರು ಮಹಾತ್ಮಾ ಗಾಂಧಿಯವರ ಬಿಡುಗಡೆಯ ವಿಷಯವಾಗಿ [illegible] ಭವಿಷ್ಯವನ್ನು ಪ್ರಕಟಿಸಿದುದನ್ನು [illegible] ಈ ಆಚಾರ್ಯರನ್ನು ಅವರ ಜ್ಯೋತಿಷ್ಯಾನುಭವಗಳಿಗಾಗಿ ನಾವು ಹೃತ್ಪೂರ್ವಕವಾಗಿ ವಂದಿಸುತ್ತೇವೆ.

ಶ್ರೀನಿವಾಸ ಭಾಗವತಸ್ವಾಮಿ—ಬಿ. ಎಸ್ಸ್. [illegible] ಇವರು ಬರೆಯುವುದು—ಸಂವತ್ಸರ ಫಲವನ್ನು ತಾವು ಬರೆದುಕೊಟ್ಟುದನ್ನು ನೋಡಿ [illegible] ನಿಮ್ಮ ಭವಿಷ್ಯ [illegible] ಜ್ಯೋತಿಶ್ಶಾಸ್ತ್ರದಲ್ಲಿ ನಿಮ್ಮ ಚತುರತೆ [illegible] ನೀವೇನೋ ದೇವತೆಯಂತೆ [illegible] ನಿಮ್ಮ [illegible] ಯಥಾರ್ಥವು.

V. K. SATAGOPACHARIAR,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶತಗೋಪಾಚಾರ್ಯರ್.
ಹನುಮಾನ್ ಎಸ್ಟ್ರೋಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲಾ,
ಮದ್ರಾಸು ಸಂಸ್ಥಾನ.

152

COFFEE!

— THE UNIVERSAL DRINK !! —

THE STANDARD OF

PURITY & QUALITY!!!

HIGHEST AWARDS AT VARIOUS EXHIBITIONS

GOLD MEDAL 1917 GOLD MEDAL 1927

Manufactured by :

'GIRI COFFEE WORKS'

Write for quotations to Proprietors :—

Messrs. M. LACHIA SETTY & SONS

COFFEE GROWERS AND MANUFACTURERS

CHIKMAGALUR
(MYSORE STATE)

T.A. : "LACHIASETTY"

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು,



[illegible]

ಗುಲಾಮಹುಸೇನ್ ಆಲಿಭಾಯಿ ಎಂಡ್ ಸನ್ಸ್,
[illegible]
ಇಂಡಿಯಾದಲ್ಲಿ ಎಲ್ಲರಲ್ಲಿ ಅತಿ ಸುಲಭ ಬೆಲೆ;
210, ಅಬ್ದುಲ್ ರಹಿಮಾನ್ ಸ್ಟ್ರೀಟ್, ಮುಂಬಾಯಿ.

ತ್ವರೆಮಾಡಿರಿ, ತ್ವರೆಮಾಡಿರಿ,

ಬಾಲಾ ಹುಡುಗರಿಗೂ, ಹಿತರರಿಗೂ ಬೇಕಾಗುವಂತಹ ವಿಧವಿಧದ ಆಟಿಕೆಗೆ, ಮತ್ತು ಸಾಬೂನುಗಳನ್ನು [illegible] ಬಾಟಲಿಗಳೂ, ಹೊಸತಾಗಿ ತಂದಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು.

[illegible]

AYURVEDIC PHYSICIANS

[illegible] MANGALORE, S. KANARA.

([illegible] ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ [illegible] ಗಳು.)

1. [illegible] ಮತ್ತು ಮಾತ್ರೆ—

[illegible] ಮತ್ತು ದೋಷಗಳು, ಕುಕುಸ್ಮಾವಟಿ ಹೆಚ್ಚು [illegible], [illegible], ಸೊಂಟನೋವು, ಸಂತಾನ ಹೀನತೆ, [illegible], ಮೂತ್ರಕೃಚ್ಛ್ರ, ಬಿಳಿಸೆರಗು, ರಕ್ತಹೀನತೆ, [illegible] ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು [illegible] ದಿನಗಳಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಿಕ ಆರೋಗ್ಯವನ್ನು ಕೊಟ್ಟು, ಅವರ ಮನೋಭಿಲಾಷೆಯನ್ನು ಪೂರ್ತಿಸುವದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣೀ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಕ್ಷಣಮಾತ್ರದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಜಾ, ನಿಮೋನಿಯಾ, ಒಂದು ಎರಡು ದಿನ ಬಿಟ್ಟುಬರುವ ಜ್ವರ, ಚಾತುರ್ಥಿಕ ಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ಕಂಧದ ವಟೆ, ಬಾಲಗ್ರಹ ಗುಟಿಕೆ, ಶ್ವಾಸಕಾಸ ಗುಟಿಕೆ, ಇಚ್ಛಾಬೇಧಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜೆಸಿಯನ್ಸ್, ರಥಬೀದಿ, ಮಂಗಳೂರು

ADVERTISE IN OUR WEEKLY.

To Reach the Hearths & Homes

OF INDIA'S MASSES

For Particulars Apply to

The Manager,

SWADESHABHIMANI.

MANGALORE.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

ಫೆರ‍್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೇಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಉಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,

ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡ.

[illegible]

... ಅವರ ಆರೋಗ್ಯದ ವಿಷಯವಾಗಿ ಜಾಗ್ರತೆಯನ್ನು [illegible] ಕೆಲಸಗಳನ್ನು ಮನೆಯೊಳಗೆ ಕಟ್ಟುವದು, ಅವರ [illegible] ಹಳ್ಳಿಯೇ ಇನ್ನು ಕೊಳಕು ದುರ್ಗಂಧ ಅದರಿಂದ [illegible] ಅಂತಹ ಸ್ಥಳದಲ್ಲಿಯೇ ರೋಗದ ಅಣುಗಳು ಉದ್ಭವಿಸುವವು. ಇದರಿಂದಲೇ ಹಳ್ಳಿಯ ಜನರ ಆರೋಗ್ಯವು ಕೆಟ್ಟುಹೋಗುವದು. ಹಳ್ಳಿಯವರ ಆರೋಗ್ಯವು ಕೆಡುವುದರಿಂದ [illegible]. ವಿದ್ಯಾರ್ಥಿಗಳೇ ಈ ಸಂದರ್ಭಗಳಲ್ಲಿ ಮನಃಪೂರ್ವಕ [illegible] ಹಳ್ಳಿಯವರಿಗೆ ಅವುಗಳಿಂದಾಗುವ ಕೆಡುಕುಗಳನ್ನು ವಿವರಿಸಿ ಹೇಳಿ, ಅವರು ಆರೋಗ್ಯದ ವಿಷಯ ಜಾಗರೂಕರಾಗಿರುವಂತೆ ಅವರಿಗೆ ಬೋಧಿಸಬೇಕು. ರಜಾ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ ಹಳ್ಳಿಗಳಿಗೆ ಹೋಗಿದ್ದಾಗ ಹಳ್ಳಿಯವರಿಗೆ ಬೋಧಿಸಲು ಸಿಕ್ಕುವ ಸುಸಂದರ್ಭವನ್ನು ಅವರು ಕಳಕೊಳ್ಳಬಾರದು.

ವಿದ್ಯಾರ್ಥಿಯವರಿಂದ ಹಳ್ಳಿಯ ಜನರಿಗೆ ಎರಡನೆಯ ಪ್ರಯೋಜನವಾಗಲಿದೆ. ದನಕರುಗಳ ಸೆಗಣಿ ಮೊದಲಾದವುಗಳು ಉತ್ತಮ ಗೊಬ್ಬರಗಳಾಗಿರುತ್ತವೆ. ಹಳ್ಳಿಯ ಜನರು ಮನೆಯ ಹಿಂದೆಯೇ ಒಂದು ಹೊಂಡವನ್ನು ಅಗೆದು ಒಣಗಿದ ಸೆಗಣಿ ಮೊದಲಾದವುಗಳನ್ನು ಅದರಲ್ಲಿ ಸಂಗ್ರಹಿಸಿಡುವದಿದೆ. ಆ ಹೊಂಡವು ವಿಶಾಲವಾದ ಸ್ಥಳದಲ್ಲಿದ್ದು ಸೂರ್ಯನಿಗೆ ಎದುರಾಗಿರುತ್ತದೆ. ಆದರೆ ಸೂರ್ಯರಶ್ಮಿಯು ಆ ಗೊಬ್ಬರದ ಸಾರವುಳ್ಳ ಅಂಶಗಳನ್ನು ಹೀರುವದೆಂಬುದನ್ನು ಅವರು ತಿಳಿದಿಲ್ಲ. ವಿದ್ಯಾರ್ಥಿಗಳಿಗೆ ಇದು ತಿಳಿದಿರಬೇಕು. ಅವರು ಈ ಸಂಗತಿಯನ್ನು ಹಳ್ಳಿಯ ಜನರಿಗೆ ತಿಳಿಸಬೇಕು. ಗೊಬ್ಬರವನ್ನು ಸಂಗ್ರಹಿಸುವ ಹೊಂಡದ ಮೇಲೆ ಮಾಡನ್ನು ಕಟ್ಟುವಂತೆಯೂ, ಆರೋಗ್ಯ ರಕ್ಷಣೆಯ ಸಲುವಾಗಿ ಅಂತಹ ಹೊಂಡವನ್ನು ಮನೆಯಿಂದ ಸಾಕಷ್ಟು ದೂರ ಸ್ಥಳದಲ್ಲಿ ತೋಡಬೇಕೆಂಬುದನ್ನೂ ವಿದ್ಯಾರ್ಥಿಯವರು ಹಳ್ಳಿಯವರಿಗೆ ಹೇಳಬೇಕಾದ ಕೆಲಸವಾಗಿದೆ. ಮನೆ ಹೆಂಗಸರು ಮನೆ ಸೆಗಣಿಯಿಂದ ಬೆರಣಿಗಳನ್ನು ಮಾಡಿ ಒಲೆಯುರಿಸುವರು. ಆದರೆ ಅದೇ ಸೆಗಣಿಯನ್ನು ಗೊಬ್ಬರಕ್ಕಾಗಿ ಉಪಯೋಗಿಸಿದರೆ ಒಳ್ಳೆಯ ಬೆಳೆಯನ್ನು ಬೆಳಸಲು ಅನುಕೂಲವಾಗಿ ನಮಗೆ ಕೊಡಬಲ್ಲಿದೆ [illegible] ಹೀಗೆ ಮಾಡಲು ಹೇಳುವುದೂ ವಿದ್ಯಾರ್ಥಿಗಳ ಕೆಲಸವಾಗಿದೆ.

ಹೆಚ್ಚಾಗಿ ಹಳ್ಳಿಯ ಹುಡುಗರು ಶಾಲೆಗಳಿಗೆ ಕಳುಹಲ್ಪಡುವುದಿಲ್ಲ. ಹಳ್ಳಿಯ ಹುಡುಗರು ದೊಡ್ಡವರುಗಳಲ್ಲಿ ಅನೇಕರು ವೇಳೆಯನ್ನು ಹಾಳು ಮಾಡಿ ತಿರುಗುತ್ತಿರುವರು. ಮಕ್ಕಳು ವಿದ್ಯೆಕಲಿತರೆ ಅವರಿಂದ ತಮ್ಮ ಕೌಟುಂಬಿಕ ಉದ್ಯೋಗಗಳಿಗೆ ತೊಂದರೆಯಾಗುವದೆಂದು ಹೆತ್ತವರು ನೆನಸುವರು. ಆದರೆ ವಿದ್ಯೆ ಕಲಿಯುವುದರಿಂದ ಕೃಷಿಯ ಅಭಿವೃದ್ಧಿಯನ್ನು ಮಾಡಬಹುದೆಂದೂ, ಸಹಕಾರಿ ಸಂಘಗಳಿಗೆ ಸೇರಿ ಹಣ ಉಳಿಸಿ ಉತ್ತಮರೀತಿಯ ಕೃಷಿಯೋ, ವ್ಯಾಪಾರವನ್ನೋ ಮಾಡಬಹುದೆಂದೂ ಅವುದರ ಪ್ರಯೋಜನ ಹೊಂದಬಹುದೆಂದೂ, ವಿದ್ಯಾರ್ಥಿಗಳು ಹಳ್ಳಿಯ ಜನರಿಗೆ ವಿವರಿಸಿ ಹೇಳಬೇಕು. ಒಮ್ಮೆಗೆ ಹಳ್ಳಿಯ ಹುಡುಗರು ಶಾಲೆಗೆ ಕಳುಹಲ್ಪಟ್ಟರೂ, ಅಕ್ಷರ ಮಾಲೆಯನ್ನು ತಿಳಿದು ಕಲಿಯುವ ಮೊದಲೇ ಅವರನ್ನು ಶಾಲೆಯಿಂದ ಬಿಡಿಸುವರು. ಶಾಲೆಗೆ ಬರಲು ತಕ್ಕವರ ಅಭಿವೃದ್ಧಿಗಾಗಿ ಹೇಳಿದ ಹಣ ಖರ್ಚು ಮಾಡಿ ಶಾಲೆಗಳನ್ನು ಕಟ್ಟಿದರೂ, ಅವರ ಕಾರ್ಯಗಳಿಗೆ ಭಂಗವನ್ನು ಮಾಡಿದಂತಾಗುವುದು. ಆದಕಾರಣ ವಿದ್ಯಾವಿಹೀನತೆಯ ದುಷ್ಪರಿಣಾಮವನ್ನು ಅವುಗಳ [illegible] ಅವು ಹಳ್ಳಿಯವರ ಮನಸ್ಸಿಗೆ ಸರಿಯಾಗಿ ನಾಟುವಂತೆ ಮಾಡುವುದು ವಿದ್ಯಾರ್ಥಿಗಳ ಕರ್ತವ್ಯ.

ವಿದ್ಯಾರ್ಥಿಗಳು ಮಾಡಬೇಕಾದ ಇನ್ನೊಂದು ಮಹತ್ಕಾರ್ಯವೆಂದರೆ ಸ್ತ್ರೀ ವಿದ್ಯಾಭ್ಯಾಸದ ಅಭಿವೃದ್ಧಿ. [illegible] ಸ್ತ್ರೀಯರೊಂದಿಗೆ [illegible] ನಮ್ಮ ಸನಾತನ ಕಟ್ಟಳೆಗಳು ವಿರುದ್ಧ [illegible] ಆದರೆ ಚಿಕ್ಕ ವಿದ್ಯಾರ್ಥಿಗಳು ಹೆಂಗಸರೊಡನೆ ಸಲಿಗೆಯಿಂದಿರಬಹುದು. ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಸ್ತ್ರೀಯರೊಡನೆ ವಿವರಿಸಿ ಹೇಳುವುದೂ, ವಿದೇಶದ ಸ್ತ್ರೀಯರ ಉದಾಹರಣೆಯನ್ನು ಅವರ ಕಣ್ಣಮುಂದೆ ಇರಿಸಿ, ಅವರ ಮನಸ್ಸು ವಿದ್ಯೆಯ ಕಡೆಗೆ ಧಾವಿಸುವಂತೆ ಮಾಡುವುದೂ ವಿದ್ಯಾರ್ಥಿಗಳಿಗೆ ಬಹು ಸುಲಭವಾಗಿದೆ. ಹೀಗೆ ಮಾಡಿದರೆ ವಿದ್ಯಾರ್ಥಿಯು ದೇಶೋಪಕಾರವನ್ನು ಮಾಡಿದಂತಾಗುವುದು. ಮನೆಯ ಹೆಂಗಸರು ವಿದ್ಯೆ ಕಲಿತವರಾದರೆ ಅವರು ಸಂಸಾರವನ್ನು ಚೆನ್ನಾಗಿ ನಡಸುವರು. ಇದರಿಂದ ಮನೆಯ ಸಂತಸರಿಗೆ ಸ್ವಲ್ಪ ಸುಲಭವಾಗುವುದು. ಹೆಂಗಸರು ವಿದ್ಯೆ ಕಲಿತವರಾದರೆ ಮನೆಯಲ್ಲಿ ಅವರು ಮಕ್ಕಳಿಗೆ ವಿದ್ಯೆ ಕಲಿಸಲು ಅನುಕೂಲವಾಗುವುದು. ಇವೆಲ್ಲವೂ ಕೇವಲ ವಿದ್ಯಾರ್ಥಿಗಳ ಪ್ರಯತ್ನದಿಂದಲೇ ಕೈಗೂಡುವವು.

ದೇಶಹಿತಕಾರ್ಯಗಳನ್ನು ಎಲ್ಲರೂ ಒಂದಾಗಿ ಕಲಿತು ಮಾಡಲು ವಿವಿಧ ಜಾತಿಗಳ ಐಕ್ಯಬೇಕು; ಅದು ಅಗತ್ಯವಾಗಿದೆ; ಮಾತೃಭೂಮಿಯ ಸೇವೆಯನ್ನು ಮಾಡಲು ಎಲ್ಲ ಜಾತಿಯವರೂ ಒಂದಾಗಬೇಕು; ಅಸ್ಪೃಶ್ಯರು, ಸ್ಪೃಶ್ಯರು ಎಂಬ ಭೇದವಿರುವುದು ಉಚಿತವಲ್ಲ. ಅಂತಹ ಜಾತಿಭೇದವು ವಿದ್ಯಾರ್ಥಿಗಳ ಪ್ರಯತ್ನದಿಂದಲೇ ಹೋಗಲಾಡಿಸಲ್ಪಡುವುದು. ಹಿಂದೆ ಹೆಸರು ಪಡೆದ ಹಲವು ಭಾರತೀಯರ ಉದಾಹರಣೆಗಳನ್ನು ವಿದ್ಯಾರ್ಥಿಗಳು ತಿಳಿಯದವರಿಗೆ ವಿವರಿಸಿ ಹೇಳಿ, ಅವರನ್ನು ತಿಳಿದವರನ್ನಾಗಿ ಮಾಡಬಹುದು. ಪಂಡಿತ ಮದನಮೋಹನ ಮಾಳವೀಯರಂತಹ ಹಲವಾರು ಶ್ರೇಷ್ಠರ ವ್ಯಾಖ್ಯಾನಗಳ ಆಧಾರದಿಂದ, ಅಸ್ಪೃಶ್ಯರ ಉದ್ಧಾರಕ್ಕಾಗಿ ಹೇಗೆ ಪ್ರಯತ್ನಿಸುತ್ತಿರುವರು ಎಂಬುದನ್ನು ವಿದ್ಯಾರ್ಥಿಗಳೇ ಹಳ್ಳಿಯ ಜನರಿಗೆ ಹೇಳುತ್ತಿರಬೇಕು.

ಆದರೆ ವಿದ್ಯಾರ್ಥಿಗಳು ರಾಜಕೀಯ ಕಾರ್ಯಗಳಲ್ಲಿ ಮಾತ್ರ ಕೈಹಾಕಬಾರದು; ಬೆಳೆದ ಮೇಲೆಯೇ ಅವುಗಳಿಗೆ ಕೈಯಿಕ್ಕಬಹುದು; ಸಭೆಗಳನ್ನು ನಡಸಿ ಚರ್ಚಿಸುವದು; ಸಂಘಗಳನ್ನೇರ್ಪಡಿಸುವದು, ಇವೆಲ್ಲವುಗಳಿಂದ ಮುಂದಣ ಕೆಲಸಗಳು ಸುಲಭವಾಗುವಂತೆ ವಿದ್ಯಾರ್ಥಿಗಳು ಪ್ರಯತ್ನಿಸುತ್ತಿರಬೇಕು; ಒಟ್ಟಾರೆಯ ಮೇಲೆ ಹೇಳುವ ದಾದರೆ ವಿದ್ಯಾರ್ಥಿಗಳೇ ದೇಶದ ಅಭಿವೃದ್ಧಿಗೆ ಮುಖ್ಯ ಸಹಾಯಕರಾಗಿರುವರು;

ಇಂದಿನ ವಿದ್ಯಾಭ್ಯಾಸ

ಈಗಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತಿರುವ ವಿದ್ಯಾಭ್ಯಾಸಕ್ಕೂ ಹಿಂದಿನ ವಿದ್ಯಾಭ್ಯಾಸಕ್ಕೂ ಹಲವು ಬದಲಾವಣೆಗಳಿರುವುದೂ, ಈಗಿನ ವಿದ್ಯಾಭ್ಯಾಸವು ಹಿಂದಿನ ವಿದ್ಯಾಭ್ಯಾಸದಷ್ಟು ಉತ್ತಮ ಸ್ಥಿತಿಯದಾಗಿಲ್ಲವೆಂದೂ ಜನ ಸಾಮಾನ್ಯರು ತಿಳಿದುಕೊಳ್ಳುವ ವಿಷಯವಾಗಿರುತ್ತದೆ. ಇದು ನಿಜವೇ ಆಗಿರುತ್ತದೆ. ಅದಕ್ಕೆ ಕಾರಣಗಳಾದರೋ ಹಲವು ಇರುತ್ತವೆ.

ಕೆಲವು ವರುಷಗಳ ಹಿಂದೆ ಒಂದೊಂದು ತರಗತಿಗೆ ಇಂತಿಷ್ಟು ಪಾಠಗಳನ್ನು ಕಲಿಸಬೇಕೆಂದು ಒಂದು ನಿರ್ಣಯವಿದ್ದಿತು. ಕಲಿಸುವ ಪಾಠಗಳಿಗೆ ಮಿತಿಯಿದ್ದಿತು. ಆದರೆ ಈಗಿನ ಕಾಲದಲ್ಲಿ ಹಾಗಿಲ್ಲ. ವಿದ್ಯಾರ್ಥಿಗಳ ಪ್ರಾಯ, ಅವರ ಬುದ್ಧಿಸಾಮರ್ಥ್ಯ, ಇವುಗಳೊಂದನ್ನು ಲಕ್ಷಿಸದೆ ಒಂದೊಂದು ತರಗತಿಯ ಪಾಠಪಟ್ಟಿಯಲ್ಲಿ ಮಿತಿಯಿಲ್ಲದ ಪಾಠಗಳನ್ನು ಸೇರಿಸಿಬಿಡುವರು. ಉದಾಹರಣಾರ್ಥವಾಗಿ ಸುಮಾರು ಐದು, ಆರನೇ ತರಗತಿಗಳಿಗೆ ಹಿಂದಿನ ಕಾಲದಲ್ಲಿ ೧ ಇಂಗ್ಲಿಷು, ೨ ಮಾತೃಭಾಷೆ ೩ ಲೆಕ್ಕ, ೪ ಭೂಗೋಳ, ೫ ಚಿತ್ರಬಿಡಿಸುವದು, ಇನ್ನು ಒಂದೆರಡು ಪಾಠಗಳು, ಇಷ್ಟೇ ಕಲಿಸಲ್ಪಡುತ್ತಿದ್ದವು. ಆದರೆ ಈಗ ಇವುಗಳ ಹೊರತಾಗಿ, ೧ ಪ್ರಕೃತಿ ಶಾಸ್ತ್ರ, ೨ ಚರಿತ್ರೆ, ೩ ಪ್ರೆಕ್ಟಿಕಲ್ ಜೊಮೆಟ್ರಿ, ೪ ಮೆನುವೆಲ್ ಟ್ರೇನಿಂಗ್, ಇನ್ನೂ ಎಷ್ಟೋ ಪಾಠಗಳು ಒತ್ತಾಯದಿಂದ ಕಲಿಸಲ್ಪಡುತ್ತಲಿವೆ.

ಈ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಪ್ರಾಯವು ಹೆಚ್ಚುವ ಬದಲು ಇಳಿಯುತ್ತ ಬರುತ್ತಿದೆ. ಕಲಿಯುವ ಶಕ್ತಿಯು ಮಂದವಾಗುತ್ತಿರುವಾಗ ಪಾಠಪಟ್ಟಿಯನ್ನು ಮಾತ್ರ ಹೆಚ್ಚಿಸಿದಂತಾಯಿತು. ಇದರ ಫಲಿತಾಂಶವಾಗಿ, ಮಕ್ಕಳ ಇದ್ದ ಕಲಿಯುವ ಶಕ್ತಿಯನ್ನು ಹಾಳುಮಾಡಿದಂತಾಗುವದು. ಸಣ್ಣ ತರಗತಿಗಳಲ್ಲಿ ಮಾತ್ರವೇ ಈ ಸ್ಥಿತಿ ಇರದೆ ಎಲ್ಲಾ ತರಗತಿಗಳಲ್ಲಿಯೂ ಇದೇ ರೀತಿ ಇದೆ.

ಬೇರೆ ಬೇರೆ ಪಾಠಗಳು ಮಾತ್ರ ಹೆಚ್ಚಿಸಲ್ಪಟ್ಟಿಲ್ಲ. ಭಾಷಾ ಶಿಕ್ಷಣೆಯಲ್ಲಿ ಪಠ್ಯ ಪುಸ್ತಕಗಳೆಂದೂ ಉಪಪಠ್ಯ ಪುಸ್ತಕಗಳೆಂದೂ ಹಲವು ಪುಸ್ತಕಗಳು ಇಡಲ್ಪಡುವವು. ಒಂದೆರಡು ಪುಸ್ತಕಗಳನ್ನು ಮಾತ್ರವೇ ಕಲಿಯುವುದಾದರೆ ವಿದ್ಯಾರ್ಥಿಗೆ ಸುಲಭವಾಗುವುದಲ್ಲದೆ, ಒಂದೇ ಸಲ ಹಲವು ಪುಸ್ತಕಗಳನ್ನು ಕಲಿಯುವಾಗ ವಿದ್ಯಾರ್ಥಿಯ ಜ್ಞಾಪಕ ಶಕ್ತಿಯು ಶಿಥಿಲವಾಗಿ, ಒಂದನ್ನು ಕಲಿಯುವಾಗ, ಇನ್ನೊಂದರ ವಿಷಯಗಳು ಮರೆಯುವವು. ಆದುಕಾರಣ ಹೆಚ್ಚು ಪಠ್ಯ ಪುಸ್ತಕಗಳ ಉಪಯೋಗವು ಚೆನ್ನಾಗಿರುವುದಿಲ್ಲ.

ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಏರಿದೊಡನೆ ಪ್ರತಿ ತರಗತಿಯನ್ನು ಬೇರೆ ಬೇರೆ ವಿಭಾಗಗಳಾಗಿ ವಿಂಗಡಿಸಿಬಿಡುವರು. ತರಗತಿಯನ್ನು ಹಾಗೆ ವಿಂಗಡಿಸುವುದರಿಂದ ವಿದ್ಯಾರ್ಥಿಗಳಿಗೆ ತುಂಬ ಹಾನಿಯಿದೆ. ಈಗ ಪ್ರತಿ ಶಾಲೆಯಲ್ಲಿಯೂ ಪ್ರತಿ ತರಗತಿಗಳಲ್ಲಿ ಐದಾರು ವಿಭಾಗಗಳಿಗೆ ಕಡಿಮೆಯಿರುವದಿಲ್ಲ. ಬೇರೆ ಬೇರೆ ವಿಭಾಗಗಳಿಗೆ ಬೇರೆ ಬೇರೆ ಉಪಾಧ್ಯಾಯರನ್ನು ನೇಮಿಸಬೇಕಾದುದರಿಂದ ಕಲಿಸುವ ಕ್ರಮವು ಒಂದೇ ರೀತಿಯಿರುವುದಿಲ್ಲ. ಹಲವು ತರಗತಿಗಳ ಮೇಲ್ ತನಿಖೆಯನ್ನು ನೋಡಬೇಕಾದುದರಿಂದ ಮುಖ್ಯೋಪಾಧ್ಯಾಯನಿಗೂ ಅದು ಸರಿಯಾಗಲಾರದು.

ಈಗಿನ ಕಾಲದಲ್ಲಿ ತುಂಬ ಹಾನಿಕರವಾದುದೆಂದರೆ ಆಗಾಗ ಶಾಲೆಯಲ್ಲಿ ಆಟಗಳನ್ನೂ ನಾಟಕಗಳನ್ನೂ ನಡಿಸುವುದು. ಇಂದು ಆ ಊರಿನ ಮಹನೀಯರ ಭಾಷಣ, ಸಾಯಂಕಾಲ ರಜೆ, ಇಂದು ಮೈದಾನಿನಲ್ಲಿ ಎರಡು ಶಾಲೆಗಳೊಳಗೆ ಪಂದ್ಯಾಟ, ಅರ್ಧ ದಿನ ರಜೆ, ಎಂದು ವರ್ಷದಲ್ಲಿ ಸಾಧಾರಣ ಒಂದೆರಡು ತಿಂಗಳುಗಳ ರಜೆಯು ಈ ವಿಧದಲ್ಲಿಯೇ ಕೊಡಲ್ಪಡುವದು. ಇದರಿಂದ ವಿದ್ಯಾರ್ಥಿಗಳ ಅಮೂಲ್ಯವಾದ ವೇಳೆಯು ಹಾಳುಮಾಡಲ್ಪಡುವುದು. ವಿದ್ಯಾರ್ಥಿಗಳಿಗೆ ವಿದ್ಯೆಯ ಮೇಲಿನ ಮನಸ್ಸು ಅಪಹರಿಸಲ್ಪಟ್ಟು, ಆಟಗಳ ಮೇಲೆಯೇ ಅವರಿಗೆ ಅಭಿರುಚಿಯು ಹೆಚ್ಚುವದು.

ಈ ಮೂರು ಮುಖ್ಯ ಕಾರಣಗಳಿಂದಲೇ ಇಂದಿನ ವಿದ್ಯಾಭ್ಯಾಸವು ಹಿಂದಿನ ವಿದ್ಯಾಭ್ಯಾಸದಷ್ಟು ಯೋಗ್ಯ ಸ್ಥಿತಿಯಲ್ಲಿಲ್ಲವೆಂಬುದನ್ನು ತಿಳಿಯಬೇಕಾಗಿದೆ.

ಬಾಯಿಯ ಜಾಗ್ರತೆ.

ಬಾಯಿಯು ಕೇವಲ ಆಹಾರವನ್ನು ತಿನ್ನುವ ಸಲುವಾಗಿ ಮಾತ್ರವೇ ಉಂಟುಮಾಡಲ್ಪಟ್ಟಿರುತ್ತದೆಂದು ನೆನಸಿ ಬಾಯಿಯ ಕುರಿತಾಗಿ ಅಜಾಗರೂಕರಾದರೆ ಹಲವು ತರದ ರೋಗಗಳನ್ನು ನಾವು ತಂದುಕೊಳ್ಳಬಹುದು. ಬಾಯಿಯು ಗಂಟಲಿನ ದ್ವಾರವಾಗಿರುತ್ತದೆ. ರೋಗಗಳು ಶರೀರವನ್ನು ಪ್ರವೇಶಿಸಲು ಬಾಯಿಯು ಹೆಬ್ಬಾಗಿಲಾಗಿರುತ್ತದೆಂಬುದನ್ನು ಮರೆಯಬಾರದು.

ಹೆಬ್ಬಾಗಿಲೇ ಸರಿಯಾಗಿರದಿದ್ದರೆ ಒಳಗೆಲ್ಲವೂ ಅಸ್ತವ್ಯಸ್ತಗಳಾಗುವುದು. ಮನೆಯ ಹೆಬ್ಬಾಗಿಲನ್ನು ತೆರೆದುಬಿಟ್ಟರೆ ಕಳ್ಳರು ಸುಲಭವಾಗಿ ಮನೆಯನ್ನು ಪ್ರವೇಶಿಸಿ, ಇದ್ದುದೆಲ್ಲವನ್ನು ದೋಚಿ ಮನೆಯನ್ನೇ ಹಾಳುಸ್ಥಿತಿಗೆ ಇಳಿಸಬಹುದು. ಅದೇ ರೀತಿ ದೇಹದ ಹೆಬ್ಬಾಗಿಲಾಗಿರುವ ಬಾಯಿಯ ಕುರಿತಾಗಿ ತಕ್ಕ ಜಾಗ್ರತೆಯನ್ನು ವಹಿಸದಿದ್ದರೆ, ನಮ್ಮ ದೇಹದ ವೈರಿಗಳು ದೇಹವನ್ನು ಪ್ರವೇಶಿಸಿ ಕೆಡುಕನ್ನುಂಟುಮಾಡಬಹುದು. ಬಾಯಿಯು ಅನಾರೋಗ್ಯದಿಂದಿದ್ದರೆ, ದೇಹದ ಆರೋಗ್ಯವೂ ಕೆಡುವದು. ಬಾಯಿಯು ಒಳ್ಳೆಯ ಆರೋಗ್ಯದಲ್ಲಿದ್ದರೆ ದೇಹವೂ ಒಳ್ಳೆಯ ಆರೋಗ್ಯದಲ್ಲಿರುವದು.

ಬಾಯಿಯು ಅಶುಚಿಯಾಗಿರುವುದರಿಂದ ಅಜೀರ್ಣ, ಗಂಟಲು ನೋವು, ಹೊಟ್ಟೆ ನೋವು, ಹೊಟ್ಟೆಯ [illegible], [illegible] ಇವು ಉಂಟಾಗುವವೆಂದು ತಿಳಿದುಬಂದಿರುತ್ತದೆ. ಇಷ್ಟು ಮಾತ್ರವಲ್ಲ, ಬಾಯಿಯ ಅಜಾಗ್ರತೆಯಿಂದ ಇನ್ನೂ ಹಲವು ಕಠಿಣ ರೋಗಗಳು ಹುಟ್ಟುವವು.

ಪ್ರಥಮತಃ ಹಲ್ಲುಗಳ ವಿಷಯವಾಗಿ ತುಂಬ ಜಾಗರೂಕರಾಗಿರಬೇಕು. ಪ್ರತಿಯೊಂದು ಊಟದ ತರುವಾಯ ಹಲ್ಲುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಸ್ವಚ್ಛವಾಗಿರಿಸಬೇಕು.

ಇನ್ನು ಹಲ್ಲುಗಳು ಹಾಳಾದರೆ, ಕೊಳೆಯ ತೊಡಗಿದರೆ ಅವುಗಳನ್ನು ಕೂಡಲೇ ತೆಗಿಸಬೇಕು. ಹಲ್ಲುನೋವು ಪ್ರಾರಂಭವಾಗಿ ಹಲ್ಲಿನಲ್ಲಿ ಅಸಹ್ಯವಾದ ಕೀವು ಬರತೊಡಗಿದಾಗಲೂ, ಹಲ್ಲಿನಿಂದ ವಾಸನೆಯು ಹೊರಡುತ್ತಿರುವಾಗಲೂ, ಜನರು ಅದಕ್ಕೆ ಔಷಧಿಯನ್ನಿಟ್ಟು ಗುಣಪಡಿಸಲು ಪ್ರಯತ್ನಿಸುವ ವಾಡಿಕೆಯಿದೆ. ಆದರೆ, ಹಾಳಾದ ಹಲ್ಲಿನೊಳಗಿರುವ ಕೆಡಕು ಪದಾರ್ಥಗಳು ನಾವು ತಿನ್ನುವ ಆಹಾರದೊಂದಿಗೆ ಹೊಟ್ಟೆಯನ್ನು ಪ್ರವೇಶಿಸಿ, ಹೊಟ್ಟೆಯೊಳಗೆ ಅನಾರೋಗ್ಯವನ್ನು ತಂದೊಡ್ಡಬಹುದು. ಆದುಕಾರಣ ಹಲ್ಲು ಹಾಳಾಗಲು ಪ್ರಾರಂಭವಾದೊಡನೆ ಅದನ್ನು ತೆಗಿಸಿಬಿಡಬೇಕು.

ಬಾಯಿಯಿಂದ ಉಸಿರಾಡುವುದರಿಂದಲೂ ಬಹಳ ತೊಂದರೆಗೆ ಕಾರಣವಾಗುವದು. ಬಾಯಿಯ ಮೂಲಕ ಉಸಿರಾಡುವುದರಿಂದ, ಧೂಳು ಮೊದಲಾದವುಗಳು ಬಾಯಿಯನ್ನು ಪ್ರವೇಶಿಸುವವು. ಗಾಳಿಯನ್ನು ಸೋಸುವ ರೀತಿಯ ಅಂಗವು ಬಾಯಿಯಲ್ಲಿಲ್ಲದ ಪ್ರಯುಕ್ತ ಧೂಳು ನೇರ ಹೊಟ್ಟೆಯನ್ನು ಪ್ರವೇಶಿಸಿ ಗಂಟಲಿನಲ್ಲಿ ಗುಳ್ಳೆಯನ್ನುಂಟುಮಾಡಬಹುದು. ಗಂಟಲು ನೋವಿಗೂ ಕಾರಣವಾಗಬಹುದು. ಆಗಾಗ ಗಂಟಲಿನಲ್ಲಿ ಗುಳ್ಳೆಗಳೆದ್ದರೆ ಕಡೆಗೆ ಕಿವಿಗಳು ಕೆಪ್ಪಾಗುವ ಸಂಭವವಿದೆ.

ಮಕ್ಕಳು ಬಾಯಿಯಿಂದ ಉಸಿರಾಡುತ್ತಿದ್ದರೆ ಅವನ್ನು ಮೊದಲೇ ತಿದ್ದಿಕೊಂಡು ಆ ಅಭ್ಯಾಸವನ್ನು ನಿಲ್ಲಿಸಬೇಕು. ಚೆನ್ನಾಗಿ ಅಭ್ಯಾಸವಾದ ಮೇಲೆ ಅದನ್ನು ನಿಲ್ಲಿಸುವುದು ಸುಲಭವಲ್ಲ. ಮೂಗಿನಿಂದಲೇ ದೀರ್ಘ ಶ್ವಾಸಗಳನ್ನು ಎಳೆಕೊಳ್ಳುವ ಅಭ್ಯಾಸವನ್ನು ಮಕ್ಕಳಿಗೆ ಕಲಿಸುತ್ತಿರಬೇಕು. ಆಡುವ ಸಮಯದಲ್ಲಿ ದೀರ್ಘ ಶ್ವಾಸ ಬಿಡುವ ಅಭ್ಯಾಸವನ್ನು ಚಿಕ್ಕ ಮಕ್ಕಳಿಗೆ ಕಲಿಸಿದರೆ, ಅವರಿಗೆ ಅದು ಅಭ್ಯಾಸವಾಗಿ, ಕೊನೆಗೆ ಅವು ಯಾವಾಗಲೂ ದೀರ್ಘ ಶ್ವಾಸವನ್ನೇ ಬಿಡುವವು.

ಮಕ್ಕಳಿಗೆ ದೀರ್ಘ ಶ್ವಾಸದ ಕ್ರಮವನ್ನು ಕಲಿಸುವುದು ಅಷ್ಟೇನೂ ಕಷ್ಟವಾಗಿಲ್ಲ. ತುಟಿಗಳನ್ನು ಬಿಗಿಯಾಗಿ ಮುಚ್ಚಿ ಗಲ್ಲಗಳನ್ನು ಉಬ್ಬಿಸಿ ಮೂಗಿನಿಂದ ಶ್ವಾಸವನ್ನೆಳೆಯುವಂತೆ ಮಾಡಬೇಕು. ತುಟಿಗಳನ್ನು ಮುಚ್ಚಿರುವುದರಿಂದ ವಾಯುವು ಬಾಯಿಯನ್ನು ಪ್ರವೇಶಿಸುವುದಿಲ್ಲ. ಮೂಗಿನ ಮೂಲಕವೇ ದೇಹದೊಳಕ್ಕೆ ಹೋಗುವದು.

ಬಾಯಿಯಿಂದ ಉಸಿರಾಡುವುದರಿಂದ ಮಕ್ಕಳಿಗೆ ಬಹಳ ಕೆಡುಕಿದೆ. ಇದರಿಂದ ಬೇಕಾದಷ್ಟು [illegible] ದೊರೆಯುವುದಿಲ್ಲ. ಬಾಯಿಯನ್ನು ಯಾವಾಗಲೂ ತೆರೆದುಕೊಂಡಿರುವುದರಿಂದ ಮೇಲ್ದವಡೆಯು ಚೆನ್ನಾಗಿ ಬೆಳೆಯುವುದಿಲ್ಲ. ಆದುಕಾರಣ ಹಲ್ಲುಗಳು ನಿಯಮವಾಗಿ ಬೆಳೆಯದೆ [illegible] ಹಾಳಾಗುವವು. ಇವೆಲ್ಲ ತೊಂದರೆಗಳನ್ನು ಹೋಗಲಾಡಿಸಲು ಬಾಯಿಯನ್ನು ಯಾವಾಗಲೂ ಮುಚ್ಚಿಕೊಂಡಿರುವುದೇ ಲೇಸು.





OAKLAND

Series 6-212

the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES of the NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are six inches longer and all bodies are much lower.

Seat positions and contours are improved.

Spanish leather upholstery on open models and Sport Cabriolets.

Leather upholstery available on all closed models.

Improved body hardware on all models.

New and attractive Duco color combinations on all models.

For Further Particulars Apply to **RAO & RAO**

Dealers of Oakland, Pontiac, Chevrolet, & Vauxhall Cars,

Maidan Road, MANGALORE

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು

ಕಾವ್ಯಗಳು

ಈ ಕೆಳಗಿನ ಕಾವ್ಯ ಪುಸ್ತಕಗಳಿಗೆ ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ ಅಲಂಕಾರ, ವಿಗ್ರಹ, ಧಾತುರೂಪ, ಧಾತ್ವರ್ಥ ವಿಶೇಷಾಂಶದೊಂದಿಗೆ ಬರೆದಿರುತ್ತೆ ಕುಮಾರಸಂಭವ ಕಾವ್ಯ 1, 2, 3ನೆ ಸರ್ಗಗಳು

ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
ರಘುವಂಶ ಕಾವ್ಯ 2, 3, 4, 5ನೆ ಸರ್ಗಗಳು	
ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
ಮೇಘ ಸಂದೇಶ (ಪೂರ್ತಿ)	3—0—0
ಕಿರಾತಾರ್ಜುನೀಯ 1ನೇ ಸರ್ಗ	0—10—0
ವಿವೇಕ ಚೂಡಾಮಣಿ ಶ್ರೀ ಶಂಕರಾಚಾರ್ಯ ವಿರಚಿತ ಸರ್ವ ವೇದಾಂತಸಾರ ಟೀಕಾ ತಾತ್ಪರ್ಯದೊಂದಿಗೆ	3—0—0

ಲೇಖ್ಯ ಪ್ರದರ್ಶಿನಿ,

ಅರ್ಜಿ, ಪತ್ರ, ರಶೀದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ ಇವೆ. ಕ್ರಯ 0—8—0.

ಎಚ್. ಎಸ್. ರಾವ್ ಬ್ರದರ್ಸ್,

ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು ಸಿಟಿ

ತಯಾರಾಗಿವೆ! ತಯಾರಾಗಿವೆ!!

ಮೂರನೇ ಪ್ರತಿಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

... Sharada Press, Mangalore.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷಿರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ತಣಿಸಬಾರಯೆ! ಮತ್ತೆ ವಿಷವದು ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತಿರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. | ಮಂಗಳೂರು, ತಾ. ೨೨ನೇ ಶುಕ್ರವಾರ ಮಾರ್ಚಿ ೧೯೨೯. (22–3–'29.) | ಸಂಚಿಕೆ ೧೨

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR. Mangalore.

ಹೆಡ್ ಆಫೀಸು:—ಉಡುಪಿ. ಶಾಖೆ:—ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000.

1. ಚಂದಾ ಹಾಕಲಿಕ್ಕೆ ಅರ್ಪಿಸಿದ ಮತ್ತು ವಿಕ್ರಿದ ಮೂಲಧನ ರೂ. 2,25,000. 3. ಕ್ಷೇಮನಿಧಿ ಪಗೈರೆ ಫಂಡುಗಳು ರೂ. 1,26,700-

2. ತೆತ್ತು ಬಂದ ಮೂಲಧನ ರೂ. 2,12,630- 4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ್ದು ರೂ. 3,34,218-5-0.

Statement of Affairs of the Canara Banking Corporation Udipi, Limited as on 23th February 1929

	Capital and Liabilities.			Property and Assets	
1	Paid up Capital	Rs. 2,12,630–0–0	1	Premises Building Furniture &c.	Rs. 9,215-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,34,218-5-0
3	Deposits	„ 16,01,517-5-10	3	Investments on Approved Securities	„ 17,86,710-11-10
4	Due to Bankers on a/c of Overdrafts and Loans a/c	„ 2,12,164-1-5	4	Bills for collection as per Contra	„ 12,347-0-0
5	Sundry Persons' a/c for Bills for collection as per Contra	„ 12,347-0-0	5	Cash in hand & with Bankers.	„ 45,713-12-8
9	Sundries including P & L items	„ 20,846-6-3			
	Total	21,86,204-13-6		Total	21,86,204-13-6.

Office of the Corporation, Udipi. 7–3–'29. **N. ANANDA RAO** *Secretary.*

ಅಮೃತಾಂಜನ.

ಪ್ರಸಿದ್ಧವಾದ ತಲೆನೋವಿನ ಔಷಧ ... [illegible] ... ತಲೆ, ಕೀಲು, ... [illegible] ... ಕ್ರಯ ಡಬ್ಬಿಗೆ ಆಣೆ ... ಮು. ಚಾ. ಬೇರೆ.

ರಿಂಗ್‌ವರ್ಮ್ ಮುಲಾಮು:— ರಿಂಗ್‌ವರ್ಮ್, ... [illegible] ... ರೋಗದ ಔಷಧಿಗಳಲ್ಲಿ ... [illegible] ... ಡಬ್ಬಿಗೆ ಆಣೆ ... ಮು. ಚಾ. ಬೇರೆ.

ದಂತಮಂಜನ:— ... [illegible] ... ಕಡಿಮೆಯಾಗುವವು. ಡಬ್ಬಿಗೆ ಆಣೆ 2, ಮು. ಚಾ. ಬೇರೆ.

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದುಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,

ಗಿರಗಾಂವ, ಮುಂಬಾಯಿ.

ಏಜಂಟರು — ದಿ ಯೂನಿಯನ್ ಸ್ಟೋರ್ಸ್, ಮಂಗಳೂರು.

ಬಹುಮಾನ! ಬಹುಮಾನ!

1929ನೇ ವರುಷದ **ಸರಸ್ವತೀ ಕ್ಯಾಲೆಂಡರ್.**

... [illegible] ... ಕನ್ನಡ ಕಥೆ, ಕಾವ್ಯ, ನಾಟಕ, ... [illegible] ... ಬರೆದು ತರಿಸಿಕೊಳ್ಳಿರಿ.

ಈ ಮೇಲೆ ... [illegible] ... ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು.

ಸೌಭಾಗ್ಯ ಲಕ್ಷ್ಮಿ	1–[illegible]–0	[illegible]	1–4–0
ವಿಮಲಾ ದೇವಿ	1–12–0	[illegible]	1–12–0
ವಚನ ಭಾರತ	1–12–0	[illegible]	1–[illegible]–0
ಆನಂದ ಮಠ	1–12–0	[illegible]	1–8–0

ಲಾ ಪುಸ್ತಕಗಳು.

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4–[illegible]–0
	ಭಾಗ II	4–[illegible]–0
ವ್ಯವಹಾರ ಲೇಖ್ಯ ಬೋಧಿನಿ		2–8–0
ಕ್ರಿಮಿನಲ್ ಪ್ರೊಸೀಜರ್ ಕೋಡ್		3–0–0
ಇಂಡಿಯನ್ ಪಿನಲ್ ಕೋಡ್		2–8–0

ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,

ಅವೆನ್ಯೂ ರೋಡ್, ಬೆಂಗಳೂರು ಸಿಟಿ.

(ಬೈಬಲುಗಳಲ್ಲಿ ಇರುವ ಎಲ್ಲಾ ಪುಸ್ತಕಗಳೂ ದೊರೆಯುತ್ತವೆ.)

[illegible]

[illegible] ಎಂಬುದಾಗಿ [illegible] ಹೇಳಿದನು.

"ಬುಕ್ಕಿಯ ಯಜಮಾನನಿಗೆ ಇದು ತಿಳಿದಿಲ್ಲವೇ?" ಎಂದು ನಾರಾಯಣರಾಯನು ಪ್ರಶ್ನಿಸಿದನು.

"ಮನೆಯವರಿಗೆ ಈ ವಿಷಯದಲ್ಲಿ ಒಂದು ವಿಸರ್ಗವಾದರೂ ತಿಳಿದಿಲ್ಲ. ಅದೂ ಅವರ ಬಾಡಿಗೆಯ ಮನೆಯಾಗಿದೆ. ಎಷ್ಟೋ ಜನರು ನಿಲ್ಲುತ್ತಾರೆ; ಎಷ್ಟೋ ಜನರು ಹೋಗುತ್ತಾರೆ. ಆದುದರಿಂದ ಈ ನೋಟುಗಳನ್ನು ಅರವಿಟ್ಟುದನ್ನು ತಿಳಿಯಲು ಸಾಧ್ಯವಿಲ್ಲ. ಆರೋ ಒಬ್ಬ ಕೃಪಣ ಮನುಷ್ಯನು ಈ ನೋಟುಗಳನ್ನು ಹೀಗೆ ಇಟ್ಟಿದ್ದಿರಬೇಕೆಂದು ನನ್ನ ಅಭಿಮತವು. ಅವನು ಇಟ್ಟಿರುವುದಾದರೂ ಅವನೀಗ ಸತ್ತಿರಬೇಕೆಂದು ಕಾಣುತ್ತದೆ. ಇಲ್ಲವಾದರೆ ತನ್ನ ಗಂಟು ಹೋಯಿತೆಂಬುದು ಆತನಿಗೆ ಈ ತನಕ ತಿಳಿಯದೇ? ತಿಳಿದರೆ ಆತನು ಅದನ್ನು ಅಲ್ಲೇ ಬಿಡುತ್ತಿದ್ದನೇ? ಹಣವು ನನಗೇನೇ ಸಿಕ್ಕಬೇಕೆಂಬುದಾಗಿ ದೇವರು ನನ್ನ ಹಣೆಯಲ್ಲಿ ಬರೆದಿಟ್ಟಿದ್ದನೋ ಏನೋ; ಆದುದರಿಂದ ನನಗೇನೇ ಸಿಕ್ಕಿತು" ಎಂದು ಮೇಸ್ತ್ರಿಯು ಹೇಳಿದನು.

ಸಶೇಷ.

ನಮ್ಮ ಹುಣಿಸೀ ಮರ.

(ಗೆಳೆಯರ ಗುಂಪಿನಿಂದ.)

ಯಾವ ನೇಕಾರನು ಕಡಿದು ಮಲಗಿಸಿದನಲ್ಲಿ,
ಎಂದಿನಿಂದಲೂ ಬೆಳೆದ ಮರವಿದ್ದಿತಿಲ್ಲಿ,
ಯಾವ ಪಾಪಿಯು ಇಂಥ ಕೊಲೆಗಡಕನಾದ?
ತಿಳಿಯದಿರದೇ ಅವಗೆ ವೃಕ್ಷನ ವಿಷಾದ?

ಎಂದಿನಿಂದಲೂ ಬೆಳೆದ ಮರವಿದ್ದಿತಿಲ್ಲಿ—
ಎಂದಿನಿಂದಲೂ ಹಕ್ಕಿಗಳು ಕೂಡಿ ಇಲ್ಲಿ
'ನಮ್ಮ ಭೂಮಿಯಿದಲ್ಲ; ಭೋಕಂಪವಿಲ್ಲ!
ನಾವು ಸತ್ತರು ನಮ್ಮ ಜಗವಾಯಿತಲ್ಲ!'
ಎಂದು ಹಾರಾಡುತ್ತ ರೆಂಬೆಗಳ ಮುಂದೆ
ಅಲೆಯುತಿದ್ದವು,—ಎಲ್ಲ ಆ ಮರವು ಇಂದೆ?

ತೊದಲೊಟ್ಟ ದೇಸಾಯಿ ದೇಸಗಿತ್ತಿಯನು
ಆ ಮರದ ಮೇಲಿಳಿಸಿ ಫಲ ಬೀಳಿಸಿದನು,
ವರುಷವರುಷಕೆ ಮರದಿ ಹಣ್ಣುಕಾಯಾಗಿ
ಮರವು ಕಾಯುತಲಿತ್ತು ದೇಸಾಯಿಗಾಗಿ!
ಆ ಮೇಲೆ ಬಂದೊಡತಿ ತಾಳಿದ್ದನವಳು
ನಿಶ್ಚಯ ಮರ ನೋಡಿ ಕೋಪಪಡುತಿಹಳು
ಒಡತನದ ಭಾಗ್ಯಕ್ಕೆ ಒಳಿದ ಆ ಮರವು
ತುಂಬಿ ಫಲ ತಳೆದಿತ್ತು; ಬಾಗಿತ್ತು ಶಿರವು!

ಚಿಣ್ಣರವನು ಚಿನ್ನಮಯವಾಗಿ ಮಾಡಿ
ತೋರಿಸಲು ಬಣ್ಣಬಣ್ಣದ ಬೆಳಕು ಹೂಡಿ
ಮಾಡಿಟ್ಟರೋ ಭಿನ್ನವಿಚ್ಛಿನ್ನ ಮಾಡಿ
ಆ ಮರವ!—ನಾವಲ್ಲಿ ಬೆಳೆದಿದ್ದ ಮಾಡಿ
ಆ ಮರದ ಹೂವಾಗಿ ಕಿವಿಹುಗ್ಗಿಯಾಗಿ
ಆ ಮರದ ಎಲೆಯಾಗಿ ಕಣ್ಣುಕಾಯಾಗಿ
ನನ್ನ ಭಾವಗಳೆಲ್ಲ ಹಚ್ಚ ಹಸುರಾಗಿ
ಹೊದ್ದುಕೊಂಡಂತಿತ್ತು ಆ ಮರಕೆ ಸ್ಥೋಗಿ!

ಅದರ ರೆಂಬೆಯು ಹಿಡಿದ ಜೋಕಾಲಿಮಾಡಿ
ಅದರ ರೆಂಬೆಯು ಕೊಟ್ಟ ಫಲದ ರುಚಿ ನೋಡಿ,—
(ನಮ್ಮ ಮಾಳಿಗೆಗೆಂದು ಬಾಗಿದಾ ರೆಂಬೆ
ಸಣ್ಣವನಿಗೂ ನಿಲುಕುತಿತ್ತು ಎನ್ನೆಂಬೆ!)

ಇನ್ನು ಸಿಗುವದೆ ಎಂದು ಮನವು ಮರುಗುವದು;
ವಿಸ್ಮೃತಿಯು ಸ್ಮೃತಿಯಾಗಿ ಮತ್ತೆ ಕೊರಗುವದು!

ವಿನಾಯಕ.

IN THE COURT OF THE SUB JUDGE OF SOUTH KANARA

O. P. No. 29/1929

In the matter of the estate of Anantha Puthuraya deceased.

Vankatramana Karantha son of Noojibettu Narayana Karantha of Delampady Village Kasargode Taluk—Petitioner.

The abovenamed petitioner has filed the above petition for the grant of a Certificate to him under the Succession Certificate act 1889 empowering him to collect the debt specified in the schedule to the petition and the said petition stands posted to 2—4—1929 at 11 a. m. before the above mentioned Court. The relations of the said deceased if any, may appear in person or by pleader and oppose the said petition on or before the said date.

Mangalore 14—3—1929. B. Valkunta Baliga, *Vakil for Petitioner.*

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O P No 21/1929

ಗಿಳ್ಯಂಜೆ ಸರಸ್ವತಿ, ಗಿಳ್ಯಂಜೆ ಗಣಪತಿಭಟ್ಟ ವಿಧವೆ ಪುತ್ತೂರು ತಾಲೂಕು ಕೊಳನಾಡು ಗ್ರಾಮದ ತಾರ್ಕನೂರಿಯಲ್ಲಿ—ಅರ್ಜಿದಾರ್ಳು.

ಮೇಲೆ ಹೆಸರು ಕಾಣಿಸಿದ ಅರ್ಜಿದಾರ್ಳು 1889ನೇ ಸಕ್ಸೆಸನ್ ಸರ್ಟಿಫಿಕೇಟು ಆಕ್ಟು ಪ್ರಕಾರವೂ 1925ನೇ ಇಸವಿಯ 39ನೇ ಆಕ್ಟಿನ 372ನೇ ಕಲಂಪ್ರಕಾರವೂ ಈ ಕೋರ್ಟಿನಲ್ಲಿ ತನ್ನ ವ್ಯಾಕಪಟ್ಟ ಗಂಡಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ತಾನು ವಸೂಲು ಮಾಡುವದಕ್ಕೋಸ್ಕರ ಸಕ್ಸೆಸನ್ ಸರ್ಟಿಫಿಕೇಟು ಪಡೆಯುವದಕ್ಕೆ ಮಾಸಿದಿದ್ದ ಅರ್ಜಿಯಿಂದ ತನ್ನ ಕಿ ಅಕ್ಕ ರಿಂದ ಈ ಕ.ರ.ಕ. ಆಕ್ಷೇಪಣೆ ಹೇಳತಕ್ಕವರು ಅರ್ಜಿಯ ತನ್ನಿಕೆಗಾಗಿ 11—4—1929ಕ್ಕೆ ಈ ಕೋರ್ಟಿನ ಮುಂದೆ ಉಪಸ್ಥಿತರಾಗಬೇಕೆಂದು ಈ ಮೂಲಕ ಸಮಸ್ತರಿಗೂ ತಿಳಿಸಲಾಗುತ್ತದೆ.

ಪುತ್ತೂರು ತಾ. 21 — — 1929

ಬಿ ಪಿ. ಕೃಷ್ಣರಾವ್, ಬಿ. ಎ.
ಬಿ ರಾಮಚಂದ್ರರಾವ್,
ಎಮ್. ಎ ಬಿ ಎಲ್,
ಅರ್ಜಿದಾರಳ ವಕೀಲರು

ಮುಂಬಯಿಯಲ್ಲಿ ಕನ್ನಡ ಪತ್ರಗಳ ವ್ಯವಸ್ಥೆ

ಮುಂಬಯಿ ಪಟ್ಟಣದಲ್ಲಿ ಕನ್ನಡ ನಾಡಿನ ವರ್ತಕರೂ, ನೌಕರರೂ ಮುಂತಾದ ಅನೇಕ ನಾಗರಿಕರು ವಾಸ್ತವ್ಯ ಮಾಡಿಕೊಂಡಿರುವರಷ್ಟೆ. ತಮ್ಮ ಕಾಯಿದೆ ಮೊದಲಾದದ್ದೇ ಇಲ್ಲ ಇದ್ದರೂ ಅಲ್ಲಿಯವರೆಗೆ ಯಾಗಲಿ ಅಲ್ಲಿನ ಕನ್ನಡಿಗರು ಕೊಡಗಿಸದಿರುವುದರಿಂದ ಕನ್ನಡ ವಿಳಾಸದಿಂದ ಪತ್ರಗಳನ್ನು ಬರೆದರೆ ತಕ್ಕ ವೇಳೆಗೆ ಕೈಗೆ ಬಾರದೆ ಹೋಗಿ ಎಷ್ಟೋ ತೊಂದರೆಗಳು ಉಂಟಾಗುತ್ತವೆ. ಈ ಭೀತಿಯ ಮೂಲಕವಾಗಿ ಇಂಗ್ಲೀಷ ಬಾರದಿದ್ದ ಅನೇಕ ಕನ್ನಡಿಗರು ಬೇರೆಯವರಿಗೆ ಅಂಗಲಾಚಿ ಇಂಗ್ಲೀಷಿನಲ್ಲಿ ಅಥವಾ ಮರಾಠಿಯಲ್ಲಿ ವಿಳಾಸವನ್ನು ಬರೆಯಿಸಿಕೊಂಡು ಪತ್ರಗಳ ಸೈನಹಾರವನ್ನು ಸಾಗಿಸಬೇಕಾಗಿದ್ದಿತು.

ಆದರೆ ಈ ಸಂಸ್ಥೆಯ ಅಧ್ಯಕ್ಷಸ್ಥಾನವನ್ನು ಹೊಂದಿದ ಕಾಡಲೇ, ಆರಂಭಕ್ಕೆ ಈ ಕೇಂದ್ರಸ್ಥಾನವಾದ "ರಾಜಧಾನಿ" ಪಟ್ಟಣದಲ್ಲಿ ಕನ್ನಡ ವಿಳಾಸದ ಪತ್ರಗಳು ತಕ್ಕ ವೇಳೆಗೆ ಯಾಕೆ ಹಂಚಿಸಲ್ಪಡಬಾರದು ಎಂದು ಯೋಚಿಸಿಕೊಂಡು ಸರಕಾರಕ್ಕೆ ಕೇಳಿ, ಅಂಚೆಖಾತೆಯವರಿಗೆ ಪತ್ರವ್ಯವಹಾರ ಮಾಡಿ ಅಖಂಡವಾಗಿ ಆರು ತಿಂಗಳ ಶ್ರಮಪಡಲಾಗಿ, ಈ ಸಂಸ್ಥೆಗೆ ದೊರೆತ ಫಲವು ಎಲ್ಲ ಕನ್ನಡನಾಡಿನ ವ್ಯಾಪಾರಸ್ಥರಿಗೆ ವಿದಿತವಾಗಬೇಕೆಂದು ಇದರಡಿಯಲ್ಲಿ ಸಂಘದ ಕಡೆಯಿಂದ ಪತ್ರಕ್ಕೆ ಮುಂಬಯಿ ಪ್ರೆಸಿಡೆನ್ಸಿ ಪೋಸ್ಟ ಮಾಸ್ತರ ಕಡೆಯಿಂದ ಬಂದ ಪತ್ರದ ಭಾಷಾಂತರವನ್ನೇ ಕೊಟ್ಟಿದೆ. ನೋಡಿರಿ ಓದಿರಿ ಇನ್ನು ಮೇಲೆ ಕಾಯಿದೆ ಸುದಿಯಲ್ಲಿಯೇ ಪತ್ರಗಳನ್ನು ಬರೆಯಿರಿ.

"ನಂ ೧೭೦೯/೨೮ ಮುಂಬಯಿ ಇಸೇ ಮಾರ್ಚ ೧೯೨೯ ಇಸ್ವಿ ಪ್ರೆಸಿಡೆನ್ಸಿ ಪೋಸ್ಟ ಮಾಸ್ತರರಿಂದ್ಯಾ—

ಬಾಗಲಕೋಟೆಯ ಕರ್ನಾಟಕ ವ್ಯಾಪಾರ ಸಂಘದ ಸೆಕ್ರೆಟರಿ ಮಹಾಶಯರಿಗೆ

ತಾ ೩೧—೧—೧೯೨೯ನೇ ದಿವಸದ ೧೨೪/೨೮ ನೇ ನಂಬರಿನ ನಿಮ್ಮ ಪತ್ರದನ್ವಯ ಅವಶ್ಯವೆನಿಸಿದ ವಿಚಾರಣೆ ಮಾಡಿ ಕನ್ನಡ ಬಲ್ಲ ಅಧಿಕಾರಿಯನ್ನು ಕಾಳಬಾದೇವಿ ಶಹರ ಸಬ್ಬಆಫೀಸಕ್ಕೆ ನೇಮಿಸಿ ಅದೆ.

ಸದ್ಯದಲ್ಲಿ ಕಾಳಬಾದೇವಿಯ ಪೋಸ್ಟ ಆಫೀಸದ ಬಗ್ಗೆ ವಿಚಾರ ಮಾಡಿದೆ, ಕಾಳಬಾದೇವಿಯಲ್ಲಿ ಕನ್ನಡಿಗರು ಹೆಚ್ಚುಮಂದಿ ಮತ್ತೆ ಯಾವ [illegible]

ಮದ್ಯಪಾನ

[illegible]

ಭಾವಾರ್ಥ—ಮದ್ಯ ಸೇವನೆ ಮಧುಪಾನಗಳು ಮತ್ತು ಐದು ಮಹಾಪಾತಕಗಳು, ಹಾಳತಿ ಇವು ಗ್ರಹಸ್ಥರ ಎಂಟು ಮಹಾ ಗುಣಗಳೆಂದು ಮಹಾಮುನಿಗಳು ಹೇಳಿರುವರು. ಮದ್ಯದ ತ್ಯಾಗದ ಸಂಬಂಧದಲ್ಲಿ ಆ ಆಚಾರ್ಯರೇ ಹೇಳುವರು.

ತ್ರಸಹತಿಪರಿಹರಣಾರ್ಥಂ ಕ್ಷೌದ್ರಂ ಪಿಶಿತಂ ಪ್ರಮಾದಪರಿಹೃತಯೇ।
ಮದ್ಯಂ ಚ ವರ್ಜನೀಯಂ ಜಿನಚರಣೌ ಶರಣಮುಪಯಾತೈಃ॥

ಭಾವಾರ್ಥ—ಜಿನೇಂದ್ರನೆ ಶರಣು ಹೊಕ್ಕವರು ತ್ರಸ ಜಂತುಗಳ ರಕ್ಷಣೆಗೋಸ್ಕರ ಮಾಂಸ, ಮಧು ಮತ್ತು ಪ್ರಮಾದದ ಪರಿಹಾರಕ್ಕಾಗಿ ಇವು ಮೂರನ್ನು ತ್ಯಾಗಮಾಡತಕ್ಕದ್ದು. ಶರಾಬು, ಭಂಗಿ, ಅಫೀಮು, ತಂಬಾಕು ಮೊದಲಾದವು ಪ್ರಮಾದ ಅಥವಾ ಮತ್ತನ್ನುಂಟುಮಾಡುವ ಪದಾರ್ಥಗಳು ಮದ್ಯದಲ್ಲಿ ಸೇರುತ್ತವೆ. ಆದುದರಿಂದ ಮದ್ಯವನ್ನು ತ್ಯಾಗ ಮಾಡುವುದುಚಿತವೆಂದು ಮೇಲಿನ ಮಾತುಗಳಿಂದ ಗೊತ್ತಾಗುತ್ತದೆ. ಮದ್ಯದ ವಿಷಯದಲ್ಲಿ ಶ್ರೀ ಅಮೃತಚಂದ್ರಾಚಾರ್ಯರು ಪುರುಷಾರ್ಥ ಸಿದ್ಧ್ಯುಪಾಯ ಗ್ರಂಥದಲ್ಲಿ ಹೇಳಿರುವರು.

ಮದ್ಯಂ ಮೋಹಯತಿ ಮನೋ ಮೋಹಿತಚಿತ್ತಸ್ತು ವಿಸ್ಮರತಿ ಧರ್ಮಂ।
ವಿಸ್ಮೃತಧರ್ಮಾ ಜೀವೋ ಹಿಂಸಾಮವಿಶಂಕಮಾಚರತಿ॥

ಭಾವಾರ್ಥ—ಮದ್ಯವು ಮನಸ್ಸನ್ನು ಮೋಹಿಸುತ್ತದೆ. ಮೋಹಿತ ಚಿತ್ತವುಳ್ಳ ಜೀವನು ಧರ್ಮವನ್ನು ಮರೆತುಬಿಡುತ್ತಾನೆ. ಧರ್ಮವನ್ನು ಮರೆತ ಜೀವನು ಶಂಕೆಯಿಲ್ಲದೆ ಹಿಂಸೆಯನ್ನು ಮಾಡುತ್ತಾನೆ.

ಇನ್ನೊಬ್ಬ ಆಚಾರ್ಯರು ಹೇಳುವರು,

ಅರೋತಿ ಮದ್ಯಪಾನಸ್ಯ ಸ್ವರೋಗ ವಿನ್ಯಲೀಕೃತಃ।
ಸಮಾತರಂ ಸ್ವಯೋಷಿತಂ ಸಮಾನಮೇವ ಪಶ್ಯತಿ॥

ಭಾವಾರ್ಥ—ಮದ್ಯಪಾನ ಮಾಡುವುದರಿಂದ ಮನುಷ್ಯನಿಗೆ ಕಾಮೋದ್ರೇಕವಾಗುತ್ತದೆ. ಅದರಿಂದ ಅವನು ತನ್ನ ತಾಯಿಯನ್ನೂ, ಹೆಂಡತಿಯನ್ನೂ ಸಮಾನವಾಗಿ ನೋಡುತ್ತಾನೆ.

ಈ ಎಲ್ಲ ಸಂಗತಿಗಳಿಂದ ಮದ್ಯವು ಇಹಪರಗಳಲ್ಲಿ ಮನುಷ್ಯನಿಗೆ ಬಹಳ ಅನರ್ಥವನ್ನುಂಟುಮಾಡುತ್ತದೆಂದು ಗೊತ್ತಾಗುವುದು. ಒಂದು ಕಾಲದಲ್ಲಿ ಭಾರತ ವರ್ಷದಲ್ಲಿ ಚಂಡಾಲರು ಮಾತ್ರ ಮದ್ಯಪಾನ ಮಾಡುತ್ತಿದ್ದರು. ಆದರೆ ಈಗ ಅದಕ್ಕೆ ಸಭ್ಯತೆಯ ರೂಪವನ್ನು ಕೊಟ್ಟು ಉಚ್ಚ ನೀಚರೆನ್ನದೆ ಸಾಮಾನ್ಯ ಎಲ್ಲರೂ ಮದ್ಯಪಾನ ಮಾಡುತ್ತಿರುವರು. ಯಾವ ದೇಶದಲ್ಲಿ ಮದ್ಯಪಾನದ ಅಭ್ಯಾಸವಿರುವುದೋ ಅಲ್ಲಿಯ ಸ್ಥಿತಿಯು ಬಹಳ ಶೋಚನೀಯವಾಗುವುದು. ಮದ್ಯಪಾನದ ಪ್ರಚಾರವು ಅನೇಕ ಭಯಂಕರ ಮಹಾ ದೋಷಗಳ ಪ್ರಚಾರಕ್ಕೆ ಕಾರಣವಾಗಿದೆ. ದೇಶಹಿತದ ದೃಷ್ಟಿಯಿಂದ ಅನೇಕ ದೇಶವಾಸಿಗಳು, ತಮ್ಮ ದೇಶದಲ್ಲಿ ಮದ್ಯಪಾನವನ್ನು ಘೋರ ನಿಷೇಧ ಮಾಡಿದ್ದಾರೆ. ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಅನೇಕ ಅಪ್ರತಿಮ ಸಂಸ್ಥಾನಗಳಿವೆ. ಅವುಗಳಲ್ಲಿ ಒಂದೇ ಒಂದು ಮದ್ಯದ ಅಂಗಡಿ ಯಾವದೂ ಇಲ್ಲ. ಅಲ್ಲಿ ಕಳೆದ ೧೯೧೫ನೇ ಇಸವಿಯಿಂದ ಈ ವರೆಗೆ ಮದ್ಯಪಾನದ ನಿಷೇಧವನ್ನು ಮಾಡಿರುವ ಸಂಸ್ಥಾನಗಳ ಹೆಸರುಗಳನ್ನು ಕೆಳಗೆ ಬರೆಯುವೆವು.

(೧) ಏರಿಜೋನಾ, (೨) ಕೊಲೊರಡೊ, (೩) ಅರೀಜೋನಾ (೪) ವಾಷಿಂಗ್ಟನ್, (೫) ಓರಗಾನ್, (೬) ಅಲಬಾಮಾ, (೭) ಆರ್ಕನ್ಸಸ್, (೮) ಅಯೋವಾ, (೯) ಇಡಹೋ, (೧೦) ಮೊಂಟೆನಾ, (೧೧) ಪಶ್ಚಿಮ ಕರೋಲಿನಾ, (೧೨) ಉಟಹ, (೧೩) ಪಶ್ಚಿಮ ಉಕೋಟಾ, (೧೪) ಮಿಚಿಗನ, (೧೫) ಇಂಡಿಯಾನಾ (೧೬) ನ್ಯೂಹೆಂಪಶಾಯರ್ (೧೭) ನೆಬ್ರಾಸ್ಕಾ, (೧೮) ವಿಯೋಮಿಂಗ್.

ಕೆಳಗಿನ ರಾಜ್ಯಗಳಲ್ಲಿ ಕೇವಲ ಕೆಲವು ನಿಶ್ಚಿತ ಸ್ಥಾನಗಳಲ್ಲಿ ಮದ್ಯದ ಅಂಗಡಿಗಳಿಲ್ಲ.

(೧) ಕ್ಯಾಲಿಫೋರ್ನಿಯಾ, (೨) ನ್ಯೂಮೆಕ್ಸಿಕೊ, (೩) ಮಯೋಮಿಂಗ್, (೪) ಟೆಕ್ಸಸ್, (೫) ಲೂಸಿಯಾನಾ, (೬) ಫ್ಲೋರಿಡಾ, (೭) ಮಿಸೂರಿ, (೮) ವಿನೆಸೋಟಾ, (೯) ಇಲ್ಲಿನಾಯಿಸ್, (೧೦) ವಿಸ್ಕೊಂಸಿನ್, (೧೧) ಓಹಿಯೋ, (೧೨) ನೆವಾಡಾ.

ಆದರೆ ಭಾರತ ವರ್ಷದ ಸ್ಥಿತಿಯು ಇನ್ನೂ ಧಾರ್ಮಿಕ ದೃಷ್ಟಿಯಿಂದ ಮದ್ಯಪಾನದ ನಿಷೇಧವಿದ್ದಾಗ್ಯೂ ಭಾರತ ಭೂಮಿಯ ಹಿತೈಷಿಗಳು ಆ ಕಡೆಗೆ ಲಕ್ಷ್ಯ ಕೊಡದೆ ಇರುವರು. ಕಣ್ಣು ಮುಚ್ಚಿ ಕೂತಿರುವರು. ಇದೇ ಸಂದರ್ಭದಲ್ಲಿ ಮದ್ಯಪಾನ ನಿಷೇಧದ ಚಳವಳಿಗಳಲ್ಲಿ ನಿರತರಾದ ಪುಸ್ಸಿಫೂಟ್ ಜಾನ್ಸನ್ ಸಾಹೇಬರು ಬಂದಿರುವರು. ಇಲ್ಲಿ ಅವರ ಚಳವಳಿಯಿಂದಾದರೂ ಎಷ್ಟರ ಮಟ್ಟಿಗೆ ಯಶಸ್ವಿಯಾದೀತೆಂದು ನೋಡುವ.

'ಎಸ್. ಎಸ್. ಜೈನಿ.'

ದಾವಣ ಮುಂಬೈ ಭಾಗದಲ್ಲಿ ಅಥವಾ ಮದ್ರಾಸ, ಹೈದರಾಬಾದ, ಕಲಕತ್ತಾ ಮೊದಲಾದ ಪಟ್ಟಣಗಳಲ್ಲಿಯೂ ಕನ್ನಡಿಗರ ಸಂಖ್ಯೆಯು ಹೆಚ್ಚಿದ್ದು, ಅಲ್ಲಿಯೂ ಕನ್ನಡ ಪತ್ರಗಳು ಸಕಾಲದಲ್ಲಿ ಕನ್ನಡಿಗರಿಗೆ ಮುಟ್ಟುವ ವಿಚಾರ ವಿದ್ದಿದ್ದರೆ ಆ ಭಾಗದ ಕನ್ನಡಿಗರು ನಮಗೆ ತಿಳಿಸಬೇಕು. ಎಂದರೆ ಆ ಬಗ್ಗೆ ಸಹ ಯೋಗ್ಯ ವ್ಯವಸ್ಥೆ ಮಾಡುವವರಲ್ಲ ಬರುವದು.

ಪೋಸ್ಟಿನ ಸಂಬಂಧ ಅಥವಾ ಇತರ ವಿಷಯಗಳಲ್ಲಿ ಯಾವದೇ ಬಗೆಯ ಅನಾನುಕೂಲತೆ, ಅನ್ಯಾಯಗಳು ಕರ್ನಾಟಕದ ವ್ಯಾಪಾರಸ್ಥರಿಗೆ ಆಗುತ್ತಿದ್ದರೆ ಅವರು ದಯವಿಟ್ಟು ಅವನ್ನು ನಮ್ಮ ನಿದರ್ಶನಕ್ಕೆ ತಂದುಕೊಟ್ಟರೆ ಅವನ್ನು ನಿವಾರಿಸಲು ನಾವು ಪ್ರಯತ್ನಿಸುವೆವು.

ಬಾಗಲಕೋಟೆ, ೧೪—೩—೨೯

ಮರಿಗಯ್ಯ ಜಂಗಿನ
ಶ್ರೀನಿವಾಸ ರಾಜೇಂದ್ರನ ಮಂಗಳವೇಢೆ.
ಕಾರ್ಯದರ್ಶಿಗಳು, ಕರ್ನಾಟಕ ವ್ಯಾಪಾರ ಸಂಘ.

[illegible]ಯ
ಅಪೂರ್ವ ಔಷಧಗಳು.

[illegible] ಉತ್ತಮವಾದ [illegible] ತಯಾರಿಸಲ್ಪಟ್ಟದ್ದು. [illegible] ಅನುಭವಿಗಳಿಂದ [illegible] ತರಗಿನ ಪ್ರಮಾಣಗಳಲ್ಲಿ ಬಹಳ ಅನುಕೂಲ ಮತ್ತು [illegible]. ಮೆದುಳು ಮತ್ತು ಸ್ನಾಯುಗಳಿಗೆ [illegible] ಸಾಮರ್ಥ್ಯವನ್ನೀಯುವುದು. 6 [illegible] ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ [illegible] ಪ್ರಯೋಗಿಸಲ್ಪಟ್ಟ ಮಹಾ ರಸಾಯನ [illegible], ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮತ್ತು [illegible] ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕನ್ನಡಿಮಿತ್ರರೇ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಹಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ವಂಟನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯು, ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಮಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
[illegible]

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭಿಷಕ್,
ಮಂಗಳೂರು ದ. ಕನ್ನಡ.

ಮೊದಲ್ ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. [illegible] ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು [illegible], ದಾರದ [illegible]ದಲ್ಲಿಯೂ, [illegible] ಹೆಸರು ಪಡೆದದ್ದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳ ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳ ಗುಣವು ತಿಳಿಯುವದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,

24—8—'28 ಶಿವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ
32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.
ಇತರ ಮಾಹಿತಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ
ಬರೆಯಿರಿ—

ಆತಂಕನಿಗ್ರಹ ಆವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಕ್ಷಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಜರ್ವ್ ಫಂಡು ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾದೆ ಆಗುವ ರೂ. 1000/-ವ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/ and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to—

Canara Bank Ltd.
Mangalore, 11—2—1929.

K. Venkat Rao,
Secretary

THE PANGAL NAYAK BANK, LTD.

Branch Office Mangalore	Head Office: Udipi. *Established 1920*	Agency Office Cochin

Authorised Capital: Rs. 2,00,000-	Paidup Capital: Rs. 1,57400-
Issued Capital: Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6¼, 24 months 6¼% and **interest being payable every 3 months.**

Short Notice Deposits, Cumulative Deposits, and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¼% and interest being payable every quarter.

Loans and Advances are mades on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

Diamonds! Diamonds!!

Ramachandra Krishna Shet
DONGERKERY, MANGALORE.

ಅತ್ಯುತ್ಕೃಷ್ಟ ದರ್ಜೆಯ ಚುನ್ನಾಕ (first quality Selected) ಎಮ್ಸ್ಟರ್ಡಾಮಿನಿಂದ ಬರುವ ವಜ್ರಗಳು ಯೋಗ್ಯವಾಗಿ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds ವಜ್ರಗಳು Diamonds

BOLA MANGESH ROW & CO.,
MANGALORE.

Agents & Direct importers of Superior Daimonds of Antwerp

ಬೆಲ್ಜಿಯಂ ದೇಶದ, ಏಂಟವರ್ಪನಿಂದ ಬರುವ ವಜ್ರಗಳು
— ಮಾರಲ್ಪಡುತ್ತವೆ. —

ಬೋಳ ಮಂಗೇಶ ರಾವ್,
ಮಂಗಳೂರು

[illegible] ಮುದ್ರಣ

ಈ ವಿಷಯವಾಗಿ [illegible] ಹಿಂದೊಮ್ಮೆ [illegible] ಒಂದು [illegible] ಬರೆದುದನ್ನು "ಕರ್ಮವೀರ"ದ [illegible] ಸಂಚಿಕೆಯಲ್ಲಿ ಎತ್ತಿ ಪ್ರಕಟಿಸಿದ ಮೇಲೆ, ಕೆಲವರಿಗೆ ಈ ವಿಷಯವಾಗಿ [illegible] ಆಲೋಚನೆಯು ಉಂಟಾದಂತೆ ತೋರುತ್ತದೆ. ಒಬ್ಬರು ಕರ್ನಾಟಕ ಮುದ್ರಣವನ್ನು ಹೇಗೆ ಸುಲಭವಾಗಿ ಮಾಡಬಹುದೆಂದು ತಾನು ಕಂಡುಹಿಡಿದರೂ, ತನ್ನ ಸಹಾಯಾಭಾವದಿಂದಲೂ ಕನ್ನಡಿಗರ ಪ್ರೋತ್ಸಾಹದ ಅಭಾವದಿಂದಲೂ ಅದನ್ನು ಕಾರ್ಯಕಾರಿಯಾಗಿ ಮಾಡಲು ಸಾಧ್ಯವಾಗಿಲ್ಲವೆನ್ನುವರು. ಆದರೆ ಈ ಮಹನೀಯರ ಕ್ರಾಂತಿಕಾರಕ ಸುಧಾರಣೆಗಳು ೩೦ ವರ್ಷಗಳಿಂದಲೂ ಕಗ್ಗತ್ತಲೆಯಲ್ಲಿಯೇ ಇವೆಯೆಂಬುದು ದುಃಖಕರ. ಮುದ್ರಣವು ಇತರ ಕೈಗಾರಿಕೆಗಳಂತೆಯೇ ಒಂದು ಕೈಗಾರಿಕೆಯಾದುದರಿಂದ ಉತ್ತಮ ಸೂಚನೆಗಳಿಗೆ ಪ್ರೋತ್ಸಾಹವು ದೊರೆಯದಿರಲು ಕಾರಣವಿಲ್ಲ. ಅದರಲ್ಲೂ ಮುದ್ರಣವನ್ನು ಸುಂದರವಾಗಿಯೂ ಸುಲಭವಾಗಿಯೂ ಲಾಭ ಹೆಚ್ಚಾಗುವಂತೆಯೂ ಮಾಡುವ ಸೂಚನೆಗಳಿದ್ದರೆ ಅವು ಮೂವತ್ತು ವರ್ಷಗಳಿಂದಲೂ ಅಜ್ಞಾತದಲ್ಲಿರಬೇಕಾಗಿಲ್ಲ. ಹಾಗೆ ಯಾರೊಬ್ಬರ ಪ್ರೋತ್ಸಾಹವಿಲ್ಲದಿದ್ದರೂ, ಅವುಗಳ ತತ್ವ (Theory)ಗಳನ್ನೇ ಪತ್ರಿಕೆಗಳಲ್ಲಿ ಲೇಖಗಳನ್ನು ಕೊಟ್ಟಿದ್ದಾದರೆ ಮುದ್ರಣ ಶಾಸ್ತ್ರದ ರಚನೆಯಾದರೂ ಆಗುತ್ತಿತ್ತು. ಆದುದರಿಂದ "ಮುದ್ರಣ ಮುದ್ದಾಗಲಿಕ್ಕೆ ಬೇಕಾದ ಮಾಹಿತಿ ಕೊಡಲಿಕ್ಕೆ ಸಿದ್ಧರಿರುವವರು "ಕನ್ನಡದ ಉನ್ನತಿಗಾಗಿ ಪ್ರಯತ್ನ ಮಾಡಲಿಕ್ಕೆ ಸಿದ್ಧರಿರುವ ಉದ್ಯೋಗಿ ಧನಿಕರ"ಗಾಗಿ ಕಾಯದೆ, ತಮ್ಮ ಮಾಹಿತಿಗಳನ್ನು ಪತ್ರಿಕೆಗಳ ಮೂಲಕ ಸೂಚಿಸಬಹುದಾಗಿ ನಾವು ಆಶಿಸುತ್ತೇವೆ. ಇದೇ ವಿಷಯವಾಗಿ "ಕರ್ಮವೀರ"ನ [illegible] ಸಂಚಿಕೆಯಲ್ಲೂ ಒಂದು ಚಿಕ್ಕ ಲೇಖವು ಬಂದಿದೆ. ಅವುಗಳಲ್ಲಿ ಕೊಟ್ಟ ಸೂಚನೆಗಳು ಮುದ್ರಣ ಸೌಲಭ್ಯವನ್ನು ಹೆಚ್ಚಿಸುವವೇನೋ ನಿಜ. ಆದರೆ ಅಕ್ಷರಗಳಲ್ಲಿ ಚಿಕ್ಕಲೆಯೂ ಬಂದಿದೆ ಎಂದು ನಮ್ಮ ಭಾವನೆ. ಮತ್ತು ನಮ್ಮ ಅಭಿಪ್ರಾಯದಲ್ಲಿ ಹಿಂದೂಸ್ಥಾನದ ಕೆಲವು ಅಕ್ಷರಮಾಲೆಗಳಲ್ಲಿ ಕರ್ನಾಟಕದ ಅಕ್ಷರಮಾಲೆಯಲ್ಲಿ ಹೆಚ್ಚಿನ ಸೌಂದರ್ಯವಿದೆಯೆಂದು ಅನ್ನಿಸುತ್ತದೆ. ಮುದ್ರಣಕ್ಕೆ ಅವಶ್ಯಕತೆಗಿಂತ ಮೀರಿದ ಸೌಲಭ್ಯದಿಂದ ಹಾನಿಯುಂಟು; ಅಕ್ಷರದ ರೂಪವನ್ನು ಕೆಡಿಸಿ ಮುದ್ರಣ ಸೌಲಭ್ಯವನ್ನುಂಟುಮಾಡಿದರೆ ಪ್ರಯೋಜನವಿಲ್ಲವೆಂದು; ಕಾರ್ಯತಃ ಈಗಿನ ಅಕ್ಷರ ಜೋಡಣೆಯ ಕ್ರಮದಿಂದ ಮುದ್ರಣಕ್ಕೆ ಅಸೌಕರ್ಯ ಉಂಟಾಗಿಲ್ಲ; ಪ್ರಾಯಶಃ ಯಾಂತ್ರಿಕ ಕೆಲಸಗಳು ಹೆಚ್ಚಾಗಿ Linotype ಮೆಶಿನುಗಳ ಅವಶ್ಯಕತೆಯುಂಟಾದಾಗ ಮಾತ್ರ ಮೊಳೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಆಗತ್ಯ ಬೀಳುವುದು. ಆದರೆ ಹಾಗೆ ಕಡಿಮೆ ಮಾಡುವಾಗ ಅಕ್ಷರದ ರೂಪು ಕೆಡದಂತೆ ನೋಡಿಕೊಳ್ಳಬೇಕಾಗುವುದು. [illegible]—ಆಗಿನ "ಕರ್ಮವೀರ"ನಲ್ಲಿ ಕೊಡಲ್ಪಟ್ಟಿರುವ ಸೂಚನೆಗಳು ಈ ಕಡೆಗೆ ಲಕ್ಷ್ಯಕೊಟ್ಟಿಲ್ಲ. ಆದರೂ ಅಂತಹ ಸೂಚನೆಗಳನ್ನು ಅದರಲ್ಲಿ ತಲೆ ಹಾಕಿದವರು ಇನ್ನೂ ಇನ್ನೂ ಕೊಡಬೇಕಾಗಿ ನಾವು ಕೇಳಿಕೊಳ್ಳುತ್ತೇವೆ.

ಮೂಲ್ಕಿಗೊಂದು ಹೈಸ್ಕೂಲು.

ಮಂಗಳೂರಿನಿಂದ ಹದಿನೆಂಟು ಮೈಲು ಉತ್ತರಕ್ಕೆ ಹತ್ತೊಂಭತ್ತು ಮೈಲು ದೂರವಿರುವ ಮೂಲ್ಕಿಯಲ್ಲಿ ಬರೇ ಒಂದು ಎಲಿಮೆಂಟರಿ ಶಾಲೆಯೂ ಒಂದು ಲೋವರ್ ಸೆಕೆಂಡರಿ ಶಾಲೆಯೂ ಇವೆ. ಮೂಲ್ಕಿಯಲ್ಲಿಯೂ, ನೆರೆಯ ಹಳ್ಳಿಗಳಲ್ಲಿಯೂ ಈಗಿನ ಸರಕಾರದ ಧೋರಣದ ಪ್ರಕಾರ ಎಲಿಮೆಂಟರಿ ಶಾಲೆಗಳು ಹೆಚ್ಚಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದಿದವರ ಸಂಖ್ಯೆಯೂ ಹೆಚ್ಚಾಗುತ್ತದೆ. ಹಾಗೆಯೇ ಲೋವರ್ ಸೆಕೆಂಡರಿ ಶಾಲೆಯಲ್ಲಿ ತುಂಬಾ ವಿದ್ಯಾರ್ಥಿಗಳಿರುವರಲ್ಲದೆ, ಲೋವರ್ ಸೆಕೆಂಡರಿ ಶಾಲೆಯ ಅಪೂರ್ಣತೆಯ ಕಾರಣದಿಂದ, ಹೈಸ್ಕೂಲ್ ವಿದ್ಯಾಭ್ಯಾಸವನ್ನು ಹೊಂದಬೇಕೆಂದು ಮುಂದಾಗಿ ಆಲೋಚಿಸುವ ವಿದ್ಯಾರ್ಥಿಗಳು ಎಷ್ಟೋ ಮಂದಿ ಪರ ಊರುಗಳಿಗೇನೇ ಹೋಗಿ ಮಾಧ್ಯಮಿಕ ವಿದ್ಯಾಭ್ಯಾಸದ ಮೇಲಿನ ಅಭ್ಯಾಸವನ್ನು ಹೊಂದುವರು. ಮೂಲ್ಕಿಯವರೂ, ಹತ್ತಿರದ ಹಳ್ಳಿಯವರೂ ಒಂದು ಹೈಸ್ಕೂಲನ್ನು ಕೊಡಬೇಕಾಗಿ ಸರಕಾ[illegible] "ಇದ್ದವರಿಗೆ ಮತ್ತಷ್ಟು ಕೊಡಲ್ಪಡುವುದು" ಎಂಬ ಬೈಬಲಿನ ವಾಕ್ಯದ ಪೂರ್ವಾರ್ಧವನ್ನು, ಡಿಸ್ಟ್ರಿಕ್ಟ್ ಬೋರ್ಡು ಸರಕಾರವು ಹಳ್ಳಿಗಳ ಕಡೆಗಳಲ್ಲಿ ಹೊಸ ಶಾಲೆಗಳನ್ನು ತೆರೆದು ನಿಜವಾಗುವಾಗ "ಇಲ್ಲದವರಿಂದ ಇದ್ದದ್ದೂ ತೆಗೆದುಕೊಳ್ಳಲ್ಪಡುವದು" ಎಂಬ ಬೈಬಲಿನ ವಾಕ್ಯದ ಉತ್ತರಾರ್ಧವನ್ನೂ, ಮಿಶನ್ ಸಂಸ್ಥೆಯು ಮೂಲ್ಕಿಯ ಇದ್ದ ಲೋವರ್ ಸೆಕೆಂಡರಿ ಶಾಲೆಯನ್ನು ತೆಗೆದು ಹಾಕಿ ನಿಜ ಮಾಡಲು ಯತ್ನಿಸುವಂತೆ ತೋರುತ್ತದೆ. ಈ ಸಂದರ್ಭದಲ್ಲಿ ಮೂಲ್ಕಿಯ ಪೌರವಾಸಿಗಳು ಸರಕಾರಕ್ಕೆ ಪುನಃ ಬಿನ್ನವತ್ತಳೆಯನ್ನು ಕಳುಹಿಸಿದೆ, ಅಲ್ಲದೆ ಆ ಬಿನ್ನವತ್ತಳೆಯನ್ನು ೫೦೦೦ ರೂಪಾಯಿ ದ್ರವ್ಯ ಸಹಾಯವನ್ನು ಕೊಡುವೆವೆಂಬ ವಾಗ್ದಾನದಿಂದ ಮತ್ತೂ ಘಟ್ಟ ಮಾಡಿಯದೆ. ಡಿಸ್ಟ್ರಿಕ್ಟ್ ಬೋರ್ಡು ಇನ್ನೂ ಈ ಕೇಳಿಕೆಯನ್ನು ನಿರಾಕರಿಸಬಲ್ಲದೆಂದು ನಾವು ನೆನಸುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡು ಬರೇ ಠರಾವಿನಿಂದ ತೃಪ್ತವಾಗದೆ ಸರಕಾರದೊಡನೆ ಸರಿಯಾಗಿ ವಾದಿಸಿ ಇದೊಂದು ಹೈಸ್ಕೂಲನ್ನು ಸಾಧ್ಯವಾಗಿ ಮಾಡಬೇಕೆಂತ ನಾವೂ ಅಪೇಕ್ಷಿಸುತ್ತೇವೆ.

ಅಫಘಾನಿಸ್ಥಾನದಲ್ಲಿ

ಅಮೀರ ಅಮಾನುಲ್ಲಾರವರು ಕಾಬೂಲಿನಿಂದ ಪದಚ್ಯುತರಾಗಿ ಕೆಲವು ತಿಂಗಳುಗಳಾದವು; ಅವರ ನಂತರ ಸಿಂಹಾಸನವೇರಿದ ಅವರ ಅಣ್ಣ ಇನಾಯತುಲ್ಲರವರೂ ಕಾಬೂಲಿನಿಂದ ಹೊರಹಾಕಲ್ಪಟ್ಟರು; ಆ ವ್ಯಾಪಾರಿಯೊಬ್ಬನು ಅಮೀರ ಹಬಿಬುಲ್ಲಾ ಎಂಬ ಹೆಸರಿಟ್ಟುಕೊಂಡು ಕಾಬೂಲಿನ ರಾಜಸ್ಥಾನವನ್ನು ಆಕ್ರಮಿಸಿಕೊಂಡನು. ರಾಜ ಮನೆತನದವರೂ ಆ ಹಳೆ ಸೀಮೆಯವರನೂ ಹೊಸ ರಾಜನೂ ಆಗಿರುವ ಬಾಚಾ-ಇ-ಸಾಕೊಗೆ ತಲೆ ತಗ್ಗಿಸಿ ರಾಜಭಕ್ತಿಯನ್ನು ಪ್ರಕಟಿಸುವರು. ಜಲಾಲಾಬಾದಿನಲ್ಲಿ ತಾನೂ ರಾಜನಾಗಬೇಕೆಂಬ ಅಂತರಂಗವೋ ಬಹಿರಂಗವೋ ಆದ ಇಚ್ಛೆಯಿಂದ ಅಮಾನುಲ್ಲರವರ ಭಾವ ಮೈದುನರ ಕಣ್ಣು ಪಾಳೆಯದ [illegible] ಕಾದಾಡಿ, ಸೋತು ಈಗ ತನ್ನ ಅಮಾನುಲ್ಲಾರವರ ರಾಜ ಭಕ್ತಿಯುಕ್ತ ಸೇವಕನೆನ್ನುತ ಜೀವ ಉಳಿದರೆ ಬೇಡಿ ತಿಂದೇನೆಂದು ಹೇಳಾವರವನು ಸೇರಿರುವರು. ಹಿಂದೆ ಅಫಘಾನು ಬ್ರಿಟಿಷ ಯುದ್ಧದಲ್ಲಿ ಹೆಸರು ಹೊಂದಿ ಪ್ಯಾರಿಸಿನಲ್ಲಿ ರಾಯಭಾರಿಯಾಗಿ ವಿಶ್ರಾಂತಿಯನ್ನು ಹೊಂದುತ್ತಿದ್ದ ಜನರಲ್ ನಾದಿರಖಾನರು ಅಫಘಾನಿಸ್ಥಾನದ ಮೇಲಿನ "ಸ್ವದೇಶಪ್ರೇಮ"ದಿಂದ ರಕ್ತಪಾತವಿಲ್ಲದೆ "ಶಾಂತಿ" ತರುವ ನೆವದಿಂದ ಓಡಿ ಬಂದು ಅಫಘಾನಿಸ್ಥಾನವನ್ನು ಹೊಕ್ಕು "ರಾಜನ "ಚುನಾವಣೆ"ಗಾಗಿ ಪ್ರಯತ್ನಿಸುವರು. ಅವರಿಗೇನೂ ರಾಜಸ್ಥಾನದ ಅಭಿಲಾಷೆಯಿಲ್ಲವಂತೆ! ರಾಜಪದವಿ ಕೊಟ್ಟರೂ ಅವರಿಗೆ ಬೇಡವೇ ಬೇಡವಂತೆ! ಆದರೆ ದೇಶದ ಮೇಲಿನ ಗಾಢ ಪ್ರೇಮದಿಂದ ದೇಶಕ್ಕೆ ರಕ್ತಪಾತವಿಲ್ಲದ ಶಾಂತಿಯೊದಗಿಸುವುದೇ ಅವರ ಉದ್ದೇಶವಂತೆ! ಅದಕ್ಕೆ ರಾಜನೊಬ್ಬನನ್ನು ಚುನಾಯಿಸಲು ವ್ಯವಸ್ಥೆ ಮಾಡುವುದೇ ಜನರಲ್ ನಾದಿರಖಾನರ ಮೊದಲಿನ ಪ್ರಯತ್ನವಂತೆ! ಈ ಔದಾರ್ಯದಲ್ಲಿ, ದೇಶ ಪ್ರೇಮದಲ್ಲಿ ಎಂತಹ ಕುಹಕವು ಅಡಗಿರುವುದೆಂದು ತಿಳಿದವರಿಗೇನೇ ತಿಳಿಯಬೇಕು. ಬಾಚಾ-ಇ-ಸಾಕೊವು ರಾಜನಾಗಲಿಕ್ಕೆ ಅರ್ಹನಲ್ಲ; ಅಮಾನುಲ್ಲಾರವರು ಸುಧಾರಣೆಗಳನ್ನು ಜನತೆಗೆ ಬಲವಾಗಿ ಹೇರಿದ್ದರೆ; ರಾಜನೆನ್ನಿಸಲಿಕ್ಕೆ ಚುನಾಯಿಸಲ್ಪಡಲಿಕ್ಕೆ ಮತ್ತಾರೂ ಧೀರರು ಕಾಣುವುದಿಲ್ಲ; ನಾದಿರಖಾನರ ಮೇಲೆ ಅಫಘಾನ ಜನರಿಗೆ ಬಹಳ ಗೌರವವಿದೆ. ಅವರೇ ಆಗಬೇಕೆಂದು ಜನರ ಚುನಾವಣೆಯಾಗಬೇಕು; ಆಗ ಬೇಡವಾದರೂ ರಾಜತನವನ್ನು ತಾನೇ ವಹಿಸಿಕೊಳ್ಳಬೇಕು, ಪಾಪ! ನಾದಿರಖಾನರಿಗೆ ಉಭಯ ಸಂಕಟ! ನಾದಿರಖಾನರ "ರಾಜನ ಚುನಾವಣೆ" ಇದಕ್ಕಿಂತ ಹೆಚ್ಚಿನ ಮಹತ್ವವು ತೋರುವುದಿಲ್ಲ. ನಾದಿರಖಾನರು ಬಂದು ರಿಪಬ್ಲಿಕನ್ನು ಸ್ಥಾಪಿಸಲು ಬಂದಿದ್ದರೆ ನಾವವರ ಅರ್ಥಮಾಡಿಕೊಳ್ಳಬಹುದಿತ್ತು. ಒಬ್ಬ ಅಧ್ಯಕ್ಷನನ್ನು ಚುನಾಯಿಸಲು ಹೇಳಿದ್ದರೆ ಅಂಗೀಕರಿಸಬಹುದಿತ್ತು. ರಾಜನ ಚುನಾವಣೆಯೆಂದರೆ ರಕ್ತಪಾತವಿಲ್ಲದ ಶಾಂತಿಸ್ಥಾಪನೆಯಲ್ಲದ ಖರ್ಚಿಲ್ಲದ ನಾದಿರಖಾನರ ಸಿಂಹಾಸನದ ಮೇಲಿನ ಸ್ಥಾಪನೆ. ಅಫಘಾನಿಸ್ಥಾನವು ಎಂತೆಂತಹ ಸ್ವಾರ್ಥಿಗಳಿಂದ ಮತಭ್ರಾಂತಿಯಿಂದ ನೋಯ ಹೋಗಲಿದೆಯೋ?

ಟಿಪ್ಪಣಿಗಳು.
NOTES.

ನಮ್ಮ ದಕ್ಷಿಣ ಕನ್ನಡ [illegible] ಉಪಾಧ್ಯಾಯರ [illegible] ಬಟವಾಡೆ [illegible] ಸಮಾಚಾರವನ್ನು ಮುಂದಿನ ವಾರದಲ್ಲಿ.

ಕಳೆದ ತಾ. ೧೬ಕ್ಕೆ ಬೆಳಗಾವಿ [illegible] ಉತ್ಸವವು ಬಹಳ [illegible] ನಡೆಯಿತು. ರಕ್ತವು ಕೂಡ [illegible] ರಥದ ಕಂಬಗಳಿಗೆ [illegible] ಗಿಯದೆ.

ಮಂಗಳೂರಿನಲ್ಲಿ ಟಪ್ಪಾಲು ಇಲಾಖೆಯವರು ಟಪ್ಪಾಲು ಬಟವಾಡೆ ಮಾಡುವ ಕ್ರಮವು ವ್ಯಾಪಾರಸ್ಥರಿಗೆ ಬಹಳ ಅನಾನುಕೂಲವಾಗಿರುತ್ತದೆ. ಇಂದಿನ ದಿನ ಟಪ್ಪಾಲು ನಾಲ್ಕೈದು ಗಂಟೆಗೆ ಬಂದರೂ ಬಟವಾಡೆಯಾಗುವುದು ಮರುದಿವಸ ಹತ್ತು ಹನ್ನೊಂದು ಗಂಟೆಗೆ

ಪೋಸ್ಟುಮಾಸ್ಟರರಿಗೆ ಟಪ್ಪಾಲು ಸ್ವಲ್ಪ ಬೇಗತಂದಾರದೆ ಎಂದು ತಿಳಿಸಿದರೆ—ನಮ್ಮ ಕೈಗೆ ಸಿಕ್ಕುವಾಗಲೇ ಒಂಭತ್ತು ಘಂಟೆ ಎಂದು ಉತ್ತರ.

ರೈಲ್ವೆ ಕಂಪೆನಿಯವರು ಸಾಹಸಪಟ್ಟು ಸಾವಿರಮೈಲು ದೂರದಿಂದ ಮೈಲುಗಳನ್ನು ತಂದು ಇಂದಿನ ದಿನ ಸಾಯಂಕಾಲ ಕೊಟ್ಟರೂ ಟಪ್ಪಾಲು ಸಿಕ್ಕುವದು ಮರುದಿನ ಮಧ್ಯಾಹ್ನ.

ರೈಲ್ವೆ ಕಂಪೆನಿಯವರು ವೇಗವನ್ನು ಮಾಡಿದ ಹಾಗೆ ಪೋಸ್ಟು ಇಲಾಖೆಯವರು ಸಹ ಸ್ವಲ್ಪ ವೇಗವನ್ನು ಮಾಡಿ ಎಂಟು ಒಂಭತ್ತು ಗಂಟೆಯೊಳಗೆ ಸಿಕ್ಕುವ ಹಾಗೆ ಮಾಡಿದರೆ ವ್ಯಾಪಾರಸ್ಥರಿಗೆ ಅನುಕೂಲವಾಗುತ್ತಿತ್ತು.

ನಮ್ಮ ಮಂಗಳೂರು ವನಸ್ಪತಿ ವೈದ್ಯರೊಳಗೆ ದೊಡ್ಡಗಲಾಟೆ ಗಲಾಟೆ ಮತ್ತೇನಿಲ್ಲ; ಕಳೆದ ಆಯುರ್ವೇದ ಪರಿಷತ್ತಿನ [illegible] ದಿಂದ ಕೂಡಿಸಿದ ಹಣ ಸ್ವಲ್ಪ ಉಳಿದಿದೆ; ಅದು ಬಳಗಿಂದೊಳಗೆ ಕುದಿಯುತ್ತಿದೆ.

ಕಳೆದ ವರ್ಷಗಳಲ್ಲಂತೂ ೫ ರೂಪಾಯಿಗಿಂತ ಹೆಚ್ಚಾಗಿ ಕೊಟ್ಟವರಿಗೆ ಓಟಿನ ಹಕ್ಕು ಇಟ್ಟಿದ್ದಾರೆ. ಈಗ ಹಣದ ವಿಲೇವಾರಿಯಾಗಲಿಕ್ಕೆ ಅವರೇ ಬೇಕಾಗಿದ್ದಾರೆ.

ಕೆಲವರ ಆಲೋಚನೆ ಸದರಿ ಹಣವನ್ನು ಮಂಗಳೂರಿನ ರಾಮಕೃಷ್ಣ ವೈದ್ಯಾಶ್ರಮಕ್ಕೆ ಕೊಡುವುದೆಂತ.

ಕೆಲವು ವೈದ್ಯರಿಗೆ ಆಯುರ್ವೇದ ಪುಸ್ತಕ ಭಂಡಾರವನ್ನು ಒಡೆ ಮುನ್ನೂರು ರೂಪಾಯಿಯಿಂದ ಇನ್ನಕ್ಕೆ ತರುವ ಆಲೋಚನೆ.

ಮಂಗಳೂರಿನ ಪ್ರಮುಖ ವೈದ್ಯರುಗಳ ಹತ್ತಿರ ಆಯುರ್ವೇದ ಪುಸ್ತಕಗಳ ಕಪಾಟುಗಳೇ ಇರುವಾಗ ಪುಸ್ತಕ ಭಂಡಾರದ ಆವಶ್ಯಕತೆ ಯಾರಿಗೆಂದು ಒಂದು ಪ್ರಶ್ನೆ.

ಪುಸ್ತಕಗಳು ಇಲ್ಲದ ವೈದ್ಯರುಗಳಿಗೆ ಪುಸ್ತಕ ಭಂಡಾರದ ಆಗತ್ಯವೆಂದು ಪ್ರಶ್ನೆ ಏರಬಹುದು. ಈಗಿನ ಆಯುರ್ವೇದ ವೈದ್ಯರು ಪುಸ್ತಕ ವಿನಹ ಹು, ಹು. ಎಲ್ಲರ ಹತ್ತಿರ ಪುಸ್ತಕ ವಿರುವಾಗ ಭಂಡಾರದ ಆಗತ್ಯ ಯಾರಿಗೆ?

ಪುಸ್ತಕಭಂಡಾರದ ಆಲೋಚನೆ ವೈದ್ಯರಿಗಿದ್ದರೂ, ಓಟರಿಗೆ ರಾಮಕೃಷ್ಣ ಧರ್ಮವೈದ್ಯಾಶ್ರಮಕ್ಕೆ ಕೊಡುವ ಆಲೋಚನೆ ಇರಬಹುದು. ಅಂತೂ ಫಲಿತಾಂಶಕ್ಕೆ ನೋಟೀಸು ಕೊಟ್ಟು ಸಭೆ ಇಟ್ಟಿದೆ. ಮುಂದಕ್ಕೆ—

ಮೈಸೂರಿನ ದಿವಾನರಿಗೆ ಇಂಗ್ಲಾಂಡಿನ ಹವೆ ಅಗತ್ಯ ಬಿದ್ದಿದಂತೆ. ಬೆಂಗಳೂರು ಗಲಾಟೆ, ಪತ್ರಿಕೆಗಳ ದೊಬ್ಬೆ, ಇದರಿಂದ ಇವರಿಗೆ ಹವೆ ಬದಲಾವಣೆಯಾಗುವ ಅವಶ್ಯವಿದ್ದಿರಬಹುದು.

ಮದ್ರಾಸಿನ ಅಡ್ಯಾರದಲ್ಲಿರುವ ಥಿಯೋಸೊಫಿಕಲ್ ಸೊಸೈಟಿಯವರ ಭೋಜನ ಶಾಲೆಯ ಒಬ್ಬ ಕೂಲಿ ಕೆಲಸದವನು ಒಬ್ಬ ಹೆಂಗಸನ್ನು ಮತ್ತು ಭೋಜನ ಶಾಲೆಯ ಮೇನೇಜರನನ್ನು ತಿವಿದು ಕೊಂದು ಹಾಕಿ, ತಾನು ಕೂಡ ಆತ್ಮಹತ್ಯ ಮಾಡಿರುವನು. ಪೋಲೀಸಿನವರಿಗೆ ತನ್ನಿಯ ಕೆಲಸ ಸಿಕ್ಕಿದರೂ ಕ್ರೋರ್ಟಿನವರಿಗೆ ಸಂಬಂಧದ ಬಾಧೆ ಒಂದು ಕಡಿಮೆಯಾಯಿತು.

[illegible]

[illegible]

[illegible] ಶುಕ್ರವಾರದ ವರೆಗಿನ ಪಂಚಾಂಗ.

([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
23	ಶನಿ	೧೩	೨೮. ೨	ಮಘಾ	೧೩.೪೪	೧೦	6.35	6.41
24	ರವಿ	೧೪	೨೧.೪೪	ಹುಬ್ಬ	೧೩. ೨	೧೧	6.35	6.41
25	ಸೋಮ	●	೨೦.೪೬	ಉತ್ತರಾ	೧೩.೧೬	೧೨	6.34	6.41
26	ಮಂಗಳ	೧	೨೮.೪೪	ಹಸ್ತಾ	೧೪.೪೪	೧೩	6.33	6.41
27	ಬುಧ	೨	೨೨.೧೬	ಚಿತ್ರಾ	೧೭.೪೬	೧೪	6.33	6.41
28	ಗುರು	೩	೨೫.೧೪	ಸ್ವಾತಿ	೨೧.೪೪	೧೫	6.32	6.41
29	ಶುಕ್ರ	೪	೨೮.೪೬	ವಿಶಾಖಾ	೨೭. ೨	೧೬	6.31	6.41

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
15	92— 0	76— 2	—	—
16	91— 1	74— 4	0 45	—
17	88— 7	77— 8	—	—
18	90— 8	77— 0	—	—
19	90— 1	76— 2	—	—
20	91— 4	75— 0	—	—
21	92— 2	78— 1	—	—
				125-22

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕಿ	...	6— 12	7— 6
ಗುಡ್ಡು	...	6— 4	6— 8
ರಾಶಿ	...	5— 6	6— 0
ಊರ ಅವ್ವಲ್ ಬೆಳ್ತಿಗೆ	...	7— 4	7— 6
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12— 10	13—
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	8— 4	8— 8
ಗೋಧಿ ಗೋಣಿ ಗಳ್ಳೆ	...	19— 12	20— 0
ಹುರುಳಿ ಗೋಣಿ ಗಳ್ಳೆ	...	7— 6	8— 2
ಕಡಲೆ ಗೋಣಿ ಗಳ್ಳೆ	...	14— 8	15— 8
ತೊಗರಿ ಗೋಣಿ ಗಳ್ಳೆ	...	14— 8	15— 0
ತೊಗರಿಬೇಳೆ ಗೋಣಿ ಗಳ್ಳೆ	...	18— 8	27— 0
ಉದ್ದು ಗೋಣಿ ಗಳ್ಳೆ	...	15— 6	15— 12
ಹೆಸರು ಗೋಣಿ ಗಳ್ಳೆ	...	14— 0	14— 6
ಊರು ಬೆಲ್ಲ ಖಂಡಿ ಗಳ್ಳೆ	...	61— 0	66— 8
ಉಪ್ಪು ಗೋಣಿ ಗಳ್ಳೆ	...	4— 6	5— 0
ಕೊಬ್ರಿ ಖಂಡಿ ಗಳ್ಳೆ	...	93— 0	100—
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	30— 0	—
ಎಳ್ಳಿಂಡಿ ಖಂಡಿ ಗಳ್ಳೆ	...	42— 8	
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	6— 12	8— 4
ಎಳ್ಳೆಣ್ಣೆ ಮುಡಿ ಗಳ್ಳೆ	...	7— 12	8— 4
ಹರಳೆಣ್ಣೆ ಪೆಟ್ಟಿಗೆ ಗಳ್ಳೆ	...	7— 12	8— 4
ಮೋರಿಸ ಸಕ್ಕರೆ ಮುಡಿ ಗಳ್ಳೆ	...	8— 10	3— 12
ಘಟ್ಟ ಮೆಣಸು	...	5— 4	6— 8
ಹಳ್ಳ ಊರ ಮೆಣಸಿನಕಾಯಿ ಮುಡಿ ಗಳ್ಳೆ		1— 8	2— 4
ಸಾಸಿವೆ ಮುಡಿ ಗಳ್ಳೆ	...	9— 0	8— 8
ಕೊತ್ತಂಬರಿ ಮುಡಿ ಗಳ್ಳೆ	...	4— 4	6— 2
[illegible] ಕಾಫಿ ಖಂಡಿ ಗಳ್ಳೆ	...	395— 0	415— 0
[illegible] ಅಡಿಕೆ ಖಂಡಿ ಗಳ್ಳೆ	...	140— 0	185— 0
ಕಾಳುಮೆಣಸು ಖಂಡಿ ಗಳ್ಳೆ	...	420— 0	424— 0
ಯೇಲಕ್ಕಿ ಮುಡಿ ಗಳ್ಳೆ	...	55— 0	75—
ಗೇರುಬೀಜ ಮುಡಿ ಗಳ್ಳೆ	...	3— 4	
ಶೆಟ್ಟಿಲ ಖಂಡಿ ಗಳ್ಳೆ	...	42— 0	45— 8
ಹುಂಬ್ರು ಕಗೆದು ಗಳ್ಳೆ	...	19— 12	13— 8
ಹುಂಬ್ರು ಪಾತ್ರಗಳು ಮುಡಿ ಗಳ್ಳೆ	...	25— 0	22— 4
[illegible] ಸೇರು ಗಳ್ಳೆ	...	15— 4	—
[illegible] ಕಗೆದು ಮುಡಿ ಗಳ್ಳೆ	...	16— 0	16— 0
[illegible] ಗಳ್ಳೆ	...	13—9—0	—
[illegible] ಖಂಡಿ ಗಳ್ಳೆ	...	24— 0	32— 8

ಶಂಕಿಸಬೇಡಿ! ... ಖಾತ್ರಿಯಾಗುವದು!!
ಶೀಘ್ರವು, ಅಗ್ಗ ... ಖುಶ್ವಸ್ತ್ರರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧಪಟ್ಟ ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ [illegible] ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ಸೇರಿಸಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಟಿಕೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲಿಕಿನಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗಗಿನ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವ್ಯಕ್ತಿ [illegible] ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೂ ಎಂಬ ಸಹಿತ [illegible] ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬ ವಿವರಗಳು [illegible] ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದಲ್ಲದೆ [illegible] ಸಂಗತಿಗಳಲ್ಲಿ [illegible] ವ್ಯವಹಾರ ನಡೆಸಿದಲ್ಲಿ [illegible] ಅನುಕೂಲಸ್ಥರಾದ ಗರೀಬರಿಗೆ ಅವರ ಆಗತ್ಯದ [illegible] ಕೊಡುವರೆಯೂ ರೋಗಕ್ಕೆ ಬೇಕಾದ ಮತ್ತು ವಿವರಿಸಿ ಅವನ್ನು [illegible] ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯವರು ಯಾವಾಗಲೂ ಸಿದ್ಧವಾಗಿರುವರು. [illegible] ಕೊಡುವರೆ [illegible] ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ [illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ

ತಯಾರಾಗಿವೆ ... ತಯಾರಾಗಿವೆ.
ಕಾಫಿ ಪ್ಲೇಂಟರರಿಗೂ, ತೋಟದವರಿಗೂ
ಬೇಕಾಗುವಂಥ
ಚಕ್ರೋಲ್‌ಗಳು
ಮೂರು ಸ್ಯಾಚಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ
ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ‖ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯು[illegible] ಸಂಗ್ರಹ ರೂಪವಾಗಿರುವ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಪುಕ್ಕಟೆಯಾಗಿ ಓದಿ ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ ಆ ವಿಧಿಗಳನ್ನು ಸಾವಧಾನವಾಗಿ ನಡೆಸುವದೇ ದಾರಿ. ಕಾಗದ ಬರೆದರೆ ಅದರಲ್ಲಿ ಕೇಳಿಯುವ [illegible] ಮುಕ್ತವಾಗಿ [illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಪೈನಾ ಬಜಾರು, ಮದ್ರಾಸು

ಉಚಿತ! ಉಚಿತ!!

372 ಪುಟಗಳುಳ್ಳ [illegible] ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

[illegible] ದರೆ [illegible]

ಮದನಮಂಜರಿ ಮಾತ್ರೆಗಳು

[illegible]

ಡಿ. ಗೂಲಸ್ ವರ್ಕ್ಸ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(19[illegible] XXI [illegible])

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಸ್ಥೆಗಳಿಗೂ ಶುದ್ಧ ಆಯುರ್ವೇದ ಔಷಧಗಳ [illegible] ಆಯುರ್ವೇದ ಔಷಧಗಳನ್ನು [illegible] 19[illegible] ಇಸವಿಯಲ್ಲಿ [illegible] ಆಯುರ್ವೇದ [illegible] ತಯಾರಾದ ಔಷಧಿಗಳಿಗೆ [illegible] ಸಂಘಕ್ಕೆ [illegible] ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

[illegible] ತಿಂಗಳ [illegible] ತಾರೀಖಿನಿಂದ [illegible] ತಾರೀಖಿನವರೆಗಿನ ಪಂಚಾಂಗ.

([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ	ಸೂರ್ಯ ಅಸ್ತ
23	[illegible]	[illegible]	[illegible]	ಮಘಾ	[illegible]	[illegible]	6.36	6.41
24	[illegible]	[illegible]	[illegible]	ಪುಬ್ಬಾ	[illegible]	[illegible]	6.35	6.41
25	[illegible]	●	[illegible]	ಉತ್ತರಾ	[illegible]	[illegible]	6.34	6.41
26	[illegible]	[illegible]	[illegible]	ಹಸ್ತಾ	[illegible]	[illegible]	6.33	6.41
27	[illegible]	[illegible]	[illegible]	ಚಿತ್ರಾ	[illegible]	[illegible]	6.33	6.41
28	ಗುರು	[illegible]	[illegible]	ಸ್ವಾತಿ	[illegible]	[illegible]	6.32	6.41
29	ಶುಕ್ರ	[illegible]	[illegible]	ವಿಶಾಖಾ	[illegible]	[illegible]	6.31	6.41

ಮಂಗಳೂರಿನ ವಾಯುಸ್ಥಿತಿ.

Date. ತಾರೀಖು	Temperature. ಉಷ್ಣ (ಶಾಖ) Maximum ಹೆಚ್ಚಾದುದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
15	92— 0	76— 2	—	—
16	91— 1	74— 4	0 45	—
17	88— 7	77— 8	—	—
18	90— 3	77— 0	—	—
19	90— 1	76— 2	—	—
20	91— 4	75 — 0	—	—
21	92— 2	78 — 1	—	—
				125-22

ಮಂಗಳೂರಿನ ಪೇಟೆ ಧಾರಣೆ.

ದೇನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	...	6— 12	7— 6
ಗುಡ್ಡು	...	6 — 4	6 — 8
ರಾಶಿ	...	5 — 6	6 — 0
ಊರ ಅವ್ವಲ್ ಬೆಳ್ತಿಗೆ	...	7 — 4	7 — 6
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 — 10	13 .
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	6 — 4	6 — 8
ಗೋದಿ ಗೋಣಿ ಗಳ್ಳೆ	...	18 — 12	20 — 0
ಹುರುಳಿ ಗೋಣಿ ಗಳ್ಳೆ	...	7 — 6	9 — 2
ಕಡಲೆ ಗೋಣಿ ಗಳ್ಳೆ	...	14 — 8	15 — 8
ತೊಗರಿ ಗೋಣಿ ಗಳ್ಳೆ	...	14 — 8	15 — 0
ತೊಗರಿಬೇಳೆ ಗೋಣಿ ಗಳ್ಳೆ	...	18 — 8	27 — 0
ಉದ್ದು ಗೋಣಿ ಗಳ್ಳೆ	...	15 — 6	15 — 12
ಹೆಸರು ಗೋಣಿ ಗಳ್ಳೆ	...	14 — 0	14 — 6
ಊರು ಬಲ್ಲ ಖಂಡಿ ಗಳ್ಳೆ	...	81 — 0	86 — 8
ಉಪ್ಪು ಗೋಣಿ ಗಳ್ಳೆ	...	4 — 6	5 — 0
ಬೆಳ್ತಿ ಖಂಡಿ ಗಳ್ಳೆ	...	93 — 0	100 —
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	30 — 0	—
ಎಳ್ಳಿಂಡಿ ಖಂಡಿ ಗಳ್ಳೆ	...	42 — 8	
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	6 — 12	8 — 4
ಎಳ್ಳೆಣ್ಣೆ ಮುಡಿ ಗಳ್ಳೆ	...	7 — 12	8 — 4
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ	...	7 — 12	8 — 4
ಮೋರಿಶ ಸಕ್ಕರೆ ಮುಡಿ ಗಳ್ಳೆ	...	3 — 10	3 — 12
ಜೋಸ ಮೆಣಸು	...	5 — 4	6 — 8
ಹಳ್ಳ ಊರ ಮೆಣಸಿನಕಾಯಿ ಮುಡಿ ಗಳ್ಳೆ	...	1 — 8	2 — 4
ಸಾಸಿವೆ ಮುಡಿ ಗಳ್ಳೆ	...	9 — 0	8 — 8
ಕೊತ್ತಂಬರಿ ಮುಡಿ ಗಳ್ಳೆ	...	4 — 4	5 — 2
[illegible] ಕಾಫಿ ಖಂಡಿ ಗಳ್ಳೆ	...	395 — 0	415 — 0
[illegible] ಅಡಿಕೆ ಖಂಡಿ ಗಳ್ಳೆ	...	145 — 0	185 — 0
ಕಾಳುಮೆಣಸು ಖಂಡಿ ಗಳ್ಳೆ	...	420 — 0	424 — 0
ಮೆಂತ್ಯ ಮುಡಿ ಗಳ್ಳೆ	...	65 — 0	75 —
ಗೇರುಬೀಜ ಮುಡಿ ಗಳ್ಳೆ	...	3 — 4	
ಶುಂಠಿ ಖಂಡಿ ಗಳ್ಳೆ	...	42 — 0	45 — 8
ಹುಂಚ್ಛು ಹಗಡು ಗಳ್ಳೆ	...	19 — 12	13 — 8
ಹುಂಚ್ಛು ಪಾತ್ರಗೆಳು ಮುಡಿ ಗಳ್ಳೆ	...	26 — 0	22 — 4
[illegible] ಸೇರು ಗಳ್ಳೆ	...	15 — 4	—
ಹಿತ್ತಾಳೆ ತಗಡು ಮುಡಿ ಗಳ್ಳೆ	...	16 — 0	16 — 0
ಸತುವು ಗಳ್ಳೆ	...	13—9—0	—
ಬೆಳ್ಳುಳ್ಳಿ ಖಂಡಿ ಗಳ್ಳೆ	...	24 — 0	32 — 8

ಖಂಡಿತ ಸಿದ್ಧಿ! ಖಾತ್ರಿಯಾಗುವದು!!
ಔಷಧಿಗಳು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರಿಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರೀಯ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಭಸ್ಮಗಳು, ಚೂರ್ಣ, ವಟಕ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸುಲಭದಲ್ಲಿ ತಯಾರಿರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗಿಯ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಹಿಂದೆ [illegible] ಪ್ರಕೃತಿ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ [illegible] ಆ ವಿವರ [illegible] ರೋಗಿಯು ಹಾಸಿಗೆ ಬಿಟ್ಟು ನಡೆಯುತ್ತಾರೆ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ [illegible] [illegible]

[illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ತಯಾರಾಗಿವೆ! ತಯಾರಾಗಿವೆ!
ಕಾಫಿ ಪ್ಲಂಟರರಿಗೂ, ತೋಟದವರಿಗೂ
ಬೇಕಾಗುವಂಥ
ಚಕ್‌ರೋಲ್‌ಗಳು
ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —
ಕ್ರಿಯಾಗಲಿ [illegible]
[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನ [illegible], [illegible]

ಉಚಿತ! ಉಚಿತ!!

[illegible]

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]

ಡಿ. [illegible], ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.
([illegible] XXI [illegible])
ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.
ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.
[illegible]
ಏಜಂಟರು ಬೇಕಾಗಿರುವರು.
ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಸೆಕ್ರಿಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

[illegible]

ಸ್ವದೇಶಾಭಿಮಾನಿ.

ತಾರೀಕು ೨೨ನೇ ಶುಕ್ರವಾರ ಮಾರ್ಚಿ ೧೯೨೯.

ಧೋರಣವಿಲ್ಲದ ಪಕ್ಷಗಳಿಗೆ ಧೋರಣವಿಲ್ಲದ ಮಂತ್ರಿಗಳು.

ಕಳೆದ ವಾರದಲ್ಲಿ ಮದ್ರಾಸು ಕೌನ್ಸಿಲಿನಲ್ಲಿ ಮದ್ಯಪಾನ ನಿಷೇಧದ ವಿಷಯವಾಗಿ ನಡೆದ ಚರ್ಚೆಯು ಮದ್ರಾಸಿನ ಹಲವು ಪಕ್ಷಗಳ ನಿಜವಾದ ಗುಟ್ಟನ್ನು ಬಯಲು ಮಾಡುತ್ತದೆ. ಮದ್ರಾಸ ಕೌನ್ಸಿಲಿನ ಮಂತ್ರಿಗಳ, ಸರಕಾರದ ಸ್ವಪ್ನಸೇವೆ ಜೀವಿಗಳಿಂದೂ, ಜಸ್ಟೀಸ್ ಪಕ್ಷವು ಬರೇ ಸಂದರ್ಭಗಳ ಲಾಭಗಳನ್ನು ಹೊಂದುವುದರಲ್ಲಿ ನಿರತವಿದೆಯೇ ಹೊರತು, ಬ್ರಾಹ್ಮಣ ಬ್ರಾಹ್ಮಣೇತರ ಭೇಧವನ್ನುಂಟುಮಾಡಿ ಬ್ರಾಹ್ಮಣೇತರರ ಹಿತವನ್ನು ಕಾಯುವುದಾಗಿ ಅನ್ನಿಸಿದರೂ, ಬಹುವಾಗಿ ಬ್ರಾಹ್ಮಣೇತರರಿಗೇನೇ ಹಿತಕರವಾದ ಈ ಚಳವಳವನ್ನೆತ್ತಿ ಹಿಡಿಯುವ ಸ್ಪಷ್ಟವಾದ ಧೋರಣವು ಅವರಲ್ಲಿರುವುದಿಲ್ಲವೆಂದೂ, ಕೌನ್ಸಿಲಿನೊಳಗಣ ಶಬ್ದವೂ ಚರ್ಚೆಯೂ ಸ್ಪಷ್ಟಪಡಿಸುತ್ತದೆ. ಇಂತಹ ಸ್ವಾರ್ಥಮಯವೂ ಜನಕ್ಕೆ ಅಹಿತಕರವೂ ಆದ ವರ್ತನವನ್ನು ಪ್ರದರ್ಶಿಸಿಯೂ ಯಾವ ಧೈರ್ಯದಿಂದ ಈ ಜಸ್ಟೀಸ್ ಪಕ್ಷವೂ ಸ್ವತಂತ್ರ ಪಕ್ಷವೂ ಮುಂದಿನ ಚುನಾವಣೆಯನ್ನು ಸೇರಬಲ್ಲುದೆಂದು ಹೇಳಲಾಗುವುದಿಲ್ಲ.

ಕಳೆದ ವಾರದ ನಮ್ಮ ಸಂಚಿಕೆಯಲ್ಲಿಯೇ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕಾ ಮದ್ಯಪಾನ ನಿಷೇಧ ಶಾಸನದ ವಿಷಯವಾಗಿಯೂ ಆ ಶಾಸನಕ್ಕೆ ಕಾರಣರಾಗಿರುವ ಮಿ| ಪುಸ್ಸಿಫೂಟ್ ಜೋನ್ಸನ ಈಗಿನ ಹಿಂದೀ ಸಂಚಾರದ ವಿಷಯವಾಗಿಯೂ ನಾವು ಬರೆದಿದ್ದೆವು. ಪಾಶ್ಚಾತ್ಯರಾಷ್ಟ್ರದಲ್ಲಿಯೂ ಸಾಧ್ಯವಾದ ಮದ್ಯಪಾನ ನಿಷೇಧವು ಹಿಂದೂಸ್ಥಾನದಲ್ಲಿ ಸಾಧ್ಯವಲ್ಲವೆಂದು ಚುನಾಯಿತ ಪ್ರತಿನಿಧಿಗಳಿಂದಲೇ ಕೇಳಬೇಕಾಗಿ ಬಂದುದು ಅತ್ಯಂತ ಶೋಚನೀಯವಾದ ಸ್ಥಿತಿಯಾಗಿರುತ್ತದೆ.

ಅಬಕಾರಿ ಇಲಾಖೆಯ ಧೋರಣಕ್ಕೆ ಜವಾಬ್ದಾರರಾಗಿರುವ ಈಗಿನ ಮಂತ್ರಿಗಳ ಮೊದಲು ಆದರ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದ ಮಿ| ಆರೋಗ್ಯಸ್ವಾಮಿ ಮುದಲಿಯಾರರು ತಮಗೆ ಸ್ಪಷ್ಟವಾದ ಮದ್ಯಪಾನ ನಿಷೇಧ ಧೋರಣವಿತ್ತೆಂದೂ, ಅದಕ್ಕೆ ಮುಖ್ಯ ಮಂತ್ರಿಗಳಾಗಿದ್ದ ಡಾ| ಸುಬ್ಬರಾಯನರು ಮೊದಲು ಅನುಕೂಲರಾಗಿದ್ದರೂ, ಸರಕಾರವು ಅದನ್ನು ವಿರೋಧಿಸಿದ ಕೂಡಲೇ ತಾವೂ ಅದಕ್ಕೆ ಪ್ರತಿಕೂಲರಾಗಿದ್ದರೆಂದೂ, ಆ ಕಾರಣದಿಂದ ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ತಾವು ಅಧಿಕಾರದಲ್ಲಿದ್ದಾಗ ಸಾಧ್ಯವಾಗಲಿಲ್ಲವೆಂದೂ ಹೇಳಿದರು. ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಎಷ್ಟು ದ್ರೋಹಿಗಳೆಂದು ಹೇಳಬರುವುದಿಲ್ಲ. ಆದರೆ ಈಗಿನ ಮಂತ್ರಿಮಂಡಲವೂ ಮದ್ಯಪಾನ ನಿಷೇಧದ ಕಡೆಗೆ ಸ್ಪಷ್ಟವಾದ ಧೋರಣವುಳ್ಳುದಾಗಿಲ್ಲವೆಂಬುದು, ಮಂತ್ರಿಗಳ ಭಾಷಣಗಳಿಂದಲೇ ತೋರಿಬರುವುದು. ಸರಕಾರದ ಆರ್ಜನೆಯು ತಪ್ಪುವುದರಿಂದ ಮದ್ಯಪಾನ ನಿಷೇಧವು ಸಾಧ್ಯವಲ್ಲವೆಂಬ ತರ್ಕವು [illegible]

ಮಂತ್ರಿಗಳ ಈ ಧೋರಣೆಯ ಅಭಾವವನ್ನು ಹುಡಿಸುವುದು ಕೌನ್ಸಿಲಿನ ಕರ್ತವ್ಯವಿತ್ತು ಮತ್ತು ಮಂತ್ರಿಗಳ ಮೇಲೆ ಸ್ಪಷ್ಟವಾದ ಧೋರಣವನ್ನು ಹೊರಿಸುವುದು ಕೌನ್ಸಿಲಿನ ಕರ್ತವ್ಯವಿತ್ತು. ಆದರೆ ಕೌನ್ಸಿಲಿನ ಈಗಿನ ಸದಸ್ಯಮಂಡಳಿಯು ನೈಚ್ಯವೇ ಮೇರೆಯುಳ್ಳದಾಗಿರುತ್ತದೆ. ಸ್ವಂತ ಧೋರಣವನ್ನು ಕಾಯಲಿಕ್ಕೆ ಸರಕಾರದ ಸ್ವಂತ ಮತ್ತು ನೇಮಕವಾದ ಮೆಂಬರರು; ಸ್ವತಂತ್ರತೆಯನ್ನುವ ಗಾಳಿ ಬೀಸಿದಂತೆ ಹಾಯಿ ಬಿಡುವ ಸ್ವತಂತ್ರ ಪಕ್ಷದ ಮೆಂಬರರು; ಕಳೆದ ಚುನಾವಣೆಯಲ್ಲಿ ಸೋತುಹೋಗಿ ಸಂಖ್ಯಾಬಲವನ್ನು ಕಳೆದುಕೊಂಡು ಅಧಿಕಾರವನ್ನು ಕಳೆದುಕೊಂಡವರಾಗಿ ಸಂಧಿಗ್ದ ಸಂದರ್ಭಗಳ ಮೂಲಕ ಪ್ರಾಬಲ್ಯವನ್ನು ಪಡೆಯಲು ನಿಶ್ಚಯಿಸಿರುವ ಜಸ್ಟೀಸ ಪಕ್ಷದ ಮೆಂಬರರು; ಹೀಗಾಗಿ, ಅಧೀಕೃತ ಮಂತ್ರಿಗಳಿಗೆ ಧೋರಣವಿಲ್ಲದಿದ್ದರೂ, ಪಕ್ಷಗಳ ವೈಯಕ್ತಿಕ ಸ್ವಾರ್ಥವು ಅವರನ್ನು ಸ್ಥಾನದಲ್ಲಿ ಭದ್ರವಾಗಿ ಕೂಡಿಸಿದಿಕ್ಕಿರುತ್ತದೆ.

ವಿದೇಶ ವರ್ತಮಾನ.

[illegible]

— ಬ್ರಿಟನಿನಲ್ಲಿ ವಿದ್ಯಾರಂಭವಾದ ವಿದ್ಯಾರ್ಥಿಗಳ ಮುಷ್ಕರವು ಜೋರಾಗಿ ಬೆಳೆದಿರುತ್ತದೆ. [illegible] ಅಂಗಡಿಯ ಬಾಗಿಲುಗಳನ್ನು ಒಡೆದು ಹಾಕಿದರು. ತಪ್ಪಿತಗಾರರಾದ ವಿದ್ಯಾರ್ಥಿಗಳನ್ನು ಕಠಿಣವಾದ ಶಿಕ್ಷೆಗೆ ಗುರಿಪಡಿಸಬೇಕೆಂದು ಮಂತ್ರಿಮಂಡಲದವರು ಅಭಿಪ್ರಾಯಪಡುವರು.

— ಇಂಡಿಯಾದ ಸೆಕ್ರೆಟರಿ ಒಫ್ ಸ್ಟೇಟರವರು ವ್ಯಾಸರಾಯರವರಾದ ಲೋರ್ಡ ಇರ್ವಿನರನ್ನು ಇಂಗ್ಲೆಂಡಿಗೆ ಆಮಂತ್ರಿಸಿರುವರು. ನಾಲ್ಕು ತಿಂಗಳುಗಳ ರಜೆಯ ಮೇಲೆ ಅವರು ಇಂಗ್ಲೆಂಡಿಗೆ ಹೊರಟು ಹೋಗುವರು. ಆ ಸಮಯದಲ್ಲಿ ಮಿ, ಗೋಶ್ಚನ್ ದೊರೆಗಳವರು ವ್ಯಾಸರಾಯ ಮತ್ತು ಗವರ್ನರ ಜನರಲರಾಗಿ ವರ್ತಿಸುವರು.

— ಅರಸರ ದೇಹಪ್ರಕೃತಿಯು ಈಗ ಕಡುಮಟ್ಟಿಗೆ ಚೆನ್ನಾಗಿರುತ್ತದೆ, ಮೋಟಾರ ಕಾರಿನಲ್ಲಿ ಕುಳಿತು ಅವರು ತಿರುಗಾಡಲು ಹೋಗಬಹುದೆಂದು ತಿಳಿಯಲಾಗಿದೆ.

— ಬ್ರಿಟನಿನಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಈಗ ಬಹಳ ಕಡಿಮೆಯಾಗಿರುತ್ತದೆ. ಮಾರ್ಚಿ ೧೧ನೇ ತಾರೀಕಿನ ದಿನ ಕೆಲಸವಿಲ್ಲದವರ ಸಂಖ್ಯೆ ೧,೩೬೬,೬೦೦ ಆಗಿದ್ದಿತು. ಇದು ಹಿಂದಿನ ವಾರಕ್ಕಿಂತ ೧೧೮,೩೬೨ ಕಡಿಮೆಯಾಯಿತು. ಆದರೆ ಹಿಂದಿನ ವರುಷಕ್ಕಿಂತ ೧೯೬,೦೬೯ ೧೨ ರ,ತ್ತದೆ

ಒಳದೇಶ ವರ್ತಮಾನ.

[illegible]

[illegible]

ದಕ್ಷಿಣ ಕನ್ನಡ.

ಮಂಗಳೂರು — ಇದೇ ಕಳೆದ ಭಾನುವಾರ ಶ್ರೀ ಕಾರ್ನಾಡ ಸದಾಶಿವರಾಯರು ಕೆಲವು ಸ್ವಯಂಸೇವಕರೊಂದಿಗೆ ಪೇಟೆಯಲ್ಲಿ ಖಾದಿ ಮಾರಾಟವನ್ನು ಮಾಡಿದರು. ಸಾಯಂಕಾಲ ೬ ಘಂಟೆಗೆ ವಕೀಲ್ ಯು. ಮಾಧವರಾಯರ ಅಧ್ಯಕ್ಷತೆಯಲ್ಲಿ ವ್ಯಾಯಾಮಶಾಲೆಯಲ್ಲಿ ಸಾರ್ವಜನಿಕ ಸಭೆಯಾಯಿತು. ಆರಂಭದಲ್ಲಿ ಶ್ರೀ [illegible] ರಾಷ್ಟ್ರಗೀತೆಗಳನ್ನು ಹಾಡಿದರು. ಅಧ್ಯಕ್ಷರೂ, [illegible] ಕೆ. ಆರ್. ಆಚಾರ್ಯರೂ ಕಾಂಗ್ರೆಸ್ಸಿನ ಕಾರ್ಯಕ್ರಮದ ಕುರಿತು [illegible] ವಿಷಯವಾಗಿ ಮಾತನಾಡಿದರು.

[illegible]

[illegible]

Sayani Road, P. O. Cadell Road, Bombay [illegible]

[illegible]

Famous

Mysore Perfumes.

Best incense sticks (Agar Bathis)

Maharaja Bathi	per seer (24 Tolas)	Rs.	20
Durbar ,,	,,	,,	15
Ananda ,,	,,	,,	12
Manmohan ,,	,,	,,	10
Musk Heena	,,	,,	8
Dhoomaman ,,	,,	,,	8
Kasthur Javaji	,,	,,	10
Amber ,,	,,	,,	8
Rose ,,	,,	,,	6
Jasmin ,,	,,	,,	5
Punugu (Civet)	,,	,,	4
Heena ,,	,,	,,	3
A Tin Case containing 300 Assorted Bathis of 12 kinds	,,	,,	6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

ಅಗ್ರಜನ ಅಕಾಲ ಮೃತ್ಯುವನ್ನು ಕೇಳಿದುದರಿಂದ ಅನಂತರಾಯನು ದುಃಖಿತನಾಗಿ ಕಣ್ಣುಗಳಿಂದ ಅಶ್ರುಗಳ ಧಾರೆಯನ್ನೆ ಎರೆದುಬಿಟ್ಟನು; ಆದರೆ ದುಃಖಿಸುತ್ತ ಕುಳಿತುಕೊಳ್ಳಲು ಆತನಿಗೆ ಸಾಧ್ಯವಿಲ್ಲ. ಸನ್ಮುಖದಲ್ಲಿ ಮಹತ್ಕಾರ್ಯವಿದೆಯಲ್ಲವೇ! ಆಗ ಗ್ರಾಮದಲ್ಲಿ ದುರ್ಭಿಕ್ಷ, ಪ್ಲೇಗು, ವಾಂತಿಭೇಧಿ, ಸಿಡುಬು, ಈ ನಾಲ್ಕು ರಕ್ಕಸರು ಸಮಸ್ತ ನರನಾರಿಯರ ಪ್ರಾಣಗಳನ್ನು ನುಂಗಲು ಬಾಯಿಯನ್ನು ತೆರೆದಿರುವುವು. ಅನಂತರಾಯನು ಈ ಸಮಯದಲ್ಲಿ ಹತಭಾಗ್ಯರಾದ ನರನಾರಿಯರಿಗೆ ಸಹಾಯ ಮಾಡುವುದರಲ್ಲೇ ವ್ಯಸ್ತನಾಗಿದ್ದನು. ಒಟ್ಟಾರೆ ಆತನ ಹಸ್ತ ಪಾದಗಳಿಗೆಂಬಂತೆ ಪ್ರಬಲವಾದ ಕೆಲಸವಿದೆ. ಆದುದರಿಂದ ತಂದೆಯು ಈ ಸಾರಿ ಬರೆದ ಪತ್ರಕ್ಕೆ ಅನಂತರಾಯನು "ಈಗ ಒಂದು ನಿಮಿಷವಾದರೂ ಸಮಯವಿಲ್ಲ" ಎಂದಿಷ್ಟೇ ಉತ್ತರವನ್ನು ಬರೆದನು.

ಪುತ್ರನ ಉತ್ತರವನ್ನೋದಿದೊಡನೆಯೇ ವೃದ್ಧ ತಂದೆಗೆ ಸಿಡಿಲು ಬಡಿದಂತಾಯಿತು. ಆತನು ಸುಮ್ಮನೆ ಕುಳಿತುಬಿಟ್ಟನು. ವೃದ್ಧ ತಂದೆತಾಯಿಗಳು ಪುತ್ರಶೋಕದಿಂದ ಹುಚ್ಚರಂತಾಗಿರುವರು.... ತಾಯಿಯಂತೂ ಮರುಗಿ ಮರುಗಿ ಅಂಧಳಾಗಿರುವಳು. ತಂದೆತಾಯಿಗಳನ್ನು ಒಮ್ಮೆಯಾದರೂ ನೋಡಿ ಹೋಗಲು ಬಾರದಂತೆ ಮಾಡುವ ಆ ದೇಶಸೇವೆಯು ಎಷ್ಟು ಪ್ರಬಲವಾಗಿರುವುದೋ ದೇವರೇ ಬಲ್ಲ!

ವೃದ್ಧ ಪಿತನು ಇನ್ನೊಂದು ಪತ್ರವನ್ನು ಬರೆದನು. ಈ ಬಾರಿಯ ಪತ್ರದಲ್ಲಿ ಆತನು 'ಉಪಾರ್ಜನಕ್ಷಮ ಪುತ್ರನಿಲ್ಲದಿದ್ದುದರಿಂದ ಆತನ ಸಂಸಾರವು ಅಚಲವಾಗಿರುವುದಾಗಿಯೂ ಆತನು ಈಗ ಅವುದಾದರೂ ಚಾಕರಿಯನ್ನು ಮಾಡಿಯಾಗಲೀ ವ್ಯಾಪಾರವನ್ನು ಮಾಡಿಯಾಗಲೀ ವೃದ್ಧ ತಂದೆತಾಯಿಗಳನ್ನು ಸಾಕಬೇಕೆಂಬುದಾಗಿಯೂ, ಹೀಗೆ ಮಾಡಲು ತಪ್ಪಿದರೆ ತಾವು ಅನಾಥರಾಗುವೆವೆಂಬುದಾಗಿಯೂ' ಬರೆದಿದ್ದನು.

ಈ ಪತ್ರವನ್ನು ಓದಿ ಅನಂತರಾಯನು ನಡುಗಿದನು.

ಇದೇನು? ಈಗ ಸ್ವಾರ್ಥಪರತೆಯು ವಿಷಮವು! [illegible] ವಿನಾದರೂ ಹಣವನ್ನು ಸಂಪಾದಿಸ[illegible] ಚಾಕರಿ ಮಾಡಬೇಕೆಂಬ ಬೋಧನೆ! ಇದನ್ನು ಯೋಚಿಸಿ ಅನಂತರಾಯನು ತನ್ನಷ್ಟಕ್ಕೆ ಈ ವೃದ್ಧ ತಂದೆತಾಯಿಗಳೇ ತಮ್ಮ ಮಕ್ಕಳ ಅಧೋಗತಿಗೆ ಕಾರಣಭೂತರಾಗಿರುವರು ಎಂದುಕೊಂಡನು. ಅವರೇ ತಮ್ಮ ಮಕ್ಕಳಿಗೆ ದಾಸತ್ವ ವೃತ್ತಿಗೆ ಕೈ ಹಚ್ಚಿಸುವಂಥವರು! ಅವನಾರು ತನ್ನ ಸ್ವಾರ್ಥವನ್ನು ತೊರೆದು, ತನ್ನ ಸುಖಗಳನ್ನು ಅಲಕ್ಷಿಸಿ ದೇಶಸೇವೆಯನ್ನು ಮಾಡಿ ಭಾರತ ಭೂಮಿಯ ಯೋಗ್ಯ ಪುತ್ರನೆಂದೆನಿಸಿಕೊಂಡಿರುವನೋ ಅಂಥವನ ತಂದೆಯೇ ಇಂದು ಸಾಮಾನ್ಯ ಉದರ ಅನ್ನಕ್ಕಾಗಿ ಅನ್ಯರ ಚಾಕರಿಯನ್ನು ಮಾಡಲು ಅನುಮೋದಿಸುವುದೆಂದರೇನು? ಸ್ವಾರ್ಥತ್ಯಾಗದ ಅಪೂರ್ವ ಉದಾಹರಣೆಯನ್ನು ಪ್ರದರ್ಶಿಸಿ ಅವನಿಂದು ದೇಶದಲ್ಲೆಲ್ಲ ಯಥೇಷ್ಟ ಕೀರ್ತಿಯನ್ನು ಸಂಪಾದಿಸಿರುವನೋ ಅಂಥವನ ತಂದೆಯೇ ಇಂದು ಆ ಅಕಳಂಕವಾದ ಕೀರ್ತಿಗೆ ಕಳಂಕವನ್ನು ತರಲು ಅಪೇಕ್ಷಿಸುವನೇ!

ಅನಂತರಾಯನು ಈ ಬಾರಿಯ ಪತ್ರಕ್ಕೆ ಉತ್ತರವನ್ನು ಕೊಟ್ಟನು. ಆತನ ಉತ್ತರದ ಸಾರಾಂಶವಿಷ್ಟೆ. ತಾನು ಎಂದೂ ಚಾಕರಿಯನ್ನು ಮಾಡಲಾರೆನೆಂದೂ ವ್ಯಾಪಾರ ಮಾಡಲಿಕ್ಕೂ ಸಾಧ್ಯವಿಲ್ಲವೆಂದೂ ಆತನ ಉತ್ತರದಲ್ಲಿದ್ದಿತು.

ನಾಲ್ಕು.

ಹೀಗೆಯೇ ಒಂದು ವರುಷ ಕಳೆದುಹೋಯಿತು. ಈ ಮಧ್ಯಕಾಲದಲ್ಲಿ ತಂದೆಯಿಂದ ಮಗನಿಗಾಗಲೀ ಮಗನಿಂದ ತಂದೆಗಾಗಲೀ ಒಂದೇ ಒಂದಾದರೂ ಪತ್ರವು ಬರಲಿಲ್ಲ. ಪುತ್ರ ನನಗಿಲ್ಲವೆಂತಾಯಿತು ಎಂದು ತಂದೆಯು ಭಾವಿಸಿಕೊಂಡನು. ಪುತ್ರನು ದೇಶಸೇವೆಯಲ್ಲಿ ಮಗ್ನನಾಗಿ ತಂದೆಗೆ ಒಂದು ಪತ್ರವನ್ನು ಬರೆಯುವಷ್ಟರ ಮಟ್ಟಿನ ಸಮಯವು ಆತನಿಗೆ ದೊರಕಲಿಲ್ಲವೇ! ಆವ ಪುತ್ರನಿಂದ ಕಳುಹಿಸಲ್ಪಡುತ್ತಿದ್ದ ಹಣದಿಂದ ಸಂಸಾರವು ನಡೆಯುತ್ತಿತ್ತೋ ಅದೇ ಪುತ್ರನ ಅಭಾವದಿಂದ ಇಂದು ವೃದ್ಧನ ಸಂಸಾರವು ಅಚಲವಾಗಿದೆ. ಪ್ರಥಮದಲ್ಲಿ ಕೆಲವು ತಿಂಗಳು ಅಲಂಕಾರಾದಿಗಳ ವಿಕ್ರಯದಿಂದ [illegible] ನೆಲ್ಲಾ!

ಇನ್ನು ಮುಂದೆ ದಿನ ಕಳೆಯುವುದು ಕಷ್ಟ!

ಅಷ್ಟರಲ್ಲಿ ನಿರುಪಾಯನಾಗಿ ವೃದ್ಧ [illegible] ಪತ್ನಿಯ ಹಸ್ತವನ್ನು ಹಿಡಿದು ಹೊರಗೆ ಹೋಗಿ ಭಿಕ್ಷೆಯನ್ನು ಬೇಡಲು ಪ್ರಾರಂಭಿಸಿದನು. ಅಂದಿನಿಂದ ಆತನು ಆ ಗ್ರಾಮದಲ್ಲಿ ಆರಿಗೂ ಕಾಣಸಿಗಲಿಲ್ಲ.

ಐದು.

ಗ್ರಾಮದ ಹೆಸರು ಸೋಮೇಶ್ವರ. ಗ್ರಾಮದ ಅವಸ್ಥೆಯು ಅಷ್ಟೊಂದು ಚೆನ್ನಾಗಿಲ್ಲ. ಗ್ರಾಮದ ನಾಲ್ಕು ಬದಿಗಳಲ್ಲೂ ಭಯಂಕರ ಕಾಡು. ಪುಷ್ಕರಿಣಿಯಲ್ಲಾಗಲೀ, ಸಮೀಪದ ನದಿಯಲ್ಲಾಗಲೀ ಜಲವಿಲ್ಲ, ಗ್ರಾಮ ವಾಸಿಗಳ ಹೊಟ್ಟೆಗೆ ಅನ್ನವಿಲ್ಲ, ರೋಗಕ್ಕೆ ಚಿಕಿತ್ಸೆಮಾಡಲು ವೈದ್ಯರಿಲ್ಲ, ವಿದ್ಯಾಭ್ಯಾಸಕ್ಕೆ ಸರಿಯಾದ ಶಾಲೆಯಿಲ್ಲ. ಒಟ್ಟು ನಾಲ್ಕು ಕಡೆಗಳಿಂದಲೂ 'ಇಲ್ಲ' 'ಇಲ್ಲ' ಎಂಬ ರವವೇ ಕೇಳಬರುತ್ತಿದೆ.

ಅನಂತರಾಯನ ಸ್ವಯಂಸೇವಕ ದಳದವರು ಈ ಗ್ರಾಮಕ್ಕೆ ಬಂದು ಸಂಸ್ಕಾರ ಕಾರ್ಯವನ್ನು ಪ್ರಾರಂಭಿಸಿರುವರು. ಆಗ ಮಧ್ಯಾಹ್ನ ಎರಡು ಗಂಟೆಯಾಗಿರಬಹುದು. ಚೈತ್ರಮಾಸದ ಪ್ರಚಂಡ ಸೂರ್ಯನ ಉತ್ತಾಪದಿಂದ ದಗ್ಧವಾಗುತ್ತಿರುವುದಾದರೂ ಅನಂತರಾಯನು ತನ್ನ ಸ್ವಯಂಸೇವಕರೊಂದಿಗೆ ಜಲರಹಿತವಾದ ಪುಷ್ಕರಿಣಿಯನ್ನು ತೋಡುತ್ತಿರುವನು. ಇಷ್ಟರಲ್ಲಿ ಆರೋ ಒಬ್ಬನು ಬಂದು ಒಬ್ಬ ವೃದ್ಧ ಮನುಷ್ಯನೂ ಒಬ್ಬ ವೃದ್ಧ ಹೆಂಗಸೂ ರಸ್ತೆಯ ಪಾರ್ಶ್ವದಲ್ಲಿ ಸತ್ತುಬಿದ್ದಿರುವುದಾಗಿಯೂ ಬಿಸಿಲಲ್ಲಿ ಬಿದ್ದ ಅವರ ದೇಹಗಳು ಒಣಗುತ್ತಿರುವುವಾಗಿಯೂ ಹೇಳಿದನು. ಅದನ್ನು ಕೇಳಿದೊಡನೆಯೇ ಅನಂತರಾಯನು ನಾಲ್ಕೈದು ಮಂದಿ ಸ್ವಯಂಸೇವಕರನ್ನು ಸಂಗಡ ಕರೆದುಕೊಂಡು ಹೆಣಗಳನ್ನು ತೆಗೆಯಲಿಕ್ಕೆಂದು ಹೋದನು. ಅನಂತರಾಯನು ಎಂದು ಹೆಣಗಳ ಹತ್ತಿರ ಬಂದು ನಿಂತನೋ ಆಗ ಆತನ ಶ್ವಾಸವು ಕಟ್ಟಿದಂತಾಯಿತು. ಅಶ್ರುಗಳು ಆತನ ಕಣ್ಣುಗಳಿಂದ ಸುರಿದುವು. ಅವರೇ ಅನಂತರಾಯನ ವೃದ್ಧ ತಂದೆತಾಯಿಗಳು. ಭಿಕ್ಷೆ ಬೇಡುವುದಕ್ಕಾಗಿ ಈ ಗ್ರಾಮಕ್ಕೆ ಬಂದವರು.

ಅನಂತರಾಯನಿಗೆ ತಾನು ನಿಂತುಕೊಂಡ ಭೂಮಿಯು ಕಂಪಿಸಿದಂತಾಯಿತು. ಸನ್ಮುಖದಲ್ಲಿನ ಪ್ರಕಾಂಡ [illegible] ಸೂರ್ಯನು ಕೆಂಡದ ಉಂಡೆಯಾಗಿ ತಿರುಗುವಂತೆ ಕಾಣಿಸಿತು. ಆತನ ಹೊಟ್ಟೆಯಲ್ಲಿ [illegible] ಬಿದ್ದಂತೆ ಒಂದು ವಿಧ [illegible]. ಅನಂತರಾಯನಿಗೆ ಇನ್ನು ನಿಲ್ಲಲಿಕ್ಕೆ ಆಗಲಿಲ್ಲ. ಅಲ್ಲೇ ಕುಸಿದುಬಿಟ್ಟನು. ಆಗಲೇ ಒಂದು ಅಸ್ಫುಟ ಆರ್ತನಾದವು ಆತನ ವಕ್ಷವನ್ನು ಭೇದಿಸಿ ಹೊರಕ್ಕೆ ಹೋಯಿತು.

ಹಣ್ಣುಗಳ ಆವಶ್ಯಕತೆ.

ಆರೋಗ್ಯಕ್ಕೆ ಹಣ್ಣುಗಳ ತಿಂಬೋಣವು ಬಹು ಫಲಕಾರಿಯಾಗಿರುತ್ತದೆ. ಹಿರಿಯರ ಕಾಲದಿಂದಲೂ ಇದೇ ಅಭಿಪ್ರಾಯವು ನೆಲಸಿರುತ್ತದೆಂಬುದಕ್ಕೆ 'ಫಲಾಹಾರ' ಎಂಬ ಒಂದೇ ಶಬ್ದವೇ ಸಾಕಾಗಿದೆ. ಅಂತೆ ಫಲಗಳಿಗೆ ಅಷ್ಟು ಶ್ರೇಷ್ಠತ್ವವು ಪುರಾತನ ಕಾಲದಿಂದಲೂ ಕೊಡಲ್ಪಟ್ಟಿರುತ್ತದೆ. ಕಿತ್ತಳೆ, ದ್ರಾಕ್ಷಿ, ಸೀಬೆ ಮೊದಲಾದ ಹಣ್ಣುಗಳಿಂದ ಹೊಟ್ಟೆ ತುಂಬಲಾರದೆಂದೂ ಅವುಗಳ ರಸಸ್ವಾದನೆಗಾಗಿ ಹಲವು ಹಣ್ಣುಗಳನ್ನು ತಿನ್ನಬೇಕಾಗುವದೆಂಬುದೂ ನಿಜ. ಆದರೆ ಅವುಗಳ ರಸದಲ್ಲಿರುವ ಪ್ರಯೋಜನವು ಅಪರಿಮಿತವಾಗಿದೆ. ವನಸ್ಪತಿ ಆಹಾರವನ್ನೂ, ಫಲಾದಿಗಳನ್ನೂ ತಿನ್ನುವುದರಿಂದ ಮಾತ್ರವೇ ನಮ್ಮ ಶರೀರದಲ್ಲಿ ಶಕ್ತಿ ವರ್ಧಿಸುವುದು. ಹಣ್ಣುಗಳಿಂದಲೇ ರಕ್ತವು ಹೆಚ್ಚಾಗುವುದು. ರಕ್ತವು ಶುದ್ಧವಾಗುವುದು. ಇನ್ನೂ ಹೇಳುವುದಾದರೆ ಹಣ್ಣುಗಳ ರಸಕ್ಕೆ ಮನುಷ್ಯನ ಹೊಟ್ಟೆಯೊಳಗಿನ ಆಹಾರವನ್ನು ತ್ವರ್ಯದಲ್ಲಿಯೇ ಜೀರ್ಣಿಸುವ ಶಕ್ತಿಯಿರುತ್ತದೆ. ಆದುಕಾರಣ ಊಟವಾದ ಮೇಲೆ ಫಲಗಳನ್ನು ಭಕ್ಷಿಸುವ ಅಭ್ಯಾಸವು ಆರೋಗ್ಯಕ್ಕೆ ಹಿತಕರ. ಮಾಂಸಾಹಾರವನ್ನು ಭಕ್ಷಿಸುವುದಕ್ಕಿಂತಲೂ, ಸಸ್ಯಾಹಾರವನ್ನು ಭಕ್ಷಿಸುವುದರಿಂದ ಅದು ಬಹು ಬೇಗನೇ ಜೀರ್ಣವಾಗುವದು. ಆರೋಗ್ಯವು ಕೆಡದೆ ಮನುಷ್ಯನೂ ಸುಖವಾಗಿರುವನು.

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅಮೃತಕಲ್ಪಂಕವು ತೈಲ—ಇದು ಪೂರ್ವಕಾಲ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿತ್ರನಾ!

ದಶಮೂಲ ಸುಖಪ್ರದಔಷಧಿ

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖೋದನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಪಂಚನ್ನು ಹೊರಗೆ ಹಾಕಿ ಪ್ರಸವದಿಂದ ಶ್ರಮಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆರೋಗ್ಯಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖೋದನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ [illegible] ವ್ಯಾಪಾರಿಗಳ [illegible] ಬೆಳ್ಳಿ [illegible] ಬೆಳ್ಳಿ ದಾರದ ಪ್ರಕಾರ [illegible] ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹರಾವು ವ್ಯಾಪಾರಿ,
24-8-'28 ಕನ್ಯಾರೀದ್. ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1 - ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಆತಂಕನಿಗ್ರಹ ಔಷಧಾಲಯ,
ನಂ. 26, ಬಿಕ್ಷ್ಮೇ, ಮದರಾಸು.

ಏಜಂಟರು:—
ಮೆಸರ್ಸ್ ರೇಫೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಜರ್ವ್ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಖಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಪಾರ ಆಗುವ ರೂ. 1000/- ವ ಮಿಕ್ಕಿದ ಮೊಸಮಿ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to –

Canara Bank Ltd.
Mangalore, 11—8—1929

K. Venkat Rao,
Secretary

THE PANGAL NAYAK BANK, LTD.

Head Office: Udipi, S. K.] *Estd. 1920.* **[Branches: Mangalore & Cochin.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರಾಂಚುಗಳು ಮಂಗಳೂರು ಮತ್ತು ಕೊಚ್ಚಿ

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,19,000/

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼% and for 24 months at 6½%. Interest being payable every 6 Months. SEASON DEPOSITS from January to June at 6¼%. SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%. CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಖಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಶ. ಶ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಶ. ಶ. 5½ ರಂತೆಯೂ 12, 15, 18, ಯಾ 21 ತಿಂಗಳುಗಳಿಗೆ ಶ. ಶ. 6¼ ರಂತೆಯೂ, 24 ತಿಂಗಳುಗಳಿಗೆ ಶ. ಶ. 6½ ರಂತೆಯೂ, [illegible] 3 ತಿಂಗಳುಗಳ [illegible] ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಶ. ಶ. 6¼ ರಂತೆಯೂ [illegible] ಠೇವಣಾತಿಗಳು ಶ. ಶ. 4½ ರಂತೆಯೂ, [illegible] ಠೇವಣಾತಿ [illegible] ಜೂನ್ ಅಂತ್ಯದ ವರೆಗೆ ಶ. ಶ. 3 ರಂತೆಯೂ, [illegible] ಡಿಸೆಂಬರ ಅಂತ್ಯದ ವರೆಗೆ ಶ. ಶ. 2 ರಂತೆಯೂ ಅಂಗೀಕರಿಸಲ್ಪಡುವುವು.

ಸಾಲಗಳು, ಯೋಗ್ಯವಾದ ಆಧಾರಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವುವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರೆಯಬಹುದು.

ಹೆಡ್ ಆಫೀಸು, ಉಡುಪಿ,
ತಾ. 1-2-'29

ಪಿ. ಲಕ್ಷ್ಮಣ ನಾಯಕ್,
ಮೆನೇಜಿಂಗ್ ಡೈರೆಕ್ಟರ್

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುವ್ವಾಕ (first quality Selected) ಎಂಟ್ ವರ್ಪಿನಿಂದ ಬರುವ ವಜ್ರಗಳು ಮಾರಾಟಕ್ಕೆ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು Diamonds

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಗ್ಯಬೆಲೆಗೆ, ಎಂಟ್ವರ್ಪಿನಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್,
ಮಂಗಳೂರು

ಮಹಾತ್ಮಾಜೀಯವರನ್ನು ಕೈದುಮಾಡಿದುದು.

ದಿಲ್ಲಿಯಲ್ಲಿ ವ್ಯಾಸರಾಯರು ಮಹಾತ್ಮಾಜೀಯವರೊಡನೆ ಸಂಭಾಷಿಸಿದುದೂ, ಕಲ್ಕತ್ತಾದಲ್ಲಿ ಪೋಲೀಸ ಕಮಿಶನರರು ಮಹಾತ್ಮಾಜೀಯವರನ್ನು ಕೈದುಮಾಡಿದುದೂ, ಬ್ರಿಟಿಶ ಸಾಮ್ರಾಜ್ಯದ ರಾಜಕೀಯ ಧೋರಣದ ಎರಡು ತುದಿಗಳಾಗಿರುತ್ತವೆ. ಅಲ್ಲೋಲ ಕಲ್ಲೋಲವಾಗಿರುವ ಹಿಂದೀಯ ರಾಜಕೀಯ ವಾತಾವರಣದೊಡನೆ ಸಹಾನುಭೂತಿ ಸಹಿತವಾದ ಸಂಪರ್ಕವಿಡುವ ಅವಶ್ಯಕತೆ ಇದೆ ಎಂದು ವ್ಯಾಸರಾಯರ ಎಸೆಂಬ್ಲಿಯನ್ನು ತೆರೆಯುವ ಭಾಷಣವೂ, ಆ ಮೇಲೆ ಮಹಾತ್ಮಾಜೀಯವರೊಡನೆ ಅವರು ನಡೆಸಿದ ಸಂಭಾಷಣೆಯೂ ತೋರಿಸಿದ್ದುವು. ಆದರೆ ದಿಲ್ಲಿಯ ಹವೆಯೇ ಬೇರೆ; ಕಲ್ಕತ್ತದ ಹವೆಯೇ ಬೇರೆ. ವಿಚಾರಣೆಯಿಲ್ಲದೆ ಜೈಲಿಗೆ ನುಗ್ಗಿಸಿ ಕಟ್ಟು ಕಟ್ಟಿಹೋದ ಮನಸ್ಸಾಕ್ಷಿಯು ಬಂಗಾಲಕ್ಕೆ ಮಾತ್ರವೇ ಇದೆ; ಅದರಲ್ಲಿಯೂ ಅರ್ಲ ವಿಂಟರ್ನರು ಪರದೇಶ ವಸ್ತ್ರ ಬಹಿಷ್ಕಾರ ಚಳವಳದ ಕೃತಿಯಾಗಿ ಹಿಂದೀ ಸರಕಾರವು ಬಿಗಿಯಾಗಿ ವರ್ತಿಸುವುದಾಗಿ ಸೂಚಿಸಿ, ಬಂಗಾಲ ಸರಕಾರಕ್ಕೆ ಹೆಚ್ಚಿನ ಧೈರ್ಯವು ಉಂಟಾಗಿದೆ. ಅಲ್ಲದೆ ಬಂಗಾಲ ಸರಕಾರವು ಮಹಾತ್ಮಾಜೀಯವರಂತಹ ಶ್ರೇಷ್ಠರು ಹಿಂದೀಯರ ಮೇಲೆ ಕೈಯಾಡಿಸುವ ಸಮಯದಲ್ಲಿ ಲೋರ್ಡ ಇರ್ವಿನರ ಸರಕಾರದೊಡನೆ ಕೇಳಿರುವರೋ ಎಂದು ಹೇಳಲಾಗುವುದಿಲ್ಲ. ಎಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಇರ್ವಿನರ ಸರಕಾರವು ಬಂಗಾಲ ಸರಕಾರದ ಸ್ವತಂತ್ರ ವರ್ತನವಿದು ಎಂದು ಹೇಳಿರುತ್ತದೆ. ಹೇಗೂ ಇರಲಿ; ವ್ಯಾಸರಾಯರ ಸ್ನೇಹದ ಮಾತುಕತೆಗಳಾಗಲಿ, ಪೋಲೀಸರ ಬೆದರಿಕೆಯ ಆಜ್ಞೆಗಳಾಗಲಿ ಬರಲಿಕ್ಕೆ ಹೆಚ್ಚು ಅಂತರವಿಲ್ಲವೆಂದು ಕಲ್ಕತ್ತಾ ಘಟನೆಯು ತೋರಿಸುವುದು. ಪರದೇಶ ವಸ್ತ್ರ ಬಹಿಷ್ಕಾರವು ಇಂದಿನ ಮಾತಲ್ಲ; ಪರದೇಶ ವಸ್ತ್ರದಹನವೂ ಇಂದಿನ ಕಾರ್ಯಕ್ರಮವಲ್ಲ. ಆದರೆ ಅದಕ್ಕಾಗಿ ಶಿಕ್ಷಿಸಲು ಪೋಲೀಸು ಕಾನೂನೊಂದಿದೆಯೆಂಬುದು ತಿಳಿದುದು ಮಾತ್ರ ಈ ದಿನ. ಬಂಗಾಲ ಸರಕಾರದ ಈ ಹೊಂದು ಬುದ್ಧಿಗಾಗಿ ನಾವು ಬಹಳ ಉಪಕೃತರಿದ್ದೇವೆ. ಈ ಬಹಿಷ್ಕಾರ ಚಳವಳವು ಈ ವರೆಗೆ ಅಲ್ಲಲ್ಲಿ ತಾತ್ಕಾಲಿಕವಾಗಿಯೂ ಸ್ಥಳೀಕವಾಗಿಯೂ ನಡೆಯುತ್ತಿದ್ದಿತು. ಈಗದಕ್ಕೆ ಅಖಿಲ ಹಿಂದೂಸ್ಥಾನದ ಪ್ರಬಲ ವ್ಯಾಪಕತೆಯು ಬಂದಿದೆ. ನಿದ್ದೆಯಿಂದಿದ್ದವರನ್ನದು ಒಂದೇ ಬಾರಿ ಎಚ್ಚರಿಸಿಯದೆ. ವಸ್ತ್ರ ಬಹಿಷ್ಕಾರವು ಇನ್ನೂ ತೀಕ್ಷ್ಣವಾಗುವುದೆಂಬುದರಲ್ಲಿ ಸಂದೇಹವು ಕಾಣುವುದಿಲ್ಲ. ವಸ್ತ್ರದಹನವೂ ಈಗ ಹೆಚ್ಚಾಗುತ್ತ ಬಂದಿದೆ. ಅದು ಸಹ ಬೇಗನೆ ಉತ್ತೇಜಿತರಾಗುವ ಬಂಗಾಲಿ ಜನರ ಮಧ್ಯದಲ್ಲಿ. ಮಹಾತ್ಮಾಜೀಯವರ ವಿಚಾರಣೆಯು ಇದೇ ತಿಂಗಳ ತಾ. ೨೬ಕ್ಕೆ ಇಟ್ಟಿರುತ್ತದೆ. ಶಿಕ್ಷೆಯಾಗಲಿ ಬಿಡುಗಡೆಯಾಗಲಿ, ಚಳವಳಕ್ಕೆ ಸಹಾಯವು ಸಿಕ್ಕಿದಂತಾಯಿತು. ಬಂಗಾಲ ಸರಕಾರಕ್ಕೆ ಇದಕ್ಕಾಗಿ ನಮ್ಮ ಅಭಿನಂದನ ಇದೆ.

ಅಮೇರಿಕದ ಲೋಕಹಿತ ಪ್ರಯತ್ನಗಳು!

ಮಹಾ ಯುದ್ಧದ ಸಮಯದಲ್ಲಿ ಯುನೈಟೆಡ್ ಸ್ಟೇಟ್ಸ ಆಫ್ ಅಮೇರಿಕದ ಆಗಿನ ಪ್ರೆಸಿಡೆಂಟರಾದ ವಿಲ್ಸನರ ಹದಿನಾಲ್ಕು ಪೊಯಿಂಟುಗಳಿಂದ ಆರಂಭವಾದ ಅಮೇರಿಕದ ಲೋಕಹಿತ ಸಾಧನೆಯು ಇನ್ನೂ ಮುಂದರಿಯುತ್ತಲೇ ಇದೆ! ಲೋಕದ ಎಲ್ಲಾ ಜನಾಂಗಗಳಿಂದಲೂ ಆ ಹದಿನಾಲ್ಕು ಪೊಯಿಂಟುಗಳೂ ಸ್ವೀಕೃತವಾದುವು; ಹಾಗೆಯೇ ಜನಾಂಗ ಸಂಘವು ರಚಿಸಲ್ಪಟ್ಟಿತು; ಆ ಮೇಲೆ ಅರ್ಮಾಮೆಂಟ ಪರಿಷತ್ತು ವಾಶಿಂಗ್ಟನ್ನಿನಲ್ಲಿ ಕೂಡಿತು. ಕಡೆಗೆ ಕೆಲೋಗ್ ಶಾಂತಿ ಸಂಧಾನಕ್ಕೆ ಎಲ್ಲಾ ಜನಾಂಗಗಳ ಸಹಿ ಹಾಕಲ್ಪಟ್ಟಿತು. ಆದರೆ ಲೋಕೇತಿಹಾಸದಲ್ಲಿ ಶಾಶ್ವತವಾಗಿ ಮಾತನಾಡುವುದಾದರೆ ಅಮೇರಿಕವೇ ಪ್ರಧಾನ ಲೋಕಹಿತ ಕಾರಕವಾಗಿರುವುದು. ಅದು ಹೊರಹರಿಸಿದ ಲೋಕಹಿತದ ಉದ್ದೇಶದ ಸತ್ಯಾಂಶತೆಯು ಬೇರಾವ ಜನಾಂಗವೂ ಕೊಟ್ಟಿಲ್ಲವೆನ್ನಬಹುದು. ಆದುದರಿಂದಲೇ ಲೋಕದಲ್ಲಿ ಮಿಥ್ಯಾಚಾರಿ (Hypocrite) ಎಂಬ ಹೆಸರು ಯಾರಿಗಾದರೂ ಅನ್ವಯಿಸುವುದಾದರೆ ಅಮೇರಿಕದ ಹೆಸರನ್ನೇ ಮೊದಲಿಡಬೇಕಾಗುವುದು. ಏಕೆಂದರೆ ಪ್ರಥಮದ ಆ ಹದಿನಾಲ್ಕು ಪೊಯಿಂಟುಗಳನ್ನೇ ಯುನೈಟೆಡ್ ಸ್ಟೇಟ್ಸ ರಕ್ಷಿಸಲಾರದೆ ಹೋಯಿತು. ನೌಕಾ ನಿರ್ಬಂಧದ (Limitations of Armaments)ಗಾಗಿ ಪ್ರಯ[illegible] ವಿಲಿಯ ಕಟ್ಟಲೆಯಲ್ಲಿ ಡೊಲ್ಲರನ್ನು ವ್ಯಯಿಸಿ [illegible] ದಾದರೆ ಆ [illegible] ದ್ದಿತೇ ಏನೋ. ಆದರೆ ಶಾಂತಿ ಸಂಧಾನದಲ್ಲಿ [illegible] ವರು ನೂತನ ನಾವಿಕ ರಚನೆಯಿಂದ ಆ ವಿಶ್ವಾಸವನ್ನು ಭಂಗ ಮಾಡುವುದಲ್ಲ. ಶಾಂತಿ ಸ್ಥಾಪನೆಗೆ ಯುದ್ಧನಾವೆಗಳ ಅವಶ್ಯವೆಂದಾದರೆ ಕೆಲ್ಲೋಗರ Peace Pact ಶಾಂತಿ ಸಂಧಾನದ ಅವಶ್ಯಕತೆಯೇ ತೋರಿ ಬರುವುದಿಲ್ಲ. ಆದರೂ ಅಮೇರಿಕವು ಒಂದು ಕೈಯಿಂದ ಶಾಂತಿ ಸಂಧಾನಕ್ಕೆ ಸಹಿಯನ್ನು ಹಾಕುತ್ತಿರುವಾಗ ಇನ್ನೊಂದು ಕೈಯಿಂದ ಶಸ್ತ್ರ ರಚನೆಯನ್ನು ಮಾಡುತ್ತದೆ. ಯುರೋಪೀಯ ಜನಾಂಗಗಳೂ ಈ ಶಾಂತಿ ಸಂಧಾನಕ್ಕೆ ಸಹಿಯನ್ನಿತ್ತಿರುವರಾದರೂ ಅವರ ವಿಶ್ವಾಸವೂ, ಅದರ ಮೇಲೆ ಅಮೇರಿಕಕ್ಕಿದ್ದಷ್ಟಕ್ಕಿಂತ ಹೆಚ್ಚಿರಲಾರದು. ಮುಖ್ಯವಾಗಿ ಅಮೇರಿಕವು ಆರಂಭಿಸಿರುವ ಈ ಕಣ್ಣು ಮುಚ್ಚಾಟದಲ್ಲಿ ಇತರ ಜನಾಂಗಗಳೂ ಸೇರಿ ಆಟವಾಡಿ ನಗುತ್ತಿವೆಯೋ ಏನಹ ಇದರಲ್ಲಿ ಪರಿಣಾಮಕಾರಿಯಾದ ಪ್ರಯೋಜನವಿದೆಯಾಗಿ ತಿಳಿದು ಬರುವುದಿಲ್ಲ. ಮುಸ್ಸೋಲೀನಿಯ ಸಾಮ್ರಾಜ್ಯಾಭಿಲಾಷೆಯು ಹೆಚ್ಚಾಗುತ್ತಾ ಬರುವಾಗ, ಮಧ್ಯ ಯುರೋಪು ಗುಟ್ಟಿನ ಸಂಧಿಗಳ ಜಾಲವಾಗಿ ಪರಿಣಮಿಸುತ್ತಾ ಬರುತ್ತಿದೆ. ರಶ್ಯಾದ ಪ್ರತ್ಯೇಕತೆಯೂ, ಜರ್ಮನಿಯ ಮೇಲಿನ ಮಿತ್ರರಾಷ್ಟ್ರಗಳ ಅಧಿಕಾರವೂ, ಫ್ರಾನ್ಸಿನ ಅತ್ಯಧಿಕ ಸ್ವಾರ್ಥವೂ, ಬ್ರಿಟಿಷರ ಸಾಮ್ರಾಜ್ಯ ಜವಾಬ್ದಾರಿಯೂ, ಯುರೋಪಿನ ರಾಜನೀತಿಯನ್ನು ಗಹನವಾಗಿ ಮಾಡುತ್ತಾ ಬರುತ್ತಿವೆ. ಮಧ್ಯದಲ್ಲಿ ಅಮೇರಿಕವು ತನ್ನ ದುಡ್ಡಿನ ದೊಡ್ಡಸ್ತಿಕೆಯನ್ನು ತೋರಿಸಲಿಕ್ಕಾಗಿ ಮುಂದೆ ಬರಲು ಪ್ರಯತ್ನಿಸಿ, ಆ ಪ್ರಯತ್ನದಲ್ಲಿ ತನಗಾವ ಹಾನಿಯೂ ಬರುವಂತಹ ಜವಾಬ್ದಾರಿಯಿರದಂತೆ ಎಚ್ಚರವಾಗಿ ದುಡುಕಿಕೊಳ್ಳುತ್ತಿದೆ. ಅಮೇರಿಕದ ಈ ಪ್ರಯತ್ನಗಳಿಗೆ ಎಂತಹ ಉತ್ತಮ ತತ್ವಗಳ ಆಧಾರಗಳಿರಬಹುದಾದರೂ ನಾವದನ್ನು ಅಭಿನಂದಿಸಲಾರೆವು

ಬೆಳಗಾಂವಿಯಲ್ಲಿ ಮರಾಠಿ.

ಶ್ರೀ. ಕೆ. ಎಸ್. ಪಾಟೀಲ ಬಿ. ಎ. ಎಲ್. ಎಲ್. ಬಿ. ಮುಂತಾಗಿ ಹಲವರು ಸಹಿಹಾಕಿದ "ಬೆಳಗಾಂವಿಯ ಕನ್ನಡ ಮುಂದಾಳುಗಳಗೊಂದು ಮಾತು" ಎಂಬುದೊಂದು ಪತ್ರಕದ ಪ್ರತಿಯು ನಮ್ಮ ಕೈಸೇರಿರುತ್ತದೆ. ಬೆಳಗಾಂವಿಯಲ್ಲಿ, ಅಖಿಲ ಕರ್ನಾಟಕದ ನಿಷೇಧದ ಮುಂದೂ, ಮರಾಠಿ ಸಾಹಿತ್ಯ ಪರಿಷತ್ತನ್ನು ಜರಗಿಸುವ ಸಮಯಕ್ಕೆ ನಿಷೇಧವನ್ನು ವ್ಯಕ್ತಪಡಿಸಿ "ಕನ್ನಡ ತಾಯಿಯ ಅಪಮಾನವನ್ನು ತೊಳೆದು ತೆಗೆಯುವ ಯೋಜನೆಯನ್ನು ಮಾಡಿದ್ದರೆ ನಾವಾದರೂ ಬಸವನ ಹಿಂದೆ ಬಾಲವೆಂಬಂತೆ ತಮ್ಮನ್ನು ಹಿಂಬಾಲಿಸುವೆವು" ಎಂದು ಹೇಳಿ ಮುಂದೆ "ಇಲ್ಲವಾದರೆ ನಮ್ಮ ಹಾದಿಯು ನಮಗೆ" ಎಂದು ಸೂಚಿಸಿ, ಈ ಮಾತುಗಳಿಗೆ ಒಂದು ವಾರದೊಳಗಾಗಿ ಏನೆಂಬುದನ್ನು ತಿಳಿಸುವ ಕೃಪೆಯಾಗಬೇಕು" ಎಂಬ ಸಮಯದ ಅವಧಿಯನ್ನು ಹಾಕಿ ಬೆಳಗಾಂವಿಯ ಹಿರಿಯರಿಗೆ ಜಾಹೀರು ಪ್ರಕಟಣೆ ಕೊಡಲ್ಪಟ್ಟಿದೆ. ಬೆಳಗಾಂವಿಯ ಕನ್ನಡ—ಮರಾಠಿ ವಾದದಲ್ಲಿ ಈ ಪತ್ರವು ನೂತನ ದೃಷ್ಟಿಯನ್ನು ಕೊಡುತ್ತಿದೆ. ನಾವು ಬೆಳಗಾಂವಿಯಿಂದ ಇಷ್ಟು ದೂರವಿರುವುದರಿಂದ ಅಲ್ಲಿನ ಆ ವಾದವನ್ನು ಇನ್ನೂ ಚೆನ್ನಾಗಿ ತಿಳಿಯಲು ಶಕ್ತರಾಗಿಲ್ಲ. ಈ ಮೇಲಿನ ಪತ್ರದ ಅಭ್ಯರ್ಥನೆಯಿಂದ, ಬೆಳಗಾಂವಿಯ ಕನ್ನಡ ಮುಂದಾಳುಗಳೇ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಒಪ್ಪಿಯನ್ನಿತ್ತಿರುವರೆಂದಾಗಲಿ, ಒಪ್ಪಿಗೆಯನ್ನಿತ್ತಿಲ್ಲವಾದರೆ ನಿಷೇಧವನ್ನು ತೋರಿಸುವಷ್ಟು ಕೂಡ ಮುಂದಾಗಿಲ್ಲವೆಂದಾಗಲಿ ತಿಳಿಯಬೇಕಾಗಿದೆ. ಬೆಳಗಾಂವಿಯ "ಕನ್ನಡ ಮುಂದಾಳುಗಳೇ" ಈ ರೀತಿಯಲ್ಲಿ ವರ್ತಿಸುವವರಾದರೆ ಕನ್ನಡದ ಈ ವಾದಕ್ಕೆ ಯಾವ ಬಗೆ ರೂಪ ಬರುವುದೆಂದು ಹೇಳಲಾಗುವುದಿಲ್ಲ. ಬೆಳಗಾಂವಿಯ ಜನತೆಯೊಳಗಿನ ಅಧಿಕ ಸಂಖ್ಯಾಕರ ಅಭಿಪ್ರಾಯವೂ ಕೇಳಿಗೆ ಬರಬಹುದೆಂದು ಊಹಿಸಲಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದ ಮುಂದಾಳುಗಳು ಯಾರೆಂದು ಪುನಃ ಯೋಚಿಸಬೇಕಾಗಿ ಕರ್ನಾಟಕ ಅಖಂಡ ನಿಷೇಧವನ್ನು ಬೆಳಗಾಂವಿಯ ಮುಂದಾಳುಗಳು ವ್ಯಕ್ತಪಡಿಸಲಾರರಾದರೆ, ಅವರು ಕರ್ನಾಟಕಕ್ಕೆ ಮುಂದಾಳುಗಳಾಗಲಾರರು. ಬೆಳಗಾಂವಿಯ ಅಧಿಕ ಸಂಖ್ಯಾಕರು ಮರಾಠಿ ಸಾಹಿತ್ಯ ಪರಿಷತ್ತನ್ನು ಕೂಡಿಸಲು ಇಚ್ಛಿಸುವರಾದರೆ ಬೆಳಗಾಂವಿಯಲ್ಲಿ ಕರ್ನಾಟಕದ ಅಭಿಮಾನವು ಇನ್ನೂ ಚೆನ್ನಾಗಿ ಪ್ರಸಾರಿತವಾಗಿಲ್ಲವೆಂದೂಹಿಸಬೇಕಾಗಿದೆ. ಅಧಿಕ ಸಂಖ್ಯಾಕರ ಸ್ವೇಚ್ಛೆಯ ಪ್ರೋತ್ಸಾಹವು ಈ ಪರಿಷತ್ತಿಗೆ ಇರುವುದಾದರೆ, ಚಿಕ್ಕ ನಿಷೇಧಸಭೆಯಿಂದ ಕರ್ನಾಟಕದ ಅಭಿಪ್ರಾಯವನ್ನು ಪ್ರಕಟಗೊಳಿಸುವುದು ಉಚಿತ; ಆದರೆ ತೀಕ್ಷ್ಣವಾದ ಪ್ರಕಟಣೆಗಳಿಂದ ಉದ್ದೇಶವು ಭಂಗವಾಗುವುದರಿಂದ

ನೋಟಗಳು
NOTES.

ಕಲ್ಕತ್ತಾದಲ್ಲಿ ಪರದೇಶಿ ವಸ್ತ್ರದ ಬಹಿಷ್ಕಾರದ ಕಾರ್ಯಗಳು ದೊಡ್ಡ ದೊಡ್ಡ ಮುಖಂಡರುಗಳಿಂದಲೇ ನಡೆಯುತ್ತಿವೆ. ಮುಖಂಡರಿಂದ ನಡೆಯುವ ಕಾರ್ಯದಲ್ಲಿ ಪೋಲೀಸರು ಹೊಸ ಕಾನೂನು ಹೂಡಿಯು ಪ್ರಯತ್ನಿಸುತ್ತಾರೆ.

ಕಳೆದ ತಾ. ೪ಕ್ಕೆ ಕಲ್ಕತ್ತಾದಲ್ಲಿ ಶ್ರದ್ಧಾನಂದ ಪಾರ್ಕಿನಲ್ಲಿ ಸಭೆ ಸೇರಿದು ವಸ್ತ್ರಗಳ ರಾಶಿ ಹಾಕಿ, ವಸ್ತ್ರಕ್ಕೆ ಬೆಂಕಿ ಹಾಕಲು, ಪೋಲೀಸರ ಪ್ರಯತ್ನ ಬೆಂಕಿಯನ್ನು ನೊಂದಿಸುವುದು.

ಪೋಲೀಸರು ಬೆಂಕಿಯನ್ನು ನೊಂದಿಸುವಾಗ್ಗೆ ಅಲ್ಲಿ ನೆರೆದ ಜನರು ಪುನಃ ಬೆಂಕಿ ಕೊಡುವದು. ಅಂತೂ ಜನರೊಳಗೂ ಪೋಲೀಸರೊಳಗೂ ಬೆಂಕಿಯ ಪಂದ್ಯಾಟ ನಡೆಯಿತು.

ಪಂದ್ಯಾಟದಲ್ಲಿ ಸೋತದ್ದು ಪೋಲೀಸರು. ವಿಲಾಯತಿಯಿಂದ ಬಂದ ಹಿರಿಯ ಅಪ್ಪಣೆಯಂತೆ, ಕಡೆಗೆ ಕೈಹಾಕಿದ್ದು ಕಾರ್ಯಮುಖಂಡರನ್ನು ಕೈದುಮಾಡುವದು.

ರಾತ್ರೆ ೧೧-೧೫ಕ್ಕೆ ಮಹಾತ್ಮಾ ಗಾಂಧಿಯವರನ್ನೂ ಕಿರಣಶಂಕರ ರೋಯ್‌ಯವರನ್ನು ಕೈದು ಮಾಡಿದರು. ಏನೋ ಒಂದು ಶರ್ತದ ಮೇಲೆ ಬಿಟ್ಟರು.

ಮಾರ್ಚ ತಾ. ೨೬ಕ್ಕೆ ಮಹಾತ್ಮಾಜಿಯವರ ನಂಬ್ರವು ತನಿಖೆಗಾಗಿ ಇಡಲ್ಪಟ್ಟಿದೆ. ಮಹಾತ್ಮಾಜಿಯವರು ನಂಬ್ರಕ್ಕೆ ತಪ್ಪದೆ ಹಾಜರಾಗುವಂತೆ ೫ ಜನರಿಂದ ೫೦ ರೂಪಾಯಿಯ ಜಾಮೀನು.

ಮಹಾತ್ಮಾಜಿಯವರನ್ನು ಕೈದು ಮಾಡಿದರ ವಿಷಯ ಹೌಸ್ ಆಫ್ ಕೊಮನ್ಸಿನಲ್ಲಿ ಮಿ। ಸಕಲತ್ವಾಲರು ಎಮರ್ಜಂಟ್ ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಶ್ನೆಗೆ ಉತ್ತರ ಕ್ಷಣದೊಳಗೆ ದೊರಕುವದು.

ಕಾಮಿಯಾ ಬಳಿಯ ಹತ್ತಿರದಿಂದ ಉರ್ಮಕ್ಕೆ ಹೋಗುವ ರಸ್ತೆಯು ಕುದ್ರೋಳಿ ಸಂಕದ ವರೆಗೆ ಬಹಳ ಚಲೂ ರೀತಿಯಲ್ಲಿದೆ. ಸೈಕಲಿನಲ್ಲಿ ಹೋಗುವವರು ಕಣ್ಣೆ ಹಾರದ ಹಾಗೆ ಹೋಗಬೇಕಾಗಿದೆ.

ನಮ್ಮ ಮಂಗಳೂರಿಗೆ ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ಟಪ್ಪಾಲನ್ನು ಅವಷ್ಟು ಬೇಗನೇ ತಂದು ಮುಟ್ಟಿಸಬೇಕೆಂದು ಪ್ಯಾಸೆನ ಟ್ರೈನ್ ಬದಲಾವಣೆ ಮಾಡಿ ಮಂಗಳೂರಿಗೆ ತಲುಪುವ ಸಮಯ ಸಾಯಂ ಘಂಟೆ ನಾಲ್ಕು ಮಾಡಿದ್ದಾರೆ. ಘಂಟೆ ನಾಲ್ಕು ಬರೆ ಕಾಗದದಲ್ಲಿ ಮಾತ್ರ. ಮೈಲ್ ಬರುವದು ಐದು ಘಂಟೆಯ ನಂತರ.

ಯಾವಾಗ ನೋಡಿದರೂ ರೈಲ್ವೆ ಸ್ಟೇಶನಿನ ಬೋರ್ಡಿನಲ್ಲಿ ಲೇಟ್ ಎಂಬ ಶಬ್ದ ಅಳಿಸಿ ಹೋಗುವುದೇ ಇಲ್ಲ.

ಮುಂಬಯಿಯ ಗವರ್ನರರಿಗೆ ಅಲ್ಲಿಯ ಶಾಲೆಗಳು ಮತ್ತು ಕೋಲೇಜುಗಳ ವಿದ್ಯಾರ್ಥಿಗಳ ಬಗೆ ಕಮ್ಮಿ ಸಂಬಳವನ್ನು ಇಟ್ಟುಕೊಂಡಾಗಿ ಅಭಿಪ್ರಾಯವಿದೆ. ಹಿಂದೂಸ್ಥಾನದಲ್ಲಿ ಬಡತ್ವಕ ಹೆಚ್ಚಿದ್ದು ಇದರ ಬಳಿಗೆ ಹೋಗಿಲ್ಲವಾಗಿರಬಹುದು.

ಕನರಾ ಹ್ಯಾಸ್ಪ್ಯಲ್ ಸೋತ್ರಿಯ ಹಣವನ್ನು ಹಂಚಲು ಪ್ರಾರಂಭಿಸಿದ್ದಾರೆ. ಐದು, ಹತ್ತು ರೂಪಾಯಿ. ಒಂದವರು ಟಿಕೇಟು ತೆಗೆದುಕೊಂಡು ಸೋತ್ರಿ ಆಫೀಸಿಗೆ ಹೋದರೆ ಟಿಕೇಟು. ತಂದವರ ಒಪ್ಪಿಗೆ ಟಿಕೇಟಿನವರು ಇಂಥವರೇ ಎಂದು ಗುರುತಿಸುವವರು ಬೇಕಾಗಿದ್ದಾರಂತೆ.

ಒಟ್ಟಾರೆ, ರೂಪಾಯಿ ಬೇಕಾದರೆ ಗುರುತಿಸುವವರನ್ನು ಹುಡುಕಿರಾಯಿತು.

ಸರಿಯಾದ ನಂಬ್ರದ ಟಿಕೇಟು ಇರುವಾಗ್ಯ ಮತ್ತು ಸೋತ್ರಿಯವರು ಹಣ ಕೊಡದೇ ಕಾರಣ ಟಿಕೇಟನ್ನು ವಾಪಾಸು ತೆಗೆದುಕೊಳ್ಳುತ್ತಿರುವಾಗ್ಯ ಇಷ್ಟೆಂತು ಗಾದ್ರಿ ಮತ್ತು ಸಂಶಯ ಯಾಕೆಂದು ಒಬ್ಬರ ಪ್ರಶ್ನೆ.

ಮನೋ ವೈಷಮ್ಯವನ್ನುಂಟುಮಾಡುವಂತಹ ವಾದದಿಂದ ಸ್ಥಳೀಕ ಸಹಾನುಭೂತಿಯನ್ನು ಕಳೆದುಕೊಳ್ಳದೆ ತೀವ್ರವಾದ ಪ್ರಸಾರ ಕಾರ್ಯಗಳ ಮೂಲಕವೇ ಬೆಳಗಾಂವನ್ನು ಒಲಿಸಿಕೊಳ್ಳುವುದು ಉತ್ತಮವೆಂದು ಕಾಣುವುದು. ಜನರ ಮಾನಸಿಕತೆಯು ಒಮ್ಮೆ ಕನ್ನಡವಾಯಿತೆಂದರೆ ಮರಾಠಿಗಳ ಯಾವ ಕುಯುಕ್ತಿಯೂ ಅವರಿಗೆ ಉಪಕಾರಿಯಾಗಲಾರದು.

[illegible] ... ಮಂಗಳೂರು ಪ್ರದೇಶ [illegible] ಪಂಚಾಂಗ

([illegible])

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಅಸ್ತ
9	[illegible]	[illegible]	[illegible]	[illegible]	[illegible]	[illegible]	6.44	6.39
10	[illegible]	[illegible]	[illegible]	[illegible]	[illegible]	[illegible]	6.43	6.39
11	[illegible]	[illegible]	[illegible]	[illegible]	[illegible]	[illegible]	6.42	6.39
12	[illegible]	[illegible]	[illegible]	[illegible]	[illegible]	[illegible]	6.42	6.39
13	ಬುಧ	[illegible]	[illegible]	ರೇವತಿ	[illegible]	[illegible]	6.41	6.40
14	ಗುರು	[illegible]	[illegible]	ಅಶ್ವಿನಿ	[illegible]	[illegible]	6.40	6.40
15	ಶುಕ್ರ	[illegible]	[illegible]	ಭರಣಿ	[illegible]	[illegible]	6.40	6.40

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಅಧಿಕತಮ		Rainfall. ಮಳೆ ದಿನದ ಮಳೆ	ಒಟ್ಟು ಮಳೆ
	Maximum ಅಧಿಕತಮ	Minimum ಅಲ್ಪತಮ		
1	90— 2	75— 9	—	—
2	90— 2	76— 3	—	—
3	90— 0	74— 9	—	—
4	91— 2	75— 0	—	—
5	90— 9	74— 5	—	—
6	90— 7	73— 9	—	—
7	96— 0	73— 7	—	—
				124·77

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ.	ವರೆಗೆ ರೂ.	ಆ.
ಮುಸ್ಕಿ ...	7–	0	7–	6
ಗೋಧಿ ...	6–	4	6–	8
ರಾಗಿ ...	5–	8	6–	2
ಊರ ಅಕ್ಕಿ ಬೆಳ್ತಿಗೆ ...	7–	4	7–	12
ರಂಗೂನು ಬೆಳ್ತಿಗೆ ಗೋಣಿ ಗೆ ...	12–	15	13–	
ಎಲ್ಲೂರು ಬೆಳ್ತಿಗೆ ಮುಡಿ ಗೆ ...	6–	4	6–	8
ಗೋದಿ ಗೋಣಿ ಗೆ ...	18–	12	20	0
[illegible] ಗೋಣಿ ಗೆ ...	7–	8	8	4
ಕಡಲೆ ಗೋಣಿ ಗೆ ...	14–	8	15–	8
ತೊಗರಿ ಗೋಣಿ ಗೆ ...	14–	8	15–	0
ತೊಗರಿಬೇಳೆ ಗೋಣಿ ಗೆ ...	18–	8	27–	0
ಉದ್ದು ಗೋಣಿ ಗೆ ...	15–	6	15–	12
ಹೆಸರು ಗೋಣಿ ಗೆ ...	14	2	14	8
[illegible] ಬೆಲ್ಲ ಖಂಡಿ ಗೆ ...	60–	0	66	8
ಉಪ್ಪು ಗೋಣಿಗೆ ...	4–	6	5–	0
[illegible] ಖಂಡಿ ಗೆ ...	93–	0	100·	
[illegible] ಹಿಂಡಿ ಖಂಡಿ ಗೆ ...	35–	0	—	
ಎಳ್ಳಿಂಡಿ ಖಂಡಿ ಗೆ ...	42–	8		
[illegible] ಎಣ್ಣೆ ಮಣ ಗೆ ...	6–	14	8–	4
ಎಳ್ಳೆಣ್ಣೆ ಮಣ ಗೆ ...	7–	12	8	4
[illegible] ಎಣ್ಣೆ ಬಟ್ಟಿಗೆ ಗೆ ...	7–	12	8	4
[illegible] ಸಕ್ಕರೆ ಮಣ ಗೆ ...	3–	11	3	12
ಹೊಸ ಮೆಣಸು ...	6–	0	6–	8
[illegible] ಊರ ಮೆಣಸಿನಕಾಯಿ ಮಣ ಗೆ	1–	8	2–	4
[illegible] ಮುಡಿ ಗೆ ...	8–	0	8–	8
[illegible] ಮುಡಿ ಗೆ ...	4–	4	6–	4
[illegible] ಖಂಡಿ ಗೆ ...	400–	0	388–	0
[illegible] ಅಡಕೆ ಖಂಡಿ ಗೆ ...	146–	0	185	0
[illegible] ಖಂಡಿ ಗೆ ...	420–	0	424–	0
[illegible] ಮಣ ಗೆ ...	50–	0	55–	
[illegible] ಮುಡಿ ಗೆ ...	3–	6		
[illegible] ಖಂಡಿ ಗೆ ...	42–	0	46	8
[illegible] ಗೆ ...	10–	12	13	8
[illegible] ಮಣ ಗೆ ...	24–	0	22–	4
[illegible] ಗೆ ...	15–	6	—	
[illegible] ಮಣ ಗೆ ...	16–	0	16–	0
[illegible] ಗೆ ...	13–0–0		—	
[illegible] ಖಂಡಿ ಗೆ ...	30–	0	36–	8

[illegible] [illegible]

ಹೊಸದುರ್ಗ ಅಮೃತೇಶ್ವರಂ ವೈದ್ಯಶಾಲೆ

[illegible] (ದ. ಕ.)

ಸೌತ್ ಇಂಡಿಯನ್ ರೈಲ್ವೇ [illegible] (S.I.R.)

ಆಯುರ್ವೇದ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ [illegible] 'ವೈದ್ಯಶ್ರೀ ... [illegible] ಪರಮೇಶ್ವರ ಮೂಸಾದ್' [illegible] ... [illegible] ಎಲ್ಲಾ ತರದ [illegible], [illegible], [illegible], ಮೂತ್ರ, [illegible] ಇತ್ಯಾದಿ [illegible] ನಮ್ಮಲ್ಲಿ [illegible] ತಯಾರ ಇರುವವು. [illegible] ... [illegible] ವೈದ್ಯಶಾಲೆಯು [illegible] ಸಿದ್ಧವಾಗಿರುವವು. [illegible] ... [illegible] ಮುಖಾಂತರ ವ್ಯವಹಾರ ನಡೆಸಬಹುದು.

[illegible]

ಮೇನೇಜರ್,

ಅಮೃತೇಶ್ವರಂ ವೈದ್ಯಶಾಲಾ ಹೊಸದುರ್ಗ

[illegible] (ದ. ಕ.)

ತಯಾರಾಗಿವೆ ತಯಾರಾಗಿವೆ

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಕ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ವಿವರಗಳಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯು[illegible] ಸಾರಸಂಗ್ರಹ ರೂಪವಾಗಿರುವ [illegible] ಭಾಷೆಗಳಲ್ಲಿ ಛಾಪಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ [illegible] ಅದರಲ್ಲಿರುವ ವಿಷಯಗಳನ್ನು ಗ್ರಹಿಸಿ [illegible] ... [illegible] ಉಪಾಯವನ್ನು ಮಾಡಿ.

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸುಂದರವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ ನಮ್ಮ ಲೋಕಪ್ರಸಿದ್ಧವಾದ ಟಾನಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. [illegible] ... [illegible]

ಡಿ. ಗೂಲಸ್ ಮಾರ್ಚ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1921ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನ ಮೂಲಕ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಘದವರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು [illegible] ನಮ್ಮ "[illegible]"ಯಲ್ಲಿ ಶಾಸ್ತ್ರೋಕ್ತ ತಯಾರಿಸುವ ಔಷಧಗಳನ್ನು ಅಲ್ಪ ಬೆಲೆಗೆ ಮಾರಾಟ ಮಾಡುವುದರ [illegible] ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ [illegible] ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ [illegible] ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.

[illegible]
ಅಗ್ರಲೇಖ [illegible]
[illegible]
[illegible]
[illegible]
ವರ್ತಮಾನ ಸಂಗ್ರಹಗಳು [illegible]
ಒಳನಾಡಿನ ವರ್ತಮಾನ . . . . . [illegible]
ಪಟ್ಟಣ [illegible] — ಮಂಗಳೂರು, ಉಡುಪಿ, ಪುತ್ತೂರು [illegible]
ವಿವಿಧ ಸಮಾಚಾರಗಳು . . . . . [illegible]
ದೇಶಭಕ್ತ (ಕತೆ) . . . . . [illegible]
ಮಕ್ಕಳಿಗೆ ಅವಶ್ಯಕತೆ . . . . . [illegible]
ಪತ್ರವ್ಯವಹಾರ ೧. . . . . . [illegible]

ಸ್ವದೇಶಾಭಿಮಾನಿ.

ತಾರೀಕು ೮ನೇ ಶುಕ್ರವಾರ ಮಾರ್ಚಿ ೧೯೨೯

ಹಳೆಯದೂ ಹೊಸತೂ.

(೨)

ರಾಂತಿಕಾರಿಗಳಾದ ಶ್ರೀ ದೇಸಾಯಿಯವರು ದೇವನಾಗರಿ ಲಿಪಿಯನ್ನೇ ಇಡೀ ದೇಶದ ಲಿಪಿಯಾಗಿ ಮಾಡಬೇಕೆಂದು ಸೂಚಿಸುವುದರಲ್ಲಿ ನಾವು ಸಾಕಷ್ಟು ಕಾರಣಗಳನ್ನು ಕಾಣುವುದಿಲ್ಲ. ಶ್ರೀಯುತರು ದೇವನಾಗರಿಯನ್ನು ಸರ್ವಸಾಮಾನ್ಯವಾಗಿ ಮಾಡಲಿಕ್ಕೆ ೧, ೨, ೩, ೪ ಎಂದು ನಾಲ್ಕು ಕಾರಣಗಳನ್ನು ಕೊಟ್ಟರೂ ಅವುಗಳ ಮುಖ್ಯ ತತ್ವವು ಪುರಾತನ ಮತ್ತು ಎಲ್ಲರಿಗೂ ಗೊತ್ತಿರುವಂತಾದ್ದೆಂಬುದೇ ಆಗಿದೆ. ಆದರೆ ಇದ್ದ ಲಿಪಿಯನ್ನು ಏಕ ಲಿಪಿಯಲ್ಲಿ ಲಯ ಹೊಂದಿಸುವ ಯೋಚನೆಗೆ ಆ ಎರಡು ಕಾರಣಗಳು ಸಾಕಾಗಲಾರವು. ಭಾಷೆಯು ಹೇಗೆ ಆಯಾ ಜನರ ಮತ್ತು ಸಮಯದ ಸಂಸ್ಕೃತಿಗೆ ಅನುಕೂಲವಾಗಿ ರಚಿಸಲ್ಪಟ್ಟಿದೆಯೊ, ಲಿಪಿಯು ಕೂಡ ಬದಲಾಯಿಸುವಾಗ - ಬದಲಾಯಿಸುವ ಸಮಯದ ಮತ್ತು ಆಗಿನ ಜನರ ಸಂಸ್ಕೃತಿಗೆ ಅನುಕೂಲವಾಗಬೇಕು.

ಹಿಂದೂಸ್ಥಾನದಲ್ಲಿ ಹಲವು ಸಂಸ್ಕೃತಿಗಳು ಬೆಳೆದಿರುವುದರಿಂದ, ಮತ್ತು ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಪ್ರತ್ಯೇಕ ವೈಶಿಷ್ಟ್ಯವಿದ್ದು ಅವುಗಳ ನಾಶವು ಸಾಧ್ಯವಲ್ಲವಾದರೂ, ಆಧುನಿಕ ಜಗತ್ತಿನ ಪ್ರಬಲವಾದ ಸಂಸ್ಕೃತಿಗೆ ಆ ಹಲವು ಸಂಸ್ಕೃತಿಗಳು ಮಣಿಯದೆ ಪ್ರತ್ಯೇಕವಾಗಿರಲಾರವು. ಆಧುನಿಕ ವ್ಯಕ್ತಿಯು ಆಧುನಿಕ ಸಂಸ್ಕೃತಿಯನ್ನು ತಿರಸ್ಕರಿಸಲಾರನು. ಆದುದರಿಂದ ದೇಶಕ್ಕೊಂದು ಭಾಷೆಯೂ, ದೇಶಕ್ಕೊಂದು ಲಿಪಿಯೂ ಅಗತ್ಯವಿರುವುದಾದರೆ ಆ ಭಾಷೆಯೂ, ಆ ಲಿಪಿಯೂ ಆಧುನಿಕ ಸಂಸ್ಕೃತಿಯು ಸ್ವೀಕಾರಕ್ಕೆ ಅನುಕೂಲವಾಗಿರಬೇಕು.

ಕ್ರಾಂತಿಕಾರರ ರಚನೆಗಳಿಗೆ ಪುರಾತನತ್ವವಾಗಲಿ ಅಧಿಕ ಸಂಖ್ಯಾಕರದೆಂಬುದಾಗಲಿ ಸಾಲಾದ ಕಾರಣವಾಗಿರಲಾರದು. ಮುಖ್ಯತಃ ಸಮಗ್ರ ಹಿಂದೂಸ್ಥಾನಕ್ಕೆ ಒಂದೇ ಭಾಷೆಯನ್ನೂ ಒಂದೇ ಲಿಪಿಯನ್ನೂ ಕೊಡತಕ್ಕದ್ದಾಗ, ಅಂತಹ ಪ್ರಯತ್ನದ ಸತ್ಪರಿಣಾಮವೇ ನಮ್ಮ ಏಕಮಾತ್ರ ಧ್ಯೇಯವಾಗಿರಬೇಕು. ಎಲ್ಲರಿಗೂ ಒಂದೇ ಭಾಷೆಯಾಗಬೇಕು; ಎಲ್ಲರಿಗೂ ಒಂದೇ ಲಿಪಿಯಾಗಬೇಕು. ಆ ಮೂಲಕ ಸರ್ವ ತರದ ವ್ಯವಹಾರಗಳೂ ಸುಲಭವಾಗಬೇಕು; ಜನತೆಗೆ ಆಧುನಿಕ ಸಂಸ್ಕೃತಿಯನ್ನು ಸ್ವೀಕರಿಸಲು ಸುಲಭವಾಗಬೇಕು. ಹಿಂದೀ ಭಾಷೆಯೂ, ದೇವನಾಗರಿ ಲಿಪಿಯೂ ಈ ಧ್ಯೇಯವನ್ನು ಹೊಂದಿಸುವುವೇ ಎಂಬುದೇ ಮುಖ್ಯ ಪ್ರಶ್ನೆಯಾಗಿದೆ.

ಹಿಂದೀ ಭಾಷೆಯು ಆಧುನಿಕ ಸಂಸ್ಕೃತಿಗೆ ಅನುಕೂಲವಾಗಿರಬಹುದು; ಇಲ್ಲವೆ ಅನುಕೂಲವಾಗಿ ಮಾಡಲೂಬಹುದು. ಆಧುನಿಕ ವೈಜ್ಞಾನಿಕ ಪುಸ್ತಕಗಳು ಹಿಂದೀಯಲ್ಲಿ ರಚಿಸಲ್ಪಟ್ಟಿವೆ; ಪಾಶ್ಚಾತ್ಯರ ಪ್ರಯತ್ನಗಳಿಂದಲೇ ಬೆಳೆದ ಆಧುನಿಕ ಸಂಸ್ಕೃ[illegible] ಪಾಶ್ಚಾತ್ಯ ಭಾಷೆಗಳಿಂದ ಹತಿರವಾ[illegible]

[illegible] ಹಿಂದೂಸ್ಥಾನದ ಭಾಷೆಗಳ [illegible] ಅದರ ಜೊತೆ [illegible] ಮೇಲೆ ಅವುಗಳನ್ನು [illegible] ರೀತಿಯಲ್ಲಿಯೇ [illegible] ಹೋಗಬೇಕಾಗುವುದು. ವಿಜ್ಞಾನದ ಮೆಲ್ಲನೆ ವಿಕಾಸ ಹೊಂದಿದುದು, ಅದರ ವಿಕಾಸವು ಪಾಶ್ಚಾತ್ಯ ಭಾಷೆಯ ಪ್ರೇರಣೆಯ ಮೂಲಕವೇ ಆದುದು. ಆ ವಿಕಾಸವು ಪ್ರತಿಯಾಗಿ ಭಾಷೆಯ ಮೇಲೆ ಪ್ರೇರಣೆಯನ್ನುಂಟುಮಾಡಿದೆ. ಹೀಗೆ ಪರಸ್ಪರ ಪ್ರೇರಣೆಯಿಂದ ಭಾಷೆಯೂ ವಿಜ್ಞಾನವೂ ಒಟ್ಟಾಗಿ ಬೆಳೆದಿವೆ. ಆದುದರಿಂದ ಪಾಶ್ಚಾತ್ಯ ಸಂಸ್ಕೃತಿಯು ಪಾಶ್ಚಾತ್ಯ ಭಾಷೆಗಳಲ್ಲಿ ಸ್ಪಷ್ಟವಾಗುವಷ್ಟು ಹಿಂದೂಸ್ಥಾನದ ಭಾಷೆಗಳಲ್ಲಿ ಸ್ಪಷ್ಟವಾಗುವುದಿಲ್ಲ.

ಹಿಂದೀ ಭಾಷೆಯು ಈ ಕಷ್ಟವನ್ನು ಹೇಗೆ ಪರಿಹರಿಸಬಹುದೆಂದು ನಾವು ಹೇಳಲಾರೆವು. ಆ ನೂತನ ಭಾವನೆಯೇ ನಮಗೆ ಈಗ ಹಿಂದೀಯ ಮೇಲೆ ಇಂದಿಷ್ಟು ಅವಿಶ್ವಾಸವನ್ನುಂಟುಮಾಡಿರುತ್ತದೆ. ಹಳೆಯದೆಲ್ಲಾ ತಿರಸ್ಕರಣೀಯವೆನ್ನುವವರಲ್ಲಿ ನಾವಲ್ಲವೆಂದು ಹೇಳುವಾಗ ಹೊಸದೆಲ್ಲಾ ಕೆಟ್ಟದೆಂದು ಹೇಳುವವರೂ ನಾವಲ್ಲ. ಒಳ್ಳೆಯದಾಗಲಿ, ಕೆಟ್ಟದಾಗಲಿ ಆಧುನಿಕ ಸಂಸ್ಕೃತಿಯನ್ನು ನಾವು ತಿರಸ್ಕರಿಸಲಾರೆವು. ಅದರ ಆಶ್ರಯವನ್ನು ನಾವು ಪಡೆದು ಅದರ ಬೆಳವಣಿಗೆಯಲ್ಲಿ ನಾವೂ ಸಹಭಾಗಿಗಳಾಗಿ, ಪಾಶ್ಚಾತ್ಯರೊಡನೆ ಸಮಾನತೆಯನ್ನು ನಾವು ಹೊಂದಲೇ ಬೇಕು. ಈ ಧ್ಯೇಯಕ್ಕಾಗಿ ಹಿಂದೀ ಭಾಷೆಯು ಸಂಪೂರ್ಣವಾಗಿಯೂ ಸಹಾಯವನ್ನು ಮಾಡಬಲ್ಲುದಾದರೆ ಹಿಂದೂಸ್ಥಾನಕ್ಕೆ ಹಿಂದೀ ಭಾಷೆಗಿಂತ ಮಹತ್ವದ ಭಾಷೆಯು ಇನ್ನೊಂದಿರದು. ಆದರೆ ಮೇಲಿನ ಧ್ಯೇಯವನ್ನು ಸ್ವೀಕರಿಸುವಾಗ ಹಿಂದೀ ಭಾಷೆಯು ಹಿಂದೂಸ್ಥಾನವನ್ನು ಆಧುನಿಕತೆಯಿಂದ ಕೆಲವು ಮಾರುಗಳ ಹಿಂದೆ ಹಾಕುವುದಾದರೆ ಹಿಂದೀ ಭಾಷೆಯು ಪ್ರಾಂತಿಕ ಭಾಷೆಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ತಾಳುವ ಅವಶ್ಯಕತೆಯು ತೋರುವುದಿಲ್ಲ.

ಹಿಂದೀ ಭಾಷೆಯ ವಿಷಯದಲ್ಲಿ ನಾವು ಕಷ್ಟ ಸಂದೇಹಕರವಾಗಿ ಮಾತನಾಡುವಾಗ ದೇವನಾಗರಿ ಲಿಪಿಯ ವಿಷಯದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬಲ್ಲೆವೆಂದೆನಿಸುವವು. ದೇವನಾಗರಿ ಲಿಪಿಗೆ ಪುರಾತನತ್ವದ ಹೊರತು ಬೇರೆ ಸ್ಥಾನ ಇರುವುದಿಲ್ಲ. ಮುದ್ರಣಕ್ಕೆ ಅದು ಒಳ್ಳೆ ಅನಾನುಕೂಲ; ಈಗಿನ ತಂತೀ ವರ್ತಮಾನಗಳ ಪ್ರಯೋಜನವೇ ಇಲ್ಲ, ಟೈಪ್‌ರೈಟಿಂಗ್ ಅಸಾಧ್ಯ; [illegible] ಕಷ್ಟ; [illegible] ಹೆಚ್ಚಿನ ಆಸಕ್ತಿ ಇಲ್ಲ; [illegible] ಕೂಡ ಇರುವುದಿಲ್ಲ; ಬರೆಯಲಿಕ್ಕೆ ಕೂಡ ಒಳ್ಳೆ ಕಷ್ಟವಿದೆ. ಆದುದರಿಂದ ದೇವನಾಗರಿ ಲಿಪಿಯು ಆಧುನಿಕ ಸಂಸ್ಕೃತಿಗೆ ಎಂದೂ ಅನುಕೂಲವಾಗಿಲ್ಲ. [illegible] ಹಿಂದೂಸ್ಥಾನವೂ ಲ್ಯಾಟಿನ್ ಲಿಪಿಯ ವಿಷಯ ಏಕೆ ಆಲೋಚಿಸಬಾರದೆಂದು ನಾವು ಈ ವಿಷಯದಲ್ಲಿ ಸೂಚಿಸುವೆವು. ಈ ಸೂಚನೆಯು ಕ್ರಾಂತಿಕಾರಕನಾದರೂ ಪ್ರಯೋಜನಕರವಾಗಬಹುದೆಂದು ತೋರುತ್ತದೆ.

ವಿದೇಶ ವರ್ತಮಾನ.

— ಬ್ರಿಟನಿನ ಕಲ್ಲಿದ್ದಲಿನ ಗಣಿಗಳಲ್ಲಿ ಇನ್ನು ಮುಂದೆ [illegible] [illegible] ಕೆಲಸ ಮಾಡುವ ಆವಶ್ಯಕತೆ ಬಂದೊದಗ [illegible] ಮೊದಲು ವಾರಕ್ಕೆ ಮೂರು ಯಾ ನಾಲ್ಕು ದಿನ ಕೆಲಸ ನಡೆಯು [illegible] ಈಗ ವಾರಕ್ಕೆ ಆರು ದಿನಗಳಲ್ಲೂ ಕೆಲಸವು ನಡೆಯುತ್ತಲಿದ್ದರೂ [illegible] ಅವರಿಗೆ ಇಲ್ಲ.

— [illegible] ಎಂಬ ಗ್ರೀಕ ವರ್ತಮಾನ ಪತ್ರಿಕೆಯಲ್ಲಿ [illegible] ಕಾನ್‌ಸ್ಟಾಂಟಿನೋಪಲಿನ [illegible] ೨೦೦ ಮಂದಿ ವಿದ್ಯಾರ್ಥಿಗಳು [illegible] ಕಟ್ಟಡಗಳ [illegible] ಸಂಪಾದಕನನ್ನು ಹಿಡಿದು ಹಿಂಸಿಸಿದರು.

— ಮೆಕ್ಸಿಕೊ ರಾಜ್ಯದ ವೆರಾಕ್ರುಜ್ ಎಂಬಲ್ಲಿ ರಾಜದ್ರೋಹವುಂಟಾಗಿರುತ್ತದೆಂಬ ವರ್ತಮಾನದಿಂದ ರಾಜಧಾನಿಯಲ್ಲಿ ಗಲಭೆ ಎದ್ದಿರುತ್ತದೆ. ದಂಗೆಗಾರರ ಚಲಾವಣೆಯು ತಡೆಗಟ್ಟಲ್ಪಟ್ಟಿರುತ್ತದೆ.

— ಚಿಕಾಗ್ಯ ಬಳಿಗಿನ ಬಹಿರಂಗವಾದ ರಸ್ತೆಯಲ್ಲಿ ಬಾನುಟೋಸ್ ಮತ್ತು ಕಂಗಾನ್ಸ್ ಎಂಬ ಎರಡು ಸಂಗದಗಳೊಳಗೆ ಭಯಂಕರವಾದ ಜಗಳ ಪ್ರಾರಂಭವಾಯಿತು. ಚೂರಿಗಳೂ, ಚಾಟಿಗಳೂ, ಕಲ್ಲಿದ್ದಲಿನ ತುಂಡುಗಳೂ ಎರಡೂ ಪಕ್ಷದವರಿಂದ ಉಪಯೋಗಿಸಲ್ಪಟ್ಟವು. ಆದರೆ [illegible] ಪೋಲೀಸರಿಲ್ಲದೂ ಅಲ್ಲಿಗೆ ಕರಲ್ಪಟ್ಟರು.

[illegible] ಅವನ [illegible] ಗೌರವಿಸು [illegible] ಅವನು [illegible] ಗಳನ್ನು [illegible] ಮುಂದೆ ಹೆಂಡಂದಿರೂ ಆತನ ಸಂಸ್ಕಾರ [illegible] ಹಾಜರಿದ್ದರು.

— ಇಂಗ್ಲಾಂಡಿನಲ್ಲಿ ಸರ್ ಎಲಿಸ್ [illegible] ಹೆಮ ಎಂಬವರು ಸೆಳೆ ಕಾಲದಲ್ಲಿ ಇಂಗ್ಲಾಂಡಿನ ೧೦,೦೦೦ ಮಕ್ಕಳನ್ನು ಧರ್ಮಾರ್ಥವಾಗಿ ವಿಮಾನದಲ್ಲಿ ಕುಳ್ಳಿರಿಸಿ ಪ್ರಯಾಣಗಳನ್ನು ಬೆಳೆಯಿಸುವರು. ಚಿಕ್ಕ ಮಕ್ಕಳಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ಪ್ರಯಾಣ ಮಾಡುವ ಅಭಿರುಚಿಯು ಹುಟ್ಟಬೇಕೆಂಬುದೇ ಅವರ ಉದ್ದೇಶವಾಗಿದೆ.

— ಜರ್ಮನಿಯಲ್ಲಿ ಮುಖ್ಯವಾದೊಂದು ರಾಜಕೀಯ ದಸ್ತಾವೇಜಿನ ತಯಾರಿಯಲ್ಲಿದ್ದ ಮೂವರು ರಕ್ಷಕರೂ ಒಬ್ಬ ಜರ್ಮನ ಹೆಂಗಸೂ ಕೈದು ಮಾಡಲ್ಪಟ್ಟಿರುವರು.

— ಪೋಲೆಂಡಿನ [illegible] ಎಂಬಲ್ಲಿ ಒಬ್ಬ ಯುವಕನು ತನ್ನ ಅಜ್ಜಿಯನ್ನೇ ಮದುವೆಯಾಗಿರುವನು. ಒಬ್ಬ ಮನುಷ್ಯನು ಎರಡನೆಯ ಮದುವೆಯಲ್ಲಿ ನಾಲ್ವತ್ತೈದು ವರುಷ ಪ್ರಾಯದ ಹೆಂಗಸಿನ ಮಗಳಾದ ೨೦ ವರುಷದ ಯುವತಿಯನ್ನು ಮದುವೆಯಾದನು. ಆತನ ಮೊದಲನೆಯ ಹೆಂಡತಿಯ ಮಗನು, ತಂದೆಯ ಎರಡನೆಯ ಹೆಂಡತಿಯ ತಾಯಿಯನ್ನು ಕಂಡು ಮೋಹಿಸಿ, ಆಕೆಯನ್ನು ಮದುವೆಯಾದನು. ಮಗನು ತಂದೆಯ ಮಾವನಾದ ಹಾಗಾಯಿತು.

— ವಾರ್ವಿಕ್ ಶಾಯರಿನ ಕೋಲ್‌ಹಿಲ್ ಎಂಬಲ್ಲಿನ ಶಾಲೆಯಲ್ಲಿ ನಡೆದ ಕೈಬರಹದ ಸ್ಪರ್ಧೆಯಲ್ಲಿ [illegible] ಮೋರ್ ಎಂಬ ಹುಡುಗಿಯು ಸಂಪಾದಿಸಿರುವಳು. ಆ ಹುಡುಗಿಗೆ ಕೈಗಳಿರುವುದಿಲ್ಲವಂತೆ.

ಮಿ. ಸಿ. ಎಫ್. ಎಂಡ್ರೂಸರವರು ಈಗ ಅಮೇರಿಕದಲ್ಲಿರುವರು. ಅಲ್ಲಿ ಅವರು ಮಾಡಿದ ಕೆಲಸಗಳ [illegible] ಅವರು ಮಹಾತ್ಮಾಜಿಯವರಿಗೆ [illegible] ಕಳುಹಿಸಿರುವರು. ಹಿಂದೂಸ್ಥಾನದ [illegible] ಸಹಾನುಭೂತಿಯನ್ನೂ, [illegible] ಸಹೋದರ ಭಾವವನ್ನೂ ಅಮೇರಿಕನರು ವ್ಯಕ್ತಪಡಿಸುತ್ತಿರುವರಂತೆ.

— [illegible] ಬ್ರಿಟನಿಗೆ [illegible] ಮಹಾಂಗ್ಲಾಗಿ [illegible] ಬುಡಾಸ್ಟುವಂತೆ. [illegible]

— [illegible]

— [illegible]

— [illegible] ಸಂಬಂಧದಲ್ಲಿ [illegible] ಉದ್ದೇಶವಾಗಿರುತ್ತದೆ.

— [illegible]

— [illegible] ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ [illegible] ಹೋಗುತ್ತಲಿದ್ದರು. [illegible] ಸಾಧ್ಯಕ್ಕೆ [illegible]

— [illegible] ಜ್ವರದಿಂದ ೨೭೭ ಮರಣಗಳಾದವು. [illegible] ರೋಗಗಳಿಂದ ಕಳೆದ ವಾರ ಒಟ್ಟು ೩೭೩ ಮರಣಗಳಾದವು.

— ಪ್ರೆಸಿಡೆಂಟ್ ಕೂಲಿಜರವರು ಈಗ ಪತ್ರಕಾರರಾಗುವರು. ಅವರು ಬರೆಯುವ ಪ್ರತಿಯೊಂದು ಶಬ್ದಕ್ಕೆ ೩೬ ಶಿಲಿಂಗುಗಳಂತೆ ಅವರಿಗೆ ದೊರೆಯಲಿದೆ.

— ಸೋವಿಯಟ ಸರಕಾರ ಒಂದು ರೋಮನ್ ಪಟ್ಟಣವು [illegible] ಯಲ್ಪಟ್ಟಿರುತ್ತದೆಂದು. ವಿಮಾನದಲ್ಲಿ ಕುಳಿತು ೨೫೦೦ ಅಡಿ ಎತ್ತರ ಹಾರುತ್ತಿದ್ದ ಕೆಲವರು ಕಂಡುಹಿಡಿದಿರುವರು. ಈ ಪಟ್ಟಣದ ಹೆಸರು ಕ್ಯಾಸ್ಟರ್ ಎಂದು. ಬ್ರಿಟನಿನಲ್ಲಿ ರೋಮನರ ಅಭಿವೃದ್ಧಿಯ ಕಾಲ ಪಟ್ಟಣದಲ್ಲಿ ೨೦,೦೦೦ ಮಂದಿ ರೋಮನರಿದ್ದರು. ಅವರು ಮೇಲಿನ ಪಟ್ಟಣದ ಭೂಪಟವನ್ನು ತೆಗೆದಿರುವರು. ಸನ್ನದಲ್ಲಿಯೇ ಈ ಜಾಗ ಶೋಧಕ್ಕಾಗಿ ನೆಲವನ್ನು ಅಗೆಯಲು ಪ್ರಾರಂಭಿಸುವರು.

ಒಳದೇಶ ವರ್ತಮಾನ.

— [illegible] ಶ್ರೀ [illegible] ಶಾಸ್ತ್ರಿಯವರು [illegible] ಇಂದು ಕಳುಹಿಸಿದರು. [illegible] ಅವರು [illegible].

— ಏಪ್ರಿಲ್‌ನಲ್ಲಿ ಸ್ಯಾಮನ್ ಕಮಿಟಿಯವರು ಸೆಂಟ್ರಲ್ ಮತ್ತು ಪ್ರಾಂತಿಕ ಕಮಿಟಿಯವರನ್ನು ಕೂಡಿಕೊಂಡು ಡಿಲ್ಲಿಯಲ್ಲಿ ಒಂದು ಜ್ಞಾಯಿಂಟ್ ಕಾನ್ಫರೆನ್ಸು ಜರಗಿಸುವರು. ಇದಕ್ಕಾಗಿ ಮದರಾಸಿನ ಸ್ಯಾಮನ್ ಕಮಿಟಿಯವರು ಅಲ್ಲಿಗೆ ಹೊರಟು ಹೋಗುವರು. ಅಲ್ಲಿಗೆ ಹೋಗಬೇಕಾದರೆ ಮೊದಲು ಬೇರೆ ಬೇರೆ ಪ್ರಾಂತಿಕ ಕಮಿಟಿಗಳ ಜನರು ಒಟ್ಟಾಗಿ ಒಂದು ಸಭೆ ಜರಗಿಸುವದು ಒಳ್ಳೆದಾಗಬಹುದೆಂದು ಸರ್. ಎ. ಪಾತ್ರೋರವರು ಬೇರೆ ಬೇರೆ ಪ್ರಾಂತಿಕ ಕಮಿಟಿಗಳ ಅಧ್ಯಕ್ಷರುಗಳೊಡನೆ ಪತ್ರವ್ಯವಹಾರಾದಿಗಳನ್ನು ನಡೆಸುತ್ತಿರುವರಂತೆ.

— ಮಹಾತ್ಮಾ ಗಾಂಧಿಗಳವರು ಡಿಲ್ಲಿಯನ್ನು ಸಂದರ್ಶಿಸಿದಾಗ ಅಮೇರಿಕನ್ ಪ್ರಿಂಟಿಂಗ್ ಯುನಿವರ್ಸಿಟಿಯ ಪ್ರೊಫೆಸರನೊಬ್ಬನು ತನ್ನ ವಿದ್ಯಾರ್ಥಿಗಳೊಂದಿಗೆ ಮಹಾತ್ಮಾಜಿಯವರ ಭೇಟಿಯನ್ನು ಮಾಡಿದನು. ಅವರಲ್ಲಿ ಮೂವತ್ತು ಮಂದಿ ವಿದ್ಯಾರ್ಥಿನಿಯರಿದ್ದರು. ಅವರ ಕುರಿತಾಗಿ ಅಮೇರಿಕನ್ ವಿದ್ಯಾರ್ಥಿಗಳ ಅಭಿಪ್ರಾಯವೇನೆಂದರೆ "ಇಂಥ ನಾವು ಜಗತ್ತಿನ ಶ್ರೇಷ್ಠ ಪುರುಷನು ಬರೇ ಬ್ಯರಾಸುಟ್ಯಾಗಲೇ ಕಂಡೆವು. ಮಹಾತ್ಮಾಜಿಯವರ ವಿಷಯವಾಗಿ ನಾವು ಈ ಮೊದಲೇ ಕೇಳಿದ್ದು. ಅವರ ಕಡೆಗೆ ಪೂಜ್ಯಭಾವವನ್ನು ತಳೆದಿದ್ದೆವು. ಇಂದು ಅವರನ್ನು ಪ್ರತ್ಯಕ್ಷ ನೋಡಿದೆವು. ಅವರ ಆಚಾರ, ನಡತೆಗಳಿಂದ ಮರುಳಾದೆವು. ಯಾವ ದೇಶವನ್ನು ಸಂಚರಿಸಿದರೂ, ತಕ್ಷಣ ವಿಚಾರಿಸದೆ ದೇಶದ ಕುರಿತಾಗಿ ಅಭಿಪ್ರಾಯಗಳನ್ನು ಪ್ರಕಟಿಸುವದು ಸಮಂಜಸವಲ್ಲವೆಂದು ನಮಗವರು ಬೋಧಿಸುವುದಕ್ಕಾಗಿ ನಾವು ಅವರಿಗೆ ಆಭಾರಿಗಳಾಗಿರುವೆವು" ಎಂದು. ಮಹಾತ್ಮಾಜಿಯವರು ರಂಗೂನನ್ನು ಸಂದರ್ಶಿಸುವಾಗ ರಂಗೂನ್ ಕಾರ್ಪೋರೇಶನವರ ಖರ್ಚಿನಲ್ಲಿ ಅವರಿಗೊಂದು ಸುಸ್ವಾಗತ ಸೂಚಕವಾದ ಮಾನಪತ್ರವನ್ನು ಅರ್ಪಿಸಬೇಕೆಂದು ನಿರ್ಣಯವಾಗಿರುತ್ತದೆ.

— ಹಿಂದೂ ಮಹಾಸಭೆಯ ಹದಿನೆರಡನೆಯ ಅಧಿವೇಶನವು ತಾರೀಖು ೨೯, ೩೦, ೩೧ ಈ ದಿನಗಳಲ್ಲಿ ಸೂರತ್ತಿನಲ್ಲಿ ಜರಗುವದು. ಅಧ್ಯಕ್ಷತನಕ್ಕೆ ಹಲವು ಮಹನೀಯರುಗಳ ಹೆಸರುಗಳು ಸೂಚಿಸಲ್ಪಟ್ಟಿವೆ. ಹೆಚ್ಚಾಗಿ ಕಲಕತ್ತೆಯ 'ಮೊಡರ್ನ್ ರಿವ್ಯು' ಪತ್ರಿಕೆಯ ಸಂಪಾದಕರಾದ ಶ್ರೀ ರಾಮಾನಂದ ಚಟರ್ಜಿಯವರ ಹೆಸರಿಗೆ ತುಂಬಾ ಮತಗಳು ದೊರೆತಿವೆ.

— 'ವೀರಕೇಸರಿ' ಎಂಬ ಕರ್ನಾಟಕ ದೈನಿಕ ಪತ್ರಿಕೆಯನ್ನು ಪ್ರಕಟಿಸಲು ಶ್ರೀ ಸೀತಾರಾಮ ಶಾಸ್ತ್ರಿಗಳವರಿಗೆ ಕೊಡಲ್ಪಟ್ಟ ಹುಕುಮು ಸರಕಾರದವರಿಂದ ಹಿಂತೆಗೆಯಲ್ಪಟ್ಟಿರುತ್ತದೆ.

— ಕೊಯಂಬುತ್ತೂರಿನ ಸೆಂಟ್ರಲ್ ಜೈಲ್ ಕೈದಿಗಳು ಪ್ರಾರಂಭಿಸಿದ್ದ ಮುಷ್ಕರವು ಈಗ ಕೊನೆಗಂಡಿರುತ್ತದೆ.

— ಬರುವ ಸಪ್ಟಂಬರ ೨ನೇ ತಾರೀಕಿನ ದಿನ ಮಹಾತ್ಮಾಜಿಯವರಿಗೆ ೬೦ ವರುಷಗಳು ಪೂರ್ಣವಾಗುವವು. ಅದೇ ದಿನ ಆಲ್ ಇಂಡಿಯ ಸ್ಪಿನ್ನರ್ಸ್ ಎಸೋಸಿಯೇಶನಿನ ಚಾಲ್ತಿ ವರುಷವು ಪೂರ್ಣವಾಗುವದು. ಖಾದಿಯನ್ನು ಹೆಚ್ಚಾಗಿ ವಿಕ್ರಯಿಸುತ್ತಾ ಹೋಗಿ, ಅವರ ಜನ್ಮ ದಿನಾಚರಣೆಯ ದಿನ ಅವರಿಗೆ ತುಂಬಾ ಸಂತೋಷವನ್ನುಂಟುಮಾಡಬೇಕೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರ ಸೂಚನೆ.

— ಮದರಾಸಿನಲ್ಲಿ ಸ್ಯಾಮನ್ ಕಮಿಶನು ಬಂದಾಗ ಬಹಿಷ್ಕಾರದಲ್ಲಿ ಭಾಗಿಗಳಾದ [illegible] ಆ ಕಾಲೇಜಿನ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಹಾಕಲಾಗಿತ್ತು. ಈಗ ಅವರಲ್ಲಿ ಇಬ್ಬರನ್ನು ಪುನಃ ಸೇರಿಸಿಕೊಂಡಿರುವರಂತೆ.

— ಮುಂಬಾಯಿಯ ಹೊಸ ಗವರ್ನರರು ಮುಂಬಾಯಿ ಸಂಸ್ಥಾನದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ವಸೂಲುಮಾಡಲ್ಪಡುತ್ತಿರುವ ಸಂಬಳವು ತೀರ ಕಡಿಮೆಯೆಂದು ತಿಳಿಯುತ್ತಿರುವರಂತೆ. ಹಿಂದೂಸ್ಥಾನದ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತುಕೊಳ್ಳದ ಹುದ್ದೇದಾರರು. ಹೀಗೆ ತಿಳಿದುಕೊಳ್ಳುವದರಲ್ಲಿ ಆಶ್ಚರ್ಯವಿರದು.

— ಪಂ. ಜಮುನಾಲಾಲ ಬಜಾಜರ ಹಿಂದೀ ಪ್ರಚಾರ ಕಾರ್ಯವು ಕೊನೆಗಂಡಿತು. ಅವರು ನೆನಸಿದಷ್ಟು ಪ್ರಯೋಜನವು ಅವರ ಸಂಚಾರದಿಂದ ಉಂಟಾಗಲಾರದಾದರೂ ಹಿಂದೀ ಪ್ರಚಾರ ಕಾರ್ಯಕ್ಕಾಗಿ ಸುಮಾರು ೧೫೦೦೦ ರೂಪಾಯಿಗಳು ಜಮೆಯಾಗಿರುತ್ತವಂತೆ. ಹಿಂದೀ ಪ್ರಚಾರದ ಸಲುವಾಗಿ ಉಪಾಧ್ಯಾಯರ ತರಬೇತಿಗಾಗಿ ಎರಡು ಟ್ರೈನಿಂಗ್ ಶಾಲೆಗಳು ತೆರೆಯಲ್ಪಡುವದು ಒಳ್ಳೆದೆಂದು ಯೋಚಿಸಲ್ಪಡುತ್ತಿದೆ.

— ಯಂಗ್ ಇಂಡಿಯಾದಲ್ಲಿ ಒಂದು ಆಶ್ಚರ್ಯಕರ ವಾರ್ತೆಯು ಪ್ರಕಟಿಸಲ್ಪಟ್ಟಿರುತ್ತದೆ. ೨೨ ವರುಷ ಪ್ರಾಯದ ಒಬ್ಬ ಹೆಂಗಸು ಹಲವು ರೋಗಗಳಿಂದ ನರಳುತ್ತಿದ್ದಳಂತೆ. ಅವಳು ೧೮ ದಿನಗಳ ಪರಿಯಂತರ ಉಪವಾಸವನ್ನು ಆಚರಿಸಿದುದರಿಂದ ಅವಳಿಗೆ ಶಾರೀರಿಕ ಆರೋಗ್ಯವೂ ಮಾನಸಿಕ ಶಾಂತಿಯೂ ಸುಲಭದಲ್ಲಿ ಲಭಿಸಿದುವು.

— ಮಹಾತ್ಮಾಜಿಯವರು ತನ್ನ ಬರ್ಮಾ ದೇಶದ ಸಂಚಾರವನ್ನು ಮುಗಿಸಿದೊಡನೆ ಆಂಧ್ರ ದೇಶದಲ್ಲಿ ಸಂಚರಿಸುವರು. ಮೇ ಜೂನ್ ತಿಂಗಳುಗಳಲ್ಲಿ ಸಂಯುಕ್ತ ಪ್ರಾಂತಗಳನ್ನು ಸಂದರ್ಶಿಸುವರು.

— ಮದರಾಸಿನ ಟ್ರಿಪ್ಲಿಕೇನಿನಲ್ಲಿ ಖಾದಿಯು ಈಗ ಹೆಚ್ಚೆಚ್ಚು ವಿಕ್ರಯವಾಗುತ್ತಾ ಬರುತ್ತಿದೆಯೆಂದು ತಿಳಿದುಬರುತ್ತದೆ.

— ನೇಪಾಳ ಸರಕಾರದವರು ಖಾದಿ ಪ್ರಚಾರ ಕಾರ್ಯವನ್ನು ಮನವಿಟ್ಟು ಮಾಡುತ್ತಿರುವರು. ಅವರ ರಾಜ್ಯದಲ್ಲಿ ಖಾದಿ ನೈಗೆಯನ್ನೂ, ಚರಕದಲ್ಲಿ ನೂಲುವುದನ್ನೂ ಪ್ರಚಾರಕ್ಕೆ ತರುವ ಸಲುವಾಗಿ ೬ ಜನರು ನೇಮಿಸಲ್ಪಟ್ಟಿರುವರು. ಸಬರಮತಿ ಆಶ್ರಮದಲ್ಲಿ ನೂಲುವುದನ್ನೂ, ನೇಯುವುದನ್ನೂ ಕಲಿತು ಬಂದವನೊಬ್ಬನು ಅವರ ಮೇಲ್ವಿಚಾರಕನಾಗಿ ನೇಮಿಸಲ್ಪಟ್ಟಿರುವನು. ನೇಪಾಳದ ಒಳಗಿನ ಸ್ಥಳಗಳಲ್ಲಿಯೂ ಕಟ್ಮಂಡು ಮೊದಲಾದ ಸ್ಥಳಗಳಲ್ಲಿಯೂ, ಸುಮಾರು ೫೦೦ ಚರಕಗಳು [illegible] ಕೊಡುತ್ತಿವೆ. ಚರಕಗಳು ಕೆಲವು ಗ್ರಾಮಗಳಲ್ಲಿ ಈಗ [illegible]ಡಲ್ಪಡುತ್ತಿವೆ. ಜನರಿಗೆ ಬೇರೆ ಬೇರೆ [illegible] ಹುಟ್ಟಿಕೊಳ್ಳುತ್ತಿವೆ.

— ರವೀಂದ್ರನಾಥ ಟಾಗೋರರವರು ಮುಂಬಾಯಿಯಿಂದ ಹಡಗದಲ್ಲಿ [illegible] ಜಪಾನಿಗೆ ಹೊರಟು ಹೋದರು.

— ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನ. ಇದೇ ಏಪ್ರಿಲ್ ೨೨ನೇ ತಾರೀಕಿನಿಂದ ೩ ತಿಂಗಳುಗಳ ವರೆಗೆ ಮುಂದೂಡಲ್ಪಡುವದು.

— ಬರ್ಮಾ ಆಯಿಲ್ ಕಂಪೆನಿಯವರ ಪೆಟ್ರೋಲಿನ ಕ್ರಯವು ಗ್ಯಾಲನಿಗೆ ಎರಡಾಣೆ ಪ್ರಕಾರ ಏರಿರುತ್ತದೆ.

— ಕೆಲವು ಸಮಯದ ಹಿಂದೆ ಕಲ್ಲಿಕೋಟೆಯ ಇಬ್ಬರು ಹಿಂದೂಗಳು ಕ್ರಿಸ್ತೀ ಮತಕ್ಕೆ ಸೇರಿದ್ದರು. ಆದರೆ ಅವರು ಹಿಂದುಗಳಾಗಬೇಕೆಂದು ಪುನಃ ಅಭಿಪ್ರಾಯಪಟ್ಟುದರಿಂದ ಕಲ್ಲಿಕೋಟೆಯ ಆರ್ಯ ಸಮಾಜದವರು ಅವರನ್ನು ಪುನಃ ಹಿಂದೂ ಮತಕ್ಕೆ ಸೇರಿಸಿಕೊಂಡರು.

ಮೈಸೂರು ಮಹಾರಾಜರು ಕೆಲವು ದಿನಗಳ ಹಿಂದೆ ಉದಕ ಮಂಡಲಕ್ಕೆ ಹೋಗಿದ್ದವರು ಪುನಃ ಮೈಸೂರಿಗೆ ಹಿಂತಿರುಗಿರುವರು.

— ಮೈಸೂರು ದಿವಾನರಾದ ಮಿ|| ಮಿರ್ಜಾರವರು ಡಿಲ್ಲಿಗೆ ಹೋಗಿದ್ದವರು ಹಿಂತಿರುಗಿರುವರು. ಸ್ಯಾಮನ್ ಕಮಿಶನನ್ನು ಎದುರುಗೊಳ್ಳಲು ಮಾಡಿದ ತಯಾರಿಗಳೆಲ್ಲವನ್ನೂ ನೋಡಿ ಬೆಂಗಳೂರಿಗೆ ತೆರಳಿದರು.

— ಕಲಕತ್ತೆಯ ಆನಂದ ಬಜಾರ ಪತ್ರಿಕೆಯಲ್ಲಿ 'ಬಂಗಾಳದ ಸ್ವಾತಂತ್ರ್ಯ ಚಳವಳಿ' ಮೊದಲಾದ ಲೇಖನಗಳನ್ನು ಬರೆದುದಕ್ಕಾಗಿ, ಸಂಪಾದಕರಾದ ಶ್ರೀ ಸತ್ಯೇಂದ್ರನಾಥ ಮಜುಮದಾರರ ಮೇಲೆ ಮೊಕದ್ದಮೆಯಾಗಿರುತ್ತದೆ.

— ಮದರಾಸು ಸ್ಯಾಮನ್ ಕಮಿಟಿ ಮೆಂಬರರ ದಿನವಹಿ ಭತ್ತೆಯನ್ನು ೪೦ ರೂಪಾಯಿಗಳಿಗೆ ಏರಿಸುವ ಯೋಜನೆ ನಡೆಯುತ್ತಿದೆ. ನ್ಯಾಯ ವಿಧಾಯಕ ಸಭೆಯಲ್ಲಿ ಒಂದು ಪ್ರಶ್ನೆಗೆ ಈ ಮೆಂಬರುಗಳಿಗೆ ರೂಪಾಯಿ ೧೦ ಮಾತ್ರ ಕೊಡಲ್ಪಡಬೇಕೆಂದು ಉತ್ತರವು ದೊರೆಯಿತು. ಆದರೆ ಇದು ತೀರ ಕಡಿಮೆಯೆಂದು ಕೆಲವು ಮೆಂಬರರು ಭತ್ತೆಯನ್ನು ಪಡೆಕೊಂಡಿಲ್ಲ.

— ತಾರೀಖು ೩೦ ಮತ್ತು ೩೧ನೇ ದಿನಗಳಲ್ಲಿ ನಡೆಯುವ ಬೀರಾರು ಪ್ರಾಂತಿಕ ಪರಿಷತ್ತಿಗೆ ಮಿ|| ಎಸ್. ಸಿ. ಕೇಳಕರರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

— ಮಕ್ಕಳನ್ನು ಕೊಂಡೊಯ್ಯುವರೆಂಬ ಗಲಭೆಯು ಮೊದಲಾಗಿ ಮುಂಬಾಯಿಯಲ್ಲಿ ನಡೆಯಿತು. ತದನಂತರ ಬೆಂಗಳೂರಿನಲ್ಲಿ ಉಂಟಾಯಿತು. ಈಗ ವೆಲ್ಲೂರಿನಲ್ಲಿ ಉಂಟಾಗುತ್ತಿದೆ. ಒಬ್ಬ ನಾಲ್ವತ್ತು ವರುಷ ಪ್ರಾಯದ ಹೆಂಗಸು ತನ್ನ ಮನೆಯಿಂದ ಒಬ್ಬ ಹುಡುಗನನ್ನು ಕದ್ದೊಯ್ದಳೆಂದು ಒಬ್ಬ ಸಿಪಾಯಿಯು ಹೇಳಿದುದರಿಂದ ಹೆಂಗಸನ್ನು ಹುಡುಕಿ, ಹಿಡಿದು ಬಂಧಿಸಿದರು. ಅವಳು ಬಂಧಿಸಲ್ಪಟ್ಟೊಡನೆ ಊರಲ್ಲೆಲ್ಲ ಗಲಭೆಯುಂಟಾಗಹತ್ತಿದೆ.

— ಸರಕಾರಿ ನೌಕರರ ಉಡುಪಿಗಾಗಿ ಖಾದಿಯನ್ನು ಉಪಯೋಗಿಸಬೇಕೆಂದು ಅಸ್ಸಾಮು ಕೌನ್ಸಿಲಿನಲ್ಲಿ ಮಂಜೂರಾಗಿರುತ್ತದೆ. ಇದು ಮಾತ್ರವಲ್ಲದೆ ಉಳಿದ ಸಾಮಗ್ರಿಗಳನ್ನು ಖರೀದಿಸುವುದಕ್ಕೆ ಹಿಂದೂಸ್ಥಾನದ ಉತ್ಪನ್ನ ಪಡೆಕೊಳ್ಳಬೇಕೆಂದು ಅಲ್ಲಿ ನಿರ್ಣಯವಾಗಿರುತ್ತದೆ.

— ಬಾನಪುರದ ಒಂದು ಗಿರಣಿಯಲ್ಲಿ ಅಕಸ್ಮಾತ್ ಒಂದು ಮುಷ್ಕರವು ನಡೆಯಿತು. ಇಬ್ಬರು ಕೆಲಸಗಾರರ ನಡತೆಯು ದೋಷದ ಕಾರಣದಿಂದ ಅವರು ಕೆಲಸದಿಂದ ಹೊರ ಹಾಕಲ್ಪಟ್ಟರು. ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳದ ವಿನಹ ತಾವು ಕೆಲಸವನ್ನು ಮಾಡಲಾರೆವೆಂದು ಉಳಿದವರು ಮುಷ್ಕರವನ್ನಾರಂಭಿಸಿದರು. ಆದಕ್ಕಾಗಿ ಅಧಿಕಾರಿಗಳು ಗಿರಣಿಯ ಎರಡು ಇಲಾಖೆಗಳನ್ನು ಮುಚ್ಚಿಬಿಟ್ಟರು.

— ಬೆಂಗಳೂರಿನಲ್ಲಿ ಗಣಪತಿಯ ಗಲಾಟೆಯ ವಿಷಯದಿಂದ ಮೈಸೂರಿನ "ಮೈಸೂರ್ ಸ್ಟಾರ್" ಪತ್ರಿಕೆಯು ದೈನಿಕ ಸಂಚಿಕೆಗಳನ್ನು ಹೊರಡಿಸುತ್ತಲಿದ್ದಿತು. ಇದೇ ೫ನೇ ತಾರೀಕಿನಿಂದ ದೈನಿಕ ಸಂಚಿಕೆಗಳನ್ನು ಅದು ಹೊರಡಿಸುವುದಿಲ್ಲವಂತೆ.

— ಹೈದರಾಬಾದ ರಾಜ್ಯದ ನಂದೇಡ ಎಂಬಲ್ಲಿ ಗಣಪತಿಯ ಮೆರವಣಿಗೆಯು ಹೋಗುತ್ತಿರುವಾಗ ಅಕಸ್ಮಾತ್ ಹಿಂದೂ ಮುಸಲ್ಮಾನರು ಜಗಳಾಡಿದರು. ಸರಕಾರದವರು ಎರಡು ಪಕ್ಷದವರ ಮೇಲೆಯೂ ಮೊಕದ್ದಮೆಯನ್ನು ಹೂಡಿದರು. ಆದರೆ ಹಿಂದೂ ಮುಸಲ್ಮಾನರು ತಮ್ಮೊಳಗೆ ರಾಜಿಮಾಡಿಕೊಂಡು ತಮ್ಮ ಮೇಲಿನ ಮೊಕದ್ದಮೆಯನ್ನು ಹಿಂತೆಗೆಯಬೇಕೆಂದು ಸರಕಾರದವರನ್ನು ಪ್ರಾರ್ಥಿಸಿಕೊಂಡರು. ಸರಕಾರದವರು ಒಮ್ಮೆ ವಿಧಿಸಿದ ಶಿಕ್ಷೆಯನ್ನು ಹಿಂತೆಗೆಯಲಾಗುವುದಿಲ್ಲವೆಂದು, ೧೧ ಮಂದಿ ಮುಸಲ್ಮಾನರಿಗೂ, ೧೧ ಮಂದಿ ಹಿಂದೂಗಳಿಗೂ ಜೈಲು, ದಂಡನೆ ಮೊದಲಾದವುಗಳನ್ನು ವಿಧಿಸಿದರು.

ದಕ್ಷಿಣ ಕನ್ನಡ.

ಮಂಗಳೂರು — ನೆಹರೂ ಕಮಿಟಿಯ ವರದಿಯ ಪ್ರಾಮುಖ್ಯ ತತ್ವಗಳನ್ನು ಜನರೊಳಗೆ ಪ್ರಚಾರ ಮಾಡುವದಕ್ಕೆ ತಾರೀಖು ೧೦-೩-'೨೯ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಲೈನು ಮೈದಾನದಲ್ಲಿ ಪುರಜನರ ಮಹಾ ಸಭೆಯು ಕೂಡುವುದು. ಮೆರವಣಿಗೆಯು ಅದೇ ದಿನ ಸಾಯಂಕಾಲ ೪-೩೦ಕ್ಕೆ ಕೊಡಿಯಾಲ್ ಬೈಲಿನಲ್ಲಿರುವ ಕಾಂಗ್ರೆಸ್ ಆಫೀಸಿನಿಂದ ಹೊರಟು ಪಟ್ಟಣದ ಕೆಲವು ಮುಖ್ಯ ರಸ್ತೆಗಳಿಂದ ಹೋಗಿ ೬ ಘಂಟೆಯೊಳಗೆ ಮೈದಾನಿಗೆ ಹೋಗಿ ತಲ್ಪುವದು.

ಶ್ರೀಯುತ ಅಮ್ಮೆಂಬಳ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯವು ನಡೆಯುವದು. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೂ, ಶ್ರೀಯುತರುಗಳಾದ ಎ. ಶ್ರೀನಿವಾಸ ಪೈ, ಗಂಗೊಳ್ಳಿ ಕೃಷ್ಣರಾವ್ ಮ ಇತರರು ಭಾಷಣ ಮಾಡುವರು.. ಎಲ್ಲರಿಗೂ ಸ್ವಾಗತವಿದೆ.

ಋಷಿ ದಯಾನಂದ ಸರಸ್ವತಿಗಳ ಬೋಧೋತ್ಸವವು ನಾಳೆ ೧೧ನೆಯ ತಾರೀಕಿನ ದಿನ [illegible] ಆರ್ಯಸಮಾಜದ ಮಂದಿರದಲ್ಲಿ ೫-೧೫ಕ್ಕೆ ಜರಗಿಸಲ್ಪಡುವುದು. ಕಲ್ಲಿಕೋಟೆಯ 'ಕೈತಿಂಗ್‌ಸನ್' ಎಂಬ ಪತ್ರಿಕೆಯ ಸಂಪಾದಕರಾದ, ಆರ್ಯಧರ್ಮ ಪ್ರಚಾರಕರಾದ ಸಾಧು ಶಿವಪ್ರಸಾದರು ಅಧ್ಯಕ್ಷಸ್ಥಾನವನ್ನು ವಹಿಸುವರು. ಶ್ರೀ ಪಂಡಿತ ಅನಂತ ಉಪಾಧ್ಯಾಯರು, ಶ್ರೀ ಕೆ. ಆರ್. ಕೃಷ್ಣರಾವ್, ಡಿ. ಮಂಜಪ್ಪ, ಶ್ರೀ ರಾಮಕೃಷ್ಣ ಭಟ್ಟ, ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿ ಮೊದಲಾದ ಮಹನೀಯರು ಋಷಿಗಳ ತತ್ವಸಂದೇಶಗಳ ವಿಷಯವಾಗಿ ಮಾತಾಡುವರು. ೧೦ನೆಯ ತಾರೀಖು ಆದಿತ್ಯವಾರ ೮-೩೦ ಗಂಟೆಗೆ ಸಮಾಜ ಸುಧಾರಕ ಪರಿಷತ್ತು ಜರಗುವದು. ಸಾಧು ಶಿವಪ್ರಸಾದರು ಅಧ್ಯಕ್ಷರಾಗುವರು. ಸಮಾಜ ಸುಧಾರಣೆಯ ವಿಷಯವಾಗಿ ಶ್ರೀಮತಿ ವಸಂತಿದೇವಿ, ಶ್ರೀ ಕಾರ್ನಾಡು ಸದಾಶಿವರಾವ್, ಶ್ರೀ ಜ್ಞಾನೇಂದ್ರಪ್ರಭು, ಪಂಡಿತ ಧರ್ಮದೇವ ಮೊದಲಾದವರು ಮಾತಾಡುವರು. ಶ್ರೀ ಜ್ಞಾನೇಂದ್ರ ಪ್ರಭುಗಳು (ಮೊದಲು ಜೋನ್ ಡಿಸೋಜ) 'ವೈದಿಕ ಧರ್ಮ' ಮತ್ತು 'ಕ್ರೈಸ್ತಮತ' ಇವರ ವಿಷಯವಾಗಿ ಸೋಮವಾರ ಸಾಯಂಕಾಲ ೫-೩೦ ಗಂಟೆಗೆ ಮೈದಾನಿನಲ್ಲಿ ಭಾಷಣ ಕೊಡುವರು. ಮಹನೀಯರೆಲ್ಲಾ ಈ ಮೂರು ದಿನದ ಸಮಾರಂಭಗಳಿಗೂ ಕುಟುಂಬ ಇಷ್ಟಮಿತ್ರರೊಡನೆ ಬರಬೇಕಾಗಿ ಕಾರ್ಯದರ್ಶಿಯವರಾದ ಎಮ್. ಮಾಧವರಾವ್, ವಕೀಲ್ ಇವರು ತಿಳಿಸುವರು.

ಬೋಳೂರಲ್ಲಿರುವ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಚಿಕಿತ್ಸಿಸಲ್ಪಟ್ಟ ೩೫೧ ಹೊಸ ವ್ಯಾಧಿಗ್ರಸ್ತರ ಪೈಕಿ ೨೦೦ ಹಿಂದೂ ೧೧೯ ಪ್ರೊಟೆಸ್ಟಂಟರು ಸೇರಿ ಕ್ರಿಶ್ಚನ್ನರೂ ಮತ್ತು ೩೨ ಮುಸ್ಲೀಮ್ ಜನರಾಗಿದ್ದರು. ದಿನವಹಿ ಸರಾಸರಿ ಹಾಜರು ೭೪.೧ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ. ೧೯-೨-'೨೯ರಲ್ಲಿ ಹೆಚ್ಚಾಗಿ ಹಾಜರಾದ ರೋಗಿಗಳ ಸಂಖ್ಯೆ ೮೬.

ಮಂಗಳೂರು ಮುನಿಸಿಪಾಲಿಟಿಯೊಳಗೆ ಇದೇ ಮಾರ್ಚ ತಿಂಗಳಲ್ಲಿ ಸ್ಮಶಾನ ದೀಪ, ಬೆಂಚ್ ದೀಪ, ಅಪಾಯ ಸೂಚಕ ದೀಪ, ಇವು ತಿಂಗಳ ಪ್ರತಿದಿನ ಇಡೀ ರಾತ್ರೆ ಉರಿಸಲ್ಪಡುವವು. ಗ್ಯಾಸ್ ದೀಪಗಳು ರಾತ್ರಿ ೧೨ ಘಂಟೆಯ ತನಕ ಉರಿಸಲ್ಪಡುವವು. ಸಾಮಾನ್ಯ ದೀಪಗಳು ತಾರೀಖು ೯, ೧೦, ೧೧, ೧೨ ಮತ್ತು ೧೪ ಈ ದಿನಗಳಲ್ಲಿ ಇಡೀ ರಾತ್ರೆಯೂ, ಉಳಿದ ದಿನಗಳಲ್ಲಿ ಸಮಯಾನುಸಾರವೂ ಉರಿಸಲಾಗುವವು.

ತಾರೀಖು ೨-೩-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೭ ಮರಣಗಳೂ, ೩೬ ಜನನಗಳೂ ಆದವು. ಮರಣಗಳ ಪೈಕಿ ಅತಿಸಾರದಿಂದ ೨, ಕ್ಷಯರೋಗದಿಂದ ೩, ಇತರ ಎಲ್ಲಾ ಕಾರಣಗಳಿಂದ ೧೨, ಶಿಶು ಮರಣಗಳು ೬.

ಶ್ರೀ. ನಗರ ಶ್ರೀನಿವಾಸ ರಾಯರು ಬೆಂಚ್ ಕೋರ್ಟಿನ ವೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರೆ.

ಮಂಗಳೂರಿನಲ್ಲಿ ಸದ್ಯದಲ್ಲಿಯೇ ಒಂದು ಕೈಗಾರಿಕ ಶಾಲೆಯು ತೆರೆಯಲ್ಪಡುವುದಂತೆ.

ಉಡುಪಿ — ಇದೇ ತಾ ೩-೩-'೨೯ರಲ್ಲಿ ಶ್ರೀ [illegible] ಹೈಸ್ಕೂಲಿನ 'ವಿದ್ಯಾರ್ಥಿ ಸಂಘ'ದವರು ತಮ್ಮ ವಿದ್ಯಾಗುರುಗಳಾದ ಲಕ್ಷ್ಮೀನಾರಾಯಣ ಕಲ್ಕೂರರ [illegible] ಸಮಾರಂಭವನ್ನು ಚೊಕ್ಕವಾಗಿ ಜರಗಿಸಿದುದು ಅಭಿನಂದನೀಯ. ಉಡುಪಿ ಡೆಪ್ಯುಟಿ ಇನ್ಸ್‌ಪೆಕ್ಟರ್, ಶ್ರೀ ಲಕ್ಷ್ಮಣ ಭಟ್ಟ, ಬಿ. ಎ. ಎಲ್. ಟಿ. ಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ವಿದ್ಯಾರ್ಥಿ ಸಂಘದವರು ತಾವು ಮೊದಲೇ ತೆರೆದಿದ್ದ ಪುಸ್ತಕ ಭಂಡಾರವನ್ನು ವಿದ್ಯಾಗುರುಗಳ ಸ್ಮಾರಕವಾಗಿ ಅವರ ಹೆಸರನ್ನಿಟ್ಟು (ಶ್ರೀ ಲಕ್ಷ್ಮೀನಾರಾಯಣ ಲೈಬ್ರೆರಿ ಎಂದು) ಅದನ್ನು ಅಭಿವೃದ್ಧಿಗೊಳಿಸುವುದಾಗಿ ನಿವೇದಿಸಿದ ಬಳಿಕ ಅಧ್ಯಕ್ಷರು "ಶ್ರೀ ಲಕ್ಷ್ಮೀನಾರಾಯಣ ಲೈಬ್ರೆರಿ"ಯ ಆರಂಭೋತ್ಸವವನ್ನು ಜರಗಿಸಿದರು. ಅನಂತರ ಒಬ್ಬ ವಿದ್ಯಾರ್ಥಿಯು ವಿದ್ಯಾಗುರುಗಳ [illegible] ಶ್ರೀ ವೆಂಕಟರಾಯ ಕಲ್ಕೂರರಿಗೆ [illegible] ಸಮರ್ಪಿಸಿದನು. ಸಭಿಕರಿಗೂ ಅವನ್ನು ಹಂಚಿದ ಬಳಿಕ ಕೆಲವು ಮಂದಿ ವಿದ್ಯಾರ್ಥಿಗಳು [illegible] ಸಾದರಪಡಿಸಿದರು. ಇದಾದೊಡನೆ ಶ್ರೀಗಳಾದ ಎಸ್. ವಿ. [illegible], ಮುಖ್ಯೋಪಾಧ್ಯಾಯರು, ಕೆ. ರಾಮಚಂದ್ರ ಕಿಣಿ, ಇವರೇ ಮೊದಲಾದವರು ವಿದ್ಯಾಗುರುಗಳ ಗುಣಕಥನ ಮಾಡಿದರು. ಅಧ್ಯಕ್ಷರು ಸಂಘದ ಈ ಕಾರ್ಯಭಾಗವನ್ನು ಶ್ಲಾಘಿಸಿ ಭಾಷಣಮಾಡಿದರು. ಈ ಸಮಾರಂಭವು ಜಯಶೀಲವಾಗಿ ನೆರವೇರುವಂತೆ ನೆರವಾದವರೆಲ್ಲರಿಗೂ ಧನ್ಯವಾದಗಳೊಡನೆ ಮಕ್ಕಳಿಗೆ ತಿಂಡಿ ಹಂಚಿ ಸಭಾವಿಸರ್ಜನೆಯಾಯಿತು.

ಫರಂಗಿಪೇಟೆ — ಇದೇ ತಾರೀಖು ೧ನೇ ದಿನ ಮಂಗಳೂರು ಗವರ್ನಮೆಂಟು ಕಾಲೇಜಿನ ಪ್ರಿನ್ಸಿಪಾಲರೊಡನೆಗೂಡಿ ಉಪಾಧ್ಯಾಯರು, [illegible] ವಿಹಾರಕ್ಕಾಗಿ ತಾ. ೧ನೇ ಸಾಯಂಕಾಲ ಇಲ್ಲಿಯ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಬಂದಿಳಿದು ತಾ. ೩ನೇ ದಿನ ಸಾಯಂಕಾಲ ಹಿಂದಕ್ಕೆ ತೆರಳಿದರು. ಅಧಿಕಾರದವರನ್ನು ಲಕ್ಷಿಸದೆ ಉಪಾಧ್ಯಾಯರಲ್ಲಿ ಪರಸ್ಪರ ಪ್ರೀತಿಯಿಂದೊಡಗೂಡಿದ ಒಕ್ಕಟ್ಟು ಇದ್ದುದು ಇದರಿಂದ ಒಳ್ಳೆಯ ಉದಾಹರಣೆ.

ಮಳೆಗಾಲದಲ್ಲಿ ಗ್ರಾಮಸ್ಥರಿಗೆ ಅತ್ಯಂತ ತೊಂದರೆಯಾಗಿದ್ದ ದೊಡ್ಡ ತೋಡಿಗೆ ಈ ವರ್ಷ ಸರಕಾರದ ಉದಾರ ಸಹಾಯದಿಂದ ಸಂಕವು ಕಟ್ಟಿಸಲ್ಪಡುತ್ತದೆ. ಅಪಾಯವಾಗದಂತೆ ಎರಡು ಬದಿಯಲ್ಲಿಯೂ ಯೋಗ್ಯ ಆವರಣಗಳನ್ನು ಹಾಕುವುದು ಅಗತ್ಯವಾಗಿ ತೋರುತ್ತದೆ.

ವಿವಿಧ ಸಮಾಚಾರಗಳು.

ಮಹಾತ್ಮಾಜಿಯವರನ್ನು ಕೈದುಮಾಡಿದರು!

ಕಲಕತ್ತೆಯ ಶ್ರದ್ಧಾನಂದ ಪಾರ್ಕಿನಲ್ಲಿ ವಿದೇಶಿ ವಸ್ತ್ರಗಳನ್ನು ಸುಟ್ಟು ಹಾಕುವಾಗ ಪೋಲೀಸರು ಬಂದು ತಡೆಗಟ್ಟಲು, ಮಹಾತ್ಮಾಜಿಯವರು ಅವರಿಗೆ ವಿಧೇಯವಾಗಿ ವರ್ತಿಸದ ಕಾರಣ ಪೋಲೀಸರು ಮಹಾತ್ಮಾಜಿಯವರನ್ನು ಕೈದುಮಾಡಿದರು. ಆದರೆ ಕೆಲವು ಸಮಯದ ತರುವಾಯ ಜಾಮೀನಿನ ಮೇಲೆ ಬಿಡುಗಡೆಹೊಂದಿದರು. ಅವರು ಮಾರ್ಚ ೨೬ನೇ ತಾರೀಕಿನ ದಿನ ಅಧಿಕಾರಿಗಳ ಮುಂದೆ ಕಲಕತ್ತೆಯಲ್ಲಿ ಹಾಜರಾ[illegible]

ಕರ್ಣಿಕ ಎಗ್ಯೂಮಿಕ್ಸ್ಚರ್.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ, ಬಹು ದಿನದ ಜ್ವರ, ಸಾಧಿಸ್ವಂ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಜ್ವರ ಬಿಡುವದು, ಕೆಟ್ಟ ಶರೀರ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತ್ತು ೧-೪-೦, ಸಣ್ಣದಕ್ಕೆ ೦-೧೪-೦

ಎಲ್ಲ ಕಡೆಗೂ ಔಷಧವನ್ನು ಮಾರುವಿಕೆಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜ. ಜೂಲಿಯಸ್ ಮಾರ್ಟಿನ್, ಮಂಗಳೂರು. | ಕರ್ಣಿಕ ಬ್ರದರ್ಸ್, ಗಿರಗಾಂವ, ಮುಂಬಯಿ.

Famous

Mysore Perfumes.

Best Incense sticks (Agar Bathis)

			Rs
Maharaja Bathi	per seer	(24 Tolas)	20
Darbar	,,	,,	15
Ananda	,,	,,	12
Manmohan	,,	,,	10
Musk Heena	,,	,,	8
Dilobaman	,,	,,	8
Kasthur Javaji			10
Amber	,,	,,	8
Rose	,,	,,	6
Jasmin	,,	,,	5
Punugu (Civet)		,,	4
Heena			3
A Tin Case containing 300 Assorted Bathis of 12 kinds		,,	6

Packing & Postage Extra.

The State Perfumery Mart,
Bangalore City,
Mysore State.

'ಅಂಬಾ ತಾಯಿತ್'

ನಿಮ್ಮ ಸ್ವಭಾವನ್ನು ಕೆಡಿಸುವದು:—ಭೂತ ಪಿಶಾಚ ದಿಂದ ನಿಮಗೆ ಬರುವ ಕಷ್ಟವನ್ನು ನಿವಾರಿಸುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಗಳನು ಕೂಲವನ್ನೀಯು ವದು. ಅನೇಕರಿಗೆ ನನ್ನ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

ಗನೇ ನಂಬ್ರ ೩೦ ರೂಪಾಯಿ ೩ನೇ ನಂಬ್ರ ೧ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ಪರಿಕ್ಷೆ ಮಾಡಿದರೆ ನಿಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ಕೆಂಗಿನಮನೆ,

ಸಳ್ಳಿಪುರ್ ಪೋಸ್ಟ್ ಕಾರವಾರ್ ಡಿಸ್ಟ್ರಿಕ್ಟ್

ANNUAL SALE ... MANUFACTURED ...

೪೨ ವರ್ಷ ಅನುಭವ ಹೊಂದಿದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಶನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲಾರ ಅಗ್ಯು ಮಿಕ್ಸ್ಚರ್ ಫಿವರ್—ಮಲೇರಿಯಾ ಜ್ವರ ಪರಿಹಾರ. ರೂ. ೧.

ಬಾಟ್ಲಿವಾಲಾರ ಟಾನಿಕ್ ಪಿಲ್ಸ್—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಶಕ್ತಿ ಕೊಡುವ ಔಷಧ ಆಣೆ ೧೨.

ಬಾಟ್ಲಿವಾಲಾರ ಟೂತ್ ಪೌಡರ್ ಆಫ್ ಡಾ. ನ್ಯೂಮನ್—ಹಲ್ಲುಗಳ ಎಲ್ಲಾ ತರದ ರೋಗಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲಾರ ರಿಂಗ್‌ವರ್ಮ್ ಆಯಿಂಟ್ಮೆಂಟ್—ಗಜಕರ್ಣ ಮತ್ತು ಕಾಲರಾ ಇವುಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೨.

ಬಾಟ್ಲಿವಾಲಾರ ಕ್ವಿನೀನ ಟ್ಯಾಬ್ಲೆಟ್‌ಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟ್ಯಾಬ್ಲೆಟ್‌ಗಳು ಇರುತ್ತವೆ.

ಬಾಟ್ಲಿವಾಲಾರ ... ಗುಳಿಗೆಗಳು—... ರೂ. ೧—೪—೦. ರೂ. ೧—೫—೦. ೧—೧೨—೦.

ಬಾಟ್ಲಿವಾಲಾರ ... ಔಷಧ. ರೂ. ೦—೬—೦

ಬಾಟ್ಲಿವಾಲಾರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಟೆಲಿಗ್ರಾಮ್:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. | ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road. P. O. Cadell Road, Bombay. No. 14.

ಕೇಸರಿಯ ಪ್ರದರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವನಸ್ಪತಿಯ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸವಾಸನವಾಯಿತು' ಎಂದೂ, ಇನ್ನು ಕೆಲವರು 'ರಕ್ತಬಹಿಕವಾದ ಅಧರಾ'ವೆಂದೂ, 'ನವಾರ್ಧೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಮುಟ್ಟುಕಟ್ಟಿದ, ಮುಟ್ಟುಸ್ರಾವದೋಷ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಸೆರಗು) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿತ್ತಾಶಯಬಾಧೆ ಮೊದಲಾದ ಗರ್ಭಾಶಯದ ರೋಗಗಳೂ, ... ಅಜೀರ್ಣ, ... ಸೊಂಟನೋವು, ... ಮುಂತಾದ ವ್ಯಾಧಿಗಳೂ ... ನಿಶ್ಶೇಷವಾಗಿ ಗುಣವಾಗುವವು.

ಈ ಲೋಧ್ರವು ಔಷಧ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರಿ ಕುಟೀರಂ,

TELEGRAMS:—KESARI ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

10-4-'27 ಬ್ರಾಂಚ್ — 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಜೂಲಿಯಸ್ ಮಾರ್ಟಿನ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು | ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಎಲ್ಲಾ ನಮೂನೆಗಳ ಉತ್ತಮ ಕೈಗಡಿಯಾರ, ಪೆನ್ನುಗಳೂ, ಕನ್ನಡಕಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಸಾಮಾನು ವಗೈರೆಗಳೂ, ಅಪರೂಪ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ಎಲ್ಲ ವಿಧದ ವಾಚು, ಕ್ಲಾಕು, ಟೈಮ್‌ಪೀಸ, ಫೋನೋಗ್ರಾಫು ಮತ್ತು ಸಿಂಗರ್ ಮೆಶೀನ್ ಇವುಗಳನ್ನು ರಿಪೇರಿ ಮಾಡಬೇಕಾದರೆ ದಯವಿಟ್ಟು ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೋಸ್ಕರ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ.— ನಿಮ್ಮ ವಾಚು ರಿಪೇರಿಯಾದವುಗಳಿಗೆ ಎರಡು ವರ್ಷಗಳ ಗ್ಯಾರಂಟಿಯ ಪತ್ರವನ್ನು ಕೊಡಿಸಿ ಸ್ವಚ್ಛವಾಗಿರುವುದರಿಂದ ಸರಿಯಾದ ಸಮಯವು ದೊರಕುವುದು.

[illegible] ... ಎಂದೆಂದೂ [illegible] ...

[illegible] ಕಲಕತ್ತೆಯ ಶ್ರದ್ಧಾನಂದ ಪಾರ್ಕಿನಲ್ಲಿ ಮಹಾ[illegible] ವಿದೇಶಿ ವಸ್ತ್ರಗಳನ್ನು [illegible] ಅವುಗಳಿಗೆ ಬೆಂಕಿ [illegible] ಹಾಕಿದ್ದರು. ಗಾಂಧಿಯವರು ಭಾಷಣವಿತ್ತ ಬಳಿಕ ಸುತ್ತುಮುತ್ತ [illegible] ವಿದೇಶಿ ವಸ್ತ್ರದ ಮೂಟೆಗಳು ಉರಿಯುವ ಬೆಂಕಿಯಲ್ಲಿ ಬಿಂದು [illegible] ಸುತ್ತಲೂ ಪೋಲೀಸರು ಲಾಠಿಗಳನ್ನು ಹಿಡಿದು ನಿಲ್ಲಿಸಲ್ಪಟ್ಟ [illegible] ಅಗ್ನಿಜ್ವಾಲೆಗಳು ಕಾಣತೊಡಗಿದೊಡನೆ ಪೋಲೀಸರು ಓಡಿಬಂದು [illegible] ನೀರಿನ ಸಹಾಯದಿಂದಲೂ ಬೆಂಕಿಯನ್ನು ನಂದಿಸ[illegible]. ಈ ಗಡಿಬಿಡಿಯಲ್ಲಿ ಹಲವರಿಗೆ ಸ್ವಲ್ಪ ಪೆಟ್ಟು ಆಯಿತು. [illegible] ಬೇರೆ ಬೇರೆ ಕಡೆಗಳಲ್ಲಿ ವಿದೇಶಿ ವಸ್ತ್ರಗಳನ್ನು ರಾಶಿಹಾಕಿ ಅವು[illegible] ಸುಡತೊಡಗಿದರು. ಬೇರೆ ಬೇರೆ ಕಡೆಗಳಲ್ಲೂ ಪೋಲೀಸರು [illegible] ಬೆಂಕಿಯನ್ನು ನಂದಿಸಿದರು. ಜನರನ್ನು ಹೊಡೆದರು.

ಮಹಾತ್ಮಾಜಿಯವರು ಮೊದಲು ಹಿಂದಿಯಲ್ಲಿ ಭಾಷಣವಿತ್ತು ತರುವಾಯ ಇಂಗ್ಲಿಷಿನಲ್ಲಿ ಮಾತಾಡಿದರು. ಸ್ವಾತಂತ್ರ್ಯವನ್ನಪೇಕ್ಷಿಸಬೇಕಾದರೆ ವಿದೇಶಿ ವಸ್ತ್ರಗಳನ್ನು ಪೂರ್ಣವಾಗಿ ಬಹಿಷ್ಕರಿಸಿ ಸ್ವದೇಶಿ ವಸ್ತ್ರವನ್ನೇ ಉಪಯೋಗಿಸಬೇಕೆಂದೂ ದೃಢವಾದ ನಿಶ್ಚಯವನ್ನು ಮಾಡಿಕೊಳ್ಳಬೇಕೆಂದು ಅವರು ಕೇಳಿದವರಿಗೆ ವಿವರಿಸಿಹೇಳಿದರು. ಇಷ್ಟುಮಾತ್ರವಲ್ಲದೆ ಖಾದಿಯನ್ನು ಧರಿಸುವ ಆವಶ್ಯಕತೆಯ ಕುರಿತು ದೀರ್ಘವಾದ ಭಾಷಣವನ್ನು ಮಾಡಿದರು. ಇಷ್ಟು ಭಾಷಣವಾದ ಮೇಲೆಯೇ ಅವರು ವಸ್ತ್ರಗಳಿಗೆ ಬೆಂಕಿಯನ್ನು [illegible]. ಶ್ರದ್ಧಾನಂದ ಪಾರ್ಕಿನಲ್ಲಿ ವಿದೇಶಿ ವಸ್ತ್ರವನ್ನು ಸುಟ್ಟು ಹಾಕುವರೆಂದು ಮುಂದಿನ ದಿನವೇ ಪ್ರಕಟವಾಗಿತ್ತು ಕಾರಣ, ಅದು ಕಾನೂನಿಗೆ ವಿರೋಧವಾಗಿದ್ದುದರಿಂದ ಅದನ್ನು ತಡೆಯಬೇಕೆಂದು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ ಕಿರಣ ಶಂಕರ ರಾಯಿಯವರಿಗೆ ಪೋಲೀಸ್ ಅಧಿಕಾರಿಗಳ ಹುಕುಂ ಮೊದಲೇ ಬಂದಿದ್ದಿತು. ೫. ನೇ ದಿನವೇ ಮಹಾತ್ಮಾಜಿಯವರು ರಂಗೂನಿಗೆ ಹೊರಟು ಹೋದರು. ಮಹಾತ್ಮಾಜಿಯವರೊಂದಿಗೆ ಶ್ರೀ ಕಿರಣ ಶಂಕರ ರಾಯಿಯವರೂ ಕೈದುಮಾಡಲ್ಪಟ್ಟಿದ್ದರು.

ಮಿಸ್ ಮೆಯೋಳ ದ್ವಿತೀಯ ಸಾಹಸ.

ಮಿಸ್. ಮೆಯೋ ಎಂಬ ಅಮೇರಿಕನ್ ಹೆಂಗಸೊಬ್ಬಳು, ಈ ಮೊದಲು "ಮದರ್ ಇಂಡಿಯಾ" ಪುಸ್ತಕವನ್ನು ಬರೆದು ಹಿಂದೂಸ್ಥಾನವನ್ನು ಮನಬಂದಂತೆ ತೆಗಳಿ ಅವಳ ಪ್ರಥಮ ಸಾಹಸವು ವಿಜಯಿಯಾಗಿ ಪರಿಣಮಿಸಿತು. ಇದರಿಂದ ಹುರುಪುಗೊಂಡ ಆಕೆಯು ಈಗ ಇನ್ನೊಂದು ಪುಸ್ತಕವನ್ನು ಬರೆದಿರುವಳಂತೆ. ಇದು ಕೂಡ ಹಿಂದೀಯರನ್ನು ದೂಷಿಸಿ ಬರೆಯಲ್ಪಟ್ಟಿರುತ್ತದೆ. ಇದರ ಹೆಸರು "ಸ್ಲೇವ್ಸ್ ಒಫ್ ಗೋಡ್ಸ್", (ದೇವರ ದಾಸರು) ಎಂದು. ಹಿಂದೀಯರ ಕುರಿತಾಗಿ ಹಲವು ಕಥೆಗಳು, ಅವರ ಬಾಲ್ಯವಿವಾಹದ ಪದ್ಧತಿ, ದೇವದಾಸಿ ಪದ್ಧತಿ, ಸಹಗಮನದ ಪದ್ಧತಿ, ಅಸ್ಪೃಶ್ಯತಾಶ್ರಮ ಇವಲ್ಲ ವಿಷಯಗಳು ಈ ಹೊಸ ಪುಸ್ತಕದಲ್ಲಿ ಅಡಕವಾಗಿರುತ್ತವಂತೆ. ಅನಾಗರೀಕತೆಯುಳ್ಳ ವಿಷಯಗಳನ್ನು ರುಜುಪಡಿಸಿ ಪುಸ್ತಕದಲ್ಲಿ ಅವು ಬರೆಯಲ್ಪಟ್ಟಿರುತ್ತವಂತೆ. ಹಿಂದೂಸ್ಥಾನದ ಜನರ ಅವನತಿಯನ್ನು ಹೊರಗೆಳೆಡಿಸುವುದೇ ತನ್ನ ಪುಸ್ತಕ ಬರೆಯುವದರ ಉದ್ದೇಶವೆಂದು ಮಿಸ್. ಮೆಯೋಳ ಅಂಬೋಣ. ಇಂಡಿಯಾ ಸರಕಾರದವರು, ಮೊದಲು ಮಿಸ್. ಮೆಯೋಳು ಬರೆದ 'ಮದರ್ ಇಂಡಿಯಾ' ಪುಸ್ತಕವನ್ನು ಬಂಧಿಸುತ್ತಿದ್ದುದಾದರೆ ಅವಳು ಈ ದ್ವಿತೀಯ ಪ್ರಯತ್ನದಲ್ಲಿ ಕೈಹಾಕುತ್ತಿರಲಿಲ್ಲ. ಅವಳು ಬರೆದ ಮದರ್ ಇಂಡಿಯಾ ಪುಸ್ತಕದ ಅಮೇರಿಕನ್ ಸಂಚಿಕೆಯಲ್ಲಿ ಮುಸಲ್ಮಾನರ ಕುರಿತಾಗಿ ಹಲವು ಅವಹೇಳನಗಳಿದ್ದರೂ ಇಂಗ್ಲೀಷ್ ಭಾಷೆಗೆ ಅವು ಪರಿವರ್ತಿಸಲ್ಪಟ್ಟಿಲ್ಲ. ಈ ಎರಡನೆಯ ಪುಸ್ತಕದಲ್ಲಿ ಮುಸಲ್ಮಾನರ ಕುರಿತಾಗಿ ಏನೂ ಬರೆಯಲ್ಪಟ್ಟಿಲ್ಲವೆಂದು ತಿಳಿಯಬೇಕಾಗಿದೆ, ಎಸೆಂಬ್ಲಿಯಲ್ಲಾದರೂ ಹಿಂದೂ ಧುರೀಣರು ಈ ಪುಸ್ತಕವನ್ನು ನಿರೋಧಿಸಿ, ಅದನ್ನು ಮುಂದೆ ತರಲು ಸಾಕಷ್ಟು ಸಮಯವೂ ಅನುಕೂಲವೂ ಈಗ ಇರುತ್ತದೆ. ಹಿಂದೂ ಜನಾಂಗವನ್ನು ದೂಷಿಸಿ ಪರರಾಷ್ಟ್ರದವರು ಇಂತಹ ಪುಸ್ತಕಗಳನ್ನು ಬರೆಯುವುದರಿಂದ ಹಿಂದೀಯರಿಗೆ ಬಹಳ ಅವಮಾನವಾಗುವದೆಂಬುದರಲ್ಲಿ ಸಂದೇಹವಿಲ್ಲವಷ್ಟೆ.

ಅಫಘಾನದ ಗಡಿಬಿಡಿ.

ಜನರಲ್ ನಾದಿರಖಾನರು ಇನ್ನೂ ಹದಿನೈದು ದಿನಗಳ ವರೆಗೆ ಪೂರ್ಣ ವಿಶ್ರಾಂತಿಯನ್ನು ಹೊಂದಬೇಕೆಂದು ವೈದ್ಯರು ಅಭಿಪ್ರಾಯಕೊಟ್ಟಿರುವರು. ಏಕೆಂದರೆ ಅವರು ಬಹು ಬಳಲಿದ ಹಾಗೆ ಕಾಣಬಂದರು. [illegible] ಬಳಲಿಕೆಯ ಸೂಚನೆಯು ಅವರಲ್ಲಿ ತೋರಿಬರುತ್ತದಾದರೂ ಮುಂದಣ ಕಾರ್ಯಕ್ರಮಗಳ ಕುರಿತಾಗಿ ಈಗಲೇ ಅವರು ಯೋಚಿಸುತ್ತಿರುವರು. ಅವರು ಪೂರ್ಣ ಆರೋಗ್ಯವನ್ನು ಹೊಂದುವ ವರೆಗೆ ಯಾವ ಯಾವ ರೀತಿಯ ಹಂಚಿಕೆಗಳನ್ನು ಮಾಡಿರುವರೆಂಬುದನ್ನು ಹೇಳಲು ಸಾಧ್ಯವಿರುವುದಿಲ್ಲ. ಆದರೆ ಇಷ್ಟು ಮಾತ್ರವನ್ನು ನಿಶ್ಚಯಿಸಬಹುದಾಗಿದೆ; ಅವರು ಸಧ್ಯದಲ್ಲಿಯೇ ಜಲಾಲಾಬಾದಿಗೆ ಹೋಗಿ, ಶಿನ್ವಾರಿಗಳನ್ನು ಒಟ್ಟುಕೂಡಿಸಿ, ಈಗ ಅಫಘಾನದಲ್ಲಿ ನಡೆಯುತ್ತಲಿರುವ ಪರಸ್ಪರ ಹತಾಹತಿಯ ಯುದ್ಧಗಳನ್ನು ನಿಲ್ಲಿಸಬೇಕೆಂದು ಹೇಳಬಹುದು. ಆ ತರುವಾಯ ಅವರು ಬಾಚಾ-ಇ-ಸಾಕೋವನನ್ನು ಕಂಡು ಆತನ ಕೂಡೆ ಮಾತನಾಡಿ ಎಲ್ಲವನ್ನು ಸಮಾಧಾನದಲ್ಲಿಯೇ ತೀರಿಸಿ ಯುದ್ಧವಾಗುವ ಸಂಭವವನ್ನು ತಪ್ಪಿಸಬಹುದು.

ಅಲಿ ಅಹಮದ ಜಾನರೊಂದಿಗೆ ನಾದಿರಖಾನರು ಹೆಚ್ಚು ಹೊತ್ತಿನ ವರೆಗೆ ಸಂಭಾಷಣೆಯನ್ನು ನಡಿಸಿದರಂತೆ. ಫಲಿತಾಂಶವೇನಾಯಿತೆಂದು ತಿಳಿದುಬರುವುದಿಲ್ಲ. ಅಹಮದ ಅಹಮದ ಜಾನರನ್ನು ತನ್ನ ಕಡೆಗೆ ಸೇರಿಸಿಕೊಳ್ಳುವದೇ ಅವರ ಉದ್ದೇಶವಿದ್ದಿರಬಹುದೆಂದು ತಿಳಿಯಬಹುದು.

ಕಂದಹಾರಿನಲ್ಲಿ ಜಗಳಗಳು ಉಂಟಾಗಿಲ್ಲವೆಂದು ನಂಬಿಗೆಯ [illegible]. ಜನರಲ್ ನಾದಿರ್ ಖಾನರು ಒಳ್ಳೆಯ ಮನುಷ್ಯರಾದಾಗ್ಯೂ [illegible] ಕೈಕೊಳ್ಳುವ ಕಾರ್ಯಕ್ರಮಗಳಿಂದ ಅವರನ್ನು ನಂಬಲಾಗುವ[illegible]ವೆಂದು ಹಕೀಮು ಅಬ್ದುಲ್ ಜಲೀಲರು ಭಾಷಣಕೊಟ್ಟಿರುವರು.

ಸರ್. ಫ್ರಾನ್ಸಿಸ್ ಹಂಫ್ರಿಯವರು ಇನ್ನೂ ಪೇಶಾವರದಲ್ಲಿಯೇ ಇರು[illegible]. ಅವರ ಮುಂದಣ ಕಾರ್ಯಕ್ರಮಗಳ ಕುರಿತಾಗಿ ಯಾವುದೂ [illegible]ಯಾಗಿ ತಿಳಿದುಬರುವುದಿಲ್ಲ.

[illegible] ಅವರ ಅಧಿಕಾರ [illegible], ಅಲಿ ಅಹಮದ ಜಾನರು [illegible] ಕೇಳಿಕೊಂಡ ಅಂತೆಗಳಿಗೆ ಪೇಶಾವರದಲ್ಲಿರುವ ಅಫಘಾನ ವ್ಯಾಪಾರದ ಏಜಂಟನು ಸಹಾಯಮಾಡಿರುವನು.

ಅಮಾನುಲ್ಲಾರವರ ಸ್ವಸ್ಥಾನ ಬಿಟ್ಟು ಬಳಿಯುತ್ತಲಿದ್ದ ಹಲವು ಊರಿನವರು ಅಮಾನುಲ್ಲಾರವರಿಗೇ ಸಹಾಯಮಾಡುವರೆಂದು ಪ್ರತಿಜ್ಞೆ ಮಾಡಿರುವರು. ಇನ್ನಿತರ ಜನರು ಕಂದಹಾರಿನಲ್ಲಿ ಅಮಾನುಲ್ಲಾರವರಿಗೆ ವಿಧೇಯರಾಗಿರುವ ಬಗ್ಗೆ ಪ್ರತಿಜ್ಞೆ ಮಾಡಿಕೊಂಡಿರುವರು. ಬಾಚಾ-ಇ-ಸಾಕೋವಿಗೆ ಇದಿರಾಗಿ ಕಾದಲು ಅವರು ಸಿದ್ಧರಿರುವರು. ಬಾಚಾ-ಇ-ಸಾಕೋವು ಕೂಡ ಲೋಹಗಾರ ಎಂಬಲ್ಲಿ ಯುದ್ಧದ ತಯಾರಿ ಮಾಡುತ್ತಿರುವನು. ಕಾಬೂಲಿನ ಜನರು ತೊಂದರೆ ಇಲ್ಲದೆ ಇರುವರು ಎಂದು ಆತನು ಹೇಳುವನು. ಕಂದಹಾರ ಮತ್ತು ಕಾಬೂಲು ಇವೆರಡುಗಳ ನಡುವೆ ಆತನು ಅಮಾನುಲ್ಲಾಖಾನರನ್ನು ಎದುರಾಗಲಿರುವನು. ಪೇಶಾವರದಲ್ಲಿರುವ ಅಫಘಾನ ವ್ಯಾಪಾರದ ಏಜಂಟನು ತನ್ನ ಕೂಡ ಇದ್ದ ಹಣವನ್ನು ಬಾಚಾ-ಇ-ಸಾಕೋವಿಗೆ ಕೊಡಲು ಮಾತ್ರ ಒಪ್ಪದಿರುವುದಿಲ್ಲ. ಅಮಾನುಲ್ಲಾಖಾನರೊಡನೆ ಕೊಡಲು ಕೂಡ ಆತನ ಒಪ್ಪಿಗೆಯಿರುವುದಿಲ್ಲ. ಅಫಘಾನದಲ್ಲಿ ಅವಾಬ್ದಾರ ಸರಕಾರವೊಂದು ಸ್ಥಾಪಿಸಲ್ಪಡುವ ವರೆಗೆ ಆತನು ಆ ಹಣವನ್ನು ಹೊರಹಾಕಲು ಎಳಸುವುದಿಲ್ಲ.

ನಾದಿರಖಾನ ಮತ್ತು ಅಲಿ ಅಹಮದಜಾನರೊಳಗೆ ಗುಪ್ತವಾದ ಆಲೋಚನೆಗಳು ಈಗಲೂ ನಡೆಯುತ್ತಲೇ ಇವೆ.

ಮಂಗಳೂರು ಮಲ್ಪೆ ರೈಲುವೇ ಲ್ಯಾನನ್ನು ಬಂಟವಾಳ, ಮೂಡಬಿದರೆ, ಕಾರ್ಕಳ ದಾರಿಯಾಗಿ ಮಲ್ಪೆಗೆ ಕೊಂಡುಹೋಗುವ ಅವಶ್ಯಕತೆ.

ಇಂಡಿಯಾ ಸರಕಾರದ ರೈಲುವೇ ಬೋರ್ಡಿನವರು ಒಂದು ರೈಲ್ವೇ ಮಾರ್ಗವನ್ನು ಶ್ರಮೇಣ ಮರ್ಮಗೋವಾ ಬಂದರಕ್ಕೆ ಕೂಡಿಸುವ ಆಲೋಚನೆಯಿಂದ ಸಧ್ಯಕ್ಕೆ ಮಂಗಳೂರಿನಿಂದ ಕರಾವಳಿಯ ದಾರಿಯಾಗಿ ಅಂದರೆ ಪಣಂಬೂರು, ಮೂಲ್ಕಿ, ಕಾಪು ಕಟಪಾಡಿ, ಉದ್ಯಾವರ, ಉಡುಪಿ ದಾರಿಯಾಗಿ ಮಲ್ಪೆಗೆ ಕೊಂಡುಹೋಗುವ ಆಲೋಚನೆಯಿಂದ ೩೭ ಮೈಲು ಮಾರ್ಗಕ್ಕೆ ೭೧ ಲಕ್ಷ ರೂಪಾಯಿ ಸಂಕ್ಷನ್ ಮಾಡಿದ್ದರು.

ಕಾರ್ಕಳ ಊರಿನವರು ಈ ಆಲೋಚನೆಗೆ ಅಡ್ಡಬಂದು ಡಿಲ್ಲಿಯ ವರೆಗೂ ಹೋಗಿ ರಥೋತ್ಸವದ ಸಮಯ ರೈಲು ಅಧಿಕಾರಿಯೊಬ್ಬರನ್ನು ಅಲ್ಲಿಗೆ ಕರೆತಂದು ಮೂಲ್ಕಿ ದಾರಿಯನ್ನು ಬಿಟ್ಟು, ಮಂಗಳೂರಿನಿಂದ ಕಣ್ಣೂರು, ಕೊಂಚಾಡಿ ಪದವು, ಮರವೂರು ಕಡವು, ಪೊಳಲಿ, ಮುಳಲಿ, ಮಿಜಾರು ದಾರಿಯಾಗಿ ಮೂಡಬಿದರೆಗೆ ಅಲ್ಲಿಂದ ಕಾರ್ಕಳಕ್ಕಾಗಿ ಉಡುಪಿ ಮಲ್ಪೆಗೆ ಕೊಂಡುಹೋಗಲು ಸರ್ವೆಮಾಡುವಂತೆ ಸಾಧಿಸಿದರು.

ಮಂಗಳೂರಿನಿಂದ ಕಣ್ಣೂರಿಗೆ ೬ ಮೈಲು ಇದೆ. ಕಣ್ಣೂರಿನಿಂದ ಬಂಟವಾಳ ಹೋದು ಮಾರ್ಗಕ್ಕೆ ಇರುವುದು ೮ ಮೈಲು ಮಾತ್ರ. ಮಂಗಳೂರು ಕಣ್ಣೂರು ಮಾರ್ಗವಾಗಿ ರೈಲು ಬಂದರೆ ಮಲ್ಪೆಗೆ ಹೋಗುವಾಗ ೬೪ ಮೈಲು ರೈಲುಮಾರ್ಗವಾಗುತ್ತದೆ. ಸರಕಾರದವರು ಸಂಕ್ಷನ ಮಾಡಿದ ಮಾರ್ಗ ೩೭ ಮೈಲು ಮಾತ್ರ; ಉಳಿದ ೨೭ ಮೈಲುಗಳಿಗೆ ಹಣ ಎಲ್ಲಿಂದ? ಮೂಲ್ಕಿ ದಾರಿಯಾಗಿ ಹೋಗುವದಾದರೆ ಕೊಳತ್ತೂರು, ಪಾವಂಜೆ, ಮೂಲ್ಕಿ, ಪಾಂಗಾಳ, ಉದ್ಯಾವರ ಹೊಳೆಗಳ ಸೇತುವೆಗಳಿಗೆ ಹೆಚ್ಚು ಹಣವು ಬೇಕಾಗುವುದರಿಂದ ಅದೇ ಹಣದಲ್ಲಿ ಈ ಕೆಲಸವು ಆದೀತು ಎಂಬ ಭಾವನೆಯಾಗಿರಬಹುದು. ಕಾರ್ಕಳಕ್ಕೆ ಕೊಂಡುಹೋಗುವದಾದರೆ ಗುರುಪುರ ಹೊಳೆಗೆ ಮರವೂರು ಕಡವಿನ ಹತ್ತಿರ ಒಂದು ಸೇತುವೆಯು ಬೇಕಾಗುವುದು. ಇದರಿಂದ ೪ ಸೇತುವೆಗಳ ಕೆಲಸವೂ ಹಣವೂ ಉಳಿಯುತ್ತಬಹುದು. ಸಂಕ್ಷನ್ ಆದುದಕ್ಕಿಂತ ಹೆಚ್ಚಿಗೆ ೨೭ ಮೈಲು ಸ್ಥಳ ಎಕ್ವಾಯರ್ ಮಾಡಲಿಕ್ಕೆ ಹೆಚ್ಚಿಗೆ ಹಣ ಬೇಡವೆ? ಮಳೆಯಲ್ಲಿ ಬೇಕನ್ನು ಎತ್ತರ ಮಾಡಬೇಕಾಗುವುದು. ಮಿಜಾರಿನಿಂದ ಉಡುಪಿಯ ವರೆಗೂ ಅನೇಕ ಕಟ್ಟಿಂಗುಗಳನ್ನು ಮಾಡಬೇಕಾಗುವುದು.

ಹೆಚ್ಚಿನ ವಿವರ ಬೇಕಾದವರು ಹೆಡ್ ಆಫೀಸ ಸೆಕ್ರೆಟರಿಯವರಿಗೆ ಯಾ ಬ್ರೇಂಚ್ ಆಫೀಸ ಏಜಂಟರಿಗೆ ಬರೆಯಬೇಕು.

ಹೆಡ್ ಆಫೀಸು, ಉಡ್ಪಿ,
ತಾ. 1-2-'29.

ಪಿ. ಲಕ್ಷ್ಮಣ ನಾಯಕ್,
ಮೆನೇಜಿಂಗ್ ಡೈರೆಕ್ಟರ.

Diamonds! Diamonds!!

Ramachandra Krishna Shet

DONGERKERY, MANGALORE.

ಉತ್ಕೃಷ್ಟ ತರಗತಿಯ ಚುನ್ನಾಯಿ (first quality Selected) ಎನ್ನ ಸ್ವಾರ್ಥದಿಂದ ಬರುವ ವಜ್ರಗಳು ಮಾರಾಟಕ್ಕೆ ಇಡಲ್ಪಟ್ಟಿವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,

ಡೊಂಗರಕೇರಿ, ಮಂಗಳೂರು.

Diamonds ವಜ್ರಗಳು Diamonds

BOLA MANGESH ROW & Co.,

MANGALORE.

Agents & Direct Importers of Superior Diamonds of Antwerp

ಯೂರೋಪ, ಬೆಲ್ಜಿಯಂ ದೇಶದಿಂದ ತರಿಸುವ ವಜ್ರಗಳು

— ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್,

ಮಂಗಳೂರು

ಪುಸ್ಸಿಫೂಟ್ ಜಾನ್ಸನ್.

ಮದ್ಯಪಾನ ನಿಷೇಧದ ಚಳವಳಗಳಲ್ಲಿ ನಿರತರಾದವರಿಗೆ ಪುಸ್ಸಿಫೂಟ್ ಜಾನ್ಸನ್ ಎಂಬವರು ಅಪರಿಚಿತರಾಗಿರಲಾರರು. ಇಹಸುಖಗಳಲ್ಲಿಯೇ ಮಗ್ನರಾದ ಪಾಶ್ಚಾತ್ಯರು ಪರಮಾರ್ಥವನ್ನು ತಿಳಿಯಲಾರರು ಎಂದು ಹಿಂದೀಯರದೊಂದು ಸುಳ್ಳು ಹೆಗ್ಗಳಿಕೆ ಇದೆ. ಆದರೆ ಕಾರ್ಯಕಾರಿಯೂ, ಪರಿಣಾಮಕಾರಿಯೂ ಆದ ಪರಮಾರ್ಥವನ್ನು ಪೌರ್ವಾತ್ಯರಿಗಿಂತಲೂ ಪಾಶ್ಚಾತ್ಯರು ಹೆಚ್ಚು ಚೆನ್ನಾಗಿ ಸಾಧಿಸಬಲ್ಲರೆಂಬುದು ಪುಸ್ಸಿಫೂಟ ಜಾನ್ಸನರಿಂದ ತಿಳಿದುಕೊಳ್ಳಬೇಕು. ಕೆಲವು ವರ್ಷಗಳ ಮೊದಲು ಅಮೇರಿಕದಂತಹ ಒರೇ ಮಹಿಮಾಟೀ ರಾಜ್ಯವು ಡೊಲ್ಲರ ದುಡ್ಡಿನ ಮದೋನ್ಮತ್ತತೆಯಲ್ಲಿ ಮದ್ಯಪಾನವನ್ನು ನಿರಾಕರಿಸಬಲ್ಲರೆಂಬುದನ್ನು ಯಾರೂ ವಿಶ್ವಾಸಮಾಡುತ್ತಿರಲಿಲ್ಲ. ಆದರೂ ಅಂತಹ ಆಶ್ಚರ್ಯ ಘಟನೆಯು ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕದಲ್ಲಿ ಸಂಭವಿಸಿ ಬಿಟ್ಟಿತು. ಅದಕ್ಕೆ ಈ ಪುಸ್ಸಿಫೂಟ್ ಜಾನ್ಸನ್‌ರೆಂಬವರೇ ಮುಖ್ಯ ಕಾರಣರಾಗಿರುವರು. ಯುನೈಟೆಡ್ ಸ್ಟೇಟ್ಸನಲ್ಲಿ ಮದ್ಯಪಾನ ನಿಷೇಧದ ಸರಕಾರೀ ಕಾನೂನು ಜಾರಿಗೆ ಬರುವ ಮೊದಲು ಆದರ ಚಳವಳವನ್ನು ಹೂಡಿದವರು ಇವರೇ. ಇವರಿಗೆ ಮೊದಲು ಮೊದಲು ಬಲವಾದ ಪ್ರತಿರೋಧಿಗಳಿದ್ದರು. ಆದರೆ ಇವರ ಅವಿಶ್ರಾಂತ ಪರಿಶ್ರಮವು ಇವರ ಕಡೆಗೆ ಜನತೆಯನ್ನು ಒಲಿಸಿತು. ಮತ್ತು ಕಟ್ಟಕಡೆಗೆ ಅಮೇರಿಕವು ಮದ್ಯಪಾನ ನಿಷೇಧವನ್ನು ರಾಷ್ಟ್ರದ ಕಾನೂನಾಗಿಯೇ ಮಾಡಿಬಿಟ್ಟಿತು. ಅಮೇರಿಕದ ಮದ್ಯಪಾನ ನಿಷೇಧವು ಒರೇ ಸುಳ್ಳೆಂದೂ, ಗುಟ್ಟಿನಲ್ಲಿ ಬೇಕಷ್ಟು ಕುಡಿಯುವಿಕೆ ನಡಿಯುತ್ತಿದೆಯೆಂದೂ, ಆದುದರಿಂದ ಕಾನೂನಿನಿಂದ ಏನೂ ಲಾಭವಾಗಿಲ್ಲವೆಂದೂ ಕೆಲವು ವಿರೋಧಾಭಿಪ್ರಾಯದ ಜನರು ಅನ್ನುವರು; ಮತ್ತೂ ಕೆಲವರು ಈ ನಿಷೇಧದಿಂದ ಅಪರಾಧಿಗಳು ಹೆಚ್ಚುವರೆಂದು ಹೇಳಿ ನಿಷೇಧವು ವ್ಯರ್ಥವೆಂದು ತೋರಿಕಲಿಕ್ಕಿಸುವರು; ಇನ್ನೂ ಕೆಲವರು ಮದ್ಯಪಾನ ನಿಷೇಧದಿಂದ ಸರಕಾರೀ ನೌಕರರೊಳಗೆ ಮಿಥ್ಯಾಚಾರವು ಹೆಚ್ಚಿದೆಯೆಂದು ಅದರ ಪ್ರಾಮುಖ್ಯತೆಯನ್ನು ಕಡಿಮೆಮಾಡುವರು. ಆದರೆ ಇವೆಲ್ಲ ಕೇವಲ ಕುಡುಕರ ಅಥವಾ ಸ್ವಾರ್ಥಿಗಳ ಅಂಬೋಣವಲ್ಲದೆ ವಸ್ತುಸ್ಥಿತಿಯು ಹಾಗಿರುವುದಿಲ್ಲ. ಮದ್ಯಪಾನದ ಅಯಾಸ ಪರಿಹಾರ ಅಥವಾ ಶಕ್ತಿದಾಯಕ ಗುಣವನ್ನು ಲೋಕದೊಳಗೆ ಅಗ್ರಸ್ಥಾನ ಪಡೆದ ಕೈಗಾರಿಕೆ ರಾಜ್ಯವಾದ ಅಮೇರಿಕವೇ ಇಷ್ಟು ವರ್ಷಗಳಿಂದ ಮದ್ಯಪಾನ ನಿಷೇಧವನ್ನು ಆಚರಿಸಿ, ಕೈಗಾರಿಕೆಗೆ ಬಾಧೆಯನ್ನನುಭವಿಸದೆ ಸುಳ್ಳೆಂದು ತೋರಿಸಿಯದೆ. ಪ್ರತಿಯಾಗಿ ನಿಷೇಧದ ಗುಣಗಳು ವರ್ಷವರ್ಷವೂ ಹೆಚ್ಚಾಗಿ ಕಂಡುಬಂದಿವೆ. ವಿದ್ಯಾಭ್ಯಾಸವು ಹೆಚ್ಚುತ್ತದೆ; ಕ್ರಿಮಿನಲ್ ಅಪರಾಧಗಳು ಕಡಿಮೆಯಾಗಿವೆ; ಅರ್ಜನೆಯ ಶಕ್ತಿಯು ಬೆಳೆದಿದೆ; ವ್ಯಯಕ್ಕೆ ಸೌಲಭ್ಯವು ಉಂಟಾಗಿರುತ್ತದೆ. ಆದುದರಿಂದ ಈ ದುರ್ವ್ಯಸನವನ್ನು ತಳ್ಳಿ ಬಿಡಲಿಕ್ಕೆ ಅಮೇರಿಕವು ಅತ್ಯಂತ ಶ್ರೇಷ್ಠವಾದ ಆದರ್ಶವಾಗಿದೆ. ಆ ಆದರ್ಶದ ಸಂದೇಶವನ್ನು ತೆಗೆದುಕೊಂಡು ಪುಸ್ಸಿಫೂಟ ಜಾನ್ಸನರು ಹಿಂದೂಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಇವರ ಸಂದೇಶವನ್ನು ತೆಗೆದುಕೊಂಡು ಹಿಂದೀಯರು ಅನುಸರಿಸಲು ಯತ್ನಿಸುವುದು ಅಗತ್ಯವಿರುತ್ತದೆ.

ಸ್ವಾಭಿಮಾನ ಚಳವಳ.

ಸ್ವಾಭಿಮಾನವು ಪ್ರತಿ ಒಬ್ಬನಿಗೂ ಇರಬೇಕಾದದ್ದೇ, ಆದರೆ ಅದಕ್ಕೊಂದು ಪ್ರತ್ಯೇಕ ಚಳವಳವು ಅಗತ್ಯವಾಗಿದೆಯಾಗಿ ನಮಗೆ ಈ ವರೆಗೆ ಅನ್ನಿಸಿರಲಿಲ್ಲ. ಆದರೆ ಬ್ರಾಹ್ಮಣ ವಿದ್ವೇಷದ ಸುದ್ದಿಯವೆಲ್ಲ ಕಣ್ಣು ಕುರುಡಾದ ದಕ್ಷಿಣ ಹಿಂದೂಸ್ಥಾನದಲ್ಲಿ ಯಾವುದು ಸಾಧ್ಯವುಂಟು ಯಾವುದು ಸಾಧ್ಯವಿಲ್ಲವೆನ್ನಲಾಗುವುದಿಲ್ಲ. ಆದರೆ ಇಂತಹ ಘಟನೆಗಳು ಈ ದಕ್ಷಿಣಹಿಂದೂಸ್ಥಾನದಲ್ಲಿ ಒಂದೊಂದಾಗಿ ಬರಲಾರವು. ಸ್ವಾಭಿಮಾನ ಚಳವಳ ಒಂದು; ಅದರ ಜೋಡಿಯಾಗಿ ಅದಕ್ಕೆ ವಿರೋಧ ಚಳವಳವೊಂದು. ದಕ್ಷಿಣ ಹಿಂದೂಸ್ಥಾನದ ಅತ್ಯಂತ ಸಂಕುಚಿತವಾದ ದ್ರಾವಿಡ ಮನೋವೃತ್ತಿಯುಳ್ಳವರಾದರೆ ಈ ಚಳವಳಗಳಿಗೆ ಯಾವ ಅರ್ಥವೂ ಸಿಗುವಂತಿಲ್ಲ. ಪೌರೋಹಿತ್ಯ ಪ್ರಧಾನವಾದ ಹಿಂದೂ ಮತಾಚರಣೆಗಳ ಚೇಷ್ಟೆಗಳಿಗೆ ನಾವು ಒಪ್ಪುವವರಲ್ಲ; ಹಿಂದೂ ಮತಗಳಲ್ಲಿ ಬ್ರಾಹ್ಮಣ ವಿಧಿತ ಚೇಷ್ಟೆಗಳು ಹಿಂದೂ ಮತದ ಉಚ್ಚ ತತ್ವಗಳಿಗೂ ಸಾಮಾನ್ಯರ ಸಾಮಾನ್ಯ

[illegible] ಗಳೊಡನೆ ತಪ್ಪು ಒಪ್ಪುವುದು ಯುಕ್ತವೆ. ಆದರೆ ಈ [illegible] ದಿಂದ ಸ್ವಾಭಿಮಾನ ಚಳವಳದಿಂದೂರ ರಕ್ಷಣೆಯು ಆಯಿತೆಂದು ನಾವು ನೆನಸುವುದಿಲ್ಲ. ಅಂತಹ ಚಳವಳಗಳು ಹಿಂದೂ ಸಮಾಜವನ್ನು ಕೆಡಿಸಿ ಅದರ ಐಕ್ಯವನ್ನು ನಾಶಪಡಿಸಿ, ಹಿಂದೂತ್ವದ ವಿನಾಶಕ್ಕೆ ಕಾರಣವಾಗಬಹುದು. ಇಂತಹ ವಿಶೃಂಖಲತೆಯಲ್ಲಿ ವ್ಯಕ್ತಿಯೂ ಸಮಾಜದೊಡನೆ ಕೆಡುವನು. ಈಗ ಬೇಕಾದುದು ಹಿಂದೂಮತದಿಂದ ಉತ್ಕ್ರಾಂತಿಯಲ್ಲ. ಹಿಂದೂಮತದ ಸುಧಾರಣೆ ಮತ್ತು ಪುನರ್ಘಟನ. ಈ ಕೆಲಸವನ್ನು ಹಲವು ಹಿಂದೂ ಧುರೀಣರು ಸಾಧಿಸುತ್ತಿರುವರು. ಹಾಗೆಯೇ ಬ್ರಾಹ್ಮಣೇತರ ಧುರೀಣರು ಇಂತಹ ಚಳವಳದ ಮೂಲಕ ಸುಧಾರಣೆಯನ್ನು ಮಾಡಿಕೊಳ್ಳಬಹುದು; ಬ್ರಾಹ್ಮಣೇತರರ ಚಳವಳವು ಕೂಡ ಈ ನಾಡುಗಳಲ್ಲಿ ಪ್ರಚಾರವಿದ್ದು ಸ್ವಾಭಿಮಾನವನ್ನು ಹೆಚ್ಚಿಸುತ್ತಾ ಇವೆ. ಆದರೆ ಇದೊಂದು ಚಳವಳವು ಮೇಲೇಳಿತೆಂದು ಅದರ ವಿರೋಧದ ಚಳವಳವನ್ನು ಹೂಡುವುದರಲ್ಲಿಯೂ ಪ್ರಯೋಜನವು ಕಾಣುವುದಿಲ್ಲ. ದಕ್ಷಿಣ ಹಿಂದೂಸ್ಥಾನದ ಹಲವು ಚಳವಳಗಳನ್ನು ನೋಡಿದರೆ ಒರೇ ಒಂದು ಮಿಥ್ಯಾಚಾರದಿಂದ ಇನ್ನೊಂದು ಮಿಥ್ಯಾಚಾರಕ್ಕೆ ಕೈಯಿಕ್ಕುವಂತೆ ತೋರುತ್ತಿದೆಯೇ ವಿನಹ ಸರಿಯಾದ ಮೇಲ್ಮೆಯ ಹಾದಿಯನ್ನು ಯಾರೊಬ್ಬರೂ ಅನುಸರಿಸಲು ಉತ್ಸಾಹಿತರಾಗಿರುವಂತೆ ತೋರುವುದಿಲ್ಲ. ಕೆಲವರಲ್ಲಿ ಸ್ವಾಭಿಮಾನವು ಕಡಿಮೆಯಾಗಿದ್ದರೆ, ಅದನ್ನು ಚಳವಳಗಳ ಮೂಲಕವೇ ಹೊಂದಬೇಕಾಗಿದ್ದರೆ ಅವರನ್ನು ಅಂತಹ ಪರಿಶ್ರಮಕ್ಕೇನೆ ಬಿಡುವುದೊಳ್ಳೆಯದು.

ಕೃಷಿ ಸುಧಾರಣೆ.

ಲಿನ್‌ಲಿತ್‌ಗೌ ಕಮಿಶನ್ನಿನ ವರದಿಯು ಪ್ರಕಟಿಸಲ್ಪಟ್ಟ ಮೇಲೆ ಅದರ ಕೆಲವು ಸ್ಥೂಲ ಸೂಚನೆಗಳು ಸರಕಾರದಿಂದ ಜಾರಿಗೆ ಬರುವಂತಿವೆ. ಆದರೆ ಲಿನ್‌ಲಿತ್‌ಗೌ ಕಮಿಶನ್ನಿನ ವರದಿಗೂ ರೈತರ ಸಂಪದಭಿವೃದ್ಧಿಗೂ ಸಮಯಾಂತರವು ಬಹಳವಿರುತ್ತದೆ. ರೈತರ ಅಭಿವೃದ್ಧಿಯು ದೇಶದಲ್ಲಿ ಅಲ್ಲಲ್ಲಿ ಇರುವ ರೈತರ ಮತ್ತು ಜಮೀನುದಾರರ ಸಂಬಂಧದ ಮೇಲೂ, ಸ್ಥಳ ವೈಶಿಷ್ಟ್ಯದ ಮೇಲೂ ಹೊಂದಿಕೊಂಡಿರುತ್ತದೆ. ವ್ಯಕ್ತಿಯ ಅರ್ಜನೆಯ ಮಾನವು ಪಾಶ್ಚಾತ್ಯ ದೇಶಗಳಲ್ಲಿ ಹಿಂದೂಸ್ಥಾನದ ವ್ಯಕ್ತಿಗಿಂತ ಎಂಟು ಹತ್ತು ಪಾಲಿನ್ನರೂ, ಅಲ್ಲಿಯ ಕೃಷಿ ಉತ್ಪನ್ನವು ಇಲ್ಲಿಯ ಅಗ್ಗ ಮಜೂರಿ ಕೆಲಸದಿಂದ ಉಂಟಾಗುವ ಕೃಷಿ ಉತ್ಪನ್ನದೊಡನೆ ಸುಲಭವಾಗಿ ಸ್ಪರ್ಧಿಸುತ್ತಿದೆಯೆನ್ನುವಾಗ ಪಾಶ್ಚಾತ್ಯರ ಕೃಷಿ ವ್ಯವಸಾಯವು ಪ್ರಚಂಡವಾಗಿ ಮುಂದರಿದಿದೆ ಎನ್ನಬೇಕಾಗುತ್ತದೆ. ವಸ್ತುತಃ ಅಲ್ಲಿಯ ಜನರು ಶೋಧಗೃಹಗಳಲ್ಲಿ ದೊರೆತ ವೈಜ್ಞಾನಿಕ ಜ್ಞಾನವನ್ನು ಕಾರ್ಯಕ್ಷೇತ್ರದಲ್ಲಿ ಲಾಭಕರವಾಗಿ ಉಪಯೋಗಿಸಬಲ್ಲರಾದುದರಿಂದಲೇ ಕೃಷಿಯು ಅಷ್ಟು ಚೆನ್ನಾಗಿ ಅಭಿವೃದ್ಧಿಯನ್ನು ಹೊಂದಿರುತ್ತದೆ. ಹಿಂದೂಸ್ಥಾನದಲ್ಲಿಯೂ ಶೋಧಗೃಹಗಳಿಲ್ಲವೆಂದಿಲ್ಲ. ಆದರೆ ಅವುಗಳ ಉಪಯೋಗವು ಸರಿಯಾಗಿ ನಡಿಯುವುದಿಲ್ಲ. ಅಂತೂ ಕೃಷಿ ಶೋಧಗೃಹಗಳೂ, ರಾಸಾಯನಿಕ ಶೋಧಗೃಹಗಳೂ, ಯಂತ್ರಾಲಯಗಳೂ ಪರಸ್ಪರ ಸಹಕಾರದಿಂದ ಕೃಷಿಯನ್ನು ಯುರೋಪ ಅಮೇರಿಕಗಳಲ್ಲಿ ಬೆಳಸಿ ಬಹಳ ಲಾಭಕರವಾಗಿ ಮಾಡಿವೆ. ಅಮೇರಿಕವು ಅತೀ ವಿಶಾಲವಾದ ರಾಷ್ಟ್ರವಾಗಿದ್ದು ಅಲ್ಲಿ ಕೃಷಿಗಾಗಿ ವಿಸ್ತಾರವಾದ ಜಮೀನುಗಳಿವೆ. ಅಮೇರಿಕವು ಎಲ್ಲಾ ತರದ ಕೃಷಿ ವ್ಯವಸಾಯವನ್ನು ನಡೆಸಿ ಯುರೋಪ ಖಂಡಗಳ ಅವಶ್ಯಕತೆಗಳಿಗಾಗಿ ಪೌರ್ವಾತ್ಯರೊಡನೆ ಸ್ಪರ್ಧಿಸುತ್ತಿದೆ. ಅನ್ಯ ವಾಗ ಉದ್ಯೋಗಿಕ ಬೆಳವಣಿಗೆಯಿಂದ ವೈಯಕ್ತಿಕ ಅರ್ಜನೆಯನ್ನು ಹೆಚ್ಚಿಸಿರುವ ಆ ರಾಷ್ಟ್ರದ ವ್ಯಕ್ತಿಯ ಕೃಷಿ ಉತ್ಪನ್ನವು ಅಷ್ಟೇ ತರಗತಿದ್ದಾಗಿರದಿದ್ದರೆ ಅಲ್ಪವಿಯಾಗಲಿ ಸ್ಪರ್ಧೆಯಾಗಲಿ ಸಾಧ್ಯವಾಗುತ್ತಿರಲಿಲ್ಲ. ಹಿಂದೂಸ್ಥಾನದಲ್ಲಿ ಕೃಷಿಕರಾದ ವ್ಯಕ್ತಿಯ ಮಜೂರಿ ಉತ್ಪನ್ನವು ದಿನಕ್ಕೆ ನಾಲ್ಕಾಣೆಯ ಮಾನದಷ್ಟಿಗಿರೆ. ಹಾಗಾದರೂ ಹಿಂದೂಸ್ಥಾನವು ಅವರೊಡನೆ ಸ್ಪರ್ಧಿಸಲಾರದು. ಆದುದರಿಂದ ಹಿಂದೂಸ್ಥಾನದ ಕೃಷಿ ಅಭ್ಯಾಸಗಳು ಸುಧಾರಣೆಗೊಳ್ಳುವ ಅವಶ್ಯಕತೆಯಿದೆ. ಯಂತ್ರಗಳ ಉಪಯೋಗವು ಹೆಚ್ಚಾಗಬೇಕು; ಗೊಬ್ಬರಗಳ ಪರೀಕ್ಷೆಯೂ ಮಣ್ಣಿನ ಪರೀಕ್ಷೆಯೂ ಇನ್ನೂ ಚೆನ್ನಾಗಿ ನಡೆಯಬೇಕು. ಪ್ರಯೋಗ ಕ್ಷೇತ್ರಗಳು ಪ್ರತಿ ಊರಲ್ಲಿಯೂ ಇರಬೇಕು. ಯಂತ್ರ ವಿಜ್ಞಾನ ಮತ್ತು ಕೃಷಿ ವಿಜ್ಞಾನ ಇವೆರಡರಲ್ಲಿಯೂ ಸುಶಿಕ್ಷಿತರ ಪ್ರಸಾರಣೆಯೂ ಅವಶ್ಯವಿದೆ. ಮತ್ತು ಕೃಷಿಯ ಸ್ಥಳೀಕ ಪರಿಸ್ಥಿತಿಯನ್ನೂ ಲೋಕದ ಅವಶ್ಯಕತೆಗಳನ್ನೂ ಲಕ್ಷಿಸಿ ರೂಪಿಸಲ್ಪಡಬೇಕು. ಆಗ ಮಾತ್ರವೇ ಹಿಂದೂಸ್ಥಾನದ ಕೃಷಿ ಸಂಪತ್ತು ಬೆಳೆಯಬಲ್ಲುದು.

ನೋಟುಗಳು.
NOTES

ಪೆಟ್ರೋಲಿನ ಮೇಲೆ ಸರಕಾರದವರು ಕರ ಹೆಚ್ಚಿದ್ದರೂ ಪೆಟ್ರೋಲು ಕಂಪೆನಿಯವರ ಲಾಭ ಲಕ್ಷಗಟ್ಟಲೆಯಲ್ಲಿದೆ. ದರ ಕಡಿಮೆ ಮಾಡಲು ಕಂಪೆನಿಯವರ ಮತ್ತು ಮೋಟಾರಿನವರ ಜಾತಕ ಸರಿಕೂಡಿಬರುವುದಿಲ್ಲ.

• • •

ಕಳೆದ ವಾರ ರಂಗೂನಿನಲ್ಲಿ ಒಂದು ದೊಡ್ಡದಾದ ಜಮೀಣೆ ಎಣ್ಣೆಯ ಟಾಂಕಿಗೆ ಬೆಂಕಿ ತಗಲಿರುತ್ತದೆ. ೭೦೦ ಜನರು ನೊಂದಿಸ ಪ್ರಯತ್ನಿಸಲು ಬೆಂಕಿಯ ಪ್ರತಾಪ ಜೋರು. ಪೆಟ್ರೋಲಿನ ಲಾಭ ಈ ಬೆಂಕಿಯಿಂದ ಜಮೆ.

• • • •

ಹೌಸ್ ಒಫ್ ಕೊಮನ್ಸನಲ್ಲಿ ಮಿ| ಶಕಲಾತ್‌ವಾಲರಿಗೆ ಗಾಂಧಿಜೆಯವರನ್ನು ಕೈದು ಮಾಡಿದ್ದು ಕ್ರಮವಾದ ಸೆಕ್ಷನ್ ಎಂದು ಉತ್ತರ ದೊರಕಿದೆ, ನಡೆದ ಕಾರ್ಯ ಹುಕುಂನಂತೆಯೇ

• • •

ಪರದೇಶಿ ವಸ್ತ್ರದ ದಹನ ಪ್ರ್ಯೈವೇಟ್ ಸ್ಥಳಗಳಲ್ಲಿ ನಡೆಯಲು ಸಮ್ಮತಿ. ಅದಕ್ಕೆ ಯಾವ ಆಕ್ಟ್ ಜಾರಿ ಇಲ್ಲ. ಪಬ್ಲಿಕ್ ಸ್ಥಳಗಳಲ್ಲಿ ಆಕ್ಟ ಇದ್ದೇ ಇದೆ.

• • •

ಕೂಚ್ ಬಿಹಾರಿನ ಮಹಾರಾಣಿಯವರ ಮೇಲೆ ೧೫ ಸಾವಿರಕ್ಕೆ ಒಬ್ಬ ಕಂಟ್ರಾಕ್ಟರ ದಾವೆ. ಊಟಿಯಲ್ಲಿ ವಿಶ್ರಾಂತಿಯ ಒಗ್ಗೆ ಬಂಗ್ಲೆ ಕಟ್ಟಲು ಕಂಟ್ರಾಕ್ಟು. ಮಹಾರಾಣಿಯವರ ಹಣ ವಸೂಲಾಗಲು ಕಂಟ್ರಾಕ್ಟುದಾರರಿಗೆ ಮದ್ರಾಸು ಹೈಕೋರ್ಟಿನ ಆಜ್ಞೆ.

• • •

ಬೆಂಗಳೂರಿನಿಂದ ಸ್ವಾಮಿನರ ಪಂಗಡವು ಮೈಸೂರಿಗೆ ಹೋಗುವಾಗ ಅಲ್ಲಿಯ ಮೆಜಿಸ್ಟ್ರೇಟರು ಐದು ಜನ ಮುಖಂಡರಿಗೆ ಪೋಲೀಸ್ ನಿಬಂಧನೆ ೩೦ನೇ ಪ್ರಕರಣದ ಪ್ರಕಾರ ಬಾವುಟಗಳನ್ನು ಕೊಂಡುಬಾರದಾಗಿ ದಾರಿಗೆ ದೀಗ, ಮೆರವಣಿಗೆಗೆ ಹೋಗಬಾರದಾಗಿ ಅಲ್ಲದೆ, ಟೋಪಿಗಳನ್ನು ಅಥವಾ ಪ್ರಕಟಣೆಗಳನ್ನು ಪ್ರಕಟಿಸಬಾರದಾಗಿ ಆರ್ಡರು. ಬೆಂಗಳೂರು ಘಲಾಟೆ ನಂಬ್ರಗಳು ಮುಗಿಯುತ್ತಾ ಬಂದಿರುವಾಗ್ಗೆ ಸ್ವಾಮಿನರ ಆಗಮನದ ನಂಬ್ರಗಳು ಆದ ಹಾಗೆ, ಪೋಲೀಸರು ಮುಂದಾಗಿಯೇ ತಯಾರು.

• • • •

ಬೆಂಗಳೂರು ಘಲಾಟೆಯ ಸಮಯದಲ್ಲಿ ಪೋಲೀಸರಿಗೆ ಯಾವ ಆಕ್ಟ್ ಜಾಗ ತಿರುಳ ತಲೆಗೆ ಹೊಕ್ಕಿರಲಿಲ್ಲ. ಈ ಸಲ ಮುಂದಾಗಿ ಹೊಕ್ಕಿದೆ.

• • • •

ಏಳು ಜನರ ಆಗಮನಕ್ಕೆ ಐದು ಜನರ ದಿಗ್ಬಂಧನ ಸಾಕೆ?

• • • •

ಮೈಸೂರು ಸರಕಾರಕ್ಕೆ ಪತ್ರಿಕೆಗಳ ಹೆದರಿಕೆ ಜಾಸ್ತಿ. ಪತ್ರಿಕಾ ಪುಸ್ತಿಗಾರರಿಗೆ ಸಾಹೇಬರ ಆಗಮನದಲ್ಲಿ ಎಡೆಯಿಲ್ಲ.

• • • •

ಇಷ್ಟರ ವರೆಗೆ ತಗಡೂರ ರಾಮಚಂದ್ರರಾಯರ ಪತ್ರಿಕೆ ಮತ್ತು ಪ್ರೆಸ್ ಮಾತ್ರ ಪೋಲೀಸರು ಕಸಕೊಳ್ಳುತ್ತಿದ್ದರು. ಈ ಸಲ ರಾಮಚಂದ್ರರಾಯರನ್ನೇ ಪೋಲೀಸರು ತೆಗೆದುಕೊಂಡು ಹೋದರು, ನಂಬ್ರ ಮುಂದಕ್ಕೆ.

• • • •

ಮಂಗಳೂರಿನಲ್ಲಿ ಕೆಲ ಮಾರ್ಗಗಳಲ್ಲಿ ಬಸ್ಸುಗಳು ಚಲಾವಣೆಯಾಗಬಾರದಾಗಿ ಮುನ್ಸಿಪಲ್ ಮತ್ತು ಕಲೆಕ್ಟರ ಒಡೆಯರು ಮುಂಚಿನಿಂದಲೆ ಇವೆ. ಇತ್ತಲಾಗೆ ಕೆಲ ಕಾಫಿ ಮತ್ತು ಇತರ ಸಾಮಾನು ತುಂಬಿಸುವ ಲೋರಿಗಳು ಮನ ಬಂದ ರಸ್ತೆಗಳಲ್ಲಿ ಹೋಗುತ್ತವೆ. ಇದಕ್ಕೆ ಏನಾದರೂ (Road Restriction) ಇಲ್ಲವೆ?

• • •

ಮುನ್ಸಿಪಲ್ ಅಧಿಕಾರಿಗಳಿಗೆ ಒಂದು ಸೂಚನೆ, ರಸ್ತೆಗಳಿಗೆ ನೀರು ಹಾಕುವ ಲೋರಿಗಳಿಗೆ ಸ್ಪೀಡು ಸ್ವಲ್ಪ ಕಡಿಮೆ ಮಾಡಬೇಕಾಗಿ. ಒಂದೊಂದು ಕಡೆಯಲ್ಲಿ ಇಂಥಿಷ್ಟ ಘಂಟೆಯ ಸಮಯದಲ್ಲಿ ನೀರು ಹಾಕುವದು ಮತ್ತು ಪ್ರತಿದಿನವು ಸರಿಯಾಗಿ ನೀರಿನ ವಿಲೆವಾರಿ ನಡೆಯುವಂತೆ ಮಾಡುವದು. ಈಗಿನ ಕ್ರಮ ಮನಬಂದಂತೆ ನಡಿಯುತ್ತದೆ. ಒಂದು ಕಡೆಗೆ ಹಾಕಿದರೆ ಇನ್ನೊಂದು ಕಡೆಗೆ ಹಾಕುವುದಿಲ್ಲ.

• • •

ಬೆಳಗಾಂವಿನಲ್ಲಿ ಬಿದ್ದರೆ ಮರಾಠರಿಗೂ ಕನ್ನಡಿಗರಿಗೂ ಗುದ್ದಾಟ. ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನವು ಬೆಳಗಾಂವಿನಲ್ಲಿ ಕೂಡಬೇಕೆಂದು ಮರಾಠಿಗರು, ಕೂಡಬಾರದಾಗಿ ಕನ್ನಡಿಗರು, ಅಂತೂ ಗೆಲ್ಲುವುದು ಯಾರೆಂದು ತಿಳಿಯುವುದು, ಸಮ್ಮೇಲನ ನಡೆದ ಮೇಲೆ.

ಶಾಲಿವಾಹನ ಶಕ [illegible] ಗಣನೆಯ ವಿಭವ ಸಂವತ್ಸರದ ಫಾಲ್ಗುಣ ಬ. [illegible] ರವಿವಾರದಿಂದ ವಿಭವ ಸಂವತ್ಸರದ ಫಾಲ್ಗುಣ ಶು. [illegible] ಶುಕ್ರವಾರದ ವರೆಗಿನ ಪಂಚಾಂಗ

(ಗಣಿತವು [illegible] (ವಾರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ. ಉ	ಅಸ್ತ
16	ಶನಿ	[illegible]	[illegible]	ಕೃತ್ತಿಕಾ	[illegible]	[illegible]	6.39	6 40
17	ರವಿ	[illegible]	[illegible]	ರೋಹಿಣೀ	[illegible]	[illegible]	6	6 40
18	ಸೋಮ	[illegible]	[illegible]	ಮೃಗಶಿರಾ	[illegible]	[illegible]	6.38	6 40
19	ಮಂಗಳ	[illegible]	[illegible]	ಆರ್ದ್ರಾ	[illegible]	[illegible]	6 33	6.40
20	ಬುಧ	[illegible]	[illegible]	ಪುನರ್ವಸು	[illegible]	[illegible]	6 37	6 40
21	ಗುರು	[illegible]	[illegible]	ಪುಷ್ಯಾ	[illegible]	[illegible]	6 37	6.41
22	ಶುಕ್ರ	[illegible]	[illegible]	ಆಶ್ಲೇಷಾ	[illegible]	[illegible]	6.36	6.41

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಶಾವು) Maximum		Minimum		Rainfall ಮಳೆ ದಿನದ ಮಳೆ	ಒಟ್ಟು ಮಳೆ
8	99 — 7		72 — 5		—	—
9	93 — 6		74 — 0		—	—
10	91 — 3		75 — 3		—	—
11	90 — 0		77 — 1		—	—
12	91 — 0		78 — 2		—	—
13	90 — 3		76 — 8		—	—
14	90 — 1		78 — 4		—	—
						124-77

ಮಂಗಳೂರಿನ ಪೇಟೆ ಧಾರಣೆ.

ದೇವಸು	ಇಂದ ರೂ.	ಆ.	ವರೆಗೆ ರೂ.	ಆ.
ಮೆಣಸು	6	12	7	6
ಗೋಧಿ	6	4	6	8
ರಾಗಿ	5	6	6	0
ಉದ್ದ ಅಕ್ಕಿ ಬೆಳ್ತಿಗೆ	7	4	7	12
ರಂಗೂನ ಬೆಳ್ತಿಗೆ ಗೋಣಿ ಗಳ್ಳೆ	12	1	13	
ಎಲ್ಲಾ ಬೆಳ್ತಿಗೆ ಮುಡಿ ಗಳ್ಳೆ	6	4	6	8
ಗೋಧಿ ಗೋಣಿ ಗಳ್ಳೆ	18	12	20	
ಹುರುಳಿ ಗೋಣಿ ಗಳ್ಳೆ	7	8	8	4
ಕಡಲೆ ಗೋಣಿ ಗಳ್ಳೆ	14	8	15	8
ತೊಗರಿ ಗೋಣಿ ಗಳ್ಳೆ	14	8	16	0
ತೊಗರಿಬೇಳೆ ಗೋಣಿ ಗಳ್ಳೆ	18	8	27	0
ಉದ್ದು ಗೋಣಿ ಗಳ್ಳೆ	15	6	15	12
ಹೆಸರು ಗೋಣಿ ಗಳ್ಳೆ	14	2	14	8
ಉದ್ದು ಬಿಲ್ಲ ಖಂಡಿ ಗಳ್ಳೆ	60	0	66	8
ಉಪ್ಪು ಗೋಣಿ ಗಳ್ಳೆ	4	6	5	0
ಬೆಲ್ಲ ಖಂಡಿ ಗಳ್ಳೆ	93	0	100	
ಕೊಬ್ಬರಿ ಖಂಡಿ ಗಳ್ಳೆ	32	0	—	
ಎಳ್ಳೆಂಡಿ ಖಂಡಿ ಗಳ್ಳೆ	42	8		
ತೆಂಗಿನ ಎಣ್ಣೆ ಮುಡಿ ಗಳ್ಳೆ	6	10	8	4
ಎಳ್ಳೆಣ್ಣೆ ಮುಡಿ ಗಳ್ಳೆ	7	12	8	4
ಬಿಮಿನುಂಡೆ ಪೆಟ್ಟಿಗೆ ಗಳ್ಳೆ	7	12	8	4
ಮೋರಿಸ ಸಕ್ಕರೆ ಮುಡಿ ಗಳ್ಳೆ	3	11	3	12
ಹೊಸ ನೆಲಸು	5	4	6	8
ಹಳ್ಳ ಉದ್ದ ಮೆಣಸಿನಕಾಯಿ ಮುಡಿ ಗಳ್ಳೆ	1	8	2	4
ಸಾಸಿವೆ ಮುಡಿ ಗಳ್ಳೆ	9	0	8	8
ಕೊತ್ತುಂಬರಿ ಮುಡಿ ಗಳ್ಳೆ	4	4	5	4
ನೇಟಿವ್ ಕಾಫಿ ಖಂಡಿ ಗಳ್ಳೆ	395	0	415	0
ಚಿಕ್ಕಮಗಳೂರು ಕಾಫಿ ಖಂಡಿ ಗಳ್ಳೆ	146	0	185	0
ಕಾಫಿ ಬೀಜ ಖಂಡಿ ಗಳ್ಳೆ	420	0	424	0
ಮೇಣ ಮುಡಿ ಗಳ್ಳೆ	55	0	75	
ಗೇರುಬೀಜ ಮುಡಿ ಗಳ್ಳೆ	3	6		
ಕಲ್ಲಿದ್ದಲು ಖಂಡಿ ಗಳ್ಳೆ	42	0	46	8
ತಾಮ್ರ ತಗಡು ಗಳ್ಳೆ	19	12	13	8
ತಾಮ್ರ ಪಾತ್ರೆಗಳು ಮುಡಿ ಗಳ್ಳೆ	24	0	22	4
ಹಿತ್ತಾಳೆ ಸೇರು ಗಳ್ಳೆ	15	0	—	
ಹಿತ್ತಾಳೆ ತಗಡು ಮುಡಿ ಗಳ್ಳೆ	16	0	16	0
ಸತುವು ಗಳ್ಳೆ	13-9-0		—	
ಮುಸುಕಿನ ಖಂಡಿ ಗಳ್ಳೆ	30	0	36	3

ಪರೀಕ್ಷಿಸಿರಿ! ಪ್ರಾತ್ಯಕ್ಷಿಗುವಿರಿ!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿ ಖಂಡಿತ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಬ್ರಹ್ಮಶ್ರೀ ವೈದ್ಯರತ್ನ ಪರಮೇಶ್ವರ ಮೂಸ್ಸಾದ' ಅವರ [illegible]

[illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ, ಹೊಸದುರ್ಗ
ಪೋಸ್ಟ್. ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ.
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚಕ್ ರೋಲ್ ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.
ಕ್ರಯಕ್ಕೂ, ಇತರ ವರ್ತಮಾನಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೇನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಉಚಿತವಾಗಲಿ

[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಕ್ರೈನ ಬಜಾರು, ಮದ್ರಾಸ.

ಉಚಿತ! ಉಚಿತ!!

[illegible]

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]

ಪಿ. ಸುಬ್ಬರಾವ್ ತಾಮ್ ..., ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು

([illegible] XXI [illegible])

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible] 1927ನೇ ಇಸವಿ [illegible]

ಏಜಂಟರು ಬೇಕಾಗಿರುವರು..

ವಿಶೇಷ ವರ್ತಮಾನಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ವಿಷಯಸೂಚಿಕೆ

ಅಗ್ರಲೇಖ
ಒಂದು ರೂಪಾಯಿಯ ಗ್ರೇಂಟು
ವಿದೇಶ ವರ್ತಮಾನ
ಸ್ವದೇಶ ವರ್ತಮಾನ
ಟಿಪ್ಪಣಿಗಳು
ವರ್ತಮಾನ ಸಂಗ್ರಹಗಳು—
ಬಿಹಾರ ಸರ್ಕಾರ
ಹೆಕ್ಕಿದ ಕನ್ನಡ—ಹುಡುಗರಿಗೂ ಹುಡುಗಿಯರಿಗೂ ಸಂದಿಕೆ
ಕೃಷಿ, ಉದ್ಯಮ, ವ್ಯಾಪಾರ
ದೇಶ ಸಮಾಚಾರಗಳು
ಇಂದಿನ ವಿಚಾರ
ಮುಂದಿನ ವಾರ
ಪತ್ರವ್ಯವಹಾರ
ಮುಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ವರ್ತಕ ಸಮಿತಿಯ ವರದಿ
ವಿದ್ಯಾರ್ಥಿಗಳಿಗೊಂದು ಮಾತು

ಸ್ವದೇಶಾಭಿಮಾನಿ.

ತಾರೀಕು ೧೫ನೇ ಶುಕ್ರವಾರ ಮಾರ್ಚಿ ೧೯೨೯.

ಒಂದು ರೂಪಾಯಿಯ ಗ್ರೇಂಟು.

ಹಿಂದೀ ಸರಕಾರವನ್ನು ಖಂಡಿಸಿ, ಅದು ಹಿಂದೀಯರ ಇಚ್ಛೆಗೆ ಒಪ್ಪತಕ್ಕದಲ್ಲವೆಂದು ಬಹಿರಂಗವಾಗಿಯೂ ಅಧಿಕಾರ ಪೂರ್ವಕವೂ ತೋರಿಸಲಿಕ್ಕೆ ಮೋತಿಲಾಲನೆಹರೂರವರು ಎಸೆಂಬ್ಲಿಯ ಬಜೆಟ್ ತರ್ಕದ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿದರು. ಎಸೆಂಬ್ಲಿಯು ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರವು ಬೇಕೆಂದು ಕೇಳಿಕೊಂಡು ಹಲವು ವರ್ಷಗಳಾದರೂ, ಸರಕಾರವು ಅದರ ಆಶಯವನ್ನು ತೀರಾ ತಿರಸ್ಕರಿಸಿ ಸ್ವೇಚ್ಛೆಯಂತೆಯೇ, ಹಿಂದೂಸ್ಥಾನವನ್ನು "ಪರದೇಶ" ವಿರುವುದಾಗಿ ಹೇಳಿಕೊಂಡು ಸೈಮನ್ ಸಮಿತಿಯನ್ನು ನೇಮಿಸಿ ಹಿಂದೀಯರ ಹಣವನ್ನು ದುರ್ವ್ಯಯಪಡಿಸಿ ಕಾಲಹರಣವನ್ನು ಮಾಡಿ ಬ್ರಿಟಿಷ ವ್ಯಾಪಾರದ ಹಿತಗಳನ್ನು ಸಾಧಿಸಿ ಹಿಂದೀಯರ ಮೇಲೆ ಆಳುವಿಕೆಯ ಬಲವನ್ನು ಮತ್ತೂ ಭದ್ರ ಮಾಡುತ್ತಾ ಬರುತ್ತಿದೆ. ದೇಶದ ಶ್ರೇಷ್ಠವರ್ಗದ ರಾಜನೀತಿಜ್ಞರೂ ಕೂಡಿರುವ ಎಸೆಂಬ್ಲಿಯು ಅಧಿಕಾರ ಪೂರ್ವಕವಾಗಿ ಸರಕಾರದೊಡನೆ ದೇಶದ ನಿರ್ಧಾರವನ್ನು ವ್ಯಕ್ತಪಡಿಸಿದುದು ಮಾತ್ರವಲ್ಲದೆ, ಅದನ್ನು ವರ್ಷವರ್ಷವೂ ಸರಕಾರದ ಮುಂದೆ ಹಾಕಿ ಸರಕಾರದ ಅಲಕ್ಷ್ಯಕ್ಕಾಗಿ ಅದನ್ನು ಖಂಡಿಸಬಲ್ಲದೆಂಬುದು ಹಿಂದೂಸ್ಥಾನಕ್ಕೇನೇ ಬಹಳ ಗೌರವಕರವಾಗಿದೆ.

ಪ್ರಾಂತಿಕ ಕೌನ್ಸಿಲುಗಳ ಗತಿಪ್ರಗತಿಗಳನ್ನು ನಾವು ಕಂಡಿರುವೆವು. ಅಲ್ಲಿಯ ಧಾವನೆಗಳ ಪರಿಣಾಮಗಳನ್ನೂ ನೋಡಿರುವೆವು. ಹಾಗೆಯೇ ಎಸೆಂಬ್ಲಿಯ ನಿರ್ಧಾರಗಳನ್ನೂ ಅವುಗಳ ಪರಿಣಾಮಗಳನ್ನೂ ನೋಡಿರುವೆವು. ಈ ತುಲನೆಯಲ್ಲಿ ಪ್ರಾಂತಿಕ ಕೌನ್ಸಿಲುಗಳ ಅಲ್ಪತೆಯೂ ಕ್ಷುದ್ರತೆಯೂ ವ್ಯಕ್ತವಾಗುವದು. ವೈಯಕ್ತಿಕ ಸ್ವಾರ್ಥಗಳೂ ದುರಭಿಮಾನಗಳೂ ಪ್ರಾಂತಿಕ ಕೌನ್ಸಿಲುಗಳ ನಿರ್ಧಾರಗಳನ್ನು ಅವನತಿಸುತ್ತಿವೆ. ಇಂದಿನ ನಿಂಕರಣೆಯ ರಚನೆಯ ಮುಂದೆ ಪ್ರೋತ್ಸಾಹದಾಯಕವೇ ಬರುವುದು, ಪುನಃ ನಿರಾಕರಣೆಯಿದ್ದಾಗಿರುವುದೇ. ಆದರೆ ಎಸೆಂಬ್ಲಿಯು ದೇಶದ ಸ್ವಾತಂತ್ರ್ಯಾಭಿಲಾಷೆಯನ್ನು ಹೇಗೆ ವ್ಯಕ್ತಪಡಿಸಿತೊ ಹಾಗೆಯೇ ಅದನ್ನು ಕಾರ್ಯಕಾರಿಯಲ್ಲದಾಯಿತೆಂಬುದು, ಆ ನಿರ್ಧಾರದ ಹಿಂದಿನ ಮಹತ್ವವನ್ನು ಸರಕಾರಕ್ಕೆ ಸರಿಯಾಗಿ ತೋರಿಸಲಿಲ್ಲ.

ಮಾರ್ಚಿ ೫ನೇ ಇಸವಿ ೧೯೨೯ ಡಿಲ್ಲಿಯಲ್ಲಿ ಎಸೆಂಬ್ಲಿಯಲ್ಲಿ ನಡೆದ ಬಜೆಟ್ಟಿನ ತರ್ಕದಲ್ಲಿ ಎಸೆಂಬ್ಲಿಯು ತನ್ನ ನಿರ್ಧಾರಗಳ ಪಾವಿತ್ರ್ಯವನ್ನು ಸ್ಪಷ್ಟಪಡಿಸಿತು. ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರ ಬೇಕೆಂದು ಹಲವು ವರ್ಷಗಳ ಹಿಂದೆಯೇ ನಾವು ಠರಾಯಿಸಿದರೂ ಸರಕಾರವು ಆ ಬಗ್ಗೆ ಏನೂ ಪ್ರಯತ್ನ ಮಾಡಿಲ್ಲ; ಬದಲಿಗೆ ಆ ನಿರ್ಧಾರವನ್ನು ತಿರಸ್ಕರಿಸಿಯೇ ಬಿಟ್ಟಿದೆ; ಆದುದರಿಂದ ಈ ಸರಕಾರವನ್ನು ನಾವು ಮಾನಿಸಲಾರೆವು; ಎಂದು ಎಸೆಂಬ್ಲಿಗೆ ಸೂಚಿಸಬೇಕಾಗಿತ್ತು. ಸರಕಾರದ ಗ್ರಾಂಟ—೩೦ನೇ ... ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲಿನ ಖರ್ಚಿನ ಬಗ್ಗೆ ... ಒಂದು ರೂಪಾಯಿಗೆ ಇಳಿಸಿ ಆ ಮೂಲಕ ಸರಕಾರದ ಮೇಲಿನ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕಾಗಿ ಪಂಡಿತ ಮೋತಿಲಾಲನೆಹರೂರವರು ಠರಾವನ್ನು ತಂದರು.

ದೇಶದಲ್ಲಿ ಈಗ ಪ್ರಬಲವಾಗಿ ಬೆಳೆದಿರುವ ಹಿಂದೂ-ಮುಸಲ್ಮಾನ ಭೇದಗಳನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಸರಕಾರವು ಹಿಂದೆಗೆಯಲಿಲ್ಲ. ಅವರಿಗೆ ಅನುಕೂಲವಾಗಿ ಅವರ ಹೊಗಳಿಕೆಯನ್ನೇ ಹೊಂದಿಕೊಳ್ಳಲು ಪ್ರಯತ್ನಿಸುವ ಹಲವು ಮುಸಲ್ಮಾನರೂ ಈ ಪ್ರಯತ್ನಗಳಲ್ಲಿ ಭಾಗಿಗಳಾಗಿದ್ದರು. ಆದರೆ ಈ ಸಂದರ್ಭದಲ್ಲಿ ಮಿ| ಜಿನ್ನಾರವರು ಮೋತಿಲಾಲನೆಹರೂರವರೊಡನೆ ತನಗಿದ್ದ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸದಿರಲಿಲ್ಲವಾದರೂ ಸ್ಪಷ್ಟವಾಗಿ ಮೋತಿಲಾಲನೆಹರುವರ ಠರಾವಿಗೆ ತಮ್ಮ ಅನುಮೋದನೆಯನ್ನು ಕೊಟ್ಟು ಮುಸಲ್ಮಾನರು ಅನುಸರಿಸತಕ್ಕ ಸರಿ ಹಾದಿಯನ್ನು ತೋರಿಸಿದರು.

ಮಿ| ಜಯಕರರೂ ಈ ಠರಾವನ್ನು ಅನುಮೋದಿಸುವಾಗ ಬಹಳ ಚೆನ್ನಾಗಿ ಮಾತನಾಡಿದರು. ಹಿಂದೂಸ್ಥಾನಕ್ಕೆ ಜವಾಬ್ದಾರ ಸರಕಾರವೂ, ಡೊಮಿನಿಯನ್ ಸರಕಾರವೋ ಈಗಲೇ ಬೇಕೆಂಬುದು ಏಕೆಂಬುದನ್ನು ಸರಿಯಾಗಿ ತೋರಿಸಿದರು, ಮೇಲಾಗಿ ಶ್ರೀ. ಶ್ರೀನಿವಾಸ ಅಯ್ಯಂಗಾರರ ಭಾಷಣವು ಎಸೆಂಬ್ಲಿಯ ಯುರೋಪಿಯನ್ ಸದಸ್ಯರ ಗುಟ್ಟನ್ನು ಹೊರಗೆ ಹಾಕತಕ್ಕದ್ದಲ್ಲದೆ, ಬ್ರಿಟಿಷರೂ, ಹಿಂದೀ ಸರಕಾರವೂ ಹಿಂದೀಯರನ್ನು ಮೋಸಗೊಳಿಸಲಿಕ್ಕೇನೇ ಪ್ರಯತ್ನಿಸುತ್ತಿವೆ ಎಂಬುದನ್ನು ಸರಿಯಾಗಿ ಸ್ಪಷ್ಟಪಡಿಸಿದರು.

೬೩ ಅನುಕೂಲ ಮತದೊಡನೆಯೂ ೫೬ ಪ್ರತಿಕೂಲ ಮತದೊಡನೆಯೂ ಹಿಂದೂಸ್ಥಾನದ ಸರಕಾರದ ಎಕ್ಸಿಕ್ಯೂಟಿವ್ ಕೌನ್ಸಿಲಿನ ಖರ್ಚಿಗೆ ಒಳೇ ಒಂದು ರೂಪಾಯಿಯನ್ನು ಎಸೆಂಬ್ಲಿಯು ಮಂಜೂರು ಮಾಡಿತು. ಈ ಮಂಜೂರಾತಿಯನ್ನು ತೆಗೆದುಹಾಕಿ, ಸರಕಾರಕ್ಕೆ ಬೇಕಾದ್ದು ಹಣವನ್ನು ಕೊಡಲು ವೈಸರಾಯರವರಿಗೆ ಅಧಿಕಾರವಿದ್ದು, ವೈಸರಾಯರವರು ತಮ್ಮ ಸರ್ಟಿಫಿಕೇಶನ್ ಅಧಿಕಾರದ ಮೂಲಕ ಸರಕಾರವು ಕೇಳಿದ ಹಣವನ್ನು ಮಂಜೂರು ಮಾಡುವರೇನೂ, ನಿಜ. ಆದರೆ ಇದೇ ಹಿಂದೂಸ್ಥಾನದಲ್ಲಿ ಹಿಂದೂಸ್ಥಾನವನ್ನದೆ ಎಲ್ಲರೂ ಜವಾಬ್ದಾರ ಸರಕಾರವು ಹಿಂದೂಸ್ಥಾನಕ್ಕೆ ಬೇಕೆಂದು ಕೇಳಿಕೊಳ್ಳುತ್ತಿರುವರು ಮಾತ್ರವಲ್ಲದೆ, ಆ ಬಗ್ಗೆ ಕಾಯಿದೆಶೀರಾದ ಎಲ್ಲಾ ಕರದ ಪತ್ರಾದಿವನ್ನೂ ಸರಕಾರದ ಮೇಲೆ ಹಾಕುವರೆಂಬುದು ಇದರಿಂದ ಇಡೀ ಲೋಕಕ್ಕೇನೇ ತಿಳಿಯದಿರದು.

ವಿದೇಶ ವರ್ತಮಾನ.

—ಯುರೋಪಿಯನರು ಮೂಲನಿವಾಸಿಗಳನ್ನು ಯಾವ ರೀತಿಯಾಗಿ ಪೀಡಿಸುವರೆಂಬುದರ ಬಗ್ಗೆ ಸ್ವಾರೋಬಿಯಾದಿಂದ ಒಂದು ವಿಶೇಷ ದಾರುಣ ಸಮಾಚಾರವು ದೊರೆತಿರುತ್ತದೆ. ರೊಬರ್ಟ ಬಕ್ಸ್ ಎಂಬ ಹೆಸರಿನ ಯುರೋಪಿಯನನೊಬ್ಬನು ಒಬ್ಬ ಮೂಲನಿವಾಸಿಯನ್ನು ಹಿಡಿದು ಅವನನ್ನು ಕೊಂದು ಹಾಕಿದನು. ಮೂಲನಿವಾಸಿಯನ್ನು ಆತನು ಹಿಡಿದಿದ್ದನು ನೂರಾರು ಪೋಲೀಸ್ ಸ್ಟೇಶನಿಗೆ ಕೊಂಡೊಯ್ಯುವ ಬದಲಾಗಿ ಬೇರೊಂದೆಡೆಗೆ ಕೊಂಡೊಯ್ದು ಒಂದು ಬಳ್ಳಿಯ ಬೇರೆ ಬೇರೆ ಎರಡು ಕೊಂಬೆಗಳನ್ನು ಆತನ ಎರಡೂ ಕೈಗಳಿಗೆ ಸುತ್ತಿ ಬಳ್ಳಿಯನ್ನು ಚೆನ್ನಾಗಿ ಜಗಿಯುತ್ತಾ ಆತನ ಬೆರಳುಗಳನ್ನು ಬೇರ್ಪಡಿಸಿದನು. ಆತನ ಈ ಭಯಂಕರ ಕೃತ್ಯದ ಕುರಿತಾಗಿ ವಿಚಾರಣೆಯಾಗಲಿದೆ. ಆದರೆ ಯುರೋಪಿಯನನು ಮಾತ್ರ ತಲೆತಪ್ಪಿಸಿಕೊಂಡಿರುವನು.

—ಲಂಡನ್ನಿಂದ ಹಿಂದೂಸ್ಥಾನಕ್ಕೆ ವಿಮಾನ ಸರ್ವಿಸ. ಪ್ರಾರಂಭಕ್ಕೆ ಈಗ ತಯಾರಿಗಳೆಲ್ಲವೂ ನಡೆದಿರುತ್ತವೆ. ೫೦ ಜನರು ಕುಳಿತುಕೊಳ್ಳುವ ವಿಮಾನವೊಂದು ಮಾರ್ಚ ೩೦ನೇ ತಾರೀಕಿನ ದಿನ ಕ್ರೋಯಿಡನ್‌ನಿಂದ ಹೊರಡುವುದು. ಏಪ್ರಿಲ್ ೬ನೇ ತಾರೀಕಿನ ದಿನ ಅದು ಕರಾಚಿಗೆ ಬಂದು ತಲಪುವುದು. ಪ್ರಯಾಣಿಕರಿಂದ ಹಲವು ಅರ್ಜಿಗಳು ಈಗಲೇ ಬಂದಿರುತ್ತವಂತೆ. ಆದರೆ ಮೊದಲನೆಯ ತಿಂಗಳಲ್ಲಿ ಟಪ್ಪಾಲು ಮಾತ್ರ ಒಯ್ಯಲ್ಪಡುವದು. ಮೊದಲನೆಯ ಸಲ ಹಾರುವಾಗ, ಒಂದು ಟನ್ನಿಗೆ ಮಿಕ್ಕಿದ ಬಾರವುಳ್ಳ ಟಪ್ಪಾಲು ಒಯ್ಯಲ್ಪಡುವದೆಂದು ಹೇಳಲು ಬಲವಾದ ಕಾರಣಗಳಿರುತ್ತವೆ.

—ಲೇಡಿ ಸ್ಟಾಮಾನರು ಅವರ ಮಿತ್ರರೊಬ್ಬರಿಗೆ ಬರೆದ ಪತ್ರದಲ್ಲಿ "ಹಿಂದೂಸ್ಥಾನದ ಸ್ತ್ರೀಯರು ಎಂದು ಎಮಗೆ ಬಹಿರಂಗವಾದ ಕಾರ್ಯಕ್ಷೇತ್ರಕ್ಕೆ ಇಳಿದು, ಚಳವಳಗಳಲ್ಲಿ ಭಾಗಿಗಳಾಗುವರೋ, ಅಂದೇ ಹಿಂದೂಸ್ಥಾನದ ದೊಡ್ಡಸ್ಥಿಕೆಯು ಜಗತ್ತಿಗೆ ಮುಂದೆ ಒಡೆದು ಕಾಣುವದು" ಎಂದು ಬರೆದಿರುವರು. ಹಿಂದೂಸ್ಥಾನದ ಹೆಂಗಸರ ಅಭಿವೃದ್ಧಿಯು ಈಗ ಕಣ್ಣುಮಟ್ಟಿಗೆ ಆಗಿರುತ್ತದೆ. "ಇನ್ನು ಚೆನ್ನಾಗಿ ಆಗಬೇಕಾಗಿದೆ" ಎಂಬುದೇ ಅವರ ಅಭಿಪ್ರಾಯವಾಗಿರುತ್ತದೆ.

—ಟಿಬೆಟಿನ ಹೊಸ ವರುಷವು ಬಹು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಒಂದು ತಿಂಗಳ ವರೆಗೆ ಅಲ್ಲಿ ಬಹಳ ಗದ್ದಲವಿರುವ ... ಇರುವದು. ...

—ಈ ವರ್ಷದ ... ಪ್ರಾಯದವರಿಗೆ ೩೪೯,೦೦೦ ಜನಗಳು ... ಆಗಿರುತ್ತದೆ.

—ಅಮೇರಿಕದಲ್ಲಿ ಶೃತಿಯಾಗಿರುವ ಡಿ. ವೇಲೇರಾರವರ ವಿಚಾರಣೆಯ ಸಮಯದಲ್ಲಿ ಇಂಗ್ಲಿಷ ಭಾಷೆಯಲ್ಲಿ ತಾನು ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾರೆನೆಂದು ಹೇಳಿದರು. ಐರಿಶ ಭಾಷೆಯಲ್ಲಿ ಮಾತನಾಡಲಾಗದೆಂದೂ, ಇಂಗ್ಲಿಷು ಭಾಷೆಯಲ್ಲಿ ಮಾತನಾಡಬೇಕಾದುದು ಕೋರ್ಟಿನ ಕ್ರಮವೆಂದೂ, ಮೆಜಿಸ್ಟ್ರೇಟರು ಹೇಳಿದರೂ ಡಿ. ವೇಲೇರಾರವರು ಲಕ್ಷಿಸಲಿಲ್ಲ. ಇದರಿಂದ ಕೋರ್ಟಿನಲ್ಲಿ ಸ್ವಲ್ಪ ಗಲಭೆಗೆ ಕಾರಣವಾಯಿತು.

—ನ್ಯೂಜಿಲೇಂಡಿನ ಹೊಟರ್ ಸಿರಿ ಪ್ರಾಂತ್ಯದಲ್ಲಿ ಒಂದು ಭೂಕಂಪವಾಯಿತು. ವೆಲ್ಲಿಂಗ್‌ಟನ್ ಮೊದಲಾದ ಊರುಗಳಲ್ಲಿಯೂ ಈ ಭೂಕಂಪದಿಂದ ಅಪಾರವಾದ ನಷ್ಟವು ಸಂಭವಿಸಿತು. ಭೂಕಂಪ ಉಂಟಾದ ಸ್ಥಳದಲ್ಲಿ ಎಲ್ಲ ಕಟ್ಟಡಗಳೂ ಬಿದ್ದು ಹೋಗಿರುವವು. ಆದರೆ ಮನುಷ್ಯರಾರಿಗೂ ಜಖಮುಂಟಾಗಿಲ್ಲ.

—ಹೊಂಗ್‌ಕೊಂಗಿನ ಕಿಂಗ್ ಎಡ್ವರ್ಡ್ ಹೋಟೆಲಿನಲ್ಲಿ ಬೆಂಕಿಯುಂಟಾಗಿ ಎಂಟು ಮಂದಿ ಸತ್ತುಹೋದರು. ಹಲವರು ಗಾಯ ಹೊಂದಿರುತ್ತಾರೆ. ಸತ್ತವರಲ್ಲಿ ಒಬ್ಬನು ಫ್ರೆಂಚನು, ಒಬ್ಬನು ಅಮೇರಿಕದವನು, ಒಬ್ಬಳು ಇಂಗ್ಲಿಷ ಹೆಂಗಸಳು, ಒಬ್ಬನು ಜಪಾನಿಯನು, ನಾಲ್ವರು ಚೀನೀಯರು. ಮೇಲಿನ ಮಾಳಿಗೆಯಿಂದ ಬೆಂಕಿಯ ಭಯದಿಂದ ಕೆಲವರು ಕೆಳಕ್ಕೆ ಹಾರಿ ಪ್ರಾಣಗಳನ್ನು ಕಳಕೊಂಡರು.

—ರಾಜಕೀಯ ಕಾರ್ಯಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸುವಂಥವರನ್ನು ಆರು ತಿಂಗಳುಗಳ ಶಿಕ್ಷೆಗೆ ಗುರಿಪಡಿಸಬೇಕೆಂದು ಇಜಿಪ್ತ ಸರಕಾರದವರು ಒಂದು ಹುಕುಮು ಕೊಟ್ಟಿರುವರು. ವಿದ್ಯಾರ್ಥಿಗಳ ಮುಷ್ಕರದ ವಿಷಯವನ್ನು ಪ್ರಕಟಿಸುವವರಿಗೂ, ಇದೇ ಶಿಕ್ಷೆಯು ವಿಧಿಸಲ್ಪಡುವದಂತೆ.

—ಮದ್ರಿದಿನಲ್ಲಿ ಬೀದಿಗಳಲ್ಲಿ ರೋಮನ್ ಕೆಥೋಲಿಕರಿಂದ ಕೊಡಲ್ಪಡುವ ವಿದ್ಯೆಗಳು ಬೇಕಾಗಿಲ್ಲವೆಂದು ವಿದ್ಯಾರ್ಥಿಗಳು ಮುಷ್ಕರವನ್ನಾರಂಭಿಸಿದರು. ಮುಷ್ಕರವು ಕೊನೆಗೆ ಪ್ರಬಲವಾಗಿ ಬೆಳೆದುದರಿಂದ ಪೋಲೀಸರ ಅವಶ್ಯಕತೆಯುಂಟಾಯಿತು. ಪೋಲೀಸರು ಬಂದ ಗುಂಡು ಹೊಡೆದುದರಿಂದ ಒಬ್ಬ ವಿದ್ಯಾರ್ಥಿಯು ಸತ್ತು ಹೋದನು. ಹಲವರಿಗೆ ಜಖಮಾಯಿತು. ೨೦ ಮಂದಿ ವಿದ್ಯಾರ್ಥಿಗಳು ಕೈದು ಮಾಡಲ್ಪಟ್ಟರು.

—ಫೆಬ್ರವರಿ ತಿಂಗಳಲ್ಲಿ ಬ್ರಿಟನಿನ ಆಮದು ೧೧,೪೪೯,೦೦೦ ಪವನು ಬೆಲೆಯುಳ್ಳದ್ದು. ರಫ್ತು ೫೫,೬೬೪,೦೦೦ ಪವನುಗಳಷ್ಟು. ... ತಿಂಗಳಲ್ಲಿ ಆಮದಿನಿಂದ ಆಮದು ೬,೫೦೩,೦೦೦ ಪವನುಗಳಷ್ಟು, ರಫ್ತು ೧,೩೬೧,೦೦೦ ಪವನುಗಳಷ್ಟು ಕಡಿಮೆಯಾದಂತಾಯಿತು.

—ಮಾರ್ಚ ೧ನೇ ತಾರೀಕಿನ ದಿನ ಬ್ರಿಟನಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ೧,೧೫೬,೬೦೦ ಆಗಿತ್ತು. ಕಳೆದ ಸಲ ತೆಗೆದ ನಿರುದ್ಯೋಗಿಗಳ ಲೆಕ್ಕಕ್ಕಿಂತ ಇದು ... ಕಡಿಮೆಯಾದ ಹಾಗಾಯಿತು.

—ಆಫಘಾನಿಸ್ಥಾನದ ಮಾಜಿ ದೊರೆ ಅಮಾನುಲ್ಲಾ ... ಇನ್ನು ಒಂದು ತಿಂಗಳ ಒಳಗೆ ಅವರ ರಾಜ್ಯದ ಕಾರ್ಯಗಳಲ್ಲಿ ಕೈಹಾಕಲು ಶಕ್ತರಾಗುವರೆಂದು ನಂಬಲಾಗಿದೆ.

ಸ್ವದೇಶ ವರ್ತಮಾನ.

—ಜಬಲಪುರದಲ್ಲಿ ಭಯಂಕರವಾದ ಬರವು ಬಿದ್ದಿರುತ್ತದೆ. ಮಧ್ಯಪ್ರಾಂತ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಸೇಠ್ ಗೋವಿಂದದಾಸರು ಮೊನ್ನೆ ತಾನೆ ಜಬಲಪುರವನ್ನು ಸಂದರ್ಶಿಸಿದರು, ಹಸಿವಿನಿಂದ ಜನರು ಸಾಯುವ ಸಂಗತಿಗಳ ಮೇಲೆ ಸಾಲು ಮಾಡಿ ಅವುಗಳನ್ನು ನಿವಾರಣ ಸಂಪಾದಿಸಬೇಕೆಂದು ಅವರು ಜನರಿಗೆಲ್ಲ ಬೋಧಿಸಿದರು.

—ವಿದೇಶೀ ವಸ್ತ್ರ ಬಹಿಷ್ಕಾರವನ್ನು ಕೈಕೊಂಡು ಮಾಡಿದಂದಿನಿಂದ ಬಂಗಾಳದಲ್ಲಿ ವಿದೇಶೀ ವಸ್ತ್ರ ಬಹಿಷ್ಕಾರ ಚಳವಳವು ಇನ್ನಷ್ಟು ಚೆನ್ನಾಗಿ ನಡೆಯುತ್ತಲಿರುತ್ತದೆ. ವಿದೇಶೀ ವಸ್ತ್ರಗಳ ರಾಶಿಗಳು ಪ್ರತಿದಿನವೂ ಹೋಳಿಮಾಡಲ್ಪಡುತ್ತವೆ. ಕಲಕತ್ತೆಯಲ್ಲಿಯೂ ಕೂಡ ವಿದೇಶೀ ವಸ್ತ್ರಗಳ ಬಹಿಷ್ಕಾರವನ್ನು ಚೆನ್ನಾಗಿ ನಡೆಯಿಸಬೇಕೆಂದು ಬೇರೆ ಬೇರೆ ಸಭೆಗಳನ್ನು ನಡೆಯಿಸಿ ಧುರೀಣರು ಭಾಷಣಗಳನ್ನು ಕೊಡುತ್ತಿರುವರು.

ಪಂಜಾಬು ಸರಕಾರದವರು ಜೂಗಾರಾಡುವದನ್ನು ತಡೆಗಟ್ಟಲು ಚೆನ್ನಾಗಿ ಪ್ರಯತ್ನಿಸುತ್ತಾರೆ. ಜೂಗಾರಾಟವನ್ನು ನಿಷೇಧಿಸಿ ಅವರು ಒಂದು ಹೊಸ ಕಾಯಿದೆಯನ್ನು ಜಾರಿಯಂತಕ್ಕೆ ತಂದಿರುತ್ತದೆ.

—ಶಿವರಾತ್ರಿಯ ಸಮಯ ಹುಬ್ಬಳ್ಳಿಯಲ್ಲಿ ಇಬ್ಬರು ಕ್ರಿಸ್ತಿ ಮಿಶನರಿಗಳು ತಮ್ಮ ಮತ ಸಂಬಂಧವಾಗಿ ಬೋಧನೆ ಕೊಟ್ಟು ಜನರನ್ನು ಮರುಳುಗೊಳಿಸುತ್ತಿರುವಾಗ, ಹುಬ್ಬಳ್ಳಿಯ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರು ೧೪೪ನೇ ಸೆಕ್ಷನಿನ ಪ್ರಕಾರ ಅವರು ಮಾತನಾಡದಂತೆ ಹುಕುಮು ಕೊಟ್ಟರು. ಹುಬ್ಬಳ್ಳಿಯ ಯುವಕಸಂಘದ ಪ್ರೆಸಿಡೆಂಟರಾದ ಡಾ| ಹರ್ಡೀಕರರ ಮೇಲೂ, ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ, ವೈಸ್ ಪ್ರೆಸಿಡೆಂಟ ಮತ್ತು ಇನ್ನಿಬ್ಬರ ಮೇಲೂ ಇದೇ ತರಹದ ಹುಕುಂ ಕೊಡಲ್ಪಟ್ಟಿತು.

—ಹಿಂದೂಸ್ಥಾನದ ಉತ್ತಮ ವಸ್ತು ಪ್ರದರ್ಶನಾಲಯಗಳಲ್ಲಿ ಒಂದಾದ ಪಾಟನದ ಹೊಸ ವಸ್ತುಪ್ರದರ್ಶನಾಲಯವನ್ನು ಬಿಹಾರಿನ ಗವರ್ನರ ದೊರೆಗಳವರು ತೆರೆದರು. ಅದು ನೋಗಲಾಯಿ ರೀತಿಯಲ್ಲಿ ಕಟ್ಟಲ್ಪಟ್ಟಿರುತ್ತದೆ. ಮೂರು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಅದಕ್ಕೆ ಖರ್ಚಾಗಿರುತ್ತದೆ.

—ಡಾರ್ಜಿಲಿಂಗಿನಲ್ಲಿ ಇತ್ತೀಚೆಗೆ ರೈಲಿನಲ್ಲಿ ಒಂದು ಕಳವು ನಡೆದುದರಿಂದ ರೈಲುವೇ ಅಧಿಕಾರಿಗಳು ರೈಲಿನಲ್ಲಿ ಕಾವಲಿರಲು ಸ್ಪೆಶಲ್ ವಾರ್ಡರುಗಳನ್ನು ನೇಮಿಸಿರುತ್ತಾರೆ.

— [illegible] ... ಇನ್ನು ಮೂರು ತಿಂಗಳೊಳಗೆ [illegible] ಹಿಂದೀಯರೇ ಸಿಕ್ಕುವ ರೆಂದು ತಿಳಿಯಲ್ಪಟ್ಟಿದೆ.

— ಪೇಷಾವರ ನಗರದೊಳಗೆ ಅಕಸ್ಮಾತ್ ಬೆಂಕಿಯುಂಟಾಗಿ ಮೂರು ಕಟ್ಟಡಗಳು ಪೂರ್ತಿ ಸುಟ್ಟುಹೋದವು. ಎರಡು ಕಟ್ಟಡಗಳು ಅರ್ಧಾಂಶ ಸುಟ್ಟುಹೋದವು. ಅವುಗಳಲ್ಲಿ ಒಂದೇ ಒಂದು ಮನೆಯು [illegible] ಮಾರಲ್ಪಟ್ಟಿತ್ತು.

— ಪಂಜಾಬ ಕೃಷಕರ ಪರಿಷತ್ತು ರೋಹಟಕ ಎಂಬ ಸ್ಥಳದಲ್ಲಿ ಜರಗಿತು. "ಎದ್ದೇಳಿರಿ ಕಲ್ಲು ಹಿಡಿರಿ, ದೇಶದ ಕೃಷಕರುಗಳೇ, ಸ್ವಾತಂತ್ರ್ಯದ ಸಲುವಾಗಿ ಹೋರಾಡಿರಿ" ಎಂಬುದೇ ಸ್ವಾಗತಾಧ್ಯಕ್ಷರಾದ ಮಿ| ಚೌಧರಿ ರಾಮ್ ಗುಪ್ತರವರ ಭಾಷಣದ ಮೊದಲನೆಯ ವಾಕ್ಯವಾಗಿತ್ತು. ಸಮಾಜ ಸಂಘದ ಮೂಲಕವೇ ಕೃಷಕರಲ್ಲಿ ಉಂಟಾದ ಅವನತಿಯನ್ನು ಹೋಗಲಾಡಿಸಬಹುದೆಂಬುದೇ ಅವರ ಭಾಷಣದ ಸಾರವಾಗಿತ್ತು.

— ಮೌಲಾನಾ ಮಹಮುದ್ ಅಲಿಗಳವರು ಕಳೆದ ೧೧ನೇ ತಾರೀಕಿನ ದಿನ ರಂಗೂನನ್ನು ಸಂದರ್ಶಿಸಿದರು. ಕಾರ್ಪೋರೇಷನಿನ ಪ್ರೆಸಿಡೆಂಟರೂ ಇತರ ಸನ್ಮಾನ್ಯ ಗೃಹಸ್ಥರೂ, ಅವರನ್ನು ಎದುರುಗೊಂಡರು. ಪುಷ್ಪಮಾಲಿಕೆಯಿಂದ ಅವರಿಗೆ ಅಲಂಕರಿಸಲಾಯಿತು. ಮೆರವಣಿಗೆಯಿಂದ ಕೊಂಡೊಯ್ದು ರಂಗೂನ್ ನಾಗರಿಕರ ಪರವಾಗಿ ಅವರಿಗೆ ಒಂದು ಮಾನಪತ್ರವು ಸಮರ್ಪಿಸಲಾಯಿತು. ಮೌಲಾನಾ ಮಹಮುದ್ ಅಲಿಗಳವರು ಸುಮಾರು ೧೦ ದಿನಗಳವರೆಗೆ ಅಲ್ಲಿ ಉಳಕೊಳ್ಳುವರು.

— ಪ್ರೊಫೆಸರ್ ರಖಲ್ ದಾಸ್ ಬನರ್ಜಿಯೆಂಬವರು ಉರಿಸ್ಸಾದ ಕಾಡುಗಳಲ್ಲಿ ಎರಡು ಬಹು ಹಳೇ ದೇವಸ್ಥಾನಗಳನ್ನು ಕಂಡು ಹಿಡಿದಿರುವರು. ಅವುಗಳು ಸುಮಾರು ೫ನೇ ಶತಮಾನದಲ್ಲಿ ಕಟ್ಟಲ್ಪಟ್ಟಿವೆಯೆಂದು ತಿಳಿಯಲಾಗಿದೆ. ಭೋಧ ಎಂಬ ಪಟ್ಟಣದಲ್ಲಿ ಅದೇ ಪ್ರೊಫೆಸರರು ಒಂದು ಬುದ್ಧನ ಪ್ರತಿಮೆಯನ್ನು ಕಂಡುಹಿಡಿದಿರುವರು. ಇದು ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟಿರುತ್ತದೆ. ಹದಿನೊಂದು ಅಡಿ ಉದ್ದವಾಗಿರುತ್ತದೆ. ಇದೂ ಕೂಡ ಕ್ರಿ. ಶ. ೮ನೇ ಶತಮಾನದಲ್ಲಿ ಮಾಡಲ್ಪಟ್ಟಿತಂತೆ.

— ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿದಂತೆ ಶಾರೀರಿಕ ಶಿಕ್ಷಣದ ಸ್ಕೀಮಿನ ಸಂಬಂಧದಲ್ಲಿ ಪಂಡಿತ ಮದನಮೋಹನ ಮಾಲವೀಯರವರು ಅಮೃತಸರದಲ್ಲಿ ಇದೇ ತಿಂಗಳ ೨೧ನೇ ತಾರೀಕಿನ ದಿನ ಲಾಹೋರಿನ ಲಾಲಾ ದುನಿಚಂದರೊಡನೆ ಮಲ್ಲಯುದ್ಧ ಮಾಡುವರು.

— ರಂಗೂನಿನಿಂದ ಹೊರಟು ಹೋಗುತ್ತಿದ್ದ ಒಂದು ರೈಲುವೇ ಗಾಡಿಯ ಮೂರನೇ ತರಗತಿಯ ಗಾಡಿಯೊಂದಕ್ಕೆ ಥಟ್ಟನೆ ಬೆಂಕಿ ಹಿಡಿಯಿತು. ಪೂರ್ತಿ ಸುಟ್ಟುಹೋಯಿತು. ರೈಲು ನಿಂತು ಗಾಡಿಯನ್ನು ವಿಂಗಡಿಸಲಾಯಿತು. ರೈಲು ಓಡುತ್ತಿರುವಾಗಲೇ ಆ ಗಾಡಿಯಲ್ಲಿದ್ದವರು ಪ್ರಾಣಭಯದಿಂದ ಕೆಳಕ್ಕೆ ಹಾರಿದರು. ಸುಮಾರು ನಾಲ್ಕು ಜನರಿಗೆ ಜಖಮು ಆಗಿರುತ್ತದೆ. ಪ್ರಯಾಣಿಕರಲ್ಲಿ ಆರೋ ಒಬ್ಬನು ಪೆಟ್ರೋಲನ್ನು ತನ್ನೊಂದಿಗೆ ಇಟ್ಟುಕೊಂಡಿದ್ದನಂತೆ. ಅದಕ್ಕೆ ಅಕಸ್ಮಾತ್ತಾಗಿ ಬೆಂಕಿ ಹಿಡಿದು ಇಷ್ಟೆಲ್ಲ ಅನಾಹುತಕ್ಕೆ ಕಾರಣವಾಯಿತು.

— ಮುಂಬಾಯಿಯಲ್ಲಿ ಒಂದು ವಿಶೇಷ ಸಂಗತಿಯು ಘಟಿಸಿಹೋಯಿತು. ಒಬ್ಬ ಹಿಂದೂ ಕುಟುಂಬದವರು ತಮ್ಮಲ್ಲಿರುವ ವಿಧವಾ ಹೆಂಗಸೊಬ್ಬಳನ್ನು ಮನೆಯಲ್ಲಿ ಬಿಟ್ಟು ಒಂದು ಮದುವೆಗಾಗಿ ಹೋಗಿದ್ದರು. ವಿಧವೆಯು ಮನೆಯಲ್ಲಿ ಒಬ್ಬಂಟಿಗಳಾಗಿಯೇ ಕುಳಿತಿರುವಾಗ ತನ್ನನ್ನು ಮನೆಯವರು ಬಿಟ್ಟುಹೋದರೆಂದೂ ತನ್ನ ಇರುವಿಕೆಯೇ ಅಶುಭ ಸೂಚಕವೆಂದು ಸರ್ವರೂ ತಿಳಿಯುತ್ತಿರುವರೆಂದೂ ಮನಗಂಡು ಮಹಡಿಯಿಂದ ಕೆಳಕ್ಕೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡಳು.

— ಸೂರತಿನಲ್ಲಿ ಇತ್ತೀಚೆಗೆ ೫೪ ವರುಷ ಪ್ರಾಯದ ಮುದುಕನೊಬ್ಬನು ೧೪ ವರುಷ ವಯಸ್ಸಿನ ಕನ್ಯೆಯನ್ನು ಮದುವೆಯಾಗಿರುವನು. ಒಂದೇ ಪ್ರಾಯದ ಹೆಣ್ಣುಗಂಡುಗಳೊಳಗೆ ಮದುವೆಯು ನಡೆಯಬೇಕೆಂದು ಮುಂಬಾಯಿ ಸರಕಾರದವರಲ್ಲಿ ಕೆಲವು ಸಮಯದ ಹಿಂದೆ ಆಲೋಚನೆಯಿದ್ದಿತು. ಇಂತಹ ಮದುವೆಗಳು ಕಾನೂನಿಗೆ ವಿರೋಧವಾಗಿರುವುದರಿಂದ ಅವುಗಳನ್ನು ಕ್ರಿಯಾವಲ್ಲಿಯೇ ತಡೆಗಟ್ಟುವದು ಬಹಳ ಲೇಸು.

— ಕಳೆದ ಆದಿತ್ಯವಾರ ಕಲ್ಕತ್ತೆಯಲ್ಲಿ ಸ್ವರಾಜ್ಯ ದಿನವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ೫ ಘಂಟೆಯ ಹೊತ್ತಿಗೆ ಮೆರವಣಿಗೆಯಾಯಿತು, ೭ಲು ಘಂಟೆಗೆ ಸಭೆ ನಡೆದು ಧುರೀಣರ ಭಾಷಣಗಳಾದವು. ನೆಹರು ವರದಿಯನ್ನೂ, ಎಲ್ಲಾ ಪಕ್ಷಗಳ ಪರಿಷತ್ತಿನವರ ಅಭಿಪ್ರಾಯವನ್ನೂ ಸಮರ್ಥಿಸಿ ಠರಾವುಗಳು ಮಂಜೂರಾದವು.

— ಕಲಕತ್ತೆಯ ಸಮೀಪವಿರುವ ಹೌರಾ ಪಟ್ಟಣದ ಅಡಮಾಜ ನಾರಿನ ಗಿರಣಿಯಲ್ಲಿ ಸುಮಾರು ೩೦೦೦ ಮಂದಿ ಕೂಲಿಯಾಳುಗಳು ಸಂಬಳ ಸಾಕಾಗುವುದಿಲ್ಲವೆಂದೂ, ಕೆಲಸದ ಸಮಯವನ್ನು ಇಳಿಸಬೇಕೆಂದೂ ಮುಷ್ಕರವನ್ನು ಆಚರಿಸುತ್ತಿರುವರು.

— ಕಳೆದ ಸರಸ್ವತಿ ಪೂಜೆಯ ದಿನ ಫರಿದಪುರ ಜಿಲ್ಲೆಯ ಕುಸ್ತಿಯ ಹೈಸ್ಕೂಲಿನ ಕೆಲವು ವಿದ್ಯಾರ್ಥಿಗಳು, ಸಿ. ಐ. ಡಿ. ರಿಪೋರ್ಟರರನ್ನು ಅವಮಾನಪಡಿಸಿದ್ದಕ್ಕಾಗಿ ಮೂವರು ಹುಡುಗರನ್ನು ಕೆಲಸದಿಂದ ಹೊರಕ್ಕೆ ನಿಲ್ಲಿಸಲಾಯಿತು. ಇದಕ್ಕಾಗಿ ಎಲ್ಲಾ ಹುಡುಗರೂ ಮುಷ್ಕರವನ್ನು ಆಚರಿಸಿದರು.

— ಯುರೋಪಿನಲ್ಲಿ ಇನ್‌ಫ್ಲುಯೆಂಜಾ ರೋಗವು ಹೆಚ್ಚುತ್ತಾ ಬರುತ್ತಿದೆ. ಆ ರೋಗವು ಮುಂಬಾಯಿಗೂ ಬಂದು ಹರಡದಂತೆ ಮುಂಬಾಯಿ ಕಾರ್ಪೋರೇಷನಿನವರು ಚೆನ್ನಾಗಿ ಪ್ರಯತ್ನಿಸುತ್ತಿರುವರು, ಯುರೋಪಿನಿಂದ ಬಂದಿಳಿಯುವ ಪ್ರಯಾಣಿಕರನ್ನು ಸರಿಯಾಗಿ ಪರೀಕ್ಷಿಸಲಾಗುತ್ತದೆ.

— [illegible] ... ಗೇಟ್ ಅಂಡ್ [illegible]ರನಾದ ಮಿ. ಸಿಕಂದರ್ [illegible] ಎಂಬವರು [illegible] ಉಡುಗೆರೆಗಳನ್ನು [illegible]. ರಮ್ಜಾನ್ ತಿಂಗಳಲ್ಲಿ ಪ್ರತಿವರುಷ ಅವರು ೫೦೦೦ ರೂಪಾಯಿಗೆ ಮಿಕ್ಕಿದ ಖಾದಿಯನ್ನು ಕೊಂಡುಕೊಳ್ಳುವರು. ಈ ವರುಷವೂ ಅವರು ಇದೇ ರೀತಿ ಖಾದಿಯನ್ನು ಕೊಂಡುಕೊಂಡಿರುವರಂತೆ. ಕಾಂಗ್ರೆಸ್ ಕಾರ್ಯಕ್ಕೆ ಅವರು ಯಾವಾಗಲೂ ತುಂಬಾ ಸಹಾಯವನ್ನು ಮಾಡುವರು. ಮಾತೃಭೂಮಿಯ ಮೇಲೆ ಅವರಿಗೆ ಬಹಳ ಪ್ರೇಮವಿರುತ್ತದೆ.

— ಈಸ್ಟರ್ ವಾರದಲ್ಲಿ ಮುಂಬಾಯಿಯ ಪ್ರಾರ್ಥನಾ ಸಮಾಜದವರ ಆಶ್ರಯದಲ್ಲಿ ಒಂದು ಪರಿಷದವು ನಡೆಯುವದು. ಜಾತೀಯ ಕಲಹಗಳ ವಿಷಯವು ಈ ಸಭೆಯಲ್ಲಿ ಚರ್ಚಿಸಲ್ಪಡುವದು, ಮಾತೃಭೂಮಿಯ ಮೇಲೆ ಎಲ್ಲರಿಗೂ ಪ್ರೇಮವನ್ನು ಹುಟ್ಟಿಸುವುದೇ ಈ ಪರಿಷದದ ಮುಖ್ಯ ಉದ್ದೇಶವಾಗಿರುತ್ತದೆ.

— ಬರಿಸಾಲದ ಸಬ್ ಇನ್ಸ್‌ಪೆಕ್ಟರರಾಗಿದ್ದ ಮಿ ಜ್ಯೋತಿಷ ಚಂದ್ರ ರಾ ಎಂಬವರು ಅಕಸ್ಮಾತ್ ತಿವಿಯಲ್ಪಟ್ಟಿರುವರು. ಒಬ್ಬ ಅಲ್ಲಿಯ ಶಾಲೆಯ ಹುಡುಗನ ಮೇಲೆ ಸಂಶಯ ಬಿದ್ದು ಆತನನ್ನು ಕೈದು ಮಾಡಿರುವರು. ಇನ್ನೂ ಹೆಚ್ಚು ಕೂಲಂಕುಶಗಳು ತಿಳಿದು ಬರುವುದಿಲ್ಲ.

ದ ಕ್ಷಿ ಣ ಕ ನ್ನ ಡ .

ಮಂಗಳೂರು — ಮಾರ್ಚ ೧೦ನೇ ತಾರೀಕಿನ ಆದಿತ್ಯವಾರ ಸ್ವರಾಜ್ಯ ದಿನವು ಮಂಗಳೂರಲ್ಲಿಯೂ ಚೆನ್ನಾಗಿ ಆಚರಿಸಲ್ಪಟ್ಟಿತು. ಸುಮಾರು ೫ ಘಂಟೆಯ ಹೊತ್ತಿಗೆ ಕೊಡಿಯಾಲಬೈಲಿನಲ್ಲಿರುವ ಕಾಂಗ್ರೆಸ್ ಕಾರ್ಯಾಲಯದಿಂದ ಮೆರವಣಿಗೆಯು ಹೊರಟು, ಮುಖ್ಯ ಮುಖ್ಯ ಬೀದಿಗಳನ್ನು ಹಾದು ಸುಮಾರು ೬ ಘಂಟೆಯ ಹೊತ್ತಿಗೆ ಮೈದಾನಿಗೆ ತಲಪಿತು. ಹಿಂದೂಗಳೂ ಮುಸಲ್ಮಾನರೂ, ಕ್ರಿಸ್ತರೂ ಸಭೆಗೆ ಬಂದಿದ್ದರು. ಶ್ರೀ ಟಿ. ಶ್ರೀನಿವಾಸ ಪೈಗಳವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಧ್ಯಕ್ಷರ ಪ್ರಾರಂಭ ಭಾಷಣವಾದೊಡನೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ವಕೀಲ್ ಶ್ರೀ ಎಮ್. ಮಾಧವ ರಾವ್ ಇವರು ನೆಹರು ವರದಿಯ ಕುರಿತಾಗಿ ಭಾಷಣಗಳನ್ನು ಮಾಡಿದರು. ತದನಂತರ, ಹಿಂದೂಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸನ್ನು ಶೀಘ್ರದಲ್ಲಿಯೇ ಹೊಂದಬೇಕೆಂಬ ಠರಾವನ್ನು ಶ್ರೀ ಕೆ. ಆರ್. ಕಾರಂತರೂ, ಶ್ರೀ ಗಂಗೊಳ್ಳಿ ಕೃಷ್ಣರಾಯರೂ ಸಭೆಯ ಮುಂದಿಟ್ಟರು. ಇದು ಸರ್ವಾನುಮತದಿಂದ ಮಂಜೂರಾತಿಯನ್ನು ಹೊಂದಿತು. ಅಧ್ಯಕ್ಷರಿಗೆ ಕೃತಜ್ಞತಾ ವಂದನೆಗಳು ಸಮರ್ಪಿಸಲಾದವು. ಅನಂತರ ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯ ನಿರ್ಣಯದಂತೆ ವಿದೇಶಿ ವಸ್ತ್ರ ಬಹಿಷ್ಕಾರ, ಶಾರೀರಿಕ ಶಿಕ್ಷಣ, ಇವುಗಳ ಕುರಿತಾಗಿ, ತಾರೀಕು ೧೭, ೨೪, ಮತ್ತು ೩೧ನೇ ಆದಿತ್ಯವಾರಗಳಲ್ಲಿ ಮೈದಾನಿನಲ್ಲಿ ಸಭೆ ಜರಗಿಸಬೇಕೆಂದು ಶ್ರೀ ಕೆ. ಆರ್. ಆಚಾರರು ಸಭಿಕರಿಗೆ ಹೇಳಿದರು.

ತಾರೀಕು ೮-೩-'೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೧ ಮರಣಗಳಾದವು. ಈ ಪೈಕಿ ಸನ್ನಿಪಾತ ಜ್ವರದಿಂದ ೧, ಇನ್‌ಫ್ಲುಯೆಂಜಾ ಜ್ವರದಿಂದ ೧, ಆಮಶಂಕೆಯಿಂದ ೧, ಶ್ವಾಸಕೋಶದ ರೋಗಗಳಿಂದ ೪, ಸಿಡುಬಿನಿಂದ ೧, ಇತರ ಎಲ್ಲಾ ಕಾರಣಗಳಿಂದ ೧೩, ಶಿಶು ಮರಣಗಳು ೬, ಜನನ ಸಂಖ್ಯೆ ೩೪.

ಮಂಗಳೂರು ತಾಲೂಕು ಬೋರ್ಡಿನ ಸದಸ್ಯರ ಬರುವ ಸಾಧಾರಣ ಸಭೆಯು ಮಂಗಳೂರು ತಾಲೂಕು ಬೋರ್ಡು ಆಫೀಸಿನಲ್ಲಿ ಇದೇ ಬರುವ ಮಾರ್ಚ ೨೮ನೇ ಗುರುವಾರ ಮಧ್ಯಾಹ್ನ ೩ ಘಂಟೆ ಕ್ಕೆ ಜರಗುವದು.

ಮುಂಬಾಯಿಯ ದಿ ಓರಿಯಂಟಲ್ ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಕಳೆದ ವರುಷ [illegible] ಪಾಲಿಸಿಗಳು ಮಾರಲ್ಪಟ್ಟಿವೆಂದು ತಿಳಿಸುತ್ತಾರೆ.

ಇದೇ ಬರುವ ತಾರೀಕು ೧೭–೩–'೨೯ನೇಯ ಭಾನುವಾರ ಘಂಟೆ ೫-೧೫ಕ್ಕೆ ಇಲ್ಲಿಯ ಬಲ್ಮಠ ರಸ್ತೆಯಲ್ಲಿ ಹೊಸತಾಗಿ ದಿ ಕೆನರಾ ಟೈಲರಿಂಗ್ ಸ್ಕೂಲ್ ಎಂಬ ಹೊಲಿಗೆಯ ಶಾಲೆಯು ಟೈಲರಿಂಗ್ ಎಕ್ಸ್‌ಪರ್ಟ್ ಶ್ರೀ ಎಸ್. ಎಸ್. ಪಾಂಡಿಯವರಿಂದ ತೆರೆಯಲ್ಪಡುವದು.

ಬೋಳಾರ ಹಳೆಕೋಟೆ ಶ್ರೀ ಮಾರಿಯಮ್ಮ ದೇವಸ್ಥಾನದಲ್ಲಿ ಈ ವರ್ಷ ಉತ್ಸಾಹ ಪೂಜೆಯು ತಾ. ೨೬-೩-'೨೯ರಿಂದ ೩-೪-'೨೯ರ ವರೆಗೆ ೯ ದಿನಗಳು ನಡೆಯುವದು. ಎಲ್ಲರೂ ಶ್ರೀ ದೇವಿಯ ಸ್ಥಳಕ್ಕೆ ಬಂದು ಶ್ರೀ ದೇವಿಯ ಪ್ರಸಾದವನ್ನು ಪಡೆದು ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಮೊಕ್ತೇಸರರ ಮತ್ತು ಆಡಳಿತದ [illegible] ತಿಳಿಸುತ್ತಾರೆ.

ಕಾಂಬಾರದ ಯಾನೆ ಮಲ್ಪೆದ ಶ್ರೀರಾಮ ಸೇವಾ ಸಮಿತಿಯ ಪರವಾಗಿ ತಾ ೧೦ನೇ ಆದಿತ್ಯವಾರ ಘಂಟೆ ೧೦ಕ್ಕೆ ಸರಿಯಾಗಿ ಶ್ರೀ ದೇವಸ್ಥಾನದಲ್ಲಿ ಹೋಬಳಿ ಗುರಿಕಾರರಾದ, ರಾ| ಶದ್ರಿ ಕೋಟಿ ಮಲ್ಯರ ಅಧ್ಯಕ್ಷತೆಯಲ್ಲಿ ಮಂಗಳೂರು, ಕಸಬಾ, ಗ್ರಾಮ ಗುರಿಕಾರರ ಸಭೆಯು ಜರಗಿತು. ಅಂದಿನ ಸಭೆಗೆ ಗ್ರಾಮ ಗುರಿಕಾರರಲ್ಲದೆ ಅನೇಕ ಮಂದಿ ಸ್ವಜಾತಿ ಗೃಹಸ್ಥರು ಬಂದಿದ್ದರು. ಪ್ರಥಮತಃ ಭಗವತ್ಪ್ರಾರ್ಥನೆಯಾದ ನಂತರ ಸಭೆಯು ಕರೆದ ಉದ್ದೇಶವನ್ನು ಸಮಿತಿಯ ಅಧ್ಯಕ್ಷರಾದ ಮಾ| ರಾ| ರಾ| [illegible]ವರು ವಿವರವಾಗಿ ತಿಳಿಸಿ, ಸ್ವಜಾತಿಯೊಳಗಿನ ಒಗ್ಗಟ್ಟಿನ ಬಲದ ವಿಷಯವಾಗಿ ಅಂದವಾದ ರೀತಿಯಲ್ಲಿ ಸಣ್ಣ ಭಾಷಣವನ್ನು ಕೊಟ್ಟರು. ಈ ಸಮಿತಿಯು ಕಳೆದ ಎರಡು ವರ್ಷಗಳಿಂದ ಇಂಥಾ ಹೀನಾವಸ್ಥೆಯಲ್ಲಿದ್ದ ನಮ್ಮ ಜಾತಿಯನ್ನು ಉನ್ನತಿಗೆ ತರುವ, ಮತ್ತು ಸ್ವಜಾತಿಯ ಅಭಿವೃದ್ಧಿಯನ್ನು ಮಾಡುವ ಮಹೋದ್ದೇಶವನ್ನು ಇಟ್ಟುಕೊಂಡು ಈ ಸಮಿತಿಯು ಕೆಲಸ ಮಾಡುತ್ತಿರುವದರಿಂದ ನಾವೆಲ್ಲರೂ ಒಟ್ಟಾಗಿ ಸೇರಿ ಸದ್ರಿ ಸಮಿತಿಯ ಏಳಿಗೆಗೆ ಬರುವಂತೆ ಪ್ರಯತ್ನಿಸಬೇಕೆಂದು ರಾ| [illegible] ಮಲ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ತರುವಾಯ ಈ ಸಮಿತಿಯ ದ್ವಿತೀಯ ವಾರ್ಷಿಕೋತ್ಸವದ ಮಹಾಸಭೆಯು ಬರುವ ಎಪ್ರಿಲ್ ತಿಂಗಳ ತಾ. ೧೭ನೇ ಬುಧವಾರ (ಶ್ರೀ ರಾಮ) ರಾಮನವಮಿಯ ದಿವಸ ನೆರವೇರಲಿಕ್ಕಿರುವುದರಿಂದ ಅಂದಿನ ಮಹಾಸಭೆಗೆ ತಮ್ಮ ಗ್ರಾಮದಲ್ಲಿ ವಿನಂತಿಯನ್ನು ಸಾರಿ ಗ್ರಾಮ ಗುರ್ಕಾರರು ಕೂಡಿ [illegible] ಧನ ಸಂಗ್ರಹಮಾಡಿ [illegible] ಯನ್ನು ಮಾಡಿಕೊಂಡು ಬರುವ ಸಮಿತಿಗೆ ಒಪ್ಪಿಸಿ ಕೊಟ್ಟು ಅಂದು ನಡೆಯಲಿಕ್ಕಿರುವ ಕಾರ್ಯವೆಲ್ಲವೂ ಸಾಂಗವಾಗಿ ನೆರವೇರುವಂತೆ ಪ್ರಯತ್ನಪಡಬೇಕೆಂದು ನಿರ್ಣಯವಾಯಿತು. ಆ ಮೇಲೆ ಸಭಾ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ಸಭಿಕರನ್ನು ಕಾಂಬಾರದ ಉಪಹಾರದಿಂದ ಸತ್ಕರಿಸಿ ಸಭೆಯು ಮುಕ್ತಾಯವಾಯಿತು.

ಕಾಸರಗೋಡು — ಮಳಿಯೂರು ಗ್ರಾಮದ ಅಂಡುಮಾನೆ ಬ್ಯಾರಿಯನ್ನು ಕೊಂದ ಮೊಕದ್ದಮೆಯ ಸಂಬಂಧ [illegible] ಸಿಕ್ಕದೆ ಕಾಣೆಯಾಗಿದ್ದ ಸೀದಿಬ್ಯಾರಿಯೆಂಬವನನ್ನು ಮೊನ್ನೆ ಪೋಲೀಸ್ ಅಧಿಕಾರಿಗಳ ಅಪೇಕ್ಷೆಯಂತೆ ಶ್ರೀ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರು ಹೆಚ್ಚಿನ ಸಾಹಸದಿಂದ ಹಿಡಿದುಕೊಟ್ಟಿರುವುದು ಬಹಳ ಶ್ಲಾಘನೀಯವಾಗಿದೆ.

ನಂದಳಿಕೆ — ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ಉತ್ಸವವು ತಾ. ೨೨-೩-'೨೯ನೇ ಶುಕ್ರವಾರದಿಂದ ಒಂಭತ್ತು ದಿವಸಗಳ ಪರಿಯಂತರ ನಡೆಯುವುದು. ತಾ. ೨೫ನೇ ಸೋಮವಾರ ಜಾತ್ರೆ. ಬೆಳಿಗ್ಗೆ ದೇವರು ಮೂಲಸ್ಥಾನಕ್ಕೆ ಹೋಗಿ ಬರುವರು; ರಾತ್ರಿ ಉತ್ಸವವು; ಭಕ್ತ ಜನರೆಲ್ಲರೂ ಬಂದು ದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಸ್ಥಳವನ್ನು ಬೆಳಗಿಸಬೇಕಾಗಿ ವಿನಂತಿ.

ಹೊಸ ಮೊಕ್ತೇಸರರ ಆಡಳಿತೆಯಲ್ಲಿ ಈ ವರೆಗಿನ ಕ್ರಮಗಳಲ್ಲಿ ಹೆಚ್ಚಿನ ಬದಲಿಲ್ಲ. ಅವರ ಉತ್ಸಾಹವನ್ನು ನೋಡುವಾಗ ಉತ್ಸವವು ಉಜ್ವಲ ರೀತಿಯಲ್ಲಿ ಕೊನೆಗಾಣುವುದೆಂದು ತೋರುತ್ತದೆ.

ಪುತ್ತೂರು — ಇಲ್ಲಿ ತಾ. ೮-೩-'೨೯ ಶುಕ್ರವಾರ ಮಧ್ಯಾಹ್ನ ೨ ಘಂಟೆಯ ಸಮಯ ಪೇಟೆಯಲ್ಲಿ ಕೋಟ ಬ್ರಾಹ್ಮಣರ ಊಟದ ಹೋಟೇಲು ೧, ಮತ್ತು [illegible] ಮನೆಗಳು ೨, ಕ್ರೈಸ್ತ ಮುಸ್ಲಿಮ ಮನೆಗಳು ೩, [illegible] ಮನೆಗಳು [illegible]. ಕಾರಣಗಳಿಲ್ಲದೆ ಅಕಸ್ಮಾತ್ತಾಗಿ ಅಗ್ನಿ ದೇವರಿಗೆ ಸಮರ್ಪಣೆಯಾಗಿ ಭಸ್ಮೀಭೂತವಾಗಿ ಹೋದವು.

ಬೆಂಕಿಯನ್ನು ನಂದಿಸಿ, ಆಸುಪಾಸಿನ ಮನೆಗಳನ್ನು ಉಳಿಸಲು [illegible] ಬಹಳ [illegible] ತೋರಿಸಿದ್ದರಿಂದ ಆ [illegible] ಅಭಿವಂದನೆಗಳು.

ಊಟದ ಹೋಟೇಲಿನವರು ಪರಮೇಶ್ವರ ಭಟ್ಟರೆಂಬವರು. [illegible] ಕುಟುಂಬಿಕರಾಗಿ [illegible]. ಬಹಳ ಕಷ್ಟದಿಂದ ಜೀವನ ನಡೆಸಿಕೊಂಡಿದ್ದರು.

ಬಾಕಿ ಮನೆಯವರು ಸಹ ಕೂಲಿ ವೃತ್ತಿಯಿಂದ ಜೀವಿಸುವ ಬಡ ಕುಟುಂಬಿಕರಾಗಿದ್ದು ಸಾಧಾರಣ ಒಟ್ಟು ೬೦೦-೭೦೦ ರೂಪಾಯಿಯ ನಷ್ಟವುಂಟಾಗಿರುವುದು [illegible] ಮನೆ ಕಟ್ಟಿಸಿಕೊಡುವ [illegible] ಸಂಪೂರ್ಣ ವಿಶ್ವಾಸವು.

ಅಜೆಕಾರು — ಇದೇ ತಾ ೧೦-೩-'೨೯ನೇ ಆದಿತ್ಯವಾರ [illegible] ಶ್ರೀ ಕೆ. [illegible] (Co-operative Buildings) [illegible] ಶ್ರೀ ಕೆ. ಎನ್. [illegible] ಹೆಗ್ಡೆ (ಪ್ರೆಸಿಡೆಂಟ್) [illegible] ಸಭೆಯು ಮುಕ್ತಾಯವಾಯಿತು.

ಪೊಳಲಿ — ಶ್ರೀ ವಿದ್ಯಾವರ್ಧಕ ಸಂಘಕ್ಕೆ ಇದೇ ಕಳೆದ [illegible] ಸಮಯ ಸಹಾಯ ಮಾಡಿದವರ ಹೆಸರು:—

[illegible] ಬಾವಂದ ಬೆಟ್ಟು [illegible] ನಾಲ್ಕರಂತೆ. [illegible] ಮುಂಡಪ್ಪ ಶೆಟ್ಟಿ, ಉಳಿಪಾಡಿ ಗುತ್ತು [illegible] ಶಂಕರ್ [illegible] ಕೃಷ್ಣ [illegible] ರೂಪಾಯಿ ಎರಡರಂತೆ. [illegible] ಕೃಷ್ಣಯ್ಯ, ಮಳಲಿ ಮಂಜುನಾಥ [illegible] ಬಲ್ಲಾಳರು, [illegible] ಮಲ್ಯ, ಬೆಳ್ಳಿಬೆಟ್ಟು [illegible] ಶೆಟ್ಟಿ, ಗುಂಡಿಲ ವೆಂಕಪ್ಪ ಶೈಗಳು, [illegible] ಪೊಳಲಿ ಕೃಷ್ಣ ಭಟ್ಟ, ಕಲ್ಲುಬೆಟ್ಟು [illegible] ನಾರ್ಣಪ್ಪಯ್ಯ, [illegible] ಗೌರಿ ಹೆಂಗಸು, [illegible] ವೆಂಕಪ್ಪಯ್ಯ, [illegible] ಒಂದರಂತೆ. [illegible] ನಾರಾಯಣ ಭಟ್ಟ, [illegible] ನಾರ್ಣಪ್ಪಯ್ಯ, [illegible] ಕೃಷ್ಣ ಪೈಗಳು, [illegible] ಸುಬ್ರಾಯರು, ಗುರುಪುರ ಬಾಬು ಪೈಗಳು ಆರ್ಧ ರೂಪಾಯಿಯಂತೆ. ಗುರುಪುರ [illegible] ಪ್ರಭುಗಳು, ಗುರುಪುರ ಮಂಜುನಾಥ [illegible], [illegible] ನಾರ್ಣಪ್ಪಯ್ಯ, ಬದಕಬೈಲ ರಾಮಣ್ಣ ಶೆಟ್ಟಿ, ನಾಲ್ಕು ಆಣೆಯಂತೆಯೂ ಸಹಾಯ ಮಾಡಿರುತ್ತಾರೆ. ಮೊಬಲಗು ೪೦, ರೂ. ಆದಂತಾಗಿರುತ್ತದೆ. ಆಗಾಗ್ಗೆ ಸಹಾಯ ಮಾಡಿದ ಇತರ ಮಹನೀಯರ ಹೆಸರನ್ನು ಮುಂದೆ ಕೊಡಲಾಗುವುದು.

ಕರ್ನಿಕ್ಸ ಎಗ್ಯೂಮಿಕ್ಸ್ಚರ.

ಕರ್ನಿಕ್ಸ ಬ್ರದರ್ಸ,

ಲೋಕಪ್ರಸಿದ್ಧ ಔಷಧಗಳು.

LIBERAL DISCOUNT TO TRADE

-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್ ಎಲ್. ಬಾಟಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್,
Sayani Road. P. O. Cadell Road, Bombay. No. 14.

ಜೆಟ್ಪ್ರೋಲಿನ ರಾಜರು ಬರೆಯುವರು.

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಇತರ ಔಷಧಿಗಳಿಗಿಂತ ಅರ್ಕವು ತುಂಬಾ ಪ್ರಯೋಜನಕಾರಿಯಾಗಿ ಉಪಕಾರಿಯಾಗಿದೆ ಅರ್ಕ, ಲೋಧ್ಯ, ಮತ್ತು ಅಮೃತ ಇವುಗಳ ನಿಸ್ಸಂಶಯವಾದ ಪ್ರಯೋಜನಕಾರಿತೆಯಿಂದ, ಇಲ್ಲಿನ ಜನರೊಳಗೆ ನಿಮ್ಮ ಔಷಧಿಗಳ ಮೇಲೆ ವಿಶೇಷ ಮತ್ತು ಪೂರ್ಣ ನಂಬುಗೆಯು ಉಂಟಾಗಿರುತ್ತದೆ,

ಎಲ್ಲಾ ಕೆಮಿಷ್ಟರಲ್ಲಿಯೂ ಇರುತ್ತದೆ.

ಕೇಸರಿ ಕುಟೀರಮ್.

ಇಂಡಿಯನ್ ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ಫೋನ್ 3486

Famous

Mysore Perfumes.

Best incense sticks (Agar Bathis)

Maharaja Bathi	per seer (24 Tolas) Rs	20
Darbar	" "	15
Ananda	" "	12
Manoranjan	" "	10
Musk Flower	" "	8
Dilkhusman	" "	5
Kasthuri Jawaji	"	10
Amber	" "	7
Rose	" "	6
Jasmin	" "	5
Punugu (Civet)	" "	4
Flower	" "	3
A Tin Case containing 100 assorted Bathis of 12 kinds		4

Packing & Postage Extra.

The State Perfumery Mart,

Bangalore City.

Mysore State.

'ಅಂಜಾ ರಾಯಿತ್'

The Kanara Watch House Udipi, S. K.



ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಇತರ ಸಮಾಚಾರಗಳು.

ಇಂಗ್ಲಾಂಡಿನಲ್ಲಿ ಬಾಲ್ಯವಿವಾಹ ನಿಷೇಧ.

[illegible]

ಪಂಜಾಬದ ರಾಜಕೀಯ ಪರಿಷತ್ತು.

[illegible]

ಅಫಘಾನದ ಗಲಾಟೆಗಳು.

[illegible]

[illegible]

ಶ್ರೀಮತಿ ... ಗಳನ್ನೂ, ಜನಗಳನ್ನೂ ... ಇಂಗ್ಲಿಷರು ... ದೇಶದ ... ನಡೆಯುತ್ತಿರುವುದರಿಂದ ... ಪಾರಾಗಿರುವನು.

[illegible]

ನಾದಿರಖಾನರು ... ಅವರನ್ನು ... ಅವರು ... ಅವರ ಸ್ವತ್ತುಗಳು ...

[illegible]

ಬರ್ಮಾದಲ್ಲಿ ಮಹಾತ್ಮಾಜೀಯವರು.

[illegible]

ಸ್ತ್ರೀಯರ ... [illegible]

[illegible]

[illegible]

ಪ್ರಕಟಣೆ.

[illegible]

V. M. Shetty   S. R. [illegible]



ಕರ್ಣಿಕ ಎಗ್ಯೂಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲ್ಯುಯೆಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು, ದಿ ಯೂನಿಯನ್ ಮಾರ್ಟ್, ಮಂಗಳೂರು. | ಕರ್ಣಿಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

Famous

Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs 20
Darbar	,, ,,	,, 15
Ananda	,, ,,	,, 12
Manmohan	,, ,,	,, 10
Musk Heena	,, ,,	,, 8
Dilchaman	,, ,,	,, 8
Kasthur Javaji	,,	,, 10
Amber	,, ,,	,, 8
Rose	,, ,,	,, 6
Jasmin	,, ,,	,, 5
Punugu (Civet)	,,	,, 4
Heena	,, ,,	,, 3
A Tin Case containing 300 Assorted Bathis of 12 kinds	,,	6

Packing & Postage Extra.

The State Perfumery Mart,
Bangalore City.
Mysore State.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧರಿಸುವ ದಿನಾರಭ್ಯ ದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೩ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ಕ್ರಯಪಟ್ಟಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
ಸಿದ್ದಾಪುರ್ ಪೋಸ್ಟು ಕಾರ್ವಾರ್ ಡಿಸ್ಟ್ರಿಕ್ಟ

---

೪೯ ವರ್ಷ ಅನುಭವ ಸ್ಥಾಪಿತ ಬಾಟ್ಲಿವಾಲಾ ಅವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್—ಮಲೇರಿಯಾ ಜ್ವರ ಶಮನ,	ರೂ. ೧.
ಬಾಟ್ಲಿವಾಲರ ಟಾನಿಕ್ ಪಿಲ್ಸ—ಅಶಕ್ತರಿಗೂ, ಎಳೆಯ ರಕ್ತಹೀನರಿಗೂ ಪುಷ್ಟಿ ಕೊಡುವ ಔಷಧ	ಅಣೆ ೧೨.
ಬಾಟ್ಲಿವಾಲರ ಟೂಥ್ ಪೌಡರ್—ಹಲ್ಲುನೋವು, ಬಾತ ಎಡನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ	ಅಣೆ ೧೨.
ಬಾಟ್ಲಿವಾಲರ ಕಾಲರಾ ಮಿಕ್ಸ್ಚರ—ಹಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ.	ಅಣೆ ೧೨
ಬಾಟ್ಲಿವಾಲರ ಕ್ವಿನೀನ ಟೇಬ್ಲೆಟ್ಸ್—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟ್ಸ್ ಇರುತ್ತವೆ.	
ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೫—೦. ರೂ. ೧—೪—೦. ೧—೧೨—೦	
ಬಾಟ್ಲಿವಾಲರ ಹುಳ ಕಡ್ಡಿ ಔಷಧ.	ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ.	ರೂ. ೦—೬—೦.

LIBERAL DISCOUNT TO TRADE

ತಾರಿನವಿಳಾಸ-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay. No. 14.

ಜೆಟ್‌ಪ್ರೋಲಿನ ರಾಜರು ಬರೆಯುವರು.

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಇತರ ಔಷಧಿಗಳಿಗಿಂತ ಅರ್ಕವು ತುಂಬಾ ಪ್ರಯೋಜನಕಾರಿಯಾಗಿ ಉಪಕಾರಿಯಾಗಿದೆ ಅರ್ಕ, ಲೋಧ್ರ, ಮತ್ತು ಅಮೃತ ಇವುಗಳ ನಿಸ್ಸಂಶಯವಾದ ಪ್ರಯೋಜನಕಾರಿತೆಯಿಂದ ಇಲ್ಲಿನ ಜನರೊಳಗೆ ನಿಮ್ಮ ಔಷಧಿಗಳ ಮೇಲೆ ವಿಶೇಷ ಮತ್ತು ಪೂರ್ಣ ನಂಬಿಗೆಯು ಉಂಟಾಗಿರುತ್ತದೆ,

ಎಲ್ಲಾ ಕೆಮಿಷ್ಟರಲ್ಲಿಯೂ ಇರುತ್ತದೆ.

ಕೇಸರಿ ಕುಟೀರಮ್.

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 | ತಂತಿ: "ಕೇಸರಿ" | ಫೋನ್ 8486

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! | ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸರ್ವಪ್ರಕಾರದ ಉತ್ತಮ ಗಡಿಯಾರಗಳು, ಪೋಕೆಟ್ ವಾಚುಗಳು, ರಿಸ್ಟ್ ವಾಚುಗಳು, ಟೈಮ್ ಪೀಸುಗಳು, ಎಲೆಕ್ಟ್ರಿಕ್ ಸಾಮಾನು, ಪೆನ್ನುಗಳು, ಅತ್ತರ ಸಾಮಾನುಗಳು ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮಪೀಸು, ಫೋನೋಗ್ರಾಫು ಮತ್ತು ಪೆನ್ನು ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಹಿತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ.—ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿಡುವುದರಿಂದ ಸರಿಯಾದ ಸಮಯವು ದೊರಕುವುದು.

ವಿವಿಧ ಸಮಾಚಾರಗಳು.

ಇಂಗ್ಲಾಂಡಿನಲ್ಲಿ ಬಾಲ್ಯವಿವಾಹ ನಿಷೇಧ.

ಹೆಣ್ಣುಗಳು, ಗಂಡಾಗಲೀ ಹದಿನಾರು ವರುಷ ವಯಸ್ಸಿನ ಮೊದಲು ಮದುವೆಯಾದರೆ ಆ ಮದುವೆಯು ಕಾನೂನು ಪ್ರಕಾರ ಮದುವೆಯಾಗಲಾರದೆಂಬ ಕರಾವು ಇಂಗ್ಲಾಂಡಿನ ಹೌಸ್ ಒಫ್ ಲೋರ್ಡ್ಸ್ ಇದರ ಮುಂದಕ್ಕೆ ತರಲ್ಪಟ್ಟಿತು. ಆ ಕರಾವನ್ನು ಸಮರ್ಥಿಸಿ ಲೋರ್ಡ್ ಬರ್ ಮಾಸ್ಟರ್‌ರವರು ಒಂದು ಭಾಷಣವನ್ನು ಮಾಡಿದರು. 'ಇಂಗ್ಲಾಂಡು ಬಹಳ ನಾಗರೀಕತೆಯನ್ನು ಹೊಂದಿರುತ್ತದಾದರೂ, ಮದುವೆಯ ವಿಷಯದಲ್ಲಿ ಮಾತ್ರ ತಲೆ ತಗ್ಗಿಸಬೇಕಾಗಿದೆ. ಸುಮಾರು ನಾಲ್ಕು ನೂರು ವರುಷಗಳ ಹಿಂದೆ ಹುಡುಗರೂ ಹುಡುಗಿಯರೂ ಬೇಗನೆ ಪ್ರೌಢಾವಸ್ಥೆಯನ್ನು ಹೊಂದುತ್ತಿದ್ದುದರಿಂದ ಚಿಕ್ಕಂದಿನಲ್ಲೇ ಅವರೊಳಗೆ ಮದುವೆಯಾಗುತ್ತಿತ್ತು. ಆದರೆ ಈಗಿನ ಕಾಲಕ್ಕೆ ಅದು ಸಂಧಿಸಲಾರದು. ಹದಿನಾರು ವರುಷಗಳಿಗೆ ಕಡಿಮೆಯಾದ ಹುಡುಗನಾಗಲೀ ಹುಡುಗಿಯಾಗಲೀ ಮದುವೆಯಾಗಿ ಸಂಸಾರ ಮಾಡುವುದೆಂದರೆ ನಾಚಿಕೆಗೇಡು. ಜೀವನದ ಜವಾಬ್ದಾರಿಯನ್ನು ಅರಿಯದವರನ್ನು ವಿವಾಹ ಬಂಧಿತರನ್ನಾಗಿ ಮಾಡುವದು ಕೇವಲ ಅನ್ಯಾಯ. ಸೂರ್ವ(?) ದೇಶದಲ್ಲಿ ಮದುವೆಯ ಪ್ರಾಯವು ೨೦ ಮತ್ತು ೧೮ ಆಗಿರುತ್ತದೆ. ಸ್ವೀಡನಿನಲ್ಲಿ ೨೧ ಮತ್ತು ೧೮. ಹಿಂದೂಸ್ಥಾನದಲ್ಲಿಯೂ ಕೂಡ ಬಾಲ್ಯ ವಿವಾಹ ಪದ್ಧತಿಯು ಹಿಂದಕ್ಕೆ ಸರಿಯುತ್ತಿದೆ, ಪ್ರೌಢ ವಿವಾಹ ಪದ್ಧತಿಯು ತಲೆದೋರುತ್ತಾ ಬಂದಿರುತ್ತದೆ. ಈ ವಿಷಯದಲ್ಲಿ ನಾವು ಹಿಂದೀಯರಿಗಿಂತಲೂ ಕಡಿಮೆ ಯೋಗ್ಯತೆಯವರಾಗಿರುತ್ತೇವೆ. ಜಿನೇವದಲ್ಲಿ ಸದ್ಯದಲ್ಲಿಯೇ ಕೂಡಲಿಕ್ಕಿದ್ದ(?) ಪರಿಷತ್ತಿನಲ್ಲಿ ಸರ್ವರ ಒಪ್ಪಿಗೆಯಿಂದ ಸರ್ವ ರಾಷ್ಟ್ರಗಳ ಜನರಿಗೂ ಒಂದೇ ಮದುವೆಯ ಪ್ರಾಯವನ್ನಾಗಿ ನಿಶ್ಚಯಿಸಬೇಕು. ಚಿಕ್ಕಂದಿನಲ್ಲಿ ಹುಡುಗಿಯರಿಗೆ ಮದುವೆಯನ್ನು ಮಾಡಲಡ್ಡಿಯಿಲ್ಲದ(?) ಕಾನೂನಿದೆಯಾದರೆ ಊರಲ್ಲಿ ಅನ್ಯಾಯಗಳು ಹೆಚ್ಚಬಹುದು. ಉದಾಹರಣೆಗಾಗಿ, ನಾಲ್ಕೈದು ವರುಷಗಳ ಹಿಂದೆ ಒಬ್ಬ ೨೯(?) ವರುಷ ಪ್ರಾಯದ ಯುವಕನು ೧೩ ವರುಷ ಪ್ರಾಯದ ಹುಡುಗಿಯೊಡನೆ ಬಲಾತ್ಕಾರದಿಂದ ಅನ್ಯಾಯವನ್ನು ನಡಿಸಿದನು. ಆತನ ಮೇಲೆ ಸಹಜವಾಗಿಯಾದರೆ ಮೊಕದ್ದಮೆಯಾಗಿ ಆತನು ಹಲವು ವರುಷಗಳ ಶಿಕ್ಷೆಗೆ ಗುರಿಪಡಿಸಲ್ಪಟ್ಟು, ಕಾರಾಗೃಹದಲ್ಲಿ ಕೊಳೆಯಬೇಕಾಗಿದ್ದಿತು. ಆದರೆ ಆತನೇ ಆ ಹುಡುಗಿಯನ್ನು ಮದುವೆಮಾಡಿಕೊಳ್ಳುವನೆಂಬ ಪ್ರಸ್ತಾಪವಾಯಿತು, ಅವರಿಬ್ಬರೊಳಗೆ ಮದುವೆಯು ನಡೆಯಿತು. ಇದರಿಂದ ಆ ಚಿಕ್ಕ ಹುಡುಗಿಯು ಆ ಯುವಕನ ಮೇಲೆ ಮೊಕದ್ದಮೆಯನ್ನು ಮಾಡುವದು ತಡೆಗಟ್ಟಲ್ಪಟ್ಟಿತು. ಆ ಚಿಕ್ಕ ಹುಡುಗಿಯು ಯುವಕನ ವಿಷಯಲಾಲಸೆಗೆ ಬಲಿಯಾಗಿ ಕಷ್ಟಪಡಬೇಕಾಯಿತು. ಇದೇ ರೀತಿ ಇಂಗ್ಲಾಂಡಿನಲ್ಲಿ ಎಷ್ಟೋ ಜನ ಯುವಕರು ಚಿಕ್ಕ ಚಿಕ್ಕ ಹುಡುಗಿಯರನ್ನು ಕೆಡಿಸಿ, ಅದನ್ನು ಮರೆಮಾಚುವದಕ್ಕಾಗಿ ಅವರನ್ನು ಮದುವೆಯಾಗಿ ಬಿಡುವರು. ಆದರೆ ಇದರಿಂದ ಹುಡುಗಿಯ ಜೀವನವು ಯಾವ ರೀತಿಯಲ್ಲಿ ಕೆಡುವದು, ಎಂಬುದನ್ನು ಅವಳ ಹೆತ್ತವರು ವಿಚಾರಿಸುವುದಿಲ್ಲ. ಇದು ವರೆಗೆ ಈ ವಿಷಯವು ನಮ್ಮ ಮನಸ್ಸಿಗೆ ಹೊಳೆದಿಲ್ಲ. ಈಗ ತಿಳಿದಿರುತ್ತದೆ. ನಾಚಿಕೆಗೆ ಕಾರಣವಾಗುವ ಈ ಮಸೂದೆಗೆ ಸರ್ವರೂ ಸಮ್ಮತಿಯನ್ನೀಯಬೇಕು. ಈ ಮಸೂದೆಯನ್ನು ಜ್ಯಾರಿಗೆ ತರುವದು ನ್ಯಾಯವಾಗಿರುತ್ತದೆಂದು ಯಾವನೊಬ್ಬನೂ ತಿಳಿಯದಿರನು. ಎಂದು ನನಗೆ ದೃಢವಾದ ನಂಬಿಗೆಯಿರುತ್ತದೆ' ಎಂಬುದೇ ಅವರ ಭಾಷಣದ ಮುಖ್ಯ ಸಾರಾಂಶವಾಗಿದ್ದಿತು.

ಪಂಜಾಬದ ರಾಜಕೀಯ ಪರಿಷತ್ತು.

ಪಂಜಾಬದ ರಾಜಕೀಯ ಪರಿಷತ್ತಿನ ಎರಡನೆಯ ಅಧಿವೇಶನವು ಜೋಡಾಕನಲ್ಲಿ(?) ಶ್ರೀ ಪಂಡಿತ ಮೋತಿಲಾಲ ನೆಹರೂಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಲಜಪತರಾಯರವರ ನಿಧನದ ಸಲುವಾಗಿ ಮೊದಲೊಂದು ದುಃಖಸೂಚಕ ಠರಾವು ಮಂಜೂರಾಯಿತು. ಲಾಹೋರಿನಲ್ಲಿ ಅಂದು ಲಾಲಾಜಿಯವರನ್ನು ಪೋಲೀಸರು ಹೊಡೆದುದನ್ನೂ ಮಿ. ಸೊಂಡರ್ಸ್‌ರ ವಧೆಯಲ್ಲಿ ಪಂಜಾಬದ ಯುವಕರ ಕೈಯಿರಬಹುದೆಂದು ಪೋಲೀಸರು ಅವರನ್ನು ಹಿಡಿದುದನ್ನೂ ಖಂಡಿಸಿ, ಲಾಲಾ ಚೋಇರಾಜ(?)ರೆಂಬವರು ಮಾತನಾಡಿದರು. ಸರಕಾರದವರು ಎಂತಹ ಕಷ್ಟಕೊಟ್ಟರೂ(?), ಸ್ವಾತಂತ್ರ್ಯದ ಚಳವಳವು ಅಳಿಸಿ ಹೋಗಲಾರದೆಂದರು.

ಪಂಡಿತ ಮೋತಿಲಾಲ ನೆಹರುಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ 'ಈ ಸಂದರ್ಭದಲ್ಲಿ ನಾವು ಸಾವನ್ನು ಕೂಡ ಪರಿಗಣಿಸದೆ ಸ್ವಾತಂತ್ರ್ಯದ ಸಲುವಾಗಿ ಹೋರಾಡಬೇಕು. ಸ್ವರಾಜ್ಯದ ಸಲುವಾಗಿ ಸಾಯುವದೆ ನಿಜವಾದ ವ್ಯಕ್ತಿ(?). ಹಾಗೆ ಸತ್ತವರ ಹೆಸರು ಆಚಂದ್ರಾರ್ಕವಾಗಿ ಸ್ಥಿರವಾಗಿ ಉಳಿಯುವದು. ಕೋಟ್ಯಾವಧಿ ನಮ್ಮ ಜನರನ್ನು ಕೆಲವೇ ವಿದೇಶಿಯರು ಆಳುವದೆಂದರೆ ನಮಗೆನೇ ಅವಮಾನಕರ. ಆದ ಕಾರಣ ಸ್ವರಾಜ್ಯವನ್ನೇ ನಮ್ಮ ಧ್ಯೇಯವನ್ನಾಗಿ ಇಟ್ಟುಕೊಂಡು ಹೋರಾಡಬೇಕು.' ಎಂದು ಮಾತನಾಡಿದರು. ಪಂಜಾಬ ಕೌನ್ಸಿಲಿನಲ್ಲಿ ರಾಷ್ಟ್ರೀಯ ಪಕ್ಷದ ಧುರೀಣರಾದ ಡಾ। ಆಲಮರವರು ಪಾರ್ಲಿಮೆಂಟು ಕಾಂಗ್ರೆಸ್ ನಿರ್ಣಯವನ್ನು ಅಲ್ಲಗಳೆಯುವುದಾದರೆ, ಪಂಜಾಬು ಸತ್ಯಾಗ್ರಹವನ್ನು ಆಚರಿಸಲು ಸಿದ್ಧವಿರುತ್ತದೆ ಎಂಬ ಠರಾವನ್ನು ಮುಂದಕ್ಕೆ ತಂದರು. ತದನಂತರ ಪಂಡಿತ ಜವಾಹಿರಲಾಲ ನೆಹರುಗಳವರ ಭಾಷಣವಾಯಿತು. 'ಧರಿಣಿ(?)ಯಿಂದ ಮಾತ್ರವೇ ಸ್ವರಾಜ್ಯವು ಸಾಧಿಸಲ್ಪಡಲಾರದು. ಅದರ ಎಷ್ಟು ಅತ್ಯಯದ್ಧ(?)ವನ್ನು ಮಾಡಿದರೂ ಸ್ವರಾಜ್ಯವು ಸಿಕ್ಕದು. ಹಾಗೆ ಸಿಕ್ಕುವದಾದರೆ ಮಹಾತ್ಮಾಜಿಯವರೊಬ್ಬರ ಪ್ರಯತ್ನಗಳೇ ಸಾಕಾಗಬಹುದಿತ್ತು. ಸರ್ವರೂ ಒಟ್ಟಾಗಿ, ಕಾಂಗ್ರೆಸಿನವರ ನಿರ್ಣಯವನ್ನು ಒಮ್ಮೆಗೆ ಆಚರಣೆಗೆ ತಂದ ದಿನದ ದಶಂಬರ ೩೧ರೊಳಗೆ ಸ್ವರಾಜ್ಯವು ದೊರಕುವದೆಂಬುದು ತೀರ ದುರ್ಲಭ. ಮೊದಲಾಗಿ ಸ್ವರಾಜ್ಯವು ಬೇಕಾದುದೇ ಬಡ ಜನರ ಸಲುವಾಗಿ ಅವರ ಬಡತನವನ್ನು ಹೋಗಲಾಡಿಸಬೇಕಾದರೆ ಸ್ವರಾಜ್ಯವೇ ಸಿಕ್ಕಬೇಕು' ಎಂಬುದೇ ಅವರ ಭಾಷಣದ ತತ್ವವಾಗಿದ್ದಿತು.

ಅಫಘಾನದ ಗಡಿಬಿಡಿಗಳು.

ಲಾಹೋರಿನ 'ಜಮೀನ್ದಾರ್' ಎಂಬ ಪತ್ರಿಕೆಯ ಫಾಲ ವಾರ್ತಾ(?) ಮೂಲಗಳಿಂದ ಜನರಲ್ ನಾದಿರ್ ಖಾನರು ಕೋಸ್ಟ್ ಪ್ರಾಂತ್ಯದ ಸೇನೆಯವರಿಂದ ಗುಂಡುಹೊಡೆದು ಕೊಲ್ಲಲ್ಪಟ್ಟರೆಂದು ವಾರ್ತೆಯು ಬಂದಿತು. ಈ ಸುದ್ದಿಯು [illegible] ಎಲ್ಲ ಕಡೆಗಳಲ್ಲಿಯೂ ಹಬ್ಬಿತು. [illegible] ನಾದಿರಖಾನರಿಗೇ ಇಂತಹ ಅವಸ್ಥೆಯು ಸಂಭವಿಸಿತಲ್ಲಾ ಎಂದು ಅಫಘಾನದ ಮೇಲೆ ಅಭಿಮಾನ ಇಟ್ಟವರು ಚಿಂತೆಗೊಳಗಾದರು.

ಬಾಚಾ-ಇ-ಸಾಕೋವು ಕಾಬೂಲಿನಲ್ಲಿರುವ ನಾದಿರಖಾನರ ಸ್ವತ್ತುಗಳನ್ನೂ ಮನೆಗಳನ್ನೂ ಅಪಹರಿಸಬೇಕೆಂದು ಹುಕುಂ ಕೊಟ್ಟನಾಗಿ ಬೇರೊಂದು ವರ್ತಮಾನ. ಕಾಬೂಲನ್ನು ಆಕ್ರಮಿಸುವ ಸಲುವಾಗಿ ಅಮಾನುಲ್ಲಾರವರ ಸೈನ್ಯಗಳ ಗಜನಿಯ ಕಡೆಗೆ ನಡೆದಿರುವವಂತೆ.

ಕೋಸ್ಟ ಪ್ರಾಂತದ ಮಂಗಲರಿಂದ ಜನರಲ್ ನಾದಿರಖಾನರೂ ಅವರ ಸಹೋದರರೂ ಕೈದುಮಾಡಲ್ಪಟ್ಟರೆಂದು ಬೇರೊಂದು ವರ್ತಮಾನ. ಯಾವ ವರ್ತಮಾನವೂ ಖಂಡಿತವೆಂದು ನಂಬಲು ಸರಿಯಾದ ಆಧಾರಗಳಿರುವುದಿಲ್ಲ.

ನಾದಿರಖಾನರು ಕೊಲ್ಲಲ್ಪಟ್ಟರೆಂಬ ವರ್ತಮಾನವು ಸುಳ್ಳು. ಕಾಬೂಲಿನಲ್ಲಿ ಅವರನ್ನು ಎದುರುಗೊಳ್ಳುವುದಕ್ಕಾಗಿ ಸರ್ವ ಸನ್ನಾಹಗಳೂ ನಡೆದಿದ್ದವು. ಆದರೆ ಅವರು ಕಾಬೂಲಿಗೆ ಬಾರದಿದ್ದುದರಿಂದ ಅವರ ಸ್ವತ್ತುಗಳು ಅಪಹರಿಸಲ್ಪಡಬೇಕೆಂದು ಅಮೀರರ ಹುಕುಮಾಯಿತು. ಅಫಘಾನದ ದಂಗೆಯಲ್ಲಿ ಹೆಚ್ಚು ಭಾಗಿಯಾಗಿದ್ದ ಹಜರತ್ ಸಾಹೇಬರೆಂಬವರು ಈಗ ಅಕಸ್ಮಾತ್ ಕಾಬೂಲಿನಿಂದ ಮಾಯವಾಗಿರುವರು. ಬಾಚಾ-ಇ-ಸಾಕೋವು ತನ್ನ ಕಡೆಗೆ ಸೈನಿಕರನ್ನು ಕೂಡಿಸುತ್ತಾ ಇರುವನು.

ಕಂದಹಾರಿನಿಂದ ದೊರೆಯುವ ಕೊನೆಯ ವರ್ತಮಾನದಿಂದ, ಅಮಾನುಲ್ಲಾರವರ ಬಲವು ಅಲ್ಲಿ ದಿನೇ ದಿನೇ ಅಭಿವೃದ್ಧಿಹೊಂದುತ್ತ ಬರುತ್ತಿರುವದೆಂದು ತಿಳಿದುಬರುತ್ತದೆ. ಹಲವರು ಅವರಿಗೆ ಸಹಾಯಕರಾದವರಾಗಿ ಪ್ರತಿಜ್ಞೆಮಾಡಿರುವರು. ಅವರ ಹೊರತು ಇನ್ನೂ ನಾಲ್ಕೈದು ಸಾವಿರ ಜನರು ಸೇನೆಗೆ ಸೇರಿಸಲ್ಪಟ್ಟಿರುವರು. ರಮ್‌ಜಾನ್ ಮುಗಿದೊಡನೆ ಸೇನೆಗಳ ಚಲನೆಗೆ ಪ್ರಾರಂಭವಾಗುವುದಂತೆ.

ಜನರಲ್ ನಾದಿರಖಾನರು ಜೋಸ್ತ(?)ಪ್ರಾಂತ್ಯವನ್ನು ಪ್ರವೇಶಿಸಿದೊಡನೆ ಅವರಿಗೆ ಉತ್ತಮ ರೀತಿಯ ಸ್ವಾಗತವು ಅರ್ಪಿಸಲ್ಪಟ್ಟಿತು. ಎಲ್ಲಾ ಕಡೆಗಳ ಜನರು ಅವರನ್ನು ಸಂತೋಷದಿಂದ ಎದುರುಗೊಂಡರು. ಅವರು ಕೊಲ್ಲಲ್ಪಟ್ಟರೆಂಬ ವರ್ತಮಾನವು ತೀರಾ ಸುಳ್ಳಾಗಿರುತ್ತದೆ. ಜಲಾಲಾಬಾದಿನ ಸಮೀಪ ಪಡ್ಡಾ(?) ಎಂಬಲ್ಲಿ ೧೬ನೇ ತಾರೀಕಿನ ದಿನ ಒಂದು ಜಿರ್ಗಾಸಭೆಯು ನಡೆಯುವದಾಗಿಯೂ ಅದಕ್ಕೆ ಹಾಜರಾಗಬೇಕಾಗಿಯೂ ಅಲ್ಲಿಯ ಮುಲ್ಲಾಗಳಿಂದ ಬೇರೆ ಬೇರೆ ಕಡೆಗಳ ಮುಲ್ಲಾಗಳಿಗೆ ಆಮಂತ್ರಣ ಪತ್ರಿಕೆಗಳು ಬಂದಿದ್ದವು. ಅಮಾನುಲ್ಲಾರವರು ಪ್ರಾರಂಭಿಸಿದ ಸುಧಾರಣೆಗಳು, ಅವರ ಮತಕ್ಕೆ ವಿರೋಧವಾಗಿಲ್ಲವೆಂದು ಮುಲ್ಲಾರು ಮೊದಲೇ ಹಸ್ತಪತ್ರಿಕೆಗಳನ್ನು ಛಾಪಿಸಿ ಪ್ರಕಟಿಸಿದ್ದರು.

ಬರ್ಮಾದಲ್ಲಿ ಮಹಾತ್ಮಾಜೀಯವರು.

ರಂಗೂನಿನಿಂದ ಹೊರಟು ಮಹಾತ್ಮಾಜಿಯವರು ರಾತ್ರಿ ಮಸಾಲ್ಟಬಾನಿನ(?) ಕಡೆಗೆ ತೆರಳಿದರು. ರಾತ್ರಿಯಾಗಿದ್ದರೂ ಪ್ರತಿ ಸ್ಟೇಶನಿನಲ್ಲಿ ಜನರು ಕಿಕ್ಕಿರಿದು ನೆರೆದಿದ್ದು ಮಹಾತ್ಮಾಜಿಯವರ ದರ್ಶನವನ್ನು ಪಡೆಯಬೇಕೆಂದು ಬಹು ಉತ್ಸುಕತೆಯಿಂದ ಕಾದಿದ್ದರು. ಪೇಗು(?) ಎಂಬ ಸ್ಥಳದಲ್ಲಿ ಒಂದು ವಿಶೇಷ ಸಂಗತಿಯು ನಡೆಯಿತು. ಬರ್ಮೀಯ ಹೆಂಗಳೆಯರನೇಕರು ಒಟ್ಟಾಗಿ ಮಹಾತ್ಮಾಜಿಯವರಿಗೆ ಪುಷ್ಪಗಳನ್ನರ್ಪಿಸಿ ಅವರ ಪಾದಕ್ಕೆ ಪ್ರಣಾಮಗಳನ್ನು ಮಾಡಿದರು. ಮಸಾಲ್ಟಬಾನಿನಲ್ಲಿಯೂ ತುಂಬ ಜನರು ನೆರೆದಿದ್ದರು. ಮಳೆಯು ಬರುತ್ತಲಿದ್ದಿತು. ಆದರೂ ಜನರು ಕಡಿಮೆಯಾಗಿರಲಿಲ್ಲ. ಮಸಾಲ್ಟಬಾನಿನಲ್ಲಿ ಮೌಲ್‌ಮೆನ್ ಮುನಿಸಿಪಾಲಿಟಿಯ ಚೆಯರ್ಮೆನರು(?) ಅವರನ್ನು ಎದುರುಗೊಂಡು ಮುನಿಸಿಪಾಲಿಟಿಯ ಪರವಾಗಿಯೂ ಊರವರ ಪರವಾಗಿಯೂ ಒಂದು ಮಾನಪತ್ರವನ್ನು ಮರದ ಕರಡಿಗೆಯಲ್ಲಿಟ್ಟು ಅವರಿಗೆ ಸಮರ್ಪಿಸಿದರು. ಗಾಂಧಿಜಿಯವರ ಅಹಿಂಸಾತತ್ವದ ಶ್ರೇಷ್ಠತ್ವ, ಅಸ್ಪೃಶ್ಯತಾ ನಿವಾರಣೆಯ ಸಲುವಾಗಿ ಅವರು ಕೈಕೊಂಡ ಮಹತ್ಕಾರ್ಯ ಇವರ ವಿಷಯಗಳನ್ನು ಕುರಿತು ಮಾನಪತ್ರದಲ್ಲಿ ಚೆನ್ನಾಗಿ ಹೊಗಳಿ ಬರೆದಿದ್ದರು. ಇಷ್ಟು ಮಾತ್ರವಲ್ಲದೆ ಅವರು ಮಾಡುವ ಎಲ್ಲಾ ಸತ್ಕಾರ್ಯಗಳ ಕುರಿತಾಗಿಯೂ ದೇಶಸೇವೆಯ ಕುರಿತಾಗಿಯೂ ಮಾನಪತ್ರದಲ್ಲಿ ಉಲ್ಲೇಖಿಸಿದ್ದರು. ಮಹಾತ್ಮಾಜಿಯವರು ನೆರೆದವರಿಗೆ ಕೃತಜ್ಞತೆಯನ್ನು ಸೂಚಿಸಿ, ೧೯೦೯ನೇ ಇಸವಿಯಲ್ಲಿ ತಾನು ಮೌಲ್‌ಮೆನನ್ನು ಸಂದರ್ಶಿಸಿದ್ದೆನೆಂದು ಹೇಳಿದರು. ಮಾನಪತ್ರದ ಸಮರ್ಪಣೆಯಾದ ತರುವಾಯ ಅಸಂಖ್ಯಾತ ಬರ್ಮೀಯ ಹೆಂಗಸರು ಎದುರಿಗೆ ಬಂದು ಅವರಿಗೆ ಪುಷ್ಪಾದಿಗಳನ್ನು ಸಮರ್ಪಿಸಿದರು. ತದನಂತರ ಗಾಂಧಿಜಿಯವರು ಮೋಟಾರಕಾರಿನಲ್ಲಿ ಮುನಿಸಿಪಾಲಿಟಿಯ ಪ್ರೆಸಿಡೆಂಟರೊಂದಿಗೆ ಊರ ಪಟ್ಟಣವನ್ನು ಸಂದರ್ಶಿಸಿದರು. ಮಳೆಯು ಚೆನ್ನಾಗಿ ಬರುತ್ತಿದ್ದರೂ ಮೋಟಾರುಕಾರಿನ ಹಿಂದೆ ಜನರು ಗುಂಪುಗುಂಪಾಗಿ ಹೋಗುತ್ತಿದ್ದರು. ಕೊನೆಯವರು ಮಿ। ಪಿ. ಎನ್. ಮೆಹ್ತಾ(?)ರವರ ನಿವಾಸದಲ್ಲಿ ಇಳುಕೊಂಡರು.

ಮರುದಿನ ಬೆಳಿಗ್ಗೆ ಊರವರ ಮಾನಪತ್ರಕ್ಕೆ ತನ್ನ ಉತ್ತರವನ್ನು ಭಾಷಣರೂಪವಾಗಿ ಕೊಟ್ಟರು. ಬುದ್ಧನ ತತ್ವಗಳನ್ನು ಹೊಗಳಿದರು. ಸತ್ಯದ ಮೇಲೆ ಅತಿಶಯ ಪ್ರೇಮವಿರುವುದರಿಂದ ಅಹಿಂಸೆಯನ್ನು ಕೈಕೊಳ್ಳಬೇಕಾಗುವದೆಂದೂ, ದೇವರನ್ನು ಸಮೀಪಿಸಬೇಕಾದರೆ ಅಹಿಂಸೆಯನ್ನು ಆಚರಿಸಬೇಕೆಂದೂ ವಿವರವಾದ ಭಾಷಣವನ್ನು ಮಾಡಿದರು. ಸಾಯಂಕಾಲ ಅವರು ಶಾಲೆಗಳನ್ನು ಸಂದರ್ಶಿಸಿದರು, ಹೋದಲ್ಲೆಲ್ಲ ಅವರಿಗೆ ಮಾನಪತ್ರಗಳು ಸಮರ್ಪಿತವಾದವು. ಗುಜರಾಥಿ ಶಾಲೆಯನ್ನು ಸಂದರ್ಶಿಸಿ, ಸ್ವರಾಜ್ಯನಿಧಿಗೆ ಗುಜರಾಥಿಗಳು ಸಹಾಯವಾಗಬೇಕೆಂದು ಕೇಳಿಕೊಂಡರು. ೭೦೦೦ ರೂಪಾಯಿ ಕೊಡುವದಾಗಿ ನೆರೆದಿದ್ದವರು ವಾಗ್ದಾನ ಮಾಡಿದರು. ಹೆಂಗಸರ ಪ್ರತಿನಿಧಿಗಳ ಸಭೆಗೂ ಗಾಂಧಿಜಿಯವರು ಹೋಗಿದ್ದರು. ಅವರಿಗೆ ಅಲ್ಲಿ ಹಲವು ರೂಪಾಯಿಗಳು ಕೊಡಲ್ಪಟ್ಟವು.

ಸಿನೇಮಾ ಫಿಲ್ಮುಗಳಿಂದ ಸಮಾಜಶಿಕ್ಷಣಾ.

ರಷ್ಯಾದೇಶದಲ್ಲಿ ಸಿನೆಮಾ ಫಿಲ್ಮುಗಳ ಮೂಲಕ ಸಮಾಜದ ಜನರ ಶಿಕ್ಷಣೆಯಾಗುವ ತೆರದಲ್ಲಿ ಪ್ರಯತ್ನಿಸುತ್ತಾರೆ. ಪ್ರತಿಯೊಂದು ಫಿಲ್ಮಿನಲ್ಲಿಯೂ ಶಿಕ್ಷಣೆಗೆ ಸಂಬಂಧವಾದ ವಿಷಯಗಳು ಇದ್ದೇ ಇರುವವು. ಅವರು ಫಿಲ್ಮುಗಳನ್ನು ತಯಾರಿಸಲು ಕಥೆಯನ್ನು ಹುಡುಕುವ ಕ್ರಮವು ಈ ರೀತಿಯಾಗಿರುತ್ತದೆ—

ಮೊದಲಾಗಿ ಒಂದು ಸಭೆಯು ಕರೆಯಲ್ಪಡುವದು. [illegible] ಚಿತ್ರ ತಯಾರಿಸುವವರು, ಫೋಟೋಗ್ರಾಫರರು, ಕಥೆ ಬರೆಯುವವರು, ಕೆಲಸಗಾರರು, ಇನ್ನು ಕೆಲವರು(?), ಕೆಲವು ಸರಕಾರಿ ಉದ್ಯೋಗಸ್ಥರೂ ಈ ಸಭೆಯಲ್ಲಿ ಭಾಗ ವಹಿಸುವರು. ಮಧ್ಯದಲ್ಲಿ ಒಂದು ದೊಡ್ಡ ಮೇಜು ಇಟ್ಟು ಸುತ್ತಲೂ ಕೂಡುವವರು ಕುಳಿತುಕೊಳ್ಳುವರು. ಅಲ್ಲಿ ಚಾ ಮೊದಲಾದವುಗಳನ್ನು ಕುಡಿಯುತ್ತಾ ಯಾವ ಕಥೆಯನ್ನು ಆರಿಸಬೇಕು ಎಂಬುದರ ಬಗ್ಗೆ ಅವರೊಳಗೆ ಚರ್ಚೆಯು ನಡೆಯುವದು. ಬೇರೆ ಬೇರೆ ಜನರು ಬೇರೆ ಬೇರೆ ತರದ ವಿಷಯಗಳನ್ನು ಸೂಚಿಸುವರು. ಬಹಳ ಸಮಯದ ವರೆಗೆ ಚರ್ಚೆಯು ನಡೆಯುವದು. ಕೊನೆಗೆ ಅವರಲ್ಲಿ ಥಳ್ಳನೆ ಒಬ್ಬ ಕೆಲಸಗಾರನು ಎದ್ದು ನಿಂತು, ತಾನು ಚಾ ಕುಡಿಯುವ ತಟ್ಟೆಯನ್ನು ನೋಡಿ 'ಈ ಕುಪ್ಪಿಯ ತಟ್ಟೆಯನ್ನು ಹೇಗೆ ಮಾಡಿದರು? ಅದನ್ನು ಚಿತ್ರಗಳಮೂಲಕ ಪ್ರದರ್ಶಿಸಬೇಕು' ಎನ್ನುವನು. ಒಡನೆಯೇ ಎಲ್ಲರಿಗೂ ಈ ಆಲೋಚನೆಯು ಸಮಂಜಸವೆಂದು ತೋರಿ, ಅವರೆಲ್ಲರೂ ಕುಪ್ಪಿಯ ತಟ್ಟೆ ಮೊದಲಾದವುಗಳನ್ನು ತಯಾರಿಸುವ ಕಾರಖಾನೆಯತ್ತಲ್ಲಿಗೆ ತೆರಳುವರು. ಅಲ್ಲಿ ನಡೆಯುವ ಕೆಲಸಗಳ ಫಿಲ್ಮು ತಯಾರಿಸಲು ಎಲ್ಲಾ ಸನ್ನಾಹಗಳು ಮಾಡಲ್ಪಡುವವು. ಇದೇ ಕಾರಖಾನೆ, ಕಾರಖಾನೆಯಲ್ಲಿ ನಡೆಯುವ ವಿವಿಧ ಕೆಲಸಗಳು, ಕುಪ್ಪಿಯನ್ನು ಕರಗಿಸಿ ಬೇರೆ ಬೇರೆ ಆಕಾರಕ್ಕೆ ತರುವ ವಿಧ ಇವುಗಳೆಲ್ಲವೂ ಕೂಡಿರುವ ಒಂದು ಫಿಲ್ಮು ಬಹು ಶೀಘ್ರವಾಗಿಯೇ ತಯಾರಿಸಲ್ಪಡುವದು. ಈ ಚಿತ್ರವು ಕೊನೆಗೆ ಎಲ್ಲ ಕಡೆಗಳಲ್ಲಿಯೂ ಪ್ರದರ್ಶಿಸಲ್ಪಡುವದು. ಕುಪ್ಪಿ ತಯಾರಿಸುವವರ ವಿಷಯದಲ್ಲಿ ಮಾತ್ರ ಚಿತ್ರ ತೆಗೆವುದಲ್ಲ. ಹೀಗೆಯೆ ಹಲವು ಬಗೆಯ ಕಾರಖಾನೆಗಳಲ್ಲಿ ನಡೆಯುವ ಕಾರ್ಯ ಕಲಾಪಗಳ ಫಿಲ್ಮುಗಳು ತಯಾರಿಸಲ್ಪಡುವವು. ಇಂತಹ ಫಿಲ್ಮುಗಳನ್ನು ತಯಾರಿಸುವದರಿಂದ ಈ ವಿಷಯಗಳಲ್ಲಿ ಯಾವ ಅರಿವೂ ಇಲ್ಲದ ಮನುಷ್ಯನಿಗೆ ಚೆನ್ನಾಗಿ ಈ ವಿಷಯಗಳು ತಿಳಿಯುವವು.

ಪ್ರಕಟಣೆ.

ಮಂಗಳೂರಲ್ಲಿ 192xನೇ ಇಸವಿ [illegible] ತಿಂಗಳಲ್ಲಿ ಜರುಗಿದ ಚತುರ್ಥ ಕರ್ನಾಟಕ ಪ್ರಾಂತಿಕ ಆಯುರ್ವೇದೀಯ ಸಮ್ಮೇಳನ ಮತ್ತು ಪ್ರದರ್ಶನಗಳ ಬಗ್ಗೆ [illegible] ಯಾ ಅದಕ್ಕಿಂತ ಹೆಚ್ಚಿಗೆ ಮೊಬಲಗನ್ನು ಠೇವಣಿಯಾಗಿ ಕೊಟ್ಟಿರುವ ದಕ್ಷಿಣ ಕನ್ನಡಾ ಜಿಲ್ಲೆಯ ಸಮಸ್ತರಿಗೆ ಈ ಮೂಲಕ ತಿಳಿಸುವದೇನಂದರೆ—

ಕೆಳಗೆ ಕಾಣಿಸಿರುವ ವಿಷಯಗಳನ್ನು ಕುರಿತಾಗಿ ಪರ್ಯಾಲೋಚನೆ ಮಾಡಲು ಮೇಲ್ಕಂಡ ಸಮ್ಮೇಳನ ಪ್ರದರ್ಶನಗಳ ಸ್ವಾಗತ ಮಂಡಲದ ಒಂದು ಅಧಿವೇಶನವು ಇದೇ ಮಾರ್ಚ ತಾ. ೩೧ನೇ ರವಿವಾರ ಹಗಲು ಘಂಟೆ ೪-೩೦ಕ್ಕೆ ಮಂಗ್ಳೂರು ಬಂದರ [illegible] ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರುವದು. ಆ ಪ್ರಕಾರ ಕೂಡುವ ಸಭೆಯಲ್ಲಿ ಆಲೋಚನೆಗೆ ಬರಲಿರುವ ವಿಷಯಗಳು.—

1. ಸ್ವಾಗತ ಮಂಡಲದ ಕಾರ್ಯನಿರ್ವಾಹಕ ಸಮಿತಿಯು ಬರೆದ, ಸದರಿ ಸಮ್ಮೇಳನ ಪ್ರದರ್ಶನಗಳ ಮತ್ತು ಅವುಗಳಿಗೆ ಸಂಬಂಧಪಟ್ಟ ಕಾರ್ಯವೃತ್ತಾಂತವನ್ನು ಪರ್ಯಾಲೋಚಿಸುವದು.
2. ಲೆಕ್ಕ ಪತ್ರಗಳ ತನಿಖೆಯಾಗಿದ್ದು ಲೆಕ್ಕ ಪರಿಶೋಧಕರು ಬರೆದ [illegible] ಸ್ಟೇಟ್‌ಮೆಂಟನ್ನು ಪರ್ಯಾಲೋಚಿಸುವದು.
3. ಶಿಲ್ಕು ಮೊಬಲಗಿನ ವಿನಿಯೋಗದ ವ್ಯವಸ್ಥೆ ಮಾಡುವದು.
4. ಸದರಿ ಸಮ್ಮೇಳನ ಪ್ರದರ್ಶನಗಳಿಗೆ ಸಂಬಂಧಪಟ್ಟಿರುವದಾಗಿ ಸಭೆಯ ಮುಂದೆ ಬರುವ ಇತರ ಚಿಲ್ಲರೆ ವಿಷಯಗಳು.
5. ಸ್ವಾಗತ ಮಂಡಲದ ಕಾರ್ಯನಿರ್ವಾಹಕ ಮಂಡಲಗಳನ್ನು ಮುಕ್ತಾಯಗೊಳಿಸುವದು.

N. M. Shetty, B. R Haridas.
ಗೌರವ ಕಾರ್ಯದರ್ಶಿಗಳು.



Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,
MANGALORE.

[illegible] Public Conveyance Motor Service.
CHIKMAGALUR.
[illegible]ಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

[illegible] ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1). ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M. S. M Railway) ರೈಲ್ವೆ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡ ಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] 11-45ಕ್ಕೆ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ [illegible] ಸೇರಿ, ಅಲ್ಲಿಂದ ಕೂಡಲೇ ಹೊರಟು [illegible] ಧರ್ಮಸ್ಥಳ ರೋಡಿಗೆ 1-30ಕ್ಕೆ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, [illegible] ಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ಕೊಂಚವೇ ಹಣದಿಂದ ಸುಲಭವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೆ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಿನ [illegible] 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ [illegible] ಸೇರಿ ಅಲ್ಲಿಂದ ಬದಲಿ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ [illegible] 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪೂರ್ ಗೋವಾ, ಬೆಳಗಾಂವ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಟಿ. ಎನ್. ಹನುಮಂತಪ್ಪ, ಪ್ಯಾರಜೂನ್ ಸೊರಾಬ್, ಕೆ. ನಾರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರ ಪ್ರತಿದಿನವೂ [illegible] ಕಂಡವಳ ಮಾರ್ಗವಾಗಿಯೂ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., S. K. Mangalore.

[illegible]

ಮಲೇರಿಯಾನ
ಸರ್ವ ಜ್ವರ ಸಂಹಾರಿಣಿ

ಯುವಕ ವಿದ್ಯಾರ್ಥಿಯು ಲಕ್ಷಿಸ ತಕ್ಕೊಳ್ಳಬಾರದೇ

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯದ ಕಿಟ್ಟು ಹೋದಲ್ಲಿ, ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತಿ ಕಷ್ಟಕರವಾಗಿದೆ. ಅಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ [illegible], ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿ ವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ ಸಾಲಿಸಿವನ ಎಂಬ ಔಷಧವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ, ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತಿ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅನೇಕ ರಾತ್ರಿ ಹಗಲು [illegible] ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಬಿಸಿಯಾಗಿ ತಲೆ [illegible], ತಲೆ ನೋವು, ಜ್ಞಾಪಕಶಕ್ತಿ [illegible], ಮುಂತಾದ ವಿವಿಧ ರೋಗಗಳು ಹುಟ್ಟುವವು. ಈ ಅವಸ್ಥೆ ರೋಗಗಳ ಪರಿಹಾರವಾಗುವಂತೆಯೂ ಅಥವಾ ಅಂಥಾ ಅವಸ್ಥೆ ರೋಗಗಳು ಹುಟ್ಟದಂತೆಯೂ [illegible] ತೈಲದ ಉಪಯೋಗವು [illegible] ಓದುವ ಅಥವಾ [illegible] ಯುವಕರು ರಾತ್ರಿ [illegible] ತೈಲವನ್ನು ಹಾಕಿಕೊಳ್ಳುವದರಿಂದ ತಲೆ [illegible] ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು [illegible].

[illegible] ಕಾಲದಲ್ಲಿ [illegible] ಅನುಸರಿಸುವದು, ಬಾಹ ಯುವಕರ [illegible]

ಕ್ರಯ 8 ಔನ್ಸಿಗೆ ರೂ. [illegible]

ವಿಶೇಷ ಮಾಹಿತಿಗೂ, [illegible] ಮದ್ದುಗಳ ವಿವರಕ್ಕೂ, [illegible] ಮತ್ತು [illegible] ಮದ್ದುಗಳಿಗೂ ನಮೂನೆ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ. ಮಲೇರಿಯಾನ ಕಂಪೆನಿ,

ಮಂಗಳೂರು

ದಿ ಕೆನರಾ ನರ್ಸರಿ.

[illegible] ನಾರಾಯಣರಾಯನ [illegible] ನಾರಾಯ ರಾಯನು [illegible] ಆತನನ್ನು [illegible] ಬಂದಿರುವ [illegible] ನಾರಾಯಣರಾಯನ [illegible] ನನ್ನ [illegible] ಕುಳಿತುಕೊಳ್ಳಿ

ಅಣ್ಣಪ್ಪ ಶೆಟ್ಟಿಯು "ಅಯ್ಯಾ [illegible] ಕಂಪೆನಿಯ [illegible] ನೀವು [illegible] ಎಲ್ಲಾ [illegible]

"ಅಯ್ಯಾ ಈ [illegible] ದಿನದಿಂದ [illegible] ಕೆಲಸಕ್ಕಾಗಿ [illegible] ತೆಗೆದು [illegible] ಎಲ್ಲರೂ ಹುಚ್ಚನನ್ನು [illegible] ಮಾಡುವ [illegible] ನಾನು ಒಂದು [illegible]

(ಇನ್ನೂ ಇದೆ)

[illegible] & Sons.

AYURVEDIC PHYSICIANS

[illegible] MANGALORE, [illegible] Kanara.

([illegible] ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ — ಔಷಧ [illegible]ಳು.) —

1. [illegible] ಮತ್ತು ಮಾತ್ರೆ—

[illegible]

ಒಂದು ಬಾಟ್ಲಿ [illegible] ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ತ್ವರ್ಯದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಛಳಿಜ್ವರ, ಜ್ವರದಿಂದ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ: ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

[illegible] ಮಲೇರಿಯಾಗುಳಿಗೆ, ಜ್ವರಗಟ್ಟಿಯ ತಲೆ ಸ್ನಾನದ ತೈಲ, ಬಾಲಸ್ವಸ್ಥ ಗುಳಿಗೆ, ಮೂಲರೋಗದ ಗುಳಿಗೆ [illegible] ಗುಳಿಗೆ, ಚ್ಯವನ ಪ್ರಾಶಾವಲೇಹ, [illegible] ತೈಲ, [illegible] ಮತ್ತು ವಿಕ್ರಗಳು ಇವೇ ಮೊದಲಾದ ಸಮಸ್ತ ಔಷಧಿಗಳೂ ದೊರೆಯುವವು. ಹೆಚ್ಚಿನ ವರ್ತಮಾನ ತಿಳಿಯಬೇಕಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಲಿಚ್ಛೆಯಿದೆಯೇ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. [illegible]; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ [illegible] ಮಾತ್ರ; ಪ್ರತಿ ತಿಂಗಳ ಕೂಲಂಕುಷ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. [illegible]; ಐದು ವರ್ಷದ ಫಲ ರೂ. [illegible]; ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. [illegible]. ನೀವು [illegible]ಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. [illegible] [illegible] ನಿಮಗಾಗಿಯೇ ಬೇರೆ ಜಾದೂ ತಾಯಿತಕ್ಕೆ ರೂ. [illegible].

[illegible] ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) ಮದ್ರಾಸು. ತಾ. [illegible]—1924ರಲ್ಲಿ ಬರೆದುದು — ತಿರುತ್ತಾಣಿಯಲ್ಲಿನ ಹನುಮಾನ್ ಜ್ಯೋತಿಷಾಲಯದ ಹನುಮದುಪಾಸಿ ವಿ. ಕೆ. ಶಠಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. ಇದು 1923ನೇ ಇಸವಿ ನವಂಬರು ತಾ. [illegible]ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಾಜಿಯವರು 1924ನೇ ಇಸವಿ ಫೆಬ್ರುವರಿ ತಾ. [illegible]ರಲ್ಲಿ [illegible] ಘಂಟೆಗೆ ಕಾರಾವಾಸದಿಂದ ಮುಕ್ತರಾಗುವರೆಂದು ಬರೆದಿದ್ದಿತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. ಇವರಿಂದ ಈ ಜ್ಯೋತಿಷ್ಯದ ಅದ್ಭುತ ಶಕ್ತಿಸಾಧ್ಯಗಳನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ

V. K. Satagopachariar,
Hanuman Astrological Office,
TIRUTTANI, CHITTOOR DISTRICT.
Madras Presidency

ವಿ. ಕೆ. ಶಠಗೋಪಾಚಾರ್ಯರ್,
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಾಣಿ, ಚಿತ್ತೂರು ಜಿಲ್ಲಾ,
ಮದ್ರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು ಖಚಿತವಾಗುವುವು.

ವಿಶೇಷ ವಾರ್ತೆಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕೆನರಾ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

[illegible]

[illegible] ಗುಣ [illegible] ನಡೆದವರು [illegible] ಬಳಕೆ ಇಂಗ್ಲಿಷ್ [illegible] ಎಂದು ಇದು ಸ್ವತ್ತಿನ [illegible] ಆಗಿದ್ದಾರೆ. ದ್ರೇಕ್ ಸರ್ಟಿಫಿಕೇಟು ಮತ್ತು [illegible] ಸಹಾ ಹೊಸತಾಗಿ ಬಂದಿಯದೆ. ಹೆಚ್ಚಿನ ಮಾಹಿತಿಗೆ ಬರೆದು ತಿಳುಕೊಳ್ಳುವುದು.

ಕುಂಬಳೆ ರಾಘವೇಂದ್ರ ರಾವ್,
ಮರ್ಚೆಂಟ್, [illegible]

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co. Ltd.,
MANGALORE



ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 34/1929

ಎಸ್. ಎಮ್. ಸಯ್ಯದ ಅಬ್ದುಸಮದ ಸಾಹೇಬ ಮತ್ತು ಕೆ. ವೆಲ್ಲಾದಿನ ಸಾಹೇಬ—ವಾದಿರು.

ರಕ್ಕ್ವುದ್ದೀನ ಮಹಮದ ಇಬ್ರಾಹಿಮ ಸಾಹೇಬ, ಅಬ್ದು ಮಹಮದ ಸಾಹೇಬರ ಮಗ, ನಂಬ್ರ 154 ಕಾಂಡ್ಲಿ ಮೊಹಲ್ಲಾ ಬೊಂಬ್ಬಾಯಲ್ಲಿರುವವ—ಪ್ರತಿವಾದಿ.

ಸದರಿ ಪ್ರತಿವಾದಿಗೆ ವ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ

ವಾದಿರು ಮಂಗಳೂರ ಭಟ್ಕಳ ಬಜಾರಿನ ಅಂಗಡಿಯಿಂದ ಪ್ರತಿವಾದಿಗೆ ತಾ. 3—8—27 ವ 4—8—27ಲ್ಲು ಕೊಡ 2 ಸಾರಿ ಸಂದ ಐವಳ ಕ್ರಯದ ಬಾಕಿ ರೂ. 24—11—0 ಬಡ್ಡಿ ನೋಟೀಸ ಖರ್ಚು ರೂ. 5—5—0 ಕೂಡಾ ರೂಪಾಯಿ 30ಕ್ಕೆ ವಾದಿರು ಪ್ರತಿವಾದಿ ಮೇಲೆ ತಂದ ಮೇಲಿನ ದಾವೆಯ ತನ್ನಿಯು ತಾ. 28—3—29ಕ್ಕೆ ಇಟ್ಟಿದೆ. ಆ ದಿನ ಪ್ರತಿವಾದಿಯು ಸ್ವತಃ ಯಾ ವಕೀಲರ ಮುಖಾಂತರ ಹಗಲು 11 ಗಂಟೆಗೆ ಹಾಜರಾಗಿ ತನ್ನ ಉದಾಹರಣೆ ಕೊಡತಕ್ಕದ್ದು. ತಪ್ಪಿದರೆ ಪ್ರತಿವಾದಿಯ ಗೈರಹಾಜರಿಯಲ್ಲಿ ಸದರಿ ದಾವೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನವಾಗಲಾಗುವುದು.

ಮಂಗಳೂರು,
ತಾ. 19-3-29.

B. V. Baliga,
Vakil for Plaintiffs.

"ದಲಾಲನಾದ ಮೋಸ"

(ಬಾರಡಿ [illegible])

[ಈಗ ಭಾಷೆಯಲ್ಲಿ ಹಲವು ಕತೆಗಳನ್ನು ಬರೆದು ಯಶಸ್ವಿ ಕೀರ್ತಿಯನ್ನು ಸಂಪಾದಿಸಿದ ಮಿಸ್ಟರ್ ಬ್ರೌನ್, ಐ. ಸಿ. ಎಸ್, ಕತೆಗಾರರಿಗೆ "I have read your stories with much interest.........Please do not give up this work" ಎಂಬುದಾಗಿ ಪ್ರೋತ್ಸಾಹಿಸುವವರಿಂದ ಇಂಥ ಕತೆಗಳು ಇವರಿಗೆ ಪ್ರಸಿದ್ಧವಾಗುತ್ತವಲ್ಲದೆ ಅದನ್ನಾದರೂ ಪ್ರಕಟಿಸ ಬೇಕೆಂಬ ಉದ್ದೇಶದಿಂದ ಇವುಗಳು ಉಲ್ಲಿಖಿತವಾಗುವುವಲ್ಲದೆಂಬುವನ್ನು ನಮ್ಮ ವಾಚಕ ಮಹಾಶಯರು ತಿಳಿಯಬೇಕು.]

ಒಂದು

ಅವುದೊಂದು ಕಸಬೂ ದೊರೆಯದ ಹಲವು ವ್ಯಕ್ತಿಗಳು 'ಇನ್ಶೂರೆನ್ಸ್ ಕಂಪೆನಿಯ ದಲಾಲರೂ' 'ಬಟ್ಟೆದ ಕಾರ್ಖಾನೆಗಳ ಪ್ರತಿನಿಧಿಗಳೂ' ಇನ್ನು ವಿವಿಧ ಸಂಘಗಳ ಏಜಂಟರೂ ಎಂಬುದಾಗಿ ಬೇಕು ಬೇಕಾದ ಬಿರುದುಗಳನ್ನು ಧರಿಸಿ ಹಣವನ್ನು ಸಂಪಾದಿಸಿ ಮೋಟಾರ್ ಕಾರುಗಳಲ್ಲೋ, ಮೋಟಾರ್ ಸೈಕಲುಗಳಲ್ಲೋ ಪೇಟೆಗಳಲ್ಲೆಲ್ಲಾ ಮೆರೆಯುತ್ತಿರುವುದನ್ನು ಕಂಡು ಕಂಡು ನಾರಾಯಣರಾಯನ ಬಾಯಿಯಲ್ಲಿ ನೀರು ಊರಿತು. ಅವನಿಗೂ ತಾನೊಬ್ಬ 'ದಲಾಲ'ನೆನ್ನಿಸಿಕೊಂಡು ಪಟ್ಟಣದಲ್ಲಿರ ಬೇಕೆಂಬ ಆಶೆಯುಂಟಾಯಿತು. ...ಕಂತು ಉಡುಪಿಯಲ್ಲಿ ನಿಲ್ಲಲು ಸಾಧ್ಯವಿಲ್ಲ; ಮಂಗಳೂರಿನಲ್ಲಿ ದಲಾಲರು ತುಂಬಿರುವುದರಿಂದ ಅಲ್ಲಿ ನಿಂತರೆ ಆತನಿಗೆ ಪ್ರಯೋಜನವಾಗದು. ಅಷ್ಟೇ ಅಲ್ಲದೆ ಎಲ್ಲಾ ಕಂಪೆನಿಗಳಿಗೂ ದಲಾಲರಿರುವುದರಿಂದ ಈತನಿಗೆ ಅವುದೊಂದು ಏಜನ್ಸಿಯೂ ಇಲ್ಲಿ ಸಿಗುವಂತಿಲ್ಲ. ಆದರೆ ಅವರಂತೆಯೇ ಹಣವನ್ನು ಗಳಿಸಬೇಕೆಂಬ ಪ್ರಬಲ ಇಚ್ಛೆಯು ಇವನಲ್ಲಿರೆ. ಹೀಗಾಗಿ ಒಂದು 'ನವೀನ ಹಡಗು ಕಂಪೆನಿ'ಯ 'ಶೇರು'ಗಳನ್ನು ಮಾರಾಟ ಮಾಡುವ ದಲಾಲನಾದನು. ಈ 'ಶೇರು'ಗಳನ್ನು ಮಾರಾಟ ಮಾಡಿದರೆ ಒಮ್ಮೆಯೇ ಶ್ರೀಮಂತನಾಗಬಹುದೆಂಬದಾಗಿ ನಾರಾಯಣರಾಯನು ನಿಶ್ಚಯ ಮಾಡಿಕೊಂಡನು. ಮೊತ್ತಮೊದಲು ಮನೆ ಮನೆ ತಿರುಗಿ 'ಶೇರು'ಗಳನ್ನು ಮಾರಾಟ ಮಾಡಲು ಹೊರಟನು. ಮನೆ ಮನೆ ತಿರುಗಿ ಮಾರಾಟ ಮಾಡಲು ಅವುಗಳು ಬದನೆಕಾಯಿಗಳೇ? ಆದರಿಂದ ಅವನಿಗೆ ಪ್ರಯೋಜನವಾಗಲಿಲ್ಲ. ಆದುದರಿಂದ ನಾರಾಯಣರಾಯನು ಮದ್ರಾಸಿಗೆ ನಡೆದುಬಿಟ್ಟನು. ಮದ್ರಾಸಿನಲ್ಲಿ ಟ್ರಿಪ್ಲಿಕೇನಿನ ರಸ್ತೆಯ ಬದಿಯಲ್ಲೊಂದು ದೊಡ್ಡ ಮಂದಿರವನ್ನು ಬಾಡಿಗೆಗೆ ಪಡೆಸಿಕೊಂಡು ಅದರಲ್ಲಿ ಆತನ ಆಫೀಸು ತೆರೆಯಲಾಯಿತು. ನಾರಾಯಣರಾಯನು ಆ ಮಂದಿರದ ನೆಲಕ್ಕೆಲ್ಲಾ ಹಾಸಿಯ ಚಾಪೆಯನ್ನು ಮುಚ್ಚಿಸಿದನು. ಆಫೀಸಿನಲ್ಲಿ ತುಂಬಾ ಕುರ್ಚಿಗಳು, ಮೇಜುಗಳು, ಚಿತ್ರಗಳು, ಒಂದೆರಡು ಕಪಾಟುಗಳು, ಕಬ್ಬಿಣದ ಸಿಂಧೂಕ ಮುಂತಾದುವುಗಳನ್ನಿಟ್ಟು ಅದರಲ್ಲಿ ಒಂದು ವಿದ್ಯುತ್ ದೀಪಣಿಗೆಯೂ ಅಥವಾ 'ಇಲೆಕ್ಟ್ರಿಕ್ ಫೇನ್'ನ ಮತ್ತು 'ಟೆಲಿಫೋನು' ಸಂಯೋಗದ ವ್ಯವಸ್ಥೆಯನ್ನು ಮಾಡಿಸಿ ಆಫೀಸನ್ನು ಅಂದವಾದ ಗೃಹವಾಗಿ ಬದಲಾಯಿಸಿದಿಟ್ಟನು. ಆ ಗೃಹವಿದ್ದುದೇ ಒಂದು ದೊಡ್ಡ ರಸ್ತೆಯ ಪಾರ್ಶ್ವದಲ್ಲಿ. ಗೃಹದ ಮಧ್ಯದಲ್ಲೊಂದು ಅಗಲವಾದ ಮೇಜು ಇತ್ತು. ಆ ಮೇಜಿನ ಒಂದು ಪಾರ್ಶ್ವದಲ್ಲಿ 'ಟೆಲಿಫೋನಿನ ಯಂತ್ರ'ವಿತ್ತು. ಮತ್ತೊಂದು ಬದಿಯಲ್ಲಿ ಸ್ವರ್ಣಾಕ್ಷರದಂತೆ ಹೊಳೆಯುವ ಅಕ್ಷರಗಳುಳ್ಳ ವರ್ಗ ಊರಿಗದ ಪುಸ್ತಕಗಳೂ 'ಲೆಟರ್ ಕೇಜೂ' ಇದ್ದುವು. ಗೃಹದ ಹೊರಭಾಗದಲ್ಲಿ ಒಂದು ದೊಡ್ಡ 'ಸೈನ್ ಬೋರ್ಡ್' ತೂಗಹಾಕಲ್ಪಟ್ಟಿತ್ತು. ಅದರಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ "ನಾರಾಯಣರಾಯ, 'ನವೀನ ಕಂಪೆನಿಯ 'ಶೇರು'ಗಳ ದಲಾಲ" ಎಂಬುದಾಗಿ ಉಲ್ಲಿಖಿತವಾಗಿತ್ತು.

ನಾರಾಯಣರಾಯನ ತಂದೆ ಇದ್ದುದು ಕಾರ್ಕಳ ತಾಲೂಕಿನ ಒಂದು ಸಣ್ಣ ಹಳ್ಳಿಯಲ್ಲಿ. ಅವನ ತಂದೆಗೆ ಸ್ವಲ್ಪ ಆಸ್ತಿಯಿತ್ತು. ಕೃಷಿಕಾರ್ಯದಿಂದಲೂ ವ್ಯಾಪಾರದಿಂದಲೂ ಆತನ ತಂದೆಯು ವರ್ಷ ವರ್ಷವೂ ಹಣವನ್ನು ಕೂಡಹಾಕುತ್ತ ಬದುಕಿದ್ದನು. ನಾರಾಯಣರಾಯನಿಗೆ ಆ ಕಸಬಿನಲ್ಲಿ ಅನುರಾಗವಿರಲಿಲ್ಲ. ಆತನು ಅಲ್ಲಿಯ ಗ್ರಾಮ್ಯ ಶಾಲೆಯಲ್ಲಿ ಕಲಿತ ಮೇಲೆ ಮಂಗಳೂರಿಗೆ ಬಂದು ಬಿ. ಎ. ತನಕ ಅಧ್ಯಯನ ಮಾಡಿದನು. ಆ ಸಮಯದಲ್ಲಿ ಅವನ ತಂದೆಯು ತೀರಿಹೋದುದರಿಂದ ತಂದೆಯು ಮಾಡಿದ ಸಮಸ್ತ ಆಸ್ತಿಯನ್ನು ಮಾರಾಟಮಾಡಿ ನಾರಾಯಣರಾಯನು ಮದ್ರಾಸಿನಲ್ಲಿ ಅಷ್ಟು ವೈಭವದ ಆಫೀಸನ್ನು ತೆರೆದುಬಿಟ್ಟನು.

ಆಫೀಸನ್ನು ತೆರೆದಂದಿನಿಂದ ನಾರಾಯಣರಾಯನು ಆಫೀಸಿನ ಮಧ್ಯದಲ್ಲಿರುವ ಮೇಜಿನ ಇದಿರಲ್ಲಿಟ್ಟಿರುವ ತಿರುಗುವ ಕುರ್ಚಿಯ ಮೇಲೆ ಕುಳಿತುಕೊಂಡು ಒಂದು ಅದ್ಭುತ ಯುಕ್ತಿಯಿಂದ ಪಥಿಕರ ಮನಸ್ಸನ್ನು ಆಫೀಸಿನ ಕಡೆಗೆ ಆಕರ್ಷಣೆ ಮಾಡಲಾರಂಭಿಸಿದನು. ಅದರೂ ಆಫೀಸಿನ ಬಳಿಯ ರಸ್ತೆಯಲ್ಲಿ ಹೋಗುತ್ತಿರುವುದನ್ನು ಕಂಡೊಡನೆಯೇ ತನ್ನ 'ಟೆಲಿಫೋನಿನ ರಿಸೀವರ್'ನ್ನು ಕಿವಿಗೆ ಹಿಡಿದುಕೊಂಡು ಉಚ್ಚಸ್ವರದಿಂದ "ನಿಜವು; ಆ 'ಶೇರು'ಗಳನ್ನು ತಕ್ಕೊಂಡರೆ ತುಂಬಾ ಲಾಭವಾಗುವುದು. ಇಂದೇ ತೆಗೆದುಕೊಳ್ಳಿರಿ. ಶೇರುಗಳ ದರವೇರಲಿಕ್ಕಿದೆ" ಎಂಬುದಾಗಿ ಹೇಳುತ್ತಿದ್ದನು. ಆತನ ನಟನೆಯನ್ನು ನೋಡಿದವರಿಗೆ ಆತನು ನಿಜವಾಗಿ ಆರೊಡನೆಯೋ ಮಾತನಾಡುತ್ತಾನೆ ಎಂಬುದಾಗಿ ತೋರುತ್ತಿತ್ತು. ಹೀಗೆ ಒಂದೆರಡು ದಿನ 'ಟೆಲಿಫೋನಿ'ನಲ್ಲಿ ಮಾತನಾಡುತ್ತಲಿರುವಾಗ ಒಂದು ದಿನ ಒಬ್ಬ ವ್ಯಕ್ತಿಯು ಆತನ ಆಫೀಸಿನಲ್ಲಿ ಪ್ರವೇಶಿಸಿದನು. ಆತನನ್ನು ಕಂಡೊಡನೆಯೇ ನಾರಾಯಣರಾಯನು 'ಟೆಲಿಫೋನ'ನ 'ರಿಸೀವರ'ನ್ನು ಕಿವಿಯ ಹತ್ತರ ಹಿಡಿದು ಅವುದೋ ಒಂದು ಅದ್ಭುತ ಕಾರ್ಯದ ವಿಷಯ ಸಂಭಾಷಣೆ ನಡಸುತ್ತಿರುವಂತೆ ನಟಿಸಿ ಆಗಂತುಕನೊಡನೆ "ಸ್ವಲ್ಪ ತಾಳಿರಿ. ನಾನು 'ಟೆಲಿಫೋನಿ'ನ ಕಾರ್ಯವನ್ನು ಸಂಪೂರ್ಣ ಮಾಡಿ ನಿನ್ನೊಡನೆ ಮಾತನಾಡುತ್ತೇನೆ" ಎಂದು ಹೇಳಿದನು.

ಆಗಂತುಕನು "'ಟೆಲಿಫೋನಿ'ನಲ್ಲಿ ಎಂಥಾ ಕಾರ್ಯವಿದ್ದರೂ ಬೇಗ ಸಂಪೂರ್ಣ ಮಾಡಿರಿ. ನಾನು 'ಟೆಲಿಫೋನು' ಕಂಪೆನಿಯ ಕರ್ಮಚಾರಿಯು. 'ಟೆಲಿಫೋನ'ನ್ನು 'ಜೋಡಿಸ'ಲಿಕ್ಕೆ ಬಂದವನು" ಎಂದು ಹೇಳಿದನು.

ನಾರಾಯಣರಾಯನು "ಟೆಲಿಫೋನು ಕಂಪೆನಿಯ ಕರ್ಮಚಾರಿಯೇ? ಒಳ್ಳೇದು" ಎಂದು ಹೇಳಿ ಆಫೀಸನ್ನು ಬಿಟ್ಟು ಹೊರಕ್ಕೆ ಹೋಗಿ ನಿಂತುಕೊಂಡನು. ಆಗಂತುಕನು ತಾನು ಬಂದ ಕಾರ್ಯವನ್ನು ಪೂರೈಸಿ ಹೊರಟುಹೋದನು. ಹೀಗೆ ಎಷ್ಟೋ ದಿನಗಳು ಕಳೆದುಹೋದುವು. ಆದರೂ ಒಬ್ಬನೇ ಒಬ್ಬನಾದರೂ ನಾರಾಯಣರಾಯನೊಡನೆ 'ಶೇರು'ಗಳನ್ನು ಕೊಂಡುಕೊಳ್ಳಲು ಬರಲಿಲ್ಲ.

ಎರಡು.

ವೈಶಾಖ ಮಾಸವು. ಸಮಯವು ಸಾಧಾರಣ ಎರಡು ಗಂಟೆಯಾಗಿರಬಹುದು. ಎರಡು ಗಂಟೆಯ ಸಮಯದ ಸಾಧಾರಣ ೧೧೦ ಡಿಗ್ರಿಯ ಉಷ್ಣತೆಯು ಮನುಷ್ಯನನ್ನು ಹುಚ್ಚನಾಗಿ ಮಾಡುವಷ್ಟರ ಮಟ್ಟಿಗೆ ಪ್ರಬಲವಾಗಿತ್ತು. ಈಗ ಹಗಲಿನ ಉಷ್ಣವು ಅಷ್ಟೊಂದು ಅತಿಶಯವಾಗಿಲ್ಲ — ಉಷ್ಣತೆಯು ಕಡಿಮೆಯಾಗಿರುವುದು. ಆದರೂ ನಾರಾಯಣರಾಯನು ಮಾತ್ರ ಉಷ್ಣವನ್ನು ಸಹಿಸಲಾರದೆ ತನ್ನ ಆಫೀಸಿನ ಹೊರಗಣ ಜಗಲಿಯ ಮೇಲೆ ಒಂದು ಕುರ್ಚಿಯಲ್ಲಿ ಕುಳಿತುಕೊಂಡು ಏನನ್ನೊ ನೋಡುತ್ತಲಿದ್ದನು. ಅಷ್ಟರಲ್ಲಿ ಎದ್ದು ಒಳಕ್ಕೆ ಹೋಗಿ 'ಟೆಲಿಫೋನಿನ ರಿಸೀವರ'ನ್ನು ಕಿವಿಗೆ ಇಟ್ಟುಕೊಂಡನು. ಏತಕ್ಕೆಂಬುದು ನಾವರಿಯೆವು. ಆ ಸಮಯದಲ್ಲಿ ರಸ್ತೆಯಲ್ಲಿ ಸಂಚರಿಸುವ ಜನರ ಸಂದಣಿಯು ಅಷ್ಟೊಂದು ಸಾಂದ್ರವಾಗಿರಲಿಲ್ಲ. ಆಗ ಒಬ್ಬ ಅಪರಿಚಿತ ವ್ಯಕ್ತಿಯು ನಾರಾಯಣರಾಯನ ಸಮೀಪಕ್ಕೆ ಬಂದು ನಿಂತು ನಮಸ್ಕಾರಮಾಡಿದನು. ನಾರಾಯಣರಾಯನು ಕುಳಿತುಕೊಳ್ಳುವುದಕ್ಕಾಗಿ ಅವನಿಗೊಂದು ಬೆಂಚನ್ನು ತೋರಿಸಿದನು. ಆತನು ಆ ಬೆಂಚಿನ ಮೇಲೆ ಕುಳಿತುಕೊಂಡನು.

"ನಾನು ನಿಮ್ಮೊಡನೆ ಒಂದು ಅಗತ್ಯವಾದ ಅನುಭವವನ್ನು ಪಡೆಯುವ ಉದ್ದೇಶದಿಂದ ಬಂದಿರುವೆನು. ನಾನೊಬ್ಬನು ಏನೊಂದೂ ಅನುಭವವಿಲ್ಲದವನಾಗಿದ್ದೇನೆ. ನಾನು ಸುಣ್ಣಗಾರೆಯ ಕೆಲಸಮಾಡುವ ಮೇಸ್ತ್ರಿಯು. ಇಲ್ಲಿಯವರೆಲ್ಲರೂ ನಾನಾರೆಂಬುದನ್ನು ಬಲ್ಲರು. ನನ್ನ ಹೆಸರು ಅಪ್ಪಣ್ಣ ಎಂದಾಗಿದೆ. ಆದುದರಿಂದ ಎಲ್ಲರೂ ನನ್ನನ್ನು ಅಪ್ಪಣ್ಣ ಮೇಸ್ತ್ರಿ ಎಂಬದಾಗಿ ಸಂಬೋಧಿಸುವರು. ನನಗೆ ನಿಮ್ಮಿಂದ ಒಂದು ಒಳ್ಳೇ ಅನುಭವವು ಬೇಕಾಗಿದೆ" ಎಂದು ಬೆಂಚಿನ ಮೇಲೆ ಕುಳಿತುಕೊಂಡ ವ್ಯಕ್ತಿಯು ಹೇಳಿದನು.

"ಅಪ್ಪಣ್ಣ ಮೇಸ್ತ್ರೀ, ನಿನಗೆ ಬೇಕಾದ ಅನುಭವವಾವುದಿತ್ತು?" ಎಂಬುದಾಗಿ ನಾರಾಯಣರಾಯನು ಪ್ರಶ್ನಿಸಿದನು.

"ಅಯ್ಯಾ, ನನ್ನೊಡನೆ ಸ್ವಲ್ಪಂತೆ ಹಣವಿದೆ. ಈಗ ನನ್ನ ಪ್ರಾಯವು ಏರುತ್ತ ಹೋಗುತ್ತದೆ. ಆದುದರಿಂದ ಆ ಹಣದಿಂದ ಮುದಿ ಪ್ರಾಯದಲ್ಲಿ ಜೀವನವು ನಡೆಯುವಂತೆ ಏನಾದರೊಂದು ಉಪಾಯವನ್ನು ಮಾಡಬೇಕಾಗಿದೆ. ನಾನು ಹಳ್ಳಿನ ಅನುಭವವಿಲ್ಲದವನಾದುದರಿಂದ ಆ ಹಣದಿಂದ ಆವ ಉಪಾಯವನ್ನು ಮಾಡಬಹುದೆಂಬುದು ನನಗೆ ತಿಳಿಯುವುದಿಲ್ಲ. ಅದಕ್ಕಾಗಿಯೇ ನಾನು ನಿಮ್ಮಲ್ಲಿಗೆ ಬಂದುದು. ನೀವು ನನಗೆ ಯೋಗ್ಯ ಉಪದೇಶವನ್ನು ಕೊಡುವಿರಾ?" ಎಂದು ಮೇಸ್ತ್ರಿಯು ಉತ್ತರವಿತ್ತನು.

"ಅಪ್ಪಣ್ಣ ಮೇಸ್ತ್ರಿ, ಅನೇಕ ಉಪಾಯಗಳಿವೆ. ಆದರೆ ನಿನ್ನೊಡನೆ ಎಷ್ಟು ಹಣವಿದೆ?" ಎಂಬುದಾಗಿ ನಾರಾಯಣರಾಯನು ಕೇಳಿದನು.

"ನನ್ನೊಡನೆ ಒಂದು ಸಾವಿರ ರೂಪಾಯಿ ಇದೆ. ಆ ಹಣದಿಂದ ವರ್ಷಕ್ಕೆ ಎಷ್ಟು ಮುನಾಫೆಯನ್ನು ಮಾಡಿ ತೋರಿಸುವಿರಿ?" ಎಂದು ಮೇಸ್ತ್ರಿಯು ಹೇಳಿದನು.

"ಒಂದು ಸಾವಿರ ರೂಪಾಯಿಯ 'ಶೇರು'ಗಳನ್ನು ತಕ್ಕೊಂಡರಾಯಿತು. ತಿಂಗಳಿಗೆ ಏನಿಲ್ಲವೆಂದರೂ ೫೦—೬೦ ರೂಪಾಯಿ ಸಿಕ್ಕಲಿಕ್ಕೆ ಅಡ್ಡಿಯಿಲ್ಲ. ನಾನೇ 'ಶೇರು'ಗಳನ್ನು ಮಾರಾಟ ಮಾಡುವ ದಲಾಲನಾಗಿರುವೆನು. ನಾನು ನಿನಗೆ ಒಂದು ಅತ್ಯುತ್ತಮ ಕಂಪೆನಿಯ 'ಶೇರು'ಗಳನ್ನು ಕೊಡುವೆನು" ಎಂದು ನಾರಾಯಣರಾಯನು ಹೇಳಿದನು.

ಅಪ್ಪಣ್ಣ ಮೇಸ್ತ್ರಿಯು "ಅಯ್ಯಾ, ನೀವು ವಿದ್ಯಾವಂತರಾಗಿರುವಿರಿ. ಅವುದನ್ನು ಮಾಡಿದರೆ ಒಳ್ಳೇದಾಗಬಹುದೋ ಅದನ್ನೇ ದಯವಿಟ್ಟು ನನಗೆ ಸೂಚಿಸಬೇಕು. ಹಲವರು ನನಗೆ ಹಣವನ್ನು 'ಬ್ಯಾಂಕಿ'ನಲ್ಲಿಡಬೇಕೆಂಬದಾಗಿ ಸೂಚನೆ ಕೊಟ್ಟರು. ಆದರೆ ಕೆಲವರು ಅನೇಕ 'ಬ್ಯಾಂಕು'ಗಳು ದಿವಾಳಿಯಾಗಿರುವುದರಿಂದ ಅದು ಬೇಡವೆನ್ನುತ್ತಾರೆ. ಆಗ ನನ್ನ ಸ್ನೇಹಿತನೊಬ್ಬನು ಅವುದಾದರೂ ಯೋಗ್ಯ ಕಂಪೆನಿಯಲ್ಲಿ 'ಶೇರು'ಗಳನ್ನು ತೆಗೆದುಕೊಳ್ಳುವುದು ಒಳ್ಳೇದು ಎಂಬುದಾಗಿ ಹೇಳಿದನು. ನಾನು ಯಾವಾಗಲೂ ಈ ದಾರಿಯಿಂದಲೇ ನನ್ನ ಕೆಲಸಕ್ಕಾಗಿ ಹೋಗುವುದು. ನಾನು ರಸ್ತೆಯ ಮೇಲೆ ಹೋಗುವಾಗ 'ಟೆಲಿಫೋನಿ'ನಲ್ಲಿ 'ಶೇರು'ಗಳನ್ನು ತೆಗೆದುಕೊಳ್ಳಬೇಕಾಗಿ ಆರಿಗೋ ಬೋಧಿಸುತ್ತಿರುವುದನ್ನು ಕೇಳಿರುವೆನು. ಆದುದರಿಂದಲೇ ನಾನು ಕೂಡಾ ಇಲ್ಲಿಗೆ ಬಂದುದು. ನೀವು ವಿದ್ಯಾವಂತರಾಗಿರುವಿರಿ; ನೀವು ಅವ ಉಪದೇಶವನ್ನು ಕೊಡುವಿರೋ ಅದನ್ನು ನಾನು ಅನುಸರಿಸುವೆನು" ಎಂದನು.

"ಒಂದು ಒಳ್ಳೇ 'ಹಡಗು ಕಂಪೆನಿ'ಯ 'ಶೇರು'ಗಳು ಇನ್ನು ಬಾಕಿ ಇವೆ. ನೀನು ಆ 'ಹಡಗು ಕಂಪೆನಿ'ಯ 'ಶೇರು'ಗಳನ್ನು ತೆಗೆದುಕೊಳ್ಳುವುದು ಲೇಸು. ಇದರಿಂದ ನಿನಗೆ ತುಂಬಾ ಲಾಭವಾಗುವುದು. ನೀನೇನಾದರೂ ಹಣವನ್ನು ತಂದಿರುವೆಯಾ?" ಎಂದು ನಾರಾಯಣರಾಯನು ಕೇಳಿದನು.

ಅಪ್ಪಣ್ಣ ಮೇಸ್ತ್ರಿಯು "ಇಲ್ಲ. ನಾನು ಇಂದು ಹಣವನ್ನು ತಂದಿಲ್ಲ. ನೀವು ಎಲ್ಲವನ್ನೂ ಸಿದ್ಧಪಡಿಸಿ ಇಡಿರಿ. ನಾನು ಹಣವನ್ನು ನಾಳೆ ಸಾಯಂಕಾಲದೊಳಗೆ ತಲ್ಪಿಸುವೆನು" ಎಂದು ಹೇಳಿ ನಮಸ್ಕಾರ ಮಾಡಿ ಹೊರಟುಹೋದನು. ನಾರಾಯಣರಾಯನಿಗೆ ಆ ದಿವಸ ಬೇರೇನೂ ಹೆಚ್ಚಿನ ಕೆಲಸವಿರಲಿಲ್ಲ. ಸಂಧ್ಯಾಕಾಲದಲ್ಲಿ ಆಫೀಸನ್ನು ಮುಚ್ಚಿ ನಾರಾಯಣರಾಯನು ಮನೆಗೆ ತೆರಳಿದನು.

ಮೂರು.

ಮರುದಿನ ಸಂಧ್ಯಾಕಾಲದಲ್ಲಿ ಅಪ್ಪಣ್ಣ ಮೇಸ್ತ್ರಿಯು ನಾರಾಯಣರಾಯನ ಆಫೀಸಿಗೆ ಬಂದನು. ನಾರಾಯಣರಾಯನು ಬಹಳ ಸಮಾದರದಿಂದ ಆತನನ್ನು ಕುಳ್ಳಿರಿಸಿ ವೈದ್ಯುತಿಕ ಬೀಸಣಿಗೆಯನ್ನು ಬಿಚ್ಚಿದನು. ಬೀಸಣಿಗೆಯು 'ಬೊರ್ರ್' ಎಂದು ಶಬ್ದ ಮಾಡುತ್ತ ತಿರುಗಲಾರಂಭಿಸಿತು. ಆಫೀಸಿನೊಳಗೆ ಹಿಂಬದಿಯಲ್ಲಿ ಒಂದು ಪರದೆಯು ತೂಗಹಾಕಲ್ಪಟ್ಟಿತ್ತು. ನಾರಾಯಣರಾಯನು ಆ ಮೇಲೆ ಒಂದಿಷ್ಟು ಪರಿಮಳ ದ್ರವ್ಯವನ್ನು ಸುರಿದೊಡನೆಯೇ ಆಫೀಸಿನೊಳಗೆಲ್ಲಾ ಪರಿಮಳವು ತುಂಬಿಹೋಯಿತು.

ಅಪ್ಪಣ್ಣ ಮೇಸ್ತ್ರಿಯು "ಅಯ್ಯಾ ಈಗ ಗಂಟೆ ಏಳಾಯಿತು. ನಿಮಗೆ ಮನೆಗೆ ಹೋಗಲು ವಿಳಂಬವಾಗುವುದೇ? ನನಗೆ ಅತಿ ಅಗತ್ಯವಾದ ಕೆಲಸವಿದ್ದುದರಿಂದ ನಾನು ಬರುವಾಗ ವಿಳಂಬವಾಯಿತು. ಕ್ಷಮಿಸಬೇಕು" ಎಂದು ಹೇಳಿ ಕಂಕುಳಲ್ಲಿನ ಒಂದು ಗಂಟನ್ನು ಇಳಿಸಿ ತೆಗೆದನು. ಆ ಗಂಟು ಬಿಚ್ಚಲ್ಪಟ್ಟಿತು. ಆಗಳೊಳಗೆ ಹತ್ತು, ಹತ್ತು ರೂಪಾಯಿಯ ಎಷ್ಟೋ ನೋಟುಗಳು ತೋರಿದುವು. ನೋಟುಗಳೆಲ್ಲವೂ ಹೊಸ ನೋಟುಗಳೇ ಆಗಿದ್ದುವು. ಇದನ್ನು ನೋಡಿ ನಾರಾಯಣರಾಯನ ಮನಸ್ಸು ಉತ್ಫುಲ್ಲವಾಯಿತು.

"ಅಯ್ಯಾ, ಈ ನೋಟುಗಳೆಲ್ಲವೂ ನನಗೆ ನನ್ನ ಅದೃಷ್ಟದಿಂದಲೇ ಸಿಕ್ಕಿದುವು. ಒಂದು ದಿವಸ ನಾನು ಒಂದು ಮನೆಯಲ್ಲಿ ಸುಣ್ಣಗಾರೆಯ ಕೆಲಸಕ್ಕಾಗಿ ಹೋಗಿದ್ದೆನು. ಅದೊಂದು ಬಾಡಿಗೆಯ ಮನೆಯಾಗಿತ್ತು. ಆ ಮನೆಯ ಗೋಡೆಗಳಿಗೆ ಸುಣ್ಣ ಬಳಿಯುವ ಮತ್ತು ಹೋದಲ್ಲೆಲ್ಲಾ ಗಾರೆಯನ್ನು ಹಾಕುವ ಕೆಲಸವನ್ನು ನಾನು ವಹಿಸಿಕೊಂಡಿದ್ದೆನು. ಕೂಲಿಯವರೆಲ್ಲರೂ ಸುಣ್ಣವನ್ನೂ ಹೊಯಿಗೆಯನ್ನೂ ಮಿಶ್ರಣ ಮಾಡುವ ಕೆಲಸದಲ್ಲಿದ್ದರು. ನಾನು ಒಂದು ಪಾರ್ಶ್ವದ

(ಇನ್ನೂ ಇದೆ. ಮುಂದುವರಿಯುವುದು)



COUPE CABRIOLET WITH DICKEY SEAT

FIVE-PASSENGER TWO-DOOR SEDAN

FIVE-PASSENGER PHAETON

The Story of a New
OAKLAND
Series 6-212
the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES *of the* NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are six inches longer and all bodies are much lower.

Seat positions and contours are improved.

Spanish leather upholstery on open models and Sport Cabriolets.

Leather upholstery available on all closed models.

Improved body hardware on all models.

Instrument board beautifully carved in oak leaf design and contains three clusters of instruments with platinum-silver dials.

New and attractive Duco color combinations on all models.

Narrow front corner posts on closed models.

Forward-folding windshields on open models.

For Further Particulars Apply to **RAO & RAO**

Dealers of Oakland, Pontiac, Chevrolet, & Vauxhall Cars,

Maidan Road, MANGALORE

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಪ್ಪದೆ ಸೇವಿಸುವವರಿಗೆ, ಕಾರಣವಿಲ್ಲದೆ ಬರುವ ರೋಗಗಳು ಶೀಘ್ರದಲ್ಲಿ ಗುಣವಾಗಿ, ದೇಹವನ್ನು ಕಾಪಾಡುತ್ತದೆ.

... ಶೀತ, ಜ್ವರ, ಕೆಮ್ಮು, ಅಜೀರ್ಣ, ... ಮೊದಲಾದ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ... ಕಸ್ತೂರಿ ಮಾತ್ರೆಯೆಂಬ ಹೆಸರನ್ನು ನೋಡಿ ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

... ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ್.

(ಕ್ಷಯಕ್ಕೆ)

... ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

... ಸೀಸೆ 1ಕ್ಕೆ ರೂ. 0—8—0.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ...
ಮಂಗಳೂರು ...

ಕಾವ್ಯಗಳು

ಈ ಕೆಳಗಿನ ಕಾವ್ಯ ಪುಸ್ತಕಗಳಿಗೆ ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ ... ವಿಶೇಷಾಂಶಗಳೊಂದಿಗೆ ಬರೆದಿರುತ್ತೆ ... ಕಾವ್ಯ 1, 2, 3ನೆ ಸರ್ಗಗಳು

ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
ರಘುವಂಶ ಕಾವ್ಯ 2, 3, 4, 5ನೆ ಸರ್ಗಗಳು	
ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
... ಸಂದೇಶ (ಪೂರ್ತಿ)	3—0—0
... 1ನೇ ಸರ್ಗ	0—10—0
ವಿವೇಕ ಚೂಡಾಮಣಿ ಶ್ರೀ ಶಂಕರಾಚಾರ್ಯ ... ವೇದಾಂತಸಾರ ಟೀಕಾ ತಾತ್ಪರ್ಯದೊಂದಿಗೆ	3—0—0

ಲೇಖ್ಯ ಪ್ರದರ್ಶಿನಿ,

ಅರ್ಜಿ, ಪತ್ರ, ರಶೀದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ ಇವೆ. ಕ್ರಯ 0—3—0.

ಎಚ್. ಎಸ್. ರಾವ್ ಬ್ರದರ್ಸ್,

ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು ಸಿಟಿ

ತಯಾರಾಗಿದೆ! ತಯಾರಾಗಿದೆ!!.

ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,
..., ಮಂಗಳೂರು

ಚಂದಾ ನಿರ್ಣಯ: — ವರ್ಷ ಒಂದಕ್ಕೆ ರೂಪಾಯಿ 2-0-0 | Registered No. M. 489 | ಟಪ್ಪಾಲು ಹಾಸಲು ಸೇರಿ ರೂಪಾಯಿ 2-1

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible] ॥ ೧ ॥
ದೊರೆಯಲನುಪಮರತ್ನಗಳು [illegible] ಬರುತಿರುವ ॥
ಗರಲಕವರಂಜಿದರೆ ಸುಧೆಯನು [illegible] ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೨೯ನೇ ಶುಕ್ರವಾರ ಮಾರ್ಚಿ ೧೯೨೯. (29-3-29.) ಸಂಚಿಕೆ ೧೩.

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು: — ಉಡುಪಿ.

Branches:—COONDAPOOR. Mangalore. ಶಾಖೆ: — ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅಪ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000-
2. ತೆತ್ತು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,84,218-5-0.

Statement of Affairs of the Canara Banking Corporation Udipi, Limited as on 28th February 1929

	CAPITAL AND LIABILITIES.			PROPERTY AND ASSETS	
1	Paid up Capital	Rs. 2,12,630-0-0	1	Premises Building, Furniture &c.	Rs 9,215-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,84,218-5-0
3	Deposits	„ 16,01,517-5-10	3	Investments on Approved Securities	„ 17,86,710-11-10
4	Due to Bankers on a/c of Overdrafts and Loans a/c	„ 2,12,164-1-5	4	Bills for collection as per Contra	„ 12,347-0-0
5	Sundry Persons' a/c for Bills for collection as per Contra	„ 12,347-0-0	5	Cash in hand & with Bankers.	„ 43,713-12-8
9	Sundries including P & L items	„ 20,846-6-3			
	Total	21,86,204-13-6		Total	21,86,204-13-6.

Office of the Corporation, UDIPI, 7-3-'29.

N. ANANDA RAO, Secretary.

ಅಮೃತಾಂಜನ.

[illegible]

ರಿಂಗ್‌ವರ್ಮ್ ಮುಲಾಮು: — [illegible]

ದಂತಮಂಜನ: — [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು — ದಿ ಯೂನಿಯನ್ ವರ್ಕ್ಸ್, ಮಂಗಳೂರು.

ಬಹುಮಾನ! ಬಹುಮಾನ!

1929ನೇ ವರುಷದ ಸರಸ್ವತೀ ಕ್ಯಾಲೆಂಡರ್.

ಮಹನೀಯರೇ ನಮ್ಮಲ್ಲಿ ದೊರೆಯುವ ಕನ್ನಡ ಕಥೆ, ಕಾವ್ಯ, ನಾಟಕ, ಕೀರ್ತನೆ, [illegible] ಪಟ್ಟಿಗೆ ಕೂಡಲೇ ಬರೆದು ತರಿಸಿಕೊಳ್ಳಿರಿ.

ಈ ಮೇಲೆ [illegible] ಪುಸ್ತಕಗಳು ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು.

ಸೌಭಾಗ್ಯ ಲಕ್ಷ್ಮಿ	1-8-0	ಧರ್ಮ ಸಾಮ್ರಾಜ್ಯಂ	1-4-0
ವಿಮಲಾ ದೇವಿ	1-12-0	ಲಾವಣ್ಯ ತಿಲೋತ್ತಮೆ	0-12-0
ವಚನ ಭಾರತ	0-12-0	ವಚನ ರಾಮಾಯಣ	1-8-0
ಆನಂದ ಮಠ	1-13-0	ಜೈಮಿನಿ ಭಾರತ	1-8-0

ಲಾ ಪುಸ್ತಕಗಳು.

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4-0-0
„ „	ಭಾಗ II	4-8-0
ವ್ಯವಹಾರ ಶಿಕ್ಷಾ ಬೋಧಿನಿ		2-8-0
ಕ್ರಿಮಿನಲ್ ಪ್ರೊಸೀಜರ್ ಕೋಡ್		3-0-0
ಇಂಡಿಯನ್ ಪಿನಲ್ ಕೋಡ್		2-8-0

ಶ್ರೀ ಸರಸ್ವತೀ ಭಂಡಾರ.
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.
(ಕೈಸ್ತಂಗಳಲ್ಲಿ ಇರುವ ಎಲ್ಲಾ ಪುಸ್ತಕಗಳೂ [illegible])

ಫೆಲೂನಾ

ಹೆಂಗಸರಿಗೂ ಹುಡುಗಿಯರಿಗೂ ಮಾತ್ರ.

ಖಂಡಿತ ಗುಣಕಾರಿಯಾದ ಔಷಧಿ.

[illegible]ವಾಗಿ ದೊರೆಯುವ ಅರಿಷ್ಟಗಳಿಗಿಂತಲೂ ಫೆಲೂನಾ ಮಾತ್ರೆಗಳು ವಿಶೇಷ ಗುಣಕಾರಿಯಾಗಿವೆ, ಸ್ತ್ರೀಯರ ಆರೋಗ್ಯದ ಮುಖ್ಯಸ್ಥಳವಾದ ಇಂದ್ರಿಯಗಳನ್ನು ಅವು ಶುದ್ಧಪಡಿಸಿ, ಸರಿಪಡಿಸಿ, ಬಲಪಡಿಸಿ, ಇಂದ್ರಿಯ ವ್ಯಾಪಾರಗಳು ಚೆನ್ನಾಗಿ ನಡೆಯುವಂತೆ ಮಾಡುವುವು. ಕೆಲವು ಸಮಯದ ವರೆಗೆ ಫೆಲೂನಾ ಮಾತ್ರೆಗಳನ್ನು ಸೇವಿಸುವುದರಿಂದ, ಬಳಲಿದ ಹೆಂಗಸು, ಅಥವಾ ಶಕ್ತಿಹೀನ ಹುಡುಗಿಯು ಶಕ್ತಿವಂತ ರಾಗುವರು. ಆರೋಗ್ಯವು ಸಂಪಾದಿಸಲ್ಪಡುವುದು. ಸೇವನೆಯು ಮುಂದರಿಯುತ್ತಿರುವಷ್ಟಕ್ಕೆ, ಪ್ರಕೃತಿ ಸ್ವಭಾವಕ್ಕನುಕೂಲವಾಗಿ ಇಂದ್ರಿಯಗಳು ಕೆಲಸಮಾಡುವುವು. ಫೆಲೂನಾ ಮಾತ್ರೆಗಳ ಸಹಾಯದಿಂದಲೇ ಇಷ್ಟೆಲ್ಲ ಪ್ರಯೋಜನವುಂಟಾಗುವುದು.

ಫೆಲೂನಾ ಮಾತ್ರೆಗಳನ್ನು ಸೇವಿಸುವ ಹೆಂಗಸರೂ, ಹುಡುಗಿಯರೂ, ಆಂತರಿಕ ಆರೋಗ್ಯವನ್ನು ಚೆನ್ನಾಗಿ ಅನುಭವಿಸುವರು, ಅದು ಮಾತ್ರವಲ್ಲ, ಆರೋಗ್ಯವರ್ಧಕವು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ, ಸ್ಟೋರ್ಸ್‌ದಾರರಿಂದಲೂ, ಬಾಟಲಿ 1ಕ್ಕೆ ರೂ. 2-4-0ರಂತೆ ಮಾರಲ್ಪಡುವವು. ವ್ಯಾಪಾರದ ಮಾಹಿತಿಗೆ ಇವರಿಗೆ ಬರೆಯಿರಿ.

ದಿ ರಿಪ್ರಸೆಂಟೇಟಿವ್,
ಪೋಸ್ಟು ಬಾಕ್ಸ್ 760, ಮುಂಬಾಯಿ.

ದಾದಾ ಎಂಡ್ ಕೊ.,
ಚೈನಾಬಜಾರ್ ರೋಡ್ ಮದರಾಸು.



15A

[illegible] ಸಮಾರಂಭವು.

[illegible] ಗತಿ.

[illegible]

೧ ಕರ್ನಾಟಕ ೧೫; ೨ ಮಹಾರಾಷ್ಟ್ರ ೧; [illegible] ಸಿ. ಪಿ. ಹಿಂದಿ ೪; [illegible] ಆಂಧ್ರ ೩; [illegible] ಮುಂಬಯಿ ೨; [illegible] ಅಸಾಮ ೧; [illegible] ಗುಜರಾಥ ೧; [illegible] ಮರಾಠಿ ೧; ೧೧ ಬಂಗಾಲ ೧; ೧೨ ಪಂಜಾಬು ೧; ೧೩ ಕರ್ನಾಟಕ ೧.

ಇನ್ನುಳಿದ ಹಲಕೆಲವು ಊರುಗಳಲ್ಲಿ ಈ ಸಮಾರಂಭವಾಗಿರಬಹುದು. ಆದರೆ ಹಿಂದೂಸ್ಥಾನದಂತಹ ದೊಡ್ಡ ದೇಶಗಳಲ್ಲಿ ಇಷ್ಟು ಸ್ವಲ್ಪ ಸ್ಥಳಗಳಲ್ಲಿ ಈ ಸಮಾರಂಭವು ನಡೆದಿರುವುದು ವಿಷಾದದ ಮಾತಾಗಿದೆ. ಆದರೂ ಮುಂದಿನ ಸಮಾರಂಭವು ಇನ್ನೂ ಹೆಚ್ಚು ಸ್ಥಳಗಳಲ್ಲಿ ನಡೆಯುವದೆಂದು ನಾವು ಆಶಿಸುತ್ತೇವೆ. ಈ ಧ್ವಜಾರೋಹಣ ಸಮಾರಂಭದ ಮಹತ್ವವು ಜನರಿಗೆ ಕ್ರಮೇಣ ತಿಳಿಯಹತ್ತಿದೆಯೆಂದನ್ನಲು ಅಡ್ಡಿಯಿಲ್ಲ.

ಮೊನ್ನೆ ಮೊನ್ನೆ (೨೦ನೆ) ಹೈದರಾಬಾದದಲ್ಲಿ ನಿಶಾನೆಯನ್ನು ಏರಿಸುವಾಗ್ಗೆ ಮಹಾತ್ಮಾ ಗಾಂಧಿಯವರು ಮುಂದಿನಂತೆ ಅಂದಿದ್ದಾರೆ:—

"ರಾಷ್ಟ್ರೀಯ ಧ್ವಜಾರೋಹಣವನ್ನು ಜರಗಿಸಬೇಕೆಂಬ ಮಾತಿನಲ್ಲಿ ರಾಷ್ಟ್ರದ ಮಾನದ ಕಲ್ಪನೆಯೂ ಅದನ್ನು ಕಾಯುವುದಕ್ಕಾಗಿ ಒಬ್ಬನೇ [illegible] ಬೇಕಾದ ಪ್ರಸಂಗ ಬಂದರೆ ಹಿಂಜರಿಯದಷ್ಟು ಧೃಢನಿಶ್ಚಯವಿರಬೇಕೆಂಬ ವಿಚಾರವೂ ಅಡಕವಾಗಿದೆ."

"ರಾಷ್ಟ್ರೀಯ ಧ್ವಜದ ಮಾನರಕ್ಷಣೆಗಾಗಿ ಮೈಮರೆತು ಸ್ವಾರ್ಥತ್ಯಾಗ ಮಾಡುವ ಪ್ರಸಂಗಗಳು ಬೇಕಾದಷ್ಟು ಬರುತ್ತವೆ. ಈ ವಿಷಯದಾಗಿ ಮೊರೊಕೊ ದೇಶದ ಶಿಪಾಯಿಗಳ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅವರು ತಮ್ಮ ಕೈಯೊಳಗಿನ ಶಸ್ತ್ರಗಳನ್ನು ಒಗೆದು ಫ್ರೆಂಚ ಶಿಪಾಯಿಗಳ ಮೇಲೆ, ಮುಂದಿನ ಭಯಂಕರವಾದ ಗುಂಡುಗಳ ಮಳೆಯನ್ನು ಲಕ್ಷಿಸದೆ 'ಅಲ್ಲಾ' ಎಂದು ಗರ್ಜಿಸಿ ಏರಿಹೋದರು. ಈ ಮೂರಿಯ [illegible] ಫ್ರೆಂಚ ಶಿಪಾಯಿಗಳು ಅತ್ಯಾಶ್ಚರ್ಯವನ್ನು ವ್ಯಕ್ತಗೊಳಿಸುವುದಕ್ಕಾಗಿ ತಮ್ಮ ಟೋಪಿಗೆಗಳನ್ನು [illegible] ನಡೆದರು. ಈ ಉದಾಹರಣೆಯನ್ನು ಕಾಂಗ್ರೆಸ್ [illegible] ತಮ್ಮ ಕಣ್ಮುಂದಿಟ್ಟುಕೊಳ್ಳುವುದಕ್ಕೆ ಯೋಗ್ಯವಿರುವುದು.

ಮಹಾತ್ಮಾಜೀಯವರ ಭಾಷಣದಲ್ಲಿಯ ಮೇಲಿನ ಅವತರಣಿಕೆಯನ್ನು ಕೊಟ್ಟಿರುವಾಗ ಈ ವಿಷಯವಾಗಿ ಹೆಚ್ಚು ಹೇಳುವ ಅವಶ್ಯಕತೆಯಿಲ್ಲ. ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸರ್ವಸ್ವವನ್ನೂ ಅವಶ್ಯಬಿದ್ದರೆ ತನ್ನ ಪ್ರಾಣವನ್ನೂ ತೆತ್ತು ಧಾರಿಯುರಿಯಲು ಸಿದ್ಧರಾಗಿ ಈ ರಾಷ್ಟ್ರೀಯ ಧ್ವಜದ ಮಾನವನ್ನು ಕಾಯಬೇಕು.

ಇನ್ನಿಂದ ಕಾಂಗ್ರೆಸ್ ಸೇವಾದಲ ಮತ್ತು ಯುವಕ ಸಂಘಗಳ [illegible] ಸಮಾರಂಭವನ್ನು ತಮ್ಮ ತಮ್ಮ ಸ್ಥಳಗಳಲ್ಲಿ [illegible] ಮಾಡುವರೆಂದು ನಂಬಿದ್ದೇವೆ.

[illegible] (ಅಂಚೇವೆಚ್ಚ ಸಹಿತ), ಹುಬ್ಬಳ್ಳಿಯ ಸೇವಾದಲಕ್ಕೆ ಬರೆದು ರಾಷ್ಟ್ರೀಯ ನಿಶಾನೆಯನ್ನು ತರಿಸಬಹುದು.

N. S. HARDIKER,
ಸೇವಾದಲದ ಕಾರ್ಯದರ್ಶಿ

ಗಾರವಾದ ಪುಸ್ತಕ? ೩೪೦ ಪೇಜುಗಳು ಇವೆ

[ನಾವು ತಿಳಿಸುವಂತೆ ಇಲ್ಲದಿದ್ದರೆ ವಾಪಾಸು ತೆಗೆದುಕೊಳ್ಳುವೆವು.]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇನ್ನು [illegible] ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್ ಹಿಂದೂಸ್ಥಾನಿ ಭಾಷೆಗಳಲ್ಲಿ [illegible] ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಪಳಪಳಿಸುವ ಗ್ಲೇಜ್ ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಿಂದ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶೂತ್ಪತ್ತಿ ವಿಧ, ಗುಪ್ತ ವೈದ್ಯಗಳ ಚಿಕಿತ್ಸೆ, ಶಯನಸ್ಥ ಕದಾಚಿತ್ಯ ನಿಯಮಗಳು, ಮೈನವ [illegible] ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೪-೦

ವಿಳಾಸ:—

ಕೆ. ನಾಥಮುನಿ ಅಂಡ್ ಸನ್,
೧೬೮ ಛೈನಾ ಬಜಾರ್, ಮದರಾಸು.

K. Nadhamuni & Son,
168 Chaina Bazaar
Madras.

ಯಾತ್ರೆಗಳ ಆವಶ್ಯಕತೆ.

[illegible] ಕಾಲದಲ್ಲಿ [illegible] ಕೇವಲ ವ್ಯಾಯಾಮ [illegible] ಕೈಕೊಳ್ಳುತ್ತಿದ್ದರು. [illegible] ಕಷ್ಟ ಮಾಡುವುದರಿಂದ [illegible] ಮಾಡಿದಂತೆಯೂ ಆಗುವದು. [illegible] ಗಿರಿಯನ್ನು ಏರುವುದರಿಂದಲೂ, [illegible] ಮಾಡಿದಂತಾಗುವದು. [illegible] ಬಯಲುಗಳನ್ನೂ, [illegible] ನೋಡುವುದರಿಂದ ಮನಸ್ಸಿಗೆ ಆನಂದವುಂಟಾಗುವದು.

ಪೂರ್ವ ಕಾಲದಲ್ಲಿ ಒಬ್ಬ ಹೆಂಗಸು ತನಗೆ ಮಕ್ಕಳಿಲ್ಲವೆಂದು ವೈದ್ಯರಲ್ಲಿಗೆ ಬಂದರೆ, ವೈದ್ಯರು [illegible] ಪ್ರಸಕ್ತಿಯನ್ನು ಮಾಡಬೇಕೆಂದಾಗಲಿ, ಸಪ್ತ ಸಾಗರ ಯಾತ್ರೆಯನ್ನು ಮಾಡಬೇಕೆಂದಾಗಲಿ, ಅಥವಾ ಗಿರಿಪ್ರದಕ್ಷಿಣೆಯನ್ನು ಮಾಡಬೇಕೆಂದಾಗಲಿ ಹೇಳುತ್ತಿದ್ದರು. ಹೆಂಗಸರು ತಮ್ಮ ಗಂಡಂದಿರೊಡನೆ ಯಾತ್ರೆಗೆ ಹೋಗುತ್ತಿದ್ದರು. ಇದರಿಂದ ಹೆಂಗಸಿನ ಶರೀರಕ್ಕೆ ತಕ್ಕ ವ್ಯಾಯಾಮವೂ, ಮನಸ್ಸಿಗೆ ಸಮಾಧಾನವೂ ಉಂಟಾಗಿ, ಸ್ವಾಭಾವಿಕವಾಗಿಯೇ ಗರ್ಭವತಿಯರಾಗಿ ಶಿಶುಗಳನ್ನು ಪ್ರಸವಿಸುತ್ತಿದ್ದರು. ಈ ಶಿಶುಗಳಿಗೆ ತಾವು ಯಾವ ದೇವರನ್ನು ಆರಾಧಿಸಿದ್ದರೋ ಆ ದೇವರ ಹೆಸರನ್ನು ಇಡುವದು ವಾಡಿಕೆಯಾಗಿದ್ದಿತು. ಇದರಿಂದ ಇವೀ ಶಿಶುಗಳು ದೇವರ ಅನುಗ್ರಹದಿಂದಲೇ ಹುಟ್ಟಿದವೆಂಬ [illegible] ನಂಬಿಕೆಯುಂಟಾಗುತ್ತಿದ್ದಿತು. ವ್ಯಾಯಾಮದ ಅಭಾವದಿಂದಲೇ ಹೆಂಗಸರಿಗೆ ಬಂಜೆತನವು ಪ್ರಾಪ್ತಿಸುವದು. ಅಂತಹ ಬಂಜೆತನ ದೋಷವನ್ನು ನೀಗುವ ಸಲುವಾಗಿಯೇ ಹಿರಿಯರು ಯಾತ್ರೆಗೆ ಹೋಗುವ ಕಟ್ಟಳೆಯನ್ನು ಮಾಡಿದ್ದರು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಶ್ವಗಂಧಾಂತಸ್ಥಿತ ತೈಲ—ಇದು ಪೂರ್ವಕಾಲ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಶ್ವಂಗಳ್ಳ ಅನುಭವಿಸಿದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿಗಳಿಗೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮತ್ತೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 8—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿ ಮಿತ್ರನು!
ದಶಮೂಲ ಸುಖಪ್ರದ ಔಷಧಿ!

ಬಾಣಂತಿಯರ ಪರಮೋಪಕಾರಿ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಪ್ರಸವ ಎಂಬೀ ಮೂರು ಗುಣಗಳು ಅಂತಸ್ಥವಾಗಿರುವವುಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಶ್ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅನುಕೂಲಪಡಿಸಿಕೊಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭಧಾರಣೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರ್ಜೀವಿಸುವುದು.

ಸುಖಪ್ರಸವ ಗುಣದಿಂದ ಬಾಣಂತಿಯು ಅಜೀರ್ಣ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ಸಂಕಟ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2—0—0. ಪೋಸ್ಟೇಜು ವಗೈರೆ ಬೇರೆ.

[illegible]

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ಪಿ. ಕೆ. [illegible]

ಮುದಲ್‌ತರವಾದ ಬೆಳ್ಳಿ ಪುಡಿಮಾರದಗ್ಗ.

ESTD 1896

[illegible]

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಬೆಳ್ಳಿ ವ್ಯಾಪಾರಿ,

41—8—28 [illegible] (ಪಶ್ಚಿಮ ಇಂಡಿಯಾ)

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1 ಮಾತ್ರ.
ಇತರ ಮಾಹಿತಿಗೆ ಸಮಾಚಾರ ಕೇಳಿಗಿನ ವಿಳಾಸಕ್ಕೆ
ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 28, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಪೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ರಿಸರ್ವು ನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793—6—0
Rates of interest on fixed deposits at Head Office and Branch 6¼% for 2 Years, 6% „ 1 Year	ಠಾಯಿಂ ಡಿಪೋಜಿಟುಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಸ್ವೀಕರಿಸಲ್ಪಡುವ ರೂ. 1000/- ದ ಮೇಲ್ಪಟ್ಟ ಸೀಸನ್ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. [illegible] from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of [illegible] months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at [illegible] per annum. Interest on such deposits will cease on notice.

For further particulars please apply to

Canara Bank Ltd.
Mangalore. 11—8—1929

K. Venkat Rao,
Secretary.

THE PANGAL NAYAK BANK, LTD.

Branch Office Mangalore	Head Office: Udipi *Established 1920.*	Agency Office Cochin

Authorised Capital: Rs. 2,00,000-	Paidup Capital: Rs. 1,57400-
Issued Capital Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates: [illegible] months 5%, 6 or 9 months 5½%, 12, 15, 18 or 21 months 6%, 24 months [illegible] and **interest being payable every 3 months.**

Short Notice Deposits, Cumulative Deposits and **Savings Bank Deposits** are received at favourable rates of interest.

Season Deposits from January to June received at [illegible]

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables, or proper personal securities on reasonable terms, and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಚುನಾಯಿತ (first quality Selected) ಎನ್ನುವ ಶ್ರೇಷ್ಠತೆಯಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಕ್ಕಿರುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು. Diamonds

BOLA MANGESH ROW & CO.,
MANGALORE.

Agents & Direct importers of Superior Diamonds of Antwerp.

ಬೆಲ್ಜಿಯಂ ದೇಶದ ಆಂಟ್‌ವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
ಮಂಗಳೂರು

ಫೆ ಲೂ ನಾ
ಹೆಂಗಸರಿಗೂ ಹುಡುಗಿಯರಿಗೂ ಮಾತ್ರ.

ಖಂಡಿತ ಗುಣಕಾರಿಯಾದ ಅವುಷಧಿ.

ಇದೇ ಮಾದರಿಯ ಇತರ ಅವುಷಧಗಳಿಗಿಂತಲೂ ಫೆಲೂನಾ ಮಾತ್ರೆಗಳು ವಿಶೇಷ ಗುಣಕಾರಿಯಾಗಿವೆ. ನಿಜವಾದ ಆರೋಗ್ಯದ ಮುಖ್ಯಸ್ಥಳವಾದ ಇಂದ್ರಿಯಗಳನ್ನು ಅವು ಶುಚಿಪಡಿಸಿ, ಸರಿಪಡಿಸಿ, ಬಲಪಡಿಸಿ, ಇಂದ್ರಿಯ ವ್ಯಾಪಾರಗಳು ಚೆನ್ನಾಗಿ ನಡೆಯುವಂತೆ ಮಾಡುವವು. ಕೆಲವು ಸಮಯದ ವರೆಗೆ ಫೆಲೂನಾ ಮಾತ್ರೆಗಳನ್ನು ಸೇವಿಸುವುದರಿಂದ, ಬಳಲಿದ ಹೆಂಗಸು, ಅಥವಾ ಶಕ್ತಿಹೀನ ಹುಡುಗಿಯು ಶಕ್ತಿವಂತರಾಗುವರು. ಆರೋಗ್ಯವು ಹುಂಬಿಕೊಳ್ಳುವುದು. ಸೇವನೆಯು ಮುಂದರಿಯುತ್ತಿರುವಷ್ಟಕ್ಕೆ, ಪ್ರಕೃತಿ ಸ್ವಭಾವಕ್ಕನುಕೂಲವಾಗಿ ಇಂದ್ರಿಯಗಳು ಕೆಲಸಮಾಡುವವು. ಫೆಲೂನಾ ಮಾತ್ರೆಗಳ ಸಹಾಯದಿಂದಲೇ ಇಷ್ಟೆಲ್ಲ ಪ್ರಯೋಜನವುಂಟಾಗುವುದು.

ಫೆಲೂನಾ ಮಾತ್ರೆಗಳನ್ನು ಸೇವಿಸುವ ಹೆಂಗಸರೂ, ಹುಡುಗಿಯರೂ, ಆಂತರಿಕ ಆರೋಗ್ಯವನ್ನು ಚೆನ್ನಾಗಿ ಅನುಭವಿಸುವರು. ಅದು ಮನ್ನಲ್ಲ. ಆರೋಗ್ಯವರ್ಧಕವು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ, ಸ್ಟೋರ್ಸ್ಸರಿಂದಲೂ, ಬಾಟಲಿ 1ಕ್ಕೆ ರೂ. 2-4-0ರಂತೆ ಮಾರಲ್ಪಡುವವು. ವ್ಯಾಸಾಂದ ಮಾಹಿತಿಗೆ ಇವರಿಗೆ ಬರೆಯಿರಿ;

ದಿ ರಿಪ್ರಸೆಂಟೇಟಿವ್, ಪೋಸ್ಟ್ ಬಾಕ್ಸ್ 760, ಮುಂಬಾಯಿ.

ದಾದಾ ಎಂಡ್ ಕೊ., ಚ್ಯಾನಾಕಾರ್ ರೋಡ್ ಮದರಾಸು.



15A

ನೇಶಾಲದ ಮೂರನೆಯ ಧ್ವಜಾಭಿವಂದನದ ಸಮಾರಂಭವು.

ಒ—೪—ನೇ ತಾರೀಖು ದಿವಸ ಮುಂಜಾನೆ ೮ ಗಂಟೆಗೆ.

ಮೇಲಿನ ತಾರೀಖು ದಿವಸ ಮುಂಜಾನೆ ದೇಶದ ಎಲ್ಲ ಭಾಗಗಳಲ್ಲಿ ನಡೆಯಿತೆಂಬುದು ಸಂತೋಷದ ಸಂಗತಿಯಾಗಿದೆ. ೨೧ ಕಾಂಗ್ರೆಸ್ ಪ್ರಾಂತಗಳಲ್ಲಿ ೧೩ ಪ್ರಾಂತಗಳು ತಮ್ಮ ವರದಿಗಳನ್ನು ಕಳುಹಿಸಿವೆ. ಅದರ ವಿವರವು ಮುಂದಿನಂತಿದೆ—

೧ ಕರ್ನಾಟಕ ೧೩; ೨ ಉತ್ಕಲ ೧೫; ೩ ಯು. ಪಿ. ೧೩; ೪ ಮಹಾರಾಷ್ಟ್ರ ೫; ೫ ಸಿ. ಪಿ. ಹಿಂದಿ ೪; ೬ ಆಂಧ್ರ ೩; ೭ ಮುಂಬಯಿ ೩; ೮ ಆಸಾಮು ೧; ೯ ಗುಜರಾಥ ೨; ೧೦ ಸಿ. ಪಿ. ಮರಾಠಿ ೧; ೧೧ ಬಂಗಾಲ ೧; ೧೨ ಪಂಜಾಬ ೧; ೧೩ ತಮಿಳನಾಡು ೧.

ಇನ್ನುಳಿದ ಹಲಕೆಲವು ಊರುಗಳಲ್ಲಿ ಈ ಸಮಾರಂಭವಾಗಿರಬಹುದು. ಆದರೆ ಹಿಂದೂಸ್ಥಾನದಂತಹ ದೊಡ್ಡ ದೇಶಗಳಲ್ಲಿ ಇಷ್ಟು ಸ್ವಲ್ಪ ಸ್ಥಳಗಳಲ್ಲಿ ಈ ಸಮಾರಂಭವು ನಡೆದಿರುವುದು ವಿಷಾದದ ಮಾತಾಗಿದೆ. ಆದ್ದರೂ ಮುಂದಿನ ಸಮಾರಂಭವು ಇನ್ನೂ ಹೆಚ್ಚು ಸ್ಥಳಗಳಲ್ಲಿ ನಡೆಯುವದೆಂದು ನಾವು ಆಶಿಸುತ್ತೇವೆ. ಈ ಧ್ವಜಾರೋಹಣ ಸಮಾರಂಭದ ಮಹತ್ವವು ಜನರಿಗೆ ಕ್ರಮೇಣ ತಿಳಿಯಹತ್ತಿದೆಯೆಂದೆನ್ನಲು ಅಡ್ಡಿಯಿಲ್ಲ.

ಮೊನ್ನೆ ಮೊನ್ನೆ (ಸಿಂಧ) ಹೈದರಾಬಾದದಲ್ಲಿ ನಿಶಾನೆಯನ್ನು ಏರಿಸುವಾಗ್ಗೆ ಮಹಾತ್ಮಾ ಗಾಂಧಿಯವರು ಮುಂದಿನಂತೆ ಅಂದಿದ್ದಾರೆ:—

"ರಾಷ್ಟ್ರೀಯ ಧ್ವಜಾರೋಹಣವನ್ನು ಆರಗಿಸಬೇಕೆಂಬ ಮಾತಿನಲ್ಲಿ ರಾಷ್ಟ್ರದ ಮಾನದ ಕಲ್ಪನೆಯೂ ಅದನ್ನು ಕಾಯುವುದಕ್ಕಾಗಿ ಒಬ್ಬನೇ ಇಲ್ಲದೇ ಇದ್ದ ಪ್ರಸಂಗ ಬಂದರೂ ಹಿಂಜರಿಯದೆ ಧ್ವಜವನ್ನು ಕಾಯುವುದು ಬೇಕೆಂಬ ವಿಚಾರವೂ ಅಡಕವಾಗಿದೆ."

"ರಾಷ್ಟ್ರೀಯ ಧ್ವಜದ ಮಾನರಕ್ಷಣೆಗಾಗಿ ಮೈಮರೆತು ಸ್ವಾರ್ಥತ್ಯಾಗ ಮಾಡುವ ಪ್ರಸಂಗಗಳು ಬೇಕಾದಷ್ಟು ಬರುತ್ತವೆ. ಈ ವಿಷಯವಾಗಿ ಪರದೇಶದ ಸಿಪಾಯಿಗಳ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅವರು ತಮ್ಮ ಕೈಯೊಳಗಿನ ಶಸ್ತ್ರಗಳನ್ನು ಒಗೆದು ಫ್ರೆಂಚ ಸಿಪಾಯಿಗಳ ಮೇಲೆ, ಮುಂದಿರುವ ಭಯಂಕರವಾದ ಗುಂಡುಗಳ ಮಳೆಯನ್ನು ಲೆಕ್ಕಿಸದೆ 'ಅಲ್ಲಾ' ಎಂದು ಗರ್ಜಿಸಿ ಬಿದ್ದರು. ಈ ಮಾದರಿಯ ಅವರ ಅಪ್ರತಿಮ ಶೌರ್ಯವನ್ನು ಕಂಡು ಫ್ರೆಂಚ್ ಸಿಪಾಯಿಗಳು ಆಶ್ಚರ್ಯವನ್ನು ವ್ಯಕ್ತಗೊಳಿಸುವುದಕ್ಕಾಗಿ ತಮ್ಮ ಟೊಪ್ಪಿಗೆಗಳನ್ನು ತೆಗೆದು ಅವರೊಡನೆ ಆಗ ಮಿತ್ರತ್ವದಿಂದ ನಡೆದರು. ಈ ಉದಾಹರಣೆಯನ್ನು ಕಾಂಗ್ರೆಸ್ ಸೇವಕರು ತಮ್ಮ ಕಣ್ಮುಂದಿಟ್ಟುಕೊಳ್ಳುವುದಕ್ಕೆ ಯೋಗ್ಯವಿರುವುದು.

ಮಹಾತ್ಮಾಜೀಯವರ ಭಾಷಣದಲ್ಲಿಯ ಮೇಲಿನ ಅವತರಣಿಕೆಯನ್ನು ಕೊಟ್ಟ ಬಳಿಕ ಈ ವಿಷಯವಾಗಿ ಹೆಚ್ಚು ಹೇಳುವ ಆವಶ್ಯಕತೆಯಿಲ್ಲ. ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸರ್ವಸ್ವವನ್ನು ಅವಶ್ಯವಿದ್ದರೆ ತನ್ನ ಪ್ರಾಣವನ್ನು ಕೂಡ ಧಾರೆಯೆರೆಯಲು ಸಿದ್ಧರಾಗಿ ಈ ರಾಷ್ಟ್ರೀಯ ಧ್ವಜದ ಮಾನವನ್ನು ಕಾಯಬೇಕು.

ಇನ್ನುಮೇಲೆ ಕಾಂಗ್ರೆಸ್ ಸೇವಾದಲ ಮತ್ತು ಯುವಕ ಸಂಘಗಳ ಸರ್ವಾಧಿಕಾರಿಗಳು ೪—೫—೩೧ನೇ ದಿವಸ ನಡೆಯಬೇಕಾದ ಧ್ವಜಾರೋಹಣ ಸಮಾರಂಭವನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಜರುಗಿಸಿ ಅದರ ವರದಿಯನ್ನು ನಮ್ಮ ಕಡೆಗೆ ಕಳುಹಿಸಬೇಕಾಗಿ ವಿನಂತಿಸುತ್ತೇವೆ.

ಮಾ. ೧ನೇ ತಾರೀಖು (ಅಂಚೆವೆಚ್ಚ ಸಹಿತ) ಹುಬ್ಬಳ್ಳಿಯ ಸೇವಾದಲಕ್ಕೆ ಕಳಿಸಿದಲ್ಲಿ ರಾಷ್ಟ್ರೀಯ ನಿಶಾನೆಯನ್ನು ಕಳುಹಿಸುವೆವು.

N. S. HARDIKER.
ಸೇವಾದಲದ ಕಾರ್ಯದರ್ಶಿ

ಗಾರವಾದ ಪುಸ್ತಕ? ೩೪೦ ಪೇಜುಗಳು ಇವೆ

[ನಾವು ತಿಳಿಸಿರುವಂತೆ ಇಲ್ಲದಿದ್ದರೆ ವಾಪಾಸು ತೆಗೆದುಕೊಳ್ಳುವೆವು.]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ ಭಾಷೆಗಳಲ್ಲಿ ಬಹು ಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಕಾಲ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಮರ್ಮ ನಿಯಮಗಳು, ಶಿಶೂತ್ಪತ್ತಿವಿಧ, ಗುಪ್ತ ವ್ಯಾಧಿಗಳ ಚಿಕಿತ್ಸೆ, ಶಯನಗೃಹದ ರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೪-೦

ವಿಳಾಸ:—

ಕೆ. ನಾಧಮುನಿ ಅಂಡ್ ಸನ್,
೧೬೮ ಚೈನಾ ಬಜಾರ್, ಮದರಾಸು.

K. Nadhamuni & Son.
168 Chaina Bazaar
Madras.

ಯಾತ್ರೆಗಳ ಆವಶ್ಯಕತೆ.

ಬಹು ಹಿಂದಿನ ಕಾಲದಲ್ಲಿ ಶಾರೀರಿಕ ಶಿಕ್ಷಣವು ಕೇವಲ ವ್ಯಾಯಾಮ ದಿಂದ ದೊರೆಯದು. ಧಾರ್ಮಿಕ ಕಾರ್ಯಗಳಿಂದಲೂ ಕೈಕೊಳ್ಳಲ್ಪಡುತ್ತಿತ್ತು. ಯಾತ್ರೆಗೆ ಹೋಗುವದೆಂಬ ಕಟ್ಟಳೆಯನ್ನು ಮಾಡಿದುದರಿಂದ ಬಹು ರೀತಿಯಲ್ಲಿ ವ್ಯಾಯಾಮವನ್ನು ಮಾಡಿದಂತೆಯೂ ಆಗುವದು. ತಿರುಪತಿಗೆ ಹೋಗುವ ಯಾತ್ರಿಕರು ಬೆಟ್ಟ ಗಿರಿಯನ್ನು ಏರುವುದರಿಂದಲೂ, ಇಳಿಯುವುದರಿಂದಲೂ ವಿಶೇಷ ಅಂಗಸಾಧನೆಯನ್ನು ಮಾಡಿದಂತಾಗುವದು. ಗಿರಿಯನ್ನು ಹತ್ತುವಾಗ ಸುತ್ತಮುತ್ತಲಿನ ಬಯಲುಗಳನ್ನೂ, ಹಸರು ತೋಪುಗಳನ್ನೂ ಗಿರಿಗಹ್ವರಗಳನ್ನು ನೋಡುವುದರಿಂದ ಮನಸ್ಸಿಗೆ ಆನಂದವುಂಟಾಗುವುದು.

ಪೂರ್ವ ಕಾಲದಲ್ಲಿ ಒಬ್ಬ ಹೆಂಗಸು ತನಗೆ ಮಕ್ಕಳಿಲ್ಲವೆಂದು ವೈದ್ಯನಲ್ಲಿಗೆ ಬಂದರೆ, ವೈದ್ಯನು ಆಕೆಯು ೧೨ರ ಅಶ್ವತ್ಥ ಪ್ರದಕ್ಷಿಣೆಯನ್ನು ಮಾಡಬೇಕೆಂದಾಗಲಿ, ಬೆಟ್ಟ ಹಾಗೂ ಯಾತ್ರೆಯನ್ನು ಮಾಡಬೇಕೆಂದಾಗಲಿ, ಅಥವಾ ಗಿರಿ ಪ್ರದಕ್ಷಿಣೆಯನ್ನು ಮಾಡಬೇಕೆಂದಾಗಲಿ ಹೇಳುತ್ತಿದ್ದನು. ಹೆಂಗಸರು ತಮ್ಮ ಗಂಡಂದಿರೊಡನೆ ಯಾತ್ರೆಗೆ ಹೋಗುತ್ತಿದ್ದರು. ಇದರಿಂದ ಹೆಂಗಸಿನ ಶರೀರಕ್ಕೆ ತಕ್ಕ ವ್ಯಾಯಾಮವೂ, ಮನಸ್ಸಿಗೆ ಸಮಾಧಾನವೂ ಉಂಟಾಗಿ, ಸ್ವಾಭಾವಿಕವಾಗಿಯೇ ಗರ್ಭಿಣಿಯರಾಗಿ ಶಿಶುಗಳನ್ನು ಪ್ರಸವಿಸುತ್ತಿದ್ದರು. ಈ ಶಿಶುಗಳಿಗೆ ತಾವು ಯಾವ ದೇವರನ್ನು ಕಾಣಹೋಗಿದ್ದರೋ ಆ ದೇವರ ಹೆಸರನ್ನು ಇಡುವದು ವಾಡಿಕೆಯಾಗಿತ್ತು. ಇದರಿಂದ ಇದೀ ಕಟ್ಟಳೆಯವರಿಗೆನೇ ಮನೋಭಿಲಾಷೆಯು ಪೂರೈಸಿದ ಹಾಗಾಗುತ್ತಿತ್ತು. ವ್ಯಾಯಾಮದ ಅಭಾವದಿಂದಲೇ ಹೆಂಗಸರಿಗೆ ಬಂಜೆತನವು ಪ್ರಾಪ್ತಿಸುತ್ತದೆ. ಅಂತಹ ಬಂಜೆತನ ಮೊದಲಾದವುಗಳನ್ನು ನೀಗುವ ಸಲುವಾಗಿಯೇ ಹಿರಿಯರು ಯಾತ್ರೆಗೆ ಹೋಗುವ ಕಟ್ಟಳೆಯನ್ನು ಮಾಡಿದ್ದರು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಕಾಕಾಂಕ್ಷಯ ತೈಲ—ಇದು ಪೂರ್ವಕಾಲ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಸದ್ಧಾರಿ ಮಿತ್ರ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷಗಳನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುಖ್ಯ ತರವಾದ ಬೆಳ್ಳಿ ಪುಡಿವಾರಸ್ಗ.

ESTD 1896.

[illegible]

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,

24-8-'28 ಕನ್ಯಾಡಿ ಬೀದಿ (ದಕ್ಷಿಣ ಕನ್ನಡ)

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪಾಯಿ 1 - ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೀಘೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳ ಠೇವಣಾತಿಗೆ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಪ್ತಿ ಆಗುವ ರೂ. 1000/-ದ ಮೇಲ್ಪಟ್ಟ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to

Canara Bank Ltd.
Mangalore, 11—2—1929

K. Venkat Rao.
Secretary

THE PANGAL NAYAK BANK, LTD.

Branch Office Mangalore	Head Office: Udipi *Established 1920*	Agency Office Cochin

Authorised Capital: Rs. 2,00,000-	Paidup Capital: Rs. 1,57400
Issued Capital Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates: for 3 months 5%, 6 or 9 months 5¼%, 12, 15, 18 or 21 months 6%, 24 months 6½% and **interest being payable every 3 months.**

Short Notice Deposits, Cumulative Deposits and **Savings Bank Deposits** are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6½% and interest being payable every quarter.

Loans and Advances are made on pledge of valuables or proper personal securities on reasonable terms, and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929

P. Lakshman Nayak,
Offg. Secretary.

Diamonds! Diamonds!!

Ramachandra Krishna Shet
DONGERKERY, MANGALORE

ಉತ್ಕೃಷ್ಟ ತರಗತಿಯ ಜುನ್ನಾಕ (first quality Selected) ಎನ್ನುವ ಸ್ವದೇಶದಿಂದ ಬರುವ ವಜ್ರಗಳು ಯಥಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು Diamonds

BOLA MANGESH ROW & CO.,
MANGALORE.

Agents & Direct importers of Superior Daimonds of Antwerp

ಯೂರೋಪಿನ, ಆಂಟ್ವರ್ಪ್‌ನಿಂದ ಬರುವ ವಜ್ರಗಳು — ದೊರೆಯುತ್ತವೆ. —

ಬೋಳ ಮಂಗೇಶ ರಾವ್,
ಮಂಗಳೂರು

[illegible]

ಉಪ್ಪಿನ ಕರ

ಇತರ ವಿಷಯದಲ್ಲಿ ಅಲ್ಲವಾದರೆ, ಉಪ್ಪಿನ ಮೇಲಿನ ಕರದ ವಿಷಯವಾದ ಚರ್ಚೆಯು ಬಂದಾಗವಾದರೂ ಎಸೆಂಬ್ಲಿ ಮೆಂಬರಿಗೆ ತಮ್ಮನ್ನೇ ಚುನಾಯಿಸಬೇಕೆಂದು ಕೇಳಿಕೊಳ್ಳುವ ಆ ಮತದಾರ ವರ್ಗದ ನೆನಪು ಉಂಟಾಗಿರಬೇಕು. ಏಕೆಂದರೆ ಆ ಸಂದರ್ಭದಲ್ಲಿಯೇ ಸಾಧಾರಣವಾಗಿ ಚುನಾಯಿಸಲ್ಪಟ್ಟ ಎಲ್ಲಾ ಸಭ್ಯರೂ ಒಂದಾಗಿ ಉಪ್ಪಿನ ಕರವನ್ನು ಕಡಿಮೆ ಮಾಡಬೇಕೆಂದು ಠರಾಯಿಸಿದರು. ಒಂದು ವರ್ಷ ಉಪ್ಪಿನ ಕರವು ೧|ರಿಂದ ೨|ಗೆ ದ್ವಿಗುಣಿಸಲ್ಪಟ್ಟಿದ್ದಿತು. ಆಗಿನ ಎಸೆಂಬ್ಲಿಯೂ ಶಕ್ತಿಹೀನರೂ, ದೃಢವಾದ ಧೋರಣವಿಲ್ಲದವರೂ, ಸರಕಾರದ ಸಹಾಯವನ್ನೇ ಬೇಡುವವರೂ, ಅರ್ಥಾತ್ "ಸಹಕಾರಿ"ಗಳೆಂಬ ಸರಕಾರವು ಎಸೆಂಬ್ಲಿಯಲ್ಲಿ ಅಧಿಕ ಸಂಖ್ಯಾಕರಾಗಿ ಇರಬೇಕೆಂದಿಚ್ಛಿಸುವಂತಹ ಆ ವಿಚಿತ್ರ ಸಾಮ್ಯಪಕ್ಷದವರಿಂದ ಕೂಡಿದ್ದಿತು. ಆದರೆ ಪ್ರಜಾಪಕ್ಷಗಳ ಅಭಿಪ್ರಾಯವು ಆ ಹೆಚ್ಚುವಿಕೆಗೆ ತೀರಾ ವಿರುದ್ಧವಿದ್ದುದರಿಂದ ಮರುವರ್ಷವೇ ದ್ವಿಗುಣಿಸಲ್ಪಟ್ಟ ಕರವನ್ನು ಪೂರ್ವ ಪರಿಮಾಣಕ್ಕೇನೇ ತಂದಿರಿಸಬೇಕಾಯಿತು. ಆದರೆ ಈಗ ತೆರಯಲ್ಪಡುವ ಆ ೧| ರೂಪಾಯಿ ಕೂಡ ಬಡವರೇ ಹೆಚ್ಚಾಗಿ ಉಪಯೋಗಿಸುವ ಉಪ್ಪಿಗೆ ಬಹಳ ವಿಪರೀತವಾಯಿತೆನ್ನುವುದರಲ್ಲಿ ಅಭಿಪ್ರಾಯ ಭೇದವಿರುವದಿಲ್ಲ. ಸರಕಾರವು ಮಾತ್ರ ಸ್ವಾರ್ಥವನ್ನು ಬಿಡಲಾರದೆ ಕಡಿಮೆ ಮಾಡಲೊಪ್ಪುವದಿಲ್ಲ. ಉಪ್ಪಿನ ಕರವನ್ನೇ ತೆಗೆದುಹಾಕಬೇಕೆಂಬುವುದು ಸ್ವರಾಜ್ಯಪಕ್ಷೀಯರ ಸೂಚನೆ. ಅಷ್ಟರ ಮಟ್ಟಿಗೆ ಸರಕಾರದ ವಿರೋಧವಾಗಿ ನಿಲ್ಲುವ ಸಾಹಸವು ಇತರ ಪಕ್ಷಗಳಲ್ಲಿಲ್ಲದೆ ಠರಾವು ಬಿದ್ದುಹೋಯಿತು. ಆದರೆ ಉಪ್ಪಿನ ಕರವನ್ನು ರೂ. ೧|ರಿಂದ ರೂ. ೧ಕ್ಕೆ ಇಳಿಸಬೇಕಾಗಿ ಬಂದ ಠರಾವು ಬಹುಮತದಿಂದ ಮಂಜೂರಾದುದು ಅಭಿನಂದನೀಯವಿದೆ. ಇನ್ನು ಸರಕಾರವು ಇಲ್ಲಿ ಆಗುವ ಒಂದು ಮಣಕ್ಕೆ ರೂ. ೧ರ ಕರದಿಂದ ತೃಪ್ತವಾಗುವುದೊ, ಇಲ್ಲವೆ ಈ ಕರವನ್ನು ಕೌನ್ಸಿಲ್ ಓಫ್ ಸ್ಟೇಟ್ಸನಿಂದ ಮಂಜೂರು ಮಾಡಿಸಿ ಪುನಃ ಎಸೆಂಬ್ಲಿಗೆ ತಂದು ಯುಕ್ತಿಯಿಂದ ಪ್ರಜಾಪಕ್ಷಗಳ ಪ್ರತಿನಿಧಿಗಳು ಅಲ್ಪ ಸಂಖ್ಯಾಕರಾಗಿರುವ ಸಮಯದಲ್ಲಿ ಮಂಜೂರು ಮಾಡಿಸಿ ಬಿಡುವುದೊ, ಇಲ್ಲವೆ ಇದು ಅಸಾಧ್ಯವಾದರೆ ವ್ಹಾಯಿಸರಾಯರೇ ಅದನ್ನು ಸರ್ಟಿಫಿಕೇಶನ್ ಮೂಲಕ ಮಂಜೂರು ಮಾಡುವರೊ ಎಂದು ನೋಡಬೇಕಿದೆ. ಅಂತೂ ಮೊಂಟೆಗ್ಯೂ ಚೆಲ್ಮ್ಸ್‌ಫೋರ್ಡ ಹಿಂದೂಸ್ಥಾನಕ್ಕೆ ಕೊಟ್ಟ ಜವಾಬ್ದಾರ ಸರಕಾರದ ಪ್ರಥಮ ತಂಗತಿಯ ಫಲಗಳನ್ನು ಸ್ಯಾಮನ್ ಕಮಿಶನ್ನು ಕಣ್ಣಾರೆ ಕಂಡಂತಾಗುವುದು.

ಮಹಾತ್ಮಾ ಗಾಂಧೀಜೀಯವರ ಮೇಲೆ ಜುಲುಮಾನೆ

ಕಲ್ಕತ್ತದ ಪರದೇಶ ವಸ್ತ್ರ ದಹನದ ವಿಷಯದಲ್ಲಿ, ಸರಕಾರವು ಮಹಾತ್ಮಾ ಗಾಂಧಿಯವರನ್ನು ಸ್ವಂತ ಜಾಮೀನಿನ ಮೇಲೆ ಬಿಟ್ಟು, ಅಪರಾಧ ತನಿಖೆಯನ್ನು ಕಳೆದ ತಾ.೨೬ಕ್ಕೆ ಇಟ್ಟಿದ್ದರು. ಮಹಾತ್ಮಾಜೀಯವರು ಅಸಹಕಾರ ಸಮಯದ ಸೂತ್ರವನ್ನು ಬಿಟ್ಟು ಜಾಮೀನು ಕೊಟ್ಟು ಬರ್ಮಾ ಸಂಚಾರವನ್ನು ಮುಗಿಸಿ ತಾ. ೨೬ಕ್ಕೆ ಕ್ಲಪ್ತ ಸಮಯದಲ್ಲಿ ಕೋರ್ಟಿನಲ್ಲಿ ಹಾಜರಾಗಿ ಶ್ರೀಯುತ ಜೆ. ಎಮ್. ಸೇನಗುಪ್ತರ ಮೂಲಕ ಫಿರ್ಯಾದಿಯನ್ನು ವ್ಯವಹರಿಸಿಕೊಂಡರು. ಪ್ರಯೋಜನವಾಗಲಿಲ್ಲ. ಒಂದು ರೂಪಾಯಿ ಜುಲುಮಾನೆಯು ಅವರಿಗೆ ವಿಧಿಸೋಣಾಯಿತು. ಕಾಂಗ್ರೆಸ್ ಕಮಿಟಿಯ ಪರವಾಗಿ ಆ ಒಂದು ರೂಪಾಯಿಯನ್ನು ಒಬ್ಬ ವಕೀಲರು ಕೋರ್ಟಿಗೆ ಕಟ್ಟಿದರು. ಈ ನಂಬ್ರದ ಅಪೀಲು ಹೈಕೋರ್ಟಿನಲ್ಲಿ ಮಾಡಲ್ಪಡುವುದಾಗಿ ತಿಳಿದು ಬರುತ್ತದೆ. ಆದರೆ ಮಹಾತ್ಮಾಜೀಯವರು ಈ ನಂಬ್ರದಲ್ಲಿ ಕೈಕೊಂಡ ಧೋರಣದ ಅರ್ಥವು ಯಾರಿಗೂ ಆಗುವಂತಿಲ್ಲ. ಅಸಹಕಾರ ಸಮಯದಲ್ಲಿ ಮಾತ್ರವೇ ಕೋರ್ಟಿನ ಬಹಿಷ್ಕಾರವನ್ನು ಮಹಾತ್ಮಾಜೀಯವರು ಸಾರಿದ್ದರಾದರೂ, ಅದಕ್ಕೆ ಆಧಾರವಾಗಿದ್ದ ಅನುಭೂತಿಯು ಅವರ ಅಂತರ್ಯದಲ್ಲಾಗಿದ್ದಿತು. ಈಗಿನ ಕೋರ್ಟಿನಿಂದ ನ್ಯಾಯ ಸಿಕ್ಕಲಾರದೆಂದು ಅವರ ಅಂಬೋಣವಾಗಿತ್ತು. ಯಾವ ನ್ಯಾಯದ ನಿರೀಕ್ಷಣೆಯಿಂದ ಅವರು ಈ ವ್ಯಾಜ್ಯವನ್ನು ವ್ಯವಹರಿಸಲು ನಿರ್ಣಯಿಸಿದರೆಂದು ತಿಳಿಯುವದಿಲ್ಲ. ಸೇನಗುಪ್ತರು ಅಪರಾಧಿ ಕಡೆಯಿಂದ ತಂದ ತರ್ಕವು ಬರೇ ಕಲ್ಪ ಟೀಕೆಯಾಗಿತ್ತು; ಕಾನೂನನ್ನು ತಿರುಪಿಸುವ ರೀತಿಯನ್ನು ತೋರಿಸು[illegible] ಧ್ಯೇಯವನ್ನು ಅಲ್ಲಿನ [illegible] ತರ್ಕದ ರೂಪಿಸಲ್ಪಟ್ಟಿದ್ದಾದರೆ ಅದರಿಂದ ಸಾರ್ವಜನಿಕ ಹಿತವಾದರೂ ಆಗುತ್ತಿತ್ತು. ಪರದೇಶ ವಸ್ತ್ರ ದಹನವಾಗಬೇಕೇ? ಆಗಬೇಕಾದರೆ ಬಹಿರಂಗವಾಗಬೇಕೇ? ಬಹಿರಂಗವಾದರೆ ಸಾರ್ವಜನಿಕ ಸ್ಥಳಗಳಲ್ಲದನ್ನು ಮಾಡಬೇಕೆ? ಮಾಡುವುದು ಉಚಿತವೆಂತಾದರೆ, ಅದು ಸರಕಾರೀ ಶಿಕ್ಷೆಗೆ ಒಳಗಾಗುವಷ್ಟು ಮುಖ್ಯವಿದೆಯೇ? ಇಲ್ಲವಾದರೆ ಖಾಸಗಿ ಸ್ಥಳಗಳಲ್ಲಿ ಮಾಡಬಹುದೇ? ಅಲ್ಲಿಯೂ ಸರಕಾರದ ತೊಂದರೆಗಳಿದ್ದೀತೆ? ಇದ್ದರೆ ಅವೆಲ್ಲವನ್ನೂ ಅದು ಅನುಭವಿಸಿಯೂ ವಸ್ತ್ರದಹನವನ್ನಾಚರಿಸಬೇಕೇ? ಇತ್ಯಾದಿ ತರ್ಕವೇ ವಿಹಿತವಿದ್ದಿತಲ್ಲದೆ, ಕಾನೂನಿನ ಕಲ್ಪ ವಿನ್ಯಾಸವು ಯಾವ ಪ್ರಯೋಜನಕ್ಕೂ ಬೀಳಲಾರದು. ಕಲ್ಕತ್ತದ ಪರದೇಶಿ ವಸ್ತ್ರದಹನದ ಸರಕಾರೀ ಫಿರ್ಯಾದಿಯಲ್ಲಿ, ನಾವು ಯಾರನ್ನೂ ಅಭಿನಂದಿಸಲಾರೆವು.

ಹಿಂದೂ ಮಠಸಂಸ್ಥೆಗಳ ಬೋರ್ಡ್

ಈ ಬೋರ್ಡನ್ನು ಏರ್ಪಡಿಸಿದ ಕಾಯಿದೆಗೆ ಸಂಬಂಧಪಟ್ಟ ಮಠಸಂಸ್ಥೆಗಳಿಂದ ತಂತ್ರಪೂರ್ಣವಾದ ನಿಷೇಧವು ವ್ಯಕ್ತಪಡಿಸಲ್ಪಟ್ಟರೂ, ಅದು ಕಾರ್ಯಕಾರಿಯಾಗದೆ, ಕಾಯಿದೆಯು ಜ್ಯಾರಿಯಲ್ಲಿ ಬಂದಿತು. ಇಂತಹ ಬೋರ್ಡಿನ ಅವಶ್ಯಕತೆಯೊಂದಿದ್ದಿತೆಂಬುದು ಹಿಂದೂ ಮಠಸಂಸ್ಥೆಗಳಲ್ಲಿಯೂ ಮತ ಸಂಸ್ಥೆಗಳಲ್ಲಿಯೂ ಅಂತರಂಗದಲ್ಲಿಯೇ ಬೆಳೆದು ಬರುತ್ತಿದ್ದ ಕೆಡುಕುಗಳನ್ನು ಬಲ್ಲವರಿಗೆ ತಿಳಿದಿದ್ದಿತು. ಬ್ರಾಹ್ಮಣೇತರ ಪಕ್ಷವು ಅಧಿಕಾರದಲ್ಲಿದ್ದಾಗ ಹಿಂದೂ ಹಿತದ ಬಗ್ಗೆ ಮಾಡಿದ ಸತ್ಕಾರ್ಯದಲ್ಲಿ ಇದೊಂದೇ ಆಗಿರುತ್ತದೆ. ಇದಕ್ಕೆ ಸಾಲ ಕೊಡುವ ಬಗ್ಗೆ ಮೊನ್ನೆ ಮದ್ರಾಸ ಕೌನ್ಸಿಲಿನ ಬಜೆಟಿನಲ್ಲಿ ಡಾ. ಸುಬ್ಬರಾಯನರು ಠರಾವು ತಂದಾಗ, ಈ ಬೋರ್ಡಿನ ಅವಶ್ಯಕತೆ ಮತ್ತು ಅನಾವಶ್ಯಕತೆಗಳನ್ನು ಚರ್ಚಿಸುವ ಸಂದರ್ಭವು ಬಂದಿದ್ದಿತು. ಆದರೆ ಈ ಸಂದರ್ಭದಲ್ಲಿ ಯಾರೊಬ್ಬರೂ ಈ ಉಂಬಳಿ ಕಾಯಿದೆಯನ್ನು ಆಕ್ಷೇಪಿಸಲಿಲ್ಲವೆಂಬುವುದು ಸಂತೋಷದ ವಿಷಯ. ಇದನ್ನು ಆಕ್ಷೇಪಿಸಲಿಕ್ಕೆ ಸಮ್ಮತರಾಂತರ ಮಠಗಳು (ಇತರ ಯಾವ ಮಠೀಯ ಉದ್ದೇಶಕ್ಕೆ ಹಣವನ್ನು ಕೊಡಲು ಶಕ್ಯರಾಗದಿದ್ದರೂ) ನೀರಿನಂತೆ ಹಣವನ್ನು ವ್ಯರ್ಥಪಡಿಸಿಯವೆಯಾದುದರಿಂದ ಮಠಗಳ ಕಡೆಯಿಂದ ಯಾರಾದರೂ ಆಕ್ಷೇಪಿಸಬಹುದೂ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈ ಕಾಯಿದೆಯ ಆಚರಣೆಯು ಉದ್ದೇಶಕ್ಕೆ ಅನುಕೂಲವಾಗಿ ನಡೆಯಲಿಲ್ಲವೆಂಬುವುದೇ ದುಃಖಕರ. ಈ ಕಾಯಿದೆಗೆ ಅನುಸಾರವಾಗಿ ಸ್ಥಳೀಯ ಕಮಿಟಿಗಳೇನೂ ಹಲವು ಚುನಾಯಿಸಲ್ಪಟ್ಟವೆ. ಆದರೆ ಈ ಕಮಿಟಿಗಳಲ್ಲಿ ಇರಬೇಕಾದ ಉತ್ಸಾಹವೂ, ಮನಃಪೂರ್ವಕತೆಯೂ, ದೃಢ ನಿರ್ಧಾರದ ಶಕ್ತಿಯೂ ಇವುಗಳಲ್ಲಿಲ್ಲವೆಂಬುವುದು. ಇವುಗಳಿಗೆ ಸಾಲದ ಅವಶ್ಯಕತೆ ಬಿದ್ದದ್ದೇ ಒಂದು ಸಾಕಾದ ನಿದರ್ಶನವಾಗಿರುತ್ತದೆ. ಕೆಲವು ಪ್ರಬಲವೂ ಶ್ರೀಮಂತವೂ ಆದ ಸಂಸ್ಥೆಗಳು ಗುಟ್ಟಿನ ತಂತ್ರಗಳಿಂದ ಈ ಕಾಯಿದೆಯ ಮಹತ್ವದಿಂದ ತಪ್ಪಿಸಿಕೊಳ್ಳುತ್ತಿವೆ ಎಂದು ನಾವು ಮನಸ್ಸಿನಲ್ಲಿ ಬರೆಯ[illegible]. ಅದರಿಂದ ಈ ಬೋರ್ಡಿನಿಂದಲೂ ಈ ಕಾಯಿದೆಯಿಂದಲೂ ಪರಿಣಾಮಕಾರಿಯಾದ ಪ್ರಯೋಜನವಾಗಬೇಕಾದರೆ ಹಿಂದೂಗಳೂ ಸ್ವಲ್ಪ ಎಚ್ಚರವಾಗಿ ಈ ಕಾನೂನಿನ ಜ್ಯಾರಿಯ ವಿಷಯದಲ್ಲಿ ನಿಗಾವಣೆ ತೆಗೆದುಕೊಳ್ಳುವುದು ಅವಶ್ಯವಿದೆ.

ಜೀವವಿಮೆಯ ಎಚ್ಚರಿಕೆ

ಇನ್ಶ್ಯುರ್ ಏಜಂಟರೆಂದರೆ ಊರಲ್ಲಿ ಬಹಳ ಮಂದಿ ಇದ್ದಾರೆ. ಒಂದು ಕಾಫಿಯ ಲಂಚನಿಂದಲೂ, ಒಂದು ಸ್ನೇಹದ ದಾಕ್ಷಿಣ್ಯದಿಂದಲೂ ಒಂದು ಪ್ರೊಪೋಜಲ್ ಪಾರಾದಿಯಿಂದ ವಿಮೆಯ ಮಾಡುವವರು ಎಷ್ಟೋ ಮಂದಿ ಇದ್ದಾರೆ. ಇನ್ಶ್ಯುರ್ ಮಾಡುವವರು ಆ ಲಂಚವನ್ನೂ ದಾಕ್ಷಿಣ್ಯವನ್ನೂ ಗಣ್ಯ ಮಾಡದೆ ತಾವು ಇನ್ಶ್ಯುರ್ ಮಾಡಿಕೊಳ್ಳುವ ಕಂಪೆನಿಯ ಸ್ಥಿತಿಗತಿಗಳನ್ನು ಮುಂದಾಗಿ ತಿಳಿದುಕೊಳ್ಳಬೇಕು. ಏಕೆಂದರೆ ಸಾಧಾರಣ ಕಂಪೆನಿಗಳಾದರೆ ಮೃತ್ಯು ಕೊಡಲಿಕ್ಕೆ ಒಪ್ಪಿದಷ್ಟರೆ ಸ್ಥಳೀಕ ಕೋರ್ಟುಗಳಲ್ಲಿ ವಸೂಲು ಮಾಡಲಿಕ್ಕಾಗದೆ, ಕಂಪೆನಿಯ ಹೆಡ್ಡಾಫೀಸು ಇರುವ ಶಹರುಗಳಿಗೆ ಹೋಗಿ ಫಿರ್ಯಾದು ದಾಖಲು ಮಾಡಬೇಕಾಗುವುದು. ಹೀಗೆ ಕಾನೂನಿನ ಸಹಾಯದಿಂದ ಪರ ಊರುಗಳಿಗೆ ಇನ್ಶ್ಯುರ ಹಣವನ್ನು ವಸೂಲು ಮಾಡುವುದು ಅದಕ್ಕಾಗಿ ಬೇಕಾಗುವ ಖರ್ಚಿನ ಕಾರಣದಿಂದ ಸಾಧ್ಯವಾಗಲಾರದು. ಮದ್ರಾಸಿನ ಒಬ್ಬ ವಿಧವೆಯು ತನ್ನ ಗಂಡನು ಮಾಡಿದ ಇನ್ಶ್ಯುರಿನ ೫೦೦೦ ರೂಪಾಯಿಯನ್ನು ವಸೂಲು ಮಾಡಲು ಮದ್ರಾಸಿನ ಹೈಕೋರ್ಟಿನಲ್ಲಿ ತಂದ ದಾವೆಯು ಕಂಪೆನಿಯು ಮುಂಬ್ಯಾದಾದ್ದರಿಂದ ದಾವೆಯೂ ಮುಂಬ್ಯಾಯಲ್ಲಿಯೇ ನಡೆಯಬೇಕೆಂದು ತೀರ್ಮಾನವಾಗಿ, ಪ್ರತಿವಾದಿಯ ಖರ್ಚನ್ನೂ ತೆರಬೇಕಾಗಿ ವಿಧಿಸಲ್ಪಟ್ಟು ಬಿದ್ದು ಹೋಯಿತು. ಇನ್ಶ್ಯುರೆಂಬುದು ವೃದ್ಧಾಪ್ಯಕ್ಕೂ ತನ್ನ ಪ್ರೀತಿಯ ಸಂಬಂಧಕ್ಕೂ ಸಹಾಯಕವಾಗಿ ಉಪಕಾರಕ್ಕೆ ಬೀಳುವಂತಹುದಾಗಿದೆ. ಇದು ಸಾವಿರಗಟ್ಟಳೆಯ ವಿಷಯವಾದುದರಿಂದ ಕಂಪೆನಿಯ ಪೂರ್ವಾಪರಗಳನ್ನು ವಿಚಾರಿಸಿ, ಅದು ಹಣವನ್ನು ಕೂಡಲೇ ತೆರುತ್ತದೊ ಇಲ್ಲವೊ ಎಂಬುದನ್ನು ಸ್ವಂತ ವಿಚಾರದಿಂದಲೇ ತಿಳಿದುಕೊಂಡು, ತೊಂದರೆಕೊಡದಂತಹ ಶ್ರೇಷ್ಠ ವರ್ಗದ ಕಂಪೆನಿಗಳಲ್ಲಿ ಮಾತ್ರವೇ ಜೀವ ವಿಮೆಯನ್ನು ಮಾಡಿಕೊಳ್ಳಬೇಕು.

ನೋಟಗಳು
NOTES

ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ 'ವನಸ್ಪತಿ ವೈದ್ಯರು' ಎಂದು ಬರೆದದ್ದು ತಪ್ಪಾಗಿದೆ ಎಂದು ಕೆಲವರು ರೇಗಿದ್ದಾರಂತೆ. ತಪ್ಪಾದಲ್ಲಿ 'ಆಯುರ್ವೇದ ಡಾಕ್ಟರ'ರೆಂದು ತಿದ್ದುಪಡಿ ಮಾಡಿಕೊಳ್ಳಬಹುದು.

• • • •

ಕಳೆದ ವಾರದಲ್ಲಿ ನೋಟೀಸ್ ಕೊಟ್ಟು ಸಭೆಯುಕ್ತ ಪ್ರಕಾರ ಸಭೆ ಸೇರಿ ಆಯುರ್ವೇದ ಪರಿಷತ್ತಿನ ಉಳಿದ ಹಣವನ್ನು ರಾಮಕೃಷ್ಣ ಧರ್ಮವೈದ್ಯಾಶ್ರಮಕ್ಕೆ ಕೊಟ್ಟರು. ಹಣ ಕೊಟ್ಟ ಶರ್ತ — ಆಯುರ್ವೇದ ಪುಸ್ತಕಗಳನ್ನು ಕರಿಸುವ ಬಗ್ಗೆ.

• • •

ಕಲ್ಕತ್ತೆಯಲ್ಲಿ ಶ್ರದ್ಧಾನಂದ ಪಾರ್ಕಿನಲ್ಲಿ ಗಾಂಧಿಜಿಯವರು ಮತ್ತು ಇತರ ಮುಖಂಡರು ಕೂಡಿ ವಸ್ತ್ರ ದಹನ ಮಾಡುವಾಗ್ಯೆ ಪೋಲೀಸರು ಗಾಂಧಿಜಿಯವರ ಮೇಲೆ ಮತ್ತು ಇತರ ಮುಖಂಡರ ಮೇಲೆ ನಂಬ್ರ ಮಾಡಿದ್ದರು.

• • •

ನಂಬ್ರದ ವಿಚಾರಣೆ ಮುಗಿದು ಗಾಂಧಿಜಿಯವರಿಗೆ ಬರೇ ಹದಿನಾರಾಣೆ ಜುಲುಮಾನೆ.

• • • •

ಸಾವಿರಗಟ್ಲೆ ರೂಪಾಯಿ ವಸ್ತ್ರದಹನ ನಡೆದರೂ 'ಅಡಿಗೆಬಿದ್ದರೂ ಮೂಗು ಮೇಲೆ' ಎಂಬಂತೆ ತೋರಿಸಿಕೊಳ್ಳಲಿಕ್ಕೆ ಬರೆ ಒಂದು ರೂಪಾಯಿಯಿಂದ ಸುಧಾರಿಸಿದಿಟ್ಟರು.

• • • •

ಬಂಟವಾಳದಲ್ಲಿ ಕಳೆದ ತಾ. ೨೩ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಸ್ಥಾಪನೆಗಾಗಿ ಸಭೆ ಸೇರಿತು.

• •

ಸಭೆಗೆ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಈ ಎಲ್ಲಾ ಕಡೆಯಿಂದ ಉಪಾಧ್ಯಾಯರು ಉಪಾಧ್ಯಾಯಿನಿಯರು ಹಾಜರಿದ್ದರಂತೆ.

• • • •

ಸಂಘ ಸ್ಥಾಪನೆ ಉದ್ದೇಶಕ್ಕಿಂತ ಇನ್ನು [illegible] ಹಾಜರಿದ್ದರಂತೆ ಮಧ್ಯಮ ಅಭಿಪ್ರಾಯವು [illegible] ಸಭೆಯ ದಿವಸವೇ ಹಾಜರಿದ್ದರೆಂದು ಒಂದು ಬಾತ್ಮಿ.

• • • •

ಪುತ್ತೂರು ಕರ್ನಲವರ ಸಭೆ ನಡೆದದ್ದೆ ಅಕ್ರಮ ಮತ್ತು ಪುತ್ತೂರು ಕರ್ನಲ ಒಬ್ಬ ಉಪಾಧ್ಯಾಯ ಮಹನೀಯರು ವ್ಯಕ್ತಿದೋಷವನ್ನು ತೋರಿಸಿ, ಬಂಟವಾಳ ಕರ್ನಲವರ ಮೇಲೆ ಆರೋಪಣೆಗಳನ್ನು ಮಾಡಿದ್ದಾರೆ. ವ್ಯಕ್ತಿದೋಷದ ಬಾತ್ಮಿ ಪ್ರಕಟಿಸಲು ಅಯೋಗ್ಯವಾದುದರಿಂದ ಬಾತ್ಮಿಯನ್ನು ಬಾತ್ಮಿದಾರರಿಗೆ ಕಳಿಸಿರುತ್ತದೆ.

• • • •

ಸಂಘಸ್ಥಾಪನೆ ಬಗ್ಗೆ ಸಭೆ, ಸಂಘ ಉದ್ದೇಶಕ್ಕೆ ಬರುವ ಮುಂಚೆಯೇ ಹಲವು ವ್ಯಕ್ತಿಯ ಬಾತ್ಮಿಗಳು. ಮುಂದಕ್ಕೆ ಸಂಘ[illegible] ನಡೆಯುವಾಗ [illegible] ಸ್ಥಿತಿ ಹ್ಯಾಗೋ.

• • •

ಅಂತೂ ಇಂಥಾ ಸಭೆಗಳು ಮತ್ತು ಸಂಘಗಳು ಪತ್ರಿಕಾ [illegible] ಸಹಕಾರಿ

• • •

ಮೈಸೂರಿನಲ್ಲಿ ಸರಕಾರಿ ಗಂಧದ ಕಾರ್ಖಾನೆಯಲ್ಲಿ ಗಂಧದೆಣ್ಣೆ ಏಜಂಟರಿಗೆ [illegible] ಮಾಡಿದ ಹಣ ಬರೇ ೬೦,೦೦೦ ಲಕ್ಷ [illegible] ಆಗುತ್ತಿದೆಯಂತೆ.

ಶಾಲಿವಾಹನ ಶಕೆ ೧೮೫೦ನೆಯ ವಿಭವಸಂವತ್ಸರದ ಮಾಘ ಬ ೫ ಶನಿವಾರದಿಂದ ವಿಭವ ಸಂವತ್ಸರದ ಫಾಲ್ಗುಣ ಬ ೧೧ ಶುಕ್ರವಾರದ ವರೆಗಿನ ಪಂಚಾಂಗ.

([illegible] ವಿಭವ (ಶುಗ್ಗಿ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
30	ಶನಿ	೫	೩೩.೧೬	ಅನುರಾಧಾ	೩೨.೫೬	೧೭	6.31	6.41
31	ರವಿ	೬	೩೫.೧೪	ಜ್ಯೇಷ್ಠಾ	೩೯.೦	೧೮	6.31	6.41
1	ಸೋಮ	೭	೪೩.೧೬	ಮೂಲಾ	೪೫.೩೩	೧೯	6.29	6.41
2	ಮಂಗಳ	೮	೪೮.೧೪	ಪೂ. ಷಾ.	೫೧.೪೩	೨೦	6.29	6.41
3	ಬುಧ	೯	೫೩.೧೬	ಉ. ಷಾ.	೫೭.೧೩	೨೧	6.28	6.41
4	ಗುರು	೧೦	೫೫.೪೩	ಶ್ರವಣ	೬೦.೦	೨೨	6.27	6.41
5	ಶುಕ್ರ	೧೧	೫೭.೩೧	ಶ್ರವಣ	೧.೪೮	೨೩	6.27	6.41

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
22	92—0	77—8	—	—
23	91—5	75—4	—	—
24	91—2	78—9	—	—
25	91—8	78—2	—	—
26	91—8	77—9	—	—
27	92—3	78—6	—	—
28	92—6	79—7	—	—
				125-22

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ.	ವರೆಗೆ ರೂ.	ಆ.
ಮುಸ್ತಿ ...	6	12	7	8
ಗುಡ್ಡು ...	6	—	6	8
ನಾಶಿ ..	5	5	6	0
ಊರ ಅನ್ನರ್ ಬೆಲ್ಲಗೆ ...	7	0	7	
ರಂಗೂನು ಬೆಲ್ಲಗೆ ಗೋಣಿ ಗಳ್ಳಿ ..	12	1[illegible]	[illegible]3	
ಎಲ್ಲೂರು ಬೆಲ್ಲಗೆ ಮುಡಿ ಗಳ್ಳಿ ...	6	4	6	8
ಗೋಧಿ ಗೋಣಿ ಗಳ್ಳಿ ...	18	12	20	[illegible]
ಹುರುಳಿ ಗೋಣಿ ಗಳ್ಳಿ ..	7	6		2
ಕಡಲೆ ಗೋಣಿ ಗಳ್ಳಿ ..	14	8	[illegible]5	8
ತೊಗರಿ ಗೋಣಿ ಗಳ್ಳಿ ..	14	8	15	0
ತೊಗರಿಬೇಳೆ ಗೋಣಿ ಗಳ್ಳಿ ..	18	8	27	0
ಉದ್ದು ಗೋಣಿ ಗಳ್ಳಿ	15	6	15	12
ಹೆಸರು ಗೋಣಿ ಗಳ್ಳಿ	[illegible]4	[illegible]	14	[illegible]
ಊರು ಬೆಲ್ಲ ಖಂಡಿ ಗಳ್ಳಿ ...	80	0	84	8
ಉಪ್ಪು ಗೋಣಿ ಗಳ್ಳಿ ..	4	6	5	0
ಕೊಬ್ರಿ ಖಂಡಿ ಗಳ್ಳಿ ...	93	[illegible]	100	
ಕೊಬ್ರಿ ಹಿಂಡಿ ಖಂಡಿ ಗಳ್ಳಿ ..	32	0		
ಎಳ್ಳಿಂಡಿ ಖಂಡಿ ಗಳ್ಳಿ ..	42	8		
ಕೊಬ್ರಿ ಎಣ್ಣೆ ಮುಡಿ ಗಳ್ಳಿ ...	6	12	8	4
ಎಳ್ಳೆಣ್ಣೆ ಮುಡಿ ಗಳ್ಳಿ ..	7	12	8	4
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳಿ ..	7	12	8	4
ಮೋರಿಸ ಸಕ್ಕರೆ ಮುಡಿ ಗಳ್ಳಿ ..	3	10	3	12
ಹೊಸ ಮೆಣಸು ...	5	4	6	8
ಹಳ್ಳು ಊರ ಮೆಣಸಿನಕಾಯಿ ಮುಡಿ ಗಳ್ಳಿ	1	8	2	4
ಸಾಸಿವೆ ಮುಡಿ ಗಳ್ಳಿ ...	9	0	8	8
ಕೊತ್ತಂಬರಿ ಮುಡಿ ಗಳ್ಳಿ ...	4	4	5	2
ನೇಟಿವ್ ಕಾಫಿ ಖಂಡಿ ಗಳ್ಳಿ ...	395	0	415	0
ಅಡಿಗೋಟು ಅಡಕೆ ಖಂಡಿ ಗಳ್ಳಿ ...	145	0	185	0
ಕಾಳುಮೆಣಸು ಖಂಡಿ ಗಳ್ಳಿ ..	420	0	424	0
ಯೇಲಕ್ಕಿ ಮುಡಿ ಗಳ್ಳಿ ...	65	0	75	—
ಗೇರುಬೀಜ ಮುಡಿ ಗಳ್ಳಿ ...	9	4		
ಕಲ್ಲುಪ್ಪು ಖಂಡಿ ಗಳ್ಳಿ ...	42	0	45	8
ಹುಂಬ್ಳು ತಗಡು ಗಳ್ಳಿ ...	19	12	13	8
ಹುಂಬ್ಳು ಪಾತ್ರೆಗಳು ಮುಡಿ ಗಳ್ಳಿ ...	25	0	22	4
ಚೀನಿಬೆಳ್ಳಿ ಸೇರು ಗಳ್ಳಿ ...	15	4	—	
ಹಿತ್ತಾಳೆ ತಗಡು ಮುಡಿ ಗಳ್ಳಿ ..	16	0	18	0
ಪವನು ಗಳ್ಳಿ ...	13-9-0		—	
ಹುಣಸೆಹುಳಿ ಖಂಡಿ ಗಳ್ಳಿ ...	24	0	32	8

ಪರೀಕ್ಷಿಸಿರಿ! ಕ್ರಯವು ಅಗ್ಗ. ಖಾತ್ರಿಯಾಗುವದು!! ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದಿಕ್ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ [illegible] ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] [illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂಥ

ಚಕ್ ರೋಲ್‌ಗಳು

ಮೂರು ಸ್ಥಾಪನದಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ | ಅಂಚೆಹಾಸಲು ಆಗಲಿ

[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ [illegible] ವಿಷಯಗಳುಳ್ಳ

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]

ವಿ. ಗುಲಬ್ ಮಾರ್ಚ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು

(1927ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು [illegible] XXIನೇ [illegible] ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible] 1927ನೇ ಇಸವಿ [illegible] ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

[illegible]
ವರ್ತಮಾನ ಸಂಗ್ರಹಗಳು [illegible]
[illegible]
[illegible]—[illegible]
[illegible]
[illegible]
ವರ್ತಮಾನ [illegible] (ಕ್ರಿ)

ಸ್ವದೇಶಾಭಿಮಾನಿ.

ತಾರೀಖು ೨೨ನೇ ಶುಕ್ರವಾರ ಮಾರ್ಚ್ ೧೯೨೯.

ದಬ್ಬಾಳಿಕೆ.

ಈಗ ಹಿಂದೂಸ್ಥಾನದಲ್ಲಿ ಹಲವು ಕಡೆಗಳಲ್ಲಿ ಹಲವು ಮಜೂರ ಮುಖಂಡರು ಕೈದುಮಾಡಲ್ಪಟ್ಟಿರುವುದು ಸರಕಾರದ ಬಲಾತ್ಕಾರದ ಕೈಯನ್ನೂ, ಹಿಂದೀಯ ಮಜೂರ ಚಳವಳದ ಅಡಿಯಲ್ಲಿರುವ ಅಡಗಿದ ಕೈಯನ್ನೂ ತೋರಿಸುವಂತಿದೆ. ಕಳೆದ ಮೂರು ವರ್ಷಗಳಿಂದ ಹಿಂದೂಸ್ಥಾನದಲ್ಲಿ ಬೆಳೆಯುತ್ತಾ ಬರುತ್ತಿದ್ದ ಮಜೂರ ಅಸಮಾಧಾನವನ್ನು ನಾವು ಲಕ್ಷಿಸುತ್ತಲೇ ಇದ್ದೇವೆ. ಹಿಂದೂಸ್ಥಾನದ ಮಜೂರ ಪರಿಸ್ಥಿತಿಯು ಬಹಳ ಕೆಟ್ಟಿದ್ದಿದೆ, ಅದರ ಸುಧಾರಣೆಯು ಅವಶ್ಯವಾದದ್ದಾಗಿದೆ, ಎಂಬುದನ್ನು ನಾವು ಯಾವಾಗಲೂ ಅನ್ನುತ್ತಾ ಇದ್ದೇವೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಜೂರ ಪರಿಸ್ಥಿತಿಗಳನ್ನು ನೋಡಿದರೆ, ಹಿಂದೀಯ ಮಜೂರ ಪರಿಸ್ಥಿತಿಯು ನರಕ ಸಮಾನವಾಗಿದೆ ಎಂದು ಧಾರಾಳವಾಗಿ ಹೇಳಬಹುದಾಗುತ್ತದೆ.

ನಿಮ್ಮ ಭವಿಷ್ಯವನ್ನು ತಿಳಿಯಬಿಚ್ಛೆಯುವಿರೋ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕುರಿತಾದ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. [illegible]; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ [illegible] ಮಾತ್ರ; ಪ್ರತಿ ತಿಂಗಳ ಕಾಲಂಕುಶ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. [illegible]; ಐದು ವರ್ಷದ ಫಲ ರೂ. [illegible]; ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. [illegible]. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. [illegible]; [illegible] ಆಣೆ [illegible]; ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ. [illegible].

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) ಮದ್ರಾಸು ತಾ. [illegible]-2-1924ರಲ್ಲಿ ಬರೆದುದು — [illegible] ಹನುಮಾನ್ ಜ್ಯೋತಿಷಾಲಯದ ಪಂಡಿತ [illegible] ವಿ. ಕೆ. ಶತಗೋಪಾಚಾರ್ಯರಿಂದ ನಾವು ಒಂದು ಪತ್ರವನ್ನು ಪಡೆದೆವು. [illegible] 1923ನೇ ಇಸವಿ ನವಂಬರು ತಾ. [illegible]ರಲ್ಲಿ ಪ್ರಕಟವಾಯಿತು. ಅದರಲ್ಲಿ ಮಹಾತ್ಮಜಿಯವರು 1924ನೇ ಇಸವಿ ಫೆಬ್ರವರಿ ತಾ. [illegible]ರಲ್ಲಿ [illegible] ಕಾರಾಗಾರದಿಂದ ಮುಕ್ತರಾಗುವರೆಂದು ಬರೆದಿತ್ತು. ಅದರಲ್ಲಿ ಹೇಳಿದಂತೆಯೇ ನಡೆದಿದೆ. [illegible] ಈ ಜೋತಿಷ್ಯರ ಅದ್ಭುತ ಶಕ್ತಿಯನ್ನು ಸರ್ವರೂ ಪರೀಕ್ಷಿಸಲು ನಾವು ಶಿಫಾರಸು ಮಾಡುತ್ತೇವೆ.

V. K. Satagopachariar,
Hanuman Astrological Office,
TIRUTTANI, CHITTOOR DISTRICT,
Madras Presidency.

ವಿ. ಕೆ. ಶತಗೋಪಾಚಾರ್ಯರ್,
ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,
ತಿರುತ್ತಣಿ, ಚಿತ್ತೂರು ಜಿಲ್ಲೆ,
ಮದರಾಸು ಸಂಸ್ಥಾನ.

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ.

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

☞ ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ.

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು
ಡೊಂಗರಕೇರಿ ಸ್ಟ್ರೀಟ್,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲ್‌ಬೈಲ್ ಪೋಸ್ಟು,
ದ. ಕನ್ನಡಾ.

(೧೩ನೇ ಪುಟದಿಂದ ಮುಂದುವರಿದುದು)

ಇನ್ನಿಗೆ ಬಂದರೆ ನಾನು ಬಂದ ಹೋದ ವಿಷಯವನ್ನು ದಯವಿಟ್ಟು ಯಾರಿಗೂ ತಿಳಿಸದಿರಿ. ನಾಳೆ ಸಂಜೆ ಬರುವೆನು" ಎಂದು ಹೇಳುತ್ತ ರಮಾನಂದರಾಯನ ಅಂಗಡಿಯಿಂದ ಹೊರಟು ಹೋದನು.

ಇದನ್ನು ನೋಡಿ ರಮಾನಂದರಾಯನು ಭಾವಿಸತೊಡಗಿದನು. "ಇನ್ಸ್‌ಪೆಕ್ಟರ್ [illegible] ಬಂದಿ, ಅಥವಾ [illegible] ಬಂದಿ. ನನ್ನೊಡನೆ ಇವರ ಬುದ್ಧಿವಂತಿಕೆಯು ನಡೆಯುತ್ತದೆಂತ ಇವರು ಎಣಿಸುವುದೇ ದೋಷ! ಯಾವಾತನು ನಗರಿಯಾಗಿ [illegible] ರೂಪಾಯಿಗಳನ್ನು ಇಲ್ಲಿ ಲೆಕ್ಕ [illegible], ಆತನೇ ಮಾತ್ರ ಈ ಸುವರ್ಣ ಬಟ್ಟಲನ್ನು ಇಲ್ಲಿಂದ ಸ್ವಾಧೀನಪಡಿಸಿಕೊಳ್ಳಬಲ್ಲನು!! ಇಲ್ಲವಾದರೆ ಈ ಬಟ್ಟಲನ್ನು ಮುಟ್ಟುವ ಮಾತಿಲ್ಲ!!! ನಾನು ಇವರಂತಹ ಎಷ್ಟೋ ಮೋಸಗಾರರನ್ನು ಬಲ್ಲೆನು. ಇವರು ವಿವಿಧ ವೇಷಗಳಿಂದ ಜನರನ್ನು ವಂಚಿಸುತ್ತಾರೆ. ಹಲವು ಬಾರಿ ವಂಚಕರು ನನ್ನನ್ನೂ ವಂಚಿಸಬೇಕೆಂದು ಪ್ರಯತ್ನಪಟ್ಟಿರುವರು! ಆದರೆ ನಾನು ಎಮ್ [illegible] ಹಗಲಿರುಳೂ ವರ್ತಮಾನ ಪತ್ರಿಕೆಗಳನ್ನು ಓದುವೆನು! ಪತ್ರಿಕೆಗಳಲ್ಲಿ ಅನೇಕ ವಿಧವಾದ ವಂಚನೆಯ ವಾರ್ತೆಗಳನ್ನು ಓದಿರುವೆನು. ನನ್ನೊಡನೆ ಇವರ [illegible] ಯುಕ್ತಿಗಳೂ ನಡೆಯುವುವೇ? [illegible] ರೂಪಾಯಿಗಳನ್ನು ನೋಡದೆ ಈ ಸುವರ್ಣ ಬಟ್ಟಲು — ಈ [illegible] ವಸ್ತುವು ಕೋಶೇಶನೊಳಗಿಂದ ಹೊರಕ್ಕೆ ಬರಲಾರದು." ಹೀಗೆ ತನ್ನಷ್ಟಕ್ಕೆ ಭಾವಿಸಿ ರಮಾನಂದರಾಯನು ವರ್ತಮಾನ ಪತ್ರಿಕೆಯನ್ನು ಓದುತ್ತ ಕುಳಿತನು.

— ಮೂರು —

ಢಣ್ ಢಣ್ ಎಂದು ಗಡಿಯಾರವು ಒಂದು ಘಂಟೆಯಿಂದ ಮೇಲೆ 'ವೆಲ್ಟಾಕ್' ಕಾರು ರಮಾನಂದರಾಯನ ರತ್ನಾಭರಣದ ಅಂಗಡಿಯ ಮುಂದೆ ಒಂದು ನಿಂತುಕೊಂಡಿತು. ವೆಲ್ಟಾಕ್ ಕಾರನ್ನು ನಡೆಯಿಸುವವನು ಕೆಳಕ್ಕಿಳಿದು ಅದರ ಬಾಗಿಲನ್ನು ತೆರೆದೊಡನೆಯೇ ಒಬ್ಬ ವಿಶಾಲಕಾರದ ಸ್ವಾಮ್ಯ ಮೂರ್ತಿ ಪುರುಷನು 'ವೋಲ್ಟಾಕ್' ಕಾರಿನಿಂದ ಇಳಿದು ರಮಾನಂದರಾಯನ ಅಂಗಡಿಯನ್ನು ಪ್ರವೇಶಿಸಿದನು. ಆತನು ಖಾಕಿ ವರ್ಣದ ಅಂಗಿಯನ್ನೂ, ಶರ್ಟನ್ನೂ, ಕೋಟುಗಳನ್ನೂ ಧರಿಸಿದ್ದನು. ಅಂಗಿಯ ಬಲಗೈಯು ಶೂನ್ಯವಾಗಿತ್ತು. ಅಂಗಿಯ ಬಲಗೈಯ ಅಗ್ರಭಾಗವು ಬಲಭಾಗದ ಜೇಬಿನೊಳಗೆ ಪ್ರವಿಷ್ಟವಾಗಿತ್ತು. ಈತನನ್ನು ನೋಡಿದ ಕೂಡಲೇ ರಮಾನಂದರಾಯನು ಭಗ್ನಹಸ್ತದ ಇನ್ಸ್‌ಪೆಕ್ಟರ್ ರಮಾನಾಥರಾಯರು ಇವರೇ ಆಗಿರಬೇಕೆಂಬುದಾಗಿ ಭಾವಿಸಿದನು. ಇನ್ಸ್‌ಪೆಕ್ಟರನ ಪ್ರಾಯವು ಸಾಧಾರಣ ಮೂವತ್ತು ವರುಷವಾಗಿರಬಹುದು. ಮುಖಮಂಡಲವು ವಿಶಾಲವಾದುದು. ದೃಷ್ಟಿಗೆ ದೃಷ್ಟಿ ಚಕ್ರಗಳನ್ನಿಟ್ಟುಕೊಂಡಿರುವನು. ತಲೆಯ ಮೇಲೆ ಅಂದವಾದ ಹ್ಯಾಟು ಇದೆ.

ಸಶೇಷ.

ವಂಚಕರ ಹೊಂಚಿಕೆ

(ಕಥೆ)

([illegible])

[ಸೂಚನೆ—ಇದು ಕೇವಲ ಕಲ್ಪಿತ ಕತೆಯಾದುದರಿಂದ ಇದರಲ್ಲಿರುವ ವ್ಯಕ್ತಿನಾಮಗಳೂ ಕಲ್ಪಿತವಾದುವುಗಳೇ ಎಂದು ತಿಳಿಯಬೇಕು.]

— ಒಂದು —

ರಮಾನಂದರಾಯನು ಎಮ್. ಎ. ಪಾಸಾದ ಬಳಿಕ ಸರಕಾರಿ ಉದ್ಯೋಗಕ್ಕಾಗಿ ಬಹಳ ಹೋರಾಡಿದನು. ಸರಕಾರಿ ಆಫೀಸುಗಳು ಎಷ್ಟನೆಯೋ ಅವುಗಳ ಮುಖ್ಯ ಅಧಿಕಾರಿಗಳಿಗೆಲ್ಲ ಒಂದೊಂದು ಅರ್ಜಿಯನ್ನು ಬರೆದುಹಾಕಿದನು. ಆದರೆ ಪ್ರತಿಯೊಂದು ಅರ್ಜಿಗೂ "ಖಾಲಿ ಇಲ್ಲ" "ಹಿಂದಿನಿಂದ ತಿಳಿಸಲಾಗುವುದು" "ಬ್ರಾಹ್ಮಣರಿಗೆ ದೊರಕಲಾರದು" "ಅನುಭವವಿಲ್ಲದವರಿಗಿಲ್ಲ ಸ್ಥಾನವಿದು" ಎಂದಿಷ್ಟೇ ಉತ್ತರವಾತನಿಗೆ ದೊರೆಯಿತೇ ವಿನಹಾ ಚಾಕರಿಯು ದೊರೆಯಲಿಲ್ಲ. ಆದುದರಿಂದ ಆತನು ಆತ್ಮೀಯ ಸ್ವಜನರ ಸೂಚನೆಯಂತೆ ಹಿರಿಯರು ಗಳಿಸಿಟ್ಟ ಸ್ವಲ್ಪ ದ್ರವ್ಯ ಸಹಾಯದಿಂದ ಒಂದು ರತ್ನಾಭರಣಗಳ ವ್ಯಾಪಾರದ ಅಂಗಡಿಯನ್ನು ತೆರೆಯಬೇಕಾಯಿತು. ಮಂಗಳೂರು ಪಟ್ಟಣದ ಹಂಪನಕಟ್ಟೆಯ ಬಳಿಯಲ್ಲಿರುವ ಪ್ರಕಾಂಡವಾದೊಂದು ಭವನದ ಕೆಳಗಿನ ಕೋಣೆಯೊಂದರಲ್ಲಿ ಆತನ ಅಂಗಡಿಯು ಸ್ಥಾಪಿತವಾಯಿತು. ಅಂಗಡಿಯ ಶಿರೋಭಾಗದಲ್ಲಿ ದೊಡ್ಡದೊಂದು 'ಸ್ಯಾನ್ ಬೋರ್ಡು' ಅಂದವಾದ ದೊಡ್ಡ ದೊಡ್ಡ ಸ್ವರ್ಣಾಕ್ಷರಗಳಿಂದ ಲಿಖಿತವಾಯಿತು. "ರಮಾನಂದರಾವ್, ಎಮ್. ಎ. ಜುವೆಲರ್" ಎಂಬಿವೇ 'ಸ್ಯಾನ್ ಬೋರ್ಡಿ'ನ ಮೇಲೆ ಬರೆಯಲ್ಪಟ್ಟ ಅಕ್ಷರಗಳು. ರಸ್ತೆಯ ಪಾರ್ಶ್ವದಲ್ಲೇ ತೋರುವ 'ಶೋಕೇಜಿ'ನೊಳಗೆ ವಿವಿಧವಾದ ಸುಂದರ—ಬಹು ಬೆಲೆಬಾಳುವ ಅಲಂಕಾರಾದಿಗಳು ಸುಸಜ್ಜಿತವಾಗಿದ್ದುವು. ವ್ಯಾಪಾರವೇನೋ ಚೆನ್ನಾಗಿ ನಡೆಯುತ್ತಿತ್ತು.

ಅಂಗಡಿಯನ್ನು ತೆರೆದಂದಿನಿಂದ ಸರ್ವದಾ ರಮಾನಂದರಾಯನು ಚಿನ್ನಾಭರಣಗಳನ್ನು ಕಡಿಮೆ ಬೆಲೆಗೆ ಕೊಂಡುಕೊಂಡು ಮಾರಾಟಮಾಡುವುದರಲ್ಲೇ ನಿರತನಾದನು. ಯಾರಾದರೂ ವ್ಯಕ್ತಿಗಳು ವಿಪತ್ತಿನಲ್ಲಿ ಸಿಲುಕಿ ಅಲಂಕಾರಾದಿಗಳನ್ನೋ ರತ್ನಾದಿಗಳನ್ನೋ ವಿಕ್ರಯಮಾಡುವರೆಂಬ ಸುದ್ದಿಯನ್ನು ಕೇಳಿದೊಡನೆಯೇ, ಆತನು ಅವುಗಳನ್ನು ಅಲ್ಪಕ್ರಯಕ್ಕೆ ಪಡಕೊಂಡು ವಿಕ್ರಯಮಾಡಿ ಯಥೇಷ್ಟ ಲಾಭ ಪಡೆಯುತ್ತಿದ್ದನು. ಕೈಯಲ್ಲಿ ನಗದಿ ಹಣವಿದ್ದರೆ ವ್ಯಾಪಾರವನ್ನು ಚೆನ್ನಾಗಿ ನಡೆಯಿಸಿ ತುಂಬಾ ಲಾಭಪಡೆಯಬಹುದೆಂಬದಾಗಿ ಆತನು ಭಾವಿಸಿದ್ದನು. ಆದುದರಿಂದಲೇ ಯಾವಾಗಲೂ ಆತನು ಸ್ವಲ್ಪ ಹಣವನ್ನು ತನ್ನೊಡನೆ ಅಂಗಡಿಯಲ್ಲಿಯೂ, ಕೆಲವು ನೋಟುಗಳನ್ನು ಮನೆಯಲ್ಲಿ ತನ್ನ ಹೆಂಡತಿ ಭವಾನಿಬಾಯಿಯೊಡನೆಯೂ ಇಡುವುದಕ್ಕೆ ತಪ್ಪುತ್ತಿರಲಿಲ್ಲ. ತಾನು ಕೊಟ್ಟ ನೋಟುಗಳನ್ನು ಬಹಳ ಜಾಗ್ರತೆಯಿಂದ ಇಡಬೇಕಾಗಿಯೂ ಹಣವೇ ಮಾನವನ್ನು ರಕ್ಷಣೆಮಾಡುವ ಸಾಧನವಾಗಿರುವುದಾಗಿಯೂ ಅದನ್ನು ಹಿಂದು ಮುಂದು ನೋಡದೆ ವ್ಯಯ ಮಾಡಬಾರದಾಗಿಯೂ ತನ್ನ ಪತ್ನಿಗೆ ಆಗಿಂದಾಗ್ಗೆ ಎಚ್ಚರಕೊಡುತ್ತಿದ್ದನು. ಹೀಗಾದುದರಿಂದ ಭವಾನಿಬಾಯಿಯ ಪೆಟ್ಟಿಗೆಯಲ್ಲಿರುವ ಆ ಐದು ಸಾವಿರ ರೂಪಾಯಿಗಳ ನೋಟು ಭದ್ರವಾಗಿ ಅವಳ ಪೆಟ್ಟಿಗೆಯಲ್ಲೇ ಉಳಿಯುತ್ತಿತ್ತು.

ಒಂದು ದಿನ ರಮಾನಂದರಾಯನು ಒಂದು ಇಂಗ್ಲಿಷ್ ದೈನಿಕ ಪತ್ರಿಕೆಯಲ್ಲಿರುವ 'ವಿಜ್ಞಾಪನ'ಗಳನ್ನು ಓದುತ್ತಿರುವಾಗ ಅದರಲ್ಲಿ ಒಬ್ಬ 'ಜರ್ಮನ್ ಮಿಶನರಿ'ಯು ಮಾತೃಭೂಮಿಗೆ ಹಿಂದಿರುಗುವವನಾದುದರಿಂದ ಆತನು ತನ್ನ ಗೃಹ ಸಜ್ಜಾದಿಗಳನ್ನೂ ಒಂದು ಅಂದವಾದ ಸುವರ್ಣ ಬಟ್ಟಲನ್ನೂ 'ಏಲಂ' ಮಾಡುವನು ಎಂದಿರುವುದನ್ನು ಓದಿನೋಡಿದನು. ರಮಾನಂದರಾಯನು ಕೂಡಲೇ ಭೋಜನವನ್ನು ಮುಗಿಸಿ ಕೆಲವು ನೋಟುಗಳನ್ನು ಹಿಡಿದುಕೊಂಡು 'ಏಲಂ' ಹಾಕುವ ಸ್ಥಾನದಲ್ಲಿ ಉಪಸ್ಥಿತನಾದನು. ಆ ದಿವಸ 'ಏಲಮಿ'ಗೆ ಹೆಚ್ಚು ಜನರು ಬರಲಿಲ್ಲವಾದುದರಿಂದ ಆ ವಸ್ತುಗಳಿಗೆ ಹೆಚ್ಚು ಬೆಲೆಯೂ ಬರಲಿಲ್ಲ. ಹಾಗೆಂತ 'ಮಿಶನರಿ'ಗೆ ಆ ವಸ್ತುಗಳನ್ನು 'ಏಲಂ' ಮಾಡಿ ಹೋಗದೆ ಉಪಾಯವಿಲ್ಲ. ಹೀಗೆ ರಮಾನಂದರಾಯನ ಭಾಗ್ಯವು ಅತಿಶಯವಾಗಿ ಸುಪ್ರಸನ್ನವಾಯಿತು. ಆತನು ಆ ಅಮೂಲ್ಯವಾದ 'ಸುವರ್ಣ ಬಟ್ಟಲ'ನ್ನು ಕೊಂಡುಕೊಂಡನು. ಆ ಬಟ್ಟಲಿನ ಕೆತ್ತನೆ ಕೆಲಸವು ಅತಿ ವಿಚಿತ್ರಕರವಾದುದು. ಅದು ಎಷ್ಟು ವಿಚಿತ್ರಕರವಾಗಿತ್ತೋ ಅಷ್ಟೇ ಸುಂದರವೂ ಮನೋಹರವೂ ಆದಾಗಿತ್ತು. ಅದು ರಮಾನಂದರಾಯನಿಗೆ ದೊರೆತುದು ಕೇವಲ ಒಂದೂವರೆ ಸಾವಿರ ರೂಪಾಯಿಗಳಿಗೆ. ಆದರೆ ಅದರ ಸಹಜವಾದ ಬೆಲೆಯು ಐದು ಸಾವಿರ ರೂಪಾಯಿ! ಹೀಗೆ ಅಭಾವನೀಯ ಲಾಭವನ್ನು ಪಡೆದು ಆನಂದಸಾಗರದಲ್ಲಿ ತೇಲಾಡುತ್ತಿರುವ ರಮಾನಂದರಾಯನು ಆ ಸುವರ್ಣ ಬಟ್ಟಲನ್ನು ತನ್ನ ರತ್ನಾಭರಣಗಳ ಅಂಗಡಿಯಲ್ಲಿ ಒಂದು 'ಶೋಕೇಜಿ'ನೊಳಗೆ ಇಟ್ಟನು. 'ಶೋಕೇಜು' ರಸ್ತೆಯಲ್ಲಿ ನಡೆಯುವವರ ಮನಸ್ಸನ್ನು ಆಕರ್ಷಣೆ ಮಾಡುತ್ತಿತ್ತು. ಆ ಸಮಯದಲ್ಲಿ ಸಾಧಾರಣ ಹನ್ನೊಂದು ಘಂಟೆಯಾಗಿರಬಹುದೇನೋ.

ರಮಾನಂದರಾಯನು ತನ್ನ ಅಂಗಡಿಯಲ್ಲಿ ಒಂದು ಒರಗುವ ಕುರ್ಚಿಯಲ್ಲಿ ಕುಳಿತುಕೊಂಡು ಭವಿಷ್ಯತ್ ಕಲ್ಪನೆಯ ಭರದಲ್ಲಿ ಮುಳುಗಿ ಏನೇನೋ ಭಾವಿಸುತ್ತ ಅತ್ಯುತ್ತಮವಾದ ಆ ಸುವರ್ಣ ಬಟ್ಟಲನ್ನು ನೋಡುತ್ತಿದ್ದನು. ರಮಾನಂದರಾಯನು ಭಾವಿಸುವುದೇನು? "ಈ ಅಮೂಲ್ಯವಾದ ವಸ್ತುವು ಸುಲಭದಲ್ಲಿ ಮಾರಿಹೋಗುವಂತಿಲ್ಲ. ಆದರೆ ಮಾರಾಟವಾದಾಗ ಅಪರಿಮಿತ ಲಾಭ! ಇದೇನಾದರೂ ಸುಲಭ ಕೆಲಸವೇ? ಆ 'ಮಿಶನರಿ'ಯು ಮಾತೃಭೂಮಿಗೆ ಹಿಂದಿರುಗದಿರುತ್ತಿದ್ದರೆ ಇದು ನನಗೆ ಸಿಕ್ಕುವಂತಿತ್ತೇ? ಆತನ ಸ್ತ್ರೀಯು ಮರಣಾಪನ್ನಳಾಗಿರುವಳು. ಆತನು ಊರಿಗೆ ಹೋಗದೆ ನಿರ್ವಾಹವಿಲ್ಲ, ಆದುದರಿಂದಲೇ ಈ ವಸ್ತುವು ಇಷ್ಟು ಕಡಿಮೆ ಬೆಲೆಗೆ ದೊರೆಯಿತು. ಸುವರ್ಣವು ಮಣ್ಣಿನ ಕ್ರಯದಲ್ಲಿ ಸಿಕ್ಕಿದಂತಾಯಿತೆನ್ನಬೇಕು! ಅದೃಷ್ಟವಶಾತ್ ನಗದಿ ಹಣವನ್ನು ಏಲಮ್ಮಿನ ಕಾಲದಲ್ಲಿ ಕೊಂಡುಹೋದುದರಿಂದಾಯಿತು. ಇಲ್ಲವಾದರೆ ಇದು ನನಗೆ ಸಿಕ್ಕುವಂತಿರಲಿಲ್ಲ. ನಗದಿ ಹಣವು ಮನುಷ್ಯನನ್ನು ಉಳಿಸುವುದೆಂಬುದು ಖಂಡಿತವಾದ ಮಾತು." ಹೀಗೆಯೇ ಇನ್ನೂ ಎಷ್ಟೋ ಭಾವಿಸಿದನು.

— ಎರಡು —

ಠಣ್! ಠಣ್!! ಠಣ್!!! ಎಂಬದಾಗಿ ಸಮೀಪದಲ್ಲಿರುವ ಘಡಿಯಾರವು ಮೂರು ಘಂಟೆ ಹೊಡೆಯಿತು. ಹಂಪನಕಟ್ಟೆಯ ರಸ್ತೆಯಲ್ಲಿ ಎಷ್ಟೋ ಎಷ್ಟು ಜನರೂ, ಮೋಟಾರ್ ಕಾರುಗಳೂ, ಬಸ್ಸುಗಳೂ, ಜಟಕಾ ಬಂಡಿಗಳೂ, ಪಶುಗಳೂ, ಬೈಸಿಕಲ್ಲುಗಳೂ ಅತ್ತಿತ್ತ ಚಲಿಸುತ್ತಲಿವೆ. ಒಬ್ಬರ ಪರಿಚಯ ಮತ್ತೊಬ್ಬರಿಗಿಲ್ಲದ ಆ ದೊಡ್ಡ ಪೇಟೆಯಲ್ಲಿ ತಮ್ಮ ತಮ್ಮ ಕೆಲಸಗಳಲ್ಲೇ ಮನಸ್ಸಿಟ್ಟು ಒಬ್ಬರನ್ನು ನೋಡಿದರೂ ಅವನ್ನು ಲಕ್ಷ್ಯಕ್ಕೆ ತಾರದ ಜನ ಸಂದಣಿಯು ಅತ್ತಿಂದಿತ್ತ ಇತ್ತಿಂದತ್ತ ಹೋಗುತ್ತಿತ್ತು. ಪ್ರತಿ ನಿಮಿಷವೂ ಎಂಬಂತೆ ಚಲಿಸುವ ಜಟಕಾ ಬಂಡಿಗಳ 'ಬೆಲ್ಲು'ಗಳ ನಿನಾದವೂ ಮೋಟಾರ್ ಕಾರುಗಳ 'ಹೋರ್ನು'ಗಳ ಕೂಗೂ ಸಮೀಪದಲ್ಲಿರುವ ಹೊಗೆ ಬಂಡಿಗಳ ಸಿಳ್ಳಿಯೂ ಜನರ ಕಿವಿಯನ್ನು ಕಿವುಡು ಮಾಡುವಂತಿದ್ದರೂ ರಮಾನಂದರಾಯನ ಅಂಗಡಿಯ ಎದುರು ಒಂದೊತ್ತನೆಯೋ 'ಶೋಕೇಜಿ'ನೊಳಗೆ ಇಟ್ಟಿರುವ ಆ ಅಮೂಲ್ಯ ಸುವರ್ಣ ಬಟ್ಟಲು ಜನರನ್ನು ಆತನ ಅಂಗಡಿಯ ಇದಿರಲ್ಲಿ ಕೆಲವು ಸಮಯವಾದರೂ ನಿಲ್ಲುವಂತೆ ಮಾಡುತ್ತಿತ್ತು. ಏಕೆಂದರೆ ಅದರ ಮೇಲೆ ವಿಚಿತ್ರವಾಗಿ ಕೆತ್ತಲ್ಪಟ್ಟ ವಿವಿಧ ಹೂಬಳ್ಳಿಗಳೂ ಇನ್ನೂ ಕೆಲವು ಆಕಾರಗಳೂ, ಅದನ್ನು ಮಾಡಿದ ಅಪ್ರತೀಯ ಶೃಂಗಾರಿಕೆಯೂ ಅಷ್ಟು ಮನೋಹರವಾದುದು! ರಮಾನಂದರಾಯನೂ ಕೂಡ ಆ ಸುವರ್ಣ ಬಟ್ಟಲನ್ನೇ ಬಾರಿ ಬಾರಿಗೂ ನಿರೀಕ್ಷಣೆ ಮಾಡುತ್ತಲಿದ್ದನು. ಅದೇ ಸಮಯದಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯು ಆತನ ರತ್ನಾಭರಣಗಳ ಅಂಗಡಿಯನ್ನು ಪ್ರವೇಶಿಸಿ "ಸ್ವಾಮಿ, ರಮಾನಾಥರಾಯರು ಇಲ್ಲಿಗೆ ಬಂದರೇ?" ಎಂದು ವಿನಯಭಾವದಿಂದ ಪ್ರಶ್ನಿಸಿದನು.

"ಯಾವ ರಮಾನಾಥರಾಯರು?" ಎಂದು ರಮಾನಂದರಾಯನು ವಿಚಾರಿಸಿದನು.

ಆಗಂತುಕನು ಅತಿ ಗಂಭೀರ ಭಾವದಿಂದ "ಗೊತ್ತಿಲ್ಲವೇ ನಿಮಗೆ? ಇನ್ಸ್‌ಪೆಕ್ಟರ್ ರಮಾನಾಥರಾಯರು. ನಾನು ಅವರ ಸೇವಕನಾಗಿರುವೆನು. ಇಂದು ಮಧ್ಯಾಹ್ನ ಸಾಧಾರಣ ಒಂದು ಘಂಟೆಯ ಸಮಯ ಅವರೂ ಅವರ ಸುಪರಿಂಟೆಂಡೆಂಟರೂ ಇದೇ ಮಾರ್ಗವಾಗಿ 'ಮೋಟಾರ್ ಕಾರಿ'ನಲ್ಲಿ ಕುಳಿತುಕೊಂಡು ಹೋಗುವಾಗ ನಿಮ್ಮ ಅಂಗಡಿಯ ಇದಿರಲ್ಲಿ ಜನ ಸಂದಣಿಯು ಸಾಂದ್ರವಾಗಿದ್ದುದರಿಂದ ತಮ್ಮ 'ಮೋಟಾರ್ ಕಾರ'ನ್ನು ಸ್ವಲ್ಪ ಸಮಯ ನಿಲ್ಲಿಸಿದ್ದರು. ಆಗ ಅವರು ನಿಮ್ಮ ಅಂಗಡಿಯಲ್ಲಿ ಒಂದು ಸುವರ್ಣ ಬಟ್ಟಲನ್ನು ಕಂಡಿದ್ದರು. ಅವರು ಆ ಸುವರ್ಣ ಬಟ್ಟಲನ್ನು ಕೊಂಡುಕೊಳ್ಳಬೇಕೆಂದು ಬಗೆದಿರುವರು. ಆದುದರಿಂದಲೇ ಅವರು ನನ್ನನ್ನು ನಿಮ್ಮ ಅಂಗಡಿಗೆ ಕಳುಹಿಸಿಕೊಟ್ಟು ಇಲ್ಲೇ ಸ್ವಲ್ಪ ಸಮಯ ಕಾದುಕೊಂಡಿರಬೇಕಾಗಿ ಆಜ್ಞಾಪಿಸಿರುವರು. ಅವರು ಬರುವ ವರೇಗೆ ಈ ಸುವರ್ಣ ಬಟ್ಟಲನ್ನು ನೀವು ದಯವಿಟ್ಟು ಯಾರಿಗೂ ಕೊಡಲಾಗದು. ಅವರ ಮನಸ್ಸು ಇದರ ಮೇಲೆ ಬಿದ್ದಿರುವುದು." ಎಂದು ಉತ್ತರವಿತ್ತನು.

ರಮಾನಂದರಾಯನು "ಆಕ್ಷೇಪವಿಲ್ಲ. ನೀನು ಇಲ್ಲಿ ಕಾದುಕೊಂಡಿರಬಹುದು. ಆದರೆ ಇಷ್ಟು ಬೆಲೆಬಾಳುವ ಸುವರ್ಣ ಬಟ್ಟಲನ್ನು ನಿನ್ನ ಇನ್ಸ್‌ಪೆಕ್ಟರರು ಕೊಂಡುಕೊಂಡು ಮಾಡುವುದೇನು? ಇದರ ಬೆಲೆಯೇನಾದರೂ ನೂರಾರು ರೂಪಾಯಿಗಳಲ್ಲ! ಐದು ಸಾವಿರ ರೂಪಾಯಿಗಳು" ಎಂದನು.

ಆಗಂತುಕನು "ಅದೇನೋ ನಾನರಿಯೆನು. ನಿಮಗೆ ಭಗ್ನಹಸ್ತದ ಇನ್ಸ್‌ಪೆಕ್ಟರ್ ರಮಾನಾಥರಾಯರ ಪರಿಚಯವಿಲ್ಲವೇ? ಅವರು ಪ್ರಖ್ಯಾತರಾದ ಇನ್ಸ್‌ಪೆಕ್ಟರರಾಗಿರುವರು. ದೊಡ್ಡ ಶ್ರೀಮಂತರ ಮನೆತನದಲ್ಲಿ ಹುಟ್ಟಿದವರು. ಮಲಬಾರು ದಂಗೆಯ ಕಾಲದಲ್ಲಿ ಅವರ ಬಲ್ಗೈಯು ತುಂಡಾಗಿತ್ತು" ಎಂದು ಹೇಳಿ ಆತನು ತನ್ನ ಜೇಬಿನೊಳಗಿಂದ ಒಂದು ಬೀಡಿಯನ್ನು ಹೊರಕ್ಕೆ ತೆಗೆದು ಬೆಂಕಿ ಪೆಟ್ಟಿಗೆಯನ್ನು ಗೀಚಿ ಬೀಡಿಗೆ ಬೆಂಕಿ ಹೊತ್ತಿಸಿ ಬೀಡಿಯನ್ನು ಸೇದಲಾರಂಭಿಸಿದನು. ಸಾಧಾರಣ ಹತ್ತು ಹದಿನೈದು ನಿಮಿಷಗಳಾದ ಮೇಲೆ ಆಗಂತುಕನು "ಅಯ್ಯಾ, ನನಗೆ ಬೇರೊಂದೆಡೆಯಲ್ಲಿ ಒಂದಿಷ್ಟು ಕಾರ್ಯವಿದೆ. ಆದುದರಿಂದ ನಾನೀಗಲೇ ಹೋಗಬೇಕು. ಅರ್ಧ ಘಂಟೆಯೊಳಗೇನೇ ಕಾರ್ಯವನ್ನು ಮುಗಿಸಿ ಇಲ್ಲಿಗೆ ಬರುತ್ತೇನೆ. ಅಷ್ಟರಲ್ಲಿ ಇನ್ಸ್‌ಪೆಕ್ಟರ್ ರಮಾನಾಥರಾಯರು

([illegible])

ಗಾರವಾದ ಪುಸ್ತಕ?

೩೪೦ ಪೇಜುಗಳು ಇವೆ

[ನಾವು ತಿಳಿಸುವಂತೆ ಇಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದುಸ್ಥಾನಿ ಭಾಷೆಗಳಲ್ಲಿ ಬಹು ಕಾಲದಿಂದ ಪ್ರಸಿದ್ಧವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಗ್ರಹಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಘಳಘಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ರೀತಿ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗಕಾಲ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಜರೂರ ನಿಯಮಗಳು, ಶಿಶುಉತ್ಪತ್ತಿವಿಧ, ಗುಪ್ತವೈದ್ಯಗಳ ಚಿಕಿತ್ಸೆ, ಶಯನಗೃಹದಾರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು. ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೪-೦

ವಿಳಾಸ:—

ಕೆ. ನಾಧಮುನಿ ಅಂಡ್ ಸನ್,
೧೬೮ ಚೈನಾ ಬಜಾರ್, ಮದರಾಸು.

K. Nadhamuni & Son,
168 China Bazaar
Madras.

The Story of a New

OAKLAND

Series 6-212

the cosmopolitan six



SPORT CABRIOLET WITH DICKEY SEAT

FIVE-PASSENGER TWO-DOOR SEDAN



FIVE-PASSENGER PHAETON

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES of the NEW OAKLAND

models and Sport Cabriolet.

Leather upholstery available on all closed models.

Improved body hardware on all models.

New and attractive Duco color combinations on all models

For Further Particulars Apply to

RAO & RAO

Dealers of Oakland, Pontiac, Chevrolet, & Vauxhall Cars,

Maidan Road, MANGALORE

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮುಖ್ಯವಾಗಿ ಮೊದಲು ಎಲ್ಲಾ ವಯಸ್ಸಿನವರಿಗೂ, ಕೆಮ್ಮು, ದಗ್ಗು, ಕಫ, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಕೈಕಾಲುಗಳು ಸೆಳೆಯುವುದಾಗಲಿ ಆರಂಭಿಸುವ ಮೊದಲನೇ ವೇಳೆಯಿಂದಲೇ ರೋಗ ವಶ್ಯಸ್ವಾಧೀನಕ್ಕೆ ಬರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಕ್ಷಯಗೆ)

ಹನ್ನೆರಡು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಕ್ಷಯ ರೋಗಿಗಳಿಗೆ ರೋಗವನ್ನು ನಿಂಬುಗೆಯಾಗಿ ಗುಣಪಡಿಸುತ್ತದೆ. ಕ್ಷಯಕ್ಕೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಕ್ಷಯ ರೋಗಿಯ ಪ್ರತಿಕಂದುಗಳಿಗೆ, ಗಡ್ಡೆಗಳು ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಪೇಟೆ ಹತ್ತಿರ.

ಕಾವ್ಯಗಳು

ಈ ಕೆಳಗಿನ ಕಾವ್ಯ ಪುಸ್ತಕಗಳಿಗೆ ಪದ, ಟೀಕೆ, ಅನ್ವಯ, ಅರ್ಥ, ಶಾಸ್ತ್ರ ಅಲಂಕಾರ, ವಿಗ್ರಹ, ಧಾತುರೂಪ, ಭಾವಾರ್ಥ ವಿಶೇಷಾಂತರದೊಂದಿಗೆ ಬರೆದಿರುತ್ತೆ. ಕುಮಾರಸಂಭವ ಕಾವ್ಯ 1, 2, 3ನೆ ಸರ್ಗಗಳು

ಪ್ರತಿಯೊಂದು ಸರ್ಗಕ್ಕು ಬೆಲೆ	1—0—0
ರಘುವಂಶ ಕಾವ್ಯ 2, 3, 4, 5ನೆ ಸರ್ಗಗಳು	
ಪ್ರತಿಯೊಂದು ಸರ್ಗಕ್ಕು ಬೆಲೆ	1—0—0
ಮೇಘ ಸಂದೇಶ (ಪೂರ್ಣ)	3—0—0
ಕಿರಾತಾರ್ಜುನೀಯ 1ನೇ ಸರ್ಗ	0—10—0
ವಿವೇಕ ಚೂಡಾಮಣಿ ಶ್ರೀ ಶಂಕರಾಚಾರ್ಯ ವಿರಚಿತ ಸರ್ವ ವೇದಾಂತಸಾರ ಟೀಕಾ ತಾತ್ಪರ್ಯದೊಂದಿಗೆ	3—0—0

ರೇಖಾ ಪ್ರದರ್ಶಿನಿ,

ಅರ್ದ, ಪಕ್ಷ, ರಶೀದಿ, ದಾವೆ, ಭಾಗಪತ್ರ, ಉಯಿಲು ಮುಂತಾದ ಮಾದರಿಗಳೂ ಇವೆ. ಕ್ರಯ 0—3—0.

ಎಚ್. ಎಸ್. ರಾವ್ ಬ್ರದರ್ಸ್,

ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು. ಸಿಟಿ

ತಯಾರಾಗಿವೆ! ತಯಾರಾಗಿವೆ!!

ಮೂರನೇ ದರ್ಜೆಯ

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

Edited Printed & Published by V. S. Kamath, at the M. T. A Sharada Press, Mangalore.

Registered No. M. 489

ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ದೊರೆಯಲುನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥

ಗರಳಕವರಂಜಿದರೆ! ಸುಧೆಯನು । ಮರತು ಕ್ಷುದ್ರರ ತೆರದಿ ಕುಳಿತರೆ ಶಿರಕೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೩. ಮಂಗಳೂರು, ತಾ. ೧೨ನೇ ಶುಕ್ರವಾರ ಏಪ್ರಿಲ್ ೧೯೨೯. (12-4-'29.) ಸಂಚಿಕೆ ೧೫

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. Mangalore.**

ಹೆಡ್ ಆಫೀಸು:— ಉಡುಪಿ. ಶಾಖೆ:— ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಶೇರು ಹಾಕಲಿಕ್ಕೆ ಆಪೇಕ್ಷಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000-
2. ಕೊಟ್ಟು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 3,34,218-5-0-

Statement of Affairs of the Canara Banking Corporation Udipi, Limited as on 23th February 1929

	CAPITAL AND LIABILITIES.			PROPERTY AND ASSETS	
1	Paid up Capital	Rs. 2,12,630-0-0	1	Premises Building, Furniture &c.	Rs. 9,215-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,34,218-5-0
3	Deposits	„ 16,01,517-5-10	3	Investments on Approved Securities	„ 17,86,710-11-10
4	Due to Bankers on a/c of Overdrafts and Loans a/c	„ 2,12,164-1-8	4	Bills for collection as per Contra	„ 12,347-0-0
5	Sundry Persons' a/c for Bills for collection as per Contra	„ 12,347-0-0	5	Cash in hand & with Bankers.	„ 43,713-12-8
9	Sundries including P & L items	„ 20,846-6-3			
	Total	21,86,204-13-6		Total	21,86,204-13-6.

Office of the Corporation, UDIPI, 7-3-'29. **N. ANANDA RAO**, *Secretary*.

ಅಮೃತಾಂಜನ.

ರಿಂಗ್‌ವರ್ಮ್ ಮುಲಾಮು:—

ದಂತಮಂಜನ:—

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೆ. ಟಿ. ಡೋಂಗರೆ ಕಂಪನಿ.

ಗಿರ್ಗಾಂವ್, ಮುಂಬಯಿ.

ಏಜಂಟರು — ದಿ. ಯೂನಿಯನ್ ಮೆಡಿಕಲ್ ಹಾಲ್, ಮಂಗಳೂರು.

ಬಹುಮಾನ! ಬಹುಮಾನ!

1929ನೇ ವರುಷದ ಸರಸ್ವತೀ ಕ್ಯಾಲೆಂಡರ್.

ಕಥೆ ಪುಸ್ತಕಗಳು.

	0-3-0		1-4-0
	1-12-0		0-12-0
	0-12-0		1-8-0
	1-14-0		1-8-0

	ಭಾಗ I	4-0-0
	ಭಾಗ II	4-8-0
		2-8-0
		3-0-0
		2-8-0

ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,

ಬೆಂಗಳೂರು ಸಿಟಿ.

ಬೆಳಗಾಂವಿಯಲ್ಲಿ ಕರ್ನಾಟಕ ಪರಿಷತ್ತುಗಳು.

[illegible] ಬೆಳಗಾಂವಿಯಲ್ಲಿ [illegible]

(೧) [illegible] ಕರ್ನಾಟಕ [illegible] ಪರಿಷತ್ತು. (೨) ಕರ್ನಾಟಕ [illegible] (೩) [illegible] ಕರ್ನಾಟಕ ಸಾಹಿತ್ಯ ಸಮ್ಮೇಳನ. (೪) [illegible] ವಸ್ತುಪ್ರದರ್ಶನ. [illegible]

ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು ಕಾರ್ಯಾಲಯ [illegible] ಬೆಳಗಾಂವಿಯಲ್ಲಿ ಸೇರತಕ್ಕ ಸಾಹಿತ್ಯ ಸಮ್ಮೇಳನಕ್ಕಾಗಿ [illegible] ಶ್ರೀ. ಸಂಪತ್ಗಿರಿರಾಯರನ್ನು ಬಿ. ಟಿ. ಪರ್ವತರನ್ನು ನೇಮಿಸಿದ್ದಾರೆ.

ಇಲ್ಲಿ ಸೇರತಕ್ಕಂಥ ಪರಿಷತ್ತುಗಳ ವ್ಯವಸ್ಥೆಗಾಗಿ ಶ್ರೀ [illegible] ಆಲೂರು ವೆಂಕಟರಾಯರು, ಶ್ರೀ [illegible], ಗೋಖಲೆ, ಪಾಟೀಲ ವೀರನಗೌಡರು, ಕಲ್ಲನಗೌಡರು, [illegible] ದೇಶಪಾಂಡೆ, [illegible] ಬೇಗನೆ [illegible] ಶ್ರೀ [illegible] ಬರಮಾಡಿದ್ದಾರೆ.

[illegible] ಕರ್ನಾಟಕ [illegible] ಪರಿಷತ್ತುಗಳ ಕಾಲಕ್ಕೆ ಇಲ್ಲಿಗೆ ಬರತಕ್ಕವರಿದ್ದಾರೆ.

ರಂ. ದಾ. ಜೋಶಿ,
ಕಾರ್ಯದರ್ಶಿ.

ಪ್ರಕಟಣೆ ೧
ಇತಿಹಾಸಭಕ್ತರಲ್ಲಿ ಬಿನ್ನಹ.

ಬೆಳಗಾಂವಿಯಲ್ಲಿ [illegible] ಕರ್ನಾಟಕ ಪರಿಷತ್ತುಗಳ ಕಾಲಕ್ಕೆ [illegible] ಕರ್ನಾಟಕ [illegible] ಇತಿಹಾಸ [illegible]

[illegible]

ಬೆಳಗಾಂವಿಯಲ್ಲಿ ಪರಿಷತ್ತುಗಳನ್ನು [illegible] ಈ ವಿಷಯದಲ್ಲಿ ತಮ್ಮೆಲ್ಲರ ಸಹಾಯವನ್ನು ಕೋರುವ

ಕಾರ್ಯದರ್ಶಿ,
ಕರ್ನಾಟಕ ಪರಿಷತ್ತುಗಳು, [illegible] ಬೆಳಗಾಂವಿ

ಸಕಲೇಶಪುರ ಪತ್ರ.

ಸಕಲೇಶಪುರ್ ಕ್ಲಬ್.

[illegible] ಉದಾರದಿಂದ ಕೊಟ್ಟಿದ್ದಾರೆ.

ಹೈಸ್ಕೂಲ್

[illegible] ವ್ಯಕ್ತಪಡಿಸಿದರು.

ಮಳೆ.

ಈ ವಾರದಲ್ಲಿ ಈ ತಾಲೋಕಿನ ಕೆಲವು ಪ್ರಾಂತಗಳಲ್ಲಿ ಬಂದ [illegible] ಕೋಟಿಗಳಿಗೆ ಅನುಕೂಲವಾಗಿದೆ.

ಪೊಳಲಿಯ ಶ್ರೀ ವಿದ್ಯಾವರ್ಧಕ ಸಂಘಕ್ಕೆ ಸಹಾಯ ಮಾಡಿದವರ ಹೆಸರು.

ರಾ. [illegible] ಶೆಟ್ಟಿ ರೂ. ೧೫. [illegible] ಭಟ್ಟ ರೂ. ೧೦. [illegible] ರೂ ೫. [illegible] ದೇವೇಗೌಡರು, [illegible]

'ಕಂಠೀರವ'ನ ಹೊಸವರ್ಷ.

(ಕರ್ನಾಟಕದ ಪತ್ರಿಕಾ ವ್ಯವಸಾಯವು ಬಹಳ ಹೀನಸ್ಥಿತಿಯಲ್ಲಿದ್ದು, ಅದನ್ನು ಸುಧಾರಿಸುವ ಇಚ್ಛೆಯಿಂದ ಪತ್ರಿಕೆಗೆ ಹಲವು ಪತ್ರಿಕೆಗಳ ಸಂಪಾದಕರು ಬಹಳ ಪರಿಶ್ರಮಿಸಿ ವಿಶೇಷ ಸಂಚಿಕೆಗಳನ್ನು ತೆಗೆದು ಪತ್ರಿಕಾವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸುವರು. ಆ ಪರಿಶ್ರಮವೂ, ಅದಕ್ಕೆ ಸಿಕ್ಕುವ ಪ್ರತಿಫಲವೂ ಎಷ್ಟೆಂದು ಅಂತಹ ವಿಶೇಷ ಸಂಚಿಕೆಗಳನ್ನು ಹೊರಡಿಸಿದ ಸಂಪಾದಕರೂ, ಅವರೊಡನೆ ಸಹಕರಿಸಿದವರೂ ತಿಳಿದಿರಬೇಕು. ಅಂತಹ ಪರಿಶ್ರಮವನ್ನು 'ಕಂಠೀರವ' ಪತ್ರಿಕೆಯು ಕೆಳಗಿನ ಲೇಖದ ಮೂಲಕ ಬಹುಮಾನಿಸುತ್ತಿದೆ.

(ಸಂಪಾದಕ)

• • • •

ಸಹೃದಯರಾದ ವಾಚಕಮಹಾಶಯರೇ! ತಮಗೆ ನಾವೇನು ಹೇಳುವ? 'ಕಂಠೀರವ'ನನ್ನು ಸಮಾದರಿಸಿ, ಪ್ರೋತ್ಸಾಹಿಸುತ್ತಿರುವ ಈ ತಮ್ಮ ಮಹೋಪಕಾರಕ್ಕೆ ಪ್ರತಿಯಾಗಿ, ನಾವು ತಮಗೇನನ್ನು ಸಮರ್ಪಿಸುವ? 'ಯುಗಾದಿ'ಯಲ್ಲಿ ತಮ್ಮನ್ನು ಕರೆದು, ಸತ್ಕರಿಸುವ ಬಯಕೆ 'ಕಂಠೀರವ'ನದಾಗಿದ್ದಿತು. ಅಥವಾ ಹಬ್ಬದ ಕಾಣಿಕೆಯನ್ನಾದರೂ ಸಮರ್ಪಿಸಿ, ತಮ್ಮನ್ನು ಸಂತೋಷಗೊಳಿಸುವಂತೆ ಅವನ ಪ್ರಯತ್ನವಿದ್ದಿತು. ಆದರೆ ಆದೆಲ್ಲವೂ 'ಶ್ರೀಮಂತರ ಮಕ್ಕಳ ಪಾಲಿಗೇ ಇರಲಿ'. ಬಡವರ ಮಗನಾದ ನಾನು, ಸರ್ವದಾ ತಮ್ಮೆಲ್ಲರ ಶ್ರೇಯೋಭಿವೃದ್ಧಿಗಾಗಿ, ಅಂತಃಕರಣಪೂರ್ವಕವಾಗಿ, ಭಕ್ತಿಪುರಸ್ಸರವಾಗಿ ಭಗವಂತನಲ್ಲಿ ಪ್ರಾರ್ಥಿಸುತ್ತಿರುವೆನೆಂದೂ ಇಷ್ಟು ಮಾತ್ರ 'ಕಂಠೀರವ'ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾನೆ. ತಮ್ಮ ಅಭೂತಪೂರ್ವವಾದ [illegible] ಬಾಂಧವ! [illegible]

ಹೊಸ ಪತ್ರಿಕೆಗಳು [illegible]

[illegible]

ರೂಪಮಾಡಿ!

[illegible]

ಕೂಳ. ಟಿ ಶಂಕರನಾರಾಯಣ ರಾವ್.
[illegible] ಕಾರ್ಯದರ್ಶಿ

"ನಾನು ಸುವರ್ಣ ಬಟ್ಟಲನ್ನು ಕೊಂಡುಕೊಳ್ಳುತ್ತೇನಾಗಿ ನಿನಗೆ ಹೇಳಿದವರಾರು?" ಎಂದು ರಮಾನಂದರಾಯನು ವಿಚಾರಿಸಿದನು.

ಯುವತಿಯು—"ಏನು? ನೀವು ಕಳುಹಿಸಿಕೊಟ್ಟ ಮನುಷ್ಯನು ಇಲ್ಲಿ ಬಂದು ನನ್ನೊಡನೆ ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿರುವನು" ಎಂದು ಉತ್ತರವಿತ್ತಳು.

(ಸಶೇಷ)

ಆ ರೀತಿಯಲ್ಲಿ ಪತ್ರವನ್ನು ಬರೆದು ರಮಾನಂದರಾಯನು ಇನ್ಸ್‌ಪೆಕ್ಟರ್ ರಮಾನಂದರಾಯನ ಕೈಯಲ್ಲಿ ಕೊಟ್ಟನು. ಇನ್ಸ್‌ಪೆಕ್ಟರನು ಪತ್ರವನ್ನು ಚೆನ್ನಾಗಿ ಪರೀಕ್ಷೆ ಮಾಡಿದನು. ಆ ಮೇಲೆ ತನ್ನ ಎಡಗೈಯಿಂದ ಆ ಪತ್ರದ ಅಡಿಯಲ್ಲಿ 'ರಮಾ' ಎಂಬದಾಗಿ ಸಹಿ ಹಾಕಿದನು. ಪತ್ರವನ್ನು ಸುಬ್ಬನ ಕೈಯಲ್ಲಿ ಕೊಟ್ಟು ಥಟ್ಟನೇ ಹೋಗಿಬರಬೇಕೆಂಬದಾಗಿ ಇನ್ಸ್‌ಪೆಕ್ಟರನು ಆಜ್ಞಾಪಿಸಿದನು.

ಸುಬ್ಬನು ಪತ್ರವು ದೊರೆತೊಡನೆಯೇ ಒಂದು ಜಟಕಾ ಬಂಡಿಯಲ್ಲಿ ಕುಳಿತುಕೊಂಡು ಹೊರಟುಹೋದನು. ಇನ್ಸ್‌ಪೆಕ್ಟರನು ರಮಾನಂದರಾಯನನ್ನು ಕುರಿತು "ನೀವು ಈ ಸುವರ್ಣ ಬಟ್ಟಲನ್ನು ಜೋಕೆಯಿಂದ ಒಂದು ಪೆಟ್ಟಿಗೆಯೊಳಗೆ 'ಪ್ಯಾಕ್' ಮಾಡಿ ಇಡಿರಿ. ನನಗೆ ಇನ್ನು ಒಂದೆರಡು ಕಾರ್ಯಗಳಿವೆ, ಅವುಗಳನ್ನು ಮುಗಿಸಿಕೊಂಡು ಬಂದು ಸುವರ್ಣ ಬಟ್ಟಲನ್ನು ಕೊಂಡುಹೋಗುವೆನು. ಕಾರ್ಯಗಳನ್ನು ಆದಷ್ಟು ಬೇಗನೇ ಪೂರೈಸಿಕೊಂಡು ಶೀಘ್ರವಾಗಿ ಬರುವೆನು" ಎಂದು ಹೇಳಿ [illegible] ಹತ್ತಿಕೊಂಡು ನಡೆದುಬಿಟ್ಟನು.

ಹೀಗೆಯೇ ಒಂದು ಘಂಟೆ, ಎರಡು ಘಂಟೆ, ಮೂರು ಘಂಟೆ ಕಳೆಯಿತು. ಆದರೂ ಇನ್ಸ್‌ಪೆಕ್ಟರನಾಗಲೀ, ಸುಬ್ಬನಾಗಲೀ, ಒಬ್ಬರೂ ನೋಡಲಿಕ್ಕಿಲ್ಲ. ರಮಾನಂದರಾಯನು ತನ್ನಷ್ಟಕ್ಕೆ "ಇನ್ಸ್‌ಪೆಕ್ಟರನು ಒಬ್ಬ ದೊಡ್ಡ ವಂಚಕನಾಗಿರಬೇಕು. ನನ್ನನ್ನು ವಂಚಿಸಿಕೊಂಡು ಬಂದ [illegible] ಹೋದನೋ ಏನೋ! ಅಥವಾ ಆತನಿಗೆ ಆತನ ತಂಗಿಯೊಡನೆ [illegible] ಇಷ್ಟರಲ್ಲಿ [illegible]" ಎಂಬದಾಗಿ ಭಾವಿಸುತ್ತ [illegible] ಸುವರ್ಣ ಬಟ್ಟಲು [illegible]

— ಐದು —

[illegible]

[illegible] ರಮಾನಂದರಾಯನು ಅದೇ ಮನೆಯನ್ನು ಪ್ರವೇಶಿಸಿ ಅಲ್ಲಿರುವ ಒಂದು ಕುರ್ಚಿಯ ಮೇಲೆ ಕುಳಿತುಕೊಂಡನು. ಯುವತಿಯು ಗಾನವನ್ನು ನಿಲ್ಲಿಸಿ "ಇಂದಿನ ವ್ಯಾಪಾರವು ಹೇಗೆ ಚೆನ್ನಾಗಿರುವುದೇ" ಎಂದು ಪ್ರಶ್ನಿಸಿದಳು.

"ಒಬ್ಬ ಗಿರಾಕಿಯು ಬಂದಿದ್ದರೆ ಇಂದು ತುಂಬಾ ಲಾಭವಾಗುತ್ತಿತ್ತು. ಇಷ್ಟು ರಾತ್ರಿ ವರೆಗೆ ಕುಳಿತುಕೊಂಡರೂ ಆ ಗಿರಾಕಿಯಾಗಲೀ ಅತನ ಕಡೆಯವರಾಗಲಿ ಬಾರದಿದ್ದುದರಿಂದ ಬಾಗಿಲನ್ನು ಮುಚ್ಚಿ ಬಂದು ಬಿಟ್ಟೆನು" ಎಂದು ರಮಾನಂದರಾಯನು ಉತ್ತರಕೊಟ್ಟನು.

"ಐದು ಸಾವಿರ ರೂಪಾಯಿಯ ಒಂದು ಸುವರ್ಣ ಬಟ್ಟಲನ್ನು ಕೊಂಡುಕೊಂಡಿರೋ" ಎಂದು ಯುವತಿಯು ಪ್ರಶ್ನಿಸಿದಳು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಸಾರುಂಕುಮ ತೈಲ—ಇದು ಪೂರ್ವದ ಋಷಿಗಳು ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಂಗಗಳಿಗೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಾಣಿವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. -ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಂಟನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಹಿಂದೆರಡು ದಿವಸಗಳಲ್ಲೇ ಅಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆಯುರ್ವೇದ ಚಿಕಿತ್ಸಾಕ್ರಮ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ. ಕನ್ನಡ.

ಮೊದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ನಿಂತಿಷ್ಟ ಅನುಭವದ ರೀತಿ ನಮ್ಮ ಪುಡಿದಾರ ಹಗ್ಗಗಳು ಕೆಲಸ ಸೈಸಕ್ಕೆ ಯೂ, ದಾರದ ಕರದ ವಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ಪತ್ರಿಕಾ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ದಾಮದಲ್ಲಿ ಸರಕುಗಳ ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ಸಂಕೀರ್ಣ ವ್ಯಾಪಾರಿ,

24—8—28 ಶೆವ್ವಾಪೇಟೆ. ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—,

ಮೆಸರ್ಸ್ ರೇಚೆಲ್ ಎಂಡ್ ಕಂಪೆನಿ,

ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,88,000—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,88,000—0—0
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಸ್ಥಾಯಿ ಆಗುವ ರೂ. 1000/-ವ ಮೇಲ್ಪಟ್ಟ ಮೌಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to -

Canara Bank Ltd. **K. Venkat Rao,**

Mangalore, 11—2—1929 Secretary

THEPANGAL NAYAK BANK, LTD.

Branch Office Mangalore	Head Office: Udipi *Established 1920*	Agency Office Cochin

Authorised Capital: Rs. 2,00,000-	Paidup Capital: Rs. 1,57400-
Issued Capital: Rs. 1,75,000-	Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5% 6 or 9 months 5¼%, 12, 15, 18 or 21 months 6¼, 24 months 6½% and **interest being payable every 3 months.**

Short Notice Deposits, Cumulative Deposits, and Savings Bank Deposits are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¾% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK, 1st March, 1929. P. Lakshman Nayak, *Offg. Secretary.*

Diamonds! Diamonds!!

Ramachandra Krishna Shet

DONGERKERY, MANGALORE.

ಉತ್ಕೃಷ್ಟ ತರಗತಿಯ ಚುನಾಯಿತ (first quality Selected) ಎಂಟ್ ವರ್ಪಿನಿಂದ ಬರುವ ವಜ್ರಗಳು ಯಥಾವಾಗಲೂ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,

ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು. Diamonds

BOLA MANGESH ROW & CO.

MANGALORE.

Agents & Direct importers of Superior Daimonds of Antwerp

ಯೂರೋಪಿನ, ಅಂಟವರ್ಪಿನಿಂದ ತರಿಸುವ ವಜ್ರಗಳು — ಮಾರಲ್ಪಡುತ್ತವೆ. —

ಬೋಳ ಮಂಗೇಶ ರಾವ್.

ಮಂಗಳೂರು

ಎಸೆಂಬ್ಲಿಯಲ್ಲಿ ಬಾಂಬು.

ಪಬ್ಲಿಕ್ ಸೇಫ್ಟಿ ಬಿಲ್ ಎಂಬ ದಬ್ಬಾಳಿಕೆಯ ಶಾಸನವನ್ನು ಹೇಗಾದರೂ ಬೇಗನೆ ಮಂಜೂರು ಮಾಡಿಸಿಕೊಳ್ಳ ಬೇಕೆಂದು ಸರಕಾರದ ಪ್ರಯತ್ನಿಸುತ್ತಿರುವಾಗಲೇ, ಅದರೊಳಗೆ ಸಂಬಂಧಪಟ್ಟಂತ ವಿಷಯಗಳೂ ಮಜೂರ ಧುರೀಣರನ್ನು ಶಿಕ್ಷಿಸುವ ಮೀರತ್ತು ಎಂಬ ಊರಲ್ಲಿ ತನಿಖೆಯಾಗುತ್ತಿರುವ ಮೊಕದ್ದಮೆಯೊಳಗೆ ವಿಚಾರಿಸಲ್ಪಡುವ ವಿಷಯಗಳೂ ಬಹು ಮಟ್ಟಿಗೆ ಒಂದೇಯಾಗಿ, ತೀರ್ಮಾನವಾಗದ ವ್ಯವಹರಣೆಯಲ್ಲಿ ವಿಚಾರಿಸಲ್ಪಡುವ ವಿಷಯವನ್ನು ಎಲ್ಲಿಯೂ ಚರ್ಚಿಸಬಾರದಾಗಿ ಕ್ರಮವಿರುವುದರಿಂದ, ಈ ಮಸೂದೆಯನ್ನು ಎಸೆಂಬ್ಲಿಯಲ್ಲಿ ಚರ್ಚಿಸುವುದು ಸಾಧ್ಯವಲ್ಲವೆಂದೂ, ಈ ಮಸೂದೆಯ ಚರ್ಚೆಯನ್ನು ವ್ಯವಹರಣೆ ತೀರುವ ವರೆಗೆ ಮುಂದೆ ಹಾಕಬೇಕೆಂದೂ, ಇಲ್ಲವಾದರೆ ವ್ಯವಹರಣೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಎಸೆಂಬ್ಲಿ ಅಧ್ಯಕ್ಷರಾದ ಪಟೇಲರು ಸರಕಾರವು ಸೂಚಿಸಿದಾಗ, ಸರಕಾರವು ಈ ಸೂಚನೆಯನ್ನು ಮಾನಿಸದೆ, ಅಧ್ಯಕ್ಷರಿಗೆ ಅಂತಹ ಅಧಿಕಾರವೇ ಇಲ್ಲವೆಂದು ಸರಕಾರವು ಹೇಳಲು, ಈ ಮಸೂದೆಯನ್ನು ವ್ಯವಹರಣೆಯಾಗುವಾಗಲೇ ತರಬಹುದೋ ಎಂಬುದನ್ನು ಎಸೆಂಬ್ಲಿಯಲ್ಲಿಯೇ ಚರ್ಚಿಸಲು ಬಿಟ್ಟು, ಆ ಮೇಲೆ ಮಾನ್ಯ ಪಟೇಲರು ತಮ್ಮ ತೀರ್ಮಾನವನ್ನು ಕೊಡಲು ಎದ್ದುನಿಂತು ಮಾತನಾಡಲುಪಕ್ರಮಿಸಿದಾಗಲೇ ಎರಡು ಬಾಂಬುಗಳು ಎಸೆಂಬ್ಲಿಯಲ್ಲಿ ಒಡೆದು ಒಬ್ಬಿಬ್ಬರಿಗೆ ಗಾಯವಾಯಿತು; ಬಾಂಬಿನೊಡನೆ ಕೊಮ್ಯೂನಿಸ್ಟ ಪಕ್ಷದ ಒಂದು ಪ್ರಕಟಣೆಯೂ ಇತ್ತು. ಈ ಘಟನೆಯು ಎಲ್ಲರನ್ನು ಉತ್ತೇಜಿಸಿಬಿಟ್ಟದೆ. ಇದರ ಪರಿಣಾಮವೇನು ಎಂದು ಇನ್ನು ತಿಳಿಯಬೇಕು. ಈ ಬಾಂಬಿನ ಹಾವಳಿಯಿಂದ ಕೊಮ್ಯೂನಿಸ್ಟರಿಗೆ ಆಗುವ ಪ್ರಯೋಜನವೇನೆಂದು ನಮಗೆ ತಿಳಿಯುವುದಿಲ್ಲ. ಬರೇ ಎಸೆಂಬ್ಲಿಯ ನಿಷ್ಪ್ರಯೋಜನವನ್ನು ತೋರಿಸಲಿಕ್ಕೆ, ಕೊಮ್ಯೂನಿಸ್ಟರು ಅಷ್ಟೊಂದು ಹಾನಿಕರವಲ್ಲದ ಬಾಂಬನ್ನೆಸೆದುದೂ, ಅಪರಾಧಿಗಳೊಡನೆ ಗುಂಡಿದ್ದರೂ ಒಬ್ಬರನ್ನಾದರೂ ಅವರು ಕೊಲ್ಲದೆ ಗುಂಡನ್ನು ಪಾಳಿ ಖುರ್ಚಿಯ ಮೇಲೆ ಇಟ್ಟು ಬಿಟ್ಟರಲ್ಲ, ಅಪರಾಧಿಗಳಿಗೆ ಎಸೆಂಬ್ಲಿ ಕಟ್ಟೋಣದಲ್ಲಿ ಸುಲಭ ಪ್ರವೇಶ ಸಿಕ್ಕಿದುದೂ, ಆ ಮೇಲೆ ಸುಲಭದಲ್ಲಿ ಅವರು ಪೋಲೀಸ್ ವಶವರ್ತಿಗಳಾದುದೂ ನೋಡಿದರೆ ಕೊಮ್ಯೂನಿಸ್ಟ ದಂಗೆಖೋರರಲ್ಲಿ ವಿಚಾರಿಗಳೇ ಇಲ್ಲವೆಂದಾಗಲೀ ಅವರಿಗೆ ಸ್ವಂತ ಶಕ್ತಿಯಲ್ಲಿ ಅಮಿತ ವಿಶ್ವಾಸವಿದೆಯೆಂದಾಗಲಿ ತಿಳಿಯಬೇಕು. ಇಂತಹ ದಂಗೆಖೋರ ಸಂಸ್ಥೆಯಿರುವುದಾದರೆ ಅವರು ಬೆಳೆಯಗೊಡದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯವಿದೆ ಎಂತೂ ಈ ಬಾಂಬು ಘಟನೆಯಲ್ಲಿಯೂ ಅದರ ಪ್ರೇರಕರು ಯಾರೆಂಬುದರಲ್ಲಿಯೂ ಯೋಗ್ಯವಾದ ತನಿಖೆಯು ನಡೆಯುವುದು ಅವಶ್ಯವಿದೆ.

ಮಹಾಭಿಮಾನವೇ ಮಹಾಪಮಾನವೇ?

“ರಂಗೀಲಾ ರಸೂಲ್” ಅಥವಾ “ವಿಲಾಸಿ ಪೈಗಂಬರ” ನೆಂಬ ಮುಸಲ್ಮಾನರಿಗೆ ಮಹಳ್ಳ ವಿರೋಧವಾದ ಲೇಖನವನ್ನು ಬರೆದ ರಾಜಪಾಲನೆಂಬವನ ಕೊಲೆಯು ಒಬ್ಬ ಮುಸಲ್ಮಾನನಿಂದ ಲಾಹೋರಿನಲ್ಲಿ ನಡೆಯಿತು. ಮುಸಲ್ಮಾನರಲ್ಲಿ ಧರ್ಮಾಭಿಮಾನವು ಬಹಳ. ಆದರೆ ಕೊಲೆಗೆ ಇಳಿಯುವಂತಹ ಆ ಅಭಿಮಾನವು ಮೊಗಲ್ ರಾಜ್ಯಭಾರದಲ್ಲಿ ಮಾನಿಸಲ್ಪಡುತ್ತಿತ್ತು ಏನೋ! ಆದರೆ ಈಗಿನ ಇಪ್ಪತ್ತನೆಯ ಶತಮಾನದಲ್ಲಿ ಅಫಘಾನಿಸ್ಥಾನದಂತಹ ಮುಸಲ್ಮಾನೀ ರಾಷ್ಟ್ರಗಳಲ್ಲಿ ಕೂಡ ಅತ್ಯಂತ ಗರ್ಹಣೀಯವಾದ ಕೃತ್ಯವೆಂದು ಪರಿಗಣಿಸಲ್ಪಡುತ್ತಿದೆ ಆದರೂ ಹಿಂದೂಸ್ಥಾನದಲ್ಲಿ ಈ ಜಾತೀಯತೆಯ ಕೊಲೆಗಳು ಧಾರಾಳವಾಗಿ ಇನ್ನೂ ಆಗುತ್ತಲೇ ಇವೆ ಎಂಬುದು ವಿಷಾದಕರವಾಗಿದೆ, ರಾಜಪಾಲನ ದೇಹದ ಮೇಲೆ ಮೊದಲೊಂದು ಬಾರಿ ಪ್ರಯತ್ನವು ನಡೆದಿತ್ತು. ಅದರಿಂದ ಉಳಿಕೊಂಡ ರಾಜಪಾಲನು ಈ ಬಾರಿ ಕೊಲೆಯಾದನೆ. ಈ ರೀತಿಯಲ್ಲಿ ದೃಢ ನಿಶ್ಚಯದಿಂದ ನಡೆದ ಕೊಲೆಯನ್ನು ನೋಡಿದರೆ ಇದರ ಹಿಂದೆ ಒಳಸಂಚಿನದೊಂದು ಪಕ್ಷವು ಇರುವುದೆಂದೂ ಖಚಿತವಾಗುತ್ತಿದೆ. ಆದರೆ ಹಿಂದೆರಡು ಕೊಲೆಗಳೊಳಗೆಯೇ ಕೊಮ್ಯೂನಿಸ್ಟರ ಸಂಚುಗಾರರನ್ನು ಕಂಡುಹಿಡಿದು ಪಬ್ಲಿಕ್ ಸೇಫ್ಟಿ ಬಿಲ್ಲ ತಯಾರಿಸಿ, ಎಸೆಂಬ್ಲಿಯಲ್ಲಿ ಅತ್ಯವಸರದಿಂದ ಮಂಜೂರು ಮಾಡಲೆತ್ನಿಸಿದ ಸರಕಾರವು ನೂರಾರು ಕೊಲೆಗಳು ನಡೆಯುತ್ತಿರುವ ಜಾತೀಯ ... ಮುಸಲ್ಮಾನ ... ಅನುಸರಿಸಿದರು... ರಾಜಪಾಲನ ಕೊಲೆಯನ್ನು ... ಅಷ್ಟು ಸಮರ್ಥನೆಯೇ? ಮುಸ್ಲಿಮ್ ಲೀಗ್, ಖಿಲಾಫತ್ ಕಮಿಟಿ ಇವುಗಳ ಧೋರಣವು ಜಾತೀಯ ಐಕ್ಯಕ್ಕೆ ಬದ್ಧವಿರೋಧವಾಗಿ, ಈಗ ಹಿಂದೂ ಮಹಾಸಭೆಯು ಈ ಐಕ್ಯದಿಂದ ದೂರಸರಿದಂತಾಗಿಲ್ಲವೆ? ಜಾತೀಯತೆಯ ಈ ಕಠಿಣ ಸಮಸ್ಯೆಯನ್ನು ಜಾತಿಗಳ ಸ್ವತಂತ್ರ ರಾಜಕೀಯ ಮಾರ್ಗದಿಂದ ಬಿಡುವ ಸಮಯವು ಹೋಗಿದೆಯೆಂದೂ, ಹಿಂದೂಗಳನ್ನೂ ಮುಸಲ್ಮಾನರನ್ನೂ ಒಂದೇ ದೃಷ್ಟಿಯಿಂದ ಶಾಸಿಸಬಲ್ಲ ಕಾನೂನಿನ ಆವಶ್ಯಕತೆಯು ಉಂಟಾಗಿದೆಯೆಂದೂ, ಸರಕಾರವು ಈ ಪ್ರಶ್ನೆಯನ್ನು ಕೂಡಲೇ ಕೈಕೊಳ್ಳುವ ಆವಶ್ಯಕತೆಯಿದೆಯೆಂದೂ, ಈ ಎಲ್ಲಾ ಘಟನೆಗಳಿಂದ ತೋರಿಬರುವುದು.

ಶಾಂತಿಸ್ಥಾಪನೆ.

ಪಾಶ್ಚಾತ್ಯರ ಶಾಂತಿಸಂಧಾನ (Kellog Peace Pact) ಮತ್ತು ಅದರ ವಾತಾವರಣದಲ್ಲಿ ಎಲ್ಲವೂ ತೋರಿಕೆಯಷ್ಟು ಚೆನ್ನಾಗಿಲ್ಲವೆಂದು ತೋರಿಬರುವುದು. ಯುನೈಟೆಡ್ ಸ್ಟೇಟ್ಸು ಒಂದು ಸಮಯದಲ್ಲಿ ಸ್ವಾತಂತ್ರ್ಯ ದೇವಿಯ ಶ್ರದ್ಧಾಯುಕ್ತ ಉಪಾಸಕನಾಗಿದ್ದಿತಾದರೂ ಈಗ ಅದರ ಆವಶ್ಯಕತೆಗಳು ಆ ಆದರ್ಶದ ಪರಿಮಿತಿಯನ್ನು ಮೀರಿ ಹೊರಟಿಂದಿವೆ. ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಅಮೇರಿಕವು ಪ್ರಥಮ ಸ್ಥಾನವನ್ನೂ ಇಂಗ್ಲೆಂಡು ದ್ವಿತೀಯ ಸ್ಥಾನವನ್ನು ವಹಿಸಿದೆ. ಇಂಗ್ಲೆಂಡು ಜರ್ಮನಿಯ ಯಾವ ವ್ಯಾಪಾರದ ಅಭಿವೃದ್ಧಿಯನ್ನು ನೋಡಿ ಮತ್ಸರಿಸಿ ಘೋರ ಸಂಗ್ರಾಮಕ್ಕೀಳಿಯಿತೊ, ಆ ಸಂಗ್ರಾಮದ ಮೂಲಕ ಜರ್ಮನಿಯನ್ನು ಸ್ಪರ್ಧೆಯಿಂದ ಹೊರ ಹಾಕಿದರೂ, ಆ ಮೂಲಕವೇ ಯುನೈಟೆಡ್ ಸ್ಟೇಟ್ಸನ್ನು ಈ ಸ್ಪರ್ಧೆಯ ಕ್ಷೇತ್ರದಲ್ಲಿ ತಂದಿಳಿಸಿತು. ಈಗಿನ ಪೆಟ್ರೋಲು ಖನಿಜ ಎಣ್ಣೆಗಳ ಮೇಲಾಟವು ಈ ಇಂಗ್ಲೆಂಡು—ಅಮೇರಿಕದ ಸಂಬಂಧದಲ್ಲಿ ತೊಡಕನ್ನುಂಟುಮಾಡದೆ ಇರುವುದಿಲ್ಲ. ಅಮೇರಿಕದ ಹಣವೂ ಮೆಲ್ಲನೆ ಇಂಗ್ಲೆಂಡಿನ ವ್ಯಾಪಾರೀ ಸಂಸ್ಥೆಗಳಲ್ಲಿ ಅಧಿಕರಿಸಲಾರಂಭಿಸಿ, ಇಂಗ್ಲೀಷ ಇಲೆಕ್ಟ್ರಿಕ್ ಕಂಪೆನಿಯ ಡ್ಯಾರೆಕ್ಟರರ ಬೋರ್ಡಿನ ಅಧ್ಯಕ್ಷರು, ಅಮೇರಿಕನರ ಪ್ರವೇಶವನ್ನು ಕಡಿಮೆ ಮಾಡಲು ಪುನಃ ಈ ಉದ್ದೇಶಕ್ಕಾಗಿ ಮಾತ್ರವೇ ಬ್ರಿಟಿಷರಿಗಾಗಿ ಮಾತ್ರವೇ ಒಂದು ಹೊಸ ಪಾಲು ಧಂಡವಾಳವನ್ನು ತೆರೆದಿರುವರು. ಈ ಉದಾಹರಣೆಯು ಇತರ ಕಂಪೆನಿಗಳಿಂದಲೂ ಅನುಕರಿಸಲ್ಪಡಬಹುದು. ಇದರಿಂದಲೂ ಆ ಎರಡು ಜನಾಂಗಗಳೊಳಗಿನ ವೈಮನಸ್ಯವು ಹೆಚ್ಚಬಹುದು. ಫೋರ್ಡನೂ, ಜನರಲ್ ಮೊಟರ್ಸ್ ಕಂಪೆನಿಯವರೂ, ಇಂಗ್ಲೆಂಡು, ಫ್ರಾನ್ಸುಗಳಲ್ಲಿ ಕಂಪೆನಿಗಳನ್ನು ಸ್ಥಾಪಿಸಿರುವರಲ್ಲದೆ, ಜನರಲ್ ಮೊಟರ್ಸನವರು ಜರ್ಮನಿಯ “ಒಪೆಲ್” ಎಂಬ ಮೋಟರ್ ಕಾರ್ಖಾನೆಯನ್ನು ಕ್ರಯಕ್ಕೆ ಪಡೆದಿರುವರು. ಇದರಿಂದಲೂ ವ್ಯಾಪಾರೀ ಜನಾಂಗವಾದ ಬ್ರಿಟಿಷರ ಮತ್ಸರವು ಮೇಲೇಳದೆ ಇರದು. ಯುರೋಪಿಯ ಪೆಟ್ರೋಲಿನ ವ್ಯಾಪಾರವನ್ನು ಅಧಿಕರಿಸುವ ಡಿಟರ್ಡಿಂಗ ಎಂಬವರು, ಪೆಟ್ರೋಲ ತಯಾರಿಯನ್ನು ಕಡಿಮೆಮಾಡಿ ಮೇಲಾಟವನ್ನು ತಗ್ಗಿಸಬೇಕೆಂದು ಅಮೇರಿಕದ ಎಣ್ಣೆ ಕಂಪೆನಿಗಳೊಡನೆ ಕರಾರು ಮಾಡಿದ್ದರು. ಅಮೇರಿಕದ ಸರಕಾರವು ಇದು ಬೇಕಾಯಿದೆಶೀರವಾಗಿದೆ ಎಂದು ಪ್ರಕಟಪಡಿಸಿ ಮೇಲಾಟಕ್ಕೆ ಪುನಃ ಉತ್ತೇಜನ ಕೊಟ್ಟದೆ. ಯುರೋಪದಲ್ಲಿ ರಶ್ಯದ ಎಣ್ಣೆಯ ಸಹಾಯದಿಂದಲೂ, ಅಮೇರಿಕ, ಜೈನಾ ದೇಶಗಳಿಗೆ ಅಮೇರಿಕದ ಎಣ್ಣೆಯ ಸಹಾಯದಿಂದಲೂ, ಯುರೋಪೀಯ ವ್ಯಾಪಾರವನ್ನು ಪ್ರತಿಸ್ಪರ್ಧಿಸಲು ಅಮೇರಿಕಕ್ಕೆ ಅನುಕೂಲತೆಗಳಿವೆ. ಆ ವಿಷಯ ಒಂದು ಮುಖ್ಯ ವಿಷಯವಾಗಿರುತ್ತದೆ. ಅಮೇರಿಕಕ್ಕೆ ಗುಟ್ಟಿನಿಂದ ಮದ್ಯವನ್ನು ಸಾಗಿಸುತ್ತಿರುವ ಕೆನಡಾ ದೇಶದ ಹಡಗೊಂದನ್ನು ಅಮೇರಿಕದ ಮದ್ಯಪಾನ ನಿಷೇಧದ ನೌಕರರು ಗುಂಡು ಹಾಕಿ ಮುಳುಗಿಸಿದರು. ಇತರ ದೇಶವಾದರೆ ಒಂದು ಯುದ್ಧವೇ ಪ್ರಾರಂಭವಾಗುತ್ತಿತ್ತು. ಈ ಮುಂಚೆ ಚೀನಾದೇಶವು—ಹಡಗು ಮುಳುಗಿಸಿದ್ದಲ್ಲ;—ಬರೇ ಅಫೀಮು ಸೇವಿಸಬಾರದೆಂಬ ಕಾನೂನು ಮಾಡಿದ್ದಕ್ಕೇನೇ ಬ್ರಿಟಿಷರು ಹೋಗಿ ಯುದ್ಧಮಾಡಿ, ಆ ಕಾನೂನನ್ನು ತೆಗಿಸಿದ್ದರು. ಇದು ಅಮೇರಿಕವಾದುದರಿಂದ ಪರಸ್ಪರ ಶಬ್ದವಾದವು ಮಾತ್ರವೇ ನಡೆಯುತ್ತಾ ಉಂಟು. ಹೇಗೂ ಮಾನಸಿಕ ಪರಿಣಾಮವು ಸ್ಪಷ್ಟವಿದೆ. ಇತ್ತ ಉತ್ತರ ಧ್ರುವದ ಶೋಧಗಳನ್ನು ಕೆಲವರು ನಡೆಸಿ ಕೆಲವು ಸ್ಥಳಗಳನ್ನು ಕಂಡುಹಿಡಿದಿದ್ದರು. ಆ ಸಮಯದಲ್ಲಿ ಅವುಗಳ ಪ್ರಾಮುಖ್ಯತೆಯು ಅಮೇರಿಕಕ್ಕೆ ತಿಳಿದಿರಲಿಲ್ಲ. ಈಗ ಆ ಸ್ಥಳಗಳು ವೈಮಾನಿಕ ವ್ಯವಸ್ಥೆಗಳಿಗೆ ಅತ್ಯಾವಶ್ಯಕವೆಂದು ಕಂಡುಬಂದಿದೆ. ಈ ಸ್ಥಳಗಳ ಮೇಲೆ ಯಾರಿಗೆ ಹಕ್ಕಿದೆ ಎಂಬುದರಲ್ಲಿ ಅಮೇರಿಕಕ್ಕೂ ಇಂಗ್ಲೆಂಡಿಗೂ ವಾದವೆದ್ದಿದೆ. ಅಂತೂ ಕೆಲ್ಲೊಗ್ ಶಾಂತಿಸಂಧಾನಕ್ಕೆ ಸಹಿ ಬಿದ್ದದೆ; ವಿಮಾನ ಮತ್ತು ಯುದ್ಧನಾವೆಗಳ ರಚನೆಯು ಆಗುತ್ತಾ ಇದೆ. ಆದರೆ ದುಷ್ಟಿನ ಮದವೂ ಲೋಭವೂ ಜಗತ್ತನ್ನು ಎಲ್ಲಿಯ ಕೆಳೆಯುವುದೋ ಎಂದು ಸಖೇಯ ಹೃದಯದೊಡನೆ ಎಲ್ಲರೂ ನೋಡುತ್ತಾರೆ.

ಟಿಪ್ಪಣಿಗಳು

NOTES

ಜಪಾನ್ ಸರಕಾರವು ಇನ್ನು ಎಂದಿಗೂ ರೇಷಿಮೆಯು ಕೆಲವರಿಗೆ ಸ್ವಲ್ಪ ಕಡಿಮೆ ಮಾಡುವ ಆಲೋಚನೆ... ಎಸೆಂಬ್ಲಿಯಲ್ಲಿ ಸರ್ಕಾರದಿಂದ ಕಡಿಮೆ ಮಾಡುವ ಕರಾರು ಬಿದ್ದರೂ, ವ್ಯಾಪಾರಿಗಳು ತಮ್ಮ ಬಲಾತ್ಕಾರ ಎಲ್ಲವನ್ನು ಇತ್ತರಿಗೆ ತಂದು ಕೊಟ್ಟರು ಏಟು.

ಎಸೆಂಬ್ಲಿಯಲ್ಲಿ ಪ್ರಾರಂಭವಾಗಿದೆ, ಪಬ್ಲಿಕ್ ಸೇಫ್ಟಿ ಬಿಲ್ಲಿನ ಚರ್ಚೆ. ಚರ್ಚೆ ಪ್ರಾರಂಭಮಾಡುವ ದಿವಸ ಬಾಂಬಿನ ಅವಘಡ, ಅವಘಡ ದೃಷ್ಟಾಂತಕ್ಕೆ ಕಾರಣವಾಗಲಿದೆ.

ಬಾಂಬು ಬಿಸಾಡಿದ್ದು ಎಸೆಂಬ್ಲಿಯ ಹಾಲಿನಲ್ಲಿ ಎರಡು ಜನ ಬಂಗಾಳಿಯವರಿಂದ. ಸಿ. ಐ. ಡಿ. ಪೋಲೀಸರು ಇತರ ಪೋಲೀಸರು ಕಾವಲು ಇರುವಾಗಲೇ ಇವರ ಕಾರಬಾರು.

ಪೋಲೀಸರು ಬಾಂಬು ಬಿಸಾಡಿದವರನ್ನು ಕ್ಷಣದಲ್ಲಿಯೇ ಕೈದು ಮಾಡಿರುವರಂತೆ. ಈಗಿನ ಪ್ರಯತ್ನ ಒಳಗಿನ ಗುಟ್ಟು ಹೊರತರಲು.

ಸ್ಯಾಮುನ್ ಸಾಹೇಬರು ಕೂಡ ಎಸೆಂಬ್ಲಿಯಲ್ಲಿ ಬಾಂಬು ಬಿಸಾಡಿದ ದಿವಸ ಹಾಜರಿದ್ದರಂತೆ. ಇವರು ಪಬ್ಲಿಕ್ ಸೇಫ್ಟಿ ಬಿಲ್ಲಿನ ವಿಷಯ ಪ್ರೆಸಿಡೆಂಟರ ಅಭಿಪ್ರಾಯ ಕೇಳಲು ಬಂದಿದ್ದರಂತೆ. ಅಭಿಪ್ರಾಯ ಚೆನ್ನಾಗಿ ಆಯಿತು.

ವಿಲಾಯತಿಯಲ್ಲಿ ಮೋಟಾರು ವಾಹನಗಳು, ಕಾರುಗಳು, ಗಾಡಿಗಳೇ ಇತವಿಯಲ್ಲಿ ಆರು ಸಾವಿರ ಜನರನ್ನು ಆಹುತಿ ಪಡಕೊಂಡಿದೆ. ಇಷ್ಟು ದೊಡ್ಡ ಆಹುತಿಯ ಸಂಖ್ಯೆಯು ವಿಲಾಯತಿಯಲ್ಲಿ ಮೊದಲನೆಯದು.

ಲಂಡನಿನಿಂದ ಹಿಂದೂಸ್ಥಾನಕ್ಕೆ ಏರೋಪ್ಲೇನುಗಳ ಮೂಲಕ ಟಪ್ಪಾಲು ಒಯ್ಯುವುದು ಪ್ರಾರಂಭವಾಗಿದೆ. ಕಳೆದ ತಾ. ೭ಕ್ಕೆ ಕರಾಚಿಗೆ ೫೦೦ ಪೌಂಡು ಟಪ್ಪಾಲು ಬಂದಿರುತ್ತದೆ. ಮೊದಲನೆ ಬಾರಿ ಬಂದ ಟಪ್ಪಾಲಿನಲ್ಲಿ ಅರಸರಿಂದ ವೈಸರಾಯರಿಗೆ ಒಂದು ಕಾಗದ ಬಂದಿರುತ್ತದಂತೆ. ಮುಂದಕ್ಕೆ ಸುಲಭವಾಯಿತು.

ರಶ್ಯಾಯಾದಲ್ಲಿ ಒಬ್ಬ ಪ್ರಸಿದ್ಧ ಡಾಕ್ಟರರು ಸತ್ತವರನ್ನು ಜೀವಕ್ಕೆ ತರುವ ಇಂಜೆಕ್ಷನ್ ಮದ್ದನ್ನು ತಯಾರಿಸಿದ್ದಾರಂತೆ.

ಇವರು ತಯಾರಿಸಿದ ಔಷಧಿಯನ್ನು ಒಂದು ಸತ್ತ ಶೇಣಕ್ಕೆ ಉಪಯೋಗಿಸಿ ಸತ್ತವರ ಪ್ರಾಣ ಉಳಿಸಿದ್ದಾರಂತೆ. ಇದು ನಿಜವಾಗಿ ಎಂದಾದ ಪಕ್ಷಕ್ಕೆ ಇಲ್ಲಿಯ ಡಾಕ್ಟರರು ರಶ್ಯಾದೇಶಕ್ಕೆ ಹೋಗಿ ಕಲಿತುಬರುವುದು ಯೋಗ್ಯ

ಯಮನಿಗೂ ಓಡಿಸುವ ಶಕ್ತಿ ಇಂಗ್ಲೀಷ್ ಡಾಕ್ಟರರಲ್ಲಿ ಉಂಟು.

ಲಾಹೋರಿನಲ್ಲಿ ರಾಜಪಾಲ್ ಎಂಬ ಒಬ್ಬ ಪುಸ್ತಕ ವ್ಯಾಪಾರಿಗೆ ತನ್ನ ವ್ಯಾಪಾರದ ಅಂಗಡಿಯಲ್ಲಿಯೇ ಆತನ ವೈರಿಯು ಚೂರಿಯಿಂದ ತಿವಿದು ಕೊಂದುಹಾಕಿರುವನು. ಕೊಂದವ ಮುಸಲ್ಮಾನ. ಕಾರಣ ರಾಜಪಾಲನು ಬರೆದ ಒಂದು ಪುಸ್ತಕಕ್ಕಾಗಿ.

ರಾಜಪಾಲನನ್ನು ಕೊಂದ ಪರವಾಗಿ ಲಾಹೋರಿನಲ್ಲಿ ದೊಡ್ಡ ಸಭೆಸೇರಿದೆ. ಕಾಂಗ್ರೆಸ್ ಪಾರ್ಟಿಯವರೆಲ್ಲಾ ಕೂಡಿ ಆತನ ಮರಣಕ್ಕೆ ದುಃಖಿಸುತ್ತಿದ್ದಾರೆ. ಆರ್ಯ ಸಮಾಜದವರು ಶವವನ್ನು ತೆಗೆದುಕೊಂಡು ಮೆರವಣಿಗೆ ಮಾಡಬೇಕಾಗಿ ಹೊರಡುವಾಗ್ಯೆ ಪೋಲೀಸರು ಗುಂಪು ತಯಾರು. ಕೋವಿಗಳು ಇನ್ನ ಮೋಟಾರು ಹಾಜರು.

ಪೋಲೀಸರೊಳಗೂ ಜನಸಮೂಹದೊಳಗೂ ಗಡಿಬಿಡಿಯಾಗಿ ಅನೇಕರಿಗೆ ಜಖಂ.

ಶಾಲಿವಾಹನ ಶಕ ೧೮೫೧ನೆಯ, ವಿಭವಸಂವ ಫಾಲ್ಗುಣ ಬ॥ ೮ ಶನಿವಾರದಿಂದ ವಿಭವ ಸಂವ ಚೈತ್ರ ಶು॥ ೧೦ ಶುಕ್ರವಾರದ ವರೆಗಿನ ಪಂಚಾಂಗ

(ಮಂಗಳೂರಿನ ಸಮಯ (ಘಟ್ಟ))

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರನು	ಸೂರ್ಯ ಉ	ಅಸ್ತ
13	ಶನಿ	೪	೩೩.೪೮	ರೋಹಿಣೀ	೫೩.೪೦	೩೧	6.22	6 42
14	ರವಿ	೫	೩೬.೪೪	ಮೃಗಶಿರಾ	೫೯.೪೫	೧	6.21	6 42
15	ಸೋಮ	೬	೩೧.೪೩	ಆರ್ದ್ರಾ	೪೫.೪೬	೨	6 20	6.42
16	ಕುಜ	೭	೧೬.೨	ಪುನರ್ವಸು ೧,೪೬		೩	6 20	6.42
17	ಬುಧ	೮	೧೧.೧೪	ಪುಷ್ಯ	೩೮.೩೦	೪	6 19	6.43
18	ಗುರು	೯	೫.೩೩	ಆಶ್ಲೇಷಾ	೩೩.೬೧	೫	6.18	6.43
19	ಶುಕ್ರ	೧೦	೧.೧೪	ಮಘಾ	೩೫.೪೪	೬	6.18	6.43

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಅತ್ಯಧಿಕ		Minimum ಅತ್ಯಲ್ಪ		Rainfall. ಮಳೆ ದಿನದ ಮಳೆ	ಒಟ್ಟು ಮಳೆ
22	92—	0	77—	8	—	—
23	91—	5	75—	4	—	—
24	91—	2	78—	9	—	—
25	91—	8	78—	2	—	—
26	91—	3	77—	9	—	—
27	92—	3	78—	6	—	—
28	92—	6	79—	7	—	—
						125-22

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಆ	ವರೆಗೆ ರೂ.	ಆ
ಮಸ್ಸಿ	7 —	[illegible]	7 —	4
ಗೋಧಿ ...	6 —	4	6 —	8
ರಾಗಿ ...	5 —	5	5 —	[illegible]
ಉದ್ದು ಅಪ್ಪಲ್ ಬೆಲ್ಲಗೆ ..	7 —	[illegible]	7 —	4
ಬಂಗಾಳ ಬೆಲ್ಲಗೆ ಗೋಣಿ ಗಳ್ಳಿ ...	12 —		12 —	[illegible]
ಎಲ್ಲೂರು ಬೆಲ್ಲಗೆ ಮುಡಿ ಗಳ್ಳಿ ...	6 —	4	6 —	[illegible]
ಗೋಧಿ ಗೋಣಿ ಗಳ್ಳಿ ...	15	12	20 —	[illegible]
ಹುರುಳಿ ಗೋಣಿ ಗಳ್ಳಿ	7 —	8	[illegible] —	[illegible]
ಕಡಲೆ ಗೋಣಿ ಗಳ್ಳಿ ...	15 —	8	18 —	8
ತೊಗರಿ ಗೋಣಿ ಗಳ್ಳಿ ...	16 —	8	26 —	[illegible]
ತೊಗರಿಬೇಳೆ ಗೋಣಿ ಗಳ್ಳಿ ...	18 —	8	27 —	[illegible]
ಉದ್ದು ಗೋಣಿ ಗಳ್ಳಿ	15 —	[illegible]	15 —	12
ಹೆಸರು ಗೋಣಿ ಗಳ್ಳಿ	14 —	8	18 —	[illegible]
ಊರು ಬೆಲ್ಲ ಖಂಡಿ ಗಳ್ಳಿ ..	6[illegible] —	[illegible]	65 —	8
ಉಪ್ಪು ಗೋಣಿ ಗಳ್ಳಿ	4 —	8	5 —	0
ಬೊಂಬಾಯಿ ಖಂಡಿ ಗಳ್ಳಿ ..	95 —	[illegible]	100 —	
ಕೊಬ್ಬರಿ ಹಿಂಡಿ ಖಂಡಿ ಗಳ್ಳಿ ...	32 —	0	33 —	8
ಎಳ್ಳೆಂಡಿ ಖಂಡಿ ಗಳ್ಳಿ ..	42 —	8	45 —	
ಕೊಬ್ಬರಿ ಎಣ್ಣೆ ಮುಡಿ ಗಳ್ಳಿ ..	8 —	12	8 —	4
ಎಳ್ಳೆಣ್ಣೆ ಮುಡಿ ಗಳ್ಳಿ	7 —	12	8 —	4
ಹರಳೆಣ್ಣೆ ಸಕ್ಕರೆ ಗಳ್ಳಿ ..	7 —	12	8 —	4
ಮೋರಿಸ ಸಕ್ಕರೆ ಮುಡಿ ಗಳ್ಳಿ	3 —	10	3 —	12
ಹೊಸ ಮೆಣಸು ...	5 —	4	6 —	0
ಹಳ್ಳ ಉದ್ದ ಮೆಣಸಿನಕಾಯಿ ಮುಡಿ ಗಳ್ಳಿ	1 —	8	2 —	1
ಸಾಸಿವೆ ಮುಡಿ ಗಳ್ಳಿ ...	9 —	0	9 —	4
ಕೊತ್ತುಂಬರಿ ಮುಡಿ ಗಳ್ಳಿ ..	4 —	4	5	2
ನೀಲಿಯ ಕಾಫಿ ಖಂಡಿ ಗಳ್ಳಿ ..	395 —	0	402 —	8
ಬೆಳಗೋಡು ಅಡಿಕೆ ಖಂಡಿ ಗಳ್ಳಿ ..	140 —	0	180 —	0
ಕಾಳುಮೆಣಸು ಖಂಡಿ ಗಳ್ಳಿ ...	440 —	0	445 —	0
ಯೇಲಕ್ಕಿ ಮುಡಿ ಗಳ್ಳಿ ...	55 —	0	75 —	
ಗೇರುಬೀಜ ಮುಡಿ ಗಳ್ಳಿ ...	3 —	4		
ಕಲ್ಲಿನ ಖಂಡಿ ಗಳ್ಳಿ ...	42 —	0	46 —	8
ತಾಂಬ್ರ ಹಗಡು ಗಳ್ಳಿ ...	15 —	8	16 —	0
ತಾಂಬ್ರ ಪಾತ್ರೆಗಳು ಮುಡಿ ಗಳ್ಳಿ ...	20 —	0	21	4
ಹಿತ್ತಾಳೆ ಸೇರು ಗಳ್ಳಿ ...	16 —	4	—	
ಹಿತ್ತಾಳೆ ಹಗಡು ಮುಡಿ ಗಳ್ಳಿ —	16 —	0	16 —	0
ಸತುವು ಗಳ್ಳಿ ...	13—9—0		—	
ತುಪ್ಪಾರಿ ಖಂಡಿ ಗಳ್ಳಿ ...	24 —	0	37 —	8

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ನಡೆಯುವ ಈ ಸ್ಥಾಪನೆಯಲ್ಲಿ [illegible] ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಟಿಕ, ಅರಿಷ್ಟಾಸವಗಳು [illegible] ಅನುಕೂಲಸ್ಥರಾದ [illegible] ರೋಗಿಗಳು [illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ!
ಕಾಫಿ ಪ್ಲಾಂಟರರಿಗೂ, ತೋಟದವರಿಗೂ
ಬೇಕಾಗುವಂಥ
ಚರ್ ರೋಲ್‌ಗಳು
ಮೂರು ಸ್ಯಾಂಪಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕೃಪೆಯಿಟ್ಟು, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೇನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಪಡೆಯತಕ್ಕ ನಿತ್ಯಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —
ಕ್ರಯ ವಾಗಲಿ ಉಚಿತವಾಗಲಿ
[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,
1/94 ಜೈನಾ ಬಜಾರ್, ಮದ್ರಾಸು.

ಉಚಿತ! ಉಚಿತ!!

312 [illegible]

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]
ಡಿ. ಗುಲಾಬ್ ಮಾರ್ಕ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

([illegible] XXI [illegible])

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible] 1927ನೇ ಇಸವಿಯಲ್ಲಿ [illegible] ಆಯುರ್ವೇದ ಔಷಧಿಗಳನ್ನು [illegible]

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಕೊಡಿಯಾಲಬೈಲ್, ಮಂಗಳೂರು.

[illegible]

ಪುಣ್ಯಪ್ರಭಾವಕ ಸಂಸ್ಥೆಗಳು:
[illegible]
ಶ್ರೀ [illegible] ಮುಸಲ್ಮಾನರು, ಮುಸ್ಲಿಂ, ಬಂಗಾಳ, [illegible]
ದೂರದ ಸಮಾಚಾರಗಳು [illegible]
ಬೆಂಗಳೂರು ಸಂತೆಯ (ಧರ) [illegible]
ಶಂಕರರವರ ಜೊತೆಯವರು [illegible]
ಪುತ್ತೂರು ಶ್ರೀ ವಿದ್ಯಾವರ್ಧಕ ಸಂಘಕ್ಕೆ ಧನ ಸಹಾಯ ಮಾಡಿದವರ ಹೆಸರುಗಳು

ಸ್ವದೇಶಾಭಿಮಾನಿ.

ತಾರೀಖು ೧೨ನೇ ಶುಕ್ರವಾರ ಏಪ್ರಿಲ್ ೧೯೨೯.

ದುಃಖ ಮತ್ತು ಲಜ್ಜೆಯ ಕತೆ.

ಈ ಹೆಸರಿನಲ್ಲಿ ಮಹಾತ್ಮಾ ಗಾಂಧಿಯವರು ನವಜೀವನದಲ್ಲಿ ಒಂದು ಲೇಖವನ್ನು ಬರೆದಿರುವರು. ಇದು ಪುರುಷರಲ್ಲಿ ಅದ್ವಿತೀಯನೂ ಅಗ್ರಗಣ್ಯನೂ ಆದವನೊಬ್ಬನಿಂದ ಬಂದಿರುವುದರಿಂದಲೂ, ಇದರಲ್ಲಿ ಮಾನವ ಅಭ್ಯುದಯದ ಆಧಾರಗಳೂ, ನಿರಾಧಾರಗಳೂ ಅಡಗಿಕೊಂಡಿರುವುದರಿಂದಲೂ ಈ ಲೇಖವು ಮಹಾತ್ಮಾಜೀಯವರ ಲೇಖಗಳೊಳಗೆ ಅತ್ಯಂತ ಮುಖ್ಯವಾದ ಸ್ಥಾನವನ್ನು ಹೊಂದಲಿಕ್ಕಿರುವುದು. ಮಹಾತ್ಮಾಜೀಯವರು ಆದರ್ಶನಿಯಾಮಕರು; ಅಲ್ಲದೆ ಅವರು ಆದರ್ಶವನ್ನು ತೋರಿಸುವವರು. ಆದುದರಿಂದ ಅವರ ಜೀವನದ ಅಮೂಲ್ಯವಾದ ಅನುಭವವು ನಮ್ಮ ವೈಯುಕ್ತಿಕ ಜೀವನ ಪಥ ಅನುಸರಣಕ್ಕೆ ಸಹಕಾರಿಯಾಗುವುದಲ್ಲದೆ, ಜನಸಾಮಾನ್ಯರ ಸಮಷ್ಟಿಪರವಾದ ಜೀವನ ಕ್ರಮ ನಿರ್ಮಾಣಕ್ಕೂ ಸಹಾಯಕವಾಗಲಿಕ್ಕಿದೆ.

ಸಾಮಾನ್ಯವಾಗಿಯಾದರೆ ಮಹಾತ್ಮಾಜೀಯವರ ಮೇಲಿನ ಲೇಖವು ಅವಶ್ಯಕವಿರಲಿಲ್ಲವೆನ್ನಬಹುದಿತ್ತು, ಒಂದು ಪರಿಮಿತ ಸಂಸ್ಥೆಯು ಸಾರ್ವಜನಿಕ ಸಹಾಯದಿಂದಲೇ ಪೋಷಿಸಲ್ಪಡುವುದಾದರೂ, ಅದರ ಆಂತರಿಕ ಮತ್ತು ವೈಯುಕ್ತಿಕ ದೋಷ ಮತ್ತು ಅಭಾವಗಳನ್ನು ಬಹಿರಂಗದ ಬೆಳಕಿಗೆ ಹಿಡಿಯುವ ಬದಲಿಗೆ ಅಲ್ಲಲ್ಲಿಯೇ ಅವುಗಳ ನಿವಾರಣೆಯನ್ನು ಮಾಡುವುದು, ಸುಲಭವೂ, ಸಂಸ್ಥೆಗೆ ಹಿತಕರವೂ, ಜನಸಾಮಾನ್ಯರ ಮಾನಸಿಕತೆಗೆ ಒಳ್ಳೆಯದೂ ಆಗುತ್ತಿತ್ತು. ಆದರೆ ಮಹಾತ್ಮಾಜೀಯವರು ತಮ್ಮ ಸಾಬರ್ಮತಿ ಉದ್ಯೋಗ ಮಂದಿರದ ಮೇಲೆ ಮಹತ್ವದ ಆದರ್ಶಗಳನ್ನು ಹೊರಿಸಿರುವರು; ಅಲ್ಲಿ ಅವರು ಲೋಕಕ್ಕೆ ಕಾರ್ಯರೂಪಿಯಾದ ಆದರ್ಶವನ್ನು ರಚಿಸಿ, ಕಾರ್ಯತಃ ಆದರ್ಶಗಳು ಸಾಧ್ಯವೆಂದು ತೋರಿಸಲು ಹವಣಿಸಿರುವರು. ಆದುದರಿಂದ ಮಹಾತ್ಮಾಜೀಯವರ ಈ ಲೇಖವು ಅವಶ್ಯಕವಾಯಿತು.

ಬ್ರಹ್ಮಚರ್ಯವೂ, ಬಡತನವೂ, ಪವಿತ್ರತೆಯೂ, ಸದಾಚಾರವೂ ಆದರ್ಶವಾಗಿರುವ ಈ ಮಂದಿರದಲ್ಲಿ ಆ ಎಲ್ಲಾ ಆದರ್ಶಗಳಿಗೂ ಬಂದಲ್ಲ ಒಂದು ಕಡೆಯಿಂದ ಬಡಿತ ಸಂಭವಿಸಿದುದೇ ಮಹಾತ್ಮಾಜೀಯವರ ದುಃಖ ಮತ್ತು ಲಜ್ಜೆಗೆ ಕಾರಣವಾಗಿರುತ್ತದೆ. ಒಂದನೇ ಕತೆಯು ತಮ್ಮ ಸೋದರ ಸಂಬಂಧದ ಒಬ್ಬ ತಮ್ಮಂದಿರಿಂದಾಗಿದೆ. ಈ ತಮ್ಮಂದಿರ ಹೆಸರು ಛಗನ್‌ಲಾಲ್ ಗಾಂಧಿ; ಇವರೊಡನೆ ಹತ್ತು ಸಾವಿರ ರೂಪಾಯಿ ಸ್ವಾಧೀನವಿತ್ತು; ಉದ್ಯೋಗ ಮಂದಿರದ ಕಟ್ಟಳೆಗೆ ಇದು ವಿರೋಧವಾಗಿತ್ತು; ಮಹಾತ್ಮಾಜೀಯವರ ಮತ್ತಾಯದ ಮೇಲೆ ಆ ಹತ್ತು ಸಾವಿರ ರೂಪಾಯಿ ಮಂದಿರಕ್ಕೆ ಬಿಟ್ಟು ಕೊಡಲ್ಪಟ್ಟಿತು; ಆದರೂ ಇವರಿಗೆ ಸಣ್ಣ ಸಣ್ಣ ಕಳವುಗಳನ್ನು ಮಾಡುವುದೆಂದರೆ ಇಷ್ಟ. ಈಗ ಅವರು ಮಂದಿರವನ್ನು ಬಿಟ್ಟು ಹೋಗಿದ್ದಾರೆ. ಎರಡನೇ ಕತೆಯು ತಮ್ಮ ಸ್ವಂತ ಹೆಂಡತಿಯ ವಿಷಯವಾಗಿರುತ್ತದೆ. ಒಬ್ಬನು ನಾಲ್ಕು ರೂಪಾಯಿಯನ್ನು [illegible] ಒಪ್ಪಿಸಿದನು. ಶ್ರೀಮತಿಯವರು ಖಂಡದ [illegible] ಮುಂದಿನ ಕಾರ್ಯದರ್ಶಿಗೆ ಕೊಡಬೇಕೆಂದು ಹೊರಗಿನ ಉಪಯೋಗಗಳಿಗಾಗಿ ಇಟ್ಟುಕೊಂಡರು. ಛಗನ್‌ಲಾಲ್ ಗಾಂಧಿಯವರ ನಡತೆಯ ದೋಷಗಳು ಹೊರಬಿದ್ದು ಆ ವಿಷಯ ತನಿಖೆಯಾಗುವಾಗ ಈ ಸಂಗತಿಯೂ ತಿಳಿದುಬಂದಿತು. ಮೂರನೇ ಕತೆ—ಮೂರು ವರ್ಷಗಳ ಹಿಂದೆ ಒಬ್ಬ ವಿಧವೆಯು ಈ ಆಶ್ರಮದಲ್ಲಿದ್ದಳು; ಅವಳು ಶುದ್ಧ ಮನಸ್ಕಳಾಗಿದ್ದಳೆಂದೇ ಎಲ್ಲರೂ ತಿಳಿದಿದ್ದರು; ಅದೇ ಸಮಯದಲ್ಲಿ ಒಬ್ಬ ಯುವಕನೂ ಆಶ್ರಮದಲ್ಲಿದ್ದನು; ಅವನು ಅವಿವಾಹಿತನಿದ್ದನು; ಅವನು ಆ ವಿಧವೆಯನ್ನು ಕೆಡಿಸಿದನು.

ಈ ಮೂರು ಕತೆಗಳನ್ನು ಬರೆದು ಮಹಾತ್ಮಾಜೀಯವರು ಹೇಳುವರು:—"ಮಂದಿರದೊಳಗಿನ ಈ ದುರ್ನಡತೆಯು ಪ್ರಕಾಶನವು ನನ್ನೊಳಗಿನ ದೋಷಗಳ ಪ್ರತಿಬಿಂಬವೆಂದೇ ನಾನು ತಿಳಿಯುತ್ತೇನೆ" ಮತ್ತು ಮುಂದೆ ಪ್ರಶ್ನಿಸುವರು—"ಆದರೆ ನಾನು ಏನು ಮಾಡಬೇಕು? ನಾನು ಓಡಿಹೋಗಬೇಕೆ? ಇಲ್ಲವೇ ಆತ್ಮಹತ್ಯೆಗ ಮಾಡಬೇಕೆ? ಇಲ್ಲವೇ ಅಂತ್ಯವಿಲ್ಲದ ಉಪವಾಸವನ್ನು ಪ್ರಾರಂಭಿಸಲೇ? ಅಥವಾ ಮಂದಿರದಲ್ಲೇ ನನ್ನನ್ನು ನಾನು ಮುಚ್ಚಿಡಲೇ? ಅಥವಾ ಸಾರ್ವಜನಿಕ ದ್ರವ್ಯವನ್ನೂ ಕರ್ತವ್ಯವನ್ನೂ ನಿರಾಕರಿಸಲೇ? ನಾನು ಅನಿರುದ್ಧ ಆಶಾವಾದಿಯಾಗಿದ್ದೇನೆ. ಮಂದಿರದ ಪವಿತ್ರ್ಯದ ಮೂಲಕ ಸ್ವರಾಜ್ಯವನ್ನು ಹೊಂದುವ ಆಶೆಯು ನನಗಿದೆ. ಆದುದರಿಂದ ಮಂದಿರದ ಅಭಾವಗಳ ಪೂರ್ಣಜ್ಞಾನವಿದ್ದು ಅದು ಒಂದು ದಿನ ಪವಿತ್ರವಾಗಿ ಸತ್ಯಾಗ್ರಹಾಶ್ರಮವಾಗಿ ಪರಿವರ್ತನ ಹೊಂದುವುದೆಂಬ ಆಶೆಯಿಂದ ನಾನಿರುತ್ತೇನೆ. ಆಶ್ರಮದ ಹೆಸರಿನಲ್ಲಿ ಪ್ರಾರಂಭಿಸಿದ ಒಂದು ಕರ್ಮವನ್ನು ಆತನ ಅನುಜ್ಞೆಯಿದ್ದರೆ ಮಾತ್ರವೇ ಬಿಟ್ಟುಬಿಡಬಹುದು. ಮತ್ತು ನನ್ನ ಈ ಕಾರ್ಯವನ್ನು ಆತ್ಮನು ಪಡಿಸಬೇಕೆಂದು ಅವನ ಇಚ್ಛೆಯಾದರೆ ಅವನು ಸಮಾಜವನ್ನು ಪ್ರೇರಿಸಿ ಅದರ ಮೂಲಕ ನನ್ನನ್ನು ಈ ಕರ್ಮಕ್ಷೇತ್ರದಿಂದ ಓಡಿಸಿಬಿಡುವನು. ಮತ್ತು ಆತನ ಪ್ರತೀಕಾರದ ಭಯಂಕರ ಮಹತ್ವದಲ್ಲಿಯೂ ಅವನಲ್ಲಿರುವ ನನ್ನ ಅಚಲ ವಿಶ್ವಾಸವನ್ನು ಪ್ರಕಟಿಸಲು ನನಗೆ ಶಕ್ತಿಯಿರಬಹುದೆಂಬ ಆಶೆಯನ್ನು ಇಟ್ಟುಕೊಂಡಿದ್ದೇನೆ.

ಈ ಕತೆಗಳೂ ಈ ಆಶೆಯುಗಳೂ ಸಂಸಾರದಲ್ಲಿ ಕಷ್ಟನಿಷ್ಠುರಗಳನ್ನನುಭವಿಸಿ, ಸಮಾಜದ ಮಾನಸಿಕತೆಯ ವೈಚಿತ್ರ್ಯಗಳನ್ನು ತಿಳಿದುಕೊಂಡ ಪ್ರತಿ ಒಬ್ಬ ಅವಗಾಹನೆಗೂ ಆಲೋಚನೆಗೂ ಬಿಡುವವು. ಸಂಸಾರದ ತಾಪತ್ರಯಗಳನ್ನು ತೊರೆದು ಮರೆತು, ಆದರ್ಶಗಳನ್ನು ಸಾರುವ ಹೊಸಬರೀಗ ಮಾತ್ರವೇ ಒಂದೇ ಭಾವ ಪ್ರವಾಹದ (Consistent) ತತ್ವಗಳನ್ನೇ ಲೋಕವು ಈ ವರೆಗೆ ಕೇಳಿ, ಆದರ್ಶವನ್ನು ಪಡೆದಿತ್ತು. ಮಹಾತ್ಮಾಜೀಯವರ ಭಾವಪ್ರವಾಹಗಳು ಹಾಗಿರುವುದಲ್ಲ. ಅವುಗಳು ಉನ್ನತ ಆತ್ಮನ ಪ್ರಚಂಡ ಪರಿಶ್ರಮದ ಅನುಭವ ಮಾತ್ರವಾಗಿದೆ. ಸಂಸಾರದ ಯಾತನೆಯ ಮಧ್ಯೆಯೂ ಈ ಅನುಭವಗಳು ಮೇಲಿವೆ. ಆದುದರಿಂದ ಸಂಸಾರಿಕರಿಗೆ ಇತರ ಆದರ್ಶಗಳಿಂತ ಇವೇ ಹೆಚ್ಚು ಬೆಲೆಯುಳ್ಳವುಗಳಾಗಿರಬೇಕು.

ವಿದೇಶ ವರ್ತಮಾನ.

—ಬೋಸನಿಯದಲ್ಲಿ [illegible] ವಿಶೇಷವಾದ ಆಧಿವೃಷ್ಟಿಯನ್ನು ಹೊಂದುತ್ತಾ ಬರುತ್ತಿದ್ದಾರೆ. [illegible] ಸ್ಥಳಗಳಲ್ಲಿ [illegible] ಹೋಗುವಷ್ಟು ಶಕ್ತಿ [illegible].

—ಅಮೇರಿಕದಲ್ಲಿ ಒಬ್ಬ [illegible] ತನ್ನ ಕೈಕೆಳಗಿದ್ದ [illegible] ಭಯಂಕರವಾದ [illegible] ಮತ್ತು ಎಲ್ [illegible] ಕೆಲಸದ ತಿಳ್ಳೆ [illegible] ಅಲ್ಲಿನ ಎಲ್ಲಾ [illegible] ಗರ್ಭ [illegible] ನಿರುತ್ತದೆ.

—[illegible] ಬರ್ಮಾ ಎಂಬ ಸ್ಥಳದ ಸಮೀಪ [illegible] ಎಕ್ಸ್‌ಪ್ರೆಸ್ ರೈಲು [illegible] ಹತ್ತಿ ಹೋಗಿ [illegible] ಜನ ಸತ್ತು ಹೋದರು. ಮೂವತ್ತು ಜನರಿಗೆ ಪೆಟ್ಟಾಗಿರುತ್ತದೆ. ಮಂಜು ಬಿದ್ದುದರ ದೆಸೆಯಿಂದ [illegible] ಹೊಂದಿದವರಿಗೆ ಸಹಾಯವನ್ನೊದಗಿಸಲು ಕೂಡ ಅನುಕೂಲವಿಲ್ಲದಾಯಿತು.

—ಟರ್ಕಿ, ಇರಾಕ್, ಸಿರಿಯಾ ಮತ್ತು ಕುರ್ದಿಸ್ಥಾನ ಈ ರಾಜ್ಯಗಳ ರೈಲ್ವೇ ಪ್ರತಿನಿಧಿಗಳು ಕೈಬರ್‌ಪಾಸಾ ಎಂಬಲ್ಲಿ ಒಟ್ಟುಕೂಡಿ, ಇಂಗ್ಲೆಂಡ್ ಟರ್ಕಿ, ಇರಾಕ್ ಲೈನನ್ನು ತೆರೆಯುವ ಬಗ್ಗೆ ಚರ್ಚಿಸುವರು. ಸಿಸ್ಸಿಟೈನ್ ಮತ್ತು ಮಾಸೂಲ ಇವುಗಳ ನಡುವೆ ಮೋಟಾರ ಜೋಡಣೆಯಿರುವುದಂತೆ.

—ಗನಿ ಕೆಲಸಗಾರರ ಸಹಾಯಾರ್ಥವಾಗಿ ತೆರೆಯಲಾದ ಪ್ರಿನ್ಸ್ ಆಫ್ ವೇಲ್ಸ್ ಫಂಡು ಮಾರ್ಚ ಮೂವತ್ತನೇ ತಾರೀಕಿಗೆ ಮುಚ್ಚಲ್ಪಟ್ಟಿತು. ಸರಕಾರದ ವಂತಿಗೆ ಕೂಡಿ ಇದರಲ್ಲಿ ೬೭೦,೦೦೦ ಪವನುಗಳು ಜಮೆಯಾಗಿರುತ್ತವೆ.

—[illegible] ಇಂಗ್ಲೆಂಡಿನ [illegible] ಆದಾಯವು [illegible] ಕಡಿಮೆಯಾಗಿದೆ. [illegible] ತಿಂದು ಬರುತ್ತದೆ. ೧೯೨೮ನೇ ಇಸವಿಗಿಂತ [illegible] ಮತ್ತು [illegible] ಯಗಳು [illegible] ಅವರಿಗೆ [illegible] ಅಪಾಯವೇ ಉಂಟಾಗುತ್ತಲಿದೆ.

—ಟಾಸ್ಮೇನಿಯದಲ್ಲಿ ಅತಿಶೀಘ್ರವಾದ ನೆರೆಬಂದು ಸೇತುವೆಗಳು ಹಾಳು ಮಾಡಲ್ಪಟ್ಟಿವೆ; ರಸ್ತೆ, ರೈಲ್ವೇ ಮಾರ್ಗಗಳು ಹಾಳಾಗಿರುತ್ತವೆ. ಸುಮಾರು ಹದಿನಾಲ್ಕು ಮಂದಿ ಮುಳುಗಿ ಸತ್ತಿರುವರೆಂದು ತಿಳಿದು ಬರುತ್ತದೆ. ಒಂದು ಮೋಟಾರುಕಾರು ಮಾರ್ಗದಲ್ಲಿ ಹೋಗುತ್ತಿರುವಾಗ ಆಕಸ್ಮಾತ್ ನೆರೆಯ ನೀರು ಬಂದು ಮೋಟಾರುಕಾರು ಮುಳುಗಿ ಅದರಲ್ಲಿದ್ದ ಐವರು ಸತ್ತುಹೋದರು.

—ಕಳೆದ ವರುಷ ಬ್ರಿಟಿಷ ರೈಲುವೇಗಳ [illegible] ವರೂ, ಆದಾಯವು ಮಾತ್ರ ಹಿಂದಿನ ವರುಷದ ಆದಾಯಕ್ಕಿಂತ ೩,೯೦೦,೦೦೦ ಪವನು ಕಡಿಮೆಯಾಗಿದ್ದಿತು. ಪ್ರಯಾಣಿಕರಿಂದ ಆದ ಆದಾಯದಲ್ಲಿ ೧,೩೦೦,೦೦೦ ಕಡಿಮೆಯಾಯಿತು. ಸಾಮಾನುಗಳಿಂದ ೭,೧೦೦,೦೦೦ ಪವನು ಕಡಿಮೆಯಾಯಿತು. ಆದರೆ ಕಳೆದ ವರುಷ ರೈಲುಗಳಲ್ಲಿ ಪ್ರಯಾಣಮಾಡಿದವರ ಸಂಖ್ಯೆಯು ೧೯೨೭ನೇ ಇಸವಿಗಿಂತ ೨೨ ಮಿಲಿಯ ಹೆಚ್ಚಾಗಿರುತ್ತದೆ.

—ಮೆಡಿಟರೇನಿಯನಿನಲ್ಲಿ ಚೆನ್ನಾಗಿ ಮಳೆಗಾಳಿ ಇರುವದರಿಂದ ಹಡಗು ಚಲಾವಣೆಯು ನಿಲ್ಲಿಸಲ್ಪಟ್ಟಿರುತ್ತದೆ.

—[illegible] ವಿದೇಶಿ ವಸ್ತ್ರ ಬಹಿಷ್ಕಾರದ ಬಗ್ಗೆ [illegible] ವಿದೇಶಿ ವಸ್ತ್ರಗಳ ಮೇಲೆ [illegible] ಸುಂಕವನ್ನು ವಿಧಿಸಿರುತ್ತದೆ. ಈ ಸಂಬಂಧವಾಗಿ [illegible] ವಿದ್ಯಾರ್ಥಿಗಳು ಸಭೆ ಕೂಡಿ [illegible] ಎಂದೆಂದಿಗೂ ವಿದೇಶಿ ವಸ್ತ್ರಗಳನ್ನು ಮುಟ್ಟಲಾಗದೆಂದು ಪ್ರತಿಜ್ಞೆಯನ್ನು ಕೈಕೊಂಡರು.

—[illegible] ಕಳೆದ ವರುಷ [illegible] ಜನ [illegible] ಪರದೇಶಗಳಿಗೆ [illegible] ವಂತೆ.

—[illegible] ದೇಶದ ಒಬ್ಬ [illegible] ತನ್ನ [illegible] ವಿಷಧಿಯಿಂದ [illegible] ಜೀವವನ್ನು [illegible] ಮಾಡುವ ವಿಧಾನವನ್ನು [illegible] ಆತನು [illegible] ಪ್ರಾಣಿಗಳ ಮೇಲೆ ಈ ವಿಷಧಿಯನ್ನು ಪ್ರಯೋಗಿಸುತ್ತಿದ್ದನು. ಸೋವಿಯಟ್ ಸರಕಾರದವರು ಆತನಿಗೊಂದು ಪ್ರಯೋಗವನ್ನು ಕೊಟ್ಟರು. ಈ ದೇಹದ ಪ್ರಾಣವು [illegible] ಕಾಲದ [illegible] ಹೋಗಿತ್ತು. ಈ ದೇಹದ ಮೇಲೆ ಆತನು ತನ್ನ ವಿಷಧಿಯನ್ನು ಪ್ರಯೋಗಿಸಿದನು. ಕೆಲವು ಕಾಲಗಳ [illegible] ಬಳಿಕ ಸ್ವಲ್ಪ ಸ್ವಲ್ಪ ಉಸಿರಾಟ ಪ್ರಾರಂಭವಾಯಿತು. [illegible] ಕಣ್ಣು ತೆರೆದು [illegible] ಶಕ್ತಿಯನ್ನು ಹೊಂದಿತಂತೆ.

—[illegible] ಗಾಳಿಯಲ್ಲಿ ಚಲಿಸುವ ವಿದ್ಯುತ್ [illegible] ಪ್ರಾರಂಭವಾಗುವವು. [illegible] ಪಟ್ಟಣದಿಂದ [illegible] ಈ [illegible] ನಿಲ್ಲಿಸಲ್ಪಡುವವು. [illegible]

—[illegible]

—[illegible]

—[illegible] ವಿದ್ಯಾರ್ಥಿಗಳು [illegible] ಪುರೋಹಿತ [illegible] ಸ್ವಲ್ಪ ಸ್ವಲ್ಪ [illegible] ಉಂಟಾಯಿತು.

—[illegible] ಇಂಗ್ಲಾಂಡಿನ ಪ್ರಸಿದ್ಧ ಕಳ್ಳನೊಬ್ಬನು ಮಾರ್ಗದ ಬದಿಯಲ್ಲಿ ಬಿದ್ದು ಸತ್ತುಹೋದನು. ಆತನು ೮೦ ವರುಷ ಪ್ರಾಯದವನು. ೪೦ ವರುಷಗಳನ್ನು ಆತನು ಕಾರಾಗೃಹದಲ್ಲಿಯೇ ಕಳೆದಿದ್ದನಂತೆ. ೧೯೧೦ನೇ ಇಸವಿಯಲ್ಲಿ ಆತನು ಜೈಲಿನಿಂದ ಬಿಡುಗಡೆ ಹೊಂದಿದನು. ಆದರೆ ೧೦ ದಿನಗಳೊಳಗೆ ಪುನಃ ಜೈಲಿಗೆ ಸೇರಿಸಲ್ಪಟ್ಟನು.

—೮೦ ಅಫಘಾನಿಸ್ಥಾನದವರು ಅಮಾನುಲ್ಲಾನವರನ್ನು ಕೂಡುವ ಸಲುವಾಗಿ ಗಡಿಯನ್ನು ದಾಟಿರುವರೆಂದು ವರ್ತಮಾನವಿದೆ.

—ಮುಂಬಾಯಿಯಿಂದ ಗ್ಲಾಸಗೋ ಪಟ್ಟಣಕ್ಕೆ ಹಡಗಿನಲ್ಲಿ ಬಂದು ಇಳಿದ ಜನರಿಂದ ಗ್ಲಾಸಗೋ ಪಟ್ಟಣದಲ್ಲಿ ಸಿಡುಬು ರೋಗವು ಪ್ರಾರಂಭವಾಗಿರುತ್ತದೆ.

— [illegible] ಆಗಿರುತ್ತದೆ.

— [illegible] ಆರಂಭವಾಗಿರುತ್ತದೆ. ಇನ್ನೂ [illegible] ಆರಂಭವಾಗಿಲ್ಲ. ರೂಪಾಯಿಗೆ ಎಂಟು [illegible].

— ಲಂಡನಿನ ವೆಸ್ಟ್ ಮಿನಿಸ್ಟರ್ ಹಾಸ್ಪಿಟಲಿನಲ್ಲಿ ವಾಸಿಸುತ್ತಿದ್ದ ಒಬ್ಬ ಸೈನ್ಯದ ಅಧಿಕಾರಿಯು ತನ್ನ ಮುಚ್ಚಲ್ಪಟ್ಟ ಕೋಣೆಯಲ್ಲಿ ಕೊಲ್ಲಲ್ಪಟ್ಟಿರುವನು. ಆತನ ತಲೆಯ ಮೇಲೆ ಪಿಸ್ತೂಲಿನ ಪೆಟ್ಟು ಇದ್ದು, ಸಮೀಪದಲ್ಲಿಯೇ ಒಂದು ಪಿಸ್ತೂಲು ಬಿದ್ದುಕೊಂಡಿದ್ದಿತು.

— ಮಾರ್ಚ್ ೩ನೇ ತಾರೀಖಿನಿಂದ ಕಂದಹಾರಿನಿಂದ ಅಮಾನುಲ್ಲಾ ಖಾನರು ಹೊರಡುವಾಗ ಅವರ ಕಡೆ ಇದ್ದ ಸೈನ್ಯದ ಸಂಖ್ಯೆಯು ನಾಲ್ಕು ಸಾವಿರವೆಂದು ತಿಳಿದು ಬರುತ್ತದೆ. ಅವರು ಕೆಲತ್ ಇ-ಗಿಲ್ಜಾ ಮತ್ತು ಗಜನಿಯ ನಡುವಿನಲ್ಲಿರುವ ಶಾಹಜ್ಯು ಎಂಬಲ್ಲಿಗೆ ತಲುಪಿರುವರು. ಹಬೀಬುಲ್ಲನ ಸೈನ್ಯವು ಗಜನಿಗಿಂತ ದೂರಕ್ಕೆ ಮುಂದರಿದು ಬಂದಿಲ್ಲ. ವರ್ಧಕರ ಮೇಲಿನ ಸಿಟ್ಟು ತೀರಿಸುವ ಸಲುವಾಗಿ ಹಬೀಬುಲ್ಲನು ಸ್ವತಃ ಸೇನೆಯನ್ನು ಕೊಂಡೊಯ್ದು ವರ್ಧಕರ ಕೆಲವು ಹಳ್ಳಿಗಳನ್ನು ಸುಟ್ಟು ಹಾಕಿದನು. ದನಕರು ಮೊದಲಾದುವುಗಳನ್ನು ಓಡಿಸಿದನು. ಇದೇ ರೀತಿ ಇತ್ತೀಚೆಗೆ ಅಲಿಖೇಲಿನ ಸಮೀಪ ಹಬೀಬುಲ್ಲನ ಸೇನೆಯನ್ನು ಮುತ್ತಿದ ಶಿನವಾರಿ ಜನರನ್ನು ಆತನು ಹಿಂಸಿಸಿರುವನು. ಅಫಘಾನದ ಜನರಿಂದ ಪರ್ಶಿಯಾ ಅಫಘಾನ ಸರಹದ್ದಿನ ಮೇಲೆ ಆಕ್ರಮಣಗಳಾಗುತ್ತಲಿವೆಯಂತೆ, ಕಾಂಥ ಎಂಬಲ್ಲಿಂದ ೩೦ ಮೈಲು ದೂರದಲ್ಲಿರುವ ಹಳ್ಳಿಗಳನ್ನು ೧೦೦ ಮಂದಿ ಅಫಘಾನರು ಆಕ್ರಮಿಸಿ, ಅಲ್ಲಿಯ ನಿವಾಸಿಗರಲ್ಲಿ ಕೆಲವರನ್ನು ಕೊಂದುಹಾಕಿದರು. ಸರಕಾರದವರು ಬೇಕಾದ ಉಪಾಯಗಳನ್ನು ಕೈಕೊಳ್ಳುತ್ತಿರುವರು.

ಒಳದೇಶ ವರ್ತಮಾನ.

— ಮುಂಬಾಯಿಯಲ್ಲಿ ೪೫ ವರುಷ ಪ್ರಾಯದ ಪಾರ್ಸಿಯೊಬ್ಬನು ಎರಡು ಮೂರು ತಿಂಗಳುಗಳ ಹಿಂದೆ ೭೫ ವರುಷ ಪ್ರಾಯದ ತನ್ನ ತಾಯಿಯನ್ನು ಕೊಂದ ತಪ್ಪಿಗಾಗಿ ಫಾಶಿಕಂಬಕ್ಕೆ ಗುರಿಮಾಡಲ್ಪಟ್ಟಿರುವನು.

— ಡಾ। ಆಲಮರವರು ಲಾಹೋರಿನ ಹೊರಗಡೆ ಮೋಟಾರುಕಾರಿನಲ್ಲಿ ಕುಳಿತು ಹೋಗುತ್ತಿರುವಾಗ ಆಕಸ್ಮಾತ್ ಮೋಟಾರುಕಾರು ತಲೆಕೆಳಗಾಗಿ ಅವಚಿಬಿದ್ದು ಒಳಗಿದ್ದವರೆಲ್ಲರೂ ಮಾರ್ಗದಲ್ಲಿ ಸ್ಮೃತಿತಪ್ಪಿ ಬಿದ್ದಿದ್ದರು. ಪಥಿಕರೊಬ್ಬರ ಸಹಾಯದಿಂದ ಅವರು ಎಬ್ಬಿಸಲ್ಪಟ್ಟರು. ಅವರೊಂದಿಗಿದ್ದ ಅವರ ವಿದ್ಯಾಬೋಧಕನು ಮೃತಪಟ್ಟನು. ಡಾ। ಆಲಮರವರ ಪತ್ನಿಯವರ ಕೈ ತುಂಡಾಗಿದ್ದಿತು. ಮುಖದ ಎಡಯ ಎಲುಬುಗಳೂ ತುಂಡಾಗಿದ್ದುವು.

— ಮೀರಠಿನ ಜೈಲಿನಿಂದ ಕಾಬೂಲಸಿಂಗ ಹೆಸರಿನ ಕೈದಿಯೊಬ್ಬನು ತಪ್ಪಿಸಿಕೊಂಡು ಹೋದುದರಿಂದ ಉಳಿದ ಕೈದಿಗಳ ವಿಚಾರಣೆಯು ಸದ್ಯಕ್ಕೆ ನಿಲ್ಲಿಸಲ್ಪಟ್ಟಿತು. ತಪ್ಪಿಸಿಕೊಂಡು ಹೋದ ಕೈದಿಯ ಶೋಧನಾರ್ಥವಾಗಿ ಹೆಚ್ಚು ಹೆಚ್ಚು ಪೋಲೀಸರು ನಿಯಮಿಸಲ್ಪಟ್ಟಿರುವರು. ಕಾಬೂಲನು ಜೈಲಿನಲ್ಲಿ ಬಂಧಿಸಲ್ಪಟ್ಟವನಾಗಿ ಜೈಲಿನ ಹೊಲದಲ್ಲಿ ಇತರ ಕೈದಿಗಳಂತೆಯೇ ಕೆಲಸಮಾಡಲು ಹೋಗುತ್ತಿದ್ದನು. ಆದರೆ ಮೊನ್ನೆಯ ದಿನ ಅಕಸ್ಮಾತ್ ಕಾವಲಿನವರ ಕಣ್ಣು ತಪ್ಪಿಸಿ ಆತನು ಪಲಾಯನ ಮಾಡಿದನು. ಆತನು ಇದುವರೆಗೆ ಹಿಡಿಯಲ್ಪಟ್ಟಿಲ್ಲ.

— ಜೂನ್ ೧ನೇ ತಾರೀಖಿನಿಂದ ಮೈಸೂರು ಪ್ರಾಂತ್ಯದ ಚಿಕ್ಕನಾಯಕನ ಹಳ್ಳಿ, ಬೇಲೂರು ಮೊದಲಾದ ಕೆಲವು ಸ್ಥಳಗಳಲ್ಲಿರುವ ಬೆಂಚ್ ಕೋರ್ಟುಗಳನ್ನು ತೆಗೆದು ಹಾಕುವುದಾಗಿ ಸರಕಾರದವರು ನೋಟೀಸು ಕೊಟ್ಟಿರುವರು.

— 'ರಂಗೀಲಾ ರಸೂಲ್' ಎಂಬ ಪುಸ್ತಕವನ್ನು ಪ್ರಕಟಿಸಿದ ಮಹಾಶಾ ರಾಜಪಾಲರೆಂಬವರು ಒಮ್ಮೆ ಲಾಹೋರಿನಲ್ಲಿ ಮುಸಲ್ಮಾನರಿಂದ ತಿವಿಯಲ್ಪಟ್ಟಿದ್ದರು. ಪುನಃ ಅವರು ಕಳೆದ ಶನಿವಾರ ದಿನ ಮುಸಲ್ಮಾನರಿಂದ ತಿವಿಯಲ್ಪಟ್ಟು ಕೊಲ್ಲಲ್ಪಟ್ಟರು. ಒಬ್ಬ ಮುಸಲ್ಮಾನ ಯುವಕನು ಕೈದುಮಾಡಲ್ಪಟ್ಟಿರುವನು.

— ಅಮೃತಸರಿನಲ್ಲಿ ಒಂದು ರೈಲುವೇ ಇಂಜನು ಒಂದು ಗಾಡಿಗೆ ಢಿಕ್ಕಿ ಹೊಡೆದು ಇಬ್ಬರು ಹೆಂಗಸರು ಸತ್ತು ಹೋದರು. ಒಬ್ಬ ಮನುಷ್ಯನಿಗೂ, ಒಬ್ಬ ಹುಡುಗನಿಗೂ ಪೆಟ್ಟಾಯಿತು. ರೈಲುಗಾಡಿಯು ರಾಜರಸ್ತೆಯನ್ನು ದಾಟುಹೋಗುವಲ್ಲಿ ಗಾಡಿಯೊಳಗೆ ಕುಳಿತು ಈ ಮಂದಿಗಳು ಹೋಗುತ್ತಿರುವಾಗ ಗೇಟುಕಾಯುವವನು ಹೋಗಲಾಗದೆಂದರೂ, ಇವರು ಗಾಡಿಯನ್ನು ಮುಂದರಿಸಿದರು. ರೈಲು ಸಿಳ್ಳುಹಾಕುತ್ತ ಬಂದು ಬಿಟ್ಟಿತು. ಗಾಡಿಯವನು ಕುದುರೆ ನಿಲ್ಲಿಸಲು ಪ್ರಯತ್ನಿಸಿದಾಗ್ಯೂ, ಕುದುರೆಯು ಮುಂದರಿಸಿ ಹೋದುದರಿಂದ ಗಾಡಿಯು ರೈಲಿನಡಿಯಲ್ಲಿ ಬಿದ್ದಿತು. ಹೆಂಗಸರ ಮೃತದೇಹಗಳು ರೈಲುವೇ ಇಂಜನಿನಿಂದ ೩೫ ಅಡಿ ದೂರಕ್ಕೆ ಬಿಸಾಡಲ್ಪಟ್ಟವು.

— ಮಹಾತ್ಮಾಜಿಯವರು ಆಂಧ್ರ ದೇಶವನ್ನು ಸಂಚರಿಸುವಾಗ ಅವರಿಗೊಂದು ಮಾನಪತ್ರವನ್ನು ಸಮರ್ಪಿಸಬೇಕೆಂದೂ, ಆ ಬಗ್ಗೆ ರೂ. ೩೫ನ್ನು ಮುನಿಸಿಪಾಲಿಟಿಯಿಂದ ಖರ್ಚು ಮಾಡಬೇಕೆಂದೂ, ಗುಂಟೂರು ಮುನ್ಸಿಪಾಲಿಟಿಯ ಸದಸ್ಯರು ಸಭೆಕೂಡಿ ನಿಶ್ಚಯಿಸಿರುವರು.

— ಬನಾರಸಿನ ಹತ್ತಿಯ ಗಿರಣಿಯೊಂದರಲ್ಲಿ ಅಧಿಕಾರಿಗಳ ದುರಾಚಾರದ ನಿಮಿತ್ತವಾಗಿ ನೂರು ಮಂದಿ ನೇಕಾರರು ಒಟ್ಟಾಗಿ ಮುಷ್ಕರವನ್ನು ಆಚರಿಸಿದರು. ಈ ಕಾರಣದಿಂದ ಗಿರಣಿಯ ಇತರ ಇಲಾಖೆಗಳನ್ನು ಮುಚ್ಚಲೇ ಬೇಕಾಯಿತು. ತಾವು ಅಸಂಖ್ಯಾತ ಕಷ್ಟಗಳಿಗೆ ಒಳಪಡಿಸಲ್ಪಟ್ಟರೆಂದು ಮುಷ್ಕರಗಾರರ ಅಂಬೋಣ. ಮುಷ್ಕರವು ಇನ್ನೂ ಕೊನೆಗಂಡಿಲ್ಲ.

— ಚನ್ನಪಟ್ಟಣದಲ್ಲಿ ಕೆಲವು ದಿನಗಳ ಹಿಂದೆ ಪ್ರಾರಂಭವಾದ ಹಿಂದೂಮುಸಲ್ಮಾನ ವೈಮನಸ್ಸು ಇನ್ನೂ ಶಾಂತವಾಗಿಲ್ಲ. ಆಗಾಗ ಹಿಂದೂಮುಸಲ್ಮಾನರೊಳಗೆ ಜಗಳವಾಗುತ್ತಲೇ ಇದೆ.

— [illegible] ಜರುಗುತ್ತಲೇ ಇದೆ. ಅವರನ್ನು ಧರ್ಮಾರ್ಥವಾಗಿ ಇನಾಕ್ಯುಲೇಟ್ ಮಾಡಲು ಮುನಿಸಿಪಾಲಿಟಿಯವರು ನಿರ್ಧರಿಸಿರುವರು.

— ಬರ್ಮಾದ ಸಿರಿಯಮ್ ಎಂಬಲ್ಲಿ ಬಿ. ಓ. ಸಿ. ರಿಫೈನರಿಯ ಬಾಯ್ಲರು ಥಟ್ಟನೆ ಒಡೆದುಹೋಗಿ ಅಲ್ಲಿಯೇ ಇದ್ದ ಆರು ಜನ ಕೆಲಸಗಾರರು ಸತ್ತುಹೋದರು. ಕೆಲವರು ಬಾಯ್ಲರಿನ ಚೂರುಗಳ ಕೆಳಗೆ ಹುಗಿಯಲ್ಪಟ್ಟು [illegible] ಜಖಮು ಹೊಂದಿದರು.

— ಅಹಮದಾಬಾದದಿಂದ ಮಹಾತ್ಮಾಜಿಯವರು ಮುಂಬಾಯಿಗೆ ಬಂದೊಡನೆ ಅಲ್ಲಿಯ ಕಾಂಗ್ರೆಸ್ ಧುರೀಣರು ಅವರನ್ನು ಎದುರುಗೊಂಡರು. ಶುಕ್ರವಾರ ದಿನ ಮಧ್ಯಾಹ್ನವೇ ಅವರು ಖಾದಿಬಜಾರನ್ನೂ, ಒಂದು ಖಾದಿ ವಸ್ತ್ರಪ್ರದರ್ಶನಾಲಯವನ್ನೂ ತೆರೆದರು. [illegible] ಮೂಲಕ ವಿದೇಶಿ ವಸ್ತ್ರಬಹಿಷ್ಕಾರವನ್ನು ಸಾಂಗಗೊಳಿಸಬೇಕೆಂದು ಅವರು ಹಿಂದೀಯಲ್ಲಿ ಚಿಕ್ಕ ಭಾಷಣವನ್ನು ಮಾಡಿದರು. ವಿದೇಶಿ ವಸ್ತ್ರ ಬಹಿಷ್ಕಾರವು ಥಟ್ಟನೆ ಸಾಧ್ಯವಾಗಲಾರದು. ಏಕೆಂದರೆ ನಾವು ಅವರ ಪುಸ್ತಕಗಳನ್ನೂ, ಔಷಧಿಗಳನ್ನೂ ಉಪಯೋಗಿಸದೆ ಉಪಾಯವಿಲ್ಲ. ಆದರೆ ವಸ್ತ್ರಬಹಿಷ್ಕಾರವನ್ನು ವಿಜಯಯುಕ್ತವನ್ನಾಗಿ ಮಾಡಬೇಕೆಂದು ಒತ್ತಿ ಹೇಳಿದರು.

— ಕಲಕತ್ತೆಯಲ್ಲಿ ರಾಷ್ಟ್ರೀಯ ವಾರವು ಚೆನ್ನಾಗಿ ಆಚರಿಸಲ್ಪಟ್ಟಿತು. ಮೊದಲಾಗಿ ಶ್ರೀ। ಸುಭಾಷಚಂದ್ರ ಬೋಸರು ಮತ್ತು ಇತರ ಧುರೀಣರು ಬೇರೆಬೇರೆ ಕಾಂಗ್ರೆಸು ಆಫೀಸುಗಳಲ್ಲಿನ ರಾಷ್ಟ್ರೀಯ ಧ್ವಜಗಳನ್ನು ಏರಿಸಿದರು. ವಾರದ ಪ್ರತಿದಿನವೂ ಸಭೆ ನಡೆದು ಕಾಂಗ್ರೆಸ್ ಮೆಂಬರರನ್ನು ಕೂಡಿಸಲಾಯಿತು. ಪ್ರತಿಯೊಂದು ಸಭೆಯು ಮುಗಿದೊಡನೆ ವಿದೇಶಿ ವಸ್ತ್ರಗಳ ಹೋಳಿಗಳು ನಡೆದಿದ್ದುವು.

— ಬರ್ಮಾದ ಮಾಂಡ್ಲೇ ಪಟ್ಟಣದಲ್ಲಿ ಭಯಂಕರವಾದ ಅಗ್ನಿಯ ಅನಾಹುತದಿಂದ ಸುಮಾರು ೩೦೦ ಮನೆಗಳು ಸುಟ್ಟು ಭಸ್ಮೀಭೂತವಾದವು. ಬೆಂಕಿಯು ಸುಮಾರು ೩॥ ತಾಸಿನ ಸಮಯ ಉರಿಯುತ್ತಲೇ ಇದ್ದಿತು.

— ಸೂರತಿನಲ್ಲಿ ಕಳೆದ ಒಂದೆರಡು ದಿನಗಳ ಹಿಂದೆ ವಿಪರೀತವಾದ ಮಳೆಬಂದುದು ಮಾತ್ರವಲ್ಲದೆ ಮಂಜಿನ ಚೂರುಗಳು ಮಳೆಯೊಂದಿಗೆ ಬಿದ್ದುದರಿಂದ ಬೆಳೆಗೆ ಬಹಳ ನಷ್ಟವುಂಟಾಗಿರುತ್ತದೆ.

— ಲಖ್ನೋ ಮುನಿಸಿಪಾಲಿಟಿಯವರು ಖಾದಿಯ ಮೇಲೆ ಇರುವ ಸುಂಕವನ್ನು ತೆಗೆದು ಹಾಕಿರುವರು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಇದಕ್ಕಾಗಿ ಅವರನ್ನು ಕೇಳಿಕೊಂಡಿದ್ದರಂತೆ.

— ಲಾಹೋರಿನ ಇಂಪೀರಿಯಲ್ ಹೋಟೇಲಿನ ಎರಡನೇ ಮಾಳಿಗೆಯ ಕೋಣೆಯೊಂದು [illegible] ಮುರಿದು ಬಿದ್ದು ಇಬ್ಬರು ಸೇವಕರು ಸತ್ತುಹೋದರು.

— ಪ್ರೊಫೆಸರ ದಿವಾಕರರವರು, ತಾನು ಕುತುಬ್ ಮಿನಾರಿನಿಂದ ಕೆಳಕ್ಕೆ ಹಾರುವೆನೆಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅವರು ಹಾಗೆ ಮಾಡಲಾಗದೆಂದು ಸರಕಾರದವರು ನಿಷೇಧಿಸಿರುತ್ತಾರೆ.

— ಕರಾಚಿಯ ಹೊಸ ನ್ಯಾಯಸ್ಥಾನದ ಕಟ್ಟಡಗಳು ಕಳೆದ ಗುರುವಾರ ತೆರೆಯಲ್ಪಟ್ಟವು. ಈ ಕಟ್ಟಡಗಳಿಗೆ ೩೩ ಲಕ್ಷ ರೂಪಾಯಿ ಖರ್ಚಾಗಿದ್ದಿತು.

— ಬನಾರಸಿನ ಗಿರಣಿಗಳಲ್ಲಿ ಪ್ರಾರಂಭವಾದ ಮುಷ್ಕರವು ಕೊನೆಗಂಡಿರುತ್ತದೆ. ಅಧಿಕಾರಿಗಳೊಳಗೂ, ಕೆಲಸಗಾರರೊಳಗೂ ರಾಜಿಯಾಗಿ ಈಗ ಮೊದಲಿನಂತೆಯೇ ಕೆಲಸವು ನಡೆಯುತ್ತದೆ.

— ಜೈಲಿನಿಂದ ಬಿಡುಗಡೆ ಹೊಂದಿದ ನೇಪಾಳ ಯುವಕನಾದ ಖರಗಬಹದ್ದೂರ ಸಿಂಗನಿಗೆ ಒಳ್ಳೇ ಸ್ವಾಗತವು ಕಲಕತ್ತೆಯಲ್ಲಿ ಕೊಡಲ್ಪಟ್ಟಿತು. ಒಬ್ಬ ಹೆಂಗಸಿನಿಂದ ಆತನಿಗೊಂದು ಸುವರ್ಣಪದಕವೂ, ಮಾನಪತ್ರವೂ ಸಮರ್ಪಿಸಲಾದುವು.

— ಕಲಕತ್ತೆಯ 'ಅಜದ್' ಎಂಬ ಹೆಸರಿನ ಮುಸಲ್ಮಾನ ವಾರಪತ್ರಿಕೆಯ [illegible] ತಾರೀಖು ೧೩ನೇ ಸಂಚಿಕೆಯಲ್ಲಿ, 'ಬಂಗಾಳದ ಮುಸಲ್ಮಾನರೂ, ಪ್ರಾಥಮಿಕ ವಿದ್ಯಾಭ್ಯಾಸವೂ', ಎಂಬ ಲೇಖನವನ್ನು ಬರೆದುದರ ಸಲುವಾಗಿ, ಪೋಲೀಸರು ಪತ್ರಿಕೆಯ ಕಾರ್ಯಾಲಯವನ್ನೂ, ಸಂಪಾದಕ ಮತ್ತು ಅವರ ಸಹೋದರನ ಮನೆಗಳನ್ನೂ ಶೋಧಿಸಿ ಆ ತಾರೀಖಿನ ಸಂಚಿಕೆಗಳನ್ನು ವಶಪಡಿಸಿ, ಸಂಪಾದಕರನ್ನು ಕೈದು ಮಾಡಿದರು. ಜಾಮೀನಿನ ಮೇಲೆ ಅವರು ಬಿಡಲ್ಪಟ್ಟರು.

— ಮುಂಬಾಯಿ ಕಾರ್ಪೊರೇಶನಿನವರು ಮುನಿಸಿಪಾಲಿಟಿ ಶಾಲೆಗಳಲ್ಲಿ ಹುಡುಗರು ನೀರು ಕುಡಿಯಲು ಎಲ್ಲಾ ಜಾತಿಯವರಿಗೂ ಸಾಮಾನ್ಯವಾದ ಪಾತ್ರವನ್ನೇ ಉಪಯೋಗಿಸಬೇಕು ಎಂದು ಶಾಲೆಗಳವರಿಗೆ [illegible] ನಿಶ್ಚಯಿಸಿದರು.

— ಅಯಿರ್ಲ್ಯಾಂಡಿನ ಕೀರ್ತಿಪಟ್ಟ ರಿಪಬ್ಲಿಕನ್ ಲೀಡರರಾದ ಡಿ. ವೆಲೇರಾರವರು ಸದ್ಯದಲ್ಲಿಯೇ ಹಿಂದೂಸ್ಥಾನವನ್ನು ಸಂದರ್ಶಿಸುವರೆಂಬ ವಾರ್ತೆಯಿದೆ.

— ಮದರಾಸಿನ ಮೌಂಟ್‌ರೋಡಿಗೆ ಹತ್ತಿರದ ಉದ್ಯಾನಗೃಹದ ಸಮೀಪ ಒಂದು ಮನೆಯಲ್ಲಿ ಮಿಸೆಸ್ ನೋರಿಸ್ ಎಂಬ ಹೆಸರಿನ, ಗಂಡನಿಂದ ತ್ಯಜಿಸಲ್ಪಟ್ಟ ಆಂಗ್ಲೋ ಇಂಡಿಯನ ಹೆಂಗಸೊಬ್ಬಳು ಜಗನ್ನಾಥನ್ನಾಕನೆಂಬವನೊಂದಿಗೆ ವಾಸಿಸುತ್ತಿದ್ದಳು. ಒಂದು ದಿನ ಪ್ರಾತಃಕಾಲ ಅವರ ಸೇವಕಿಯು ಹೋಗಿ ಮನೆ ಬಾಗಿಲು ತೆರೆಯುವಾಗ ಅವರಿಬ್ಬರೂ, ಘೋರವಾದ ಗಾಯಗಳಿಂದ ಕೂಡಿದ್ದು ರಕ್ತದಿಂದ ತೊಯ್ದು ಸತ್ತು ಬಿದ್ದಿದ್ದರು. ಪೋಲೀಸರು ಈ ಕುರಿತಾಗಿ ತನಿಖೆ ನಡೆಸುತ್ತಿರುವರು.

— ಹೈದರಾಬಾದ ನಿಜಾಮರು ಒಂಭತ್ತು ದಿನಗಳ ಪರಿಯಂತರ ಮೈಸೂರಿನಲ್ಲಿ ಉಳಕೊಂಡು ಆನಂದವನ್ನು ಅನುಭೋಗಿಸಿ ಹೈದರಾಬಾದಿಗೆ ಹಿಂತೆರಳಿದರು. ಮೈಸೂರಿನ ಧಾರ್ಮಿಕ ಸಂಸ್ಥೆಗಳ ಬಗ್ಗೆ ವಿನಿಯೋಗಿಸಲ್ಪಡಲು ಅವರು ಹತ್ತುಸಾವಿರ ರೂಪಾಯಿಗಳನ್ನು ದಾನವಾಗಿ ಇತ್ತಿರುವರಂತೆ. ಈ ಹಣವನ್ನು ಜಾತಿಭೇದವಿಲ್ಲದೆ ವಿನಿಯೋಗಿಸುವರು ಇದಕ್ಕಾಗಿ ದಿವಾನರಾದ ಮಿ। ಮಿರ್ಜಾ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯು ನೇಮಿಸಲ್ಪಡುವದು.

— ಮೊದಲನೆಯ ಟಪ್ಪಾಲಿನ ವಿಮಾನದಲ್ಲಿ ಕಳುಹಿಸಲ್ಪಟ್ಟ ಟಪ್ಪಾಲು ಕಲಕತ್ತೆಯಲ್ಲಿ ಬುಧವಾರ ದಿನ ಬಟವಾಡೆ ಮಾಡಲ್ಪಟ್ಟಿತು. ಕಲಕತ್ತೆಯ ಟಪ್ಪಾಲು [illegible] ರಾತಲು ಭಾರವಾಗಿದ್ದಿತು. ಅದರಲ್ಲಿ [illegible], ರಿಜಿಸ್ಟ್ರಿ ಮಾಡದ, [illegible] ರಿಜಿಸ್ಟ್ರಿಯಾದ ಕಾಗದಗಳಿದ್ದುವು. ಹದಿನೆಂಟು ಚೀಲಗಳಿದ್ದುವು. ಲಂಡನಿನಲ್ಲಿ ಟಪ್ಪಾಲಿಗೆ ಹಾಕಿದ ಹದಿನೊಂದೇ ದಿನಗಳಲ್ಲಿ ಟಪ್ಪಾಲು ಕಲಕತ್ತೆಗೆ ಬಂದಿತು. ಇನ್ನು ಮುಂದೆ ಎಂಟೇ ದಿನಗಳಲ್ಲಿ ಟಪ್ಪಾಲು ಲಂಡನಿನಿಂದ ಕಲಕತ್ತೆಗೆ ತರಲ್ಪಡುವದಂತೆ.

— ಮಹಾತ್ಮಾಜಿಯವರು ಆಂಧ್ರದೇಶದ ಅಗ್ನೇಯ್ಯಪೇಟೆಯನ್ನು ಸಂದರ್ಶಿಸಿದರು. ಅಲ್ಲಿಂದ ಸುತ್ತುಮುತ್ತಲಿನ ಹಳ್ಳಿಗಳನ್ನು ಸಂದರ್ಶಿಸಿದರು.

— ಕಲಕತ್ತೆಯ ಸಮೀಪ ಗರಪ್ಪಾ ಎಂಬಲ್ಲಿ ಬೆಂಕಿಯ ಅನಾಹುತದಿಂದ ಸಾವಿರಾರು ಕೂಲಿಗಳ ಮನೆಗಳು ಸುಟ್ಟುಹೋಗಿರುತ್ತವೆ. ಉಳಕೊಳ್ಳಲು ಅವರಿಗೆ ಗುಡಿಸಲುಗಳಿರುವುದಿಲ್ಲ. ಒಬ್ಬ ಮುದುಕಿಯು ಸತ್ತುಹೋದಳು. ಹಾಜಿನಗರದ ನೂಲಿನ ಗಿರಣಿ ಮತ್ತು ಕಾಗದದ ಗಿರಣಿಗಳು ಅಪಾಯದಿಂದ ಉಳಿದುದು ಬಹು ಆಶ್ಚರ್ಯಕರ. ಗಾಳಿಯು ಜೋರಾಗಿ ಬೀಸುತ್ತಿದ್ದುದರಿಂದ ನೂರಾರು ಮನೆಗಳ ಮಾಡುಗಳು ಒಮ್ಮೆಯೇ ಉರಿದುದರಿಂದ ಕೂಲಿಗಳು ತಮ್ಮ ಪ್ರಾಣಗಳನ್ನುಳಿಸಿಕೊಂಡುದೇ ದೊಡ್ಡದೆನ್ನಬೇಕಾಗುವದು.

— ಮುಂಬಾಯಿಯ ಅಪ್ಪೊಲೊ ಬಂದರದಲ್ಲಿ [illegible]ನೊಬ್ಬನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ತಯಾರಿಯಲ್ಲಿದ್ದಾಗ ಒಬ್ಬ ಪೋಲೀಸ ಕಾನ್ಸ್‌ಟೇಬಲನಿಂದ ಬದುಕಿಸಲ್ಪಟ್ಟನು. ಆ ಸಮಯದಲ್ಲಿ ಆತನು ಸ್ಮೃತಿಯುಳ್ಳವನಿರಲಿಲ್ಲ. ಸ್ಮೃತಿಗೆ ಬಂದೊಡನೆ, 'ತಾನು ತನ್ನ ಹೆಂಡತಿ ಮತ್ತು ಮಗಳನ್ನು ಕೊಂದು ತಾನೂ ತನ್ನ ಆತ್ಮಹತ್ಯವನ್ನು ಮಾಡುವದರಲ್ಲಿದ್ದನೆಂದು' ವಿವರಿಸಿ ಹೇಳಿದನು. ಪೋಲೀಸರು ಶೋಧನೆ ಮಾಡಿ ವಧಿಸಲ್ಪಟ್ಟ ತಾಯಿ ಮತ್ತು ಮಗಳ ಶರೀರಗಳನ್ನು ಹುಡುಕಿ ತೆಗೆದರು. ಅವರಿಗೆ ಕುತ್ತಿಗೆಯಲ್ಲಿ ಗಾಯಗಳಿದ್ದುವು. ತನ್ನೊಬ್ಬಳು ಮಗಳು ಆಸ್ಪತ್ರೆಯಲ್ಲಿ ಇದ್ದಳು, ಅವಳ ಚಿಕಿತ್ಸೆಯು ಚೆನ್ನಾಗಿರದೆ ಅವಳು ಸತ್ತುಹೋದಳು. ಇದಕ್ಕಾಗಿ ಪಶ್ಚಾತ್ತಾಪದಿಂದ ತಾನು ತನ್ನ ಹೆಂಡತಿಯ ಅಭಿಪ್ರಾಯಕ್ಕನುಗುಣವಾಗಿ ಹೆಂಡತಿಯನ್ನೂ, ಪುತ್ರಿಯನ್ನೂ ಕೊಂದು ಆತ್ಮಹತ್ಯವನ್ನು ಮಾಡಲು ಉದ್ಯೋಗಿಸಿದೆನು, ಎಂದು ಹೇಳಿದನು.

— ರಾಜಪಾಲರ ಹತ್ಯೆಯ ಸಂಬಂಧವಾಗಿ ಪೋಲೀಸರು ಫಕ್ರು ಎಂಬ [illegible]ನನ್ನು ಕೈದುಮಾಡಿರುವರು. ಫಕ್ರುವು ರಾಜಪಾಲರ ನಿವಾಸದ ಸಮೀಪದಲ್ಲೇ ವಾಸಿಸುತ್ತಿದ್ದನು.

— ಕಳೆದ ಸೋಮವಾರ ರಾತ್ರಿ ರಂಗೂನಿನ ಎರಡು ಕಡೆಗಳಲ್ಲಿ ಬೆಂಕಿಯುರಿಯಿತು. ಮೊದಲನೆಯ ಬೆಂಕಿಯಿಂದ ಎರಡೆರಡು ಮಾಳಿಗೆಗಳ ಮನೆ ಕಟ್ಟಡಗಳು ಪೂರ್ಣವಾಗಿ ಸುಟ್ಟುಹೋದುವು. ನಿವಾಸಿಗರು ಪ್ರಾಣಗಳನ್ನು ಉಳಿಸಿಕೊಂಡರೂ, ಸಾಮಾನುಗಳನ್ನು ಉಳಿಸಲಾಗಲಿಲ್ಲ.

— [illegible] ಮಹಾರಾಣಿಯವರ ಆಭರಣ ಸಂಬಂಧದಲ್ಲಿ ಕಳ್ಳರಿಗೆ ಕಠಿಣತರ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ. ಆ ಮಂದಿಗಳಲ್ಲಿ ಒಬ್ಬನಿಗೆ ಏಳು ವರುಷಗಳ ಕಠಿಣಸಜೆ, ಇಬ್ಬರಿಗೆ ಐದೈದು ವರುಷಗಳ ಸಜೆ, ಉಳಿದವರಿಗೆ ಮೂರು ಮೂರು ವರುಷಗಳ ಸಜೆ. ಕಳವಾಗಿ ಹೋದ ಆಭರಣಗಳ ಮೌಲ್ಯವು ನಾಲ್ಕು ಲಕ್ಷ ರೂಪಾಯಿಗಳಾಗಿದ್ದುವಂತೆ.

— ಇಂಗ್ಲಾಂಡಿನಿಂದ ಹೊರಟ ಟಪ್ಪಾಲಿನ ವಿಮಾನವು ಕಳೆದ ಶನಿವಾರ ಕರಾಚಿಗೆ ಬಂದು ತಲುಪಿತು. ನಿರ್ಧರಿಸಲ್ಪಟ್ಟ ಸಮಯಕ್ಕಿಂತ ತಡ ಮಾಡಿತು. [illegible] ಹೆಚ್ಚಿಗೆ ಬೇಕಾಯಿತು. ವಿಮಾನವು ಬಂದು ಇಳಿದ ಮೇಲೆ [illegible]. ಇದನ್ನು ನೋಡುವದಕ್ಕೆ ತುಂಬ ಜನರು ಬಂದು ಕೂಡಿದ್ದರು.

— ಏಸೆಂಬ್ಲಿಯಲ್ಲಿ ತರಲ್ಪಟ್ಟ ಟ್ರೇಡ್ ಡಿಸ್ಪ್ಯೂಟ್ಸ್ ಬಿಲ್ ಎಂಬ ಮಸೂದೆಯು ಮಂಜೂರಾಗಿರುತ್ತದೆ.

— ಹಿಂದೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮದ್ಯಪಾನ ನಿಷೇಧ ಕಮಿಟಿಯ ಸಭೆಯು ಅಹಮದಾಬಾದದ ಸತ್ಯಾಗ್ರಹ ಆಶ್ರಮದಲ್ಲಿ ನಡೆದು ಹಿಂದೂಸ್ಥಾನದಲ್ಲೆಲ್ಲ ಮದ್ಯಪಾನ ನಿಷೇಧದ ಬಗ್ಗೆ ಮಾಡಬೇಕಾದ ಕೆಲಸಗಳ್ಯಾವುವೆಂದು ಚರ್ಚಿಸಲಾಯಿತು.

— ಮುಂಬಾಯಿಯ ಗವರ್ನರರು ಕೊಲ್ಲಾಪುರವನ್ನು ಸಂದರ್ಶಿಸಿದರು. ಅವರ ಪತ್ನಿಯವರು ಅಲ್ಲಿಯ ಒಂದು ಶಾಲೆಯ ವಾಸ್ತುಕಲ್ಲನ್ನು ಹಾಕಿದರು.

— ಲೀಗ್ ಓಫ್ ನೇಶನ್ಸಿಗೆ ಇಂಡಿಯನ್ ಡೆಲಿಗೇಶನಿನ ಧುರೀಣರಾಗಿ ಸರ್. ಮಹಮ್ಮದ್ ಹಬೀಬುಲ್ಲರವರು ಹೋಗಬೇಕೆಂದು ನಂಬಲಾಗಿಯದೆ.

— ಮೈಸೂರಿನ ಗಂಧದ ಎಣ್ಣೆಯ ಕಾರಖಾನೆಯಲ್ಲಿ ವಂಚನೆಯನ್ನು ನಡಿಸಿದ ಶ್ರೀ। ಬಿ. ಸೀತಾರಾಮಾಚಾರರವರು ಸ್ಪೆಶಲ್ ಮೆಜಿಸ್ಟ್ರೇಟರಿಂದ ಕಳೆದ ಗುರುವಾರ ತರಲ್ಪಟ್ಟರು. ೧೯೨೬ನೇ ಇಸವಿಯಿಂದ ಒಟ್ಟು [illegible] ಸಾವಿರ ಪವನುಗಳಷ್ಟು ವಂಚನೆಯಾಗಿರುತ್ತದಂತೆ. ಅವರನ್ನು ಜಾಮೀನಿನ ಮೇಲೆ ಬಿಡಲಿಕ್ಕೆ ಮೆಜಿಸ್ಟ್ರೇಟರು ಒಪ್ಪಲಿಲ್ಲ.

— ಕಳೆದ ಮಾರ್ಚ್ ತಿಂಗಳಲ್ಲಿ ಮದರಾಸಿನಲ್ಲಿ [illegible] ಸಾವಿರ ರೂಪಾಯಿಗಳ ಖಾದಿಯು ವಿಕ್ರಯವಾಯಿತು. ಹಿಂದಿನ ವರುಷದ ಮಾರ್ಚ್ ತಿಂಗಳಲ್ಲಿ ಬರೀ [illegible] ಸಾವಿರ ರೂಪಾಯಿಯ ಖಾದಿಯು ವಿಕ್ರಯವಾಗಿದ್ದಿತು. ಇದೇ ರೀತಿ ಎಲ್ಲ ಕಡೆಗಳಲ್ಲಿಯೂ ಖಾದಿಯ ಮಾರಾಟವು ಏರುವದು.

ದಿಯ್ಯ ಚಟ್ಟು ಮೇಲಣ ಸಾಮಾನುಗಳನ್ನು ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಅರ್ಜಿ ಕೊಟ್ಟವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕ್ಯಾಟಲೋಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಗುಂಡುಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

Famous

Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs	20
Darbar	,,	,,	15
Ananda	,,	,,	12
Manmohan	,,	,,	10
Musk Heena	,,	,,	8
Dilchaman	,,	,,	8
Kasthur Javaji	,,	,,	10
Amber	,,	,,	8
Rose	,,	,,	6
Jasmin	,,	,,	5
Punugu (Civet)			4
Heena			3
A Tin Case containing 300 Assorted Bathis of 12 kinds		,,	6

Packing & Postage Extra.

The State Perfumery Mart,

Bangalore City,

Mysore State.

'ಅಂಬಾ ತಾಯಿತ್'

ನಿಮ್ಮ ಕುಮಾರರನ್ನು ಕಾಡುವ ಧಾರಣಾ ದೋಷದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಬಾಧೆ, ಜ್ವರ, ಕಾಮಾಲೆ ರೋಗವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ಸಂತೋಷವನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೯ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ಧೈರ್ಯವಿದ್ದರೆ, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

ಸಕ್ಕರ್ ಪೋಸ್ಟ್ ಕಡೂರ್ ಡಿಸ್ಟ್ರಿಕ್ಟ್

Batliwala's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜ್ವರದ ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ಪರಿಹಾರಕ, ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆರೆ ೧೪.

ಬಾಟ್ಲಿವಾಲರ ಟಾನಿಕ್ ಪಿಲ್ಸ್ ...—ಅಶಕ್ತತೆ, ... ಎಲ್ಲಾ ತರದ ... ಒಳ್ಳೇ ಔಷಧ ಆರೆ ೧॥.

ಬಾಟ್ಲಿವಾಲರ ... —... ಮತ್ತು ... ಅತ್ಯುತ್ತಮವಾದ ಔಷಧ. ಆರೆ ೧೪

ಬಾಟ್ಲಿವಾಲರ ಕ್ವಿನೈನ ಬಿಲ್ಲೆಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಬಿಲ್ಲೆಗಳು ಇರುತ್ತವೆ.

ಬಾಟ್ಲಿವಾಲರ ... ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೫—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ... ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ಟೆಲಿಗ್ರಾಫ್:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ. Sayani Road, P. O. Cadell ad, Bombay. No. 14.

ಜೆಟ್‌ಪ್ರೋಲಿನ ರಾಜರು ಬರೆಯುವರು.

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಇತರ ಔಷಧಿಗಳಿಗಿಂತ ಅರ್ಕವು ತುಂಬಾ ಪ್ರಯೋಜನಕಾರಿಯಾಗಿ ಉಪಕಾರಿಯಾಗಿದೆ. ಅರ್ಕ, ಲೋಧ್ರ, ಮತ್ತು ಅಮೃತ ಇವುಗಳ ನಿಸ್ಸಂಶಯವಾದ ಪ್ರಯೋಜನಕಾರಿತೆಯಿಂದ ಇಲ್ಲಿನ ಜನರೊಳಗೆ ನಿಮ್ಮ ಔಷಧಿಗಳ ಮೇಲೆ ವಿಶೇಷ ಮತ್ತು ಪೂರ್ಣ ನಂಬಿಗೆಯು ಉಂಟಾಗಿರುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಇರುತ್ತದೆ

ಕೇಸರಿ ಕುಟೀರಮ್.

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್,

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಎಲ್ಲಾ ತರದ ಉತ್ತಮ ತರದ ಗಡಿಯಾರಗಳೂ, ಕ್ಲಾಕುಗಳೂ, ಸ್ಟ್ರಿಂಗುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಸಾಮಾನು, ಪೆಡೆಸ್ಟಲ್ ಲೈಟುಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ಉತ್ತಮ ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಡೆಸ್ಟಲ್ ಲೈಟು, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಖರ್ಚಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಎಸ್.—ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಗೊಡ್ಡೆಯಾದರೂ ಎಲ್ಲಿಯನ್ನು ಕೊಡಿಸಿ ಸ್ವಚ್ಛವಾಗಿರುವುದರಿಂದ ಸರಿಯಾದ ಸಮಯವು ದೊರಕುವುದು.

ದಕ್ಷಿಣ ಕನ್ನಡ.

ಮಂಗಳೂರು — ಇಲ್ಲಿಯ [illegible] ಕಳೆದ ಬುಧವಾರ ಅಂದರೆ ತಾರೀಖು [illegible] ಶ್ರೀ [illegible] ರೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳೆದ ಅಧಿವೇಶನವನ್ನು ಇಲ್ಲಿಯ ಕಾಂಗ್ರೆಸ್ ಕಮಿಟಿಯವರು [illegible] ಆಚರಿಸಿದರು.

ಬೋಳೂರಿನಲ್ಲಿರುವ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಕಳೆದ ಮಾರ್ಚ್ ತಿಂಗಳಲ್ಲಿ ಚಿಕಿತ್ಸೆಗೊಳ್ಳಪಟ್ಟ ೪೧೧ ಹೊಸ ರೋಗಿಗಳಲ್ಲಿ [illegible] ಹಿಂದೂ, ೧೨೫ ಕ್ರಿಶ್ಚನ್ನರೂ ಮತ್ತು ೩೧ ಮುಸ್ಲೀಮರಾಗಿದ್ದರು. ದಿನವೂ ಸರಾಸರಿ ಹಾಜರು ೭೮-೮ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ. ೨೬-೩-'೩೭ರಲ್ಲಿ ಹೆಚ್ಚಾಗಿ ಹಾಜರಾದ ವ್ಯಾಧ್ಯಸ್ತರ ಸಂಖ್ಯೆ ೯೫.

ಮಂಗಳೂರ "ಶ್ರೀರಾಮ ಸೇವಾಸಮಾಜ"ದ ದ್ವಿತೀಯ ವರ್ಷಾವಧಿ ಮಹಾಸಭೆಯು ಇದೇ ಏಪ್ರಿಲ್ ತಿಂಗಳ ತಾ. ೧೩ನೇ ಬುಧವಾರ ಶ್ರೀ ರಾಮನವಮಿಯ ದಿವಸ ಪೂರ್ವಾಹ್ನ ೧೦ ಘಂಟೆಗೆ ಸರಿಯಾಗಿ [illegible] ಕಂಡನಕಟ್ಟೆ [illegible] ಮನೆಯಲ್ಲಿ ಜರಗಲಿಕ್ಕಿರುವುದು. ಆ ಮಹಾಸಭೆಗೆ ಸಮಿತಿಯ ಮೆಂಬರರೂ ಸ್ವಜಾತಿಯ ಮಹನೀಯರೂ ಮತ್ತು ಸಮಿತಿಯ ಹಿತಚಿಂತಕರೂ ದಯಮಾಡಿ ಬಂದು ಮಹಾಸಭೆಯು ಯಶಸ್ವಿಯಾಗಿ ಜರಗುವಂತೆ ಸಹಭಾಗಿಗಳಾಗಬೇಕಾಗಿ ವಿನಂತಿ.

ಇದೇ ಏಪ್ರಿಲ್ ತಿಂಗಳ ತಾ. ೧೮ನೇ ಆದಿತ್ಯವಾರ ಸಾಯಂಕಾಲ ೫ ಘಂಟೆಗೆ ಶ್ರೀ ಜ್ಞಾನೋದಯ ಸಮಾಜದ ಹತ್ತೊಂಭತ್ತನೆಯ ವಾರ್ಷಿಕೋತ್ಸವವೂ, ಕಿಶೋರ್ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವೂ ಜೊತೆಗೆ ಬಜಾರದಲ್ಲಿ ಇರುವ ಮೊಗವೀರ ಶ್ರೀ ಜ್ಞಾನೋದಯ ಮಂದಿರದಲ್ಲಿ ಹ್ಯಾಕೋರ್ಟು ವಕೀಲರಾದ ಶ್ರೀಮಾನ್ ಯಸ್. ಎಸ್. ಸುವರ್, ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಜರಗುವುದು.

ತಾ. ೬-೪-'೩೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩೧ ಮರಣಗಳೂ, ೪೫ ಜನನಗಳೂ ಆಗಿರುವವು.

ಮೂಲ್ಕಿ — ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು, ಇದೇ ತಿಂಗಳ ತಾ. ೨೧ನೇ ಬುಧವಾರ ಅಪರಾಹ್ನ ಘಂಟೆ ೨-೩೦ಕ್ಕೆ ನಡೆಯುವದು. ತಾ. ೨೨ನೇ ದಿವ ಕಂದಕ್ಕಟಗಳು, ಸಾಯಂಕಾಲ ಮಕ್ಕಳಿಗೆ ನಾಟಕ, ಮರುದಿನ ತಾ. ೨೩ಕ್ಕೆ ಮಹಿಳೆಯರಿಗಾಗಿ ನಾಟಕ, ತಾ. ೨೪ನೇ ಬುಧವಾರ ೨-೩೦ರಿಂದ ೪-೩೦ರ ವರೆಗೆ ಮಹಾಸಭೆ, ಅಧ್ಯಕ್ಷರ ಚುನಾವಣೆ, ಸ್ವಾಗತ ಭಾಷಣ, ಶಾಲಾಭಿನಂದನ, ಶಾಲಾ ವರದಿ ಓದೋಣ, ಸಭಿಕರ ಭಾಷಣ, ಇನಾಮು ಹಂಚೋಣ, ಅಧ್ಯಕ್ಷರ ಭಾಷಣ, ಉಪಕಾರಸ್ಮರಣೆ ಇತ್ಯಾದಿಗಳು ನಡೆಯುವವು. ಗಂಟೆ ೮-೩೦ರಿಂದ ೬-೩೦ರ ವರೆಗೆ 'ಭಕ್ತ ಕ್ರೀಷ್ಣ ಕಬೀರದಾಸ್' ಎಂಬ ನಾಟಕವು ಅಭಿನಯಿಸಲ್ಪಡುವುದು.

ಬಂಟವಾಳ — ಈ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾ. ೬ನೇ ಶನಿವಾರ ಮಧ್ಯಾಹ್ನ ಬಂಟವಾಳ ಬೋರ್ಡ್ ಹುಡುಗರ ಶಾಲೆಯಲ್ಲಿ ಜರಗಿತು. ಮೊದಲು ಕಾರ್ಯಕಾರಿ ಮಂಡಳಿಯವರ ಚುನಾವಣೆಯಾಯಿತು.

ಬೇಗನೇ ಸ್ಥಾಪಿಸಲಿಕ್ಕಿರುವ ಮಂಗಳೂರು ತಾಲೂಕ ಉಪಾಧ್ಯಾಯ ಉಪಾಧ್ಯಾಯಿನಿಯರ ಸಂಘಕ್ಕೆ ಈ ಸಂಘದಿಂದ ಪ್ರತಿನಿಧಿಗಳಾಗಿ ರಾ॥ ನ. ವಾಸುದೇವರಾಯರನ್ನೂ, ಶ್ರೀಮತಿ ಬಿ. ಕೊಯಲೋರವರನ್ನು ಚುನಾಯಿಸಲಾಯಿತು. ತಾಲೂಕು ಸಂಘಕ್ಕೆ ಈ ಸಂಘದಿಂದ ಪ್ರತ್ಯನಿಧಿಯಾಗಿ ಚಾಲ್ತಿ ವರುಷಕ್ಕೆ ೫ ರೂಪಾಯಿ ಕೊಡಬೇಕೆಂದು ನಿರ್ಣಯಿಸಲಾಯಿತು. ವಸ್ತುಪ್ರದರ್ಶನಕ್ಕೆ ವಸ್ತುಗಳನ್ನು ತಂದವರಿಗೆ ೧೬ ಸರ್ಟಿಫಿಕೇಟುಗಳನ್ನು ಕೊಡುವದೆಂದು ನಿರ್ಣಯಿಸಲಾಯಿತು."

ಮುಂದಿನ ಸಭೆಯನ್ನು ಬರುವ ಮೇ ತಿಂಗಳ ತಾ. ೧೫ನೇ ಶನಿವಾರ ಪಾಣೆಮಂಗಳೂರು ಎಸ್. ವಿ. ಎಸ್. ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವದೆಂದು ನಿರ್ಣಯಿಸಲಾಯಿತು.

ಉಡುಪಿ — ಇದೇ ಏಪ್ರಿಲ್ ತಾ. ೩ನೇ ಸಾಯಂಕಾಲ ೪-೩೦ಕ್ಕೆ ಶ್ರೀ ಮಾಸ್ತರ್ ಶ್ರೀನಿವಾಸಯ್ಯನವರ ಮನೆಯಲ್ಲಿ "ಖಾದಿ ನಿಲಯ"ವೆಂಬ ಹೆಸರಿನ ಒಂದು ಖಾದಿ ಸಂಗ್ರಹಾಲಯವು ತೆರೆಯಲ್ಪಟ್ಟಿತು. ಅಗ್ಗ ಬಗೆಬಗೆಯ ಖಾದಿ ವಸ್ತ್ರಗಳು ಆಮಂತ್ರಿಸಲ್ಪಟ್ಟಿದ್ದ ಸದ್ಗೃಹಸ್ಥರಿಗೆ ಮನೋನಂದಕರವಾಗುವಂತೆ ಪ್ರದರ್ಶಿಸಲ್ಪಟ್ಟಿದ್ದು, ಈ ಖಾದಿ ಪ್ರದರ್ಶನವು ಸಂಜೆ ೬-೩೦ರ ವರೆಗೂ ತೆರೆದಿಡಲ್ಪಟ್ಟಿತ್ತು. ವಕೀಲರು, ಸಾಹುಕಾರರು, ಸರಕಾರಿ ನೌಕರರು, ಶಾಲಾ ವಿದ್ಯಾರ್ಥಿಗಳು, ಮೊದಲಾಗಿ ನೂರು ಮಂದಿ ಸಂದರ್ಶನ ಮಾಡಿದ್ದಲ್ಲದೆ, ಸುಮಾರು ರೂ. ೧೫೦ರ ಖಾದಿಯನ್ನು ಕೊಂಡುಕೊಂಡರು. ಕೆಲಜನರ ಅಪೇಕ್ಷೆಯಂತೆ ಈ ಪ್ರದರ್ಶನವು ಇನ್ನೂ ೪-೫ ದಿನಗಳ ವರೆಗೆ ಇಡಲಾಗುವುದು. ನಮ್ಮ ಜಿಲ್ಲೆಯ ಉತ್ತರಾರ್ಧದಲ್ಲಿ ಶುದ್ಧ ಖಾದಿಯನ್ನೇ ಒದಗಿಸುವ ಇಂತಹ ಏರ್ಪಾಟನ್ನು ಒದಗಿಸಿಕೊಟ್ಟು, ಜನತೆಯಲ್ಲಿ ಖಾದಿ ಪ್ರೇಮವನ್ನು ಹುಟ್ಟಿಸಿ ಹಾಗೂ ಖಾದಿಪ್ರಚಾರ ಮಾಡುವ ಯೋಜನೆ ಮಾಡಿರುವ ಸದರಿ 'ಖಾದಿ ನಿಲಯ'ದ ಮಾಲಕರಾದ [illegible] ಮತ್ತು ಕಂಪೆನಿ, ಸಂತೆಕಟ್ಟೆ, ಉಡುಪಿ' ಇವರ ಪರಿಶ್ರಮಕ್ಕೆ ಅನೇಕ ಶ್ರೇಯೋವಚನಗಳು ಇರಲಿ! ಸದರಿ ಖಾದಿ ನಿಲಯದ ಮೂಲಕ ಇದೇ ತಾ. ೬ರಿಂದ ೧೩ರ ತನಕ ಮತ್ತು ಆ ಮೇಲೂ ಸ್ವಲ್ಪಕಾಲ ಖಾದಿಯನ್ನು ಹೊತ್ತುಮಾರುವ ಏರ್ಪಾಟು ಮಾಡಲಾಗುವುದಾಗಿ ಕೇಳಿ, ಅವರ ಈ ಪ್ರಚಾರ ಕಾರ್ಯದಲ್ಲಿ ದೇಶಪ್ರೇಮಿಗಳು ತುಂಬಾ ಪ್ರೋತ್ಸಾಹವಮಾಡಿ ಮಾತೃಭೂಮಿಯ ಋಣವನ್ನು ತೀರಿಸುವರಾಗಿ ಆಶಿಸಲಾಗುತ್ತದೆ.

ವಿವಿಧ ಸಮಾಚಾರಗಳು.

ರಾಜಪಾಲರ ಕೊಲೆ!

'ರಂಗೀಲಾ ರಸೂಲ್' ಎಂಬ ಪುಸ್ತಕವನ್ನು ಬರೆದವರೂ, ಆರ್ಯ ಸಮಾಜದ ಪ್ರಮುಖ ಮುಖಂಡರೂ ಆದ ಲಾಹೋರಿನ ಮಹಾಶಾ ರಾಜಪಾಲರೆಂಬವರು ಕಳೆದ ಶನಿವಾರ ಒಬ್ಬ ಮಹಮ್ಮದಿ ಹುಡುಗನಿಂದ ಕೊಲೆಮಾಡಲ್ಪಟ್ಟರು. ಅನಾರ್ಕಲಿಯಲ್ಲಿರುವ ಅವರ ಪುಸ್ತಕದ ಅಂಗಡಿಯಲ್ಲಿ ಅವರು ಒಂದು ಕುರ್ಚಿಯ ಮೇಲೆ [illegible] ನಿದ್ರಿಸುತ್ತಿದ್ದರು. ಅಷ್ಟರಲ್ಲಿ ಕೊಲೆಪಾತಕಿಯು ಅವರ ಅಂಗಡಿಯನ್ನು ಪ್ರವೇಶಿಸಿ ಹರಿತವಾದ ಚೂರಿಯಿಂದ ಅವರನ್ನು ತಿವಿದು ಓಡಿಹೋದನು. ಚೂರಿಯು ಎದೆ ಶ್ವಾಸಕೋಶವನ್ನೂ ಹೃದಯಕಮಲವನ್ನೂ ಪ್ರವೇಶಿಸಿದುದರಿಂದ ಅವರ ನಿಧನವು ಆಗಲೇ ಉಂಟಾಯಿತು. ಕೊಲೆಪಾತಕಿಯು ಅಂಗಡಿಯನ್ನು ಪ್ರವೇಶಿಸುವಾಗ, ರಾಜಪಾಲರೊಬ್ಬರೇ ಇದ್ದರು. ತಿವಿದ ಕೂಡಲೆ ಅವರ ಚೀತ್ಕಾರವು ಸಮೀಪದ ಅಂಗಡಿಗಳಿಂದ ಜನರನ್ನು ಆಕರ್ಷಿಸಿತು. ಕೊಲೆಪಾತಕಿಯು ದೂರ ಓಡಿಹೋಗುತ್ತಿದ್ದನು. ಓಡಿ ಹೋಗಿ ಆತನು ಒಂದು ಮರದ ವ್ಯಾಪಾರದ ಅಂಗಡಿಯಲ್ಲಿ ಕಟ್ಟಿಗೆಯ ಮೋಟೆಯ ಎಡೆಯಲ್ಲಿ ಅಡಗಿ ಕೂತನು. ಜನರು ಓಡಿಹೋಗಿ ಆತನನ್ನು ಹಿಡಿದರು. ಪೋಲೀಸರು ಅಲ್ಲಿಗೆ ಬಂದು ಆತನನ್ನು ಕೈವಶಮಾಡಿದರು. ಕೊಲೆಗಾರನ ಹೆಸರು ಹಮ್‌ದಿನನೆಂದು. ಕೊಲೆಯಾದ ತರುವಾಯ ರಾಜಪಾಲರ ಅಂಗಡಿಯ ಸುತ್ತಲೂ ಜನರು ಕೂಡಿದರು. [illegible] ಪೋಲೀಸರೂ ಬಂದು ತಲುಪಿದರು. ಶವವನ್ನು ಪರೀಕ್ಷಿಸುವ ಸಲುವಾಗಿ ಆಸ್ಪತ್ರೆಗೆ ಕೊಂಡೊಯ್ಯಲಾಯಿತು.

ಮುಸಲ್ಮಾನ ಯುವಕನು [illegible] ಕಟ್ಟಿಗೆಯ ಅಂಗಡಿಗೆ ಕೆಲವು ಸಮಯದ ಹಿಂದೆ [illegible] ಒಂದು ಬಾಗಿಲು ಇತ್ತು. ಆದರೆ ಇತ್ತೀಚೆಗೆ ಅದು ಮುಚ್ಚಲ್ಪಟ್ಟುದು ಆತನಿಗೆ ತಿಳಿದಿರಲಿಲ್ಲ. ಆ ದ್ವಾರದ ಮೂಲಕ ತಪ್ಪಿಸಿಕೊಳ್ಳುವೆನೆಂದು ಬಗೆದು ಅಂಗಡಿಯೊಳಗೆ ನುಗ್ಗಿದ ಯುವಕನು [illegible] ಸುಲಭವಾಗಿ ಪೋಲೀಸರ [illegible] ದೊರೆತನು. ಪೋಲೀಸರ ಆಗಮನದ ಮೊದಲೇ ಆತನು "ಓ ನನ್ನ ಮುಸಲ್ಮಾನ ಬಂಧುಗಳೇ! [illegible]" ಎಂದು ಕರೆದು ಹೇಳಿದ್ದನಂತೆ.

ರಾಜಪಾಲರ ಮೃತದೇಹವನ್ನು ಆರ್ಯಸಮಾಜಸ್ಥರು [illegible]ಯಲ್ಲಿ ಕೊಂಡೊಯ್ದರು. ಸರಕಾರದವರು ನಿರೋಧಿಸಿದರೂ ಅವರು ಒಪ್ಪಲಿಲ್ಲ. ಸ್ವಲ್ಪ ಹೊತ್ತಿನೊಡನೆ [illegible] ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರು ಜನರನ್ನುದ್ದೇಶಿಸಿ [illegible] ಉಂಟಾಗಿದೆ, ನೀವು [illegible] ಎಂದು ಕೇಳಲಾಗಿ, ಜನರೆಲ್ಲರೂ [illegible] ಎಂದು ಉತ್ತರವಿತ್ತರು. ಮೆರವಣಿಗೆಯು [illegible]. ಆದರೆ ಪೋಲೀಸರು ಮಾರ್ಗದಲ್ಲಿ ಲಾಠಿಗಳನ್ನು ಹಿಡಿದು ತಡೆಗಟ್ಟಿದರು. ಪೋಲೀಸರು ಲಾಠಿಗಳನ್ನು ಬೀಸಿದರು. ಆದರೆ ಮೆರವಣಿಗೆಯು ಜಗ್ಗಲಿಲ್ಲ. ಸಿಟಿ ಮೆಜಿಸ್ಟ್ರೇಟರು ಬಂದು ಎರಡು ನಿಮಿಷಗಳೊಳಗೆ ಜನರು [illegible] ಪೋಲೀಸರಿಂದ [illegible], ಅವರ ಮಾತಿಗೂ ಬೆಲೆದೊರಕಲಿಲ್ಲ. ಕೊನೆಗೆ ಪೋಲೀಸರು ಲಾಠಿಗಳಿಂದ ಹೊಡೆದು ಜನರನ್ನು ಓಡಿಸತೊಡಗಿದರು. ಸಾವಿರಾರು ಜನರಿಗೆ [illegible] ಉಂಟಾಯಿತು.

ಹಿಂದೂಸ್ಥಾನದ ಭವಿಷ್ಯ.

೧೯೩೭ನೇ ಇಸವಿಯ ಭವಿಷ್ಯತ್ ವಿಚಾರಗಳ [illegible] ಎಂಬಾತನು ಬರೆದ ಪುಸ್ತಕದಲ್ಲಿ — 'ಪರ್ಶಿಯಾ, ಅಫಘಾನಿಸ್ಥಾನ ಮತ್ತು ಹಿಂದೂದೇಶಗಳಲ್ಲಿ ಹಲವು ಬದಲಾವಣೆಗಳಾಗುವವು. ರಷ್ಯಾ ಮತ್ತು ಅಫಘಾನಿಸ್ಥಾನದವರು ಒಂದು ರೈಲುವೇ ಸ್ಕೀಮಿನ ಸಲುವಾಗಿ ಒಟ್ಟಾಗಿ [illegible] ಈ ಎರಡು ರಾಷ್ಟ್ರಗಳ ಏಳಿಗೆಯಾಗುವದು. ಹಿಂದೂಸ್ಥಾನದಲ್ಲಂತೂ ಒಂದು [illegible] ಬದಲಾವಣೆಯಾಗುವದು. [illegible] ಮತ ಸಿದ್ಧಾಂತಗಳನ್ನು ಹೋಗಲಾಡಿಸುವ ಬಗ್ಗೆ ಆಲೋಚನೆಗಳು ಹುಟ್ಟುವವು. ಬ್ರಿಟಿಷರ ಸಾಮ್ರಾಜ್ಯದಿಂದ ತಪ್ಪಿಸಿ, ಹಿಂದೂಸ್ಥಾನವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲು, ಹಿಂದೂಗಳು ಒಟ್ಟಾಗುವರು' ಎಂದು ಬರೆದಿದೆ. ಹಿಂದೂಸ್ಥಾನದ ಭವಿಷ್ಯದ ಕುರಿತಾಗಿ ಈ ಪುಸ್ತಕದಲ್ಲಿ ಇನ್ನೂ ಅನೇಕ ಸಂಗತಿಗಳು ಸೂಚಿಸಲ್ಪಟ್ಟಿವೆ.

'[illegible] ವರೆಗೆ [illegible] ರೀತಿಯ ಬ್ರಿಟಿಷ ವಸ್ತು ಬಹಿಷ್ಕಾರವು ಪ್ರಾರಂಭಿಸುವದು. ಇಂಗ್ಲಿಷ ವ್ಯಾಪಾರಕ್ಕೆ ಬಹಳ ನಷ್ಟ ಉಂಟಾಗುವದು. ಉತ್ತರ ಇಂಗ್ಲೆಂಡು ಮತ್ತು ಲಂಕಾಶಾಯರಿನ ಮಿಲ್ಲು ಪಟ್ಟಣಗಳಿಗೆ ಬಹಳ ನಷ್ಟವುಂಟಾಗುವದರಿಂದ ಯಾವದಾದರೂ ರೀತಿಯ ರಾಜಿಮಾಡಬೇಕೆಂದು ಅವರು ಸರಕಾರದ ಬಗ್ಗೆ [illegible] ಕಳುಹಿಸುವರು. [illegible] ಹಿಂದೂಗಳ ಸ್ವಾತಂತ್ರ್ಯದ ಅರಿಕೆಯ ಬಗ್ಗೆ ವಿಚಾರಿಸಿ ಅವರ ಮನೋಭಿಲಾಷೆಯನ್ನು ಸಲಿಸಬೇಕೆಂದು ಇಂಗ್ಲೆಂಡಿಗೆ ತೋರುವುದು. ಅಲ್ಲಿಯವರೆಗೆ ದಂಗೆಗಳೂ ಮುಷ್ಕರಗಳೂ ಬರವೂ ಹಿಂದೂಸ್ಥಾನದಲ್ಲಿ ಉಂಟಾಗುವವು. ಬ್ರಿಟಿಷರ ಗೌರವಕ್ಕೆ ತುಂಬಾ ಹಾನಿಯುಂಟಾಗುವದು.

ಹಿಂದೂಸ್ಥಾನದಲ್ಲಿ [illegible] ಎರಡು [illegible] ಇಂಗ್ಲೆಂಡಿನ ಲಿಬರಲ್ ಮತ್ತು ಕನ್ಸರ್ವೇಟಿವ್ ಪಕ್ಷಗಳಂತೆಯೂ, ಯುನೈಟೆಡ್ ಸ್ಟೇಟ್ಸಿನ ರಿಪಬ್ಲಿಕನ್ ಮತ್ತು ಡೆಮೋಕ್ರೆಟಿಕ್ ಪಕ್ಷಗಳಂತೆಯೂ, ಹಿಂದೂಸ್ಥಾನದಲ್ಲಿ ಬ್ರಾಹ್ಮಣ ಮತ್ತು ಮಹಮ್ಮದೀಯರ ಎರಡು ಪ್ರಬಲ ರಾಜಕೀಯ ಪಕ್ಷಗಳುಂಟಾಗುವವು. ಕೆಲವು ವರುಷಗಳ ಮೇಲೆ ಈ ಎರಡು ಪಕ್ಷಗಳು ಒಟ್ಟಾಗಿ ಹಿಂದೂಸ್ಥಾನದ ಅಭಿವೃದ್ಧಿಯ ಬಗ್ಗೆ ಸಾಧಿಸುವರು. ಹಿಂದೂಸ್ಥಾನವು ಏಳಿಗೆಯನ್ನು ಹೊಂದುತ್ತಾ ಬರುವದು.'

ಮಹಾತ್ಮಾಜಿಯವರ ಸಂಚಾರ.

ಮಹಾತ್ಮಾ ಗಾಂಧಿಯವರು ಕಳೆದ ಶನಿವಾರ ಹೈದರಾಬಾದಿಗೆ ಬಂದಿದ್ದರು. ವಾಡಿ ಸ್ಟೇಶನಿನಿಂದ ಮೊದಲುಗೊಂಡು ಅವರನ್ನು ಸಂದರ್ಶಿಸಲು ನಿಂತವರು ರೈಲು ಹತ್ತುತ್ತಾ ಬಂದು ಹೈದರಾಬಾದಿಗೆ ಬಂದು ತಲುಪುವಾಗ ಅವರೊಂದಿಗೆ ಸುಮಾರು ನೂರು ಮಂದಿ ಸಂಗಾತಿಗಳಿದ್ದರು. ಹೈದರಾಬಾದಿನ ರೈಲುವೇ ಸ್ಟೇಶನಿಗೆ ಬಂದು ತಲುಪಿದೊಡನೆ 'ಮಹಾತ್ಮಾಜಿ ಕೀ ಜೈ' ಎಂಬ ಜಯಘೋಷದಿಂದಲೇ ವಾತಾವರಣವು ತುಂಬಿಕೊಂಡಿತು. ಪ್ಲಾಟ್‌ಫಾರಮ್‌ನಲ್ಲಂತೂ ಜನರು ಕಿಕ್ಕಿರಿದು ನೆರೆದಿದ್ದರು. ರೈಲಿನಿಂದ ಇಳಿದ ಮೇಲೆ ಹೊರಗಿನ ಮೋಟಾರಕಾರಿನ ಸಮೀಪಕ್ಕೆ ತಲಪಬೇಕಾದರೆ ಮಹಾತ್ಮಾಜಿಯವರಿಗೆ ಮುಕ್ಕಾಲು ತಾಸಿನ ಸಮಯವು ಬೇಕಾಯಿತು. ಎನ್. ಜಿ. ಎಸ್. ರೈಲುವೇ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಪಿಯರ್ಸ್‌ರೆಂಬವರು, ಬೇಗಂಪೇಟ್ ಸ್ಟೇಶನಿನಿಂದ ಮಹಾತ್ಮಾಜಿಯವರೊಡನೆ ಬಂದಿದ್ದರು. ಜನರ ಸಂದಣಿಯಲ್ಲಿ ಗಲಭೆಯುಂಟಾಗದಂತೆ ಅವರೇ ನೋಡಿಕೊಂಡರು. ಅಲ್ಲಿಂದ ಮಹಾತ್ಮಾಜಿಯವರ ಮೆರವಣಿಗೆಯು ಹೊರಟಿತು. ವಿವೇಕವರ್ಧಿನಿ ಥಿಯೇಟರಿಗೆ ತಲಪಿತು. ಮೆರವಣಿಗೆಯ ಪ್ರಾರಂಭದಲ್ಲಿ ಬ್ಯಾಂಡು ವಾಲಗ, ತರುವಾಯ ಸ್ವಯಂಸೇವಕರ ದಳ, ಅನಂತರ ಮಹಾತ್ಮಾಜಿಯವರ ಕಾರು, ಅದರ ಹಿಂದೆ ಹಲವು ಕಾರುಗಳು ಇದ್ದುವು. ಲಕ್ಷಗಟ್ಟಲೆ ಜನರು ನೆರೆದಿದ್ದುದರಿಂದ ಜಾತ್ರೆಗಿಂತಲೂ ವಿಶೇಷವಾದ ಉತ್ಸವದೋಪಾದಿಯಲ್ಲಿ ಇದು ಕಂಗೊಳಿಸುತ್ತಿತ್ತು. ಒಂದು ವಿಶೇಷವೆಂದರೆ ಹಿಂದೂಗಳೂ ಮುಸಲ್ಮಾನರೂ ಏಕರೀತಿಯ ಉತ್ಸಾಹದಿಂದ ಈ ಸಮಾರಂಭದಲ್ಲಿ ಭಾಗಿಗಳಾದರು. ಥಿಯೇಟರಿನ ಸಮೀಪ ತಲುಪಿದೊಡನೆ [illegible] ಸ್ಥಳದಲ್ಲಿ ಸಿಕಂದರಾಬಾದ ಮತ್ತು ಹೈದರಾಬಾದಿನ ಜನರ ಪರವಾಗಿ ಅವರಿಗೆ ಮಾನಪತ್ರವನ್ನೂ ಒಂದು ಹಣದ ಥೈಲಿಯನ್ನೂ ಸಮರ್ಪಿಸಲಾಯಿತು. [illegible]

[illegible] ಮಹಾತ್ಮಾಜಿಯವರ ಹೈದರಾಬಾದಿನ ಪ್ರವಾಸ [illegible]

ಏಸೆಂಬ್ಲಿ ಮಂದಿರದಲ್ಲಿ ಬಾಂಬುಗಳು!

[illegible]

[illegible] ಹಿಂದೂಸ್ಥಾನ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿ ಎಂದು [illegible] ಅಪರಾಧಿಗಳನ್ನು ವಿಚಾರಿಸಲಾಯಿತು. ಆದರೆ ಅವರಿಬ್ಬರ ಹೇಳಿಕೆಯಲ್ಲಿ [illegible] ವ್ಯತ್ಯಾಸವಿದ್ದಿತು; ಅವರನ್ನು ಬೇರೆ ಬೇರೆ ಕಾರಾಗೃಹದಲ್ಲಿಡಲಾಯಿತು. ಏಸೆಂಬ್ಲಿಯ ರಕ್ಷಣೆಗಾಗಿ ಎಪ್ಪತ್ತು ಮಂದಿ ಪೋಲೀಸ ನೌಕರರು ನೇಮಿಸಲ್ಪಟ್ಟರು. [illegible] ಪ್ರಯುಕ್ತವೆಂಬ ತಪ್ಪಿತದ ಮೇಲೆ ಪೋಲೀಸರು ಇವರ ತನಿಖೆಯನ್ನು ನಡಿಸುತ್ತಲಿರುವರು.

[illegible] Public Conveyance Motor Service

CHIKMAGALUR.

[illegible] ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) [illegible] ಕಡೂರು (M. S. M Railway) [illegible] 12 ಗಂಟೆಗೆ [illegible] ಚಿಕ್ಕಮಗಳೂರು, ಮೂಡಿಗೆರೆ, [illegible] 1 ಗಂಟೆ [illegible] ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ [illegible] ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, [illegible] ಉಪ್ಪಿನಂಗಡಿ [illegible] ಗುರುವಾಯನಕೆರೆ [illegible] ಪುತ್ತೂರು [illegible] ಮಂಗಳೂರಿಗೆ [illegible] 4—30 ಗಂಟೆ [illegible] ಮಂಗಳೂರಿಗೆ [illegible]

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) [illegible] 8 ಗಂಟೆಗೆ [illegible] 9 ಗಂಟೆ [illegible] 10-30 [illegible] 11-45 [illegible] 12-30 [illegible] 1-30 [illegible] 1-45 [illegible] 4-30 [illegible]

(3) [illegible] ಮಂಗಳೂರಿನಿಂದ [illegible] 7 ಗಂಟೆಗೆ [illegible] 8 [illegible] 10-30 [illegible] 11 [illegible] 12 [illegible] 12-30 [illegible] 3-30 [illegible] 4 [illegible] 6-30 [illegible] 7-30 [illegible] 8 [illegible]

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30 [illegible] 10 [illegible] 12 [illegible] 3-30 [illegible]

ವಿಶೇಷ ವರ್ತಮಾನಕ್ಕೆ ಮೇಲಿನ ವಿಳಾಸಕ್ಕೆ ಮ್ಯಾನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಟಿ. ಎನ್. ಹನುಮಂತಪ್ಪ, [illegible], ಕೆ. ಸಂಜಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಮೈಸೂರು, ಕೊಡಗು, ಮತ್ತು ಉತ್ತರ [illegible] ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

[illegible] ಕಂಪೆನಿಯ ಬಸ್ಸುಗಳಲ್ಲಿ [illegible] ಒಂದೇ ಶಿಲೆಕಲ್ಲಿನಿಂದ

ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದವರು ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದವರು [illegible] ಉಪ್ಪಿನಂಗಡಿಗೆ ಬೇಗನೆ ತಲಪುವರು.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ

ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

[illegible] ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ

ಕನೆಕ್ಷನ್ ಇರುತ್ತದೆ.

ದಕ್ಷಿಣ ಮರಾಠಾ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ,

ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶಿರಾಡಿ

ಮಾರ್ಗವಾಗಿ ಹಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

ಮರೇರಿಯಾನ [illegible]

[illegible]

ಯುವಕರ ವಿದ್ಯಾರ್ಥಿಯ ಉಳ್ಳವರಿಗೆ [illegible]

[illegible] ಮೆದುಳಿನ [illegible] ವಿದ್ಯಾಭ್ಯಾಸದ ಬಹು [illegible]

[illegible]

ಕ್ರಯ 8 ಡಿಬ್ಬಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲ್ಪಡುವ 64 ಗುಳಿಗೆಗಳು.)

ಮೆದುಳು ಯಾತರಿಂದ ತಂಪಾದೀತು?

[illegible]

ಕ್ರಯ 8 ಡಿಬ್ಬಿಗೆ ರೂ. 3—8—0

[illegible] ಬರೆಯಿರಿ. ಮರೇರಿಯಾನ ಕಂಪೆನಿ,

ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಟಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಜಾತಿಗಳ ಕಸಿ [illegible], ಸಪ್ಪೋಟಾ, ಚೇರಳೆ, ಚಿಕ್ಕು, ದ್ರಾಕ್ಷಿ, ಅಂಜೂರ, ದಾಳಿಂಬೆ, [illegible] ಕಸಿಗಿಡಗಳೂ [illegible], ಗಿಡಗಳು ನಮ್ಮಲ್ಲಿಯೇ [illegible] ಸಂದೇಹ ವಿಲ್ಲದೆ [illegible] ಫಲಿಸುವವು. ಬೆಂಗಳೂರು, ಸೇಲಂ ಕಸಿಗಳು [illegible] ಹಾಗೆ ಫಲ ಬಿಡುವುದಿಲ್ಲ. ಕೃಪೆಯಿಟ್ಟು ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು [illegible] ಸಿಗುವವು.

ಕೆ. [illegible] ಶೆಟ್ಟಿ ದಿ. ಕೆನರಾ ನರ್ಸರಿ, [illegible] 13·10·28	C/o	ಕೆ. [illegible] ಶೆಟ್ಟಿ ಶಾರದಾ [illegible], ರಥಬೀದಿ, ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್. ಪೂನಾ ಸಿಟಿ.

1 [illegible] ವಿಮೆಯ [illegible] ಕೊಡುವಂಥ ಒಂದೇ ಒಂದು ಹಿಂದೀಯ [illegible] ಕಂಪೆನಿಯು.

2 [illegible]

3 [illegible]

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ [illegible] ನಂಬಿಗಸ್ತ [illegible] ಏಜೆಂಟರುಗಳು ಬೇಕಾಗಿರುವರು.

[illegible] ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. [illegible] ಭಟ್ಟ	ಪಿ. [illegible]
[illegible]	[illegible]
[illegible]	[illegible]
[illegible]	

೨೪೦ ಚಿತ್ರಗಳು ಇವೆ

[... ತಿಳಿದುಕೊಳ್ಳದಿದ್ದರೆ ಏತಕ್ಕಾಗಿ ತೆಗೆದುಕೊಳ್ಳುವಿರಿ.]

... ರತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ, ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಕಾಲ ಗರ್ಭ ಧರಿಸುವದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕಕರ್ಮ ನಿಯಮಗಳು, ಶಿಶೂತ್ಪತ್ತಿವಿಧ, ಗುಪ್ತವ್ಯಾಧಿಗಳ ಚಿಕಿತ್ಸೆ, ಶಯನಗೃಹದ್ವಾರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ವಿವರಿಸಿದೆ.

ಕ್ರಯ ಪುಸ್ತಕ ಗಳ್ಳೆ ೧-೪-೦

ವಿಳಾಸ:— K. Nadhamuni & Son,
ಕೆ. ನಾಥಮುನಿ ಅಂಡ್ ಸನ್, 168. China Bazaar
೧೬೮ ಚೈನಾ ಬಜಾರ್, ಮದರಾಸು. Madras.

NOTICE.

"Applications are invited for the posts of Supervisors of Co-operative Societies, under the South Kanara District Co-operative Council of Supervision Ltd., Mangalore, on a salary of Rs. 30+16 per mensem. Only those who have passed in the Co-operative Training Classes and who know Kanarese or Malayalam or both need apply.

Applications are also invited from candidates, who are willing to undergo Co-operative Training course for Supervisors at Coimbatore at their own cost. Minimum educational qualification required is complete Secondary School Leaving Certificate.

Please apply with testimonials to the undersigned.

Mangalore, (Sd) N. N. Suvarna,
10-4-29. *President.*

COFFEE!

— THE UNIVERSAL DRINK !! —

THE STANDARD OF

PURITY & QUALITY !!!

HIGHEST AWARDS AT VARIOUS EXHIBITIONS

GOLD MEDAL

1917

GOLD MEDAL

1927

Manufactured by:

'GIRI COFFEE WORKS'

Write for quotations to Proprietors:—

Messrs. M. LACHIA SETTY & SONS

COFFEE GROWERS AND MANUFACTURERS

CHIKMAGALUR

(MYSORE STATE)

Tel.: "LACHIASETTY"

ಸ್ವರಿವನಾದಿರಿ. ಸ್ವರಿವನಾದಿರಿ

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ವಿಧವಿಧದ ಕೊಪಿಂಗ್, ಮತ್ತು ಸಾದಾ ಪೆನ್ಸಿಲುಗಳೂ, ರಬ್ಬರುಗಳೂ ವಿವಿಧ ಸ್ವಾಡಿನ ಸ್ಟೀಫನ್ ಇಂಕ್ ಬಾಟಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

ಓಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನ್.

ಆಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನಿನ ೧೯೨೭-೨೮ನೇ ವರುಷದ ವರದಿಯು ಈಗ ತಾನೆ ಪ್ರಕಟವಾಗುತ್ತದೆ. ಈ ಎಸೋಸಿಯೇಶನಿನ (ಸಂಘದ) ಅಭಿವೃದ್ಧಿಯು ಮೆಲ್ಲ ಮೆಲ್ಲನೆ ನಡೆಯುತ್ತದೆ. ಇದೆ ವರುಷದಲ್ಲಿ ಇದರ ಬಗ್ಗೆ [illegible] ರೂಪಾಯಿಗಳೂ [illegible] ರೂಪಾಯಿ ಮೌಲ್ಯದ ಖಾದಿ ಬಟ್ಟೆಯು ವರದಿಯ ವರುಷ ತಯಾರಿಸಲ್ಪಟ್ಟಿತು. [illegible] ಸುಮಾರು ೧೦ ಲಕ್ಷ ರೂಪಾಯಿ ಮೌಲ್ಯದ ಬಟ್ಟೆಯು ತಯಾರಿಸಲ್ಪಟ್ಟಿತು. ಬಟ್ಟೆಗಳ ವ್ಯಾಪಾರವು [illegible] ಲಕ್ಷಕ್ಕೆ ಏರಿತ್ತಿತು. ಈ ಸಂಘದ ಕೆಳಗೆ ಈಗ ೩೧೦ ಕೇಂದ್ರಗಳಿವೆ.

ಈ ಸಂಘದ ಚಳವಳಿಯು ಸುಮಾರು [illegible] ಹಳ್ಳಿಗಳಲ್ಲಿ ವ್ಯಾಪಿಸಿರುತ್ತದೆ. [illegible] ಮಂದಿ ನೂಲುವವರೂ, [illegible] ಮಂದಿ ನೇಯುವವರೂ ಈ ಚಳವಳಿಯಲ್ಲಿ ಭಾಗಿಗಳಾಗಿದ್ದರು. ನೂಲುವವರಿಗೆ [illegible] ಲಕ್ಷ ರೂಪಾಯಿಗಳೂ, ನೇಯುವವರಿಗೆ [illegible] ಲಕ್ಷ ರೂಪಾಯಿಗಳೂ ಸಂಬಳದ ರೂಪವಾಗಿ ಕೊಡಲ್ಪಟ್ಟವು. ಈ ಸಂಘದ ಕೈಕೆಳಗಿದ್ದ ಶಿಕ್ಷಿತ [illegible] [illegible] ಸಂಘದ ಅಭಿವೃದ್ಧಿಯ ಬಗ್ಗೆ ಬೇಕಾದ ಸಾಧನೆಗಳೆಲ್ಲವೂ ಕೈಕೊಳ್ಳಲ್ಪಟ್ಟವೆಂಬುದು ವರದಿಯಲ್ಲಿ ಚೆನ್ನಾಗಿ ಸೂಚಿತವಾಗಿರುವುದು.

[illegible] ಅಲ್ಲದೆ ಹಲವು ದೇಶೀಯ ರಾಜ್ಯಗಳಲ್ಲಿಯೂ ಖಾದಿ ಕೆಲಸವನ್ನು ಬರುವರಲ್ಲಿ ಪ್ರಚಾರಕ್ಕೆ [illegible] ಅವರಿಗೂ ಬಹಳ ಉಪಕಾರವಾಗಿರುತ್ತದೆಂದೂ, ಬರೋಡಾ ರಾಜ್ಯದಲ್ಲಿಯೂ ಖಾದಿಕೆಲಸದ ಆರಂಭಕ್ಕೆ [illegible], ಹಲವು [illegible] ಖಾದಿ ವಸ್ತ್ರಾಲಯಗಳ ಮೇಲೂ ಖಾದಿ ಭಂಡಾರಗಳ ಮೇಲೂ ತೆರಿಗೆಯನ್ನು ಹೊರಿಸದಿದ್ದುದರಿಂದ ಬಹಳ ಉಪಕಾರವಾಯಿತೆಂತಲೂ ಬರೆಯಲ್ಪಟ್ಟಿರುತ್ತದೆ.

ಖಾದಿಗೆ ಈ ವರುಷ ಬಹಳ ಗಿರಾಕಿಯಿದ್ದಿತು. [illegible] ಬೇರೆ ಬೇರೆ ಕಡೆಗಳಲ್ಲಿ ಹೆಚ್ಚು ಖಾದಿಯು ಉತ್ಪನ್ನವಾಯಿತು. ಪಂಜಾಬು, ರಾಜಸ್ಥಾನ, [illegible], ಮತ್ತು [illegible] ಗಾಂಧಿ ಆಶ್ರಮಗಳಿಗೆ ಹೆಚ್ಚು ಮೂಲಧನವು ಸ್ಯಾಂಕ್ಷನ್ ಮಾಡಲ್ಪಟ್ಟಿರುತ್ತದೆ. ಹಳ್ಳಿಯ ಕೈಕಸುಬು, ಖಾದಿ ನೂಲುವದನ್ನೂ ನೇಯುವದನ್ನೂ ಕಲಿತು, ಸ್ವತಂತ್ರೋದ್ಯೋಗವನ್ನು ಪಡೆಯ ಬಯಸುವವರಿಗೆ [illegible] ಸಾವಿರ ರೂಪಾಯಿಗಳು ಪ್ರತ್ಯೇಕಿಸಲ್ಪಟ್ಟಿವೆ. ಇನ್ನೂ ಇಂತಹ ಅಭಿವೃದ್ಧಿಯ ಕೆಲಸಗಳಿಗಾಗಿ ಇನ್ನಷ್ಟು ಪ್ರಯತ್ನಗಳು ನಡೆದಿವೆ.

ADVERTISE IN OUR WEEKLY.

To Reach the Hearths & Homes

OF INDIA'S MASSES

For Particulars Apply to:

The Manager,

SWADESHABHIMANI,

MANGALORE.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara.

(58 ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ — ಔಷಧಗಳು.) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಋತುಸ್ರಾವವು ಹೆಚ್ಚು ಕಡಿಮೆಯಾಗುವದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮೈಬಲಹೀನತೆ, ಒಳಜ್ವರ, ರಕ್ತಹೀನತೆ, ಬೆಳ್ಳುಸೆರಗು, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತಿ ಶೀಘ್ರದಲ್ಲಿಯೇ ಗುಣಪಡಿಸುವದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಉಂಟಾದ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರ್ತಿಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಘಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಜ್ವರಗಡ್ಡೆ ಮುಂತಾದ ನಾನಾತರದ ಜ್ವರಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸುವದು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಹೊಂದದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಡ್ಡೆಯ ಮೇಲೆ ಸ್ಕಂಧವ ವಟಿ, ಬಾಲಗ್ರಹ ಗುಟಿಕೆ, ಶ್ವಾಸಕುಠಾರ ಗುಟಿಕೆ, ಇಚ್ಛಾಭೇದಿ ಗುಟಿಕೆ, ಚ್ಯವನ ಪ್ರಾಶಾವಲೇಹ, ಧಾತುಪುಷ್ಟಿ ಲೇಹ, ಚಂದನಾಸವ ಮತ್ತು ಮಾತ್ರೆಗಳು ಇವೇ ಮೊದಲಾದ ಸಮಸ್ತ ಔಷಧಗಳೂ ದೊರೆಯುವವು. ಹೆಚ್ಚಿನ ವಿವರಗಳಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬೇಕೆಂದಿರುವಿರಾ? ನಿಮಗೆ ತಿಳಿದಿಲ್ಲವಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ತಿಳಿಸುವ ಐದು ಪ್ರಶ್ನೆಗಳಿಗೆ (ಆರೂಢ ಪ್ರಶ್ನೆ) ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ; ಪ್ರತಿ ತಿಂಗಳ ಕೂಲಂಕಷ ವಿಚಾರವುಳ್ಳ ಒಂದು ವರುಷದ ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. ೭||; ಪ್ರತಿ ಹಪ್ತೆಯ ವಿಚಾರವುಳ್ಳ ಒಂದು ವರ್ಷದ ಫಲ ರೂ. ೧೦. ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ವಿಜಯಶೀಲರಾಗಲು ಜಯ ವಶೀಕರಣ ತಾಯಿತಕ್ಕೆ ರೂ. ೨; ಟ ಖ. ಆಣೆ ೪; ನಿಮಗಾಗಿಯೇ ಬೇರೆ ಮಾಡಿದ ತಾಯಿತಕ್ಕೆ ರೂ ೫೦

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) [illegible]

V. K. Satagopachariar,

Hanuman Astrological Office,

TIRUTTANI, CHITTOOR DISTRICT

Madras Presidency.

ವಿ. ಕೆ. ಶತಗೋಪಾಚಾರ್ಯರ್,

ಹನುಮಾನ್ ಎಸ್ಟ್ರೊಲೋಜಿಕಲ್ ಆಫೀಸ್,

ತಿರುತ್ತಣಿ, ಚಿತ್ತೂರು ಜಿಲ್ಲೆ,

ಮದರಾಸು ಪ್ರಾಂತ್ಯ.

ಇನ್ನು ಹೆದರಬೇಕಾದುದಿಲ್ಲ,

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ, ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ

ಒನ್ನೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ.

ಬಾಟಲಿಯೊಂದಕ್ಕೆ ಕ್ರಯ ರೂ. 3-4-0 ಮಾತ್ರ

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ.

ಆಫೀಸು

ಡೊಂಗರಕೇರಿ ಸ್ಟ್ರೀಟ್,

ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,

ಕೊಡಿಯಾಲ್‌ಬೈಲ್ ಪೋಸ್ಟು,

ದ. ಕನ್ನಡಾ.

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,

MANGALORE.

ಇಂಡೋಬಾಮ್

[illegible]

ಕರ್ನಾಟಕ ಬ್ರದರ್ಸ್.



ಪಾಂಡುರೋಗಕ್ಕೆ

ಸಿದ್ಧೌಷಧಿ

[illegible]

FELUNA PILLS

ನೋಟೀಸು.

ದಕ್ಷಿಣಕನ್ನಡ ಜಿಲ್ಲಾ ದೇವಸ್ಥಾನ ಕಮಿಟಿಯ ಮಂಗಳೂರು ಕಚೇರಿ ಸನ್ಯಾಸಿಗುಡ್ಡೆ ಆಫೀಸಿನಲ್ಲಿ ಇದೇ ಎಪ್ರೇಲ್ ತಿಂಗಳ ತಾ. 20 ಮತ್ತು 21ಕ್ಕೆ ಕಮಿಟಿ ಮೀಟಿಂಗು ಜರಗುತ್ತದೆ. ಈ ಮೊದಲು ಮಂಗಳೂರು ಸರ್ಕಲ್ ದೇವಸ್ಥಾನ ಕಮಿಟಿ ಮುಂದೆ ಇದೇ ಇಸವಿ ಜನವರಿ ಮತ್ತು ಫೆಬ್ರವರಿ ತಿಂಗಳುಗಳ ಮೀಟಿಂಗಿಗೆ ಇಟ್ಟಿದ್ದ ಅರ್ಜಿಗಳು ಮತ್ತು ಉಡುಪಿ ಸರ್ಕಲ್ ದೇವಸ್ಥಾನ ಕಮಿಟಿ ಮುಂದೆ ತನಿಖೆಗೆ ಇಟ್ಟಿದ್ದ ಕೆಲವು ಅರ್ಜಿಗಳು ಸಹಾ ಸದ್ರಿ ದಿವಸಗಳಲ್ಲಿ ಮಧ್ಯಾಹ್ನ ಘಂಟೆ 1ಕ್ಕೆ ತನಿಖೆಗೆ ಇಟ್ಟಿರುವದರಿಂದ ಅರ್ಜಿದಾರರು ಸದ್ರಿ 2 ದಿವಸಗಳಲ್ಲಿ ತಪ್ಪದೆ ಹಾಜರಾಗತಕ್ಕದ್ದು.

ದ. ಕ. ಜಿಲ್ಲಾ ದೇವಸ್ಥಾನ ಕಮಿಟಿ ಆಫೀಸು, ಮಂಗಳೂರು, ತಾ. 8-4-'29.

ಪಿ. ಆರ್. ರಂಗನಾಥ ಪೂಂಜ, ಪ್ರೆಸಿಡೆಂಟ್,

ವಂಚಕರ ಹಂಚಿಕೆ

(೩)

([illegible])

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದ್ದು)

ಇನ್ಸ್‌ಪೆಕ್ಟರನು "ನನ್ನ ಕಡೆಯಿಂದ ಬಂದ ಸೇವಕನು ನಿಮ್ಮ ಈ ಅಂಗಡಿಗೆ ಬಂದುಹೋದನೇ?" ಎಂದು ಪ್ರಶ್ನಿಸಿದನು.

ರಮಾನಂದರಾಯನು "ಹೌದು ಸ್ವಾಮಿ, ಅತನು ಈಗಲೇ ಹಿಂದಿರುಗಿ ಬರುತ್ತೇನೆಂದು ಹೇಳಿ ಸ್ವಲ್ಪ ಆಗಲೇ ಹೋಗಿರುವನು. ಈಗ ಬರಲಿಕ್ಕಾಗಬಹುದು" ಎಂದು ಹೇಳುತ್ತ ಆ ವ್ಯಕ್ತಿಗೆ ಕುಳಿತುಕೊಳ್ಳುವುದಕ್ಕಾಗಿ ಒಂದು ಕುರ್ಚಿಯನ್ನು ಇಟ್ಟು "ಕುಳಿತುಕೊಳ್ಳಿರಿ" ಎಂದನು.

ಇನ್ಸ್‌ಪೆಕ್ಟರನು ಕುರ್ಚಿಯ ಮೇಲೆ ಕುಳಿತುಕೊಂಡು ತನ್ನ ಎಡಭಾಗದ ಕಿಸೆಯಿಂದ ರೌಪ್ಯನಿರ್ಮಿತವಾದ ಸುಂದರವಾದ ಒಂದು 'ಸಿಗಾರ್‌ಕೇಸ'ನ್ನು ಹೊರಕ್ಕೆ ತೆಗೆದನು. ಅದನ್ನು ಒತ್ತಿದೊಡನೆಯೇ ಅದರ ಮುಚ್ಚಳವು ತೆರೆಯಿತು. ಅದರೊಳಗಿಂದ ಆತನು ಎರಡು 'ಸಿಗರೇಟು'ಗಳನ್ನು ತೆಗೆದನು. ಸಿಗರೇಟುಗಳಲ್ಲಿ ಒಂದನ್ನು ಬಾಯಿಯೊಳಗೆ ಇಟ್ಟು ಕಿಸೆಯಿಂದ ಒಂದು 'ಸಿಗರ್‌ಲ್ಯಾಟರ'ನ್ನು ತೆಗೆದನು. ಅದನ್ನೊತ್ತಿದೊಡನೆಯೇ ಅದು ಹೊತ್ತಿಕೊಂಡಿತು. ಇನ್ಸ್‌ಪೆಕ್ಟರನು ಅದರಿಂದ 'ಸಿಗರೇಟ'ನ್ನು ಹೊತ್ತಿಸಿ ಒಂದು 'ಸಿಗರೇಟ'ನ್ನೂ 'ಸಿಗಾರ್‌ಲ್ಯಾಟರ'ನ್ನೂ ರಮಾನಂದರಾಯನಿಗೆ ಕೊಟ್ಟನು. ರಮಾನಂದರಾಯನೂ 'ಸಿಗರೇಟ'ನ್ನು ಹೊತ್ತಿಸಿ 'ಸಿಗಾರ್‌ಲ್ಯಾಟರ'ನ್ನು ಹಿಂದಕ್ಕೆ ಕೊಟ್ಟನು. ಇನ್ಸ್‌ಪೆಕ್ಟರನು ಅದನ್ನು ನಂದಿಸಿ ತನ್ನ ಎಡ ಕಿಸೆಯೊಳಗೇನೇ ಹಾಕಿಕೊಂಡನು.

ಧೂಮಪಾನ ಮಾಡುತ್ತಿರುವಾಗ ಇನ್ಸ್‌ಪೆಕ್ಟರನು "ನಾನೂ ನಮ್ಮ ಸುಪರಿಂಟೆಂಡೆಂಟರೂ ಸ್ವಲ್ಪ ಸಮಯದ ಹಿಂದೆ ಇದೇ ದಾರಿಯಾಗಿ 'ಮೋಟಾರ್‌ಕಾರಿ'ನಲ್ಲಿ ಹೋಗುತ್ತಿದ್ದೆವು. ಜನ ಸಂದಣಿಯಿಂದ ನಮ್ಮ ವಾಹನವನ್ನು ನಿಮ್ಮ ಅಂಗಡಿಯ ಎದುರು ಸ್ವಲ್ಪ ಹೊತ್ತು ನಿಲ್ಲಿಸಬೇಕಾಯಿತು. ಆ ಸಮಯ ನಾವು ನಿಮ್ಮ ಅಂಗಡಿಯಲ್ಲಿರುವ ಈ ಸುವರ್ಣ ಬಟ್ಟಲನ್ನು ನೋಡಿದೆವು. ನಮ್ಮ ಸುಪರಿಂಟೆಂಡೆಂಟರೂ ಇದನ್ನು ನೋಡಿ ಬಹಳ ಸಂತೋಷಪಟ್ಟರು. ಈ ಸುವರ್ಣ ಬಟ್ಟಲನ್ನು ಕೊಂಡುಕೊಳ್ಳಬೇಕೆಂಬ ಇಚ್ಛೆಯು ನನ್ನಲ್ಲಿ ಇದೆ. ಅದಕ್ಕೆ ಸಾಧಾರಣ ಎಷ್ಟು ಬೆಲೆ ಹೇಳುತ್ತೀರಿ?" ಎಂದನು.

ರಮಾನಂದರಾಯನು "ಇದರ ಬೆಲೆಯು ಐದು ಸಾವಿರ ರೂಪಾಯಿಗಳು. ಅರುವತ್ತು ತೊಲ ಸ್ವಚ್ಛ ಸ್ವರ್ಣದಿಂದ ಇದು ನಿರ್ಮಿತವಾದುದು" ಎಂದು ಹೇಳುತ್ತ ಸುವರ್ಣ ಬಟ್ಟಲನ್ನು 'ಶೋಕೇಸಿ'ನೊಳಗಿಂದ ಹೊರಕ್ಕೆ ತೆಗೆದನು. ಅದು ತಟ್ಟೆಯ ಬಿಂಬಾಕೃತಿಯ ಸುವರ್ಣದ ವಸ್ತುವದು! ಇದರ ಸುತ್ತಲೂ ನಾನಾ ವಿಧವಾದ ಬಳ್ಳಿಗಳೂ, ಹೂಗಳೂ, ಹಣ್ಣುಗಳೂ ಕೆತ್ತಲ್ಪಟ್ಟಿವೆ. ಹೂಗಳ ಮಧ್ಯಭಾಗದಲ್ಲೆಲ್ಲ ಸಣ್ಣ ಸಣ್ಣ ಕೆಂಪು ಹರಳುಗಳನ್ನಿಟ್ಟದ್ದರಿಂದಂತೂ ಅದು ಅತ್ಯಂತ ಸುಂದರವಾಗಿ ಕಾಣಿಸುತ್ತಿತ್ತು.

ಸುವರ್ಣ ಬಟ್ಟಲನ್ನು ನೋಡಿ ಇನ್ಸ್‌ಪೆಕ್ಟರನು "ಇದಕ್ಕೆ ತಕ್ಕುದಾದ ಬೆಲೆ ಎನ್ನುವುದರಲ್ಲಿ ಸಂದೇಹವಿಲ್ಲ. ವಸ್ತುವು ಅತಿ ಸುಂದರವಾದುದು. ಯಾರನ್ನಾದರೂ ಮೋಹಿಸತಕ್ಕದ್ದು. ಅಯ್ಯಾ, ಇದನ್ನು ನಾನು ಸ್ವಂತ ಉಪಯೋಗಕ್ಕಾಗಿ ಕೊಂಡುಕೊಳ್ಳುವುದಲ್ಲ. ನಮ್ಮ ಜಿಲ್ಲೆಯ ಮುಖ್ಯಾಧಿಕಾರಿಗಳಾದ 'ಕಲೆಕ್ಟರ್' ಸಾಹೇಬರು ವಿಲಾಯಿತಿಗೆ ಹೋಗುವವರಿದ್ದಾರೆ. ಆದುದರಿಂದ ನಮ್ಮ ಇಲಾಖೆಯ ಉದ್ಯೋಗಸ್ಥರೆಲ್ಲರೂ ಒಟ್ಟಾಗಿ ಅವರಿಗೆ ಒಂದು ಭಕ್ತಿ ಉಪಹಾರವನ್ನು ಕೊಡಬೇಕೆಂದು ಬಗೆದಿರುವೆವು. ಇಂದು ಸಂಧ್ಯಾಕಾಲದಲ್ಲಿ ಆರೂವರೆ ಘಂಟೆಗೆ ಸಾಂಧ್ಯಸಮ್ಮಿಲನವು ಜರಗುವುದು. ಆ ಸಮಯ ಅವರಿಗೆ ಈ ಯೋಗ್ಯ ಉಪಹಾರವನ್ನು ಕೊಡಬೇಕಾಗಿದೆ" ಎಂದು ನುಡಿದನು.

"ಸಮ್ಮಿಲನವು ಜರಗುವುದೆಲ್ಲಿ?" ಎಂದು ರಮಾನಂದರಾಯನು ಪ್ರಶ್ನಿಸಿದನು.

ಇನ್ಸ್‌ಪೆಕ್ಟರನು "ಕಲೆಕ್ಟರರ ಬಂಗ್ಲೆಯಲ್ಲೇ. ನಮ್ಮ 'ಫಂಡಿ'ಗೆ ಆರು ಸಾವಿರ ರೂಪಾಯಿಗಳು ಸಂಗ್ರಹಿತವಾಗಿವೆ. ನಾನು ಆ 'ಫಂಡಿ'ನ ಅಧ್ಯಕ್ಷನಾಗಿರುವೆನು. ಕಲೆಕ್ಟರ್ ಸಾಹೇಬರಿಗೆ ಈ ಅಂದವಾದ ಸುವರ್ಣ ಬಟ್ಟಲನ್ನೇ ಭಕ್ತಿ ಉಪಹಾರವಾಗಿ ಕೊಡಬೇಕೆಂದು ನನ್ನ ಇಚ್ಛೆಯು. ನಮ್ಮ ಸುಪರಿಂಟೆಂಡೆಂಟರ ಅಭಿಪ್ರಾಯವೂ ಅದೇ ಆಗಿದೆ" ಎಂದು ಉತ್ತರಕೊಟ್ಟನು.

"ಯಾವಾಗ ಕೊಡುವುದಕ್ಕೆ ಸುಯೋಗ್ಯ ವಸ್ತುವಿದು. ಇಂಥ ವಸ್ತುವು ನಿಮಗೆ ಎಲ್ಲಿಯೂ ದೊರೆಯುವಂತಿಲ್ಲ. ಗ್ರೋಸನ್ನವರಂಗಡಿ, ರಾಮಸ್ವಾಮಿಯಂಗಡಿ — ಯಾರಿಗೂ ದರೂ ಇಂಥ ಅಮೂಲ್ಯ ವಸ್ತುವು ಬೇರಾವ ಸ್ಥಳದಲ್ಲೂ ದೊರೆಯುತ್ತದೆಂದು ಭಾವಿಸುವುದೇ ಬೇಡ" ಎಂದು ರಮಾನಂದರಾಯನು ಹೇಳಿದನು.

"ನಿಜ, ನಿಜ, ಅನೇಕ ಕಡೆಯಲ್ಲಿ ನಾನು ನೋಡಿರುವೆನು. ಆದರೆ ಇಂಥ ಸುಂದರವಾದ ಸುವರ್ಣ ಬಟ್ಟಲನ್ನು ನಾನು ಎಲ್ಲಿಯೂ ನೋಡಲಿಲ್ಲ. ಇರಲಿ, ಸಮಯವು ಕಳೆಯುತ್ತಿದೆ. ಇದರ ಬೆಲೆಯು ಸರಿಯಾಗಿ ಐದು ಸಾವಿರ ರೂಪಾಯಿಗಳೇ? ಏನಾದರೂ ಕಡಿಮೆಮಾಡಲು ಸಾಧ್ಯವಿಲ್ಲವೇ?" ಎಂದು ಇನ್ಸ್‌ಪೆಕ್ಟರನು ಪ್ರಶ್ನಿಸಿದನು.

"ಇದರ ಬೆಲೆಯು ಸರಿಯಾಗಿ ಐದು ಸಾವಿರ ರೂಪಾಯಿಗಳು. ಏನೂ ಕಡಿಮೆಮಾಡಲು ಸಾಧ್ಯವಿಲ್ಲ. ವಸ್ತುವಿಗೆ ತಕ್ಕ ಬೆಲೆಯನ್ನು ಹೇಳುವುದೇ ವ್ಯಾಪಾರ ಧರ್ಮವು" ಎಂದು ರಮಾನಂದರಾಯನು ಉತ್ತರವಿತ್ತನು.

ಇನ್ಸ್‌ಪೆಕ್ಟರನು ಇನ್ನೊಮ್ಮೆ ಪೂರ್ವವತ್ ಜೇಬಿನೊಳಗಿಂದ 'ಸಿಗರೇಟ'ನ್ನೂ 'ಸಿಗಾರ್‌ಲ್ಯಾಟರ'ನ್ನೂ ತೆಗೆದು ಧೂಮಪಾನಮಾಡಲಾರಂಭಿಸಿದನು. ರಮಾನಂದರಾಯನು ಒಮ್ಮೆ ಇನ್ಸ್‌ಪೆಕ್ಟರನನ್ನೂ ಇನ್ನೊಮ್ಮೆ ಆ ಸುವರ್ಣ ಬಟ್ಟಲನ್ನೂ ನಿರೀಕ್ಷಿಸುತ್ತ ಕುಳಿತುಕೊಂಡನು. ಕೆಲವು ನಿಮಿಷಗಳವರೆಗೆ ಇಬ್ಬರೂ ಮೌನವಾಗಿ ಕುಳಿತುಕೊಂಡರು.

— ನಾಲ್ಕು —

"ಈಗ 'ಬ್ಯಾಂಕಿ'ಗೆ 'ಚೆಕ್ಕ'ನ್ನು ಕೊಟ್ಟರೆ ಹಣವು ದೊರೆಯಲಾರದೇ?" ಎಂದು ಧೂಮಪಾನ ಮಾಡುತ್ತ ಇನ್ಸ್‌ಪೆಕ್ಟರನು ಪ್ರಶ್ನಿಸಿದನು.

"ನಾಲ್ಕು ಘಂಟೆ ಹೊಡೆದಾಯಿತು. ಇನ್ನೀಗ ಬ್ಯಾಂಕಿನಲ್ಲಿ ಹಣವು ದೊರೆಯುವುದೆಂದರೆ ಹೇಗೆ?" ಎಂದು ರಮಾನಂದರಾಯನು ಉತ್ತರಕೊಟ್ಟನು.

"ನಾಲ್ಕಾರು ಕೆಲಸಗಳನ್ನು ನಾನೊಬ್ಬನೇ ಮಾಡಿಕೊಳ್ಳಬೇಕಾದುದರಿಂದ ಸಮಯವೆಲ್ಲವೂ ಅದರಲ್ಲೇ ಕಳೆಯಿತು. ಇಂದು ಸಾಯಂಕಾಲವೇ ಸಾಂಧ್ಯ ಸಮ್ಮಿಲನ ಕಾಲದಲ್ಲಿ ಕಲೆಕ್ಟರ್ ಸಾಹೇಬರವರಿಗೆ ಉಪಹಾರವನ್ನು ಕೊಡಬೇಕಾಗಿದೆ. ಆದುದರಿಂದ ಈಗಲೇ ಈ ಸುವರ್ಣ ಬಟ್ಟಲನ್ನು ಕೊಂಡುಕೊಳ್ಳದೆ ನಿರ್ವಾಹವಿಲ್ಲ. ಕಿಂತು 'ಚೆಕ್ಕು' ವಿನಹಾ ಬೇರಾವ ಉಪಾಯವೂ ಇಲ್ಲವಲ್ಲ" ಎಂಬುದಾಗಿ ಇನ್ಸ್‌ಪೆಕ್ಟರನು ಹೇಳಿದನು.

ಇನ್ಸ್‌ಪೆಕ್ಟರನ ಮಾತುಗಳನ್ನು ಕೇಳಿದೊಡನೆಯೇ ರಮಾನಂದರಾಯನಿಗೆ ಈ ಇನ್ಸ್‌ಪೆಕ್ಟರನು ವಂಚಕನು ಎಂಬುದಾಗಿ ತಿಳಿಯಿತು. "ಮೋಸದ 'ಚೆಕ್ಕ'ನ್ನು ಕೊಟ್ಟು ನನ್ನ ತಲೆಯ ಮೇಲೆ ಕೈ ಆಡಿಸಿ ನನ್ನನ್ನು ವಂಚಿಸುವ ಯುಕ್ತಿಯೇ ಇದು! ಅಪ್ಪಾ, ನಾನು ಎಮ್. ಎ. ಪಾಸಾಗಿರುವೆನು. ಹಳ್ಳಿಯ ಮೂಢ ಪ್ರಾಣಿಯಲ್ಲ. ಅಷ್ಟೇ ಅಲ್ಲದೆ ಜನಿವಾರ ಧರಿಸಿಕೊಂಡವನು. ಇಂಥ ವಂಚನೆ ಗಿಂಚನೆಗಳಿಗೆ ಸಿಕ್ಕುವವನು ನಾನಲ್ಲ" ಎಂಬುದಾಗಿ ರಮಾನಂದರಾಯನು ತನ್ನಷ್ಟಕ್ಕೆ ಭಾವಿಸಿಕೊಂಡು ಇನ್ಸ್‌ಪೆಕ್ಟರನನ್ನು ನೋಡಿ "ಅಯ್ಯಾ, ಐದು ಸಾವಿರ ರೂಪಾಯಿಗಳ ಚೆಕ್ಕನ್ನು ನೀವಿಂದು ನನಗೆ ಕೊಟ್ಟು ಹೋಗಿರಿ. ನಾಳೆ ನಾನದನ್ನು ಬ್ಯಾಂಕಿಗೆ ಕೊಂಡುಹೋಗಿ ಹಣವು ದೊರೆತರೆ ಸುವರ್ಣ ಬಟ್ಟಲನ್ನು ನಿಮಗೆ ಕೊಡುವೆನು. ಚೆಕ್ಕು ಕೊಟ್ಟದ್ದಕ್ಕೆ ಈಗ ನಿಮಗೆ ಕೊಡುವುದು ರಶೀದಿಯನ್ನು ಮಾತ್ರ" ಎಂಬುದಾಗಿ ಹೇಳಿದನು.

"ಇದೀಗ ವಂಚಕರ ಯುಗವು. ಇಂಥ ಸಮಯದಲ್ಲಿ ಜಾಗ್ರತೆಯಿಂದಿರುವುದು ಲೇಸು. ನೀವು ತುಂಬಾ ಜಾಗರೂಕರಾದ ಪುರುಷರಾಗಿರುವಿರಿ. ಆದರೆ ನನಗೆ ಮಾತ್ರ ತೊಂದರೆಯಾಯಿತಲ್ಲ! ಇಂದು ಈ ಸುವರ್ಣ ಬಟ್ಟಲು ದೊರೆಯದಿದ್ದರೆ ಇನ್ನಿದನ್ನು ಕೊಂಡುಕೊಳ್ಳುವ ಅವಶ್ಯಕತೆಯು ನನಗಿಲ್ಲ. ಉಪಹಾರವನ್ನು ಇಂದೇ ಸಾಯಂಕಾಲ ಕೊಡಬೇಕಾದುದರಿಂದ ಇದನ್ನು ತೆಗೆದುಕೊಳ್ಳಲೇ ಬೇಕಾಗಿದೆ. ಆದರೆ ನಿಮಗೆ ಹಣವು ದೊರೆಯುವಂತೆ ಏನು ಉಪಾಯ ಮಾಡಲಿ?" ಎಂದು ಇನ್ಸ್‌ಪೆಕ್ಟರನು ನುಡಿದನು.

ಹೀಗೆ ಕೆಲವು ನಿಮಿಷಗಳ ವರೆಗೆ ಇಬ್ಬರೂ ಮೌನವಾಗಿದ್ದರು. ಆಗ ಇನ್ಸ್‌ಪೆಕ್ಟರನ ಸೇವಕನಾದ ಅದೇ ಆಗಂತುಕನು ಅಲ್ಲಿಗೆ ಬಂದು ಉಪಸ್ಥಿತನಾದನು. ಇನ್ಸ್‌ಪೆಕ್ಟರನು ವಿರಕ್ತಭಾವದಿಂದ ಆತನನ್ನು ನೋಡಿ "ಸುಬ್ಬಾ, ನಿನಗೆ ಬರಲಿಕ್ಕೆ ಇಷ್ಟು ವಿಳಂಬವಾಯಿತೇಕೆ? ಇರಲಿ. ಇನ್ನು ಮಾತುಗಳಿಂದಲೇ ಸಮಯವನ್ನು ಕಳೆಯುವುದಲ್ಲ. ಈ ಸುವರ್ಣ ಬಟ್ಟಲನ್ನು ಈಗಲೇ ಕೊಂಡುಕೊಂಡು ಹೋಗಬೇಕಾಗಿದೆ. ಅದಕ್ಕಾಗಿ ನಗದು ಹಣ ವಿನಹಾ ಉಪಾಯವಿಲ್ಲ. ನೀನೊಂದು ಕೆಲಸವನ್ನು ಮಾಡು. ನನ್ನ ತಂಗಿ ಭವಾನಿಬಾಯಿಯ ಮನೆಗೆ ಹೋಗಿ ಬಾ. ಅವಳ ಗಂಡನು ಈ ದಿನ ಬೆಳಗ್ಗೆ ಅವಳಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುವನು. ಆ ಹಣವು ಅವಳೊಡನೆಯೇ ಇದೆ. ನಾನು ಅವಳಿಗೊಂದು ಪತ್ರವನ್ನು ಕೊಡುತ್ತೇನೆ. ನನ್ನ ಪತ್ರವನ್ನು ನೋಡಿದ ಕೂಡಲೇ ಅವಳು ಐದು ಸಾವಿರ ರೂಪಾಯಿಗಳನ್ನು ಕೊಡುವಳು. ನೀನು ಶೀಘ್ರವಾಗಿ ಹೋಗಬೇಕು. ಹಣವನ್ನು ಪಡಕೊಂಡು ನೆಟ್ಟಗೆ ಇಲ್ಲಿಗೇನೇ ಬಾ. ನನ್ನ ತಂಗಿ ಭವಾನಿ ತಿಳಿಯಿತಲ್ಲವೇ?" ಎಂದನು.

ಸುಬ್ಬನು "ಅಪ್ಪಣೆಯನುಸಾರವಾಗಿಯೇ ಮಾಡುವೆನು" ಎಂದು ಹೇಳಿದನು.

ಇನ್ಸ್‌ಪೆಕ್ಟರನ ಮಾತುಗಳನ್ನು ಕೇಳಿ ರಮಾನಂದರಾಯನಿಗೆ ಬಹಳ ಆನಂದವಾಯಿತು. ಎರಡು-ಮೂರು ಘಂಟೆಯೊಳಗೆ ಮೂರು, ಮೂರುವರೆ ಸಾವಿರ ರೂಪಾಯಿಗಳ ಲಾಭ! ಎಂಥ ಸಂದರ್ಭವು! ಎಲ್ಲವೂ ಅದೃಷ್ಟ ಪ್ರತಾಪ್ ಆಗುವುದೆನ್ನಬೇಕು. ತಾನು ಇನ್ಸ್‌ಪೆಕ್ಟರನು ವಂಚಕನೆಂಬುದಾಗಿ ಭಾವಿಸಿದುದಕ್ಕಾಗಿ ರಮಾನಂದರಾಯನು ತುಂಬಾ ಲಜ್ಜಿತನಾದನು. ಆ ಮೇಲೆ "ಇದೀಗ ಉತ್ತಮ ವ್ಯವಸ್ಥೆಯು. ಪತ್ರ ಬರೆಯುವುದಕ್ಕೆ ಕಾಗದವೂ, ಶಾಯಿಯೂ, ಲೇಖನಿಯೂ ಬೇಕಲ್ಲವೇ? ತಕೊಳ್ಳಿರಿ, ಶಾಯಿಯೂ ಲೇಖನಿಯೂ ಇಲ್ಲಿದೆ" ಎಂದು ರಮಾನಂದರಾಯನು ಹೇಳಿದನು.

ಅಲ್ಲೇ ಮೇಜಿನ ಮೇಲೆ ರಮಾನಂದರಾಯನ ನಾಮ, ಧಾಮ, ವೃತ್ತಿಯನ್ನು ಮುದ್ರಿಸಿದ ಕಾಗದಗಳ ಒಂದು 'ಪ್ಯಾಡು' ಇತ್ತು. ಆತನು ಅದರೊಳಗಿಂದ ಒಂದು ಕಾಗದವನ್ನು ಹರಿದು ಲೇಖನಿಯನ್ನೂ ಶಾಯಿಯನ್ನೂ ಆ ಕಾಗದವನ್ನೂ ಇನ್ಸ್‌ಪೆಕ್ಟರ್ ರಮಾನಾಥರಾಯರ ಬಳಿಯಲ್ಲಿಟ್ಟನು. ಇನ್ಸ್‌ಪೆಕ್ಟರನು ಅದನ್ನು ನೋಡಿ ಹೀಗೆಂದನು. "ಮಹಾಶಯ! ಮಲಬಾರು ದಂಗೆಯ ಕಾಲದಲ್ಲಿ ನಾನು ಅಲ್ಲಿ ಇನ್ಸ್‌ಪೆಕ್ಟರನಾಗಿದ್ದೆನು. ಮಲಬಾರಿನಲ್ಲಿ 'ಮಾರ್ಶಲ್‌ಲೋ' ಅಥವಾ 'ಮಿಲಿಟರಿ ಕಾನೂನ'ನ್ನು ಜಾರಿಗೆ ತರುವ ಮುಂಚಿನ ದಿನದವರೆಗೆ ನಾನು ಅಲ್ಲೇ ಇನ್ಸ್‌ಪೆಕ್ಟರನಾಗಿದ್ದೆನು. ದಂಗೆಖೋರರಲ್ಲಿ ಒಬ್ಬನು ಬಿಟ್ಟ ಕೋವಿಯ ಗುಂಡು ನನ್ನ ಬಲಕೈಗೆ ತಾಗಿತು. ಅದು ಎಷ್ಟು ವೇದನೆಯನ್ನು ಕೊಟ್ಟಿತೆಂಬುದನ್ನು ವರ್ಣಿಸಲಸದಳವು. ಆ ವೇದನೆಯಿಂದ ಪ್ರೈತನ್ಯ ತಪ್ಪಿ ನಾನು ಬಿದ್ದುಬಿಟ್ಟೆನು. ನಾನು ಚೇತನ ಹೊಂದಿ ನೋಡುತ್ತಿರುವಾಗ ನನ್ನ ಬಲಗೈಯು ಇರಲಿಲ್ಲ. ಬಲಗೈಯನ್ನು ಕತ್ತರಿಸಿ ಬಿಟ್ಟಿರುವರು. ಆಹಾ! ಎಂಥಾ ಕಷ್ಟವಿದು! ಅದನ್ನೀಗ ಮನಸ್ಸಿನಲ್ಲಿ ಭಾವಿಸಿದರೆ ಈಗಲೂ ರೋಮಾಂಚನವಾಗುವುದು. ಹೀಗೆ ಬಲಗೈಯಿಲ್ಲದೆ ಇರುವುದಕ್ಕಿಂತ ಪ್ರಾಣವಾದರೂ ಹೋಗುವುದೇ ಲೇಸಿತ್ತು" ಎಂದು ಹೇಳಿ ಇನ್ಸ್‌ಪೆಕ್ಟರನು ಮೌನವಾಗಿ ಕುಳಿತನು. ಆ ಮೇಲೆ ಇನ್ನೊಮ್ಮೆ "ಬಲಗೈಯು ಹೋದಂದಿನಿಂದ ಎಡಗೈಯಿಂದಾದರೂ ಬರೆಯಲಿಕ್ಕೆ ಅಭ್ಯಾಸ ಮಾಡಬಹುದಿತ್ತು. ಆದರೆ ನನ್ನಿಂದ ಅದು ಸಾಧ್ಯವಾಗಲಿಲ್ಲ. ನಾನು ಎಡಗೈಯಿಂದ ಒಬ್ಬ ಸಹಿಯನ್ನು ಮಾತ್ರ ಹಾಕಲಿಕ್ಕೆ ಅಭ್ಯಾಸ ಮಾಡಿರುವೆನು. ನೀವು ಈಗ ದಯವಿಟ್ಟು ನಾನು ಹೇಳಿದ ರೀತಿಯಲ್ಲಿ ಒಂದು ಪತ್ರವನ್ನು ಬರೆದರೆ ಆಗುತ್ತಿತ್ತು. ನೀವು ಬರೆದಾದ ಮೇಲೆ ನಾನು ಅದರ ಕೆಳಗೆ ನನ್ನ ಸಹಿ ಹಾಕುವೆನು. ಹೀಗೆ ಮಾಡಿದರೆ ನನ್ನ ಕೆಲಸವು ಸ್ವಲ್ಪ ಸುಲಭವಾಗುವುದು. ಈ ಸುಬ್ಬನು ನನ್ನ ತಂಗಿಗೆ ವಿಶೇಷ ಪರಿಚಿತನೂ ಬಹು ವಿಶ್ವಸ್ತ ಸೇವಕನೂ ಆಗಿರುವನು. ನನ್ನ ತಂಗಿಯು ನನ್ನ ಪತ್ರವನ್ನು ನೋಡಿದೊಡನೆಯೇ ರೂಪಾಯಿಗಳನ್ನು ಕೊಡುವಳು. ನಾನು ಹೇಳುತ್ತೇನೆ—ನೀವು ದಯವಿಟ್ಟು ಬರೆಯಿರಿ" ಎಂದನು.

ರಮಾನಂದರಾಯನು ಅದಕ್ಕೆ ಒಪ್ಪಿ ಅದೇ ನಾಮಧಾಮ, ವೃತ್ತಿಗಳು ಮುದ್ರಿತವಾಗಿರುವ ಕಾಗದವನ್ನೂ ಶಾಯಿಯನ್ನೂ ಲೇಖನಿಯನ್ನೂ ತೆಗೆದುಕೊಂಡು ಬರೆಯಲು ಕುಳಿತುಕೊಂಡನು. ಇನ್ಸ್‌ಪೆಕ್ಟರನು ಹೇಳಿದುದನ್ನು ರಮಾನಂದರಾಯನು ಬರೆಯಲಾರಂಭಿಸಿದನು.

"ಭವಾನಿ, ನನ್ನ ಅದೃಷ್ಟದಿಂದ ಒಂದು ಅತ್ಯುತ್ತಮವಾದ ಸುವರ್ಣ ಬಟ್ಟಲು ದೊರೆತಿರುವುದು. ಇದರ ಬೆಲೆಯು ಮಾತ್ರ ಐದು ಸಾವಿರ ರೂಪಾಯಿಗಳಂತೆ. ನಾನು ಇಂಥ ಸುಂದರ ವಸ್ತುವನ್ನು ನನ್ನ ಜೀವಮಾನ ಕಾಲದಲ್ಲೇ ನೋಡಲಿಲ್ಲವೆಂದರೆ ಅತಿಶಯವಾಗಲಾರದು. ನೀನು ಪತ್ರವನ್ನು ಓದಿದೊಡನೆಯೇ ಪತ್ರವಾಹಕನೊಡನೆ ಐದು ಸಾವಿರ ರೂಪಾಯಿಗಳನ್ನು ನನಗೆ ಕಳುಹಿಸಿಕೊಡು. ನನಗೆ ಈಗ ಏನೂ ಸಮಯವಿಲ್ಲ. ಅಸಡ್ಡೆ ಮಾಡಬೇಡ."

(ಇನ್ನೂ ಇದೆ / ಮುಂದರಿಯುವುದು)



The Story of a New
OAKLAND
Series 6-212
the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES of the NEW OAKLAND

models and Sport Cabriolet.

Leather upholstery available on all closed models.

Improved body hardware on all models.

New and attractive Duco color combinations on all models.

For Further Particulars Apply to

RAO & RAO

Dealers of Oakland, Pontiac Chevrolet, & Vauxhall Cars,

Maidan Road, MANGALORE.

ಲೋಕಾಮ್ರುಯ್ಯರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ, ಲೋಕಾಮ್ರುಯ್ಯರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟಿದ್ದರಾಗಲಿ, ಶ್ಲೇಷ್ಮಿಯು ಬ್ರಾಂತಿಯುಳ್ಳವರಾಗಲಿ ಉಪಯೋಗಿಸಿ ಕೊಡು ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಲಕ್ಷ್ಮೀವಿಲಾಸರಸ.

(ಜ್ವರಗಳಿಗೆ)

ಹೆಚ್ಚಾಗಿ ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಜನಗಳ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸು ತ್ತದೆ. ಬೇಗನೆ ಮಲೇರಿಯ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅನ್ವಯವಾಗುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಬಂಧಗಳಿಗೂ, ಗಡ್ಡೆಗೂ ತಕ್ಕುದ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಗ್ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ಆಫೀಸ್, ಸೀತಾರಾಘವ ವೈದ್ಯಶಾಲೆ, ಮೈಸೂರು.

ಏಜೆಂಟರು:
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಕೊಡಿಯಾಲ್ ಬೈಲ್.

ಕಾವ್ಯಗಳು

ಈ ಕೆಳಗಿನ ಕಾವ್ಯ ಪುಸ್ತಕಗಳಿಗೆ ಪದ, ಟಿಪ್ಪ, ಅನ್ವಯ, ಅರ್ಥ, ತಾತ್ಪರ್ಯ ಅಲಂಕಾರ, ವಿಗ್ರಹ, ಧಾತುರೂಪ, ಧಾತ್ವರ್ಥ ವಿಶೇಷಾಂಶದೊಂದಿಗೆ ಬರೆದಿರುತ್ತೆ. ಕುಮಾರಸಂಭವ ಕಾವ್ಯ 1, 2, 3ನೆ ಸರ್ಗಗಳು

ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
ರಘುವಂಶ ಕಾವ್ಯ 2, 3, 4, 5ನೆ ಸರ್ಗಗಳು	
ಪ್ರತಿಯೊಂದು ಸರ್ಗಕ್ಕೂ ಬೆಲೆ	1—0—0
ಮೇಘ ಸಂದೇಶ (ಪೂರ್ವ)	3—0—0
ಕಿರಾತಾರ್ಜುನೀಯ 1ನೇ ಸರ್ಗ	0—10—0
ವಿವೇಕ ಚೂಡಾಮಣಿ ಶ್ರೀ ಶಂಕರಾಚಾರ್ಯ ವಿರಚಿತ ಸರ್ವ ವೇದಾಂತಸಾರ ಟೀಕಾ ತಾತ್ಪರ್ಯದೊಂದಿಗೆ	3—0—0

ಲೇಖ್ಯ ಪ್ರದರ್ಶಿನಿ,

ಅರ್ಜಿ, ಪತ್ರ, ರಶೀದಿ, ದಾವೆ, ಭಾಗಪತ್ರ, ಅಡವು ಮುಂತಾದ ಮಾದರಿಗಳೂ ಇವೆ. ಕ್ರಯ 0—8—0.

ಎಚ್. ಎಸ್. ರಾವ್ ಬ್ರದರ್ಸ್,

ಪುಸ್ತಕ ವ್ಯಾಪಾರಿಗಳು, ಚಿಕ್ಕಪೇಟೆ, ಬೆಂಗಳೂರು ಸಿಟಿ.

ತಯಾರಾಗಿವೆ! ತಯಾರಾಗಿವೆ!!

ಮೂರನೇ ದರ್ಜೆಯ

ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಮುಂಗಡ ಸಾಲಿಯಾನ — ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489 ಬಿಡಿಪ್ರತಿಗಳ ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]

ಪುಸ್ತಕ ೨೩. ಮಂಗಳೂರು, ತಾ. ೧೯ನೇ ಶುಕ್ರವಾರ ಏಪ್ರಿಲ್ ೧೯೨೯. (19-4-'29.) ಸಂಚಿಕೆ ೧೬.

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. ಹೆಡ್ ಆಫೀಸು — ಉಡುಪಿ.

Branches:—COONDAPOOR. Mangalore. ಶಾಖೆ — ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000- 3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
2. ತೆತ್ತು ಬಂದ ಮೂಲಧನ ರೂ. 2,12,680- 4. ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 3,34,218-5-0-

Statement of Affairs of the Canara Banking Corporation Udipi, Limited as on 28th February 1929

	CAPITAL AND LIABILITIES.			PROPERTY AND ASSETS	
1	Paid up Capital	Rs. 2,12,680-0-0	1	Premises Building Furniture &c.	Rs. 9,215-0-0
2	Reserve and other contingent funds	„ 1,26,700-0-0	2	Investments on G. P. Notes at cost	„ 3,34,218-5-0
3	Deposits	„ 16,01,317-6-10	3	Investments on Approved Securities	„ 17,86,710-11-10
4	Due to Bankers on a/c of Overdrafts and Loans a/c	„ 2,12,154-1-5	4	Bills for collection as per Contra	„ 12,347-0-0
5	Sundry Persons' a/c for Bills for collection as per Contra	„ 12,347-0-0	5	Cash in hand & with Bankers.	„ 43,713-12-8
9	Sundries including P & L items	„ 20,846-6-3			
	Total	21,86,204-13-6		Total	21,86,204-13-6.

Office of the Corporation, UDIPI, 7-3-'29. **N. ANANDA RAO.** *Secretary.*

ಅಮೃತಾಂಜನ.

[illegible]

[illegible] ವಿಭವ ಸಂವತ್ಸರದ ಚೈತ್ರ ಬ. ೩ ಶನಿವಾರದಿಂದ ವಿಭವ ಸಂವತ್ಸರದ ಚೈತ್ರ ಬ. ೯ ಶುಕ್ರವಾರದ ವರೆಗಿನ ಪಂಚಾಂಗ.

(ಸ್ವರ್ಗಕ್ಕೆಯ ಸೇಂಟ್ (ಘಗ್ಸ್ಟ್))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಂಕ್ರಮಣ	ಸೂರ್ಯ F. ಉ	ಅಸ್ತ
27	ಶನಿ	೩	೬.೪೨	ಜ್ಯೇಷ್ಠಾ	೫೬.೫೫ ೧೭		6.13	6.43
28	ರವಿ	೪	೧೧.೪೦	ಮೂಲಾ	೬೦. ೦ ೦೫		6.13	6.43
29	ಸೋಮ	೫	೧೩.೪೨	ಮೂಲಾ	೭. ೩ ೧೬		6.13	6.43
30	ಕುಜ	೬	೨೦ ೧೬	ಪೂ. ಷಾ.	೧೦.೧೬ ೧೬		6.12	6.43
1	ಬುಧ	೭	೨೫ ೧೭	ಉ. ಷಾ.	೧೫.೯೬ ೧೮		6.12	6.44
2	ಗುರು	೮	೨೫.೧೬	ಶ್ರವಣಾ	೨೦.೪೨ ೧೯		6.12	6.44
3	ಶುಕ್ರ	೯	೪೦.೧೫	ಧನಿಷ್ಠಾ	೨೯.೪೦ ೨೦		6.11	6.44

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಅಧಿಕತಮ	Minimum ಅಲ್ಪತಮ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
20	78— 5	91— 4	—	—
21	80— 2	92— 3	—	—
22	76— 5	98— 6	0—01	—
23	77— 8	88— 6	0—06	—
24	77— 3	91— 7	0—08	—
52	76— 0	92— 1	0—20	—
26	89— 8	91— 1	0—34	—
				3 —94

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕು	...	7 — 0	7 — 4
ನುಚ್ಚು	...	8 — 4	8 — 8
ರಾಗಿ	...	6 — 7	5 — 14
ಊರ ಅಕ್ಕಿ ಬೆಳ್ತಿಗೆ	...	7 — 0	7 — 4
ಸುಗ್ಗಿ		6 — 0	6 — 5
ರಂಗೂನು ಬೆಳ್ತಿಗೆ ಗೋಣಿ ಗೆ	...	12 — [illegible]	12 3
ಎಲ್ಲೂರು ಬೆಳ್ತಿಗೆ ಮುಡಿ ಗೆ	..	6 — 4	8 — 8
ಗೋಧಿ ಗೋಣಿ ಗೆ	...	15 — 12	20 — 0
ಹುರುಳಿ ಗೋಣಿ ಗೆ	..	7 — 6	10 — 0
ಕಡಲೆ ಗೋಣಿ ಗೆ	...	15 — 8	18 — 8
ತೊಗರಿ ಗೋಣಿ ಗೆ	...	16 — 8	—
ತೊಗರಿಬೇಳೆ ಗೋಣಿ ಗೆ	...	18 — 8	27 — 0
ಉದ್ದು ಗೋಣಿ ಗೆ	..	15 — 0	16 — 0
ಹೆಸರು ಗೋಣಿ ಗೆ		14 — 8	16 0
ಊರು ಬೆಲ್ಲ ಖಂಡಿ ಗೆ	..	60 — [illegible]	65 — 8
ಉಪ್ಪು ಗೋಣಿ ಗೆ	..	4 — 6	5 — 0
ಕೊಬ್ರಿ ಖಂಡಿ ಗೆ	..	96 — 0	92 —
ಕೊಬ್ರಿ ಹಿಂಡಿ ಖಂಡಿ ಗೆ	...	34 — 0	—
ಎಳ್ಳೆಂಡಿ ಖಂಡಿ ಗೆ	..	42 — 8	45 —
ಕೊಬ್ರಿ ಎಣ್ಣೆ ಮಣ ಗೆ	...	6 — 10	8 — 0
ಎಳ್ಳೆಣ್ಣೆ ಮಣ ಗೆ	..	7 — 12	8 4
ಚಿಮಿಣ್ಣೆ ಪೆಟ್ಟಿಗೆ ಗೆ	..	7 — 12	8 4
ಮೋರಿಸ್ ಸಕ್ಕರೆ ಮಣ ಗೆ	..	—	3 3
ಹೊಸ ಮೆಣಸು	...	4 — 8	6 — 4
ಹಳ್ಳಿ ಊರ ಮೆಣಸಿನಕಾಯಿ ಮಣ ಗೆ		1 — 8	2 — 4
ಸಾಸಿವೆ ಮುಡಿ ಗೆ	..	8 — 8	—
ಕೊತ್ತಂಬರಿ ಮುಡಿ ಗೆ	...	3 — 12	1 0
ನೆಲ್ಲೂರ್ ಕಾಫಿ ಖಂಡಿ ಗೆ	...	370 — 0	380 — 8
ಚೆಟ್ಟಿಗೋಟು ಅಡಿಕೆ ಖಂಡಿ ಗೆ	...	146 — 0	180 — 0
ಕಾಳುಮೆಣಸು ಖಂಡಿ ಗೆ	...	430 — 0	420 — 0
ಯೆಲ್ಲಕ್ಕಿ ಮಣ ಗೆ	...	50 — 0	56 —
ಗೇರುಬೀಜ ಮುಡಿ ಗೆ	...	3 — 4	
ಶುಂಠಿ ಖಂಡಿ ಗೆ	...	42 — 0	45 — 8
ಹಿಂದ್ಯ ಹೊಗೆಸೊಪ್ಪು ಮಣ ಗೆ	...	19 — 0	19 — 12
ಹಿಂದ್ಯ ಪಾತ್ರೆಗಳು ಮಣ ಗೆ	...	20 — 0	21 4
ಜಾಯಿಕಾಯಿ ಸೇರು ಗೆ	...	15 — 4	—
ಹಿತ್ತಾಳೆ ಹಳೆ ಮಣ ಗೆ	...	17 — 0	17 — 8
ಬೆಳ್ಳಿ ಗೆ	...	13—9—0	—
ಸುಣ್ಣಕಲ್ಲು ಖಂಡಿ ಗೆ	...	24 — 0	37 — 8

ಜಾಹೀರಾತು! ಜಾಹೀರಾತು!! ಶೀಘ್ರತ್ವಕ್ಕೆ ಅಗ್ಗ ಗುಣಕ್ಕೆ ಹೆಸರು

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible]

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ತಯಾರಾಗಿವೆ! ತಯಾರಾಗಿವೆ!

ಕಾಫಿ ಪ್ಲೆಂಟೆರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಂಪಲ್‌ನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

[illegible]

ಮ್ಯಾನೇಜರ್,

ಶಾರದಾ ಛಾಪಖಾನೆ,

[illegible], ಮಂಗಳೂರು.



ಒಂದೇ ದಾರಿ

[illegible]

ಕ್ರಯವಾಗಲಿ ಅಂಚೆಹಾಸಲು ಆಗಲಿ

[illegible]

ವೈದ್ಯವಿದ್ಯ

[illegible]

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ [illegible]

1929ನೇ ಇಸವಿಯ ಡೈರಿ

[illegible]

ಮದನಮಂಜರಿ ಮಾತ್ರೆಗಳು

[illegible]

ಡಿ. ಗೂಲಪ್ ಮಾರ್ಟ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು

(1921ನೇ [illegible] XXIನೇ [illegible])

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible] 1927ನೇ ಇಸವಿ [illegible]

ಏಜಂಟರು ಬೇಕಾಗಿರುವರು.

[illegible] —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.

[illegible]
[illegible] ... ೪
[illegible]—[illegible], [illegible] ... ೩
[illegible] ... ೯
[illegible] ಮತ್ತು [illegible]
[illegible] ... ೧೧
[illegible] ... ೧೪
[illegible] ... ೨
[illegible] ... ೨

ಸ್ವದೇಶಾಭಿಮಾನಿ.

ತಾರೀಕು ೨೬ನೇ ಶುಕ್ರವಾರ ಏಪ್ರಿಲ್ ೧೯೨೯.

ಪುಸ್ತಕಗಳ ದಬ್ಬಾಳಿಕೆ.

The Tyranny of Books.

ಏಕಾಧಿಕಾರಶೀಲ ರಾಜ್ಯಾಡಳಿತದ ಮುಖ್ಯವಾದ ಒಂದು ಸೂತ್ರವೆಂದರೆ, ದಬ್ಬಾಳಿಕೆಯು ಹೆಚ್ಚು ಕಾಲ ನಿಲ್ಲಲಾರದೆಂಬುದು. ಪ್ರಾಯಶಃ ಆಧುನಿಕ ರಾಜ್ಯಾಡಳಿತವು ಈ ಸೂತ್ರವನ್ನು ಬಹುಮಟ್ಟಿಗೆ ಅನುಸರಿಸುತ್ತಿದೆ. ಒಂದು ಜನಾಂಗವು ಇನ್ನೊಂದು ಜನಾಂಗದ ಮೇಲೆ ಅಧಿಕರಿಸುವುದು ಹಿಂದಿನ ರಾಜರುಗಳು ಒಬ್ಬರ ಮೇಲೊಬ್ಬರು ದಂಡ ಯಾತ್ರೆ ನಡಿಸಿ ಸ್ವಾಧೀನಪಡಿಸಿ ಆಳುವಂತಿದ್ದರೂ, ಆಗಿನ ಏಕವ್ಯಕ್ತಿ (personal) ಅಧಿಕಾರವು ಈಗ ಸಾಧಾರಣ ಎಲ್ಲಿಯೂ ಇರುವುದಿಲ್ಲ. ಏಕವ್ಯಕ್ತಿಯ ಅಧಿಕಾರವು ಸಾರ್ವಜನಿಕ ಬಲವನ್ನು ಅಂಧವಾಗಿಸಿಕೊಳ್ಳುವ ಶಕ್ತಿಯ ಮೇಲೆ ಹೊಂದಿದೆ; ಅಂತಹ ಶಕ್ತಿಯೂ ಎಲ್ಲರಿಗೂ ಇರುವುದಿಲ್ಲ; ಈ ಶಕ್ತಿಯ ಅಭಾವದಲ್ಲಿ ದಬ್ಬಾಳಿಕೆಯೇ ವ್ಯಕ್ತಿಯ ಅಧಿಕಾರವನ್ನು ರಕ್ಷಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಅಧಿಕ ಸಂಖ್ಯಾಕ ಆಡಳಿತಗಳಲ್ಲಿ ಈ ದಬ್ಬಾಳಿಕೆಯೇ ಸರ್ವ ಸ್ವತಂತ್ರವಾದ ಅಧಿಕಾರ ಅಥವಾ ರಾಜನ ರಕ್ಷಣೆಯಾಗಿದ್ದಿತು.

ಈ ಕಾಲದಲ್ಲಿಯೂ ಈ ವ್ಯಕ್ತಿಯ ಅಧಿಕಾರವು ಇಲ್ಲವೆಂದಿಲ್ಲ. ಡಿಕ್ಟೇಟರ Dictator, ಅಥವಾ ಸಂಪೂರ್ಣಾಧಿಕಾರಿ ಎಂಬುದೂ ಈ ವ್ಯಕ್ತಿಯ ಆಡಳಿತದ ಹೊಸನಿದರ್ಶನವಾಗಿರುತ್ತದೆ. ಇಟೇಲಿಯ ಮುಸ್ಸೊಲೀನಿಯೂ, ಸ್ಪೈನಿನ ರಿವೇರನೂ ಈ ದಬ್ಬಾಳಿಕೆಯ ಆಧಾರದ ಮೇಲೆ ಆಡಳಿತದ ಸ್ಥಾಯಿತ್ವವನ್ನು ಕಟ್ಟಿರುವ ವ್ಯಕ್ತಿಗಳಾಗಿರುವರು. ಆದರೆ ಇಂತಹ ಆಡಳಿತವು ಹೆಚ್ಚು ಕಾಲ ಬಾಳಲಾರದು; ಹೆಚ್ಚಾದರೆ ಈ ವ್ಯಕ್ತಿಗಳ ಜೀವಮಾನದ ವರೆಗೆ ಮಾತ್ರವೇ ಬಾಳಬಹುದು; ಅವರಲ್ಲೂ ಈ ವ್ಯಕ್ತಿಗಳು ನೈಸರ್ಗಿಕ ಮೃತ್ಯುವನ್ನು ಹೊಂದುವುದೇ ಅಪರೂಪ; ಯಾರಾದರೊಬ್ಬರು ಅವರನ್ನು ಅವಷ್ಟು ಬೇಗನೆ ನಾಶಪಡಿಸಲು ಪ್ರಯತ್ನಿಸದೆ ಇರುವುದಿಲ್ಲ.

ರಾಜಕೀಯ ದಬ್ಬಾಳಿಕೆಯು ಈ ರೀತಿಯಲ್ಲಿ ಹೆಚ್ಚುಕಾಲ ಬಾಳಲಾರದಂತಹವುದು. ಆದರೆ ಎಲ್ಲಾ ದಬ್ಬಾಳಿಕೆಗಳೂ ಇದೇ ರೀತಿಯ ಅಲ್ಪ ಜೀವಿಗಳಲ್ಲ. ಇಂತಹ ಚಿರಕಾಲ ಬಾಳಬಹುದಾದ ದಬ್ಬಾಳಿಕೆಗಳಲ್ಲಿ ಪುಸ್ತಕಗಳ ದಬ್ಬಾಳಿಕೆಯೇ ಮೊದಲನೆಯದು. ಚೆನ್ನಾಗಿ ಆಲೋಚಿಸಿದರೆ ಪುಸ್ತಕದ ದಬ್ಬಾಳಿಕೆಯಷ್ಟು ಪರಿಣಾಮಕಾರಿಯೂ, ಹೆಚ್ಚು ಕಾಲ ಬಾಳುವಂತಹುದೂ ಆದ ಇನ್ನೊಂದು ತರದ ದಬ್ಬಾಳಿಕೆ ಇರುವುದಿಲ್ಲ.

ಒಂದು ರಾಜ್ಯದಲ್ಲಿ ವ್ಯಕ್ತಿಯೊಬ್ಬನು ಸರ್ವಾಧಿಕಾರವನ್ನು ವಹಿಸಿದುದರಿಂದ ಹೆಚ್ಚಿನ ಪ್ರಯೋಜನವಾಗಬಹುದು. ಅವಿರೋಧವಾಗಿ, ಕ್ಷಿಪ್ರಪ್ರಕಾರ, ರಾಷ್ಟ್ರೀಯ ಹಿತವನ್ನು ಒಂದು ವ್ಯಕ್ತಿಯು ಸಾಧಿಸುವಷ್ಟು ಸುಲಭವಾಗಿಯೂ, ಶೀಘ್ರವಾಗಿಯೂ, ಪ್ರಜಾಸತ್ತಾತ್ಮಕ ಅಧಿಕಾರವು ಸಾಧಿಸಲಾರದು, [illegible] ಸಮಯದಲ್ಲಿ [illegible] ರಾಷ್ಟ್ರಕ್ಕೆ [illegible] ಸರ್ವಾಧಿಕಾರಿ (Dictator)ಯು ಬೇಕಾಗುತ್ತಾನೆ. [illegible] ಇಂಗ್ಲೆಂಡಿನಲ್ಲಿ, ಜನರಿಗೆ ಅಸಹನೀಯವಾದ ಚಾರ್ಲ್ಸ್ [illegible] ಏಕಾಧಿಕಾರಕ್ಕೆ [illegible] ಆ ಸಮಯದಲ್ಲಿ ಕ್ರಾಮ್‌ವೆಲ್ ಎಂಬವನು ಮುಂದೆ ಬಂದು ಪಾರ್ಲಿಮೆಂಟ್ ಮೆಂಬರರನ್ನೆಲ್ಲಾ ಹೌಸ್ ಒಫ್ ಕಾಮನ್ಸಿನಿಂದ ಓಡಿಸಿ ರಾಜ್ಯ ಸೂತ್ರವನ್ನು ತನ್ನ ಕೈವಶ ಮಾಡಿಕೊಂಡನು. ಆದರೆ ಈ ದಬ್ಬಾಳಿಕೆಯ ರಾಜ್ಯಾಡಳಿತವು ಜನಾಂಗದ ತಯಾರಿಗಾಗಿ ಸ್ವಲ್ಪ ಸಮಯಕ್ಕಾಗಿ ಮಾತ್ರವೇ ಹಿತಕರವಿರಬಹುದಲ್ಲದೆ ಸದಾಕಾಲಕ್ಕಾಗಿ ಇದು ಹಿತಕರವಾಗಲಾರದು. ಫಲತಃ ಇದು ಹೆಚ್ಚುಕಾಲ ಬಾಳುವುದೂ ಇಲ್ಲ.

ಅದೇ ಪ್ರಕಾರ ಮನುಷ್ಯನ ಜ್ಞಾನವಿಕಾಸಕ್ಕಾಗಿ ಹಲವು ಸೂತ್ರಗಳೂ, ಕರ್ಮಗಳೂ, ಶಾಸ್ತ್ರಗಳೂ, ಬೋಧೆಗಳೂ ಸರ್ವಾಧಿಕಾರದೊಡನೆ ಮನುಷ್ಯನಿಗೆ ಕೊಡಲ್ಪಟ್ಟಿವೆ. ಮನುಷ್ಯನ ರಾಜಕೀಯ ಜೀವನವು ಹೇಗೆ ಕಾನೂನು, ಕಾಯಿದೆಗಳ ನಿರ್ಬಂಧವಿಲ್ಲದೆ ಸಾಗಲಾರದೋ, ಅವನ ಧಾರ್ಮಿಕ ಜೀವನವೂ ಹಾಗೆಯೇ ಧಾರ್ಮಿಕ ಸೂತ್ರಕ್ರಮಗಳಿಲ್ಲದೆ ಸಾಗಲಾರವು. ಆದರೆ ಅಂತಹ ಸೂತ್ರಕ್ರಮಗಳು ಮನುಷ್ಯನ ಪ್ರಗತಿಗೂ, ಸಾಂಸ್ಕೃತಿಗೂ, ಅನುಸಾರವಾಗಿ ಬದಲಾವಣೆಯನ್ನು ಹೊಂದಲಾರವು ಎಂಬ ವಿಷಯವೇ ಈ ಪ್ರಕಾರದ ದಬ್ಬಾಳಿಕೆಯ ಕಾರಣವಾಗಿರುತ್ತದೆ. ಹಿಂದೂವಿಗೆ ಅಖಂಡವೂ ದೇವನಿರ್ಮಿತವೂ ಆದ ವೇದಗಳಿರುತ್ತವೆ; ಮುಸಲ್ಮಾನರಿಗೆ ಏನೊಂದೂ ಹೆಚ್ಚುಕಡಿಮೆ ಮಾಡಲಾಗದ ಕುರಾನು ಇದೆ; ಕ್ರೈಸ್ತೀಯರಿಗೆ ಪವಿತ್ರವಾದ ಬೈಬಲು ಇದೆ; ಈ ರೀತಿಯಲ್ಲಿ ಒಂದೊಂದು ಮತೀಯರಿಗೆ ಒಂದು ಪವಿತ್ರವೂ ಪರಿವರ್ತಿಸಲ್ಪಡಲಾಗದವೂ ಆದ ಗ್ರಂಥಗಳಿವೆ; ಮತ್ತು ಈ ಗ್ರಂಥಗಳು ಪುನಃ ಅವುಗಳ ಟೀಕಾಕಾರರಿಂದಲೂ, ಧರ್ಮಪ್ರಸಾರಕರಿಂದಲೂ, ಪುಷ್ಟೀಕರಿಸಲ್ಪಟ್ಟ ಕ್ರಮಕಟ್ಟಲೆಗಳ ನಿರ್ಮಾಣವಾಗಿರುತ್ತದೆ.

ಪ್ರತಿ ಮತೀಯರೂ ತಮ್ಮ ಗ್ರಂಥಗಳು ದೇವರಿಂದಲೇ ಬಂದುವುವೆಂಬುದರ ಮೇಲೆಯೇ ಆ ಗ್ರಂಥಗಳ ಸರ್ವಾಧಿಕಾರದ ಅಡಿಗಟ್ಟನ್ನು ಕಟ್ಟಿರುವರು. ಒಬ್ಬರೇ ದೇವರಿಂದ ಹಲವು ಮತ ಗ್ರಂಥಗಳು ಬರಲಾರವೆಂಬುದನ್ನು ಎಲ್ಲರೂ ತಿಳಿದಿರುವರಾದರೂ, ಇತರರ ಗ್ರಂಥಗಳು ಸುಳ್ಳು ಎಂಬ ಇನ್ನೊಂದು ಆಧಾರದ ಮೇಲೆ ಆಯಾ ಮತೀಯರು ತಮ್ಮ ಮತಗ್ರಂಥದ ಮಹತ್ವವನ್ನು ಸ್ಥಾಪಿಸುವರು. ಮತಗ್ರಂಥಗಳು ನಿಜ ಅಥವಾ ಸುಳ್ಳು ಎಂಬುದನ್ನು ತರ್ಕಿಸುವುದು ನಮ್ಮ ಪ್ರಸ್ತುತ ಉದ್ದೇಶವಲ್ಲ. ಆದರೆ ಈ ಗ್ರಂಥಗಳು ಮಾನವ ಮಾನಸಿಕತೆಯ ಮೇಲೆ ಬಲವಾದ ಹಿಡಿತವನ್ನಿಟ್ಟಿದ್ದಿವೆ ಎಂಬುದರಿಂದ ಅವುಗಳು ಮನುಷ್ಯನ ಪ್ರಗತಿಗೂ ವಿಕಾಸಕ್ಕೂ ಪ್ರತಿಬಂಧಕಗಳಾಗಿವೆ ಎಂಬುದನ್ನು ನಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಆಧುನಿಕ ವಿಜ್ಞಾನದ ಮೂಲ ಪುರುಷರಲ್ಲೊಬ್ಬನಾದ ಗೆಲಿಲಿಯೊನು ಭೂಮಿಯು ಸೂರ್ಯನ ಸುತ್ತು ತಿರುಗುತ್ತಿದೆ ಎಂದು ಸ್ಥಾಪಿಸಿದುದಕ್ಕೆ ಕ್ರೈಸ್ತೀಯರ ಕೈಯಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕಾಯಿತು. ಹಾಗೆಯೇ ಪ್ರತಿಮತದಲ್ಲಿ ನೂತನ ಸಂಸ್ಕೃತಿಯ ಬೆಳಕನ್ನು ಹೊತ್ತಿಸಲು ಯತ್ನಿಸಿದವರೆಲ್ಲರೂ ಕಷ್ಟನಷ್ಟಗಳಿಗೆ ಗುರಿಯಾಗಿರುವರು. ಈಗ ಹಿಂದೂಸ್ಥಾನದೊಳಗಣ ಹಿಂದೂ—ಮುಸಲ್ಮಾನ ಕಲಹವೂ ಒಂದು ಮತವು ಇನ್ನೊಂದರ ಮೇಲೆ ನಡೆಸುವ ದಬ್ಬಾಳಿಕೆಯಲ್ಲದೆ ಬೇರೆಯಲ್ಲ. ಇವೆಲ್ಲವುಗಳಿಗೆ ಆಧಾರವು ಅವಿಚಲವಾದ ಮೂಲ ಗ್ರಂಥಗಳಾಗಿವೆ. ನಿಜವಾಗಿ ನೋಡಿದರೆ ಈ ಗ್ರಂಥಗಳು ಮಾನವನ ಮಾನಸಿಕತೆಯನ್ನು ಜ್ಞಾನಿಗಳಲ್ಲಿ ಎಷ್ಟು ಮಹತ್ವಕ್ಕೇರಿಸಿವೆಯೊ, ಅಧಿಕ ಸಂಖ್ಯಾಕರಾದ ಅಜ್ಞಾನಿಗಳಲ್ಲಿ ಅಷ್ಟೇ ಪಶುರೂಪಕ್ಕೆ ಇಳಿಸಿದ್ದಿವೆ.

ಗ್ರಂಥಗಳು ಪವಿತ್ರವಿವೆ. ಅವು ಧಾರ್ಮಿಕ ಜೀವನದ ಸೆಲೆಯಾಗಿವೆ; ಇದನ್ನು ನಾವು ಒಪ್ಪುವೆವು. ಆದರೆ ರಾಷ್ಟ್ರಹಿತದ ಹೆಸರಿನಲ್ಲಿ ಒಬ್ಬ ಇಟೇಲಿಯ ಮುಸ್ಸೋಲಿನಿಯು ವಿರೋಧಪಕ್ಷವನ್ನು ತುಳಿಗಳೆದಂತೆಯೇ, ಸ್ಪೈನಿನ ಒಬ್ಬ ರಿವೇರನು ವಿಶ್ವವಿದ್ಯಾಲಯಗಳನ್ನೆಲ್ಲಾ ಮುಚ್ಚಿಸಿದ್ದಂತೆಯೂ, ಧರ್ಮದ ಹೆಸರಿನಲ್ಲಿ ಈ ಗ್ರಂಥಗಳು ಅಧರ್ಮದ ಕಾರ್ಯಗಳನ್ನು ಮಾಡಿಸಿವೆ. ಧರ್ಮಾಂಧರೊಳಗೆ ಧರ್ಮಗ್ರಂಥಗಳ ಈ ದಬ್ಬಾಳಿಕೆಯ ಭಾವವು ಕಡಿಮೆಯಾದರೆ ಮಾತ್ರವೇ ದೇಶವೂ, ಜನತೆಯೂ ಐಕ್ಯವನ್ನೂ ಜಾಗೃತಿಯನ್ನೂ ಹೊಂದಬಲ್ಲುದು.

[illegible] ವರ್ತಮಾನ.

— [illegible]

— ಚೀನಾ ದೇಶದಲ್ಲಿ ಬರಬಂದು ಬಹು ತೊಂದರೆಗೀಡಾದುದರಿಂದ, ಕೆಲವರು ಮಕ್ಕಳನ್ನೇ ತಿಂದಿರುವರಂತೆ. ಜನಸಂಖ್ಯೆಯ ಸುಮಾರು [illegible] ಎಂಬತ್ತು ಲಕ್ಷ ಜನರಿಗೆ ತಿನ್ನಲಿಕ್ಕೆ ಆಹಾರವಿಲ್ಲದೆ ಕಷ್ಟಪಡುತ್ತಿರುವರು. ಪ್ರಾಂತಿಕ ರಾಜಧಾನಿಯಾದ ಲೆಂಚು ಎಂಬಲ್ಲಿ ಸುಮಾರು ಮುನ್ನೂರಕ್ಕೆ ಮಿಕ್ಕಿ ಜನರು ಸಾಯುತ್ತಿರುವರಲ್ಲದೆ ಸತ್ತವರನ್ನು ಹುಗಿಯುವಷ್ಟು ಶಕ್ತಿಯು ಬದುಕಿ ಇರುವವರಿಗೆ ಇರುವುದಿಲ್ಲ. ಇದೆಲ್ಲ ಚೈನದ ಕಾನ್ಸು ಎಂಬ ಪ್ರಾಂತದಲ್ಲಾಗಿದೆ.

— ಡನ್ಲಪ್ ರಬ್ಬರ್ ಕಂಪೆನಿಯವರ ಸಾಮಾನ್ಯ ಪಾಲುಗಳ ಮೇಲೆ ಶೇಕಡಾ [illegible]ರಂತೆ ಕೊಡುತ್ತಿದ್ದ ಡಿವಿಡೆಂಡನ್ನು [illegible]ರ ದರಕ್ಕೆ ಇಳಿಸಿರುವರು.

— ಅಮೇರಿಕದ ಚಿಕಾಗೊ ಎಂಬಲ್ಲಿ ಮಕ್ಕಳ ಹೆತ್ತವರು ಮಕ್ಕಳ ಕುರಿತಾಗಿ ಸರಿಯಾಗಿ ಜಾಗ್ರತೆಯನ್ನು ವಹಿಸುವದಿಲ್ಲವೆಂದು [illegible] ಮಂದಿ ಹೆತ್ತವರು ಕೈದುಮಾಡಲ್ಪಟ್ಟಿರುವರು. [illegible] ಜನರಿಗೆ ಜುಲುಮಾನೆ ವಿಧಿಸಲ್ಪಟ್ಟಿರುತ್ತದೆ. ಇಬ್ಬರಿಗೆ ಶಿಕ್ಷೆ ವಿಧಿಸಲ್ಪಟ್ಟಿರುತ್ತದೆ. ಹೆತ್ತವರ ಅಜಾಗ್ರತೆಯ ಕಾರಣದಿಂದಲೇ ಮಕ್ಕಳು [illegible] ರೆಂಬು ಅಲ್ಲಿ ಸರಿಯಾದ ನಿದರ್ಶನಗಳೆಷ್ಟೋ ದೊರಕಿರುವವು.

— ಸ್ಪೈನು ದೇಶದ ಕಾಡುಗಳಲ್ಲಿ ಬೆಂಕಿಯು ಹಬ್ಬಿ, ಆ ಬೆಂಕಿಯು ಹೊಲಗಳಿಗೆ ವ್ಯಾಪಿಸಿ ಬಹಳ ನಷ್ಟವನ್ನುಂಟುಮಾಡಿರುತ್ತದೆ. ಬೆಂಕಿಯನ್ನು ನಂದಿಸಲು ಕೂಡ ಸಾಧ್ಯವಿರುವುದಿಲ್ಲ. ಅಲ್ಲಿಯ ನಿವಾಸಿಕರು ಬೆಂಕಿಗೆ ಹೆದರಿ ಮನೆಗಳನ್ನು ಬಿಟ್ಟು ಹೋಗುತ್ತಿರುವರು. ತಂತಿವಾರ್ತೆ ಮೊದಲಾದುವುಗಳು ಈಗ ನಿಲ್ಲಿಸಲ್ಪಟ್ಟಿವೆ. ಇದುವರೆಗೆ ಪ್ರಾಣನಷ್ಟವುಂಟಾಗಿಲ್ಲ.

— ಮನ್‌ಕೋರ್ಟಿನ ಲಂಕಶಾಯರಿನ ಪೋಲಿಸ್ ಸ್ಟೇಶನಿನಲ್ಲಿ, ಅಲ್ಲಿಯ ಪೋಲೀಸ ಮುಖ್ಯಸ್ಥನಾದ ಸುಪರಿಂಟೆಂಡೆಂಟ ಚಾರ್ಲ್ಸ ಹೇವರ್ಸನ್‌ಬಾಕನು ಮತ್ತು ಆತನ ಒಬ್ಬನೇ ಒಬ್ಬ ಮಗನಾದ ರೆವರೆಂಡ್ ಫ್ರಾಂಕ ಹೇವರ್ಸನ್‌ಬಾಕರೂ ವಧಿಸಲ್ಪಟ್ಟು ಪೋಲೀಸ್ ಸ್ಟೇಶನಿನೊಳಗೆ ಅವರ ಪ್ರೇತದೇಹಗಳು ಸಿಕ್ಕಿದ್ದುವು. ಅವರು ಬೇರೆಬೇರೆ ಕಡೆಗಳಲ್ಲಿಟ್ಟ ಗುಂಡುಗಳನ್ನು ಪರೀಕ್ಷಿಸುತ್ತಿದ್ದರು. ಗುಂಡುಗಳಲ್ಲಿ ಮದ್ದು ತುಂಬಿರುವರೆಂಬ ಪರಿವೆಯಿಲ್ಲದೆ ಮಗನು ಒಂದು ಗುಂಡನ್ನು ಮುಟ್ಟಿದೊಡನೆ ಅದು ಥಟ್ಟನೆ ಒಡೆದು ಗುಂಡು ಮಗನ ಶರೀರವನ್ನು ಪ್ರವೇಶಿಸಿತು. ದಾಕ್ತರರನ್ನು ಕರೆಯ ಕಳುಹಿದೊಡನೆ ಇನ್ನೊಂದೆಡೆಯಲ್ಲಿ ಗುಂಡು ಹಾರಿ ತಂದೆಗೂ ತಗಲಿತು. ಇಬ್ಬರೂ ನಿಮಿಷಮಾತ್ರದೊಳಗೆ ಮೃತಪಟ್ಟರು.

— [illegible]ನದಿಂದ ಹೊರಟ ಟಪ್ಪಾಲಿನ ಎರಡನೆಯ ವಿಮಾನವು ಕರಾಚಿಗೆ ಬಂದು ತಲಪಿತು. ಕಳೆದ ಸಲ ತರಲ್ಪಟ್ಟ ಟಪ್ಪಾಲಿಗಿಂತ ಒಂದು ಸಾವಿರ ಕಾಗದಗಳು ಈ ಸಲ ಹೆಚ್ಚಿಗೆ ಇದ್ದುವಂತೆ.

— ಹೌಸ್ ಒಫ್ ಕಾಮನ್ಸಿನಲ್ಲಿ ಮಿ. ಚರ್ಚಿಲರವರು ಕಳೆದ ಸೋಮವಾರ ಬ್ರಿಟಿಷ ಬಜೆಟಿನ ವಿಷಯವಾಗಿ ಭಾಷಣವಿತ್ತರು. ೧೯೨೮-೨೯ರ ಅಂದಾಜು ಬಜೆಟ ೭೮೧,೯೬೪,೦೦೦ ಪವನುಗಳಾಗಬಹುದೆಂದೂ, ಈಗಿರುವ ಉತ್ಪತ್ತಿ ಸಾಧನಗಳಿಂದ ೮೦೪,೯೪೦,೦೦೦ ಪವನುಗಳು ಉತ್ಪತ್ತಿಯಾಗಬಹುದೆಂದೂ, ಈ ಕಾರಣದಿಂದ ೨೨,೯೭೬,೦೦೦, ಪವನುಗಳು ಹೆಚ್ಚಿಗೆ ಬರಬಹುದೆಂದೂ ಅವರು ವಿವರಿಸಿದರು.

— ಜಗತ್ತಿನಲ್ಲಿ ಬಹು ಸಣ್ಣದಾದ ಪುಸ್ತಕವೆಂದರೆ ಎಡ್ವರ್ಡ ಫಿಟ್ಸ್‌ಜೆರಾಲ್ಡರಿಂದ ಭಾಷಾಂತರಿಸಲ್ಪಟ್ಟ ಒಮರಖಯ್ಯಾಮನ ಪ್ರತಿಯು. ಇದು ೧೯೦೦ನೇ ಇಸವಿಯಲ್ಲಿ ಪ್ರಕಟಿಸಲ್ಪಟ್ಟಿತು. [illegible] ಇಂಚು ಚಚ್ಚೌಕವಾಗಿದ್ದು [illegible] ಇಂಚು ದಪ್ಪವಾಗಿರುತ್ತದೆ. ನ್ಯೂಯೋರ್ಕಿನ ಲ್ಯಾಬ್ರರಿಯಲ್ಲಿ ಇದು ಪ್ರದರ್ಶನಕ್ಕೆ ಇಡಲ್ಪಟ್ಟಿರುತ್ತದೆ.

— ಯುನ್ಯಾಟೆಡ್ ಸ್ಟೇಟ್ಸನಷ್ಟು ಭಯಂಕರವಾದ ದೇಶವು ಇನ್ನಾವುದೂ ಇರುವುದಿಲ್ಲವಂತೆ. ಅಲ್ಲಿ ಪ್ರತಿವರುಷವೂ ಒಂಭತ್ತು ಸಾವಿರಕ್ಕೆ ಮಿಕ್ಕಿದ ಕೊಲೆಗಳಾಗುತ್ತಿರುವವು. ಈ ಕೊಲೆಗಳ ಪ್ರತಿ ಆರರಲ್ಲಿ [illegible] ಕೊಲೆಗಳ ವಿಷಯದಲ್ಲಿ ತನಿಖೆ ನಡೆಯುವದು. ಗ್ರೇಟಬ್ರಿಟನಿನೊಂದಿಗೆ ಸರಿತೋರಿಸಿದರೆ, ಅಲ್ಲಿಗಿಂತ ಐವತ್ತು ಪಾಲು ಹೆಚ್ಚು ಅನ್ಯಾಯಗಳು ಯುನ್ಯಾಟೆಡ್ ಸ್ಟೇಟ್ಸನಲ್ಲಿ ನಡೆಯುವವು. ಈಗೀಗ ಮದ್ಯಪಾನ ನಿಷೇಧದ ಚಳವಳಿ ಕಾರಣದಿಂದ ಕೊಲೆಗಳ ಸಂಖ್ಯೆಯು ಕಡಿಮೆಯಾಗಿರುವುದು.

— ಏಪ್ರಿಲ್ ೧೫ನೇ ತಾರೀಕಿನ ದಿನ ಬ್ರಿಟನಿನಲ್ಲಿ ನಿರುದ್ಯೋಗಿಗಳ ಸಂಖ್ಯೆಯು ೧,೧೫೪,೦೦೦, ಆಗಿದ್ದಿತು. ಈ ಸಂಖ್ಯೆಯು ಕಳೆದ ವಾರದ ಸಂಖ್ಯೆಗಿಂತ ೨೪,೧೫೬ಕ್ಕೆ ಕಡಿಮೆ. ಆದರೆ ಕಳೆದ ವರುಷಕ್ಕಿಂತ ೬೯,೭೨೨ ಹೆಚ್ಚು.

— ಬ್ರಿಟನಿನಲ್ಲಿ ಜನರನ್ನು ಒಂದೂರಿನಿಂದ ಇನ್ನೊಂದೂರಿಗೆ ಕೊಂಡೊಯ್ಯುವ ಏರೋ ಸರ್ವಿಸಿನ ಪ್ರಾರಂಭೋತ್ಸವವು ಮೆಂಚೆಸ್ಟರಿನಲ್ಲಿ ಜರಗಿಸಲ್ಪಟ್ಟಿತು. ಮೆಂಚೆಸ್ಟರಿನಿಂದ ಪ್ರಯಾಣಿಕರನ್ನೂ ಸಾಮಾನನ್ನೂ ಒಳಕೊಂಡ ವಿಮಾನಗಳು ಯಾವ ಪಟ್ಟಣಕ್ಕಾದರೂ ಹಾರಿಹೋಗಲು ಸಿದ್ಧವಿರುವವು.

ಒಳದೇಶ ವರ್ತಮಾನ.

— ಬನಾರಸಿನಲ್ಲಿ ವಾಂತಿಭೇದಿಯ ರೋಗವು ಮೊದಲಿಗಿಂತಲೂ ಸ್ವಲ್ಪ ಅಭಿವೃದ್ಧಿಯುಂಟಾಗಿರುತ್ತದೆ. ಮೇ ೯ನೇ ತಾರೀಕಿನ ದಿನ ನಡೆಯುವ ಸೂರ್ಯಗ್ರಹಣದ ಸಮಯ ಯಾತ್ರಿಕರು ಕಾಶೀಕ್ಷೇತ್ರವನ್ನು ಸಂದರ್ಶಿಸದೆ ಇರುವುದು ಉತ್ತಮವೆಂದು ಅಲ್ಲಿಯ ಆರೋಗ್ಯ ಅಧಿಕಾರಿಯವರು ಸೂಚಿಸುವರು. ಸಿಡುಬು ರೋಗದಿಂದಲೂ ಮರಣಗಳುಂಟಾಗುತ್ತವೆ.

— [illegible]

— [illegible] ಇಲ್ಲಿರು [illegible] ಹುಡುಗರು [illegible] ಅವರ ಅಲ್ಲಿ ಒಬ್ಬನ ಮರ [illegible] ಅವರೊಳಗೆ ದ್ವೇಷವುಂಟಾಯಿತು. ಹಿಂದೂ ಹುಡುಗನು ಮುಸಲ್ಮಾನ ಹುಡುಗನನ್ನು ಹೊಡೆದು ತನ್ನ ಮನೆಗೆ ಓಡಿಹೋಗಿ ಅಡಗಿ ಕೂತನು. ಮುಸಲ್ಮಾನ ಹುಡುಗನು ಮನೆಗೆ ಬಂದು ಈ ಸಂಗತಿಯನ್ನು ತನ್ನ ತಂದೆಗೆ ತಿಳಿಸಲಾಗಿ ಅತನಿಗೆ ಸಿಟ್ಟು ಬಂದು ಹಿಂದೂ ಹುಡುಗನ ಮನೆಯ ಕಡೆಗೆ ಹೋಗಿ ತನ್ನ ಬಾಕು [illegible] ಒಳಗೆ ಪ್ರವೇಶಿಸಿ ಹಿಂದೂ ಹುಡುಗನನ್ನು ಎಳೆದು ತಂದು ಅವನಿಗೆ ನಿರ್ದಯನಾಗಿ, ಹೊಡೆದುದರಿಂದ ಹಿಂದೂ ಹುಡುಗನು ಅಲ್ಲಿಯೇ ಮೃತಪಟ್ಟನು. ಈಗ ಮುಸಲ್ಮಾನನ ವಿಚಾರಣೆಯಾಗುತ್ತಿದೆ.

— ಮಲಬಾರು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಆಫೀಸಿಗೆ ಬೇಕಾದ ಸಾಮಗ್ರಿಗಳಲ್ಲಿ ಸ್ವದೇಶಿ ಸಾಮಗ್ರಿಗಳನ್ನೇ ಅನುಕೂಲವಿರುವಷ್ಟರ ಮಟ್ಟಿಗೆ ಉಪಯೋಗಿಸಬೇಕೆಂದು ನಿರ್ಣಯಿಸಿರುವರು.

— ಕೊಯಮುತ್ತೂರಿನ ಎರಡು ಗಿರಣಿಗಳಲ್ಲಿ ಪ್ರಾರಂಭವಾದ ಮುಷ್ಕರವು ಇನ್ನೂ ಕೊನೆಗೊಂಡಿಲ್ಲ. ಕೆಲವು ದಿನಗಳ ಹಿಂದೆ ಮದರಾಸಿನ ಕಾರ್ಮಿಕ ಧುರೀಣರೊಬ್ಬರು ಅಲ್ಲಿಗೆ ಬಂದು ನೌಕರರ ಸಂಬಳವನ್ನು [illegible]ಸುವದನ್ನು ಖಂಡಿಸದ ವಿನಹ ಮುಷ್ಕರವನ್ನು ನಿಲ್ಲಿಸುವದು ಸರಿಯಲ್ಲವೆಂದು ಮುಷ್ಕರಗಾರರಿಗೆ ವಿವರಿಸಿ ಹೇಳಿದರು. ಇತರ ಗಿರಣಿಗಳಲ್ಲಿನ ಉದಾಹರಣೆಗಳನ್ನೂ, ಮುಷ್ಕರಗಳಿಂದ ಅವರು ವಿಜಯಿಗಳಾದುದನ್ನೂ, ಅವರ ಕಣ್ಣ ಮುಂದೆ ಇಟ್ಟು ಮುಷ್ಕರವು ಇನ್ನೂ ಬಲಗೊಳ್ಳುವಂತೆ ಮಾಡಿದರು.

— ಕಳೆದ ಫೆಬ್ರವರಿ ತಿಂಗಳಲ್ಲಿ ಬೊಂಬಾಯಿಯಲ್ಲಾದ ಗಲಾಟೆಯ ಕುರಿತಾಗಿ ವಿಚಾರಣೆಯನ್ನು ನಡೆಸಲು ಒಂದು ಕಮಿಟಿಯು ನೇಮಿಸಲ್ಪಟ್ಟಿರುತ್ತದೆ. ಗಲಭೆಯುಂಟಾಗಲು ಕಾರಣ, ಅದರ ವಿವರ, ಅವುಗಳನ್ನು ನಿಲ್ಲಿಸಲು ಸರಕಾರದವರು ಕೈಕೊಂಡ ಉಪಾಯ ಇವುಗಳೆಲ್ಲವೂ ವಿಚಾರಿಸಲ್ಪಡುವವು. ಊರಿನವರಲ್ಲಿ ಯಾರಾದರೂ ತಮ್ಮ ಸಾಕ್ಷ್ಯಗಳನ್ನು ಕೊಡಲು ಬಯಸುವವರಾಗಿದ್ದರೆ ಅದನ್ನು ಮೊದಲೇ ಕಾರ್ಯದರ್ಶಿಯವರಿಗೆ ತಿಳಿಸಬೇಕಂತೆ.

— ಕೊಮಿಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ [illegible] ಮೌಲ್ವಿ ಮುಜಿಬುರ್ ರಹಮಾನರೆಂಬುವರು ಸೆರೆಮಾಡಲ್ಪಟ್ಟು ಐದು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು. ಇವರು ಕಾಂಗ್ರೆಸ್ಸಿನ ಪರವಾಗಿ ಚೆನ್ನಾಗಿ ಕೆಲಸಮಾಡುತ್ತಿದ್ದರು. ತಿಪ್ಪೆರಾ ರೈತರ ಸಂಘದ ಅಧ್ಯಕ್ಷರು. ಯಾವ ಕಾರಣದ ಮೇಲೆ ಸೆರೆಮಾಡಲ್ಪಟ್ಟರೆಂದು ತಿಳಿಯುವುದಿಲ್ಲ.

— ಮದರಾಸಿನಲ್ಲಿ ಕೆಲವು ದಿನಗಳಿಂದ ಅಂಗಡಿಗಾರರನ್ನು ಮೋಸಪಡಿಸಲು ಒಂದು ತಂಗಡವು ಹೊರಟಿರುವದು. ಇವರು ಉತ್ತಮವಾದ ಉಡಿಗೆಯನ್ನುಟ್ಟು ಅಂಗಡಿಗಳಿಗೆ ಬಂದು ಅಂಗಡಿಗಾರರನ್ನು ವಂಚಿಸುವರು. ಇದೇ ರೀತಿ ಟ್ರಿಪ್ಲಿಕೇನಿನಲ್ಲಿ ಕಾಂಚ್ಯ ಪಾತ್ರೆಗಳ ವ್ಯಾಪಾರಿಯೊಬ್ಬನ ಅಂಗಡಿಗೆ ಒಬ್ಬ ಯೋಗ್ಯ ಉಡಿಗೆತೊಡಿಗೆಗಳನ್ನುಟ್ಟ ವ್ಯಕ್ತಿಯೊಬ್ಬನು ಬಂದು [illegible] ರೂಪಾಯಿಯ ಪಾತ್ರೆಗಳನ್ನು ಕೊಂಡು, ಅಂಗಡಿಯವನಿಂದಲೇ [illegible] ರೂಪಾಯಿ ನಗದಾಗಿ ಪಡೆದು ನೂರು ರೂಪಾಯಿಯ ನೋಟನ್ನು ಕಳುಹಿಸುವೆನೆಂದು ಅಂಗಡಿಯ ಒಬ್ಬ ಹುಡುಗನನ್ನು ತನ್ನ ಸಂಗಡ ಕರೆದುಕೊಂಡುಹೋದನು. ಮನೆಗೆ ತಲುಪಿದೊಡನೆ ವ್ಯಕ್ತಿಯು ಈಗಲೇ ಬರುವೆನೆಂದು ಅಲ್ಲಿಯೇ ನಿಲ್ಲಿಸಿ ಮಾಯವಾಗಿಬಿಟ್ಟನು. ಆ ವ್ಯಕ್ತಿಯ ಶೋಧನೆಗಾಗಿ ಪೋಲೀಸರು ಪ್ರಯತ್ನಿಸುತ್ತಿರುವರು. ಇಷ್ಟು ಎಲ್ಲರೂ ಜಾಗರೂಕರಾಗಿರಬೇಕಾಗಿ ಪೋಲೀಸರು ವ್ಯಾಪಾರಿಗಳಿಗೆ ನೋಟೀಸು ಕೊಟ್ಟಿರುವರು.

— ಅಹಮದಾಬಾದದ ರೈತರು ತಮ್ಮ ಕಂದಾಯ ವಸೂಲಿಯ ಕುರಿತು ಕೆಲವು ಶರ್ತಗಳನ್ನು ನಮೂದಿಸಿ, ಸರಕಾರಕ್ಕೆ ಅರ್ಜಿ ಮಾಡಿದ್ದರು. ಈ ಮನವಿಗೆ ಸರಕಾರದವರು ಕಿವಿಗೊಡದೆ ಹೋದಪಕ್ಷದಲ್ಲಿ, ವಲ್ಲಭಭಾಯಿ ಪಟೇಲರ ಅಭಿಪ್ರಾಯವನ್ನರಿತು, ಅವರ ಒಪ್ಪಿಗೆಯಾದರೆ ಬಾರ್ಡೋಲಿಯ ಜನರಂತೆ ತೆರಿಗೆ ಕೊಡದಿರುವೆಂಬ ಸತ್ಯಾಗ್ರಹವನ್ನಾಚರಿಸಬೇಕೆಂದು ಅಹಮದಾಬಾದ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿರುವರು.

— ಬಾರಿಸಾಲದ ಸಬ್ ಇನ್ಸ್‌ಪೆಕ್ಟರನಾದ ಜ್ಯೋತಿಷ ಚಂದ್ರರಾಯ ಎಂಬಾತನನ್ನು ಕೊಂದ ತಪ್ಪಿಗಾಗಿ ರಮೇಶ ಚಟರ್ಜಿ ಎಂಬ ವಿದ್ಯಾರ್ಥಿಯ ಮೇಲೆ ಬಾರಿಸಾಲದ ಸೆಶನ್ಸ್ ಜಡ್ಜರವರು ಮರಣದ ಶಿಕ್ಷೆಯನ್ನು ಹೊರಿಸಿರುವರು.

— ಒಂದೆರಡು ದಿನಗಳ ಹಿಂದೆ ಪೇಶಾವರದಲ್ಲಿ ಬೆಂಕಿಯ ಅನಾಹುತದಿಂದ ಮೂರು ಮನೆಗಳು ಸುಟ್ಟು ಬೂದಿಯಾದುವು. [illegible] ಸಾವಿರ ರೂಪಾಯಿಗಳ ನಷ್ಟವುಂಟಾಗಿರುತ್ತದೆಂದು ತಿಳಿದುಬರುತ್ತದೆ. ಇದೇ ತಿಂಗಳಲ್ಲಿ ಪೇಶಾವರದಲ್ಲಿ ಇದೇ ರೀತಿಯ ಬೆಂಕಿಯು ಮೊದಲೊಮ್ಮೆ ವಿಶೇಷ ನಷ್ಟವನ್ನುಂಟುಮಾಡಿತ್ತು.

— ಕಳೆದ ಮಾರ್ಚ [illegible] ತಾರೀಕಿನ ದಿನ ಕಲಕತ್ತೆಯ ಶ್ರದ್ಧಾನಂದ ಪಾರ್ಕಿನಲ್ಲಿ ಮಹಾತ್ಮಾಜಿಯವರು ವಿದೇಶಿ ವಸ್ತ್ರಗಳನ್ನು ಸುಡುವ ಸಂದರ್ಭದಲ್ಲಿ, ಸುರಾಜ ನಾರಾಯಣ ಪುರಿ ಮೊದಲಾದ ಇಪ್ಪತ್ತೈದು ಮಂದಿ ಕಾಂಗ್ರೆಸ್ ಸ್ವಯಂ ಸೇವಕರಿಗೆ, ಅನ್ಯಾಯವಾದ ಸಭೆ ಜರಗಿಸುವಿಕೆ, ಪೋಲೀಸ ಅಧಿಕಾರಿಗಳನ್ನು ಹಿಂಸಿಸುವಿಕೆ, ಎಂಬ ತಪ್ಪಿತದ ಮೇಲೆ ಕಲಕತ್ತೆಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೆ ನೂರು ರೂಪಾಯಿಯಂತೆ ಜುರುಮಾನೆ ವಿಧಿಸಿರುವರು. ಜುರುಮಾನೆ ಕೊಡದಿದ್ದರೆ ಒಂದೊಂದು ತಿಂಗಳ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾಗುವದು.

— ಅರಸಾಳು ಮತ್ತು ಶಿವಮೊಗ್ಗೆಯ ನಡುವೆ ರೈಲಿನಲ್ಲಿ ಕಳೆದ ಶುಕ್ರವಾರ ಭಯಂಕರವಾದ ಟಪ್ಪಾಲಿನ ಕಳವು ನಡೆಯಿತು. ಸುಮಾರು ಹಗಲಿನ [illegible] ಸಮಯ ಯಾರೋ ಮುಸಲ್ಮಾನರಂತೆ ಉಡಿಗೆಯನ್ನುಟ್ಟ ಮನುಷ್ಯನೊಬ್ಬನು ರೈಲಿನ ಟಪ್ಪಾಲು ಗಾಡಿಯನ್ನು ಪ್ರವೇಶಿಸಿದನು. [illegible] ಎಷ್ಟು ಕಳವಾಗಿರುವವೆಂದೂ, ಕಳವಿನ ವಿವರವೂ ತಿಳಿದುಬರುವುದಿಲ್ಲ.

— ಲಾಹೋರಿನಲ್ಲಿ ಸುಮಾರು ಹತ್ತು ವರುಷ ಪ್ರಾಯದ ಬಾಲಕನೊಬ್ಬನ ಕಡೆ ಒಂದು ಪಿಸ್ತೂಲು ಇದ್ದಕಾರಣ ಅವನು ಸೆರೆ ಮಾಡಲ್ಪಟ್ಟಿರುವನು. ಪೋಲೀಸರು ಬಂದು ತನಿಖೆ ಮಾಡುವಾಗ ಆ ಪಿಸ್ತೂಲು ತನ್ನ ತಂದೆಯಿಂದಲೇ ಕೊಡಲ್ಪಟ್ಟಿತೆಂದು ಹುಡುಗನು ಹೇಳಿದನು. ಆದರೆ ತಂದೆಯು ಇದನ್ನು ನಿರಾಕರಿಸಿದನು. ದಕ್ಷಿಣ ಪಂಜಾಬಿನಲ್ಲಿ ಪ್ರಯಾಣ ಮಾಡುವಾಗ ರೈಲಿನಲ್ಲಿ ತನಗೀ ಪಿಸ್ತೂಲು ಸಿಕ್ಕಿತೆಂದು ತಂದೆಯು ಹೇಳಿದ.

— ಸೈಮನ್ ಕಮಿಟಿಯವರು ಇದೇ ತಾರೀಕು [illegible] ಹೊರಟು ಆಂಧ್ರದೇಶವನ್ನು ಸಂಚರಿಸುವರು. ಮೇ ಆರನೇ ತಾರೀಕಿಗೆ ಮದರಾಸಿಗೆ ಹಿಂತಿರುಗಿ ದಕ್ಷಿಣ ದೇಶವನ್ನು ಸಂಚರಿಸಿ ತದನಂತರ ತಮ್ಮ ವರದಿಯನ್ನು ತಯಾರಿಸುವರು.

— ಮನೆ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಉದ್ಯೋಗಿಗಳ ನಿಧಿಯೊಂದನ್ನು ಸ್ಥಾಪಿಸಲು ಹೈದರಾಬಾದಿನ ನಿಜಾಮರವರು ಒಂದು ಕೋಟಿ ರೂಪಾಯಿಗಳನ್ನು ಸಂಕ್ಷನ್ ಮಾಡಿರುವರು. ತನ್ನ ರಾಜ್ಯದ ಕೈಗಾರಿಕೆಗಳನ್ನು ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿಗೊಳಿಸುವ ಸಲುವಾಗಿ ಈ ನಿಧಿಯು ವಿನಿಯೋಗಿಸಲ್ಪಡುವದು.

— ಮುಂಬಾಯಿಯ ಕಾರ್ಪೊರೇಶನಿನ ರೆವಿನ್ಯೂ ಕಮಿಟಿಯವರು ಕಮಿಶನರರ ಒಪ್ಪಿಗೆಯ ಮೇರೆಗೆ ಗೋಡೆಗಳಿಗೆ ಹಚ್ಚುವ ದೊಡ್ಡ ದೊಡ್ಡ ನೋಟೀಸುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿರುವರು. ಈಗಿರುವ ತೆರಿಗೆಯಿಂದ ಸಾಹುಕಾರರೂ, ಸಿನೆಮಾ ಮಂದಿರದವರೂ ಪ್ರಕಟನೆಗಳ ಬಗ್ಗೆ ಹೆಚ್ಚು ಉತ್ಸುಕರಾಗಿಲ್ಲ. ಆದುದರಿಂದ ಅವರ ಉನ್ನತಿಯಾಗಿಲ್ಲ. ಇದೇ ರೀತಿ ಸ್ವದೇಶಿ ಕೈಗಾರಿಕೆಯ ಪ್ರೋತ್ಸಾಹದ ಬಗ್ಗೆ ಕಾರ್ಪೊರೇಶನಿನವರು ಬೇಗನೇ ನಿರ್ಣಯಿಸುವುದರಲ್ಲಿರುವರು.

— ಸಿನ್ಧದ ಯುರೋಪಿಯನರ ಸ್ಮಶಾನದಲ್ಲಿ ಕಲ್ಲಿನ ಗೋರಿಯೊಂದನ್ನು ಕಳೆದ ಶುಕ್ರವಾರ ಯಾರೋ ಅಗೆದಿರುವರಂತೆ. ಶವದ[illegible]ವನ್ನು ಅಗೆದು, ಹಣದ ಪೆಟ್ಟಿಗೆಯ ಹಲಿಗೆಗಳನ್ನು ಸುತ್ತಮುತ್ತಲೂ ಬಿಸಾಡಿದ್ದರಂತೆ. ಈ ಕುರಿತು ಅಪರಾಧಿಗಳನ್ನು ಹಿಡಿಯಲು ಅನುಕೂಲವಾಗುವ ಸಲಹೆಗಳನ್ನು ಕೊಡುವವರಿಗೆ ಒಂದು ಇನಾಮು ಕೊಡಲ್ಪಡುವದು. [illegible]ನೇ ಇಸವಿಯಿಂದ ಇಲ್ಲಿ ಹೆಣಗಳನ್ನು ಹುಗಿಯುತ್ತಿದ್ದರಾದರೂ ಈ ವರೆಗೂ ಇಂತಹ ಕೃತ್ಯವು ನಡೆದಿಲ್ಲವಂತೆ.

— ಮದ್ರಾಸ ರಾಜಪಾಲರ ಕೊಲೆಮಾಡಿದ ಹಮೀದನ ವಿಚಾರಣೆಯು ಕ್ರಿಮಿನಲ್ ಸೆಶನ್ ಕೋರ್ಟಿನಲ್ಲಿ ಆಗುತ್ತಿದೆ.

— ಮುಂಬಾಯಿಯ ಕಲಾಚೌಕಿಯಲ್ಲಿ ಕಳೆದ ಮಂಗಳವಾರ ರಾತ್ರೆ ಹಿಂದೂಮುಸಲ್ಮಾನರೊಳಗೆ ಜಗಳವಾಯಿತು. ಎರಡೂ ಪಕ್ಷದ ಸುಮಾರು ಹತ್ತು ಮಂದಿಗಳಿಗೆ ಜಖಮಾಯಿತು. ಹಿಂದೂಗಳು ಹನುಮಾನ ಜಯಂತಿ ಉತ್ಸವವನ್ನು ಆಚರಿಸುತ್ತಾ ಪಾಲಕಿಯನ್ನು ವಾದ್ಯದೊಂದಿಗೆ ಕೊಂಡೊಯ್ಯುತ್ತಿದ್ದರು. ಮೊದಲನೆಯ ಮೆರವಣಿಗೆಯು ಮುಸಲ್ಮಾನರ ಆಕ್ಷೇಪವಿದ್ದರೂ ಮಸೀದಿಯನ್ನು ದಾಟಿಹೋಯಿತು. ಆದರೆ ಎರಡನೆಯ ಮೆರವಣಿಗೆಯು ಮುಂದರಿಯಲು ಪ್ರಯತ್ನಿಸುವಾಗ ಎರಡೂ ಪಕ್ಷಗಳೊಳಗೆ ಜಗಳವಾಗಿ ಹತ್ತು ಮಂದಿ ಜಖಮ ಹೊಂದಿದರು. ಮುಸಲ್ಮಾನರು ಕಲ್ಲುಗಳನ್ನು ಬಿಸಾಡಿ ಪಾಲಕಿಯಲ್ಲಿನ ವಿಗ್ರಹವನ್ನು ಅಪಹರಿಸಿದರಂತೆ. ಪೋಲೀಸರು ಬಂದು ಜನರನ್ನು ಚದರಿಸಿದರಂತೆ.

— ಚೆನ್ನಪಟ್ಟಣದಲ್ಲಿ ಈ ನಡುವೆ ಉಂಟಾದ ಹಿಂದೂ ಮುಸಲ್ಮಾನರ ಗಲಾಟೆಯ ಸಂಬಂಧದಲ್ಲಿ ಪೋಲೀಸರು [illegible] ಮುಸಲ್ಮಾನರನ್ನೂ, [illegible] ಮಂದಿ ಹಿಂದೂ ಹಳ್ಳಿಗರನ್ನೂ ಸೆರೆಮಾಡಿರುವರು. ಮುಸಲ್ಮಾನ ಪಟ್ಟಣವಾದ ಚೆನ್ನಪಟ್ಟಣಕ್ಕೆ ಯಾವ ಸಾಮಗ್ರಿಗಳೂ ಸುತ್ತಮುತ್ತಲಿನ ಸ್ಥಳಗಳಿಂದ ಬಾರದಂತೆ ಹಿಂದೂಗಳು ಮಾಡಿರುವದರಿಂದ ಚೆನ್ನಪಟ್ಟಣದಲ್ಲಿ ಆಹಾರದ ಸಾಮಗ್ರಿಗಳಿಗೆ ಕ್ರಯವು ಚೆನ್ನಾಗಿ ಬೆಳೆದಿರುತ್ತದೆ.

ದಕ್ಷಿಣ ಕನ್ನಡ.

ಮಂಗಳೂರು: — ವಿಶ್ವಬ್ರಾಹ್ಮಣ ವರ್ಗದಲ್ಲಿ ವಾಚನಾಭಿರುಚಿಯನ್ನುಂಟುಮಾಡಲೆಂದು ಇದುವರೆಗೇ ಸ್ಥಾಪಿತವಾಗಿರುವ "ವಿ. ಬಿ. ರೀಡಿಂಗ್ ರೂಮ್" (ವಾಚಕ ಮಂದಿರ)ದ "ಸಂತೋಷಕೂಟ"ವು ಶ್ರೀ ನಾಗಲಿಂಗ ಸ್ವಾಮಿಯ ಗುರುಮಠದಲ್ಲಿ ಇದೇ ತಾ. [illegible]ನೆಯ ಭಾನುವಾರ ಸಂಜೆ [illegible] ಘಂಟೆಗೆ ಜರಗಿತು. ರಾ॥ ಶ್ರೀ ತಮ್ಮಣ್ಣಾಚಾರಿಯರು (ಪೆನ್ಶನರ್ ಸ್ಕೂಲ್ ಇನ್ಸ್‌ಪೆಕ್ಟರ್) ಸಭಾಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಶ್ರೀ ಬಾಳ ರಾಘವೇಂದ್ರರಾವ್ ಇವರು ವಾಚಕ ಮಂದಿರದ ವರದಿಯನ್ನೋದಿದರು. ಶ್ರೀ ಎಸ್. ಆರ್. ಹೆಬ್ಬಾರರು "ವಾಚಕ ಮಂದಿರದಿಂದಲೇ ಭಾಷೆಯ, ಜ್ಞಾನದ ಹಾಗೂ ಜನಾಂಗದ ಏಳಿಗೆ" ಎಂಬ ವಿಷಯಗರ್ಭಿತ ಸುರಸ ಭಾಷಣವನ್ನಿತ್ತರು. ಅಲ್ಲದೆ, ನಾಲ್ಕು ರೂಪಾಯಿ ಬೆಲೆಬಾಳುವ [illegible] ಪುಸ್ತಕಗಳನ್ನೂ, ಒಂದು ರೂಪಾಯಿಯನ್ನೂ ವಾಚಕ ಮಂದಿರಕ್ಕೆ ದಾನವಾಗಿ ಕೊಟ್ಟರು. ರಾ॥ ಭಾಸ್ಕರಾಚಾರಿ, ರಾ॥ ಅನಂತಾಚಾರಿಯರೇ ಮೊದಲಾದವರು ಯಥೋಚಿತ ಪುಸ್ತಕಗಳ ಸಹಾಯವನ್ನಿತ್ತುದಲ್ಲದೆ, ಸಭಿಕರಲ್ಲಿ ಅನೇಕರು ಈ ವಾಚಕ ಮಂದಿರದ ಸದಸ್ಯರಾಗಿ ಸೇರಿ ಪ್ರೋತ್ಸಾಹಿಸಿದರು. ಇತ್ತೀಚೆಗೆ ಇಲ್ಲಿಗೆ ಬಂದು ಹಿಂತೆರಳಿರುವ ಮೈಸೂರು ಎಸೆಂಬ್ಲಿ ಮೆಂಬರ ರಾ॥ ಗುರುಮೂರ್ತಾಚಾರಿಯರು ಈ ವಾಚಕ ಮಂದಿರಕ್ಕೆ ಸ್ವಸಂತೋಷದಿಂದ ಕೊಡಲೊಪ್ಪಿರುವ ಇನ್ನೂರು (೨೦೦) ಪುಸ್ತಕಗಳನ್ನು ಅವಶ್ಯ ಶೀಘ್ರದಲ್ಲೇ ಕಳುಹಿಕೊಟ್ಟು ಉಪಕರಿಸುವಂತೆ ಅವರಿಗೊಂದು ವಿನಂತಿಪತ್ರವನ್ನು ಬರೆದುಕೊಳ್ಳಬೇಕೆಂದು ಶ್ರೀ ಹ. ರಾಮರಾವ್ ಇವರು ತಂದ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು. ಬಳಿಕ ಅಧ್ಯಕ್ಷರ ಕಾಲೋಚಿತ ಭಾಷಣದಿಂದಲೂ, ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸುವುದರ ಮೂಲಕವೂ ಸಭೆಯು ಮಂಗಲಗೊಂಡಿತು.

ಮಂಗಳೂರಿನ [illegible] ಸಬ್ ಜಡ್ಜರಾದ ಶ್ರೀ ಶಂಕರ ಅಯ್ಯರವರು ಬರುವ ಮೇ [illegible]ನೇ ತಾರೀಕಿನಿಂದ ಅದೇ ಕೋರ್ಟಿನ ಮುಖ್ಯ ಸಬ್ ಜಡ್ಜರಾಗಿ ನೇಮಿಸಲ್ಪಟ್ಟವರಾಗಿ ತಿಳಿದುಬರುತ್ತದೆ.

ಇದೇ ತಾರೀಕು [illegible]ನೇ ಶನಿವಾರ ಬೆಳಿಗ್ಗೆ ಮಂಗಳೂರು ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀ [illegible] ಅವರಾಯರು, ದಿವಂಗತ [illegible] ಬೋಸರ [illegible] ವಿಷಯವಾಗಿ ಭಾಷಣ ಮಾಡುವರು.

ಕಲಕತ್ತೆಯ [illegible] ಕಂಪೆನಿ ಲಿಮಿಟೆಡ್ ಇವರು ಮಂಗಳೂರು ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನಿಡುವ ಆಲೋಚನೆಯಲ್ಲಿರುವರಂತೆ.

ಮಂಗಳೂರು ಟೆಲಿಗ್ರಾಫ್ ಇಲಾಖೆಯು, ಇಲ್ಲಿ ಟೆಲಿಫೋನನ್ನು ಪ್ರಾರಂಭಿಸಲು ಉದ್ಯುಕ್ತರಾಗಿರುವರೆಂದು ತಿಳಿದುಬರುತ್ತದೆ.

ತಾರೀಕು [illegible]—೪—[illegible]ನೇಗೆ ಅಂತ್ಯವಾದ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ [illegible] ಮರಣಗಳಾದವು. ಈ ಪೈಕಿ ಮಲೇರಿಯಾ ಜ್ವರದಿಂದ [illegible], ಶ್ವಾಸಕೋಶದ ರೋಗದಿಂದ [illegible], ಸಿಡುಬಿನಿಂದ [illegible], ಇತರ ಎಲ್ಲಾ ಕಾರಣಗಳಿಂದ [illegible]. ಜನನ ಸಂಖ್ಯೆಯು [illegible]

ಮೊದಲು ಇಲ್ಲಿ ಹೆಲ್ತ್ ಆಫೀಸರರು ಆಗಿ ಇದ್ದ ಶ್ರೀ ಬಿ. ಜಿ. ಪ್ರಭು, ಎಲ್. ಎಮ್. ಎಸ್., ಡಿ. ಎಸ್. ಎಸ್. ಸಿ. ಯವರು ಮಲಬಾರು ಜಿಲ್ಲಾ ಹೆಲ್ತ್ ಆಫೀಸರರಾಗಿ ನೇಮಕ ಹೊಂದಿರುವರೆಂದು ತಿಳಿದು ಬರುತ್ತದೆ.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಮೊಗವೀರ ಶ್ರೀ ಜ್ಞಾನೋದಯ ಸಮಾಜದ ಹತ್ತೊಂಭತ್ತನೆಯ ವಾರ್ಷಿಕೋತ್ಸವದ ನಾಲ್ಕನೇ ಕಲಮಿನ [illegible]ನೇ ಪಂಕ್ತಿಯಲ್ಲಿ 'ಕಾಫಿ ಹೋಟೇಲುಗಳ ಭಕ್ತರಾಗದೆ' ಎಂದಿದ್ದುದನ್ನು 'ಕಾಫಿ ಹೋಟೇಲುಗಳ ಭಕ್ತರಾಗದೆ' ಎಂದು ತಿದ್ದಿಕೊಳ್ಳತಕ್ಕದ್ದು.

ಫರಂಗಿಪೇಟೆ — ಇದೇ ತಿಂಗಳ ತಾ. [illegible]ನೇ ಶ್ರೀ ರಾಮನವಮಿ ದಿನ ಫರಂಗಿಪೇಟೆ ವಿದ್ಯಾವರ್ಧಕ ಸಂಘದ ಮತ್ತು ಶ್ರೀ [illegible] ಎಲಿಮೆಂಟರಿ ಶಾಲೆಯ ಹದಿನೆರಡನೇ ವಾರ್ಷಿಕೋತ್ಸವ ಸಮಾರಂಭವು ಬಹುಮಾನವಿತ್ತ ಎ. ಬಿ. ಶೆಟ್ಟಿ, ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಹಿಂದಿನ ದಿನ ಬೆಳಿಗ್ಗೆ ಶಾಲಾ ಬಾಲಕರ ಪಂದ್ಯಾಟಗಳೂ ಸಾಯಂಕಾಲ ಮಹಿಳಾ ಸಮಾಜದ ಯುವಕ ವಿದ್ಯಾರ್ಥಿಗಳ ಬಗ್ಗೆ 'ವೀರಬಾಲ' ನಾಟಕವೂ ಪ್ರದರ್ಶಿಸಲ್ಪಟ್ಟಿತು. ಮರುದಿನ ಬೆಳಿಗ್ಗೆ ಶಾಲಾ ಮಕ್ಕಳಿಗೂ ವಿದ್ಯಾವರ್ಧಕ ಸಂಘದ [illegible] ಸಹಾಯಕರಿಗೂ ಉಪಹಾರ ಸತ್ಕಾರಗಳು ನಡೆದು ಬಳಿಕ ವಿದ್ಯಾವರ್ಧಕ ಸಂಘದ ಮಹಾಸಭೆಯು ರಾ॥ ಸಿ. ವಿ. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಸಾಯಂಕಾಲ ಅಧ್ಯಕ್ಷರು ಬಂದೊಡನೆ ಅವರಿಂದ [illegible] ಸಮಾರಂಭವು ನಡೆಸಲ್ಪಟ್ಟಿತು. ಬಾಲಕರ ದೇವತಾ ಪ್ರಾರ್ಥನೆಯಾದ ಬಳಿಕ ಶಾಲಾ ವರದಿಯನ್ನು ಹೆಡ್‌ಮಾಸ್ತರರು ಓದಿ ಹೇಳಿದರು. ಶಾಲೆಯ ಹಳೇ ವಿದ್ಯಾರ್ಥಿಗಳಾದ ರಾ॥ ಎಸ್. ಕೃಷ್ಣನಾಯ್ಕರು ಶಾಲಾಹಿತವನ್ನು ತಮ್ಮ ಚೊಕ್ಕ ಮತ್ತು ಚಿಕ್ಕದಾದ ಭಾಷಣದಿಂದ ಬಯಸಿದರು. ಹಿತಚಿಂತಕರಾಗಿ ಡಾ॥ ಎನ್. ನಾಗಪ್ಪ ಶೆಟ್ಟಿಗಳು ಮಾತೃಭಾಷೆಯಲ್ಲಿ ಶಾಲೆಗಳನ್ನು ನಡೆಸುವದೂ ವಿದ್ಯೆಯನ್ನು ಪ್ರಸರಿಸುವದೂ ಇವೆರಡೂ ಸುಲಭ ಕರವಲ್ಲವೆಂದು ತಮ್ಮ ಅನುಭವಯುಕ್ತವಾದ ಮಾತುಗಳಿಂದ ವಿಶದಗೊಳಿಸಿದರು. ಪಾಠಗಳಲ್ಲಿಯೂ ಆಟಗಳಲ್ಲಿಯೂ ಗೆದ್ದವರಿಗೆ ಅಧ್ಯಕ್ಷರಿಂದ ಬಹುಮಾನಗಳು ಹಂಚಲ್ಪಟ್ಟವು. ತರುವಾಯ ಅಧ್ಯಕ್ಷರು 'ಈ ಶಾಲೆಯೂ ಇನ್ನೆರಡು ಶಾಲೆಗಳೂ ಈ ಸಂಘದಿಂದ ನಡೆಸಲ್ಪಡುವದೂ ಇವುಗಳ ಏಳ್ಗೆಗಾಗಿ ಸಂಘದವರು ನಾನಾ ವಿಧದಲ್ಲಿ ಹೋರಾಡುವದೂ ಪ್ರಶಂಸನೀಯವೆಂದು ಹೊಗಳಿದರು. ಈ ಸಂಘವು [illegible], ನಾಟಕಗಳು, [illegible]ಗಳಿಂದ ವಂತಿಗೆಯನ್ನು ಎತ್ತುವದು. ಇತ್ಯಾದಿ ಸತ್ಸಾಧನೆಗಳಿಂದ ಈ ಮೊದಲೇ ಪ್ರಯತ್ನಿಸಿದ್ದರಿಂದ [illegible] ಈ ಕುರಿತು ಹೆಚ್ಚಿನ ಮಾತಿನ [illegible]ಯನ್ನು ಕೊಡಬೇಕಾದಿಲ್ಲ. ಈ ಸಂಘದಿಂದ ನೆರೆಕರೆಯ ಗ್ರಾಮಸ್ಥರು ಸಹಕರಿಸಿ, ಇದರ ಉದ್ದೇಶವನ್ನು ನೆರವೇರಿಸಿದ್ದಲ್ಲಿ ಇದೊಂದು ಮಾದರಿ ಶಾಲೆಯಾಗಿ ಆಗುವದರಲ್ಲಿ ತಮಗೆ ಭರವಸೆ ಇದೆ ಎಂದು ತಮ್ಮ ಭಾಷಣದಿಂದ ವ್ಯಕ್ತಗೊಳಿಸಿದರು. ನಂತರ ಈ ಶಾಲಾ ಅಧ್ಯಾಪಕರಾಗಿದ್ದ ರಾ॥ ಎಸ್. ಸುಬ್ಬರಾಯರಿಂದ ರಚಿಸಲ್ಪಟ್ಟ 'ವೀರಬಾಲ' ಎಂಬ ನಾಟಕದ [illegible] ಅಂಕಗಳು ಶಾಲಾ ಬಾಲಕರಿಂದ ಅಭಿನಯಿಸಲ್ಪಟ್ಟಿತು. ಶಾಲಾ [illegible] ಜನಸಂದಣಿಯಿಂದ ಕಿಕ್ಕಿರಿದು ಹಲವರಿಗೆ ನೋಡಲು ಎಡೆಸಿಕ್ಕದ್ದರಿಂದ ಅದೇ ನಾಟಕವನ್ನು ಟಿಕೇಟು ಇಟ್ಟು ಆಡಬೇಕಾಗಿ ಅಧ್ಯಕ್ಷರು ವಿನಂತಿಸಿದರು. ಅಧ್ಯಕ್ಷರಿಗೂ, ಅತಿಥಿಗಳಿಗೂ, ಸಂಘದ ಉಪಾಧ್ಯಕ್ಷರಾದ ರಾ॥ ಎ. ಸುಬ್ರಾಯ ಹೆಗ್ಡೆಯವರು ಕೃತಜ್ಞತಾವಂದನೆಗಳನ್ನು ಅರ್ಪಿಸಿದ ಬಳಿಕ ರಾಷ್ಟ್ರಗೀತದೊಂದಿಗೆ ಅಂದಿನ ಕಾರ್ಯಕ್ರಮಗಳು ಕೊನೆಗೊಂಡವು.

ಪಡುಬಿದ್ರಿ — ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. [illegible]ರಿಂದ [illegible]ರ ತನಕ ಸಾಂಗವಾಗಿ ನೆರವೇರಿತು. ತಾ. [illegible]ನೇ ದಿನ ಎಲ್ಲಾ ಶಾಲಾ ಹುಡುಗರಿಗಾಗಿ ಲವಕುಶ ನಾಟಕವನ್ನು ಅಭಿನಯಿಸಿ ತೋರಿಸಿದರು. ತಾ. [illegible]ನೇ ದಿನ ಪೂರ್ವಾಹ್ನ ಮಕ್ಕಳ ಪಂದ್ಯಾಟವಿತ್ತು. ಇದರಲ್ಲಿ ಉತ್ತಮ ತರಗತಿಯವರಿಗೆ ಅನೇಕ ಬಹುಮಾನಗಳಿತ್ತವು. ಆ ದಿನ ಅಪರಾಹ್ನ ಹುಡುಗಿಯರಿಗೆ ಮತ್ತು ಮಹಿಳೆಯವರಿಗೆ ಈ ಶಾಲಾ ವಿದ್ಯಾರ್ಥಿಗಳೇ ಲವಕುಶ ನಾಟಕವನ್ನು ಅಭಿನಯಿಸಿದರು. ತಾ. [illegible]ನೇ ದಿನ ಬೆಳಿಗ್ಗೆ ಮಕ್ಕಳ ಮೆರವಣಿಗೆ ಇದ್ದಿತು. ಮೆರವಣಿಗೆಗೆ ಆನೆ ಬಂದಿತ್ತು, ಬೇಂಡ್ ವಾದ್ಯಗಳೂ [illegible] ಪತಾಕೆಗಳೂ ಇದ್ದುವು. ಅಪರಾಹ್ನ [illegible] ಘಂಟೆಯಿಂದ [illegible]ರ ವರೆಗೆ ಮಹಾಸಭೆ ನಡೆಯಿತು. ಸಭೆಗೆ ಊರು ಪರವೂರುಗಳಿಂದ ವಿದ್ಯಾಭಿಮಾನಿಗಳಾದ ಅನೇಕ ಮಹನೀಯರು ಚಿತ್ತೈಸಿದ್ದರು. ಈ ಸಭೆಯಲ್ಲಿ ಮೊದಲು ಶಾಲಾ ವರದಿಯನ್ನು ಮುಖ್ಯ ಉಪಾಧ್ಯಾಯರು ಓದಿದ ತರುವಾಯ ಸಭಿಕರ ಭಾಷಣವಾಗಿ ಮಕ್ಕಳಿಗೆ ಇನಾಮುಗಳನ್ನು ಹಂಚಿ ಕೊನೆಗೆ ಈ ಶಾಲಾ ವಿದ್ಯಾರ್ಥಿಗಳು "ಲವಕುಶ ನಾಟಕ"ವನ್ನು ನಟಿಸಿ ಸಭಿಕರನ್ನು ಆನಂದಗೊಳಿಸಿದರು. ಬಳಿಕ ಧನ್ಯವಾದಗಳಾಗಿ ಸಭೆಯನ್ನು ಮುಕ್ತಾಯಗೊಳಿಸಿದರು.

ಮೂಲ್ಕಿ — ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ತಿಂಗಳ ತಾ. [illegible]—೪—[illegible]ನೇ [illegible]

ದಯಿ ... ಮೇಲಾದ ಸಾಮಾನುಗಳನ್ನು ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

Batliwala's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಚಿನ್ನ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜಗ್ವು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ಪರಿಹಾರ. ರೂ. ೧.

ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕೊಲ್ ಅಲ್ ಕ್ಯೂರ್ — ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨.

ಬಾಟ್ಲಿವಾಲರ ಡೈರಿಯಾ ಮಿಕ್ಸ್ಚರ — ಜುಲಾಬು ಮತ್ತು ಕಾಲರಾ ವ್ಯಾಧಿಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪

ಬಾಟ್ಲಿವಾಲರ ಕ್ವಿನೈನ ಟೇಬುಲೆಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬುಲೆಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರ್ಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell ad, Bombay. No. 14.

ತಯಾರಿವೆ! **ತಯಾರಿವೆ!!**

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ನೂರಾರು ಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಅಪಾಯವಿಲ್ಲದೇನೇ ಹೆಂಗಸಿಗೆ

ಉತ್ತಮ ಆರೋಗ್ಯವು

ಲಭಿಸುವುದು

ಹೆಂಗಸರಿಗೆ ಸ್ವಾಭಾವಿಕವಾದ ಮುಟ್ಟಿನ ಕಾಲದ ಹಲವು ದೋಷಗಳನ್ನು ಲೋಧ್ರವೇ ಹೋಗಲಾಡಿಸುವುದರಿಂದ ಆರೋಗ್ಯವಂತರಾದ ಹೆಂಗಸರು ಲೋಧ್ರವೆಂದರೆ ಉತ್ಸಾಹಿತರಾಗುವರು.

ಲೋಧ್ರವು ಅವರ ಅನಾರೋಗ್ಯಗಳನ್ನು ತೊಲಗಿಸಿ, ಅವರಿಗೆ ಸೌಂದರ್ಯವನ್ನುಂಟುಮಾಡಿ, ಉಜ್ವಲ ಆರೋಗ್ಯದ ಸೂಚನೆಯನ್ನು ತೋರುವದು.

ಮದರಾಸಿನಲ್ಲಿರುವ, ಹಿಂದೀ ಔಷಧಿಗಳನ್ನು ತಯಾರಿಸುವ, ಕೇಸರಿ ಕುಟೀರಮ್ ಎಂಬಲ್ಲಿಯೇ 'ಲೋಧ್ರ'ವು ತಯಾರಿಸಲ್ಪಡುವದು. ಇತರರ್‍ಯಾರೂ ಇದನ್ನು ತಯಾರಿಸಲಾರರು. ಇತರ ಯಾವ ಔಷಧಿಯೂ ಇದಕ್ಕೆ ಸರಿಯಾಗದು.

ಎಲ್ಲಾ ಕೆಮಿಷ್ಟರಲ್ಲಿಯೂ ಇರುತ್ತದೆ.

ಕೇಸರಿ ಕುಟೀರಮ್.

ಎಗ್ಮೋರು, ಮದರಾಸು.

ಪೋಸ್ಟ್ ಬಾಕ್ಸ್ 752 ತಂತಿ: "ಕೇಸರಿ" ಫೋನ್ 3486.

ಏಜಂಟರು — ಷಾ ಕಂಪೆನಿ, (ದಿ ಊಲನ್ ಮಾರ್ಟ್) ಮಂಗಳೂರು.

Liveliness-zip-pep-you get that all the time from an "Exide" because it is built into it.

Care and thought ... the ... keen the ... in the ... material and the experience of thousands of users have made

Exide

THE LONG-LIFE BATTERY

The C P C Co, Ltd,

MANGALORE

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! **ಅತೀ ಕಡಿಮೆ ಬೆಲೆ**

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಂಸಿದ ಉತ್ತಮ ತರದ ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲಿ ನಾವು ಹೆಸರು ಹೊಂದಿರುವೆವು.

ನಮ್ಮಲ್ಲಿರುವ ವಾಚು, ಕ್ಲಾಕು, ಟೈಮಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. — ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛಮಾಡಿಸುವುದರಿಂದ ಸರಿಯಾದ ಸಮಯವು ದೊರಕುವುದು.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೆಡಿಸುವದು—ಧನನಾಶ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾಮಾರ್ಥನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

ಸಕ್ಲೇಶಪುರ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ

... ಘಂಟೆ ೨-೩೦ಕ್ಕೆ ಸೇರುವಂತೆಯೂ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯರಾದ ಎಸ್. ... ರವರ ಅಧ್ಯಕ್ಷತೆಯಲ್ಲಿ ಮಹಸಂಘಾತಿ ಬೋರ್ಡು ಶಾಲೆಯಲ್ಲಿ ಜರಗಿತು. ೫೦ ಮಂದಿ ಉಪಾಧ್ಯಾಯರೂ ೧೬ ಮಂದಿ ಉಪಾಧ್ಯಾಯಿನಿಯರೂ ಹಾಜರಿದ್ದರು. ರಾ। ಸತ್ಯಮಿತ್ರ ಬಂಗೇರರು ಗ್ರಾಮ ಸಂಘಟನೆಯ ವಿಷಯ ಒಂದು ಉಪನ್ಯಾಸವನ್ನು ಕೊಟ್ಟರು. ಸಂಘದ ಬರುವ ಸಭೆಯನ್ನು ಇದೇ ಬರುವ ತಾ. ೨೬-೬-೩೮ನೇ ಶನಿವಾರ ಅಪರಾಹ್ಣ ಘಂಟೆ ೨-೩೦ಕ್ಕೆ ಮಾಪಿಳ್ಳ ಬೋರ್ಡು ಹುಡುಗಿಯರ ಶಾಲೆಯಲ್ಲಿ ಜರಗಿಸುವುದಾಗಿ ನಿರ್ಣಯಿಸಲಾಯಿತು.

ಉಪ್ಪಿನಂಗಡಿ— ಕಳೆದ ಶನಿವಾರ ತಾರೀಖು ೨೦, ಸೋಮವಾರ ತಾರೀಖು ೨೨ನೇ ದಿವಸ ಶ್ರೀ ದಕ್ಷಿಣ ಕಾಶಿ ಎನಿಸುವ ಕ್ಷೇತ್ರ ಶ್ರೀ ಸಹಸ್ರಲಿಂಗೇಶ್ವರ ದೇವರಲ್ಲಿ, ಲೋಕಕಲ್ಯಾಣದ ಕ್ಷೇಮಾಭ್ಯುದಯದ ಬಗ್ಗೆ ಶ್ರೀ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ ಮಾಡಿಕೊಂಡು ಮಾಂಟ್ರಿಯಾ ಹೊಸ್ಪಟ್ಟ ಬುಕ್ ಕೆಲವ ಇವರು ತಮ್ಮ ಕೈಯಿಂದ ಕಿಂಬಿಕ್ ಅಭಿಷೇಕವನ್ನು ಮಾಡಿಸಿ ತಾ. ೨೦—೨೨ನೇ ದಿವಸ ಯೋಗ್ಯ ರೀತಿಯಲ್ಲಿ ಗೋವುಗಳ ಗೋಗ್ರಾಸ ಕೊಟ್ಟು ತೃಪ್ತಿಪಡಿಸಿರುತ್ತಾರೆ. ಅಲ್ಲದೆ ಈ ಕ್ಷೇತ್ರದ ಮೇಲೆ ಬಹಳ ವಿಶ್ವಾಸವಿಟ್ಟು ಈ ಕ್ಷೇತ್ರದ ದೇವಾಲಯಗಳ ಜೀರ್ಣೋದ್ಧಾರವಾಗುವ ಕುರಿತು ಬಹಳ ಸಾಹಸಪಡುತ್ತಾರೆಂಬ ಸಂಗತಿ ನಮಗೆ ತಿಳಿಯಬರುತ್ತದೆ. ಇವರಂತೆ ಎಲ್ಲರೂ ಸಾಹಸಪಟ್ಟರೆ ಇಲ್ಲಿ ಬೇಗನೆ ದೇವಾಲಯಗಳ ಜೀರ್ಣೋದ್ಧಾರವಾಗುವಲ್ಲಿ ಏನೊಂದೂ ಸಂದೇಹವು ಇರುವುದಿಲ್ಲ ಎಂತ ನಾವು ತಿಳಿಯುತ್ತೇವೆ.

ವಿವಿಧ ಸಮಾಚಾರಗಳು.

ನಾಲ್ವರ ಮರಣ, ಐವರ ಖೂನಿ.

ಪಾಲಘಾಟದ ಸಮೀಪದಲ್ಲಿರುವ ವಲಿಯಾಪಟ್ಟಿನ್ ಎಂಬ ನಾಯರರ ಹಳ್ಳಿಯು ಕಳೆದ ಗುರುವಾರ ಭಯಂಕರವಾದ ಮರಣ ಮತ್ತು ಖೂನಿಗಳ ರಂಗಭೂಮಿಯಾಗಿ ಪರಿಣಮಿಸಿತು. ಕೀಳು ಜಾತಿಯ ಅಸ್ಪೃಶ್ಯನಾದ ಚೆರುಮ ಜಾತಿಯವನೊಬ್ಬನು ಒಬ್ಬ ನಾಯರನ ಮನೆಯನ್ನು ಪ್ರವೇಶಿಸಿದುದೇ ಇದರ ಕಾರಣ. ಚೆರುಮ ಮತದವರು ಹಿಂದೂ ಮತದವರಿಂದ ಕಡಿಮೆಪಕ್ಷ ಅವರು ಆಡಿಗಳಿಗೆ ದೂರ ನಿಲ್ಲಬೇಕಾದುದೇ ಅಲ್ಲಿಯ ಪದ್ಧತಿ. ವಲಿಯಾಪಟ್ಟಿನವರಲ್ಲಿ ಬಹಿರಂಗವಾದ ಒಂದು ರಸ್ತೆಯಿದೆ. ಯಾವರೂ ಅದರ ಮೇಲೆ ಹಾದುಹೋಗಲು ಚೆರುಮ ಜಾತಿಯವರಿಗೆ ಅಧಿಕಾರವಿರುವುದಿಲ್ಲ. ಕಳೆದ ಗುರುವಾರ ಅಚ್ಯುತನಾಯರನೆಂಬ ಒಬ್ಬ ಎಲಿಮೆಂಟರಿ ಶಾಲಾ ಉಪಾಧ್ಯಾಯನ ಪತ್ನಿ ಮಾಧವಿಅಮ್ಮ ಎಂಬವಳು ಸಮೀಪದ ಕಾಡಿನಿಂದ ಒಬ್ಬ ಚೆರುಮ ಜಾತಿಯವನಿಂದ ತಂದ ಕಟ್ಟಿಗೆ ಹೊರೆಯನ್ನು ಖರೀದಿಸಿ ಪಡೆದು ಮೊದಲು ಹೇಳಿದ ಬಹಿರಂಗವಾದ ರಸ್ತೆಯಿಂದ ಬಂದು ತನ್ನ ಮನೆಯ ಹೆಬ್ಬಾಗಿಲಿನ ಸಮೀಪ ಹಾಕಲು ಆತನಿಗೆ ತಿಳಿಸಿದಳು. ಅವಳೊಂದಿಗಿದ್ದ, ಮತ್ತು ಅವಳ ಮನೆಯ ಸಮೀಪವೇ ವಾಸಿಸುತ್ತಿದ್ದ ಇನ್ನೊಬ್ಬ ನಾಯರ ಹೆಂಗಸು ಇದಕ್ಕೆ ಆಕ್ಷೇಪವನ್ನೆತ್ತಿದಳು. ಅವಳು ಮಾಧವನಾಯರನೆಂಬಾತನ ಪತ್ನಿಯು. ಚೆರುಮ ಜಾತಿಯವರು ಬಹಿರಂಗವಾದ ಆ ರಸ್ತೆಯ ಮೇಲೆ ನಡೆದು ಹೋಗುವುದು ಪದ್ಧತಿಗೆ ವಿರೋಧವೆಂದೇ ಅವಳು ಆಕ್ಷೇಪಿಸಿದಳು. ಅವರೊಳಗೆ ಗಟ್ಟಿಯಾಗಿ ಮಾತು ಪ್ರಾರಂಭವಾಗಿ ಅಲ್ಲಿಗೆ ಮಾಧವನಾಯರನು ಬಂದು ಕುಪಿತನಾಗಿ ತನ್ನ ಮನೆಯನ್ನು ಭ್ರಷ್ಟಗೊಳಿಸಲು ಮಾಧವಿಅಮ್ಮಳು ಪ್ರಯತ್ನಿಸುತ್ತಿರುವಳೆಂದು ಆತನು ತಿಳಿದು, ಮಾಧವಿಅಮ್ಮನ ಮನೆಯೊಳಗೆ ಪ್ರವೇಶಿಸಿ ಕಟ್ಟಿಗೆಯ ಹೊರೆಯನ್ನು ಆಕೆಯ ಮನೆಯ ಅಂಗಳದ ಮೇಲೆ ಇಟ್ಟನು. ಚೆರುಮನಿಗೆ ಹೇಳಿದಾಗ ಆತನು ಹಾಗೆಯೇ ಮಾಡಿದನು. ಇದರಿಂದ ಕುಪಿತನಾದ ಅಚ್ಯುತನಾಯರನು ಮಾಧವನಾಯರನೊಂದಿಗೆ ಗುದ್ದಾಡಿದನು. ಅಂದಿನ ದಿನವೂ ಮರುದಿನವೂ ಕಳೆದು ಹೋಯಿತು. ಎರಡು ದಿನಗಳ ತರುವಾಯ ಅಚ್ಯುತನಾಯರನು ಊರವರೆಲ್ಲರಿಗೆ ಮಾಧವನಾಯರನನ್ನು ಕರೆದು ಆತನ ಕೃತ್ಯದ ಸಂಗತಿಯನ್ನು ವಿವರಿಸಿ ಹೇಳಿದನು. ಇಬ್ಬರೊಳಗೂ ಜಗಳಕ್ಕೆ ಆರಂಭವಾಯಿತು. ಮಾಧವನಾಯರನು ಒಂದು ಚೂರಿಯಿಂದ ತನ್ನನ್ನು ಸಮೀಪಿಸಿದವರೆಲ್ಲರನ್ನು ತಿವಿದನು. ಅಚ್ಯುತನಾಯರನಿಗೂ, ಆತನ ಮಗನಿಗೂ ವಿಶೇಷ ಗಾಯವಾಯಿತು. ಐದಾರು ಜನರನ್ನು ಚೆನ್ನಾಗಿ ತಿವಿದು ಆತನು ಎತ್ತಲೋ ಓಡಿ ಹೋಗಿ ಇದುವರೆಗೆ ಆತನ ಪತ್ತೆಯಾಗಿಲ್ಲ. ತಿವಿಯಲ್ಪಟ್ಟವರನ್ನು ಆಸ್ಪತ್ರೆಗೆ ಕೊಂಡೊಯ್ಯುವಾಗ ಒಬ್ಬನು ಹಾದಿಯಲ್ಲಿಯೇ ಮೃತಪಟ್ಟನು. ಮರುದಿನ ಆಸ್ಪತ್ರೆಯಲ್ಲಿ ಅಚ್ಯುತನಾಯರನೂ ಇನ್ನೊಬ್ಬ ಉಪಾಧ್ಯಾಯನೂ ಸತ್ತುಹೋದರು. ಮಗನೊಬ್ಬನಿಗೆ ಭಯಂಕರವಾದ ಗಾಯಗಳಾಗಿ ಆತನು ಆಸ್ಪತ್ರೆಯಲ್ಲಿಯೇ ನರಳುತ್ತಿರುವನು. ಅಚ್ಯುತನಾಯರನ ಮಗನು ಚಿಕಿತ್ಸೆ ಮಾಡಲ್ಪಟ್ಟು ಆತನ ಹುಣ್ಣುಗಳು ಗುಣಹೊಂದುತ್ತಿರುವವು. ಪೋಲೀಸರು ಇದರ ವಿಚಾರಣೆಗೆ ತೊಡಗಿರುವರು. ಇದರಿಂದ ಪಟ್ಟಣಗಳಲ್ಲೆಲ್ಲ ಗೊಂದಲವೇ ಉಂಟಾಗಿರುತ್ತದೆ.

ಅಫಘಾನದ ವೃತ್ತಾಂತ.

ಅಮಾನುಲ್ಲಾರವರು ಗಜನಿಯನ್ನು ಯಾರ ಆಕ್ಷೇಪವೂ ಇಲ್ಲದೆ ಪ್ರವೇಶಿಸಿದರು. ತಾ. ೧೩ನೇ ದಿನ ಶೀಕಬಾದ ಹಗ್ಗಿನಲ್ಲಿ ವರ್ಧಕ ಮತ್ತು ಬಾಚಾ-ಇ-ಸಾಕೋವಿನ ಆನರೊಳಗೆ ಕೆಟ್ಟ ರೀತಿಯ ಜಗಳವಾಯಿತು. ಗಾಯ ಹೊಂದಿದ ಹಲವರು ಕಾಬೂಲಿನ ಆಸ್ಪತ್ರೆಗೆ ಬಂದಿರುವರು. ಕಾಬೂಲಿಗೆ ಕರೆಲ್ಪಟ್ಟ ಶ್ರೀಮಂತರಾದ ವರ್ಧಕರ ಹೆಂಗಸು ಮಕ್ಕಳು ಬಾಚಾ-ಇ-ಸಾಕೋವಿನಿಂದ ಒತ್ತೆಯಾಗಿ ಇಡಲ್ಪಟ್ಟಿರುವರು. ನಾದಿರಖಾನರು ಹಬೀಬುಲ್ಲನಿಗೆ ಬರೆದ ಪತ್ರದಲ್ಲಿ "ಪ್ರಿಯ ಸಹೋದರನೇ! ನೀನು ನನ್ನ ಕಡೆಗೆ ಪ್ರೇಮವಿಟ್ಟುದರ ಬಗ್ಗೆಯೂ, ನಿನ್ನ ಪ್ರತಾಪಕ್ಕಾಗಿಯೂ ನಿನ್ನನ್ನು ಅಭಿನಂದಿಸುತ್ತೇನೆ. ನನ್ನ ರಾಜ್ಯಕ್ಕಾಗಿ, ನನ್ನ ರಾಜ್ಯದ ಜನರಿಗಾಗಿ ನಾನು ಆತ್ಮಸಮರ್ಪಣೆಯನ್ನು ಮಾಡಲು ಸಿದ್ಧನಿರುವೆನು. ನೀನೂ ಅದೇ ರೀತಿಯಾಗಿ ಭಾವಿಸು. ಅಫಘಾನಿಸ್ಥಾನದ ಒಳಿತುಮಾಡಲು ಆಲೋಚಿಸು. ಅಲ್ಲದೆ ಯುದ್ಧಮಾಡಿ ಅಫಘಾನವನ್ನು ಹಾಳುಮಾಡುವಾಗ ನೀನೂ ಕಾರಣನು. ಅಮಾನುಲ್ಲಾರವರು ಸಿಂಹಾಸನವನ್ನೇರುವ ಹಾಕೆ ನಿನ್ನವರು ಹಿಂದಿನಂತಾಗಿ ಪ್ಲವಿಸುವರು" ಎಂದು ಬರೆದಿರುವರು. ವರ್ಧಕರು ಬಾಚಾ-ಇ-ಸಾಕೋವಿನ ತಲೆಯನ್ನು ಹಿಡಿದಿರುವರೆಂದು ವರ್ತಮಾನ. ತನ್ನ ತಂದೆಗೆ ಸಹಾಯವನ್ನು ಸಲ್ಲಿಸಲು ಅಮಾನುಲ್ಲಾರ ಮಗನು ಪರ್ಷಿಯಾ ಪಟ್ಟಣಕ್ಕೆ ಹೊರಟುಹೋಗಿರುವನು. ಹೀರತಿನ ಮಿಲಿಟರಿ ಕಮಾಂಡರರಾದ ಮಹಮದ ಗೌಸಖಾನರು ಹಲವು ಸಾವಿರ ಸೈನಿಕರನ್ನು ಕೂಡಿಕೊಂಡು ಅಮಾನುಲ್ಲಾರವರನ್ನು ಕೂಡಿಕೊಳ್ಳಲು ಹೀರತಿನಿಂದ ಹೊರಟಿರುವರು. ಈ ಸೈನಿಕರಲ್ಲಿ ಹಲವು ರಾಹುತರೂ ಇರುವರು. ತೋಪಿಗಳೂ, ಫಿರಂಗಿಗಳೂ ಇರುವವು. ಬಾಚಾ-ಇ-ಸಾಕೋವನ್ನು ಕೊಡುವ ಕಲುವಾಗಿ, ಮಹಮದ ಅಲಮನೆಂಬ ಕಿನ್ನಾರಿ ದಂಗೆಯ ನಾಯಕನೊಬ್ಬನು ಹೋದಸ್ವರ್ಗಕ್ಕೆ ಚಕಾನೂರಿನ ಮುಲ್ಲಾ ಸಾಹೇಬರವರು ಆತನ ಮನೆಯನ್ನು ಸುಟ್ಟುಹಾಕಿರುವರಂತೆ.

ಅಮಾನುಲ್ಲಾರವರ ಕೈಕೆಳಗೆ ಚೆನ್ನಾಗಿ ಶಿಕ್ಷಿತರಾದ ಸೈನಿಕರಿರುವರೆಂದೂ, ಇನಯತುಲ್ಲಾರವರ ಕೈಕೆಳಗೆ ಸ್ವಯಂಸೇವಕ ದಳದವರಿರುವರೆಂದೂ ವರ್ತಮಾನವಿದೆ. ಬಾಚಾ-ಇ-ಸಾಕೋವು ಲೋಗಾರದ ಕಡೆಗೆ ಕೆಲವು ಸೈನ್ಯವನ್ನು ಕಳುಹಿಸಲಾಗಿ, ಅಲ್ಲಿ ಅವರಿಗೆ ನಾದಿರಖಾನರ ಸೈನ್ಯದ ಭೇಟಿಯಾಯಿತು. ಬಾಚಾ-ಇ-ಸಾಕೋವಿನ ಸೈನ್ಯದವರು ನಾದಿರಖಾನರ ಸೈನ್ಯದವರಿಗೆ ಶರಣಾಗತರಾದರು. ಜೇಲಾಲಬಾದಿನ ಒಂದು ಉಲೇಮಾದವರ ಪಂಗಡವು ಕಾಬೂಲಿನ ಕಡೆಗೆ ಹೊರಟುಹೋಗಿರುತ್ತದೆ. ಅವರೊಂದಿಗೆ ಹಲವು ಶಿಲಾಫತ್ ಕೆಲಸದವರೂ ಗಡಿಯ ವರೆಗೆ ಬಂದಿದ್ದರು. ಅವರು ಹೊರಡಬೇಕಾದರೆ ಸುಲ್ತಾನರ ಮಸೀದಿಯಲ್ಲಿ ಸಭೆ ಕೂಡಿ ತಾವು ಅಫಘಾನದ ಶಾಂತಿಸ್ಥಾಪನೆಗಾಗಿಯೂ ಐಕ್ಯವನ್ನುಂಟುಮಾಡುವದಕ್ಕಾಗಿಯೂ ಹೊರಟುಹೋಗುವುದೆಂದು ನಿಶ್ಚಯಿಸಿದ್ದರು. ಹೀಗೆ ಹೊರಟುಹೋದ ಇಪ್ಪತ್ತ ನಾಲ್ಕು ಮಂದಿಗಳಲ್ಲಿ ಹತ್ತು ಉಲೇಮಾರವರು, ಉಳಿದವರು ಸ್ವಯಂಸೇವಕರುಗಳು. ಗಜನಿಯ ಸಮೀಪದಲ್ಲಿಯೇ ಹಬೀಬುಲ್ಲಾ ಮತ್ತು ಅಮಾನುಲ್ಲಾರವರ ಸೈನ್ಯಗಳೊಳಗೆ ದೊಡ್ಡ ಜಗಳವಾಗಲಿದೆ. ಅಮಾನುಲ್ಲಾರವರ ಸೈನ್ಯವು ಮುಕರುವು ಮತ್ತು ಗಜನಿಯ ನಡುವಿನಲ್ಲಿದೆ. ಹಬೀಬುಲ್ಲನ ಸೈನ್ಯವು ಗಜನಿಯನ್ನು ಸಮೀಪಿಸಲು ಪ್ರಯತ್ನಿಸುತ್ತಿದೆ. ನಾದಿರಖಾನರೂ ಗಜನಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಾಧಿಸುತ್ತಿರುವರೆಂದೂ ವರ್ತಮಾನ. ಗಜನಿಯವರು ಯಾವ ಪಕ್ಷಕ್ಕೆ ಸೇರುವರೆಂದು ಹೇಳಲಾಗುವುದಿಲ್ಲ. ಹಬೀಬುಲ್ಲನಿಗೆ ಕಾಬೂಲಿನಲ್ಲಿ ಮಾತ್ರವೇ ಸಹಾಯವಿದೆಯಲ್ಲದೆ, ಉಳಿದ ಕಡೆಗಳಲ್ಲಿನ ಆತನ ಸಹಾಯವು ಕಡಿಮೆಯಾಗುತ್ತಾ ಬರುತ್ತದೆ. ಅಮಾನುಲ್ಲಾರವರ ಮಲತಾಯಿ ಮಗನಾದ ಹಾಮುಲ್ಲಾಖಾನನೆಂಬಾತನು ಹಬೀಬುಲ್ಲನಿಂದ ಬಂಧಿಸಲ್ಪಟ್ಟಿರುವನು.

ಕಳೆದ ಶುಕ್ರವಾರ ಬಾಚಾ-ಇ-ಸಾಕೋವು ತನ್ನ ಸೈನಿಕರನ್ನು ಪರೀಕ್ಷಿಸುವಾಗ ಒಬ್ಬ ಕೊಹಿಸ್ತಾನ್ ಸೈನಿಕನು ಬಾಚಾ-ಇ-ಸಾಕೋವಿನ ಕಡೆಗೆ ಗುಂಡುಹೊಡೆದನಂತೆ. ಬಾಚಾ-ಇ-ಸಾಕೋವು ಸ್ವಲ್ಪದರಲ್ಲಿ ಪಾರಾಗಿ ಆತನನ್ನು ಅದರಿಂದಲೇ ಕೊಂದನು. ಚಿಕಿತ್ಸೆಯ ನಡುವೆಯೇ ಗುಂಡು ಹೊಡೆದವನು ಅಲ್ಲಿಯೇ ಕೈದುಮಾಡಲ್ಪಟ್ಟನು. ಮತ್ತು ಭಯಂಕರವಾದ ಮರಣಕ್ಕೆ ಗುರಿಮಾಡಲ್ಪಟ್ಟನು.

ಅಮಾನುಲ್ಲಾರವರ ಸೈನ್ಯವು ದಿನೇ ದಿನೇ ಹೆಚ್ಚಾಗುತ್ತಲಿದೆ. ಅವರ ವಿಮಾನಗಳು ಕಾಬೂಲಿನ ಸುತ್ತುಮುತ್ತಲಿನ ದೇಶಗಳ ಮೇಲೆ ಹಾರಾಡುತ್ತಲಿವೆ. ಅಮಾನುಲ್ಲಾರವರು ಇಷ್ಟರೊಳಗೆ ಕೈವಶಪಡಿಸಿಕೊಂಡ ರಾಜ್ಯಗಳೊಳಗೆ ಶಾಂತಿಯು ನೆಲೆಗೊಂಡಿರುವುದು.

ರೈತರ ಕೃತದ ಮೇಲೆ ತೆರಿಗೆ ಹಾಕಲಾಗುವುದೇ?

(ಸ್ವರಾಜ್ಯಪಕ್ಷದ ಪ್ರಮುಖರಾದ ಶ್ರೀ ವೆಂಕಟಪತಿ ರಾಜುರವರು ಸರಕಾರದ ಭೂಕಂದಾಯದ ಧೋರಣೆಯ ಕುರಿತು ಚರ್ಚಿಸಲು ಸದ್ರಿ ಪಾಕೆಯ ಪಕ್ಷದ ಹೂಡಲ್ಲಿ ರೂ. 100 ಕಡಿಮೆಮಾಡಿ ಕಂಡ 'ಕಟ್ ಮೋಶನಿನ' ಸಂದರ್ಭದಲ್ಲಿ ಶ್ರೀ ಎ. ಬಿ. ಶೆಟ್ಟಿ ಮಾಡಿದ ಭಾಷಣ).

ಈಗ ಮಲಬಾರು ಮತ್ತು ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಂದ ಸರಕಾರದ ಭೂಕಂದಾಯ ಧೋರಣೆಯನ್ನು ಎಗ್ಜಿಕ್ಯೂಟಿವ್ (ಕಾರ್ಯ ನಿರ್ವಾಹಕ ಕಮಿಟಿ) ಮೆಂಬರರ ವಿವೇಚನೆಗೆ ಬಿಟ್ಟುಬಿಡದೆ ನಿಶ್ಚಿತಗೊಳಿಸುವ ಆವಶ್ಯಕತೆಯು ಸುವ್ಯಕ್ತವಾಗುವುದು. ಈ ವಿಷಯದಲ್ಲಿ ಸರಕಾರವು ಮಾಡಿಟ್ಟಿರುವ ಒಂದು ನಿಯಮವೆಂದರೆ ರೈತರು ಮಾಡಿರುವ ಕೃತದ ಮೇಲೆ ತೆರಿಗೆ ಹಾಕಲಾಗದೆಂಬುದು. ಕಳೆದ ಸೆಟ್ಲ್‌ಮೆಂಟ್ ಆದ ನಂತರ ರೈತರು ಹಣವನ್ನು ಪ್ರಯೋಗಿಸಿ ಕಷ್ಟಪಟ್ಟು ಕೆಲಸಮಾಡಿಸಿ ಒಂದೇ ಬೆಳೆ ಕೊಡುವ ಅನೇಕ ನಂಜ ಸ್ಥಳಗಳು ಎರಡು ಬೆಳೆಕೊಡುವಂತೆಯೂ, ಅನೇಕ ಪುಂಜ ಸ್ಥಳಗಳನ್ನು ಭಾಗಾಯತುಗಳನ್ನಾಗಿಯೂ ಮಾರ್ಪಡಿಸಿ ಕೃತಮಾಡಿರುತ್ತಾರೆ. ನನ್ನ ಮಿತ್ರರಾದ ಮಿ. ಸಲ್ಡಾನರು ಸೂಚಿಸಿದಂತೆ ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿ ಯಾವತರದ ನೀರಾವರಿ ಕೆಲಸವೂ ಇರುವುದಿಲ್ಲವೆಂಬುದು ಚೆನ್ನಾಗಿ ತಿಳಿದಿರುವ ವಿಷಯವು. ಈ ಕೃತವನ್ನು ಪರಿಪೂರ್ಣ ರೈತರೇ ಮಾಡಿರುವರಲ್ಲದೆ ಸರಕಾರವು ಅದಕ್ಕಾಗಿ ಒಂದು ಪೈಯನ್ನಾದರೂ ವೆಚ್ಚಮಾಡಿರುವುದಿಲ್ಲ. ಕಳೆದ ಮೇ ತಿಂಗಳಲ್ಲಿಯೇ ಭೂಕಂದಾಯ ಕಮಿಷನರು ಈ ವಿಷಯವನ್ನು ಈ ಮಾತುಗಳಿಂದ ಒಪ್ಪಿರುತ್ತಾರೆ. "ಪಶ್ಚಿಮ ಕರಾವಳಿಯಲ್ಲಿ ಪುಂಜ ಸ್ಥಳಗಳು ಬಯಲುಗಳಾಗಿ ಮಾರ್ಪಟ್ಟಿರುವ ವಿದ್ಯಮಾನಗಳು ಬೇರೆ ಕಡೆಗಳಿಗಿಂತ ಸಂಪೂರ್ಣ ಭಿನ್ನವಾಗಿವೆ. ಪೂರ್ವಕರಾವಳಿಯ ಜಿಲ್ಲೆಗಳಲ್ಲಿ ಪುಂಜ ಸ್ಥಳಗಳು ನಂಜಗಳಾಗಿ ಮಾರ್ಪಡಿಸಲ್ಪಟ್ಟಾಗ ಅವುಗಳಿಗೆ ದೊರೆಯುವ ಹೆಚ್ಚಿನ ಮೌಲ್ಯಕ್ಕೆ ಸರಕಾರವು ವ್ಯವಸ್ಥೆಮಾಡಿರುವ ನೀರಿನ ಆಶ್ರಯವೇ ಕಾರಣವಾಗಿರುವುದು. ಅಲ್ಲಿ ಪುಂಜಗಳನ್ನು ನಂಜಗಳನ್ನಾಗಿ ಮಾಡಲ್ಪಟ್ಟಿರುವ ಹೆಚ್ಚಿನ ಸಂಗತಿಗಳಲ್ಲಿ ರೈತರಿಗುಂಟಾಗಿರುವ ವೆಚ್ಚವು ಅತ್ಯಲ್ಪವಾಗಿರುತ್ತದೆ. ಆದರೆ ಪಶ್ಚಿಮ ಕರಾವಳಿಯಲ್ಲಿ ಈ ವೆಚ್ಚವನ್ನು ಸಂಪೂರ್ಣ ರೈತರೇ ವಹಿಸಿ ಸರಕಾರಕ್ಕೆ ಯಾವ ತರದ ವ್ಯಯವೂ ಆಗಿರುವುದಿಲ್ಲ. ಪ್ರಕೃತದ ಸೆಟ್ಲ್‌ಮೆಂಟಿನ ಅವಧಿ ಮುಗಿದಮೇಲೆ ಜಮೀನಿನ ಪುನರ್ವಿಭಾಗ ಮತ್ತು ಕಂದಾಯದ ವಿಷಯದಲ್ಲಿ ಯೋಗ್ಯವೆಂದು ಕಂಡ ಬದಲಾವಣೆಗಳನ್ನು ಮಾಡುವ ಅಧಿಕಾರವನ್ನು ಸರಕಾರವು ಇಟ್ಟುಕೊಂಡಿರುವುದಾದರೂ, ಜೀರ್ಣೋದ್ಧಾರದ ಜಮೀನುಗಳಮೇಲೆ ನಂತರ ತೆರಿಗೆ ಹೊರಿಸುವುದೆಂದರೆ ಪ್ರತ್ಯಕ್ಷವಾಗಿ ರೈತರ ಕೃತದಮೇಲೆಯೇ ತೆರಿಗೆ ಹಾಕಿದಂತಾಗಿ ಅದನ್ನು ನ್ಯಾಯವೆಂದು ಸಾಧಿಸಲು ಶಕ್ಯವಾಗದು." ಸರಕಾರದ ಅಧಿಕಾರಿಗಳೇ ಇಂತಹ ಅಭಿಪ್ರಾಯವನ್ನು ಕೊಟ್ಟಿದ್ದರೂ ಸರಕಾರವು ಮಲಬಾರಿನಲ್ಲಿ ನಂಜ ಮತ್ತು ಬಾಗಾಯತುಗಳಾಗಿ ಮಾರ್ಪಡಿಸಲ್ಪಟ್ಟಿರುವ ಬೆಟ್ಟು ಸ್ಥಳಗಳ ಪುನರ್ವಿಭಾಗಮಾಡಲು ಹೊರಟಿರುತ್ತದೆ. ಇದೇ ರೀತಿಯಲ್ಲಿ ದಕ್ಷಿಣ ಕನ್ನಡದಲ್ಲಿಯೂ ಈ ಸ್ಥಳಗಳ ಪುನರ್ವಿಭಾಗವು ನಡೆಸಲ್ಪಡಬೇಕೆಂದು ಸರಕಾರದ ಸ್ಪೆಶಲ್ ಸೆಟ್ಲ್‌ಮೆಂಟ್ ಆಫೀಸರರು ರಿಪೋರ್ಟುಮಾಡಿರುವರೆಂದು ನಾನು ತಿಳಿಯುತ್ತೇನೆ. ಕಳೆದ ವರ್ಷ ಇದೇ ಸಭೆಯಲ್ಲಿ ಈ ವಿಷಯದಲ್ಲಿ ನಡೆದ ಚರ್ಚೆಗೆ ಉತ್ತರವಾಗಿ ಮಾನ್ಯ ರೆವಿನ್ಯೂ ಮೆಂಬರರು, "ಹೆಚ್ಚಿನ ನೀರಾವರಿ ಅನುಕೂಲತೆಗಳನ್ನೊದಗಿಸಿ ಕೊಟ್ಟಿರುವಲ್ಲಿ ಮಾತ್ರವೆ ಪುನರ್ವಿಭಾಗದ ಕುರಿತು ಮಾರ್ಪಾಟುಗಳು ಮಾಡಲ್ಪಟ್ಟಿರುತ್ತವೆ; ಇಂತಹ ಪುನರ್ವಿಭಾಗಗಳೂ ಇತ್ತಲಾಗಿ ನಡೆಯುದು ಬಹಳ ಕಡಿಮೆ." ಯೆಂದಿರುವರು. ನಾನು ಮೊದಲು ಹೇಳಿದಂತೆ ಸರಕಾರವು ಒಂದು ಪೈಯನ್ನು ನೀರಾವರಿ ಕೆಲಸಗಳಿಗಾಗಿ ವೆಚ್ಚಮಾಡದ ಮಲಬಾರು ಮತ್ತು ದಕ್ಷಿಣ ಕನ್ನಡಗಳಲ್ಲಿ ಪುನರ್ವಿಭಾಗವನ್ನಾರಂಭಿಸುವುದರಲ್ಲಿ ಯಾವ ನ್ಯಾಯವಿದೆಯೆಂದು ತಿಳಿಯಲಿಚ್ಛಿಸುತ್ತೇನೆ. ಇದು ಇಚ್ಛೆಯನುಸಾರ ಮಾಡಲ್ಪಡುವುದೋ? ಅಥವಾ ಯಾವುದಾದರೂ ನಿಶ್ಚಿತ ತತ್ವಗಳಿಗನುಗುಣವಾಗಿಯೋ? ಭೂಕಂದಾಯ ವಿಷಯವನ್ನು ಎಕ್ಸಿಕ್ಯೂಟಿವ್ ಅಧಿಕಾರಿಗಳು ತಮಗೆ ಇಷ್ಟಬಂದಂತೆ ನಿಷ್ಕರ್ಷಿಸದಿರುವುದಕ್ಕೋಸ್ಕರ ಅದರ ಮುಖ್ಯ ತತ್ವಗಳನ್ನೊಳಗೊಂಡಿರುವ ಒಂದು ಕಾಯಿದೆಯನ್ನೇ ಮಾಡುವ ಆವಶ್ಯಕತೆಯು ಇದರಿಂದಲೇ ವಿದಿತವಾಗದಿರಲಾರದು.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ — ತೀರ್ಥಹಳ್ಳಿ — ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಗ್ಗೆ ೮ ಘಂಟೆಗೆ ಹೊರಡುತ್ತಾ ಇದ್ದಿತು. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೪—೨೯ರ ಆರಭ್ಯ ಶಿವಮೊಗ್ಗಾದಿಂದ ಬೆಳಗ್ಗೆ ೭ರವರೆ ಘಂಟೆಗೆ ಹೊರಡಲು ಏರ್ಪಾಡು ಮಾಡಿದೆ.

ತೀರ್ಥಹಳ್ಳಿ — ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೮—೦.

ಅರಗ, ಗುಡ್ಡೇಕೊಪ್ಪ, ಕೋಣಂದೂರು, ಹಾದಿಗಲ್, ಹುಮಚದಕಟ್ಟೆ, ರಿಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಗಳ ದೆಸೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೬—೧೧—೨೯ರಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,
ಮಾಲಿಕ,
ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

[illegible] Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. **Tel: Conveyance.**

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೆ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟು ಮಾರ್ಗವಾಗಿ ಬೆಳ್ತಂಗಡಿಗೆ ಮುಟ್ಟುತ್ತ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದ್ರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡುಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ [illegible] 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೆ ಸೇರಿ, ಅಲ್ಲಿಂದ ಕೂಡಲೇ ಹೊರಟು [illegible] ಫರ್ಸ್ಟ್ ಕ್ಲಾಸ್ [illegible] 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ [illegible] ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಫರ್ಸ್ಟ್‌ಕ್ಲಾಸ್ [illegible] 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ [illegible] ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ [illegible] ಘಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ [illegible] ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ, ಪಂಡರಾಪೂರ, ಗೋವಾ, ಬೆಳಗಾಂವ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲದಾಗಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೆಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲದಾಗಿರುತ್ತೆ.

ವಿಶೇಷ ಸಮಾಚಾರಗಳಿಗೆ ಮೇಲಿನ ವಿಳಾಸಕ್ಕೆ ಮೆನೇಜರ್ ಪ್ರೊಪ್ರೈಟರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಖಾನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು [illegible] ಕೊಡಗು, ಮತ್ತು [illegible] ಸ್ಥಾನಗಳಿಗೆ ಬಸ್ಸುಗಳೊಂದಿಗೆ ಕನೆಕ್ಷನ್ [illegible] ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರು [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲುಪಿ [illegible] ರಚಿತವಾಗಿ, 37 ಫೀಟು ಎತ್ತರವಾಗಿ [illegible] ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು [illegible] ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು [illegible] ಘಂಟೆಗಳೊಳಗೆ ಕುಂದಾಪುರಕ್ಕೆ ತಲುಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದವರು [illegible] ಅತ್ಯಂತ [illegible] ಉಪ್ಪಿನಂಗಡಿಗೆ ಬೇಗನೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ [illegible] ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ [illegible] ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಹರಿಹರ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., Mangalore S. K.

[illegible]

ಮಲೇರಿಯಾನ
ಮಸ್ತಿಷ್ಕ ಸಂಜಾಪನ

ಯುವಕ ವಿದ್ಯಾರ್ಥಿಯ ಲಕ್ಷಕ್ಕೆ ತಕ್ಕೊಳ್ಳಬಾರದೆ?

ದೇಹದ ಆರೋಗ್ಯವೂ ಮೆದುಳಿನ ಬಲವೂ ಇದ್ದ ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವುದು.

ಆದರೆ ದೇಹದ ಆರೋಗ್ಯವು ಕೆಟ್ಟು ಹೋದಲ್ಲಿ ಮೆದುಳಿನ ಬಲವು ಕುಂದಿರುವದು ಸಹಜವೇ. ಅಂಥಾ ಯುವಕರಿಗೆ ವಿದ್ಯಾಭ್ಯಾಸವು ಅತೀ ಕಷ್ಟಕರವಾಗಿದೆ. ಅಂಥಾ ಯುವಕರು ಸದಾ ವಿದ್ಯಾಭ್ಯಾಸದಲ್ಲಿ ತೊಡಗಿದವರಾಗಬೇಕಾದ್ದರಿಂದ, ದೇಹವು ಆರೋಗ್ಯವುಳ್ಳದ್ದಾಗಿಯೂ ಮೆದುಳು ಶಕ್ತಿವಂತವಾಗಿಯೂ ಇರಬೇಕು. ಕಂಪೌಂಡು ಸಿರಪ್ಪು ಸಾಲಿಸನ್ ಎಂಬ ಔಷಧವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ, ಮೆದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತೀ ಗುಣಕಾರಿಯಾಗಿದೆ.

ಕ್ರಯ 8 ಔನ್ಸಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳಿವೆ.)

ಮೆದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋರಾತ್ರಿ ತಲೆಮಂಡೆ ಬಡಕೊಂಡು ಪ್ರಯಾಸದಿಂದ ಓದುವ ಯುವಕರ ತಲೆ ಮೆದುಳು ಬಹು ಬಿಸಿಯಾಗಿ ತಲೆ ನೋವು [illegible] ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಆಪತ್ತು ರೋಗಗಳ ಪರಿಹಾರ ಮಾಡುವಂತೆಯೂ ಅಥವಾ ಅಂಥಾ ಆಪತ್ತು ರೋಗಗಳು ಹುಟ್ಟದಂತೆಯೂ [illegible] ತೈಲದ ಉಪಯೋಗವು ಬಹು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ಬಿಸಿ [illegible] ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮೆದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

[illegible] ಕಾಲದಲ್ಲಿ [illegible] ಅನುಸರಿಸುವದು, ಜಾಣ ಯುವಕರ [illegible]

ಕ್ರಯ [illegible] ಔನ್ಸಿಗೆ [illegible]

ವಿಶೇಷ ಸಮಾಚಾರ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, [illegible] ಮತ್ತು [illegible] ಮದ್ದುಗಳ ಸಮೂನೆ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ:

ಮಲೇರಿಯಾನ ಕಂಪೆನಿ,

ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪ್ಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮಂಗಳ ಕಸಿಗಿಡ, ಸಪ್ಪೋಟಿಲ್ಲಾ, ಬೇರಳೆ, ಚಿಕ್ಕಳೆ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪಪ್ಪಾಯಿ ಮುಂತಾದ ಕಸಿಗಿಡಗಳೂ ಸಿಗುವುವು. [illegible] ನಮ್ಮಲ್ಲಿಯೇ [illegible] ಸಂದೇಹವಿಲ್ಲದೆ [illegible] ಫಲದಿಸುವುವು. ಬೆಂಗಳೂರು, ಸೇಲಂ ಕಸಿ [illegible] ಕಂಪನಿ ಮತ್ತೊಬ್ಬರ ಒಪ್ಪದೆ ಸರಿಯಾಗಿ ಫಲ ದಿಸುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ [illegible] ಮಂಗಳೂರು ಕಾರ್‌ಸ್ಟ್ರೀಟ್ ಹೋಮ, [illegible] ದೊರೆಯುವುವು.

ಕೆ. [illegible] ಶೆಟ್ಟಿ, ದಿ ಕೆನರಾ ನರ್ಸರಿ, [illegible] — C/o ಕೆ. ವಾಮನ ಶೆಟ್ಟಿ, [illegible], ಮಂಗಳೂರು. [illegible]

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ,

ಲಿಮಿಟೆಡ್, ಪೂನಾ ಸಿಟಿ.

1 [illegible] ವಿಮೆಯ [illegible] ಮತ್ತು [illegible] ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಅನುಭವಿಕರೂ, ಪ್ರತಿಷ್ಠಿತರೂ ಆದ ಡ್ಯಾರೆಕ್ಟರರು.

3 [illegible] ಅನುಭವದ ವ್ಯವಸ್ಥಾಪಕ, ಮಿತವ್ಯಯದ ಮತ್ತು [illegible].

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

ಉದಾರವಾದ ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ ಮಾಡುವ ಕೆಲಸಗಳನ್ನು ಕೈಕೊಳ್ಳುವ, ಸಂಬಿಗಸ್ತ ಮತ್ತು ಪರಿಶ್ರಮಿ ಯಾದ ಏಜಂಟರುಗಳು ಬೇಕಾಗಿರುವರು.

ಪ್ರತ್ಯಕ್ಷರಿಗೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. ಕಾಶಿನಾಥ ಭಟ್ಟ, [illegible] ಜನರಲ್ [illegible] ದಕ್ಷಿಣ ಕನ್ನಡ [illegible]

ಪಿ. ಅಭಯಶಂಕರ ದೇಶಪಾಂಡೆ ಮತ್ತು ಕಂಪೆನಿ, [illegible] ಏಜೆಂಟ್ಸ್.

ಓದಿರಿ ಪುಸ್ತಕ! ೩೦೦ ಪೇಜುಗಳು ಇವೆ

[ಸಾವು ಬಾಕಿಯಿರುವಾಗಲೇ ಕಾಪಿಗಳನ್ನು ತರಿಸಿಕೊಳ್ಳಿರಿ]

ಸ್ತ್ರೀ ಪುರುಷರ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದ ಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಕ್ರಯ ರೂ. ೧-೮-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ, ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆಸಿಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಕಾಲ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕ ಕರ್ಮ ನಿಯಮಗಳು, ಶಿಶೂತ್ಪತ್ತಿವಿಧ, ಯುಕ್ತ ವ್ಯಾಧಿಗಳ ಚಿಕಿತ್ಸೆ, ಶಯನಕೃತ್ಯ ಕಿರುರಹಸ್ಯ ನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗೂಢ ರಹಸ್ಯ, ಇನ್ನೂ ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಪ್ರಿಂಟಾಗಿದೆ.

ಕ್ರಯ ಪುಸ್ತಕ ೧ಕ್ಕೆ ೧-೮-೦

ವಿಳಾಸ: — K. Nadhamuni & Son.
ಕೆ. ನಾಧಮುನಿ ಅಂಡ್ ಸನ್, 168 China Bazaar
೧೬೮ ಚೈನಾ ಬಜಾರ್, ಮದರಾಸು. Madras.

COFFEE!

THE UNIVERSAL DRINK !!

THE STANDARD OF

PURITY & QUALITY !!!

HIGHEST AWARDS AT VARIOUS EXHIBITIONS

Manufactured by:

'GIRI COFFEE WORKS'

Write for quotations to Proprietors:—

Messrs. M. LACHIA SETTY & SONS

COFFEE GROWERS AND MANUFACTURERS

CHIKMAGALUR
(MYSORE STATE)

ADVERTISE IN OUR WEEKLY.

To Reach the Hearths & Homes OF INDIA'S MASSES

For Particulars Apply to:

The Manager,
SWADESHABHIMANI,
MANGALORE.

ಮೊಗವೀರ ವ್ಯವಸ್ಥಾಪಕ ಮಂಡಳಿ
ಮತ್ತು
ಮೊಗವೀರ ಕ್ಲಾರ್ಕ್ಸ್ ಯೂನಿಯನ್
ಮುಂಬಾಯಿ.

ಈ ಮೇಲ್ಕಾಣುವ ಸಂಘದ ೧೯ನೆಯ ಇಸವಿಯ ವರ್ಷಾವಧಿ ಮಹಾಸಭೆಯು ಇದೇ ಕಳೆದ ತಾ. ೧೩-೧-೪೯ನೇ ಬುಧವಾರ ಅಪರಾಹ್ನ ೫ಕ್ಕೆ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಮಂದಿರದಲ್ಲಿ ಮದ್ರಾಸು ಗವರ್ನಮೆಂಟಿನ ಫಿಶರೀಸ್ ಇಲಾಖೆಯ ಇನ್ಸ್‌ಪೆಕ್ಟರರಾದ ಶ್ರೀಯುತ ಉಳ್ಳಾಲ ನಾಗಪ್ಪನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಸಭೆಗೆ ಸಾಧಾರಣ ೬೦೦ ಮಂದಿ ಸೇರಿದ್ದರು.

ಮಂಡಳಿಯು ನಡಿಸಿಕೊಂಡು ಬರುತ್ತಿರುವ ಶಾಲಾ ಬಾಲಕರು ಮತ್ತು ಮೊಗವೀರ ರೋವರ್ಸ್ ಸ್ಕೌಟರಿಂದ ದೇವರ ಪ್ರಾರ್ಥನೆಯಾದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಹೆಜ್ಮಾಡಿ ಬೋಮಯ್ಯ ಮಾಸ್ಟರರು, ರಾ। ನಾಗಪ್ಪನವರ ಯೋಗ್ಯತೆಯನ್ನು ಪರಿಚಯಿಸಿ ಉಪಸ್ಥಿತರಾದ ಸಭಿಕರಿಗೆ ವಿವರಿಸಿ ಅಧ್ಯಕ್ಷರಿಗೂ, ಸಭಿಕರಿಗೂ ಸ್ವಾಗತವನ್ನಿತ್ತು ಅಂದಿನ ಸಭಾಧ್ಯಕ್ಷತೆಯನ್ನು ವಹಿಸುವಂತೆ ಇನ್ಸ್‌ಪೆಕ್ಟರ್ ನಾಗಪ್ಪನವರನ್ನು ವಿನಂತಿಸಿದರು. ಇವರನ್ನು ಮ। ರಾ। ಮಂಗಳೂರು ಕೃಷ್ಣರಾವ್ ಬಿ. ಕರ್ಕೇರರು ಮನಃಪೂರ್ವಕ ಅನುಮೋದಿಸಲು ಅಧ್ಯಕ್ಷರು ಸಭಿಕರ ಹಸ್ತತಾಡನದೊಡನೆ ಆಗ್ರಾಸನವನ್ನು ಸ್ವೀಕರಿಸಿದರು.

ಮಂಡಳಿಯ ಮಹಾಸಭೆಯು ನಿರ್ವಿಘ್ನತೆಯಿಂದ ನೆರವೇರಲೆಂದು ಹರಸಿ ಬಂದಿದ್ದ ಪತ್ರಗಳನ್ನು ಕಾರ್ಯದರ್ಶಿಯವರು ಓದಿ ತಿಳಿಸಿದ ಬಳಿಕ ಸದಸ್ಯರ ಮುಂದೆ ಇಟ್ಟಿದ್ದ ೧೯ನೇ ವರ್ಷದ ವರದಿಯನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು.

ಮಂಡಳಿಯು ರಾತ್ರಿ ಶಾಲೆಯಲ್ಲಿ ಕಳೆದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ ವಿದ್ಯಾರ್ಥಿಗಳಿಗೆ ಡಾ। ಯಶ್ A. ಕೋಟ್ಯಾನರ ರೂ. ೧೦, ಡಾ। ಎ. ಎಸ್. ಕೈಯವರ ರೂ. ೫, ರಾ। ಸೋಮಪ್ಪ ಬಿ. ಕೋಟೆಕಾರರ ರೂ. ೫ ಮತ್ತು ಮಂಡಳಿಯ ಪರವಾಗಿ ರೂ. ೨೦ರ ಮೌಲ್ಯದ ಪುಸ್ತಕ ಇತ್ಯಾದಿಗಳನ್ನು ಮಂಗಳೂರಲ್ಲಿರುವ ಬೊಂಬೇ ಸ್ಟೋರ್ಸಿನ ಮಾಲೀಕರಾದ ರಾ। ಭಾಸ್ಕರಪ್ಪ ಬಿ. ಕೋಟೆಕಾರರ ಎರಡು ಪುಸ್ತಕಗಳನ್ನು ಬಹುಮಾನವಾಗಿ ಕೊಡಲಾಯಿತು.

ಮೊಗವೀರ ರೋವರ್ಸ್ ಸ್ಕೌಟರು ವಿದ್ಯೆ ಮತ್ತು ವ್ಯಾಯಾಮವು ಎಷ್ಟು ಅಗತ್ಯವಿದೆಯೆಂದೂ ಸ್ತ್ರೀ ವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬುದನ್ನೂ ಅತ್ಯುತ್ತಮ ಹಾಸ್ಯಭರಿತವಾದ ಸಂಭಾಷಣೆ ಮತ್ತು ಗಾಯನದಿಂದ ತೋರ್ಪಡಿಸಿ ಸಭಿಕರನ್ನು ಆನಂದಗೊಳಿಸಿದರು.

ಸಭೆಯಲ್ಲಿ ಸೇರಿದ್ದ ಮಹನೀಯರ ಪೈಕಿ ಡಾಕ್ಟರುಗಳಾದ ಕೆ. ಎಚ್. ರಾವ್, ಯು. ಬಿ. ನಾರಾಯಣರಾವ್, ಮೊದಲಾದವರು ಮಂಡಳಿಯ ಕಾರ್ಯನಿರ್ವಾಹಕ ಮತ್ತು ಕಾರ್ಯಕಾರಿ ಸಭೆಯವರು ವರ್ಷಾವಧಿಯಲ್ಲಿ ಮಾಡಿದ ಕೆಲಸಕ್ಕೆ ಸಂತೋಷವನ್ನು ಸೂಚಿಸಿ ಮಂಡಳಿ ಅಭಿವೃದ್ಧಿಯನ್ನು ಹೇಗೆ ಕೊಡಬಹುದೆಂಬುದನ್ನು ವಿವರಿಸಿದರು.

ಚಾಲ್ತಿ ವರ್ಷದ ಕಾರ್ಯನಿರ್ವಾಹಕ ಸಭೆಗೆ ಉಮೇದ್ವಾರರಾಗಿ ನಿಂತಿದ್ದ ಸದಸ್ಯರ ಪೈಕಿ ಹೆಚ್ಚು ಓಟುಗಳನ್ನು ಪಡೆದುಕೊಂಡಿದ್ದವರ ಹೆಸರನ್ನೂ ಅವರು ಪಡೆದಿದ್ದ ಓಟುಗಳ ಸಂಖ್ಯೆಯನ್ನೂ ಕಾರ್ಯದರ್ಶಿಯವರು ಓದಿ ತಿಳಿಸಲು ಸರ್ವಾನುಮತದಿಂದ ಅವರನ್ನು ವರ್ಷದ ಕಾರ್ಯಕರ್ತರನ್ನಾಗಿ ಮಂಜೂರು ಮಾಡಲಾಯಿತು.

ಸಭಾಧ್ಯಕ್ಷರು ತನ್ನ ಭಾಷಣದಲ್ಲಿ "ನಾನು ಹಿಂದೂಸ್ಥಾನದಲ್ಲಿ ಅತಿ ಸುಂದರವಾದ ಈ ಮುಂಬಾಯಿ ನಗರಕ್ಕೆ ಹೊಸತಾಗಿ ಬಂದವನು. ನಾನು ಇಲ್ಲಿಗೆ ಬಂದು ಇಳಿದಂದಿನಿಂದ ಇಂದಿನ ವರೆಗೆ ಮಂಡಳಿಯ ಸ್ವಾಗತ ಸಮಿತಿಯವರು ಮತ್ತು ಮೊಗವೀರ ರೋವರ್ಸ್ ಸ್ಕೌಟರು ಮತ್ತು ಇತರರು ಮಾಡಿರುವ ಮನ್ನಣೆಯನ್ನು ಕಂಡು ಹೇಳಲಾರದಷ್ಟು ಸಂತೋಷ ಉಂಟಾಗುತ್ತದೆ. ಅವರ ಉತ್ಸಾಹವನ್ನು ನಾನು ಶ್ಲಾಘಿಸುವುದಾದರೂ ಇಂಥಾ ಗೌರವಕ್ಕೆ ತಮ್ಮೆಲ್ಲರಿಗೆ ಆಭಾರಿಯಾಗಿರುವೆನು.

ಮೊಗವೀರ ಜಾತಿಯ ಮೇಲ್ಮೆಗಾಗಿ ಒಳ್ಳೇ ರೀತಿಯಲ್ಲಿ ಕೆಲಸ ಮಾಡುವ ಸಂಘಗಳಲ್ಲಿ ಇದು ಒಂದು ಆಗಿದೆಯೆಂದು ಹೇಳಲು ಸಂತೋಷ ಪಡುತ್ತೇನೆ. ಮಂಡಳಿಯ ೧೯ನೇ ಇಸವಿಯ ವರದಿಯನ್ನು ಓದಿದಲ್ಲಿ ಈ ವರ್ಷದ ಅಭಿವೃದ್ಧಿಯು ಸಮಾಧಾನವಾಗಿದೆ ಎಂದು ತಿಳಿಯುತ್ತೇನೆ. ಸಂಘದ ಎಲ್ಲಾ ಉದ್ದೇಶಗಳು ಯೋಗ್ಯ ರೀತಿಯಲ್ಲಿ ಮುಂದುವರಿಯಬೇಕಾದರೆ ಧನವಾಳವು ಹೆಚ್ಚಾಗಿರಬೇಕು. ಈ ಕುರಿತು ಸಂಘದ ಪ್ರತಿ ಒಬ್ಬ ಸದಸ್ಯರೂ ತಮ್ಮಿಂದ ಸಾಧ್ಯವಾದಷ್ಟರ ಮಟ್ಟಿಗೆ ಹಣವನ್ನು ಕೂಡಿಸುವುದಕ್ಕೆ ಪ್ರಯತ್ನಿಸಬೇಕು. ಸಮಾಜದ ಏಳಿಗೆಯನ್ನು ಪ್ರತಿಯೊಬ್ಬ ಮೊಗವೀರರೂ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಮಂಡಳಿಯು ಮಕ್ಕಳ ವಿದ್ಯಾಭ್ಯಾಸದ ಕುರಿತು ಹೆಚ್ಚಿನ ಪ್ರೋತ್ಸಾಹ ಮಾಡುತ್ತಿರುತ್ತದೆ. ಆದರೂ ಈ ವರೆಗೆ ಯಾರಾದರೊಬ್ಬ ಸ್ತ್ರೀ ವಿದ್ಯಾರ್ಥಿಯನ್ನು ವಿದ್ಯಾರ್ಥಿ ವೇತನದಿಂದ ಪ್ರೋತ್ಸಾಹಿಸಿರುವುದಿಲ್ಲ. ಅದ್ದರಿಂದ ಇನ್ನು ಸ್ತ್ರೀ ವಿದ್ಯಾಭ್ಯಾಸದ ಕುರಿತು ಗಮನಕೊಡಬೇಕೆಂದೂ ಮುಂಬಾಯಿಯಲ್ಲಿರುವ ಸ್ವಜಾತಿ ಸ್ತ್ರೀಯರಿಗೆ ಹೆಚ್ಚಿನ ವಿರಾಮವಿರುವುದರಿಂದ ಒಂದು ಸೋಶಿಯಲ್ ಕ್ಲಬ್ (Social Club) ಮಾಡಿದರೆ ಇವರಿಗೆ ಆಗಾಗ್ಗೆ ಒಟ್ಟಾಗಿ ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿಕೊಳ್ಳುವುದಕ್ಕೂ ಹೆಚ್ಚಿನ ಅನುಭವವನ್ನು ಪಡೆಕೊಳ್ಳುವುದಕ್ಕೂ ಅನುಕೂಲವಾಗುತ್ತದೆ.

ಮಂಡಳಿಯ ಸದಸ್ಯರಾದ ನಿಮಗೆ ವಿಶೇಷವಾಗಿ ಹೇಳುವುದೇನೆಂದರೆ ನೀವು ಯಾವ ಉಡುಪನ್ನೇ ಧರಿಸಿರಿ, ಯಾವ ಆಹಾರವನ್ನೇ ತಿನ್ನಿರಿ, ಯಾವ ರೀತಿಯಲ್ಲೇ ದೇವರನ್ನು ಭಜಿಸಿರಿ ಆದರೆ ಸ್ವಜಾತಿ ಪ್ರೇಮವನ್ನು ಮಾತ್ರ ಬಿಡಬೇಡಿರಿ. ಇದೇ ನನ್ನ ಕಡೆಯ ಪ್ರಾರ್ಥನೆ" ಎಂದರು.

ಕೊನೆಗೆ ಮಂಡಳಿಯ ಕಾರ್ಯನಿರ್ವಾಹಕ ಸಭೆಯವರಿಗೂ, ಕಾರ್ಯಕಾರಿ ಸಮಿತಿಯವರಿಗೂ, ಸ್ವಯಂಸೇವಕರಿಗೂ, ಧನಸಹಾಯವಿತ್ತ ಮಹನೀಯರಿಗೂ, ಸದಸ್ಯರಿಗೂ, ಮೊಗವೀರ ರೋವರ್ಸ್ ಸ್ಕೌಟರಿಗೂ, ಬೆಸ್ತ ಡ್ರೈವರುಗಳಿಗೂ, ವಿವಿಧ ವಿಷಯದಲ್ಲಿ ಪ್ರೋತ್ಸಾಹಿಸಿದ ಸರ್ವ ಸಭ್ಯರಿಗೂ ಮತ್ತು ಅಧ್ಯಕ್ಷರಿಗೂ ಧನ್ಯವಾದಗಳನ್ನಿತ್ತು ಬಳಿಕ ಮಂಗಳಾರತಿಯನ್ನು ಹಾಡಿಸಿ ಫಲಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಲ್ಪಟ್ಟು ಸಭೆಯು ಕೊನೆಗೊಂಡಿತು.

ESTABLISHED 1875.

M. Ganapaya & Sons,

AYURVEDIC PHYSICIANS.

Car Street, MANGALORE, S. Kanara

(೫೩ ವರುಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟ

— ಔ ಷ ಧ ಗ ಳು .) —

1. ಅಶೋಕಾರಿಷ್ಟ ಮತ್ತು ಮಾತ್ರೆ—

ಹೆಂಗಸರ ಮುಟ್ಟಿನ ದೋಷಗಳು, ಮುಟ್ಟು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ದುರ್ಬಲತೆ, ಬಿಳಿಜ್ವರ, ರಕ್ತಹೀನತೆ, ಕೈಕಾಲು ಸೆಳೆತ, ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ ಅಂತರಳ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರ್ತಿಸುವುದು.

ಒಂದು ಬಾಟಲಿ ಔಷಧಕ್ಕೂ ಒಂದು ಡಬ್ಬಿ ಮಾತ್ರೆಗೂ 2-4-0

ಮೂರು ಬಾಟ್ಲಿ ಮತ್ತು ಡಬ್ಬಿಗಳಿಗೆ 6-4-0.

2. ಮಲೇರಿಯಾ ನಿವಾರಿಣಿ—

ಗಟ್ಟದ ಪ್ರಾಂತಗಳಲ್ಲಿಯೂ, ರಬ್ಬರ್ ತೋಟಗಳಲ್ಲಿಯೂ, ಮಲೆನಾಡು ಪ್ರಾಂತ್ಯಗಳಲ್ಲಿಯೂ ಇರುವವರನ್ನು ಸುಲಭವಾಗಿ ಆಕ್ರಮಿಸುವ ಮಲೇರಿಯಾ ಜ್ವರವನ್ನು ಇದು ಸ್ವಲ್ಪದಲ್ಲಿಯೇ ಹೋಗಲಾಡಿಸುವುದು. ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಜಾ, ನಿಮೋನಿಯಾ, ಒಂದು ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಜ್ವರದಿಂದ ಉಂಟಾದ ನಾನಾತರದ ವ್ಯಾಧಿಗಳು ಹೋಗಲಾಡಿಸಲ್ಪಟ್ಟು, ಸಂಪೂರ್ಣ ಆರೋಗ್ಯವು ಲಭಿಸಿದರು. ಮಲೆಜ್ವರದಿಂದ ಬಾಧಿಸಲ್ಪಟ್ಟು ಹಲವುತರದ ಔಷಧಿಗಳನ್ನು ಉಪಯೋಗಿಸಿ, ಗುಣಕೊಡದೆ ನಿರಾಶರಾದ ಹಲವು ರೋಗಿಗಳು ನಮ್ಮ ಮಲೇರಿಯಾ ನಿವಾರಿಣಿಯ ಸೇವನೆಯಿಂದ ಪೂರ್ಣ ಆರೋಗ್ಯವಂತರಾಗಿರುವರು.

ಕ್ರಯ: ಬಾಟ್ಲಿಯೊಂದಕ್ಕೆ 1-8-0, 3 ಬಾಟ್ಲಿಗೆ 4-2-0.

ಇವುಗಳಲ್ಲದೆ ಮಲೇರಿಯಾಗುಟಿಕೆ, ಜ್ವರಗಜಕೇಸರಿ, ಸ್ತಂಭನ ವಟಿ, ಬಾಲಗ್ರಹ ಗುಟಿಕೆ, ಜಾತಕರಾದಿ ಗುಟಿಕೆ, ಇಚ್ಛಾಭೇದಿ ಗುಟಿಕೆ, [illegible] ಮುಂತಾದ ಔಷಧಗಳೂ ದೊರೆಯುವವು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಗಾಂಧಿ ಜೋಯಿಸರಿಂದ ಸತ್ಯವು ಹೊರಗೆಡಹಲ್ಪಡುವದು

ನಿಮ್ಮ ಭವಿಷ್ಯವನ್ನು ತಿಳಿಯಬೇಕೆಂದಿದೆಯೇ? ನಿಮಗೆ ತಿಳಿದಿದ್ದಾದರೆ, ನಿಮ್ಮ ಜಾತಕವನ್ನು ಅಥವಾ ನೀವು ಪತ್ರ ಬರೆವ ಸಮಯವನ್ನು ಬರೆದು ಕಳುಹಿಸಿರಿ. ಭವಿಷ್ಯವನ್ನು ಕಂಡುಹಿಡಿಯಲು ಪ್ರಶ್ನೆಗಳ (ಅಧಿಕ ಪ್ರಶ್ನೆ ರೂ. ೧; ಪ್ರತಿ ಹೆಚ್ಚಿನ ಪ್ರಶ್ನೆಗೆ ಆಣೆ ೪ ಮಾತ್ರ, ಪ್ರತಿ ತಿಂಗಳ [illegible] ಜಾತಕ ಫಲ ರೂ. ೩; ಐದು ವರ್ಷದ ಫಲ ರೂ. [illegible] ನೀವು ಕೈಕೊಂಡಿರುವ ಎಲ್ಲ ಕಾರ್ಯಗಳಲ್ಲಿ ಜಯ [illegible] ಆಣೆ ೪; ನಿಮಗಾಗಿಯೇ ಬೇರೆ ಜಾದಿ ತಾಯಿತಕ್ಕೆ ರೂ ೫೦

ಆಂಧ್ರ ಪತ್ರಿಕೆ—(ತೆಲುಗು ದೈನಿಕ ವಾರಪತ್ರಿಕೆ) [illegible] ವಿ. ಕೆ. ಶಠಗೋಪಾಚಾರ್ಯರ [illegible]

V. K. Satagopachariar,

Hanuman Astrological Office,

TIRUTTANI, CHITTOOR DISTRICT.

Madras Presidency.

ವಿ. ಕೆ. ಶಠಗೋಪಾಚಾರ್ಯರ್,

ಹನುಮಾನ್ ಎಸ್ಟ್ರೊಲೊಜಿಕಲ್ ಆಫೀಸ್,

ತಿರುತ್ತಣಿ, ಚಿತ್ತೂರು ಜಿಲ್ಲೆ,

[illegible]

ಇನ್ನು ಹೆದರಬೇಕಾದುದಿಲ್ಲ.

ಅಶಕ್ತತೆಯನ್ನೂ, ರಕ್ತಹೀನತೆಯನ್ನೂ ನಿವಾರಿಸಲು ನಿಮಗೆ ಬೇಕಾದುದೇ ನಮ್ಮಲ್ಲಿದೆ

ಒಮ್ಮೆ ಪರೀಕ್ಷಿಸಿದರೆ ತಾನಾಗಿಯೇ ತಿಳಿಯುವುದು.

ಫೆರ್ರೊಕ್ವಿನ್

FERROQUIN

ಕ್ಷೀಣವಾದ ಶರೀರಕ್ಕೆ ಶಕ್ತಿತುಂಬಿಸಲು, ಉತ್ತಮವಾದ ಮತ್ತು ಆದರ್ಶವಾದ

ಪೌಷ್ಟಿಕ ರಸಾಯನ

ಬಾಟಲಿಯೊಂದಕ್ಕೆ ಕ್ರಯ ರೂ. 3 – 4 – 0 ಮಾತ್ರ

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಬೇರೆ

ಸಮಸ್ತ ಔಷಧಗಳನ್ನೂ, ಔಷಧೋಪಕರಣಗಳನ್ನೂ ನಾವು ಒದಗಿಸಿಕೊಡುವೆವು.

ಮಂಗಳೂರಿಗೆ ಬಂದಾಗ ನಮ್ಮನ್ನು ಸಂದರ್ಶಿಸಿದರೆ ನಿಮಗೆ ಇವೆಲ್ಲವುಗಳು

ಖಚಿತವಾಗುವುವು.

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲೀಷ್ ಯಾ ಕನ್ನಡದಲ್ಲಿ ಬರೆಯಿರಿ

ಆಫೀಸು,

ಡೊಂಗರಕೇರಿ ಸ್ಟ್ರೀಟ್,

ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,

ಕೊಡಿಯಾಲ್‌ಬೈಲ್ ಪೋಸ್ಟು,

ದ. ಕನ್ನಡಾ.

ನೀವು ಶಕ್ತಿಯುತರೂ ಚುರುಕಾದವರೂ ಆಗಿರಬೇಕಾದರೆ ಈ ಎರಡು ಅವಶ್ಯಕತೆಗಳು ನಿಮಗೆ ಬೇಕಾಗಿವೆ. ಅದಕ್ಕಾಗಿ ಪ್ರತಿಯೊಬ್ಬ ಹೆಂಗಸೂ ಇಚ್ಛಿಸುತ್ತಾಳೆ. ಮಾತೃತನಕ್ಕೆ ಆವಶ್ಯಕವಿರುವ ಪೂರ್ಣ ಶಾರೀರಿಕ ಆರೋಗ್ಯವು ಹೆಂಗಸಿಗೆ ಮಾತ್ರವೇ ಆಗಿರುವ ಫೆಲೂನಾ ಮಾತ್ರೆಗಳಿಂದ ಲಭಿಸುವುದು. ಆವಶ್ಯಕ ಕಬ್ಬಿಣ ಇದರಲ್ಲಿ ಅಡಕವಾಗಿರುವುದು. ಫೆಲೂನಾ ಮಾತ್ರೆಗಳು ನಿಮಗೆ ಸಹಾಯಕವಾಗಿರಲಿ.

FELUNA

ಇಂಡೋಬಾಮ್

[illegible]

ಕರ್ಣಾಟಕ ಬ್ರದರ್ಸ್,

ಮುಂಬಾಯಿ ನಂ. 4

ತ್ವರೆಮಾಡಿರಿ. ತ್ವರೆಮಾಡಿರಿ

ಶಾಲಾ ಹುಡುಗರಿಗೂ ಇತರರಿಗೂ ಬೇಕಾಗುವಂತಹ ನಿಬ್ಸ್, ಪೆನ್ ಹೋಲ್ಡರ್, ಮತ್ತು ಸಾದಾ ಪೆನ್ಸಿಲುಗಳು, ಬಣ್ಣಗಳೂ ವಿವಿಧ ಸ್ಯಾಂಪಲ್ ಇಂಕ್ ಬಾಟ್ಲಿಗಳೂ, ಹೊಸತಾಗಿ ತರಿಸಿರುತ್ತೇವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು.

NOTICE.

Applications are invited for the posts of Supervisors of Co-operative Societies under the South Kanara District Co-operative Council of Supervision Ltd., Mangalore, on a salary of Rs. 30 + 16 per mensem. Only those who have passed in the Co-operative Training Classes and who know Kanarese or Malayalam or both need apply.

Applications are also invited from candidates, who are willing to undergo Co-operative Training course for Supervisors at Coimbatore at their own cost. Minimum educational qualification required is complete Secondary School Leaving Certificate.

Please apply with testimonials to the undersigned.

Mangalore,
10-4-39.

(Sd) N. N. Suvarna,
President.

ಕಲ್ಲಂಗಡಿಯ ಕೃಷಿ

ಸಿರಾ ತಾಲೂಕಿನ ಸಿದ್ಧನಕಟ್ಟೆ (ಸಿದ್ಧಾಪುರ) ಎಂಬುವ ಸ್ಥಳದಲ್ಲಿ ನದಿಯ ದಡದಲ್ಲಿ ಸುಮಾರು ನಾಲ್ಕೈದು ಮೈಲು ವಿಸ್ತಾರದ ಸ್ಥಳದಲ್ಲಿ ಹುಲುಸಾಗಿ ಕಲ್ಲಂಗಡಿಯನ್ನು ಬೆಳೆಯುವರು. ಈ ಸ್ಥಳದಲ್ಲಿ ಕಲ್ಲಂಗಡಿಯ ಕೃಷಿ ಮಾಡುವವರು ಹೆಚ್ಚಾಗಿ ಬಡ ಕಂಚುಗಾರರೂ ಮಹಮ್ಮದೀಯರೂ ಆಗಿರುವರು. ಶಿವಮೊಗ್ಗೆಯಲ್ಲಿಯೂ ತುಂಗಭದ್ರಾ ನದಿಯ ಸಮೀಪ ಕಲ್ಲಂಗಡಿಯು ಬೆಳೆಯಾಗುತ್ತಿದೆ. ಕಲ್ಲಂಗಡಿಯನ್ನು ಸಾಧಾರಣವಾದ ಗದ್ದೆಗಳಲ್ಲಾಗಲೀ, ನೀರು ಬಿಡುವ ಬಯಲುಗಳಲ್ಲಾಗಲೀ, ಬೆಳೆಸಲು ಸಾಧ್ಯವಿರುವುದಿಲ್ಲ. ಹಾಗೆ ಒಮ್ಮೆಗೆ ಬೆಳೆಸಿದರೂ ಅವರ ಅವು ಹೆಚ್ಚಾಗಿ ಉತ್ಪತ್ತಿಯಾಗಲಾರವು. ಅವುಗಳು ಚೆನ್ನಾಗಿ ಬೆಳೆಯಲಾರವು. ಗದ್ದೆಗಳಲ್ಲಿ ಒಳ್ಳೆಯ ಬೀಜ ಬಿತ್ತಿ ಮಾಡಿದ ಬಳ್ಳಿಗಳಲ್ಲಿಯೂ ಉತ್ತಮ ಕಲ್ಲಂಗಡಿಗಳು ಹುಟ್ಟಲಾರವು. ಆದರೆ ಯುರೋಪು, ಪರ್ಷಿಯಾ, ತುರ್ಕಿ, ಅಫಘಾನಿಸ್ಥಾನ, ಅಮೇರಿಕ ಮೊದಲಾದ ಕಡೆಗಳಲ್ಲಿ ಇದನ್ನು ನದೀ ತೀರಗಳಲ್ಲಿ ಬೆಳೆಸದೆ ಇತರ ಸ್ಥಳಗಳಲ್ಲಿ ಬೆಳೆಸುವರು. ಅದಕ್ಕೆ ಈ ಕೆಳಗಿನವುಗಳೇ ಮುಖ್ಯ ಕಾರಣಗಳೆನ್ನಬಹುದು.

(೧) ಮಣ್ಣು ಹೊಯ್ಗೆಯಿಂದ ಕೂಡಿದುದಾಗಿರಬೇಕು.

(೨) ನೆಲದ ಒಂದಡಿ ಕೆಳಗೆಯೇ ನೀರಿನ ಜರಿಯಿರಬೇಕು.

(೩) ಗಿಡದ ಬೆಳವಣಿಗೆಯ ಸಮಯದಲ್ಲಿಯೂ, ಹಣ್ಣಿನ ಉಬ್ಬುವಿಕೆಯ ವೇಳೆಯಲ್ಲಿಯೂ ಹವೆಯು ಅಷ್ಟು ಉಷ್ಣವಾಗಿರಬಾರದು. ಮಳೆಯಾಗಲಿ, ಮೋಡ ಕವಿದಿರುವ ಹವೆಯಾಗಲಿ, ಅದರ ಬೆಳವಣಿಗೆಗೆ ಹಾನಿ, ಹಣ್ಣುಗಳು ಮಳೆಬಿದ್ದರೆ ಕೊಳೆತು ಹೋಗುವವು.

(೪) ಭತ್ತದ ಗದ್ದೆಗಳ ನೀರಾವರಿ ಕೆಲಸದಂತೆ ನೀರನ್ನು ಒದಗಿಸುವುದು ಸರಿಯಲ್ಲ.

(೫) ನೆಲಗಡಲೆಯ ಹಿಂಡಿಯು ಹಣ್ಣಿನ ಸಿಹಿ ರುಚಿಯನ್ನೂ, ಪರಿಮಳವನ್ನೂ ಅಪಹರಿಸುವದು. ಅದು ಕಾರಣ ಅವಶ್ಯಕವಾದ ಗೊಬ್ಬರವನ್ನು ಉಪಯೋಗಿಸಬೇಕು.

ನಮ್ಮ ದೇಶದ ರೈತರ ಹುಟ್ಟುವಳಿಯು ಅವರ ಖರ್ಚಿನ ಪ್ರಮಾಣದಲ್ಲಿಲ್ಲವೆಂಬುದು ಎಲ್ಲರೂ ಒಪ್ಪತಕ್ಕಂತಹ ಮಾತಾಗಿರುತ್ತದೆ. ವರುಷದಲ್ಲಿ ಸುಮಾರು ನಾಲ್ಕಾರು ತಿಂಗಳುಗಳ ಸಮಯ ಅತನಿಗೆ ಕೆಲಸವಿರುವುದಿಲ್ಲವಾದುದರಿಂದ ಅತನು ಹೊಟ್ಟೆಗೆ ಬೇಕಾದಷ್ಟು ಸಂಪಾದಿಸಲಾರನು. ಈ ಸಮಯದಲ್ಲಿ ಅತನು ಏನಾದರೂ ಉಪವೃತ್ತಿಯನ್ನು ಮಾಡಿಕೊಂಡಿರುವದು ಲೇಸು. ಈ ಉಪವೃತ್ತಿಗಳಲ್ಲಿ ಹೆಚ್ಚು ಲಾಭದಾಯಕವಾದುದು ಹಣ್ಣುಗಳನ್ನೂ ಕಾಯಿಪಲ್ಯಗಳನ್ನೂ ಬೆಳೆಸುವುದಾಗಿದೆ. ಕಲ್ಲಂಗಡಿ, ಅದೇ ಜಾತಿಗೆ ಸಂಬಂಧಿಸಿದ ಸೌತೆ, ಕುಂಬಳ, ಬೂದುಕುಂಬಳ, ಮೊದಲಾದವುಗಳನ್ನು ನದಿಯ ಅಥವಾ ತೋಡುಗಳ ಸಮೀಪ ಬೆಳೆಸುವುದು ರೈತರಿಗೆ ಉತ್ತಮ ಉಪಾಯವಾಗಿರುತ್ತದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಚಿಕ್ಕ ಚಿಕ್ಕ ನದಿಗಳೂ, ನೀರು ಹರಿಯುವ ತೋಡುಗಳೂ ಅಸಂಖ್ಯಾತವಿರುತ್ತವೆ. ಈ ಕೃಷಿಯನ್ನು ಅವರು ಸುಲಭವಾಗಿ ಕೈಕೊಳ್ಳುವಂತೆ ಅವರಿಗೆ ಸರಕಾರದವರೂ ಸಹಕಾರಿ ಸಂಘಗಳೂ ಸಾಕಷ್ಟು ಸಹಾಯವನ್ನು ಮಾಡುತ್ತಿರಬೇಕು.

ಕಲ್ಲಂಗಡಿಯಲ್ಲಿ ಹಲವು ಜಾತಿಗಳಿರುತ್ತವೆ. ಸಿದ್ಧಾಪುರದಲ್ಲಿ ಸುಮಾರು ಇಪ್ಪತ್ತು ಜಾತಿಯ ಕಲ್ಲಂಗಡಿ ಹಣ್ಣುಗಳು ಬೆಳೆಸಲ್ಪಡುವವು. ಇವೆಲ್ಲವುಗಳು ಕಳೆದ ಹೆಚ್ಚು ವಂಶಗಳಿಂದೀಚೆಗೆ ಕಂಡುಹಿಡಿಯಲ್ಪಟ್ಟವು.

ಕಲ್ಲಂಗಡಿಯನ್ನು ಬೆಳೆಸಲು ನೆಲದಲ್ಲಿ ಫಲವತ್ತಾದ ಹೊಯ್ಗೆ ಇರಬೇಕು. ಪೆನ್ನಾರ ನದಿಯಲ್ಲಿ ಡಿಸೆಂಬರ ತಿಂಗಳಲ್ಲಿ ಸುಮಾರು ಒಂಭತ್ತರಿಂದ ಹದಿನೆರಡು ಇಂಚುಗಳ ವರೆಗಿನ ನೀರಿರುವುದು. ಮಳೆಗಾಲದಲ್ಲಿ ನೆರೆಬರುವದರಿಂದ ಇದರ ಬೆಳೆಯನ್ನು ಡಿಸೆಂಬರ ತಿಂಗಳಲ್ಲಿಯೇ ಪ್ರಾರಂಭಿಸುವರು. ಪ್ರತಿಯೊಬ್ಬ ರೈತನು ಸಾಧಾರಣವಾಗಿ ಎರಡು ಸಾವಿರ ಸಸಿಗಳನ್ನು ಬೆಳೆಸುವನು. ಕೆಲವರು ಹದಿನೈದರಿಂದ ಇಪ್ಪತ್ತು ಸಾವಿರದ ವರೆಗೆ ಸಸಿಗಳನ್ನು ಬೆಳೆಸುವದೂ ಇದೆ. ಮಾವಳಿಗೆ ಸರಿಯಾಗಿ ಪ್ರತಿ ರೈತನು ನದಿಯ ದಡದಲ್ಲಿ ತನಗೆ ಬೇಕಾದ ಸ್ಥಳವನ್ನು ಆರಿಸುವನು. ಡಿಸೆಂಬರದ ನಡುವಿನಲ್ಲಿ ಈ ಸ್ಥಳಗಳಲ್ಲಿ ಒಂದರಿಂದ ಒಂದೂವರೆ ಅಡಿ ದೂರಕ್ಕೆ ಒಂದರಿಂದ ೬ ಇಂಚು ಆಳದ ವರೆಗಿನ ಹೊಂಡಗಳನ್ನು ತೋಡುವರು. ಈ ಹೊಂಡಗಳ ವ್ಯಾಸವು ಒಂದೂವರೆ ಅಡಿಯಾಗಿರುತ್ತದೆ. ಸುಮಾರು ೩೦ ಹೊಂಡಗಳನ್ನು ಸಾಲಾಗಿ ಅಗೆದು, ಒಂದು ಸಾಲು ಮಾಡುವರು. ಪ್ರತಿಯೊಂದು ಸಾಲಿನ ಹಳ್ಳಗಳಲ್ಲಿಯೂ ಎರಡೆರಡು ಅಡಿ ಅಗಲದ ಸ್ಥಳವು ಬಿಡಲ್ಪಡುವದು. ಏಕೆಂದರೆ ಈ ಸ್ಥಳವು ಬೇಕಾದ ಮೇಲೆ ರೈತನು ನಡೆದುಹೋಗಲು ಬೇಕಾಗುವದು. ಎರಡು ಸಾಲುಗಳೊಳಗೆ ಅಂತರ ನಾಲ್ಕೈದು ಅಡಿಗಳು. ಸಾಲುಗಳು ಸಮಾನಾಂತರವಾಗಿ ಮಾಡಲ್ಪಡುವವು.

ಕಲ್ಲಂಗಡಿಯ ಬೀಜಗಳಿಗೆ ಮೂರು ವರುಷಗಳ ವರೆಗೆ ಮೊಳೆಯುವ ಶಕ್ತಿ ಇರುತ್ತದೆ. ಎರಡು ವರುಷಗಳ ಹಿಂದಿನ ಬೀಜಗಳನ್ನು ಸಾಧಾರಣವಾಗಿ ಬಿತ್ತುವರು. ಏಕೆಂದರೆ ಆ ಬೀಜಗಳಿಂದ ಪರಿಪುಷ್ಟವಾದ ಸಸಿಗಳು ಬೆಳೆದು ಉತ್ತಮ ಫಲಗಳನ್ನು ಬಿಡುವವು.

ಬೀಜಗಳನ್ನು ಕಾಪಾಡಿರುವದು ಈ ರೀತಿಯಾಗಿರುತ್ತದೆ. ಬೀಜಗಳನ್ನು ಚೆನ್ನಾಗಿ ಬಲಿತು ಪಕ್ವವಾದ ಹಣ್ಣಿನಿಂದ ಆರಿಸುವರು. ಅದನ್ನು ದನದ ಸೆಗಣಿಯ ಬೂದಿಯೊಂದಿಗೆ ಬೆರಸುವರು. ಬೀಜಗಳನ್ನು ನೀರಿನಲ್ಲಿ ತೊಳೆಯಲಾಗದು. ಬೂದಿಯೊಡನೆ ಬೆರಸಿದ ಬೀಜಗಳ ಬೆರಣಿಗಳ ರೂಪದಲ್ಲಿ ದೋಸೆಗಳಂತೆ ಮಾಡಿ ಗೋಡೆಗಳಿಗೆ ತಾಗಿಸಿ ಒಣಗಿಸಬಿಡುವರು. ಇವು ಚೆನ್ನಾಗಿ ಒಣಗಿದ ಮೇಲೆ ತೆಗೆದು ಒಂದು ಪಾತ್ರೆಯಲ್ಲಿ ಇಡಲೂಬಹುದು. ಅಥವಾ ಗೋಡೆಯ ಮೇಲೆಯೇ ಇರಲೂಬಹುದು. ಬೂದಿ ಇರುವ ಕಾರಣ ಹುಳಗಳು ಬೀಜಗಳನ್ನು ತಿನ್ನಲು ಬಯಸುವುದಿಲ್ಲ. ಮನುಷ್ಯನ ಎಂಜಲು ಸ್ಪರ್ಶಿಸಿದ ಬೀಜಗಳು ಮೊಳೆಯಲಾರವೆಂಬ ತಿಳುವಳಿಕೆಯಿರುವ ಕಾರಣ ತಿಂದ ಹಣ್ಣಿನ ಬೀಜಗಳನ್ನು ಮೊಳಕೆಗಾಗಿ ಕಾದಿಡುವುದಿಲ್ಲ.

ಮೊಳೆಯ ಹಾಕುವ ಹತ್ತು ದಿವಸಗಳ ಮೊದಲು ಆ ಬೀಜಗಳ ಬೆರಣಿಗಳನ್ನು ಒಡೆದು ಬೂದಿಯಿಂದ ಅವುಗಳನ್ನು ವಿಂಗಡಿಸುವರು. ಸಣ್ಣ ಸಣ್ಣ ಕಲ್ಲುಗಳನ್ನೂ ದೂರಮಾಡುವರು. ಆ ಮೇಲೆ ಬೀಜಗಳನ್ನು ಸೂರ್ಯನ ಬಿಸಿಲಿನಲ್ಲಿ ಒಣಗಿಸುವರು. ಬಿತ್ತುವ ಎರಡು ದಿನಗಳ ಮೊದಲು ಒಂದಿಷ್ಟು ಬೀಜಗಳನ್ನು ವಸ್ತ್ರದಲ್ಲಿ ಸಡಿಲಾಗಿ ಕಟ್ಟಿ ನೀರಿರುವ ಪಾತ್ರೆಯಲ್ಲಿ ವಸ್ತ್ರದ ಗಂಟನ್ನು ನೆನೆಹಾಕುವರು. ಒಂದು ಇಡೀ ರಾತ್ರಿ ನೆನೆದ ಆ ಗಂಟನ್ನು ಮರುದಿನ ಬೆಳಗ್ಗೆ ಮೇಲಕ್ಕೆ ತೆಗೆದು ನೆಲದ ಮೇಲೆ ಹಾಕಿ ನೀರನ್ನು ಆರಬಿಡುವರು. ಆದರೆ ಬೀಜಗಳು ಪುನಃ ಚೆನ್ನಾಗಿ ಒಣಗಲು ಬಿಡಬಾರದು. ಮೂರು ದಿನಗಳ ತರುವಾಯ ವಸ್ತ್ರದ ಗಂಟನ್ನು ಬಿಚ್ಚಿ ಬೀಜಗಳನ್ನು ಹೊರಕ್ಕೆ ತೆಗೆಯುವರು. ಆಗ ಅವುಗಳಲ್ಲಿ ಹೆಚ್ಚಿನ ಬೀಜಗಳು ಮೊಳೆಯುವವು. ಆ ಮೊಳಕೆ ಬೀಜಗಳನ್ನು ಮೊದಲೇ ತೆಗೆದಿಟ್ಟ ಹೊಂಡಗಳಲ್ಲಿ ಬಿತ್ತುವರು.

ಸಶೇಷ

ಮಧುರೆಯ ಚೈತ್ರೋತ್ಸವ.

ಮದರಾಸು ಸಂಸ್ಥಾನದಲ್ಲಿ ಮಧುರೆಯು ಮದುರಾಕ್ಷಿ ಎಂಬನೆಯದಾಗಿ ಕೀರ್ತಿ ಹೊಂದಿರುವದೇ ಅಲ್ಲಿರುವ ಮೀನಾಕ್ಷಿ ದೇವಾಲಯದ ಕಾರಣದಿಂದ. ಮೀನಾಕ್ಷಿ ದೇವಾಲಯವು ಪಟ್ಟಣದ ಮಧ್ಯಭಾಗದಲ್ಲಿದ್ದು, ಸುಮಾರು ಎಂಟು ಫರ್ಲಾಂಗು ಸ್ಥಳವನ್ನು ಆವರಿಸಿ, ಸುಂದರವಾದ ಕಟ್ಟಡಗಳಿಂದ ಕೂಡಿದ್ದು ಮೆರೆಯುವದಲ್ಲದೆ, ದೇವಳದ ಗೋಪುರವಾದರೊ ಬಹು ಎತ್ತರದಲ್ಲಿರುವುದರಿಂದ ಸುತ್ತಮುತ್ತಲೂ ಹಲವು ಮೈಲುಗಳ ವರೆಗೆ ಕಾಣಿಸುವದು. ದೇವಸ್ಥಾನದ ಸುತ್ತಮುತ್ತಲೂ ಮಾರ್ಗಗಳು ಹಬ್ಬಿ ಜನರು ದೇವಳದ ಸಮೀಪದಲ್ಲೇ ವಾಸಿಸಲು ಉತ್ಸುಕರಾಗಿರುವುದನ್ನು ಕಂಡರೆ ದೇವಳವೇ ಆ ಊರಿನ ಶ್ರೇಷ್ಠತ್ವಕ್ಕೆ ಕಾರಣವೆಂದೆನ್ನಬೇಕಾಗುವದು. ದೇವಾಲಯದ ಕಟ್ಟಡಗಳ ಸೊಬಗೇ ಪ್ರತಿಯೊಬ್ಬನನ್ನು ಆ ಕಡೆಗೆ ಆಕರ್ಷಿಸುವದು. ಪ್ರತಿ ವರುಷವೂ ಸಾವಿರಗಟ್ಟಲೆ ಯಾತ್ರಿಕರು, ಅಲ್ಲಿಗೆ ಬರುವರು. ದೇವಸ್ಥಾನದ ಸುತ್ತಮುತ್ತಲಿನ ಮಾರ್ಗಗಳ ಸಮೀಪದಲ್ಲೇ ವಾಸಮಾಡಿಕೊಂಡಿರುವರು. ಮಹತ್ವವುಳ್ಳವೆಂದರೆ ಮಧುರೆ ವಾಸಿಗಳ ತಿರುವಳಿ ಏಕೆಂದರೆ ಈ ಮಾರ್ಗಗಳಲ್ಲಿ ದೇವಾಲಯದ ವಿಗ್ರಹವು ಪ್ರತಿಯೊಂದು ಉತ್ಸವದ ಸಂದರ್ಭದಲ್ಲಿ ಮೆರವಣಿಗೆ ಮಾಡಿಸಲ್ಪಡುವದು.

ಚೈತ್ರಮಾಸವು (ಎಪ್ರಿಲ್ ಮತ್ತು ಮೇ) ವರುಷದ ಶ್ರೇಷ್ಠವಾದ ಮಾಸವು. ಮಧುರೆಯಲ್ಲಂತೂ ಚೈತ್ರಮಾಸವೆಂದರೆ ದೊಡ್ಡ ಹಬ್ಬದ ದಿನಗಳೇ ಸರಿ. ಈ ತಿಂಗಳಲ್ಲಿಯೇ ಮೀನಾಕ್ಷಿ ದೇವರ ರಥೋತ್ಸವವೂ, ಮೀನಾಕ್ಷಿ ಮತ್ತು ಸುಂದರೇಶ್ವರರೊಳಗಿನ ವಿವಾಹ ಸಮಾರಂಭಗಳೂ ನಡೆಯುವವು. ಈ ಮಾಸದ ಪೌರ್ಣಿಮೆಯ ದಿನವೇ ನಿಜವಾದ ಮದುವೆಯು ಜರುಗುವುದು. ಮದುವೆಯ ಹತ್ತು ದಿನಗಳ ಮೊದಲಿನಿಂದಲೇ ಸೊಗಸಿನ ಉತ್ಸವಗಳು ನಡೆಯುವವು. ತನಗೆ ಯೋಗ್ಯನಾದ ವರನನ್ನು ಆರಿಸಿಕೊಂಡು ಮೀನಾಕ್ಷಿಯು ಪ್ರಯಾಣ ಹೊರಡುವಳು, ಇವೇ ಮೊದಲಾದ ಹಲವು ಉತ್ಸವಗಳ ದರ್ಶನಕ್ಕಾಗಿ ಅಸಂಖ್ಯಾತ ಜನರು ಬಂದು ನೆರೆಯುವರು. ಮದುವೆಯನ್ನಂತೂ, ಶಾಸ್ತ್ರೋಕ್ತವಾದ ಕ್ರಮಕ್ಕೆ ಅನುಸಾರವಾಗಿಯೇ ನಡೆಸುವರು. ಮೀನಾಕ್ಷಿ ಮತ್ತು ಸುಂದರೇಶ್ವರ ದೇವತೆಗಳು ಉಚ್ಚ ಜಾತಿಯ ಮನುಷ್ಯರಿಂದೇ ಪರಿಗಣಿಸಲ್ಪಡುವರು. ವಿಗ್ರಹ ದಂಪತಿಗಳು ಶ್ರೇಷ್ಠವಾದ ವಸ್ತ್ರಗಳಿಂದಾವರಿಸಲ್ಪಟ್ಟು ಉತ್ತಮವಾದ ಮಂಟಪದಲ್ಲಿ ಕುಳ್ಳಿರಿಸಲ್ಪಟ್ಟಿರುವ ನೋಟವನ್ನು ನೋಡಲು ಸಾವಿರಗಟ್ಟಲೆ ಜನರು ಒಬ್ಬರ ಮೇಲೊಬ್ಬರು ಬಿದ್ದು ಕುತೂಹಲರಾಗಿರುವರು.

ಮೀನಾಕ್ಷಿಯ ಮದುವೆಯ ಕತೆಯು ಕೇಳಲು ಬಹು ಅಭಿರುಚಿಯು ಜನಕವಾಗಿರುವದು. ಮೀನಾಕ್ಷಿ ದೇವರಿಗೆ ಮೂರು ಕುಚಗಳಿದ್ದುವಂತೆ. ಯಾರನ್ನು ನೋಡಿದ ಮಾತ್ರದಿಂದಲೇ ಆ ಹೆಚ್ಚಿನ ಮೂರನೆಯ ಕುಚವು ಮಾಯವಾಗುವುದೋ, ಅತನನ್ನೇ ತಾನು ಮದುವೆಯಾಗುವಳೆಂದು ಆಕೆಯ ಪ್ರತಿಜ್ಞೆಯಿದ್ದಿತು. ಅಂತಹ ಮಹಾ ಪುರುಷನ ಅನ್ವೇಷಣೆಯ ಉದ್ದೇಶದಿಂದಲೇ ಮೀನಾಕ್ಷಿಯು ದೇಶಾಟನೆಗಾಗಿ ಹೊರಟಳು. ಆದರೆ ಕೆಲವೇ ಸಮಯದೊಳಗೆ ಬಡವನಾದ ಸೋಮಸುಂದರೇಶ್ವರ ದೇವರ ಭೇಟಿಯು ಆಕೆಗೆ ಆಯಿತು. ಅತನ ಭೇಟಿಯಾದೊಡನೆ ಆಕೆಯ ಆ ಮೂರನೆಯ ಕುಚವು ಥಟ್ಟನೆ ಮಾಯವಾಗಿ ಬಿಟ್ಟಿತು. ಒಡನೆಯೇ ಚೈತ್ರಮಾಸದ ಪೂರ್ಣಿಮೆಗೆ ಮದುವೆಯ ನಿಶ್ಚಯವಾಯಿತು. ಆದರೆ ಮದುವೆಯ ಆನಂದದ ಗೊಂದಲದಿಂದ ಮೀನಾಕ್ಷಿಗೆ ತನ್ನ ಸಹೋದರನಾದ ಮತ್ತು ಮಧುರೆಯ ಇಶಾನ್ಯಕ್ಕೆ ೮ ಮೈಲು ದೂರ ವಾಸಿಸುತ್ತಿದ್ದ ಅಲಗಾರ (ವಿಷ್ಣು)ನಿಗೆ ಆಮಂತ್ರಣವನ್ನು ಕಳುಹಲು ಮರೆತುಹೋಯಿತು. ಆದರೂ ಮದುವೆಯ ವರ್ತಮಾನವನ್ನು ಕೇಳಿಯೇ ಅಲಗಾರನು ಉಡುಗೊರೆಗಳನ್ನು ಹಿಡಿದು ಕೊಂಡು ಮದುವೆಗೆ ಹೊರಟುಬಂದಿದ್ದಾಗ, ಮಧುರೆಗೆ ತಲುಪುವಾಗ ಮದುವೆಯು ನಡೆದು ಒಂದು ದಿವಸವು ದಾಟಿಹೋಗಿದ್ದಿತು. ಮದುವೆಯು ನಡೆದುಹೋದ ಸುದ್ದಿಯನ್ನು ಕೇಳಿದೊಡನೆ ಅಲಗಾರನಿಗೆ ಮಧುರೆ ಪಟ್ಟಣವನ್ನು ಹೊಕ್ಕು ಹೋಗಲು ಮನಸ್ಸಿಲ್ಲದೆ ವೈಗೈ ನದಿಯ ಉತ್ತರ ದಡದಲ್ಲಿ ಅತನು ಉಳಿಕೊಂಡನು. ವೈಗೈ ನದಿಯಲ್ಲಿ ಚೈತ್ರಮಾಸದಲ್ಲಿ ನೀರಿರುವುದಿಲ್ಲ. ಅಲ್ಲಲ್ಲಿ ಸಣ್ಣ ಸಣ್ಣ ಹೊಂಡಗಳಿದ್ದು ಅವುಗಳಲ್ಲಿ ಮಾತ್ರ ಸ್ವಲ್ಪ ಸ್ವಲ್ಪ ಒಸರುವ ನೀರು ಇರುವುದು. ಇವೆಲ್ಲ ಸಂಗತಿಗಳನ್ನು ಪ್ರತಿಪಾದಿಸುವ ಉತ್ಸವವು ಪ್ರತಿ ವರ್ಷವೂ ಮಧುರೆಯಲ್ಲಿ ನಡೆಯುತ್ತಿದೆ. ಜನರು ಅಲಗಾರ ದೇವರನ್ನು ಬಹು ಭಕ್ತಿಯಿಂದ ಕಾಣುವರು. ಅತನಿಗೆ ಕಾಣಿಕೆಗಳನ್ನೂ ಹರಿಕೆಗಳನ್ನೂ ಅರ್ಪಿಸಿ ಗೌರವಿಸುವರು. ಮುಖ್ಯತಃ ಜನರು ಚರ್ಮದ ಚೊಂಬುಗಳನ್ನು ಹಿಡಿದು ವೈಗೈ ನದಿಯ ಹೊಂಡಗಳಲ್ಲಿ ಕಲಕ ನೀರನ್ನು ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಂಡು ಆ ನೀರಿನಿಂದ ಅಲಗಾರ ದೇವರನ್ನು ಮಿಂದಿಸಿ, ಅತನ ಸಿಟ್ಟನ್ನು ಇಳಿಸ ಪ್ರಯತ್ನಿಸುವರು. ಅತನ ಮೈಯ ಉಷ್ಣವನ್ನು ಶಾಂತಗೊಳಿಸುವರು. ಚೈತ್ರಮಾಸವಂತೂ ವರುಷದ ಉಷ್ಣವಾದ ತಿಂಗಳು. ಸೂರ್ಯನ ಉಷ್ಣವು ಪ್ರಬಲವಾಗಿದ್ದು, ಅಲ್ಲಿ ಕೂಡುವ ಅಸಂಖ್ಯಾತ ಭಕ್ತರಿಗೆ ಕುಡಿಯಲು ನೀರು ಸಿಗುವುದೇ ಕಷ್ಟವಾಗುವುದು. ಆದರೂ ಅಲ್ಲಲ್ಲಿ ನೀರು ಕೊಡುವ ಅರವಟ್ಟಿಗೆಗಳನ್ನು ಇಡುವುದರಿಂದ ಭಕ್ತರಿಗೂ, ಯಾತ್ರಿಕರಿಗೂ ಉತ್ಸವ ದರ್ಶನಾಪೇಕ್ಷೆಗಳಿಗೂ ನೀರು ಸಿಕ್ಕುವದು.

ಭಕ್ತರು ಮಿಂದಿಸುವ ನೀರಿನ ಕಂಪಿನಿಂದ ಅಲಗಾರನ ಸಿಟ್ಟು ಇಳಿಯುವದು. ಮನಸ್ಸು ಆನಂದಿತವಾಗುವದು. ಅತನು ಮಧುರೆಗೆ ಹೋಗುವ ಬದಲು ತನ್ನೂರಿಗೇ ಹಿಂತಿರುಗುವನು. ಆದರೆ ಮಧುರೆ ಪಟ್ಟಣದಲ್ಲಿ ಉತ್ಸವಗಳಿಗೆ ಪ್ರಾರಂಭವಾಗುವದು. ರಥೋತ್ಸವಗಳಿಗೆ ಮೊದಲಾಗುವದು. ಅಂದವಾದ ಆನೆಯ ರಥದ ಮೇಲೆ, ಎರಡೂ ದೇವರ ವಿಗ್ರಹಗಳನ್ನು ಅಂದವಾಗಿ ಶೃಂಗರಿಸಿ ಕುಳ್ಳಿರಿಸಿ ಮೆರವಣಿಗೆಯು ನಡೆಯುವದು.

NOTICE.

Candidates intending to apply for scholarships from the A. Subba Rao Memorial Fund are requested to send their applications, with school or college testimonials and certificates of poverty to either of the undersigned by 31-5-29.

M. Madhava Rao, SEA VIEW, Kodialbail, P. O. Mangalore.
V. S. Kamath, SHARADA PRESS, Mangalore.
SECRETARIES.
30-4-1929.



SPORT CABRIOLET WITH DICKEY SEAT



FIVE-PASSENGER TWO-DOOR SEDAN

FIVE-PASSENGER PHAETON

The Story of a New

OAKLAND

Series 6-212

the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES *of the* NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are [illegible] inches longer and all bodies are much lower.

[illegible]

Spanish leather upholstery on open models and Sport Cabriolet.

Leather upholstery available on all closed models.

Improved body hardware on all models.

Instrument board beautifully [illegible] [illegible] design and [illegible] silver dial.

New and attractive Duco color combinations on all models.

[illegible] on closed models.

[illegible]

For Further Particulars Apply to RAO & RAO

Dealers of Oakland, Pontiac Chevrolet, & Vauxhall Cars,

Maidan Road, MANGALORE

ಲೋಕಾಮುಯಹರ ಕಸ್ತೂರೀ ಮಾತ್ರೆಗಳು.

[illegible]

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ.

[illegible]

ವೈ ಶ್ವಾ ನ ರಾ ಸ ವ .

[illegible]

ಸೀಸೆ 1ಕ್ಕೆ ರೂ. 1—0—0.

ಲ ಕ್ಷ್ಮೀ ವಿ ಲಾ ಸ ರ ಸ .

[illegible]

ಸೀಸೆ 1ಕ್ಕೆ ರೂ. 1—0—0.

ಶ್ರೀ ನಿ ವಾ ಸ ತೈ ಲ .

[illegible] ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ [illegible] ವೈದ್ಯಶಾಲಾ, [illegible]

[illegible]

ಕಾವ್ಯಗಳು

[illegible]

1, 2, 3ನೆ ಸರ್ಗಗಳು

[illegible] 1—0—0

[illegible] 2, 3, 4, 5ನೆ ಸರ್ಗಗಳು

[illegible] 1—0—0

ಮೇಘ ಸಂದೇಶ (ಪೂರ್ವ) 3—0—0

[illegible] 1ನೇ ಸರ್ಗ 0—10—0

[illegible] 3—0—0

[illegible] ಕ್ರಯ 0—8—0.

ಎಚ್. ಎಸ್. ರಾವ್ ಬ್ರದರ್ಸ್,

[illegible] ಬೆಂಗಳೂರು [illegible]

ತಯಾರಾಗಿದೆ! ತಯಾರಾಗಿದೆ!!

ಮೂರನೇ ದರ್ಜೆಯ

ಪ್ರ ಕೃ ತಿ ಶಾ ಸ್ತ್ರ ಮ ತ್ತು ಆ ರೋ ಗ್ಯ

[illegible]

ಶಾರದಾ [illegible]

[illegible] ರೂಪಾಯಿ 3-0-0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2-12-

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]

ಪುಸ್ತಕ ೨೩. ಮಂಗಳೂರು, ತಾ. ೩ನೇ ಶುಕ್ರವಾರ ಮೇ ೧೯೨೯. (3-5-'29.) ಸಂಚಿಕೆ ೧೮

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR. Mangalore.**

ಹೆಡ್ ಆಫೀಸು — ಉಡುಪಿ ಶಾಖೆ — ಕುಂದಾಪುರ. ಮಂಗಳೂರು.

ನಿಯಮಿತ ಮೂಲಧನ ರೂ. 3,50,000-

1. ಶೇರು ಹಣದಲ್ಲಿ ಒಪ್ಪಿಸಿದ ಮತ್ತು ಎತ್ತಿದ ಮೂಲಧನ ರೂ. 2,25,000-
2. ಕೆಟ್ಟು ಬಂದ ಮೂಲಧನ ರೂ. 2,12,630-
3. ಕ್ಷೇಮನಿಧಿ ವಗೈರೆ ಫಂಡುಗಳು ರೂ. 1,26,700-
4. ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 3,34,218-5-0.

Statement of Affairs of the Canara Banking Corporation Udipi, Limited as on 31st March 1929

	Capital and Liabilities.			Property and Assets	
1	Paid up Capital	Rs. 2,20,870-0-0	1	Premises Building, Furniture &c.	Rs. 9,215-0-0
2	Reserve and other contingent funds	,, 1,26,700-0-0	2	Investments on G. P. Notes at cost	,, 3,34,218-5-0
3	Deposits	,, 18,39,286-2-10	3	Investments on Approved Securities	,, 18,06,750-14-7
4	Due to Bankers on Overdraft and Loan a/c	,, 1,65,516-10-10	4	Bills for collection as per Contra	,, 30,503-1-7
5	Sundry Persons' a/c for Bills for collection as per Contra	,, 30,503-1-7	5	Cash in hand & with Bankers.	,, 23,332-8-11
6	Sundries including P & L items	,, 24,371-8-3	6	Sundries	3,227-9-5
	Total	22,07,247-7-6		Total	22,07,247-7-6

Office of the Corporation, UDIPI, 28-4-'29.

N. ANANDA RAO, *Secretary*.

ಅಮೃತಾಂಜನ.

[illegible]

ರಿಂಗ್ ವರ್ಮ್ ಮುಲಾಮು: — [illegible]

ದಂತಮಂಜನ: — [illegible]

ಅಮೃತಾಂಜನ್ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಮಕ್ಕಳ ಸಲುವಾಗಿ,

ಡೊಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೊಂಗರೇ ಕಂಪೆನಿ,

[illegible]

ಬಹುಮಾನ! ಬಹುಮಾನ!

1929ನೇ ವರುಷದ ಸರಸ್ವತೀ ಕ್ಯಾಲೆಂಡರ್.

[illegible] ನಮ್ಮಲ್ಲಿ ದೊರೆಯುವ ಕನ್ನಡ ಕಥೆ, ಕಾವ್ಯ, ನಾಟಕ, ಕೀರ್ತನೆ, [illegible] ಕೂಡಲೇ ಬರೆದು ತರಿಸಿಕೊಳ್ಳಿರಿ.

[illegible] ನಮ್ಮಲ್ಲಿ ಸಿಗುತ್ತವೆ.

ಕಥೆ ಪುಸ್ತಕಗಳು

ಸೌಭಾಗ್ಯ ಲಕ್ಷ್ಮಿ	0-8-0	ಧರ್ಮ ಸಾಮ್ರಾಜ್ಯಂ	1-4-0
ರಮಣೀ [illegible]	1-12-0	[illegible]	0-12-0
ವಚನ ಭಾರತ	0-14-0	ವಚನ ರಾಮಾಯಣ	1-8-0
ಆನಂದ ಮಠ	1-12-0	[illegible] ಭಾರತ	1-8-0

ಲಾ ಪುಸ್ತಕಗಳು

ವ್ಯವಹಾರ ಧರ್ಮ ಶಾಸ್ತ್ರ	ಭಾಗ I	4-0-0
,,	ಭಾಗ II	4-8-0
ವ್ಯವಹಾರ ಲೇಖ್ಯ ಬೋಧಿನಿ		2-8-0
ಕ್ರಿಮಿನಲ್ ಪ್ರೊಸೀಜರ್ ಕೋಡ್		3-0-0
ಇಂಡಿಯನ್ ಪಿನಲ್ ಕೋಡ್		2-8-0

ಶ್ರೀ ಸರಸ್ವತೀ ಭಂಡಾರ.

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು,

[illegible] ರೋಡ್, ಬೆಂಗಳೂರು ಸಿಟಿ.

ಈಗಿನ ರಾಜಕೀಯ ಪರಿಸ್ಥಿತಿ

[illegible] ಒಂದು ಪಂಡಿತ ಮದನಮೋಹನ ಮಾಲವೀಯರವರು ಕಲಕತ್ತೆಯಲ್ಲಿ ಬಹಿರಂಗವಾದ ಸಭೆಯಲ್ಲಿ 'ಈಗಿನ ರಾಜಕೀಯ ಪರಿಸ್ಥಿತಿ' ಎಂಬುದರ ಕುರಿತಾಗಿ ಒಂದು ಭಾಷಣವನ್ನು ಕೊಟ್ಟರು. ಈಗಿನ ಪರಿಸ್ಥಿತಿಯ ಕುರಿತಾಗಿ ಹೊಸ ಹೊಸ ಹೇಳಬೇಕಾಗಿಲ್ಲ. ಅದು ಎಲ್ಲರಿಗೆ ತಿಳಿದೇ ಇದೆ. ನಾವು ಪರಕೀಯರ ಬಂಧನದಲ್ಲಿ ಸಿಕ್ಕಿರುವೆವು. ಇದು ನಾಚಿಕೆಗೆ ಕಾರಣವೆಂದು ಇನ್ನೂ ಹಲವರ ಮನಸ್ಸಿಗೆ ಹೊಳೆದಿಲ್ಲ. ಪರಕೀಯರ ಆಳ್ವಿಕೆಗೆ ಹಿಂದೂಸ್ಥಾನವು ಒಳಗಾದ ರೀತಿಯಲ್ಲಿ ಅನ್ಯಾವ ರಾಜ್ಯವೂ ಇರುವುದಿಲ್ಲ. ಹಿಂದೂ ಮುಸಲ್ಮಾನರ ಸುಧಾರಣೆಯು ಏಕರೀತಿ ಇರುವ ಹಿಂದೂಸ್ಥಾನವು ಬೇರೆಯವರ ವಶವಿರುವುದು ತೀರ ನಾಚಿಕೆಯ ಸಂಗತಿ. ಪ್ರತಿಯೊಂದು ರಾಜ್ಯವೂ ತನ್ನ ಸ್ವಂತ ಆಳ್ವಿಕೆಗೆ ಒಳಪಡಲು ಅದಕ್ಕೆ ಜನ್ಮಸಿದ್ಧವಾದ ಹಕ್ಕೇ ಇದೆ. ಆದರೆ ಹಿಂದೂಗಳು ಇದರ ಕುರಿತಾಗಿ ಯೋಚಿಸುವುದಿಲ್ಲ. ಇಷ್ಟು ವರುಷಗಳ ಕಾಲವೂ ನಾವು ಸುಮ್ಮನೆ ಇದ್ದಂತೆ ಇನ್ನೂ ಸುಮ್ಮನಿದ್ದರೆ ನಮ್ಮ ಪರಿಸ್ಥಿತಿಯಲ್ಲಿ ಬದಲಾವಣೆಯಾಗುವುದೆಂತು? ನಮ್ಮ ಸ್ವಂತ ರಾಜರು ಪೂರ್ವ ಕಾಲದಲ್ಲಿ ಇರುವಾಗ ಹಿಂದೂಸ್ಥಾನವು ಸಂಪತ್ಸಮೃದ್ಧವಾಗಿತ್ತು. ನಮ್ಮ ಸೈನ್ಯವಿದ್ದಿತು. ನಮ್ಮವರೇ ಆಗ ರಾಜತಂತ್ರ ಧುರೀಣರಿದ್ದರು. ನಮ್ಮವರೇ ಹಲವು ಲೇಖಕರೂ, ಕವಿಗಳೂ ಇದ್ದರು. ಆದರೆ ಎಂದು ಪರಕೀಯರು ನಮ್ಮನ್ನಾಳಲು ಬಂದರೋ, ಅಂದೇ ನಮ್ಮ ಅಧಃಪತನಕ್ಕೆ ಆರಂಭವಾಯಿತು. ನಮ್ಮ ಹೊಟ್ಟೆ ತುಂಬಿಸಲು ಕೂಡ ನಮಗೆ ಕಷ್ಟವಾಯಿತು.

ಹಿಂದೂಗಳು ಜಾತೀಯ ಮತ್ಸರವನ್ನೂ ಸ್ವಾರ್ಥವನ್ನೂ ತ್ಯಜಿಸುವ ವರೆಗೆ ಅವರಿಗೆ ಸ್ವಂತ ಸರಕಾರವು ಅಲಭ್ಯವು. ನಮಗೆ ಸ್ವತಂತ್ರವಾದ ಸರಕಾರವು ಬೇಕೆಂದು ಬಯಕೆಯಿದೆಯಾದರೆ ನಾವೆಲ್ಲರೂ ಅಣ್ಣತಮ್ಮಂದಿರಂತೆ ಒಟ್ಟಾಗಬೇಕು. ಜಾತೀಯ ಕಲಹಗಳು ನೆಲೆಗೊಂಡಿರುವ ವರೆಗೆ ನಮ್ಮ ಸ್ವಂತ ಸರಕಾರವನ್ನು ಸ್ಥಾಪಿಸುವ ಆಲೋಚನೆಗಾದರೂ ಆಶ್ರಯವು ದೊರೆಯಲಾರದು. ನಮಗೆ ಸ್ವಾತಂತ್ರ್ಯವು ಬೇಕೆಂದಾದರೆ, ಜಾತಿ, ಪಂಗಡ, ಬ್ರಾಹ್ಮಣ ಅಬ್ರಾಹ್ಮಣ, ಹಿಂದೂ-ಮುಸಲ್ಮಾನ ಎಂಬುವ ತರದ ಭೇದಭಾವಗಳನ್ನು ತ್ಯಜಿಸಿಬಿಡಬೇಕು.

ಸ್ವರಾಜ್ಯ ಸಾಧನೆಗೆ, ಹಿಂದೂಗಳ ಸ್ವತಂತ್ರ ಸರಕಾರದ ಸ್ಥಾಪನೆಯಾಗಬೇಕೆಂದು ಮನಸ್ಸು ಮಾಡಬೇಕು. ಮತ್ತು ಈ ಸರಕಾರದ ಕೈಯಿಂದ ಪ್ರತಿಯೊಬ್ಬ ವ್ಯಕ್ತಿಗೂ ಏಕರೀತಿಯಲ್ಲಿ ನ್ಯಾಯವು ಲಭಿಸುವಂತಾಗಬೇಕು. ಹಿಂದೂಗಳ ಒಡೆತನದಲ್ಲಿ ಮುಸಲ್ಮಾನರಿಗೂ, ಮುಸಲ್ಮಾನರ ಒಡೆತನದಲ್ಲಿ ಹಿಂದೂಗಳಿಗೂ ಯಾವುದೊಂದು ಹಾನಿಯುಂಟಾಗಬಾರದು. ಎಲ್ಲ ಜಾತಿಯವರೂ, 'ನಾವು ಹಿಂದೂದೇಶದ ಮಕ್ಕಳು, ನಾವು ಅಣ್ಣತಮ್ಮಂದಿರು ಸಮಾನರು' ಎಂದು ಭಾವಿಸಬೇಕು. ಎಲ್ಲ ಜಾತಿಯವರೂ, ತಮಗೆ ಹಿಂದೂ ಸ್ವತಂತ್ರ ಸರಕಾರವು ಲಭಿಸುವ ಬಗ್ಗೆ ಹೋರಾಡಬೇಕು.

ಸ್ವರಾಜ್ಯವು ಹಿಂದೂಗಳಿಗೆ ಎಷ್ಟು ಅಗತ್ಯವಾಗಿದೆಯೋ ಅಷ್ಟೇ ಮುಸಲ್ಮಾನರಿಗೂ ಅಗತ್ಯವಾಗಿದೆ. ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ, ಒಂದೇ ರೀತಿಯಲ್ಲಿ ಅವಶ್ಯಕವಾಗಿದೆ. ಆದುದರಿಂದ ಸ್ವರಾಜ್ಯ ಸಿಕ್ಕಬೇಕಾದರೆ ಹಿಂದೂ ಮುಸಲ್ಮಾನ ಕಲಹಗಳು ಕೊನೆಗಾಣಬೇಕು. ಹಿಂದೂ ಮುಸಲ್ಮಾನರು ಪರಸ್ಪರ ಮಾನರಕ್ಷಣೆಯ ಬಗ್ಗೆ ಜೀವದ ಹಂಗನ್ನಾದರೂ ತೊರೆದುಬಿಡಬೇಕು. ಇಷ್ಟರೊಳಗೆ ನಾವು ಸ್ವರಾಜ್ಯವನ್ನು ಪಡೆದರೆ ಪರಕೀಯರು ನಮ್ಮ ಮೇಲಿನ ಮುಷ್ಟಿಯನ್ನು ಬಿಡಲು ಅನುಕೂಲಗೊಳಿಸುದಕ್ಕಾಗಿ ನಾವು ಪ್ರಯತ್ನಿಸಬೇಕಾಗಿದೆ. ಹಿಂದೂ ಮುಸಲ್ಮಾನರು ಕಾದಾಡುವುದರಿಂದ ಯಾವ ಲಾಭವಾಗುವದು? ಎರಡು ಪಕ್ಷದವರಿಗೂ ಅದರಿಂದ ತುಂಬ ಹಾನಿಯಿದೆ.

ಹಿಂದೂ ಮುಸಲ್ಮಾನ ಎಂಬ ಭೇದವು ನಾಶವಾದ ಮೇಲೆ ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಭಾವನೆಯನ್ನು ಹೋಗಲಾಡಿಸಬೇಕು. ಸಮಾಜದ ಸುಧಾರಣೆಯಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರರೆಂಬ ಭೇದಗಳಿಂದ, ಅವೆರಡು ಪಕ್ಷಗಳ ಅಭಿವೃದ್ಧಿಯೂ ತೊಡಕಿಲ್ಲದೆ ಆಗಬೇಕು. ಕೇವಲ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಒಂದೇ ಕಾರಣದಿಂದ ನಮ್ಮ ಐಕ್ಯವು ಶಿಥಿಲವಾಗಿ, ನಮಗೆಷ್ಟೋ ನಷ್ಟವುಂಟಾಗುತ್ತಲಿದೆ.

೧೯೩೦ನೇ ಇಸವಿಯೊಳಗೆ ಸ್ವರಾಜ್ಯವನ್ನು ಸಾಧಿಸಬೇಕೆಂದು ನಿರ್ಣಯವಾಗಿರುತ್ತದೆ. ಸಮಯವು ಸ್ವಲ್ಪವೇ ಉಳಿದಿರುತ್ತದೆ. ಹಿಂಸೆಯ ರೂಪದಲ್ಲಿ ನಮ್ಮ ಕಾರ್ಯವು ಸಿದ್ಧಿಸಲಾರದು. ಅಹಿಂಸೆಯೇ ನಮಗೆ ಜಯದಾಯಕವು. ಕಾಂಗ್ರೆಸಿನಲ್ಲಿ ಈ ಠರಾವು ಮಂಜೂರಾಗಿರುತ್ತದೆ. ಈ ಠರಾವು ಟೊಳ್ಳಾಗಿರದೆ ಅರ್ಥಗರ್ಭಿತವಾಗಿರುತ್ತದೆ.

ಸ್ವರಾಜ್ಯ ಸಾಧನೆಗೆ ಶಾಂತವಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ಯಾತನೂ ಅಭಿಪ್ರಾಯಪಡಲಾರನು. ದೇಶದ ಜನರೆಲ್ಲರೂ ಒಟ್ಟಾದರೆ ನಮ್ಮ ಕೆಲಸಕ್ಕೆ ಸರಕಾರದವರು ಕಿವಿಗೊಡಲೇ ಬೇಕಾಗುವದು. ಬಾರ್ಡೋಲಿಯ ಒಂಬತ್ತೂರಿನ ಜನರೇ ಒಟ್ಟಾದುದರಿಂದ ಎಂತಹ ಜಯವನ್ನು ಹೊಂದಿದರೆಂಬ ನಿದರ್ಶನವು ನಮ್ಮ ಕಣ್ಣ ಮುಂದೆಯೇ ಇರುತ್ತದೆ. ಸರಕಾರದವರು ಅವರನ್ನು ಎಷ್ಟು ಪೀಡಿಸ ಪ್ರಯತ್ನಿಸಿದರೂ, ಅಹಿಂಸಾ ತತ್ವದ ಅನುಕರಣೆಯಿಂದ ಅವರೆಲ್ಲ ವಿಜಯಿಗಳಾದರು. ಅದೇ ರೀತಿ ಇಡೀ ಹಿಂದೂಸ್ಥಾನವೇ ಒಟ್ಟಾದುದಾದರೆ ಅವರಂತೆಯೇ ಜಯವನ್ನು ಹೊಂದಲು ಸುಲಭವಿದೆ. ಬಾರ್ಡೋಲಿಯಲ್ಲಿ ಹಿಂದೂ ಮುಸಲ್ಮಾನರೊಳಗೆ ಅಭೇದ್ಯವಾದ ಐಕ್ಯವಿದ್ದುದರಿಂದಲೇ ಅವರಿಗೆ ಜಯಲಕ್ಷ್ಮಿಯೊಲಿದಳು. ಅದೇ ರೀತಿಯಿಂದಲೇ ನಾವೂ ೧೯೩೦ನೇ ಇಸವಿಯಲ್ಲಿ ಸ್ವರಾಜ್ಯ ಸ್ಥಾಪನೆಯಾದುದನ್ನು ಕಾಣಬಹುದು.

ವಿದೇಶಿ ವಸ್ತ್ರಬಹಿಷ್ಕಾರದ ಪರಿಣಾಮವು ವಿದೇಶೀಯರ ಮೇಲೆ ಚೆನ್ನಾಗಿ ಆಗುತ್ತಲಿದೆ. ಹಿಂದೂಗಳ ಕೊಡುಕೊಳ್ಳುವಿಕೆಯಿಂದ ಬ್ರಿಟಿಷರು ಹೆದರಲಾರರು. ಕೇವಲ ವಸ್ತ್ರಬಹಿಷ್ಕಾರದ ಮಾತ್ರದಿಂದಲೇ ಅವರಿಗೆ ಅಪಾರ ನಷ್ಟವುಂಟಾಗುವದು. ಹಾಗೆ ನಷ್ಟವಾದೊಡನೆ ತಮಗೆ ಹಾನಿಕರವಾಗದ ರೀತಿಯಲ್ಲಿ ಯಾವದಾದರೂ ರೀತಿಯ ರಾಜಿಯನ್ನು ಮಾಡಿಕೊಳ್ಳಲು ಅವರು ಸಿದ್ಧರಾಗುವರು. ವಿದೇಶಿ ವಸ್ತ್ರಬಹಿಷ್ಕಾರದಿಂದ ೬೦ ಕೋಟಿ ರೂಪಾಯಿಗಳನ್ನು ಪ್ರತಿ ವರುಷವೂ ಉಳಿಸಿದಂತಾಗುವದು. ಈ ಅಪಾರ ಧನವನ್ನು ಅವರಿಂದೆಳೆದರೆ ಅವರು ಹಿಂದೂ ಧುರೀಣರನ್ನು ಆಮಂತ್ರಿಸಿ ಏನಾದರೂ ಆಲೋಚನೆಯನ್ನು ಮಾಡಲು ತೊಡಗುವರು. ಬರುವ ವರುಷದೊಳಗೆ ಹಿಂದೂಸ್ಥಾನಕ್ಕೆ ಸ್ವರಾಜ್ಯವು ಬೇಕೆಂದಾದರೆ ವಿದೇಶಿ ವಸ್ತ್ರಬಹಿಷ್ಕಾರವು ಪೂರ್ಣ ಯಶಸ್ವಿಯಾಗುವಂತೆ ಮಾಡುವುದು ಪ್ರತಿಯೊಬ್ಬನ ಆದ್ಯಕರ್ತವ್ಯವು ಇದೆ.

ಸ್ವರಾಜ್ಯವು ದಮಾರ್ಥವಾಗಿ ಸಿಕ್ಕಲಾರದು. ಅದಕ್ಕಾಗಿ ನಮ್ಮ ರಾಷ್ಟ್ರದ ಆ ಭಾವನೆಯನ್ನು ಅಹುತಿಯಾಗಿ ಕೊಡಬೇಕು. ವಿದೇಶಿ ವಸ್ತ್ರಗಳನ್ನು ಕೊಂಡುಕೊಳ್ಳುವ ಬಹುದಿನ್ನದೆ ಆತನು ವಿದೇಶಿಗಳ ದಾಸನಾಗುವನು. ನಮ್ಮ ದೇಶದಲ್ಲಿ ಅಪಾರವಾದ ಹತ್ತಿಯು ಉತ್ಪತ್ತಿಯಾಗುತ್ತಿರುವಾಗ, ವಸ್ತ್ರಗಳಿಗಾಗಿ ಪರಕೀಯರ ಆಶ್ರಯವನ್ನು ನಾವು ಸಂಪಾದಿಸುತ್ತಿರುವದು ನಮಗೆ ಹೇಳತೀರದಷ್ಟು ನಾಚಿಕೆಗೆ ಕಾರಣ. ನಮ್ಮ ಜನರಲ್ಲಿ ಮಾತೃಭೂಮಿಯ ಪ್ರೇಮದ ಅಭಾವವೇ ಇದಕ್ಕೆ ಕಾರಣವಾಗಿದೆ. ನಿಮ್ಮಲ್ಲಿ ನಿಸ್ವಾರ್ಥಿಗಳಾದವರು ವಿದೇಶಿ ವಸ್ತ್ರವನ್ನು ಮುಟ್ಟಲಾರೆವೆಂದು ಪ್ರತಿಜ್ಞೆ ಮಾಡಿರಿ. ಈಗಿನ [illegible] ಲಕ್ಷ್ಮೀ ನಮ್ಮ ಭ್ರಾತೃಭಗಿನಿಯರಿಗಾಗಿ ಪ್ರತಿಜ್ಞೆ ಮಾಡಿಕೊಳ್ಳಿರಿ. ಇನ್ನು ಮುಂದೆ ಒಂದಂಗುಲ ಪರದೇಶಿ ಬಟ್ಟೆಯನ್ನು ತೊಡಲಾರೆವೆಂದು. ನಿಮ್ಮ ಹೆಂಗಸರೆಲ್ಲರೂ ನೂಲುವ ಕೆಲಸವನ್ನು ಕೈಕೊಳ್ಳಲಿ. ಸ್ವದೇಶಿ ಚಳವಳವನ್ನು ವ್ಯಾಪಿಸಿರಿ. ಪ್ರದರ್ಶನಗಳನ್ನು ಜರುಗಿಸಿರಿ. ನಮ್ಮ ರಾಷ್ಟ್ರದ ಭವಿಷ್ಯತ್ಸ್ಥಿತಿಯು ನಮ್ಮ ಕೈಯಲ್ಲಿಯೇ ಇದೆಯಲ್ಲದೆ ಪಾರ್ಲಿಮೆಂಟು ಅಥವಾ ಸೈಮನ್ ಕಮಿಶನ್ನಿನ ಕೈಯಲ್ಲಿಲ್ಲವೆಂಬುದನ್ನು ನಾವಿತೋರಿಸಿರಿ. ವಿದೇಶಿವಸ್ತ್ರ ಬಹಿಷ್ಕಾರವು ಚೆನ್ನಾಗಿ ನಡೆದುದಾದರೆ ನಿಮಗೆ ಸ್ವರಾಜ್ಯವು ಸುಲಭವಾಗಿ ಸಿಕ್ಕುವದು.

ನಾವು ಕೈಕೊಳ್ಳಬೇಕಾದ ಅತ್ಯಾವಶ್ಯಕವಾದ ಕೆಲಸ ಮೊದಲೆ ಮದ್ಯಪಾನ ನಿಷೇಧ ಚಳವಳ. ರಾಮಾನುಜಾಚಾರ್ಯ, ಮಧ್ವಾಚಾರ್ಯ, ಶಂಕರಾಚಾರ್ಯ, ಮೊದಲಾದ ಮಹನೀಯರ ಜನ್ಮಭೂಮಿಯೂ ಅಸಂಖ್ಯಾತ ಪುಣ್ಯ ಪ್ರಸಿದ್ಧ ದೇವಾಲಯಗಳ ಸ್ಥಾನವೂ ಆದ ನಮ್ಮ ದೇಶದಲ್ಲಿ ಮದ್ಯಪಾನದ ಅಭ್ಯಾಸವಿರುವದು ನಮಗೆ ಅತ್ಯಂತ ನಾಚಿಕೆಯ ಸಂಗತಿ. ಆದ್ದರಿಂದ ಮದ್ಯಪಾನವನ್ನು ಹೋಗಲಾಡಿಸಬೇಕು. ಸ್ವರಾಜ್ಯ ಮಂದಿರವನ್ನೇರಲು ಇವೆಲ್ಲವುಗಳು ಒಂದೊಂದೇ ಸೋಪಾನಗಳಾಗಿರುತ್ತವೆ.

ನಮ್ಮ ಶಾರೀರಿಕ ಸಾಮರ್ಥ್ಯದ ಅಭಿವೃದ್ಧಿಗೂ ನಾವು ಸ್ವಲ್ಪ ಜಾಗರೂಕರಾಗಿರಬೇಕು. ಬ್ರಿಟಿಷರು ನಮ್ಮ ದೇಶಕ್ಕೆ ಬರುವ ಮೊದಲು ಇಲ್ಲಿ ಶಕ್ತಿವಂತರಾದ ವೀರರುಗಳಿದ್ದರು. ಅವರ ಆಗಮನದ ತರುವಾಯ ಶಾರೀರಿಕ ಶಿಕ್ಷಣದ ಕಡೆಗೆ ಲಕ್ಷ್ಯವು ಕೊಡಲ್ಪಡದೆ ಹಿಂದೂಗಳು ಹೆಂಗಸರಂತೆ ಅಬಲೆಗಳಾಗಿರುವರು. ಜಪಾನು ಕಳೆದ ಅರ್ಧ ಶತಮಾನದೊಳಗೆ ಹೇಗೆ ಅಭಿವೃದ್ಧಿಯನ್ನು ಮಾಡಿಕೊಂಡಿತೊ ಹಾಗೆಯೇ ನಾವೂ ಪ್ರಯತ್ನಿಸಬೇಕಾಗಿರುತ್ತದೆ.

ಕೊನೆಯದಾಗಿ ಹೇಳುವದೇನಂದರೆ ಸ್ವತಂತ್ರವಾಗಿ ರಾಜ್ಯಭಾರವನ್ನು ನಡೆಸುವ ದೇಶದಲ್ಲಿ ಸ್ಪೃಶ್ಯ, ಅಸ್ಪೃಶ್ಯರೆಂಬ ಭೇದ ವಿರಬಾರದು. ಜಾತಿಯ ವಿಷಯವಾಗಿ ಪರೀಕ್ಷಿಸುವದಾದರೆ ಸ್ಕೂಲು ಉಪಚಾರಗಳೂ, ವಿವಾಹಗಳೂ, ಅವರವರ ಜಾತಿಯಲ್ಲಿಯೇ ನಡೆಯಲಿ. ಆದರೆ ಬಹಿರಂಗವಾದ ರಾಜಕೀಯ ವಿಷಯಗಳಲ್ಲಿ ಬ್ರಾಹ್ಮಣನಿಗೆ ಎಷ್ಟು ಅಧಿಕಾರವಿದೆಯೋ, ಅಷ್ಟೇ ಅಧಿಕಾರವು ಹೊಲೆಯನಿಗೂ ಇದೆ. ಅಂತಹ ಸಂದರ್ಭಗಳಲ್ಲಿ ಜಾತೀಯತೆಯ ವಿಷಯವಾಗಿ ನಾವೆಷ್ಟು ಸೂಕ್ಷ್ಮ ಬುದ್ಧಿಯವರಾಗಬಾರದು. ಅಸ್ಪೃಶ್ಯನೇ ಆಗಲಿ, ಆತನಲ್ಲಿ ಬುದ್ಧಿಶಕ್ತಿಯುಳ್ಳದಾದರೆ ಅವನು ಅಭಿವೃದ್ಧಿಯಾಗಬೇಕು. ಮಾತೃಭೂಮಿಯು ಇತರರಿಗೂ ಒದಗಿಸುವಷ್ಟು ಸುಖ ಸಂಪತ್ತುಗಳನ್ನು ಅವರೂ ಅನುಭವಿಸಲು ಅಧಿಕಾರಿಗಳೇ. ಉಚ್ಚ ತರಗತಿಯ ಹಿಂದೂಗಳು ಈ ಕುರಿತು ಲಕ್ಷಿಸದೆ ಅಸ್ಪೃಶ್ಯರ ಉದ್ಧಾರಕ್ಕಾಗಿ ಮನ ಮುಟ್ಟಿ ಪ್ರಯತ್ನಿಸಬೇಕು.

ಒಟ್ಟಾರೆಯ ಮೇಲೆ ಪ್ರತಿಯೊಬ್ಬರು ನಾನು ವಿವರಿಸಿದ ಸಂಗತಿಗಳನ್ನು ನೆನಪಿನಲ್ಲಿಟ್ಟು ವರ್ತಿಸಿ ಬರುವ ವರುಷದೊಳಗೆ ನಮಗೆ ಡೊಮಿನಿಯನ್ ಸ್ಟೇಟಸು ದೊರಕಲು ಸಹಾಯಕರಾಗುವಂತಾಗಿ ಕೋರುವೆ."

ಮಂಗಳೂರು ತಾಲೂಕು ಎಲಿಮೆಂಟರಿ ಶಾಲಾ ಅಧ್ಯಾಪಕ, ಅಧ್ಯಾಪಕಿಯರ ಸಂಘ ಸ್ಥಾಪನೆ.

ಈ ಸಂಘ ಸ್ಥಾಪನೆಯ ಕೆಲಸವು ಎಪ್ರಿಲ್ [illegible] ತಾರೀಖು [illegible] ಶನಿವಾರ ಮೂಲ್ಕಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು.

ಇದ್ಯ ವಿದ್ಯಾದಾಯಿನಿ ಶಾಲೆಯ ಮುಖ್ಯ ಉಪಾಧ್ಯಾಯರೂ ತಾಲೂಕು ಬೋರ್ಡು ಮೆಂಬರರೂ ಆದ ರಾ| ದಾಮೋದರರಾಯರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

ಈ ತಾಲೂಕು ಸಂಘದ ನಿಬಂಧನೆಗಳು ತಯಾರಿಸಲ್ಪಟ್ಟು ಸರ್ವಾನುಮತದಿಂದ ಮಂಜೂರು ಮಾಡಲಾದವು.

ತಾಲೂಕು ಸಂಘದ ಅಧ್ಯಕ್ಷರಾಗಿ ರಾ| ದಾಮೋದರ ರಾಯರನ್ನು, ಉಪಾಧ್ಯಕ್ಷರಾಗಿ ಅಳ್ವೆ [illegible] ಸೆಂಟರಿನ ಸೆಕ್ರೆಟರಿಯವರಾದ ರಾ| ರಾಮಚಂದ್ರ ಹೆಗಡೆಯವರನ್ನೂ ಮೂಲ್ಕಿ ಸೆಂಟರಿನ ಅಧ್ಯಕ್ಷರಾದ ರಾ| ಕೆ. ಪಿ. ಕಾಮತರನ್ನು ತಾಲೂಕು ಸೆಕ್ರೆಟರಿಯವರಾಗಿಯೂ, ಮೂಲ್ಕಿ ಸೆಂಟರಿನ ಕಾರ್ಯದರ್ಶಿಯವರಾದ ರಾ| ವರದರಾಯರನ್ನೂ, ಮೂಲ್ಕಿ ಬೋರ್ಡು ಹುಡುಗಿಯರ ಶಾಲೆಯ ಉಪಾಧ್ಯಾಯಿನಿಯರಾದ ಶ್ರೀಮತಿ ಧರಣಿಭಾಯಿಯವರನ್ನು ಜತೆ ಕಾರ್ಯದರ್ಶಿಯವರಾಗಿಯೂ, ಕೋಟೆಕಾರ ಸೆಂಟರಿನ ಕಾರ್ಯದರ್ಶಿಯವರಾದ ರಾ| ಬೋಳೂರು ವೆಂಕಟರಾಯರನ್ನು ಖಜಾನ್ಚಿಯವರಾಗಿಯೂ ಚುನಾಯಿಸಲಾಯಿತು.

[illegible] ಸೆಂಟರಿನ ಕಾರ್ಯದರ್ಶಿಯವರಾದ ಆರ್. ಎಸ್. ಬಾಗಲೋಡಿಯವರನ್ನೂ, ಕೂಳೂರು ಸೆಂಟರಿನ ಕಾರ್ಯದರ್ಶಿಯವರಾದ ರಾ| ಟಿ. [illegible] ನಾರಾಯಣರಾಯರನ್ನೂ, ಅಡ್ಯಾರ್ ಸೆಂಟರಿನ ಕಾರ್ಯದರ್ಶಿಯವರಾದ ರಾ| ಬಿ. ವೆಂಕಟರಾಯರನ್ನೂ, ಕಾವೂರಕಟ್ಟೆ ಸೆಂಟರಿನ ಕಾರ್ಯದರ್ಶಿಯವರಾದ ರಾ| [illegible]ರನ್ನೂ, ಕಲ್ಲಡ್ಕ ಸೆಂಟರಿನ ಕಾರ್ಯದರ್ಶಿಯವರಾದ ರಾ| ಕೊಡೆಯಾಲ ರಾಮರಾಯರನ್ನೂ, ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯವರಾದ ಎಮ್. ಜಿ. [illegible]ರನ್ನೂ, ಬಂಟ್ವಾಳ ಸೆಂಟರಿನ ಉಪಕಾರ್ಯದರ್ಶಿಯವರಾದ ರಾ| ಎನ್. ವಾಸುದೇವರಾಯರನ್ನೂ, ಕಾರ್ನಾಡು ಸೆಂಟರಿನ ಮೆಂಬರರಾದ ರಾ| ಬಿ. ನಾರಾಯಣ ಭಾಗವತರನ್ನೂ, ಅಧ್ಯಾಪಕಿಯರ ಪರವಾಗಿ ಕೋಟೆಕಾರ ಸೆಂಟರಿನಿಂದ ಶ್ರೀಮತಿ ಲೀಲಾ ಸೋನ್ಸರನ್ನೂ, ಬಂಟ್ವಾಳ ಸೆಂಟರಿನಿಂದ ಜಿಲ್ಲಾ ಸಭಾ [illegible] ಕಾರ್ಯದರ್ಶಿಯವರಾದ ಶ್ರೀಮತಿ ಪಿ. [illegible]ರನ್ನೂ, ಸುರತ್ಕಲ್ ಸೆಂಟರಿನಿಂದ ಸುರತ್ಕಲ್ ಬೋರ್ಡು ಹುಡುಗಿಯರ ಶಾಲೆಯ ಮುಖ್ಯ ಉಪಾಧ್ಯಾಯಿನಿಯರನ್ನೂ, ಕಾರ್ನಾಡು ಸೆಂಟರಿನಿಂದ ಮೂಲ್ಕಿ ಬೋರ್ಡು ಶಾಲೆಯ ಮುಖ್ಯ ಉಪಾಧ್ಯಾಯಿನಿಯರನ್ನೂ, ಮಂಗಳೂರು ಮುನಿಸಿಪಾಲಿಟಿ ಉಪಾಧ್ಯಾಯರ ಸಂಘದ ಪರವಾಗಿ ಆ ಸಂಘದ ಕಾರ್ಯದರ್ಶಿಯವರನ್ನೂ, ವಾಸ್ಲೇನ್ ಮಿಷನ್ ಹುಡುಗಿಯರ ಶಾಲೆಯ ಮುಖ್ಯ ಉಪಾಧ್ಯಾಯಿನಿಯರನ್ನೂ, ಮಂಗಳೂರು ಹೈಯರ್ ಬಜಾರ್ ಶಿಕ್ಷಣ ಶಾಲೆಯ ಮುಖ್ಯ ಉಪಾಧ್ಯಾಯರನ್ನೂ, ಮಂಗಳೂರು ಮಹಮದನ್ ಉಪಾಧ್ಯಾಯರ ಸಂಘದ ಕಾರ್ಯದರ್ಶಿಯವರನ್ನೂ, ಅದ್ಯಾಪಿಕಾ ಶಾಲೆಯ ಪರವಾಗಿ ಕೋಟೆಕಾರ್ [illegible] ಅದ್ಯಾಪಿಕಾ ಶಾಲೆಯ ಮುಖ್ಯ ಉಪಾಧ್ಯಾಯರನ್ನೂ ಮೆಂಬರರನ್ನಾಗಿ ಚುನಾಯಿಸಲಾಯಿತು.

[illegible] ಹೋಬಳಿಯ ಪಶ್ಚಿಮ ದಿಕ್ಕಿನಲ್ಲಿ ಮಂಗಳೂರು ಮುನಿಸಿಪಾಲಿಟಿ [illegible] ಹೋಬಳಿ ಉತ್ತರ ದಿಕ್ಕಿನಲ್ಲಿ ಧರ್ಮನಗರಿ [illegible] ಸೆಂಟರಿನ [illegible] ಕೆಳಗಿರುವ ಶಾಲೆಗಳಿಗಾಗಿ ಇಷ್ಟರ ವರೆಗೆ ಯಾವ [illegible] ಸೆಂಟರು ಇಲ್ಲದ್ದರಿಂದ ಈ ಭಾಗದಲ್ಲಿ ಒಂದು ಸೆಂಟರನ್ನೂ, [illegible] ದಕ್ಷಿಣ ದಿಕ್ಕಿನಲ್ಲಿರುವ ಬಾಳೆಪುಣಿ, [illegible], [illegible], [illegible], ಮಂಜನಾಡಿ, ಹರೇಕಳ ಶಾಲೆಗಳನ್ನು ಒಟ್ಟು ಸೇರಿಸಿ ಆ ಸ್ಥಳದಲ್ಲಿ ಒಂದು ಸೆಂಟರನ್ನು ಬಾಳೆಪುಣಿಯಲ್ಲಿ ಸ್ಥಾಪಿಸಿ ಈ ಸಂಘದ ಸಂಬಂಧವಿಷ್ಟು ಅಧಿಕಾರಿಗಳಿಗೆ ತಿಳಿಸಬೇಕಾಗಿ ನಿಶ್ಚಯಿಸಲಾಯಿತು.

ಪ್ರತಿ ಸೆಂಟರಿನಲ್ಲಿರುವ ಉಪಾಧ್ಯಾಯ, ಉಪಾಧ್ಯಾಯಿನಿಯರು ತಿಂಗಳು ಆರು ಕಾಸಿನ ಸಂಘಕ್ಕೆ ಪ್ರತಿ ತಿಂಗಳಲ್ಲಿ ಕೊಡಬೇಕಾಗಿರುವ [illegible] ಮಾಸಿಕ [illegible] ರಿತಿ [illegible] ಪ್ರಕಾರ ತಾಲೂಕು ಸಂಘಕ್ಕೆ ಕೊಡಬೇಕಾಗಿ ನಿರ್ಣಯಿಸಲಾಯಿತು.

ಈ ಸಭೆಯ ಪೂರ್ವಾಪರ ವರದಿಯನ್ನು ಪ್ರತಿಯೊಂದು ಸೆಂಟರು ಸಂಘದ ಕಾರ್ಯದರ್ಶಿಗಳಿಗೆ ಕಳುಹಿಸಬೇಕೆಂದು ನಿರ್ಣಯಿಸಲಾಯಿತು.

[illegible] ಉಪಾಧ್ಯಾಯರ ಮೂಲ್ಕಿ ಹಾಯರ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯರು ಫಲಾಹಾರಾದಿ ಸತ್ಕಾರಗಳನ್ನು ಮಾಡಿದ ಬಳಿಕ ಸಭೆ ಮುಗಿಯಿತು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಶ್ವಗಂಧಾದಿಯು ಘೃತ—ಇದು ಪುರಾತನ ಋಷಿಗಳ ... ಯಿಂದ ತಯಾರಿಸಲ್ಪಟ್ಟದ್ದು. ... ಅತಿ ಶ್ರೇಷ್ಠವಾದ ಈ ಘೃತವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮತ್ತೆ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿ ಮಿಶ್ರಣ!
ದಶಮೂಲ ಸುಖಪ್ರದ ಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಶವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೆ ಕಳುಹಿಸುತ್ತೇವೆ. ನಾವಿದ್ದ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲಸ ಸ್ವಚ್ಛದಲ್ಲಿಯೂ, ದಾರದ ನಯದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದ್ದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳ ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರಿ,
24-8-'28 ಶಿವ್ವಾಪೇಟೆ, ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—
[illegible] ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0
Reserve and other sinking Funds „ 3,88,000—0—0
Amount invested on G. P. Notes Rs. 4,87,793—6—0
Rates of interest on fixed deposits at Head Office and Branch 6¼% for 2 Years
6% „ 1 Year
Season deposits of Rs. 1000/- & above terminable by the end of June are received at 6¼% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ರಿಸರ್ವು ಮತ್ತು ಇತರ ಫಂಡುಗಳು 3,88,000—0—0
ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
ಜೂನ್ ಅಂತ್ಯದ ವರೆಗೆ ಮ್ಯಾದೆ ಆಗುವ ರೂ. 1000/-ಕ್ಕೆ ಮಿಕ್ಕಿದ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

Short notice deposits requiring one week's notice of withdrawal given at any time after one month from the date of deposit are received and interest allowed at 4% per annum. Interest on such deposits will cease on notice.

For further particulars please apply to –

Canara Bank Ltd.
Mangalore, 11—2—1929.

K. Venkat Rao,
Secretary

THE PANGAL NAYAK BANK, LTD.

Branch Office Mangalore. | Head Office: Udipi, *Established 1920.* | Agency Office Cochin.

Authorised Capital: Rs. 2,00,000-
Issued Capital: Rs. 1,75,000-
Paidup Capital: Rs. 1,57400-
Reserve and other Funds Rs. 1,19,000-

Current Accounts can be opened free of charge and interest allowed at 3% from January to June and 2% from July to December.

Fixed Deposits received at the following rates:- for 3 months 5%, 6 or 9 months 5¼%, 12, 15, 18 or 21 months 6%, 24 months 6¼% and **interest being payable every 3 months.**

Short Notice Deposits, Cumulative Deposits, and Savings Bank Deposits are accepted at favourable rates of interest.

Season Deposits from January to June received at 6¼%

N. B. Fixed Deposits for 24 months are accepted at our Mangalore Branch at 6¼% and interest being payable every quarter.

Loans and Advances are made on pledge of valuables, on proper personal securities on reasonable terms; and every other description of Banking business transacted.

Further information may be had on application to the SECRETARY *at the* HEAD OFFICE *or to the* AGENT *at the* BRANCH.

OFFICE OF THE BANK
1st March, 1929.

P. Lakshman Nayak,
Offg. Secretary.

Diamonds! Diamonds!!

Ramachandra Krishna Shet
DONGERKERY, MANGALORE.

ಉತ್ಕೃಷ್ಟ ತರಗತಿಯ ಜುನ್ನಾತ (first quality Selected) ಎವರ್, ಸ್ವದೇಶದಿಂದ ಬರುವ ವಜ್ರಗಳು ಯಥಾಕಾಲಕ್ಕೆ ವಿಕ್ರಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿಗೆ ಬರೆಯಿರಿ.

ಕೆ. ರಾಮಚಂದ್ರ ಕೃಷ್ಣ ಶೇಟ್, ಜುವೆಲರ್,
ಡೊಂಗರಕೇರಿ, ಮಂಗಳೂರು

Diamonds. ವಜ್ರಗಳು Diamonds

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಬೆಲ್ಜಿಯಂ ದೇಶದ, ಅಂಟವರ್ಪಿನಿಂದ ತರಿಸುವ ವಜ್ರಗಳು — ದೊರಕುತ್ತವೆ. —

ಬೋಳ ಮಂಗೇಶ ರಾವ್.
ಮಂಗಳೂರು

ಚುನಾವಣೆಯ ಸಮಯ.

ಈಗಿನ ಕೌನ್ಸಿಲುಗಳು ಸ್ವಲ್ಪ ಸಮಯದೊಳಗೆಯೇ ಮುಗಿದು ಹೊಸ ಕೌನ್ಸಿಲುಗಳ ತಯಾರಿಯು ಪ್ರಾರಂಭವಾಗುವುದು. ಹೊಸ ಕೌನ್ಸಿಲುಗಳ ಚುನಾವಣೆಯ ಸಮಯವು ಹತ್ತಿರುವುದರಿಂದ ಹಳೆ ಮೆಂಬರರೂ ಹೊಸ ಉಮೇದ್ವಾರರೂ ತಮ್ಮ ಅರ್ಹತೆಯನ್ನು ಪ್ರದರ್ಶಿಸಲು ಪ್ರಾರಂಭಿಸಿರುವರು. ಈ ಚುನಾವಣೆಗಳ ತಯಾರಿಯ ಮಧ್ಯದಲ್ಲಿ ಮತದಾರರ ಅನುಭವವು ಹೆಚ್ಚಾಗುತ್ತಾ ಬಂದು, ಚುನಾವಣೆಯು ಮೊದಲಿನಂತೆ ಬರೇ ದುಡ್ಡು ಮತ್ತು ದಾಕ್ಷಿಣ್ಯದ ಮೇಲೆ ಹೊಂದಿ ಇರುವುದಿಲ್ಲವೆಂದೂ, ಮತದಾರರು ಉಮೇದ್ವಾರರಲ್ಲಿ ಹಳ್ಳಿನ ಪ್ರತಿಭೆಯನ್ನೂ ದೇಶಭಕ್ತಿಯನ್ನೂ ನಿರೀಕ್ಷಿಸುತ್ತಾರೆಂದೂ ಸರಿಯಾಗಿ ಕಾಣುವುದು. ಇಲ್ಲವಾದರೆ ಸ್ವತಂತ್ರರೆಂದೂ, ಬ್ರಾಹ್ಮಣೇತರರೆಂದೂ ಮೊದಲಿನ ಬಾರಿ ಚುನಾಯಿಸಲ್ಪಟ್ಟವರು ಈ ಬಾರಿಯೂ ಅದೇ ಧೋರಣದ ಮೇಲೆ ಚುನಾವಣೆಗೆ ನಿಲ್ಲಲು ಹೆದರುತ್ತಿರಲಿಲ್ಲ. ಬ್ರಾಹ್ಮಣೇತರರೂ ಮೊದಲಿನ ಬಾರಿ ಬಹುಸಂಖ್ಯಾತರಾಗಿ ಚುನಾಯಿಸಲ್ಪಟ್ಟರೂ ಕಳೆದ ಚುನಾವಣೆಗಳಲ್ಲಿ ಸ್ವರಾಜ್ಯ ಪಕ್ಷದ ಮುಂದೆ ನಿಲ್ಲಲಾರದೆ ಹೋದರು. ವಿದ್ಯಾಭ್ಯಾಸದ ಅಭಾವದಿಂದ ಚುನಾವಣೆಯು ಹಿಂದೂಸ್ಥಾನದಲ್ಲಿ ಆದರ್ಶತರವಾದ ರೀತಿಯಲ್ಲಿ ನಡೆಯದಿದ್ದರೂ ಈಗ ಅದು ಎಷ್ಟೋ ಪಾಲು ಸುಧಾರಿತವಾಗಿದೆ ಎಂಬುದರಲ್ಲಿ ಸಂದೇಹವಿರುವುದಿಲ್ಲ. ಬಂಗಾಳದಲ್ಲಿ ಬಿಪಿನ್ ಚಂದ್ರಪಾಲರಾದಿಯಾಗಿ ಸ್ವತಂತ್ರಪಕ್ಷದವರೂ, ಪಕ್ಷಹೀನರೂ ಒಟ್ಟಾಗಿ ಬಹುವಾಗಿ ಜನಪ್ರಿಯವಾದ ನೆಹರು ರಿಪೋರ್ಟಿನ ಹೆಸರನ್ನೆತ್ತಿ ತಮ್ಮ [illegible] ಧೋರಣೆಯನ್ನು ಅದರ ಹಿಂದೆ ಅಡಗಿಸಿ ಮತದಾರರ ಬಲವನ್ನುಂಟುಮಾಡಲು ಯತ್ನಿಸುತ್ತಾರೆ. ಇತ್ತ ಮದ್ರಾಸಿನಲ್ಲಿ ಮಾಜಿ ಮಂತ್ರಿಗಳೂ, ಕೆಲವು ಸ್ವತಂತ್ರ ಪಕ್ಷದವರೂ, ಕೆಲವು ಬ್ರಾಹ್ಮಣೇತರರೂ "ಜನಾಂಗದ ಪ್ರಥಮ ಪಕ್ಷ"ವೆಂಬ ಹೊಸದಾದೊಂದು ಹೆಸರಿನಿಂದ ಮತದಾರರನ್ನು ಮರುಳುಮಾಡಲೆತ್ನಿಸುವಂತೆ ತೋರುವುದು. "ಜನಾಂಗ ಪ್ರಥಮ ಪಕ್ಷ" Nation first Party ಎಂಬುದರ ಅರ್ಥವೇ ತಿಳಿಯಲಾರದು. ಹುದ್ದೆಗಳು ಸಿಕ್ಕಿದರೆ ಬಿಡಬಾರದೆಂಬುವ ತತ್ವವೇನೊ ಇದರಲ್ಲಿ ಅಡಗಿಕೊಂಡಿದೆ. ಸ್ವರಾಜ್ಯ ಪಕ್ಷದ ಶಿಸ್ತಾಗಲಿ, ವ್ಯವಸ್ಥೆಯಾಗಲಿ ಇದಕ್ಕಿರುವುದಿಲ್ಲ. ಆದುದರಿಂದ ಈ ಹೊಸ ಪಕ್ಷಗಳ ಹೆಸರಿನಿಂದ ಜನರು ಮೋಸಹೋಗದೆ ಅದರ ಹಿಂದೆ ಯಾವುದೊಂದು ಸ್ಥಿರವಾದ ಧೋರಣವಿದೆಯೊ, ಹಾಗೆ ಧೋರಣವಿದ್ದರೆ ಅದನ್ನು ಪಾಲಿಸುವ ಶಕ್ತಿ ಅದರ ಮುಖಂಡರಿಗಿದೆಯೊ ಎಂಬುದನ್ನು ಮತದಾರರು ಆಲೋಚಿಸುವುದು ಅವಶ್ಯವಿದೆ.

ಮುಂಬಯಿ ಮುಷ್ಕರಗಳು.

ಮುಂಬಯಿಯಲ್ಲಿ ಪುನಃ ಮಜೂರ ಮುಷ್ಕರಗಳು ಪ್ರಾರಂಭವಾಗಿ ಸಮಾರು ಲಕ್ಷ ಮಜೂರರು ಗಿರಣಿಗಳಿಂದ ಹೊರಬಂದಿರುವರು. ಮಜೂರರ ಪುರೋಹಿತರಾದ ಶ್ರೀ ಜೋಶಿಯವರು ಅವಸರಮಾಡಬಾರದಾಗಿ ಹೇಳಿದರೂ ಗಿರಣಿ ಕಾಮಗಾರ ಸಂಘವು ಮುಷ್ಕರವನ್ನು ಠರಾಯಿಸಿಬಿಟ್ಟಿತು. ಕೆಲವು ಗಿರಣಿಗಳಲ್ಲಿ ಗಿರಣಿ ಮಾಲೀಕರು ಮಜೂರರ ಮೇಲೆ ಮುಷ್ಕರದ ಸಂಬಂಧವಾಗಿ ಪ್ರತೀಕಾರದ ಪೀಡೆಯನ್ನು ಕೊಡುವರಾಗಿಯೂ, ಕೆಲವು ಗಿರಣಿಗಳಲ್ಲಿ ತೆಗೆದುಕೊಳ್ಳಬೇಕಾದ ಎಲ್ಲಾ ಮಜೂರರನ್ನೂ ಕೆಲಸಕ್ಕೆ ಇನ್ನೂ ತೆಗೆದುಕೊಂಡಿಲ್ಲವಾಗಿಯೂ ಮಜೂರರ ಕಾರಣವಾಗಿರುತ್ತದೆ. ಇಲ್ಲದೆ ಮಜೂರ ಪರಿಸ್ಥಿತಿಯ ವಿಚಾರಣಾ ಸಮಿತಿಯ ತೀರ್ಮಾನದ ವಿಷಯದಲ್ಲಿಯೂ ಭಿನ್ನಾಭಿಪ್ರಾಯಗಳು ಇರುವಂತೆ ತೋರುತ್ತದೆ. ಆದರೆ ಕಳೆದ ಮುಷ್ಕರಗಳ ನಷ್ಟದಿಂದ ಇನ್ನೂ ಉದ್ಧಾರವಾಗದಿರುವ ಮಜೂರರನ್ನೂ ಪುನಃ ಮುಷ್ಕರಕ್ಕೆ ಪ್ರೇರಿಸಿದುದು ಒಳ್ಳೆಯದೆಂದು ಹೇಳಲಾಗುವುದಿಲ್ಲ. ಅಲ್ಲದೆ ಪಠಾಣರ ಸಂಬಂಧವಾಗಿ ಎದ್ದ ಮುಂಬಯಿ ಗೋಲಗಳಿಂದಲೂ ಮಜೂರರ ಕಷ್ಟಗಳು ಹೆಚ್ಚುತ್ತವೆ. ವ್ಯಾಪಾರಿಕೆಯ ಹಿತದ ದೃಷ್ಟಿಯಲ್ಲಿಯೂ ಮಜೂರರ ಹಿತದ ದೃಷ್ಟಿಯಲ್ಲಿಯೂ ಮುಂಬಯಿ ಮಜೂರರನ್ನು ಮುಷ್ಕರಕ್ಕೆ ಪ್ರೇರಿಪಿಸಿದುದು [illegible]. ಒಂದು ಬಾರಿ ಮಜೂರರ ಹಕ್ಕುಗಳನ್ನು ಸಾಧಿಸುವ ಅವಶ್ಯವಿದ್ದಾದರೆ, ಅದನ್ನು ಇಷ್ಟು ಅವಸರದಿಂದ ಮಾಡದೆ, ಮಜೂರರ ಸ್ಥಿತಿಯು ಬಲವಾಗಿ ಇರುವ ವರೆಗೆ ಕಾದಿದ್ದು, ಆ ವರೆಗೆ ಗಿರಣಿ ಮಾಲೀಕರೊಡನೆ ಪ್ರಸ್ತಾಪ ಮೂಲಕವೇ

[illegible] ಮುಖಂಡರೊಳಗೆ [illegible] ಧೋರಣದ ಮಾಧ್ಯಸ್ಥ್ಯವು ಇರುವುದು ವಿಷಾದಕರವಾಗಿದೆ.

ಬ್ರಿಟಿಷ ಚುನಾವಣೆಗಳು.

ಬ್ರಿಟಿಷ ಪಾರ್ಲಿಮೆಂಟಿನ ಅವಧಿಯು ಮುಗಿದುದರಿಂದ ಬ್ರಿಟಿಷ ಚುನಾವಣೆಗಳೂ ಸದ್ಯದಲ್ಲಿಯೇ ಜರಗಲಿಕ್ಕಿವೆ. ಈ ಚುನಾವಣೆಯ ಭಾಷಣಗಳ ಪ್ರಾರಂಭವು ಈಗಾಗಲೇ ಆಗಿರುತ್ತದೆ. ಈ ವರ್ಷದ ಸರಕಾರೀ ಆಯವ್ಯಯದ ಪಟ್ಟಿಯು ಸರಕಾರೀ ಪಕ್ಷಕ್ಕೆ ಮತದಾರರ ಬೆಂಬಲ ಸಿಕ್ಕುವಂತೆ ರಚಿಸಲ್ಪಟ್ಟಿದ್ದಿತು. ಕನ್ಸರ್ವೆಟಿವ್ ಪಕ್ಷದ ಬಾಲ್ಡ್ವಿನ್ ಸರಕಾರವು ತನ್ನ ಬಜೇಟನ್ನು ರಚಿಸುವಾಗ ಮತದಾರರಲ್ಲಿ ಅಧಿಕಾಂಶ ಜನರು ಉಪಯೋಗಿಸುವ ಕೆಲವು ಸಾಮಾನುಗಳ ಮೇಲಿನ ಕರವು ಇಳಿಸಲ್ಪಟ್ಟಿದ್ದಿತು. "ಲಂಚದ ಬಜೇಟು" A budget of bribery" ಅಂದರೆ ಮತದಾರರಿಗೆ ಲಂಚಕೊಟ್ಟು ಕನ್ಸರ್ವೆಟಿವ್ ಪಕ್ಷಕ್ಕೇನೇ ಅವರು ಮತವನ್ನು ಕೊಡುವಂತೆ ಮಾಡುವ ಉದ್ದೇಶದಿಂದ ರಚಿಸಿದ ಬಜೇಟು ಎಂದು ಲೇಬರ್ ಪಕ್ಷದ ಮೆಂಬರರೊಬ್ಬರು ತಮ್ಮ ಬಜೇಟು ಭಾಷಣದಲ್ಲಿ ಸೂಚಿಸಿದರು. ಮಿ। ಚರ್ಚಿಲ್ಲರ ಬಜೇಟು ಭಾಷಣವೂ ಮಾಮೂಲಿ ವಿಧಿಯ ಗಾಂಭೀರ ಬಜೇಟು ಭಾಷಣದಂತೆ ಇರದೆ ಬರೇ ಚುನಾವಣೆ ಸಮಯದ ಭಾಷಣದಂತಿದ್ದಿತು. ಇದರಿಂದ ಕನ್ಸರ್ವೆಟಿವ್ ಪಕ್ಷವು ಹ್ಯಾಗೆ ತನ್ನ ಅಧಿಕಾರವನ್ನು [illegible] ಗಳನ್ನು ನಡಿಸುತ್ತಿದೆಯೆಂದು ತಿಳಿಯುವುದು. ಇಂಗ್ಲೆಂಡಿನ ಜನತೆಯ ಮಧ್ಯದಲ್ಲಿ ಕನ್ಸರ್ವೆಟಿವ್ ಪಕ್ಷದ ಮೇಲಿನ ವಿಶ್ವಾಸವು ಮೊದಲಿನಷ್ಟು ಇಲ್ಲವೆಂದು ಇತ್ತೀಚೆಗೆ ನಡೆದ ಉಪ ಚುನಾವಣೆಗಳ ಫಲಗಳನ್ನು ನೋಡಿದರೆ ತಿಳಿಯುವುದು. ಮಧ್ಯದಲ್ಲಿ ಈಗ ಹೊಸತಾಗಿ ಸ್ತ್ರೀಯರಿಗೂ ಓಟುಗಳು ದೊರೆತ ಸ್ತ್ರೀಯರ ಓಟುಗಳು ಯಾವ ಕಡೆಗೆ ಒಲಿಯಬಹುದೆಂದು ಹೇಳಲಾಗುವುದಿಲ್ಲ. ಲೊಯಡ್ ಜೋರ್ಜರು ಲಿಬರಲ್ ಪಕ್ಷಕ್ಕಾಗಿ ಪ್ರಬಲವಾದ ಪ್ರಚಾರ ಕಾರ್ಯವನ್ನು ಕೈಕೊಂಡಿರುವರಾದರೂ ಲಿಬರಲ್ ಪಕ್ಷವಾದ ಸ್ಪಷ್ಟವಾದ ಧೋರಣವಾಗಲಿ ಧ್ಯೇಯವಾಗಲಿ ಇರದಿರುವುದರಿಂದ ಅದರ [illegible] ವುದು ಶಕ್ಯಸಾಧ್ಯವಿದೆ. ಲೇಬರ ಪಕ್ಷವು ಸ್ವಲ್ಪ ಬಲವಾಗುತ್ತ ಬರುತ್ತಿದೆ. ಅದರ ಈ ಮೊದಲಿನ [illegible] ಧ್ಯೇಯವು ಕಡಿಮೆಯಾಗಿ ಸಾಮ್ರಾಜ್ಯ ವಾದವು ಅದರ [illegible] ದರಿಂದ ಅದು ಚುನಾವಣೆಯಲ್ಲಿ ಬಲವಾಗುವ ಸಂಭವವಿದೆ. ಆದರೆ ಲಿಬರಲ್ ಮತ್ತು ಕನ್ಸರ್ವೆಟಿವ್ ಪಕ್ಷಗಳ ಎದುರಾಗಿ ಲೇಬರ್ ಪಕ್ಷವು ಅಧಿಕಾರಕ್ಕೆ ಬರುವುದು ಅಸಂಭವವಿದ್ದು ಪುನಃ ಲಿಬರಲ್ ಪಕ್ಷವೇ ಬ್ರಿಟಿಷ ಸರಕಾರದ ಸೂತ್ರವನ್ನು ಕೈಯಲ್ಲಿ ಹಿಡಿಯಬಹುದಾಗಿ ನೆನಸಬಹುದು. ಹಿಂದೂಸ್ಥಾನದ ಮಟ್ಟಿಗೆ ಯಾವ ಸರಕಾರವು ಅಧಿಕಾರಕ್ಕೆ ಬಂದರೂ ಒಂದೇ. ಸೈಮನ್ ಕಮಿಶನ್ನಿನ ನೇಮಕದ ಅಥವಾ ಅದರ ಉದ್ದೇಶದ ವಿಷಯವು ಇಷ್ಟು ಮಹತ್ವದ್ದಾದರೂ ಬ್ರಿಟಿಷ ಪಕ್ಷಗಳು ತಮ್ಮ ಚುನಾವಣೆಯ ಕಾರ್ಯಕ್ರಮಗಳಲ್ಲಿ ಅದನ್ನು ಸೇರದೇ ಇದ್ದುದೂ ಮತ್ತು ಬ್ರಿಟಿಷ ಮತದಾರರೂ ಆ ವಿಷಯದಲ್ಲಿ ಉತ್ಸುಕರಾಗದೇ ಇದ್ದುದೂ ನೋಡಿದರೆ ಹಿಂದೂಸ್ಥಾನವು ತನ್ನ ಭಾವೀ ರಾಜಕೀಯ ಸುಧಾರಣೆಗಳ ಬಗ್ಗೆ ಬ್ರಿಟಿಷರ ಕಡೆಗೆ ನೋಡುವ ಅವಶ್ಯಕತೆಯೇ ಇಲ್ಲವೆಂದು ತೋರುವುದು. ಮೇಲಾಗಿ [illegible] ಅದನ್ನು ಚುನಾವಣೆಯ ವಿಷಯವಾಗಿ ಮಾಡುವುದು ಅನಾವಶ್ಯಕತೆಯನ್ನೂ ಸೂಚಿಸಿರುವರು; ಮತ್ತು ಮಜೂರ ಪುರೋಹಿತರಾದ ರಾಮ್ಸೆ ಮೆಕ್ಡೊನಾಲ್ಡರೂ ಒಪ್ಪಿಕೊಂಡಿರುವರು. ಆದುದರಿಂದ [illegible] ತಮ್ಮ [illegible] ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿ ಹಿಂದೂಸ್ಥಾನವನ್ನು ಅಪಮಾನಿಸದಿರಲೆಂದು ಆಶಿಸುತ್ತೇವೆ.

ಇವರು ಹಿಂದೂಸ್ಥಾನವನ್ನು ಬಿಡುವಾಗ ವಿಷಾದಪಡಲೇಬೇಕಾಗಿದೆ.

• • •

ಸಧ್ಯದಲ್ಲಿ ಜರಗಲಿದೆ—ಮದ್ರಾಸ ಕೌನ್ಸಿಲಿನ ಜನರಲ್ ಇಲೆಕ್ಷನ್. ಪತ್ರಿಕೆಯಲ್ಲಿ ಪಾರ್ಟಿ ಸಂಗಡಗಳು ಬರೆಯಲು ಪ್ರಾರಂಭಿಸಿದ್ದಾವೆ. ಬಂತು ಬಂತು ಹಬ್ಬ ವೋಟರರಿಗೆ.

• • • •

ಮೈಸೂರು ಖಜಾನೆಯ ಹಣ ದುರುಪಯೋಗ ಮಾಡಿದ ನಂಬ್ರ ಮುಗಿದು ಕೆಲ ಸಮಯ ಆಗಲಿಲ್ಲ. ಅಷ್ಟರೊಳಗೆ ಗಂಧದ ಎಣ್ಣೆಯ ಕಾರ್ಖಾನೆಯ ನಂಬ್ರ ತಯಾರು. ವಿಚಾರಣೆಯು ನಡೆಯುತ್ತಾ ಇದೆ.

ನೋಟಗಳು.
NOTES.

ಎಸ್. ಐ. ಆರ್. ರೈಲ್ವೆಯ ಮುಷ್ಕರದ ಗಡಿಬಿಡಿಯಲ್ಲಿ ತಿರುಚಿನಾಪಳ್ಳಿಯಲ್ಲಿ ಸೈದುವರಾದಲ್ಲಿ ಎರಡು [illegible] ಮುಖಂಡರಿಗೆ ಮತ್ತು ಇತರ ಹದಿಮೂರು ಜನರಿಗೆ ಶಿಕ್ಷೆಯು ಹತ್ತು ವರುಷಗಳ ಶಿಕ್ಷೆ. ಶಿಕ್ಷೆಯೇನೊ ಸರಿ ಆದರೆ ಮುದಿ ಪ್ರಾಯದ ಮುಖಂಡರು ತಮ್ಮ ಮುದಿ ಪ್ರಾಯವನ್ನು ಕಾರಾಗೃಹದಲ್ಲಿ ತೆಗೆಯುವಂತಾಯಿತು.

• • • •

ಇಂಥಾ ಕಠಿಣ ಶಿಕ್ಷೆಗಳು ಮುಂದಿನ ಲೇಬರ್ ಲೀಡರ್ಸ್‌ಗಳಿಗೆ ಒಂದು ದೃಷ್ಟಾಂತ.

• • •

ಕಲ್ಕತ್ತೆಯ ಫೋರ್ವರ್ಡ್ ಪತ್ರಿಕೆಯು ಒಂದುವರೆ ಲಕ್ಷ ರೂಪಾಯಿ ಇ. ಐ. ಆರ್. ರೈಲ್ವೆ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ಸಿಗೆ ಕೊಡಬೇಕಾಗಿದೆ.

• • • •

ಕಾರಣ — ಕಲ್ಕತ್ತೆದ ಹತ್ತಿರ ಇರುವ ಬೇಲೂರು ಎಂಬಲ್ಲಿ ರೈಲ್ವೆ ಅಪಾಯ ಸಂಭವಿಸಿದಾಗ ನಡೆಯದೆ ಇರುವ ಅರೋಪಣೆಗಳನ್ನು ಕಠಿಣವಾದ ತರದಲ್ಲಿ ಬರೆದು ಪ್ರಚಾರ ಪಡಿಸಿದ್ದಕ್ಕೆ. ಮಾನನಷ್ಟದ ಮೊಕದ್ದಮೆಗಳಲ್ಲಿ ರೂಪಾಯಿ ಸಿಕ್ಕಿ, ರೈಲ್ವೆ ಕಂಪೆನಿಯವರಿಗೆ ಮಾನ ಸಿಕ್ಕಿತು.

• • •

ಮಾನನಷ್ಟ ಮೊಕದ್ದಮೆ ತಂದವರಿಗೆ ಒಂದುವರೆ ಲಕ್ಷ ರೂಪಾಯಿ ಕೊಟ್ಟು [illegible] ಫೋರ್ವರ್ಡ ಪತ್ರಿಕೆಯನ್ನು ಲಿಕ್ವಿಡೇಟ್ ಮಾಡುವರು. ಲಿಕ್ವಿಡೇಟರರನ್ನು ತಯಾರು [illegible] ಆಯಿತು.

• • • •

ದಿಲ್ಲಿಯಲ್ಲಿ ಕೆಂಪು ಕಾಗದದಲ್ಲಿ ಬರೆದು ಕೊಲ್ಲುತ್ತೇವೆಂದು [illegible] ಕಾಗದದ ಕ್ರಮವು ಜೋರಾಗಿದೆ. ಮೊನ್ನೆ ಶಾ. ಇಲಕ್ಕೆ ಡೈಲಿ ಕ್ರೋನಿಕಲ್ ಸಂಪಾದಕರಿಗೆ ಕೊಲ್ಲುತ್ತೇವೆಯಾಗಿ ಒಂದು ಕೆಂಪು ಕಾಗದ. ಕಾರಣ ಜನಾಂಗದ ವಿಷಯ ವಿರೋಧದ ಅಭಿಪ್ರಾಯ ಬರೆಯುತ್ತಾರಾಗಿ. ಇತರ ಪೋಲೀಸ್ ಆಫೀಸರುಗಳಿಗೆ ಕೂಡ ಇದೇ ರೀತಿ ಕಳುಹಿಸಲ್ಪಡುತ್ತವೆ.

• • • •

ಕೆಂಪು ಕಾಗದ ಕಳುಹಿಸುವವರು ಯಾರೆಂದು ಗುಟ್ಟು ಇನ್ನೂ ಯಾರಿಗೂ ತಿಳಿದಿಲ್ಲ.

• • •

ಮುಂಬಯಿಯಲ್ಲಿ ಗಿರಣಿಗಳ ಮುಷ್ಕರ [illegible] ಕೊಂಡದೇ ಕಾಣಬರುವುದಿಲ್ಲ. ವಿದೇಶಿ ವಸ್ತ್ರಗಳನ್ನು ಬಹಿಷ್ಕರಿಸಬೇಕು. ಮುಂಬಯಿಯಲ್ಲಿ ಗಿರಣಿಗಳು ಮುಷ್ಕರದಲ್ಲಿ ಇರಬೇಕು. ಬಹಿಷ್ಕಾರದ ಫಲ, ವಿದೇಶಿ ವಸ್ತ್ರವಿನಾಶ ದಿನ ಹೋದಂತೆ.

• • •

ಒಂದು ವರುಷದಲ್ಲಿ ಒಂಭತ್ತು ತಿಂಗಳು ಮುಷ್ಕರ ನಡೆದು ಗಿರಣಿಗಳೆಲ್ಲಾ ನಷ್ಟದಲ್ಲಿ ನಡೆಯುತ್ತಾ ಇವೆ. ಇವರ ನಷ್ಟದಿಂದ ಮತ್ತು ಮುಷ್ಕರದಿಂದ ವಿಲಾಯಿತಿಯ ಜೇಬು ತುಂಬುತ್ತಿದೆ.

• • • •

ಇತ್ತಲಾಗೆ ಇಂಗ್ಲಿಷ್ ಪತ್ರಿಕೆಯವರು ಅಫಘಾನಿಸ್ಥಾನದ [illegible] (ಅಫಘಾನ [illegible]) ಅಫಘಾನಿಸ್ಥಾನದ ನಾಟಕ ಎಂದು [illegible] ಹಾಕುತ್ತಾರೆ. ಇಷ್ಟು ದಿವಸ ಗಡಿಬಿಡಿ ಇತ್ತು. ಈಗ ನಾಟಕವಾಗಲು ಪ್ರಾರಂಭವಾಗಿದೆ.

• • • •

[illegible] ಶಾಹಜಹಾನಾಬಾದಿನ ಒಬ್ಬ ಮುಸಲ್ಮಾನನು ಹಿಂದೂಗಳನ್ನು ನೋಡಿದಲ್ಲಿ ಕೊಲ್ಲುವ ಕೆಲಸ ಪ್ರಾರಂಭಿಸಿದ್ದನು. ಆರು ಜನರಿಗೆ ಗುಂಡಿನಿಂದ ಹೊಡೆದು ಕೊಂದು ಬಿಟ್ಟನು. ಇನ್ನೂ ೨೫ ಹಿಂದೂ ಜನರಿಗೆ ಕೊಲ್ಲುತ್ತೇನಾಗಿ ಶಪಥ ಹಾಕಿರುತ್ತಾನಂತೆ. ಅವನು ಯಾರೆಂದು ಹುಡುಕಲು ಅಲ್ಲಿಯ ಪೋಲೀಸರಿಗೆ ಕಷ್ಟವಾಗಿದೆ.

• • • •

ಶಾ. ಇಲಕ್ಕೆ ಕೆಲವು ಮುಸಲ್ಮಾನರಿಗೆ ಸೈದು ಮಾಡಿರುವರು. ಅದರ ಪೈಕಿ ಒಬ್ಬ ಹಿಂದೂವಿಗೂ ಕೂಡಾ ಸೈದು ಮಾಡಿರುವರು. ಕಾಲಸ್ಥಿತಿ—

• • • •

ಸೈಮನ ಸಾಹೇಬರ ಸಂಗಡವು ಕಳೆದ ಶನಿವಾರ ಇಂಗ್ಲೆಂಡಿಗೆ ಮುಟ್ಟಿತು. ಎಲ್ಲರೂ ಕ್ಷೇಮ. ಸಮಾಚಾರ ಮುಂದಕ್ಕೆ—

• • •

ಸೈಮನ ಸಾಹೇಬರು ಅತೀ ವಿಷಾದಪಟ್ಟು ಹಿಂದೂಸ್ಥಾನವನ್ನು ಬಿಟ್ಟು ತಮ್ಮ ತವರು ಮನೆಗೆ ಹೋಗಿರುವರು.

[illegible]

ಮಂಗಳೂರಿನ [illegible] ವರೆಗಿನ ಪಂಚಾಂಗ.

(ಗರ್ಭಿಣಿಯ ಮೇಷ (ಪಗ್ಗ))

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ F. ಉ	ಅಸ್ತ
4	ಶನಿ	೧೦	೩೦.೫೫	ಶತಭಿಷಾ	೫೩.೩೩	೨೧	6.1	6.44
5	ರವಿ	೧೧	೩೦.೧೩	ಪೂ. ಭಾ.	೫೩.೧೩	೨೨	6.11	6.44
6	ಸೋಮ	೧೨	೨೮.೩೨	ಉ. ಭಾ	೨೮.೪೦	೨೩	6.10	6.45
7	ಮಂಗಳ	೧೩	೨೫.೩೦	ರೇವತಿ	೫೩.೦೩	೨೪	6 10	6.45
8	ಬುಧ	೧೪	೨೦.೧೮	ಅಶ್ವಿನಿ	೨೪.೪೪	೨೫	6 10	6.45
9	ಗುರು	●	೧೬. ೨	ಭರಣಿ	೨೨. ೨	೨೬	6. 9	6.45
10	ಶುಕ್ರ	೧	೧೧.೧೪	ಕೃತ್ತಿಕಾ	೩೧.೧೮	೨೭	6. 9	6.45

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum	ಗರಿಷ್ಠ	Minimum	ಕನಿಷ್ಠ	Rainfall. ಮಳೆ ದಿನದ ಮಳೆ	ಒಟ್ಟು ಮಳೆ
20	78—	5	91—	4	—	—
21	80—	2	92—	3	—	—
22	76—	5	93—	6	0—01	—
23	77—	8	88 —	6	0—06	—
24	77—	3	91 —	7	0—03	—
52	76 —	0	92 —	1	0—20	—
26	80—	3	91 —	1	0—34	—
						3 —94

ಮಂಗಳೂರಿನ ಪೇಟೆ ಧಾರಣೆ.

ಬೇನಸು		ಇಂದ ರೂ.	ಅ.	ವರೆಗೆ ರೂ.	ಅ.
ಮಸ್ಕತ್	...	7 —	0	7 —	4
ಗೋಧಿ	...	6 —	4	6 —	8
ರಾಗಿ	...	5 —	7	5 —	14
ಊರ ಅಸ್ಕರ್ ಬೆಳ್ತಿಗೆ	...	7 —	0	7 —	4
ಕುಚ್ಚಿ	...	6 —	0	6 —	5
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 —	0	12	3
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	6 —	4	6 —	4
ಗೋಧಿ ಗೋಣಿ ಗಳ್ಳೆ	..	15 —	12	20 —	0
ಜುರಾ ಗೋಣಿ ಗಳ್ಳೆ	..	7 —	6	10 —	0
ಕಡಲೆ ಗೋಣಿ ಗಳ್ಳೆ	...	16 —	8	16 —	8
ತೊಗರಿ ಗೋಣಿ ಗಳ್ಳೆ	...	16 —	8	—	
ತೊಗರಿಬೇಳೆ ಗೋಣಿ ಗಳ್ಳೆ	...	18 —	8	27 —	0
ಉದ್ದು ಗೋಣಿ ಗಳ್ಳೆ	..	15 —	0	16 —	0
ಹೆಸರು ಗೋಣಿ ಗಳ್ಳೆ		14 —	8	16 —	0
ಊರು ಬೆಲ್ಲ ಖಂಡಿ ಗಳ್ಳೆ	...	60 —	0	65 —	8
ಉಪ್ಪು ಗೋಣಿ ಗಳ್ಳೆ	..	4 —	6	5 —	0
ಕೊಬ್ರಿ ಖಂಡಿ ಗಳ್ಳೆ	..	95 —	0	92 —	
[illegible] ಹಿಂಡಿ ಖಂಡಿ ಗಳ್ಳೆ	...	34 —	0	—	
ಎಳ್ಳಿಂಡಿ ಖಂಡಿ ಗಳ್ಳೆ	...	42 —	8	45 —	
[illegible] ಎಣ್ಣೆ ಮುಡಿ ಗಳ್ಳೆ	...	6 —	10	8 —	0
ಎಳ್ಳೆಣ್ಣೆ ಮುಡಿ ಗಳ್ಳೆ		7 —	12	8	4
ಹರಳೆಣ್ಣೆ ಬೆಳ್ತಿಗೆ ಗಳ್ಳೆ	..	7 —	12	8	4
ಮೋರಿಸ ಸಕ್ಕರೆ ಮುಡಿ ಗಳ್ಳೆ	..	—		3	3
ಜೋನ ಮೆಣಸು	...	4 —	8	6 —	4
ಹಳ್ಳು ಊರ ಮೆಣಸಿನಕಾಯಿ ಮುಡಿ ಗಳ್ಳೆ	.	1 —	8	2 —	4
ಸಾಸಿವೆ ಮುಡಿ ಗಳ್ಳೆ	.	8 —	8		
ಕೊತ್ತಂಬರಿ ಮುಡಿ ಗಳ್ಳೆ	...	3 —	12		0
ನೇಟಿವ್ ಕಾಫಿ ಖಂಡಿ ಗಳ್ಳೆ	..	360 —	0	370 —	0
ಅಡಿಕೆ [illegible] ಖಂಡಿ ಗಳ್ಳೆ		145 —		160	0
ಕಾಳುಮೆಣಸು ಖಂಡಿ ಗಳ್ಳೆ	.	430 —	0	420 —	0
ಯೇಲಕ್ಕಿ ಮುಡಿ ಗಳ್ಳೆ	...	50 —	0	56 —	
ಗೇರುಬೀಜ ಮುಡಿ ಗಳ್ಳೆ	...	3 —	4		
[illegible] ಖಂಡಿ ಗಳ್ಳೆ	...	42 —	0	46 —	8
[illegible] ಮುಡಿ ಗಳ್ಳೆ	...	19 —	0	19 —	12
[illegible] ಮುಡಿ ಗಳ್ಳೆ	...	20 —	..	21	4
[illegible] ಸೇರು ಗಳ್ಳೆ	...	15 —	4	—	
[illegible] ಮುಡಿ ಗಳ್ಳೆ	..	17 —	0	17 —	8
[illegible] ಗಳ್ಳೆ	...	13—9—0		—	
[illegible] ಖಂಡಿ ಗಳ್ಳೆ	...	34 —	0	37 —	8

ಪಂಚಸ್ಸಿಸಿ! ಆಶ್ಚರ್ಯಗೊಳಿಸದು!!

ಹೊಸದುರ್ಗ ಅಮೃತೇಶ್ವರಂ ವೈದ್ಯಶಾಲಾ

ಹೊಸ್ದುರ್ಗ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ [illegible] ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೊಸ್ಸಾದ್ [illegible]

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ)

ತಯಾರಾಗಿವೆ ತಯಾರಾಗಿವೆ.

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ವಾಚನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಪಟ್ಟಿ, ಇತರ ವರ್ತಮಾನಗಳು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.



ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿತ್ಯಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ‖ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ ಆಯುರ್ವೇದ ಸಾರಸಂಗ್ರಹ ರೂಪವಾಗಿರುವ [illegible] ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿರುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು [illegible]

ರಾಜವೈದ್ಯ ನಾರಾಯಣಜಿ ಕೇಶವಜಿ,

1/94 ಜೈನಾ ಬಜಾರು, ಮದ್ರಾಸು.

ಉಚಿತ! ಉಚಿತ!!

372 ಪುಟಗಳುಳ್ಳ ಸಂಪೂರ್ಣವಾದ ಮತ್ತು ಉಪಯೋಗವಾದ ವಿಷಯಗಳುಳ್ಳ

1929ನೇ ಇಸವಿಯ ಡೈರಿ

ಒಂದು ರೂಪಾಯಿ ಬೆಲೆಯುಳ್ಳ, ನಮ್ಮ ಲೋಕಪ್ರಸಿದ್ಧ ವಾದ ಶಾಸಿಕ್ಕೆಂಬುವ ಧಾತು ಪುಷ್ಟಿ

ಮದನಮಂಜರಿ ಮಾತ್ರೆಗಳು

ಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವವು. ಈ ಮಾತ್ರೆಗಳು [illegible]

ಡಿ. ಜಾಲನ್ ಮಾರ್ಕ್, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು

(1860ನೇ ಇಸವಿಯ XXIನೇ ಆಕ್ಟಿನ [illegible])

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

[illegible] 1927ನೇ ಇಸವಿಯಲ್ಲಿ [illegible]

ಏಜಂಟರು ಬೇಕಾಗಿರುವರು.

ವಿಶೇಷ ವರ್ತಮಾನಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಕೊಂಗರಕೇರಿ, ಮಂಗಳೂರು.

[illegible]

ಆರೋಗ್ಯ ... — ಮೊಗಲರು, ಮುಸ್ಲಿ, ..., ಸುರತಕಲ್, [illegible]

ಹಿಂದೂಸ್ಥಾನದ ಸ್ಥಿತಿ, ಕೌನ್ಸಿಲ್ ಸಂಕಲ್ಪಗಳು

ಹಿಂದೀ ರಾಜಕೀಯ ಪರಿಸ್ಥಿತಿ.

ಮಂಗಳೂರು ಶಾಲೆಗಳು ಎರಡುಂಟು ಶಾಲಾ ಅಧ್ಯಾಪಕ,

ಅಧ್ಯಾಪಕಿಯರ ಸಂಘಸ್ಥಾಪನೆ

ಸ್ವದೇಶಾಭಿಮಾನಿ.

ತಾರೀಕು ೩ನೇ ಶುಕ್ರವಾರ ಮೇ ೧೯೨೯.

ಸೈಮನರು ಮನೆ ಸೇರಿದರು

“ಹಿಂದೂಸ್ಥಾನವನ್ನು ಬಿಡಲಿಕ್ಕೆ ವಿಷಾದವಾಗುತ್ತಿದೆ; ಆದರೆ ಹೋಗಲಿಕ್ಕೆ ಸಂತೋಷವಾಗುತ್ತಿದೆ” ಈ ಮಾತುಗಳಿಂದ ಸೈಮನರು ಹಿಂದೂಸ್ಥಾನದ ಬಹಿಷ್ಕಾರದ ಬಿಸಿಯ ವಾತಾವರಣದಿಂದ ತಪ್ಪಿಕೊಂಡು ಸ್ವಂತ ಮನೆಗೆ ಸಂಚರ್ಯ(?) ಯಾತ್ರೆಯನ್ನು ಆರಂಭಿಸಿದ್ದಾರೆ. ಸೈಮನರಿಗೆ ಸಿಕ್ಕಿದ ಆತಿಥ್ಯವೂ ಸ್ವಾಗತವೂ ಇತಿಹಾಸದಲ್ಲಿ ಗಾಢವು. ಮಹಾಂತಿರದೇಶ(?), ಆದರೂ ರೈಲ್ವೆ ಸ್ಟೇಶನುಗಳಲ್ಲಿಯೂ, ಮಹಾನಗರ ಬಂದರಗಳಲ್ಲಿಯೂ, ಕೌನ್ಸಿಲು ಮಂದಿರಗಳಲ್ಲಿಯೂ, ಗವರ್ನಮೆಂಟ ಹೌಸ್‌ಗಳಲ್ಲಿಯೂ ಸೈಮನರಿಗೆ ಸಿಕ್ಕಿದ ಆ ಅಪೂರ್ವ ಸ್ವಾಗತವನ್ನು ತನ್ನ ಕಲ್ಪನೆಯಿಂದಲೇ ಮಹತ್ವಪೂರ್ಣಗಳಾಗಿ ಚಿತ್ರಿಸಲು ಲ್ಯೂಟರ್ ವಾರ್ಡ್ ಎನ್ನುವ ಸಂದರ್ಭವನ್ನು ಕಳಕೊಳ್ಳಲಿಲ್ಲ. ಸೈಮನ್ ಬಹಿಷ್ಕಾರವು ಕೇವಲ ಕೆಲವರ ದೈಂಬ(?) ಆ ಮನೋಹರವಾದ ಕಾಲ್ಪನಿಕ ಭಾವನೆಯಿಂದ ತನ್ನನ್ನು ತಾನೇ ಮೋಸಗೊಳಿಸಿದಷ್ಟು ಸೈಮನರಿಗೂ ಸಂತೋಷವಾಗಿದ್ದಿತು.

ಆದರೆ ಸ್ವಂತ ಮನೆಯನ್ನೇ ಸೇರುವದಾದರೂ ಸೈಮನರಿಗೆ ಬಹಿಷ್ಕಾರದ ಬಾಧೆ ಬೇರೆ ತಪ್ಪಲಿಲ್ಲ. ಅವರ ಹಿಂದೀ ಸ್ವಾಗತವು ಎಷ್ಟು ಎಚ್ಚರಿಕೆಯಿಂದಲೂ ಪೋಲೀಸ್ ರಕ್ಷಣೆಯಿಂದಲೂ ಹಿಂದೂಸ್ಥಾನದಲ್ಲಿ ನಡೆಯಿತೋ, ಇಂಗ್ಲೆಂಡಿನಲ್ಲಿಯೂ ಕೂಡ ಅವರ ಸ್ವಾಗತದ ಬಗ್ಗೆ ಅಷ್ಟೇ ಎಚ್ಚರಿಕೆಯನ್ನೂ ಪೋಲೀಸ್ ಸಹಾಯವನ್ನೂ ಪಡೆಯಬೇಕಾಯಿತು. ಸೈಮನರನ್ನು ಸ್ವಾಗತಿಸುವ ಪ್ರವೇಶ ಸ್ಥಳಕ್ಕೆ ಎಲ್ಲರಿಗೂ ಪ್ರವೇಶವಿರಲಿಲ್ಲ. ಅಪ್ಪಟ ರಾಜಭಕ್ತರೆನಿಸಿಕೊಳ್ಳುವವರೂ ಬ್ರಿಟಿಷ ಸಾಮ್ರಾಜ್ಯವಾದಿಗಳೂ, ಇಂತಹವರಿಗೆ ಮಾತ್ರವೇ ಇಂಡಿಯಾ ಆಫೀಸಿನವರು ಟಿಕೇಟನ್ನು ಕೊಟ್ಟು ಸ್ವಾಗತವನ್ನು ಧನ್ಯಪಡಿಸಿದ್ದರು. ದಬ್ಬಾಳಿಕೆಯಿಂದಲೂ, ಪೋಲೀಸ್ ಅತ್ಯಾಚಾರಗಳಿಂದ ರಚಿಸಲ್ಪಡುತ್ತಲಿದ್ದ ಹಿಂದೀ ಸ್ವಾಗತದ ರೀತಿಯು ಇಂಗ್ಲೆಂಡಿನಲ್ಲಿಯೂ ಅಭಿನಯಿಸಲ್ಪಡುವ ಅಗತ್ಯವಿದ್ದದ್ದೂ ಹಿಂದೀಯರಿಗೆ ತೃಪ್ತಿಕರವಾದ ವಿಷಯ.

“ಸ್ವಾತಂತ್ರ್ಯ”ವೆಂಬ ಮಂಥನಿಯಿಂದ ಬ್ರಿಟಿಷ ಸಹಾನುಭೂತಿಯನ್ನು ಕಳಕೊಳ್ಳಬಾರದೆಂದು ಹಿಂದೀಯರಿಗೆ ಸಂದಾನ(?) ಪಕ್ಷದ ಮಂತ್ರವನ್ನು ಪಠಿಸಿದ್ದ ಶ್ರೀ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಕೂಡ ಸೈಮನ್ ಸ್ವಾಗತದಲ್ಲಿ ಹಿಂದೀಯ ಅಗೌರವವನ್ನು ಕಾಣದೆ ಹೋಗಲಿಲ್ಲ. ಪಂಜಾಬಿನ ಬಿವರು(?) ಹಿಂದೀಯರ ಪರವಾಗಿ ಸೈಮನರಿಗೆ ಸ್ವಾಗತವನ್ನು ಕೊಡಲಿರುವರೆಂಬುದನ್ನು ಕೇಳಿ ಶ್ರೀ ಶಾಸ್ತ್ರಿಗಳು ಕೂಡ ಇದು ಅಗತ್ಯವಿಲ್ಲದ ಕೃತ್ಯವೆಂದು ಖಂಡಿಸಿರುವರು. ಸೈಮನರ ಹಿಂದೀಯ ಬಹಿಷ್ಕಾರವು ಅಷ್ಟು ಪೂರ್ಣವಾಗಿರುವದು.

ಇಂಗ್ಲಾಂಡಿನಲ್ಲಿನ ಹಿಂದೀಯರೂ ಸುಮ್ಮನಿರಲಿಲ್ಲ. ಅಲ್ಲಿಯ ಹಿಂದೀಯರು ಬಹಿಷ್ಕಾರದ ಮೆರವಣಿಗೆಗಳನ್ನು ಪ್ರತ್ಯಕ್ಷವಾಗಿ ವ್ಯವಸ್ಥೆಗೊಳಿಸಿದರು. “ಸೈಮನ್ ಸಮಿತಿಯು [illegible] ಹಿಂದಕ್ಕೆ ಹೋಗಲಿ” ಎಂದು ಬರೆದಿರುವ [illegible] ಮೆರವಣಿಗೆಯು ಸೈಮನ್ ಸ್ವಾಗತಕ್ಕೆ ಹೋಯಿತು. [illegible] ಈ [illegible] ಹಿಂದೀ ವಿದ್ಯಾರ್ಥಿಗಳು ಈ ಬಹಿಷ್ಕಾರ ಚಳವಳಿಯಲ್ಲಿ ಭಾಗ ತೆಗೆದುಕೊಂಡಿದ್ದರು. ಪಾರ್ಲಿಮೆಂಟ್ ಮೆಂಬರರಾದ ಸಕಲತ್‌ವಾಲಾರವರೂ ಧುರೀಣರಾಗಿ ಮುಂದೆ ಬಂದಿದ್ದರು. ಕೆಲವು ಹಿಂದೀಯರು ಕೈದುಮಾಡಲ್ಪಟ್ಟರು.

ಸೈಮನರ ಸ್ವಂತ ದೇಶದಲ್ಲಿಯೇ ಆದರೂ ಈ ತರದ ವಿರೋಧಭಾವವು ಪ್ರಕಟವಾಗಲು ಸಾಧ್ಯವಾದುದು ಹಿಂದೀಯರ ನ್ಯಾಯವಾದ ವಿರೋಧದ ವಿಜಯವನ್ನು ತೋರಿಸುತ್ತಿದೆ. ಕಳೆದ ಬಾರಿಯಂತೆ ಈ ಬಾರಿಯೂ ಹಿಂದೂಸ್ಥಾನಕ್ಕೆ ತನ್ನದಿಯೊಳಗಿನ ಗಂಟನ್ನು ತೋರಿಸಿದರೆ ಸಾಕೆಂದು ಇಂಗ್ಲೆಂಡು ನೆನಸುವುದಾದರೆ ಅದು ತಪ್ಪು ಹಾದಿಯನ್ನು ಹಿಡಿದಿದೆಯೆನ್ನಬೇಕಾಗುವುದು. ಸೈಮನ್ ಸಮಿತಿಯನ್ನು ಹಿಂದೂಸ್ಥಾನವು ಒಪ್ಪಲಾರದೆಂದು ಸಾಮಾನ್ಯವಾಗಿ ಎಲ್ಲಾ ಪಕ್ಷದವರೂ ಹೇಳಿರುವರು. ಬ್ರಿಟಿಷ ಸರಕಾರವೂ ಹಿಂದೂಸ್ಥಾನಕ್ಕೆ ಈ ಸಮಿತಿಯ ಮೇಲಿರುವ ಪ್ರಬಲವಾದ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಉತ್ತಮವಿತ್ತು. ಆದರೆ ಬ್ರಿಟಿಷರು ಒತ್ತಾಯವಿಲ್ಲದೆ ಉದಾರತೆಯ ನಿದರ್ಶನಗಳು ಕಾಣುವುದಿಲ್ಲ. ಹಿಂದೂಸ್ಥಾನವು ತನ್ನ ಅಂತಹ ಒತ್ತಾಯವನ್ನು ಸ್ವೀಕರಿಸದೆ ಇರಲಾರದು.

ಆದರೆ ಬ್ರಿಟಿಷ ಜನತೆಯಾಗಲಿ, ಬ್ರಿಟಿಷ ರಾಜಕೀಯ ಪಕ್ಷಗಳಾಗಲಿ, ಸಾಮ್ರಾಜ್ಯದ ದುರಭಿಮಾನದ ಹೊರತು, ಹಿಂದೂಸ್ಥಾನದಂತಹ ವಿಶಾಲ ಜನಾಂಗದ ವಿಷಯದಲ್ಲಿ ಹೆಚ್ಚು ವಿಚಾರದಿಂದ ನಡೆಯಲಾರದೆಂಬುದು ವಿಷಾದಕರವಿದೆ. ಹೆಚ್ಚು ವರ್ಷಗಳ ಹಿಂದೆ ಹಿಂದೂಸ್ಥಾನದ ಕೆಲವು ರಾಜಕೀಯ ಪಕ್ಷಗಳು ಹಿಂದೂಸ್ಥಾನದ ರಾಜಕೀಯ ಉನ್ನತಿಯನ್ನು ಬ್ರಿಟಿಷ ಮಜೂರ ಪಕ್ಷದ ಮೇಲೆ ಹೊಂದಿಸಿದ್ದರು. ಆದರೆ ಆ ಮೇಲಿನ ಅವರ ಅನುಭವವು ಅವರ ಕಡೆಯ ಆ ಆಶೆಯನ್ನು ಕೂಡ ನಿರ್ಮೂಲಿಸಿ, ಸ್ವಂತ ಶಕ್ತಿಯ ಮೂಲಕವೇ ಹಿಂದೂಸ್ಥಾನವು ತನ್ನ ರಾಜಕೀಯ ಮುಕ್ತಿಯನ್ನು ಪಡೆಯಬೇಕೆಂಬ ಸತ್ಯತೆಯನ್ನು ಕಂಡುಕೊಂಡಿದೆ. ಆದುದರಿಂದ ಸೈಮನರು ಬಂದರೂ, ಅವರು ಪುನಃ ಹೋದರೂ ಹಿಂದೂಸ್ಥಾನವು ಅವರಿಂದೇನೂ ಆಶಿಸುವುದಿಲ್ಲವೆಂಬುದು ಸ್ಪಷ್ಟವಿದೆ.

ಪರದೇಶ ವರ್ತಮಾನ.

— ಗ್ರೆಹಾಮ್ ವೈಟ್ ಎಂಬ ಸಿನಿ[illegible] ವಿಮಾನವು ೫೭ ಮೈಲಿನ ವರೆಗೆ ಹಾರಾಡಿ ಹೊಸ ದಾಖಲೆ ಕೆಲ್ಲಿಸಿತು(?).

— [illegible] ವಿಮಾನದ ಮೇಲೆ [illegible] ಹೋಗಿದ್ದರು. ಅವರಿಬ್ಬರೂ ಬದುಕಿ ಉಳಿದರು(?).

— [illegible] ಸಂಖ್ಯೆಯು ೨೦೮.

— [illegible] ಕೊಲ್ಲಲ್ಪಟ್ಟರು, [illegible] ಕೊಲ್ಲಲ್ಪಟ್ಟರು.

— [illegible] ಸರೋಜಿನಿ ನಾಯಡುರವರು ತನ್ನ ಅಮೇರಿಕಾ ಸಂಚಾರವನ್ನು ಮುಗಿಸಿ [illegible] ಇಂಗ್ಲೆಂಡಿಗೆ ಬರಲು ಹೊರಟಿರುವರು.

— [illegible] ಕೊಲ್ಲಲ್ಪಟ್ಟನು.

— [illegible] ಒಂದು ಹೋಟೆಲಿನಲ್ಲಿ ಒಬ್ಬ [illegible] ವಜ್ರವೈಢೂರ್ಯ [illegible] ಆಭರಣಗಳು ಕಳವಾಗಿಹೋಯಿತು(?). [illegible] ಸಾವಿರ [illegible] ಆಭರಣಗಳು ಕಳವಾಗಿ ಹೋಯಿವೆಂದು(?) ಅಂದಾಜುಮಾಡಲಾಗಿದೆ.

— ಹಿಂದೂಸ್ಥಾನದ ಈಗಿನ ಪರಿಸ್ಥಿತಿಯ ಕಾರಣದಿಂದ ಶ್ರೀಮತಿ ಸರೋಜಿನಿ ನಾಯ್ಡುರವರು ತನ್ನ [illegible] ಇಂಗ್ಲಾಂಡಿನ ಪ್ರಯಾಣ ಬೆಳೆಸುವರು. ಹಿಂದೂಸ್ಥಾನದ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ವಿಶೇಷ ಉತ್ಸಾಹಿಗಳಾಗಿದ್ದ ಅಮೇರಿಕನರು ತನಗೆ ಸಲ್ಲಿಸಿದ ಸ್ವಾಗತಕ್ಕಾಗಿ, ಅವರು ಅಮೇರಿಕನರಿಗೆ ಕೃತಜ್ಞತೆಯನ್ನು ಸೂಚಿಸುವರು. ಈ ಕುರಿತು ಅವರು ಯುನೈಟೆಡ್ ಸ್ಟೇಟ್ಸ್ ಮತ್ತು ಕೆನಡಾದಲ್ಲಿ ಸೂಚಿಸಿರುವರು.

— ಸ್ಕಾಟ್ಲೆಂಡಿನ ಪಶ್ಚಿಮ ಪ್ರಾಂತ ಮತ್ತು ಇಂಗ್ಲಾಂಡಿನ ಉತ್ತರ ಪ್ರಾಂತಗಳಲ್ಲಿ ಸೀತದ(?) ಹುಚ್ಚುಯುಂಟಾಗಿರುತ್ತದೆ. ಹಂಟಿಂಗ್ಡನಿನ ಒಂದು ಹಳ್ಳಿಯಲ್ಲಿ ಒಂದೆ ಬಾಳ್ಗೆ ಸಿಂದು(?) ಮಾಡುವವರ ಪೆಟ್ಟಿಗೆಗಳಂತೆ ಮಾರಲ್ಪಡುತ್ತಿದೆ.

— ನ್ಯೂಯಾರ್ಕಿನಲ್ಲಿ ಎರಡು ರೈಲು ಬಂಡಿಗಳು ಒಂದಕ್ಕೊಂದು ಢಿಕ್ಕಿಹೊಡೆದು ಮೂವರು ಸತ್ತುಹೋದರು. ನಾಲ್ವತ್ತು ಮಂದಿಗೆ ಜಖಮಾಗಿರುತ್ತದೆ.

[illegible] ಎಂದು [illegible] ಎಂದು ಸೈಮನ್ [illegible] ಎಂದು ಸೂಚಿಸಲಾಗಿದೆ. [illegible]

— ಹಿಂದೂಸ್ಥಾನದಿಂದ ಹೊರಟ [illegible] ವಿಮಾನ [illegible] ಹತ್ತಿರ [illegible].

— ಕೊರಿಯಾ ಎಂಬಲ್ಲಿ ಹಸುಗೂಸು [illegible] ಬಹಳ(?) ಸತ್ತವರ ಸಂಖ್ಯೆಯು ೯೬ ಎಂದು ತಿಳಿಯುತ್ತದೆ.

— ಕಿಂಗ್ ಎಡ್ವರ್ಡ್ ಫಂಡ್ ಎಂಬ ಹೆಸರಿನಿಂದ [illegible] ನಿಧಿಗೆ ಅರಸರು ಒಂದುಸಾವಿರ ಪೌಂಡುಗಳನ್ನೂ, ಮಹಾರಾಣಿಯವರು ೫೦೦ ಪವನುಗಳನ್ನೂ, ಯುವರಾಜರು ೨೦೦ ಗಿನಿಗಳನ್ನೂ ವಂತಿಗೆ ಹಾಕಿರುವರು.

— ಹಿಂದೂಸ್ಥಾನದಲ್ಲಿ ಪ್ರಾರಂಭವಾದ ವಿದೇಶಿ ವಸ್ತ್ರಬಹಿಷ್ಕಾರದ ದೆಸೆಯಿಂದ ಲಂಕಾಶಾಯರಿನ ಹತ್ತಿ ಕೈಗಾರಿಕೆಯ ಮೇಲೆ ಎಂತಹ ನಷ್ಟವುಂಟಾಗಿರುತ್ತದೆಂದು ಈಗಿನಿಂದ ತಿಳಿಯುತ್ತದೆ. ಕೇವಲ ಎರಡೇ ತಿಂಗಳುಗಳ ಬಹಿಷ್ಕಾರದಿಂದ ಲಂಕಾಶಾಯರಿನ ೨೯ ಗಿರಣಿಗಳು ಮುಚ್ಚಲ್ಪಟ್ಟವು. ಬಹಿಷ್ಕಾರದ ಮೊದಲು ಇದುವರೆಗೆ ಮುಚ್ಚಲ್ಪಟ್ಟ ಗಿರಣಿಗಳ ಸಂಖ್ಯೆ ೪೮. ಅಂದರೆ ಇದೀ ಪಟ್ಟಣದ ಗಿರಣಿಗಳ ಸಂಖ್ಯೆಯು ೧೫ ಆಯಿತು. ಈ ೨೯ ಗಿರಣಿಗಳಲ್ಲಿ ಹೆಚ್ಚಿನವು ಪುನಃ ಬೇಗನೇ ತೆರೆಯಲ್ಪಡುವವಂತೆ. ಬ್ಲ್ಯಾಕ್‌ಬರ್ನ್ ಎಂಬ ಪಟ್ಟಣದಲ್ಲಿಯೇ ನಿರುದ್ಯೋಗಿಗಳ ಸಂಖ್ಯೆಯು ಕಳೆದವಾರ ೧೪ ಸಾವಿರವಾಗಿದ್ದಿತು. ಅದಕ್ಕಿಂತ ಹಿಂದಿನವಾರ ಬರೇ ೬೨. ಸಾವಿರವಾಗಿದ್ದಿತು.

ಒಳದೇಶ ವರ್ತಮಾನ.

— ಡಿಲ್ಲಿಯಲ್ಲಿ ಒಬ್ಬ ಹಳೇ ಗೌರವ ಮ್ಯಾಜಿಸ್ಟ್ರೇಟರು ಗಡಿಯಾರದ ಕಂಬದ ಹತ್ತಿರ ಒಂದು ಸೋಟೀಸನ್ನು ಓದುತ್ತಿರುವಾಗ, ಒಂದು ಬಾಂಬವು ಅಲ್ಲಿಗೆ ಬಂದು ಆತನ ಸ್ಫೋಟಿಸಿ(?) ಹೋಯಿತು. ಆತನಿಗೆ ವಿಶೇಷ ಅಪಮಾನದಿಂದ ಆತನನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಬಾಂಬನ್ನಿಟ್ಟವನು ಕೂಡಲೆ ಓಡಿಹೋಗಿ ತಪ್ಪಿಸಿಕೊಂಡನು.

— ಕಲಕತ್ತಾ ಎಂಬಲ್ಲಿ ಮೊದಲನೆಯ ಕೇರಳ ಹಿಂದೂ ಪರಿಷದವನ್ನು ಜರಗಿಸಲು ತಯಾರಿಗಳು ನಡೆಯುತ್ತಲಿವೆ. ಭಾರತ ನಡಿ(?)ಯ ಜನರಲ್ಲಿ ಬೆಂಬಲಗಳನ್ನೂ ದೇಣಿಗೆಗಳನ್ನೂ ನಿರ್ಮಿಸುತ್ತಲಿರುವರು. ಈ ಪರಿಷತ್ತಿನಲ್ಲಿ ಅಸ್ಪೃಶ್ಯತೆಯ ವಿಷಯವಾಗಿಯೂ, ದೇವಾಲಯ ಪ್ರವೇಶದ ವಿಷಯವಾಗಿಯೂ ಚರ್ಚೆ ನಡೆಯಲಿರುವದು. ಕೊಚ್ಚಿಯ ರಿಜಾಯರ್ಡ್ ಜಡ್ಜ್ ರಾವ್ ಬಹದ್ದೂರು ನಾರಾಯಣ ಮೆನನರವರೇ ಸ್ವಾಗತ ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಪಂಡಿತ ಮದನ ಮೋಹನ ಮಾಲವೀಯರವರೂ, ಡಾ. ಮುಂಜೆಯವರೂ ಈ ಪರಿಷತ್ತಿಗೆ ಬರಲಿರುವರು. ಅದೇ ದಿನ ಕೇರಳದ ಪರಿಷತ್ತು ಕೂಡ ಜರಗುವದು. ಇದಕ್ಕೆ ತಿರುವಾಂಕೂರಿನ ರಾಜ ವೈದ್ಯರಾದ ಶ್ರೀಮಾನ್ ಕಲ್ಯಾಣಕೃಷ್ಣ ಅಯ್ಯರವರೇ ಅಧ್ಯಕ್ಷರು.

— ಮುಂಬಯಿಯ ವಿದೇಶಿ ವಸ್ತ್ರ ಬಹಿಷ್ಕಾರ ಕಮಿಟಿಯವರು, ಇದೇ ಮೇ ತಿಂಗಳ ೫ನೇ ತಾರೀಕಿನ ದಿನವನ್ನು, ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳವರು ಒಂದು ವಿದೇಶಿ ವಸ್ತ್ರ ಬಹಿಷ್ಕಾರದ ದಿನವನ್ನಾಗಿ ಆಚರಿಸಬೇಕೆಂದು ಸೂಚಿಸಿರುವರು. ಆ ದಿನ ವಿದೇಶಿ ವಸ್ತ್ರಗಳನ್ನು ವಿಕ್ರಯಿಸುವವರನ್ನು ಸಮಿತಿಯು(?), ಅವರು ವಿದೇಶಿ ವಸ್ತ್ರಗಳನ್ನು ಇನ್ನು ಮುಂದಕ್ಕೆ ತರಿಸದಂತೆ ನಿವೇದಿಸಿಕೊಳ್ಳಬೇಕೆಂದೂ, ಅದು ಮಾತ್ರವಲ್ಲದೆ ಇತ್ತರೊಳಗೆ(?) ವಿದೇಶಿ ವಸ್ತ್ರಗಳಿಗೆ ಕೊಟ್ಟ ಆರ್ಡರನ್ನು ತೆಗೆದು ಹಾಕುವಂತೆ ಮಾಡಬೇಕೆಂದೂ ಅವರು ಸೂಚಿಸುವರು.

— ಖಾದಿ ಕಮಿಟಿಯವರಿಂದ ಮಾದರಿಯಾಗಿ ಖಾದಿ ವಸ್ತ್ರವನ್ನು ತಯಾರಿಸಿ ಒಂದು ಖಾದಿ ಪ್ರದರ್ಶನವನ್ನು ಜರಗಿಸಬೇಕೆಂದು ಕರಾಚಿ ಮುನಿಸಿಪಾಲಿಟಿಯವರು ನಿಶ್ಚಯಿಸಿರುವರು. ಖಾದಿಯನ್ನು ಪ್ರೋತ್ಸಾಹಿಸಬೇಕೆಂಬ ಮನಸ್ಸು ಕರಾಚಿ ಮುನಿಸಿಪಾಲಿಟಿಯವರಲ್ಲಿ ಉಂಟಾಗಿರುತ್ತದೆ.

— ನೈಜಾಂ ರಾಜ್ಯದ ಸೋಲಾಪುರ(?) ಎಂಬಲ್ಲಿ ಬೆಂಕಿಯ ಅನಾಹುತದಿಂದ ೮೦ ಮನೆಗಳು ಮತ್ತು ಮರದ ಸಾಮಾನುಗಳು ಹೆಚ್ಚಾಗಿ ಸುಟ್ಟುಹೋದವು. ಕಾಡಿನ ಮಧ್ಯದಲ್ಲಿ ಬೆಂಕಿಯುಂಟಾಗಿ ಈ ಬೆಂಕಿಯು ಸಮೀಪದ ಒಣಗಿದ ಕೆಂಗಿನ ಮರಕ್ಕೆ ತಗಲಿ ತೆಂಗಿನ ಮರದಿಂದ ಅದು ಮರದ ಹುಲ್ಲಿನ ಮನೆಗಳಿಗೆ ಹಬ್ಬಿತು. ಮೂರು ಮನೆಗಳು ಮಾತ್ರ ಸ್ವಲ್ಪ ಸಮಯದೊಳಗೇನೇ ಸುಟ್ಟುಹೋಯಿತು. ರಾತ್ರಿಯ ಸಮಯವಾದುದರಿಂದ ಬೆಂಕಿಯನ್ನು ನಂದಿಸಲು ಸಾಧ್ಯವಾಗಲಿಲ್ಲ.

— ಡಿಲ್ಲಿಯಲ್ಲಿ ಸಿಡುಬು ರೋಗದಿಂದ ಹೇರಳ ಮಕ್ಕಳು ಸತ್ತುಹೋಗುತ್ತಿರುವರು. ಮುನಿಸಿಪಾಲಿಟಿಯವರು ಪ್ರತಿಯೊಬ್ಬ ನಿವಾಸಿಗರು ಬೇಗ(?) ಹಾಕುವ ವ್ಯವಸ್ಥೆಯನ್ನು ಮಾಡುತ್ತಿರುವರು.

— ಧಂಬಾದ ಎಂಬಲ್ಲಿನ ಜಿ. ಓ. ಸಿ. ಸ್ಟೇಶನಿನಲ್ಲಿ ಅಕಸ್ಮಾತವಾಗಿ ದೊಡ್ಡ ಕಲ್ಲಿದ್ದಿಲ ಬೆಂಕಿಯುಂಟಾಗಿ ಹಲವರಿಗೆ ಅಪಾಯುಂಟಾಯಿತು. ಒಂದು ತಾಸಿನ ತರುವಾಯ ಬೆಂಕಿಯು ನಂದಿಸಲ್ಪಟ್ಟಿತು.

— ಕಲಕತ್ತೆಯಲ್ಲಿ ಒಂದು ಹೊಸ ದೈನಿಕ ಪತ್ರಿಕೆಯು ಪ್ರಾರಂಭಿಸಲ್ಪಟ್ಟಿರುತ್ತದೆ. ವಿ. ಕುಂಟೂಕಾರ್ಯ(?) ಸರಕಾರರೆಂಬವರೇ ಇದರ ಮುದ್ರಕರು ಮತ್ತು ಪ್ರಕಾಶಕರು. ಇದರ ಹೆಸರು “ನ್ಯೂ ಫಾರ್ವರ್ಡ್” ಎಂದು.

— ಸತಾರಾ ಜಿಲ್ಲಾ ಪರಿಷದವು ಡಾ. ಎನ್. ಬಿ. ಕೇಳ್ಕರರ ಅಧ್ಯಕ್ಷತೆಯಲ್ಲಿ ಜರಗಿತು. ಸುಮಾರು ಮೂರು ಸಾವಿರ ಪ್ರತಿನಿಧಿಗಳು ಬಂದಿದ್ದರು.

— [illegible] ಕಾಂಗ್ರೆಸ್ [illegible] ಅಧ್ಯಕ್ಷರಾದ [illegible] [illegible] ಗೆ [illegible] ಮಾಡಿದರು. [illegible] ಅವರ [illegible] ಎಂದು [illegible]

— [illegible] ಕಟ್ಟಲ್ಪಟ್ಟಿರುವ ಕೈದಿಗಳಿಗೆ [illegible] ಪ್ರಯುಕ್ತ, ಕೈದಿಗಳು ಕಳೆದ [illegible] ಒಂದು [illegible] ಗೊಂದಲವನ್ನುಂಟುಮಾಡಿದರು.

— [illegible] ಗಿರಣಿಯಲ್ಲಿ ಸುಮಾರು [illegible] ಜನರು [illegible] ಬರಹೊರಗಿರುವರು. ಇದು ವರೆಗೆ ಅವರು [illegible] ದಿನಗಳ ಮುಷ್ಕರವನ್ನು ಆಚರಿಸಿದ ಹಾಗಾಯಿತು.

— ಮುಂಬಾಯಿಯ ದೆಲ್ಯಾಲ ರಸ್ತೆಯಲ್ಲಿ ಪಾಲಕಿಯೊಂದಿಗೆ ಮೆರವಣಿಗೆಯನ್ನು ನಡೆಯುತ್ತಿರುವಾಗ ಒಂದು ಹಿಂದೂ ಸಂಗರ ಮತ್ತು ಒಂದು ಮುಸಲ್ಮಾನ ತಂಡಗಳೊಳಗೆ ಜಗಳವು ನಡೆಯಿತು. ಒಬ್ಬ ಹಿಂದೂವು ವಧಿಸಲ್ಪಟ್ಟನು. ಇನ್ನೊಬ್ಬನಿಗೆ ವಿಪರೀತವಾದ ಜಖಮಾಯಿತು. ಎರಡೂ ಕಡೆಯ ಹದಿಮೂರು ಮಂದಿಗೆ ಜಖಮಾಯಿತು. ಜಗಳವು ನಡೆದುದು ಮಸೀದಿಯ ಸಮೀಪದಲ್ಲಿ. ಸುಖಾರಿಬಾಗ್ ಎಂಬ ಬೈಸ್ ರಸ್ತೆಯಲ್ಲಿ ಒಬ್ಬ ಮೊಹಮ್ಮದೀಯನ ಶವವು ತೊಂಡೊಯ್ಯಲ್ಪಡುತ್ತಿರುವಾಗ, ಶವಸಂಸ್ಕಾರವನ್ನು ಹಿಂದೂಗಳು ಆಕ್ರಮಿಸಿದರು. ಒಬ್ಬ ಮುಸಲ್ಮಾನನು ಅಲ್ಲಿಯೇ ವಧಿಸಲ್ಪಟ್ಟನು. ಇನ್ನೊಬ್ಬನು ಆಸ್ಪತ್ರೆಯಲ್ಲಿ [illegible]

— ಇಂದೋರಿನ ಕೈಲಿನ ಅನುಭವದ ಕುರಿತಾಗಿ ಶಂಕರರಾವ್ ಬಾಪುರಾವ್ ಎಂಬಾತನು ಕಲಕತ್ತೆಯ ಹೈ ಕೋರ್ಟಿನಲ್ಲಿ ಸಾಕ್ಷಿ ಹೇಳಿದನು. ಬಹು ಸ್ವಾರಸ್ಯಯುಕ್ತವಾಗಿದೆ. ಇಂದೋರಿನಲ್ಲಿ ಆತನು ದಿನಸಿ ಮಾರಿಕೊಂಡಿದ್ದು, ಮಾಜಿ ಮಹಾರಾಜರ ಸ್ನೇಹಿತನಾಗಿದ್ದನು. ೧೯೨೪ನೇ ಇಸವಿಯಲ್ಲಿ ಮಹಾರಾಜರವರು ಮುಸ್ಸೋರಿಗೆ ತೆರಳಿದರು. ~~ಮಹಾರಾಜರಿಂದ ಬಹಿಷ್ಕರಿಸಲ್ಪಟ್ಟ~~ ಮಮತ್ತಾಜ ಬೇಗಮಳು ಕೆಲವು ಅಧಿಕಾರಿಗಳೊಂದಿಗೆ ಕೈಬಿಟ್ಟು ತೆರಳಿದಳು. ಬಾಪುರಾಯನ ವಿರೋಧಿಗಳು ಆತನ ಕುರಿತಾಗಿ ಮಹಾರಾಜನ ಕಡೆ ದೂರುಹೇಳಿದರು. ಮಹಾರಾಜರಿಗೆ ಸಿಟ್ಟುಬಂದು, ಆತನೇ ಮಮತ್ತಾಜ ಬೇಗಮಳ ಪಲಾಯನಕ್ಕೆ ಕಾರಣನೆಂದು ತಿಳಿದು ಆತನಿಗೆ ಐದು ವರುಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತಲ್ಲದೆ, ೬೦ ಲಕ್ಷ ರೂಪಾಯಿಯ ಆತನ ಆಸ್ತಿಯೂ ಅಪಹರಿಸಲ್ಪಟ್ಟಿತು. ಒಂಭತ್ತು ತಿಂಗಳು ಮತ್ತು ಹದಿನೊಂದು ದಿನಗಳ ವರೆಗೆ ಸಂಕೋಲೆಯಿಂದ ಬಂಧಿತನಾಗಿ ಆತನು ಚಿಕ್ಕದೊಂದು ಕೋಣೆಯಲ್ಲಿ ಇಡಲ್ಪಟ್ಟಿದ್ದನು.

— ನೆಭಾ ರಾಜ್ಯದ ಮಾಜಿ ಮಹಾರಾಜರು ಆರೋಗ್ಯದ ಸಲುವಾಗಿ ಉದಕಮಂಡಲದಲ್ಲಿ ಉಳಕೊಳ್ಳಬಹುದೆಂದು ಅವರಿಗೆ ಸಮ್ಮತಿಯು ದೊರಕಿರುತ್ತದೆ.

— ಸ್ಯಾಲಕೋಟಿನ ಒಂದು ಕಟ್ಟಡಕ್ಕೆ ಮೊನ್ನೆ ಕಾನೆ ಬೆಂಕಿ ಹಿಡಿದು ಅದು ಪೂರ್ಣವಾಗಿ ಸುಟ್ಟುಹೋಯಿತು. ಇಬ್ಬರು ಇದರ ಬೆಂಕಿಯಿಂದ ಸತ್ತುಹೋದರು. ಹಲವರು ಗಾಯಹೊಂದಿರುತ್ತಾರೆ.

— ಕೇರಳಾ ಹಿಂದೂ ಮಹಾಸಭಾ ಪರಿಷತ್ತಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಪಂಡಿತ ಮದನಮೋಹನ ಮಾಲವೀಯರವರು ಮದರಾಸಿಗೆ ಬಂದು ತಲಪಿದೊಡನೆ ಅವರನ್ನು ಚೆನ್ನಾಗಿ ಸ್ವಾಗತೀಕರಿಸಿದರು.

— ಮದರಾಸಿನ ಬಹಿರಂಗವಾದ ರಸ್ತೆಯೊಂದರಲ್ಲಿ ಇಬ್ಬರು ಮನುಷ್ಯರು ಒಂದು ಹಂದಿಯನ್ನು ಓಡಿಸಿಕೊಂಡುಹೋಗಿ ಅದನ್ನು ಹೊಡೆದು ಅದಕ್ಕೆ ಗಾಯಗಳನ್ನುಂಟುಮಾಡಿದುದರ ಬಗ್ಗೆ ರಾಯಪೇಟೆ ಬೆಂಚ್ ಕೋರ್ಟಿನಲ್ಲಿ ಅವರಿಗೆ ಹತ್ತತ್ತು ರೂಪಾಯಿಗಳಂತೆ ಜುಲುಮಾನೆಯು ವಿಧಿಸಲ್ಪಟ್ಟಿತು.

— ಉತ್ತರ ಹಿಂದೂಸ್ಥಾನದ ಹಲವು ವ್ಯಾಪಾರಿಗಳನ್ನು ಇದುವರೆಗೆ ಮೋಸಗೊಳಿಸಿದ, ಹೈದರಾಬಾದಿನ ಪಠಾಣಕೋಟದ ಜಾಹರಿ ಮತ್ತು, ಕೊಲ್ಲಿಯ ಜಿ. ಎಸ್. ಪೈ, ಎಂಬವರು ಕೈದು ಮಾಡಲ್ಪಟ್ಟಿರುವರು. ಇವರಿಬ್ಬರೂ ಬೇರೆಬೇರೆ ಪಟ್ಟಣಗಳಿಗೆ ಹೋಗಿ, ತಾವು ಅಂತಿಂತಹ ಸಂಸ್ಥೆಗಳ ಏಜಂಟರೆಂದು ಹೇಳಿ, ಅವರಿಂದ ಮಾಲುಗಳಿಗೆ ಆರ್ಡರು ಪಡೆದು, ವಿ. ಪಿ.ಯನ್ನು ಆರ್ಡರು ಪಡೆದವರ ವಿಳಾಸಕ್ಕೆ ಕಳುಹಿಸಿ ಹಣವನ್ನು ಪಡೆಯುತ್ತಿದ್ದರು. ವ್ಯಾಪಾರಿಗಳಾದರೋ ತಾವು ಆರ್ಡರ್ ಮಾಡಿದ ಮಾಲುಗಳ ರೈಲುವೇ ರಶೀದಿಯು ಬಂದಿತೆಂದು ನಂಬಿ ವಿ. ಪಿ.ಗೆ ಹಣ ಕಟ್ಟಿ, ಒಡೆದು ನೋಡಲಾಗಿ ಒಳಗೆ ರೈಲುವೇ ರಶೀದಿಯ ಬದಲಾಗಿ ಅನುಪಯುಕ್ತವಾದ ಕಾಗದದ ತುಂಡುಗಳನ್ನು ನೋಡಿ ಮೋಸಹೋಗುತ್ತಿದ್ದರು. ಈ ಸಂಗತಿಯು ಪ್ರಕಟವಾಗಿ, ತಾವು ಸಿಕ್ಕಿಬೀಳುವಂತೆ ಮೋಸಗಾರರು ಒಡನೆಯೇ ಅಲ್ಲಿಂದ ಪಲಾಯನ ಮಾಡಿ ಬೇರೊಂದೂರಿನಲ್ಲಿ ಇದೇ ರೀತಿ ಮಾಡುತ್ತಿದ್ದರು.

— ಸಾಮಾಜಿಕ ಸುಧಾರಣೆಗಾಗಿ, ಸಬರಮತಿ ಆಶ್ರಮದಲ್ಲಿ ಕೆಲವು ದಿನಗಳ ಹಿಂದೆ ವೈಕ್ಕಮಿನ ಎರಡು ವಿಭಾಗಗಳಲ್ಲಿ ಅಂತರ್ ವಿವಾಹವು ನಿಶ್ಚಯಿಸಲ್ಪಟ್ಟಿತು. ಮಹಾತ್ಮಾ ಗಾಂಧಿಗಳವರೂ, ಶೇಟ್ ಜಮುನಾಲಾಲರೂ ದಿವಂಗತ ಶ್ರೀ ಮಗನಲಾಲ್ ಗಾಂಧಿಯವರ, ಕಿರಿಯ ಪುತ್ರಿ ಕುಮಾರಿ ರುಕ್ಮಿಣಿ ದೇವಿ, ಮತ್ತು, ರಾಣಿಗಂಜದ ರಾಮೇಶ್ವರ ದಾಸಬಜಾಜರ ಪುತ್ರ ಬನ್ಸಿರಾಲ ಬಜಾಜರೊಳಗೆ ನೆಂಟಸ್ತಿಕೆಯನ್ನು ನಿಶ್ಚಯಿಸಿದರು. ವರನ ಪ್ರಾಯ ೨೪, ವಧುವಿನ ಪ್ರಾಯ ೧೫.

— ಜನೇವಾದಲ್ಲಿ ನಡೆಯುವ ಅಂತ್ರರಾಷ್ಟ್ರೀಯ ಸ್ತ್ರೀಯರ ವಿದ್ಯಾ ಸಮ್ಮೇಳನಕ್ಕೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಹೊರಟು ಹೋಗುವರು. ಅವರು ಅಖಿಳಭಾರತ ಉಪಾಧ್ಯಾಯರ ಪರಿಷತ್ತು, ಅಖಿಳಭಾರತ ಸ್ತ್ರೀಯರ ವಿದ್ಯಾಪರಿಷತ್ತು, ಮತ್ತು ಸ್ತ್ರೀಯರ ಹಿಂದೂ ಸಂಘ, ಇವೆಲ್ಲವುಗಳ ಪ್ರತಿನಿಧಿಯಾಗಿ ಹೋಗುವರು. ಬಾಲ್ಯ ವಿದ್ಯಾ ಮತ್ತು ಪ್ರೌಢವಿದ್ಯಾ ಇವುಗಳ ಕುರಿತಾಗಿ ಅಲ್ಲಿ ಅವರು ಚರ್ಚಿಸುವರು. ಜನೇವಾದಲ್ಲಿನ ಅವರ ಕೆಲಸವು ಮುಗಿದ ಮೇಲೆ ಅವರು ಬೆರ್ಲಿನ್‌ಗೆ ಹೋಗಿ, ಅಲ್ಲಿಂದ ಲಂಡನಿಗೆ ತೆರಳುವರು. ಲಂಡನಿನಲ್ಲಿ ಅವರು ಹಲವು ಭಾಷಣಗಳನ್ನು ಮಾಡಿ ಸೆಪ್ಟಂಬರ ತಿಂಗಳಿನಲ್ಲಿ ಹಿಂದೂಸ್ಥಾನಕ್ಕೆ ಹಿಂತಿರುಗುವರು.

ದಕ್ಷಿಣ ಕನ್ನಡ.

ಮಂಗಳೂರು — ಇದೇ ಮೇ ತಿಂಗಳಿನಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಸ್ವಾತಂತ್ರ್ಯದಿನ, ಬೆಂಕ್, ದೀಪ ಮತ್ತು ಆರಾಯನೆಗಳಿಗಾಗಿ, ಆವು ಇದೇ ರಾತ್ರೆಯೂ, ಗೇಸ್ ದೀಪಗಳು ಪ್ರಾತ್ರರಾತ್ರಿ ಹದಿನೆರಡು ಘಂಟೆಯ ವರೆಗೂ ಉರಿಸಲ್ಪಡುವವು. ಸಾಮಾನ್ಯ ದೀಪಗಳು, ತಾರೀಕು ೭, ೮, ೯, ೧೦ ಮತ್ತು ೧೧ ನೇ ದಿನಗಳಲ್ಲಿ ಇಡೀ ರಾತ್ರೆಯೂ, ಉಳಿದ ದಿನಗಳಲ್ಲಿ ಸಮಯಾನುಸಾರವೂ ಉರಿಸಲ್ಪಡುವವು.

ಹವಾಗುಣವು ಒಳ್ಳೆಯದಿದ್ದರೆ ದಿ ಬೊಂಬ್ಯಾ ಸ್ಟೀಮ್ ನೆವಿಗೇಶನ್ ಕಂಪೆನಿಯ ಕಡೆಯ ಸ್ಟೀಮರು ಇಲ್ಲಿಂದ ಇದೇ ತಿಂಗಳ ೧೩ನೇ ಸೋಮವಾರ ಹೊರಟುಹೋಗುವದು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರ ಬರುವ ಸಾಧಾರಣ ಮಹಾಸಭೆಯು ಮಂಗಳೂರಿನಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಇದೇ ಬರುವ ೭ನೇ ಮಂಗಳವಾರ ಅಪರಾಹ್ನ ೩ ಘಂಟೆ ೩೦ ನಿಮಿಷಕ್ಕೆ ಜರಗುವದು.

ಮಂಗಳೂರಿಗೆ ಕೆಲವು ದಿನಗಳಿಂದ ಮೈಲು ಬಂಡಿಯು ಸಾಯಂಕಾಲ ೬ ಘಂಟೆಗೆ ಬಂದು ತಲಪುತ್ತದೆ, ಮತ್ತು ಬೆಳಿಗ್ಗೆ ೮ ಘಂಟೆ ೧೫ ನಿಮಿಷಕ್ಕೆ ಇಲ್ಲಿಂದ ಹೊರಟು ಹೋಗುತ್ತದೆ.

ಉಡುಪಿ — ಕೌನ್ಸಿಲಿನ ಚುನಾವಣೆಗೆ ಸದಸ್ಯರಾಗಿ ನಿಂತ [illegible] ಬಂದುದರಿಂದ ನನ್ನದೊಂದು ಸೂಚನೆ. ದ್ರಾವಿಡ ಬ್ರಾಹ್ಮಣರ ಪರಿಷತ್ತು, ಬಂಟರ ಯಾನೆ ನಾಡವರ ಸಂಘ, ದೇವಾಡಿಗರ ಸಂಘ, ಬಿಲ್ಲವರ ಸಂಘ, ಆದ್ಯೈಕ ಸಭೆ, ಬ್ರಾಹ್ಮೋದಯ ಸಮಾಜ, ಸಾರಸ್ವತ ಮತ್ತು ಗೌಡಸಾರಸ್ವತ ಸಭೆಗಳು, ತುಳುವ ಮಹಾಸಭೆ, (ಇದ್ದರೆ, ಇಲ್ಲದಿದ್ದರೆ ಮಾಡುವಂತೆ) ಭುವನಾಳಿಕರ ಸಂಘ, ಇನ್ನೂ ಇತರ ಇಂತಹವು, ಸಾಮಾಜಿಕ, ಜಾತೀಯ ಸಂಸ್ಥೆಗಳು ಒಂದು ಕಡೆ ಸೇರಿ ಆರಿಸಿದ ಉಮೇದುವಾರರಿಗೇನೇ ಇಲ್ಲಿಯವರು ಬೆಂಬಲವನ್ನು ಕೊಡುವದು ಉತ್ತಮ. ಇದಕ್ಕೆ ಬೇಕಾದ ಉಪಕರಣಗಳನ್ನು ಜಿಲ್ಲಾ ಕೋಂಗ್ರೆಸ್ ಕಮಿಟಿಯವರೇ ಸಿದ್ಧಗೊಳಿಸುವದು ಉತ್ತಮ. ಎಂದು ಕೆಂಡೆದಲ್ಲಿ ಉಡುಪಿ 'ಶ್ರೀಕೃಷ್ಣ'ನ ಸೂಚನೆ.

ಸುರತ್ಕಲ್ — ಇಲ್ಲಿಯ ಇಷ್ಟ ವಿದ್ಯಾದಾಯಿನೀ ಶಾಲೆಯ ದ್ವಾದಶ ವಾರ್ಷಿಕ ವರ್ಧಂತಿ ದಿನಾಚರಣೆಯು ಇದೇ ಕಳೆದ ತಾ. ೩೦—೪—೨೬ನೇ ಶನಿವಾರ ಅಪರಾಹ್ನ ಘಂಟೆ ೪ಕ್ಕೆ ಆದೇ ಶಾಲಾ ಮಂದಿರದಲ್ಲಿ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ ಪ್ಲೀಡರೂ ವಕೀಲರೂ ಆದ ಮ॥ ರಾ॥ ರಾ॥ ಕೆ ಸದಾಶಿವ ಅಡಿಗ ಅವರ್ಗಳ್ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ಅತೀ ಸಂಭ್ರಮದಿಂದ ಜರಗಿತು. ಶಾಲೆಯು ಹಲವು ತೋರಣಗಳಿಂದಲೂ ಬಗೆಬಗೆ ಮಾಲೆಗಳಿಂದಲೂ ಅಲಂಕರಿಸಲ್ಪಟ್ಟು ಬಹು ರಮಣೀಯವಾಗಿಯೂ, ನಯನ ಮನೋಹರವಾಗಿಯೂ ಕಂಗೊಳಿಸುತ್ತಿತ್ತು. ಹೀಗೆ ಶೃಂಗರಿಸಲ್ಪಟ್ಟ ನಾಟಕ ಶಾಲೆಯೂ, ಸಭಾಗೃಹವೂ ಆದ ಶಾಲಾ ಮಂದಿರದಲ್ಲಿ ಕೂಡಿದ್ದ ಊರ ಮತ್ತು ಪರವೂರ ಮಹನೀಯರನೇಕರ ಪ್ರಚಂಡ ಸಭೆಯು ಅದರ ಶೋಭೆಯನ್ನು ಮತ್ತಷ್ಟು ಹೆಚ್ಚಿಸುತ್ತಲಿತ್ತು. ಪ್ರಾರ್ಥನಾಗೀತವು ಹಾಡಲ್ಪಟ್ಟಿತು. ಆ ನಂತರ ಅಧ್ಯಕ್ಷರ ಚುನಾವಣೆ, ತಾಂಬೂಲದಾನ ಇವೇ ಮುಂತಾದ ಕಾರ್ಯಕ್ರಮಗಳು ಯಥಾವಿಧಿಪೂರ್ವಕವಾಗಿ ನೆರವೇರಿಸಲ್ಪಟ್ಟವು. ಶ್ರೀಗ್ರಕರಾದ ಸಭಿಕರ ಮನೋರಂಜನೆಗೂ ಅಭಿನಂದನೆಗೂ ಪಾತ್ರವಾದ ಇಂಗ್ಲೀಷು ಪದ್ಯ, ಸಂಭಾಷಣ ನಾಟಕ, ಪಾಕ್ಯವಿನೋದ, ಮತ್ತಳ ಗೀತ ಈ ನಾಲ್ಕು ಕಾರ್ಯಕ್ರಮಗಳು ಶಾಲಾ ಮಕ್ಕಳಿಂದ ಪೂರೈಸಲ್ಪಟ್ಟವು. ಶಾಲೆಯ ಮುಖ್ಯೋಪಾಧ್ಯಾಯರು ಗತವರುಷದ ವರದಿಯನ್ನೋದಿ ಮುಗಿಸಿದ ತರುವಾಯ ವಿದ್ಯಾಭ್ಯಾಸದಲ್ಲಿ ಉತ್ತಮರೆನಿಸಿಕೊಂಡ ವಿದ್ಯಾರ್ಥಿಗಳಿಗೆ ಇನಾಮುಗಳು ಹಂಚಲಾದುವು. ಆ ಬಳಿಕ ಸಭಿಕರ ಹಾಗೂ ಅಧ್ಯಕ್ಷರ ಭಾಷಣಗಳಿಗಾಗಿ ಶಾಲೆಯ ಕಡೆಯಿಂದ ಕೃತಜ್ಞತಾ ವಂದನೆಗಳು ಅರ್ಪಿಸಲ್ಪಟ್ಟುವು. ಆ ನಂತರ ಸಭಾಸತ್ಕಾರ, ಮತ್ತು ಮಂಗಳ ಗೀತ ಈ ಎರಡು ಕಾರ್ಯಕ್ರಮಗಳು ನೆರವೇರಲ್ಪಟ್ಟು ಹಗಲಿನ ಸಮಾರಂಭವು ಕೊನೆಗೊಂಡಿತು.

ಅದೇ ದಿನ ರಾತ್ರೆ ಶಾಲಾ ಸಹಾಯಾರ್ಥವಾಗಿ ಬಾಲಕರಿಂದ "ಗರುಡಾಂಜನೇಯ" ಎಂಬ ನವೀನ ಸಂಗೀತ ನಾಟಕವು ಅಭಿನಯಿಸಲ್ಪಟ್ಟಿತು.

ಮುಲ್ಕಿ — ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕ ವರ್ಧಂತ್ಯುತ್ಸವದ ಕಡೇ ದಿನದ ಸಮಾರಂಭವು ತಾ. ೨೮—೪—೨೬ನೇ ಬುಧವಾರ ಅಪರಾಹ್ನ ಘಂಟೆ ೩-೩೦ಕ್ಕೆ ಮಾನ್ಯ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟ್, ಮ॥ ರಾ॥ ರಾ॥ ಕೆ. ಸದಾಶಿವ ಅಡಿಗ ಅವರ್ಗಳ್ ಬಿ. ಎ. ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ಈ ಮೊದಲೇ ಪ್ರಚಾರಪಡಿಸಿದಂತೆ ತಾ. ೨೭—೪—೨೬ನೇ ದಿನ ಬೆಳಿಗ್ಗೆ ೭-೩೦ ೧೧-೩೦ರ ವರೆಗೆ ವಿವಿಧ ವಿಷಯಗಳಲ್ಲಿ ಮಕ್ಕಳ ಪಂದ್ಯಾಟವು ನಡೆದು, ಕೂಡಿಬಂದ ಸುಮಾರು ೮೦೦ ಮಕ್ಕಳಿಗೆ ತಿಂಡಿ ಹಂಚಲಾಯಿತು. ಅದೇ ದಿನ ಅಪರಾಹ್ನ ಘಂಟೆ ೩-೩೦ ೬-೩೦ರ ವರೆಗೆ ಊರ ಪರವೂರ ಮಹಿಳೆಯರಿಗೂ "ಭಕ್ತ ಶ್ರೀಕೃಷ್ಣ ಕಬೀರದಾಸ" ನಾಟಕವನ್ನು ಪ್ರದರ್ಶಿಸಲಾಯಿತು. ತಾ. ೨೮—೪—೨೬ನೇ ಅಪರಾಹ್ನ ಘಂಟೆ ೩-೩೦ಕ್ಕೆ ಮಾನ್ಯ ಅಧ್ಯಕ್ಷರನ್ನು ಸ್ವಾಗತೀಕರಿಸಿ ಶುಭಕಾರ್ಯವು ಪ್ರಾರಂಭವಾಯಿತು. ಚಪ್ಪರವೂ ಶಾಲಾ ವಠಾರವೂ, ತರತರ ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ, ಪರಿಷ್ಕಾರವಾಗಿ ಶೃಂಗರಿಸಲ್ಪಟ್ಟಿತ್ತು. ಸೂಚೀ ಪತ್ರದಲ್ಲಿ ಕಾಣಿಸಿದಂತೆ ದೇವತಾ ಪ್ರಾರ್ಥನೆ, ಸ್ವಾಗತ ಭಾಷಣ, ತಾಂಬೂಲನಂದನ (ಮ॥ ರಾ॥ ರಾ॥ ಯಂ. ರಾಮಪ್ಪ ಶೆಟ್ರಿಂದ) ಶಾಲಾ ವರದಿ ಓದೋಣ, ಸಭಿಕರ ಭಾಷಣ, ಇನಾಮು ಹಂಚೋಣ, ಮಾನ್ಯರಾದ ಅಧ್ಯಕ್ಷರ ಭಾಷಣ, ಉಪಕಾರಸ್ಮರಣೆ ಇತ್ಯಾದಿ ಕಾರ್ಯಕ್ರಮಗಳು ನಡೆದ ನಂತರ ಶಾಲಾ ಮಕ್ಕಳಿಂದಲೇ "ಭಕ್ತ ಶ್ರೀಕೃಷ್ಣ ಕಬೀರದಾಸ" ನಾಟಕವು ಮನೋರಂಜಕವಾಗಿ ನಟಿಸಿ ತೋರಿಸಲ್ಪಟ್ಟಿತು. ಅಂತೂ ಈ ಸಮಾರಂಭವು ಹಿಂದಿನ ವರ್ಷದ ಪ್ರತಿಂತಸಿಗೆ ಪಾತ್ರವಾಗಿತ್ತು. ಮುಖ್ಯ ಈ ಶಾಲೆಯ ಪ್ರಾಧ್ಯಾಪಕರೂ, ಸಹಕಾರರೂ ಈ ವರ್ಷ ವರ್ಧಂತ್ಯುತ್ಸವದ ಏಳಿಗೆಗೂ, ಸಾರ್ಥಕ್ಯಕ್ಕೂ ಕಾರಣರಾಗಿತ್ತು.

ಕಾರ್ಕಳ — ಇಲ್ಲಿಯ ಶ್ರೀಮತ್ ಭುವನೇಂದ್ರ ಮಹಾ ವಿದ್ಯಾಲಯವು ಬೇಸಿಗೆ ಕಾಲದ ರಜೆ ಸಂಭಂದ ಈಗ ಮುಚ್ಚಲ್ಪಟ್ಟು ಜೂನ್ ತಾ. ೩—೬—'೨೬ಕ್ಕೆ ತೆರೆಯಲಾಗುವುದು. ಮಹಾ ವಿದ್ಯಾಲಯದಲ್ಲಿ ಮದ್ರಾಸು ಯುನಿವರ್ಸಿಟಿಯ ಸಾಹಿತ್ಯ ಆಯುರ್ವೇದ ಶಿರೋಮಣಿ ಪರೀಕ್ಷೆಗಳಿಗೆ ಹೋಗಲು ಅನುಕೂಲವಾಗುವ ಶಿಕ್ಷಣವು ಧರ್ಮಾರ್ಥವಾಗಿಯೇ ದೊರೆಯುವುದು. ಬಡ ವಿದ್ಯಾರ್ಥಿಗಳಿಗೆ ಊಟವನ್ನು ಕೂಡಾ ಧರ್ಮಾರ್ಥವಾಗಿಯೇ ಕೊಡುವ ಏರ್ಪಾಡು ಮಾಡಲಾಗುವದು.

ಸರಕಾರಿ ಎಂಟ್ರೆನ್ಸ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕೊಲೇಜು ಶಾಖೆಗೆ ಸೇರುವ ವಿದ್ಯಾರ್ಥಿಗಳಿಗೆ ಪ್ರಥಮತಃ ದಾಖಲು ಮಾಡಿಕೊಳ್ಳಲಾಗುವದು.

ಕೆಳಗಿನ ವರ್ಗಗಳಲ್ಲಿ ಸೇರುವ ವಿದ್ಯಾರ್ಥಿಗಳಲ್ಲಿ ಸಂಸ್ಕೃತ ಇಂಗ್ಲೀಷ ವಗೈರೆ ಜ್ಞಾನ ಇದ್ದವರಿಗೆ ಪ್ರವೇಶ ಸ್ಥಾನ ಒದಗಿಸಲಾಗುವದು.

ವಿದ್ಯಾಲಯದಲ್ಲಿ ಸಂಸ್ಕೃತ ಮಾತ್ರವಲ್ಲದೆ ಇಂಗ್ಲೀಷು, ಗಣಿತ ಭೂಗೋಲ ಇವುಗಳ ಶಿಕ್ಷಣ ಕೂಡಾ ಸಿಗುವ ಏರ್ಪಾಡು ಮಾಡಲಾಗುವದು.

ವಿದ್ಯಾಲಯಕ್ಕೆ ಸೇರಲು ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ತಾ. ೧೫—೫—'೨೬ರ ವರೆಗೆ ಮನವಿ ಮಾಡಿಕೊಳ್ಳತಕ್ಕದ್ದು.

ವಿಳಾಸ — ವ್ಯವಸ್ಥಾಪಕ ಶ್ರೀಮತ್ ಭುವನೇಂದ್ರ ಮಹಾ ವಿದ್ಯಾಲಯ, ಶ್ರೀ. ಶ್ರೀನಿವಾಸ ಆಶ್ರಮ, ಕಾರ್ಕಳ ದ. ಕ.

ಘಟಂಗಿಪೇಟೆ — ಇಲ್ಲಿಯ ಶ್ರೀರಾಮ ಹಾಯ್ಯರ್ ಎಲಿಮೆಂಟರಿ ಶಾಲೆಯ ಹಳೇ ವ ಹೊಸ ವಿದ್ಯಾರ್ಥಿಗಳು ಸೇರಿ ಸಭಾ ಶಾಲಾ ಫಂಡಿನ ಬಗ್ಗೆ ಬಹುಮಾನವಿತ್ತು ಎ. ಬಿ. ಶೆಟ್ಟಿ, ಎಮ್. ಎಲ್. ಸಿ.ಯವರ ಪ್ರೋತ್ಸಾಹದಂತೆ ತಾ. ೫—೫—'೨೬ನೇ ದಿನ ರಾತ್ರಿ ೯ ಘಂಟೆಗೆ 'ವೀರಬಾಲಾ' ಎಂಬ ಹೊಸ ನಾಟಕವನ್ನು ಆಡಿದರು. ಮೂಲಕ ಆಡಿದರು. ಸರ್ವರೂ ಪ್ರೋತ್ಸಾಹಿಸಬೇಕಾಗಿ ಬಾಲಕರ ವಿನಂತಿ ಇದೆ.

ಈ ಸೆಂಟರಿನ ಉಪಾಧ್ಯಾಯ ಸಂಘದ ಸಭೆಯು ಮೀರಮುಲ್ಲ ಸ್ಟೈಂಟ್ ಜೋಸೆಫ್ಸ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೭—೪—'೨೬ರಲ್ಲಿ ರೆವರೆಂಡ್ ಫಾದರ್ ಎಮ್. ಎಸ್. ಫೆರ್ನಾಂಡಿಸರವರ ಅಧ್ಯಕ್ಷತೆಯಲ್ಲಿ ಜರಗಿತು. ಗತಮೀಟಿಂಗಿನ ಪ್ರೊಸೀಡಿಂಗ್ಸಗಳನ್ನು ಓದಿ ಮಂಜೂರು ಮಾಡಲಾಯಿತು. ಮ॥ ಎ. ರಾಮಚಂದ್ರ ಹೆಗ್ಡೆಯವರು IIIನೇ ಕ್ಲಾಸಿನ ಗುಣಾಕಾರದಲ್ಲಿ ಟೆಸ್ಟ್ ಮಾದರಿ ಪಾಠವನ್ನು ಕೊಟ್ಟರು. ನವೀನ ತರದ ಪಾಠದಿಂದ ಎಲ್ಲರೂ ಹೊಗಳಿದರು. ಬಾಲಕರಿಗೆ ಚಿತ್ರಾ ಕಥೆಗಳನ್ನು ಕಲಿಸಿಕೊಡುವದರ ಪ್ರಯೋಜನದ ಕುರಿತು ಫಾ. ಬೋರ್ಡ್ ಶಾಲಾ ಹೆಡ್‌ಮಾಸ್ಟರ್ ಜಿ ಮಹಮ್ಮದ ಸಲಿಮಾನ್ ಸಾಹೇಬರು ಉಪನ್ಯಾಸವನ್ನು. ಈ ವಿಷಯ ಬೇರೆ ಬೇರೆ ಶಾಲೆಯ ಉಪಾಧ್ಯಾಯರು ತಮ್ಮ ಅಭಿಪ್ರಾಯಗಳನ್ನು ಭಾಷಣಗಳ ಮೂಲಕ ಕೊಟ್ಟರು. ಕಾರ್ಯದರ್ಶಿಯು ಕಳೆದ ಜಿಲ್ಲಾ ಉಪಾಧ್ಯಾಯ ಉಪಾಧ್ಯಾಯರ ಸಂಘದ ವಾರ್ಷಿಕ ವರದಿಯನ್ನು ತಿಳಿಸಿದ್ದಲ್ಲದೆ ಈಗಿನ ವರ್ಷಕ್ಕೆ ತಾಲೂಕು ಸಂಘ ಸ್ಥಾಪನೆಗೆ ಹೋಗಲು ಆಹ್ವಾನಿಸಲಾದ ಸಂಗತಿಯನ್ನು ಸೂಚಿಸಿದರು.

ಮುಂದಿನ ಸಭೆಯನ್ನು ತಾ. ೨೨—೫—'೨೬ರಲ್ಲಿ ಹುಂಚ ಬೋರ್ಡು ಶಾಲೆಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಲಾಯಿತು. ಅಧ್ಯಕ್ಷರು ಹಿತೋಪದೇಶಯುಕ್ತವಾದ ತಮ್ಮ ಅನುಭವದ ಭಾಷಣವನ್ನು ಮಾಡಿದ ಬಳಿಕ ರಾಷ್ಟ್ರಗೀತವನ್ನು ಹಾಡಿ ಸಭಿಕರಿಗೆ ಅಧ್ಯಕ್ಷರು ಶಾಲಾ ಮೆನೇಜರವರಿಂದ ಕೊಡಲಾದ ಸತ್ಕಾರವನ್ನು ಪಡೆದು ಇಂದಿನ ಸಭೆಯು ಮುಕ್ತಾಯಗೊಂಡಿತು.

ವಿವಿಧ ಸಮಾಚಾರಗಳು.

ಲಂಡನಿನಲ್ಲಿ ಸ್ಯಾಮನ ಕಮಿಶನು.

ಸ್ಯಾಮನ ಕಮಿಶನು ಸರ್ ಸಿ. ಶಂಕರನ್ ನಾಯರರೊಂದಿಗೆ ಲಂಡನಿನ ವಿಕ್ಟೋರಿಯಾ ಸ್ಟೇಶನಿಗೆ ಕಳೆದ ಶನಿವಾರ ತಲುಪಿತು. ಅದನ್ನು ಮುಖ್ಯ ಮಂತ್ರಿಯವರೂ, ಲೋರ್ಡ್ ಬರ್ಕನಹೆಡ್, ಲೋರ್ಡ್ ರೀಡಿಂಗ್, ಬರ್ಡವಾನಿನ ಮಹಾರಾಜರೇ ಮೊದಲಾದವರು ಎದುರುಗೊಂಡರು. ಕೆಲವು ಹಿಂದೀ ವಿದ್ಯಾರ್ಥಿಗಳೂ ಇದ್ದರು. ಮುಖ್ಯ ದರವಾಜಿ ಸಂಘದ ಪರರ ವಿದ್ಯಾರ್ಥಿಗಳು ಸರ್ ಜೋನ್ ಸ್ಯಾಮನರಿಗೆ ಒಂದು ಪತ್ರಮಾಲಿಕೆಯನ್ನಿತ್ತು ಒಂದು ಮಾನಪತ್ರವನ್ನು ಓದಿದರು. ರಾಷ್ಟ್ರೀಯ ಸಭೆಯ ಲಂಡನ್ ಶಾಖೆಯ ಕರೆಯಂತೆ ಸುಮಾರು ಒಂದೂವರೆ ತಾಸಿನ ಮೊದಲೇ ಹೈಡ್ ಪಾರ್ಕ್ ಎಂಬ ಸ್ಥಳದಲ್ಲಿ ಸುಮಾರು ೧೫೦ ಮಂದಿ ಹಿಂದೂಗಳೂ, ಕಮಿಶನಿನ ವಿರೋಧವಾಗಿ ಸಾರಲು ನೆರೆದಿದ್ದರು. ಯಾರೂ ಭಾಷಣವನ್ನು ಮಾಡಲಿಲ್ಲ. ಆದರೆ ಮಿ॥ ಶಕಲತವಾಲರೂ ಅವರೊಂದಿಗಿದ್ದರು. ಮೆರವಣಿಗೆಯು ಜರಗಿಸಲ್ಪಟ್ಟಿತು. ಮೆರವಣಿಗೆಯ ಮೊದಲಿನಲ್ಲಿ ರಾಷ್ಟ್ರೀಯ ಧ್ವಜವನ್ನು ಏರಿಸಿ ಹಿಡಿದಿದ್ದರು. ಮತ್ತು ಇನ್ನು ಕೆಲವು ಧ್ವಜಗಳ ಮೇಲೆ ಕಮಿಶನನ್ನು ನಿಂದಿಸಿಯೂ, ಕೆಲವುಗಳ ಮೇಲೆ "ಲಾಲಾಜಿಯವರನ್ನು ಕೊಂದುದಾರು?" "ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕಾಗಿದೆ" ಎಂದು ಬರೆದಿದ್ದರು. ಕೆಲವು ಸಮಯದ ವರೆಗೆ ಮೆರವಣಿಗೆಯು ಗೊಂದಲವಿಲ್ಲದೆ ನಡೆಯಿತಾದರೂ, ಹೈಡ್ ಪಾರ್ಕಿನ ಸಮೀಪಕ್ಕೆ ಬಂದೊಡನೆ ಆಯುಧಪಾಣಿಗಳಾದ ಪೋಲೀಸರು ಬಂದು, ಮೆರವಣಿಗೆಯು ಅನರು ಅಪರಿಹೋಗಬೇಕೆಂದು ಬೆದರಿಸಿದರು, ಏಕೆಂದರೆ ಪಾರ್ಲಿಮೆಂಟ್ ಗೃಹಗಳ ಸುಮಾರು ಒಂದು ಮೈಲು ದೂರದಲ್ಲಿಯೇ ಯಾವ ಮೆರವಣಿಗೆಯೂ ಬಾರದಂತೆ ಕಾನೂನಿದೆಯಂತೆ. ಆದುದರಿಂದ ಮೆರವಣಿಗೆಯು ಆ ಹಾದಿಯನ್ನು ಬಿಟ್ಟು, ಬೇರೆ ಹಾದಿಯಾಗಿ ವಿಕ್ಟೋರಿಯಾ ಸ್ಟೇಶನಿನ ಕಡೆ ನಡೆಯಿತು.

[illegible] ಸಾಮಾನುಗಳನ್ನು [illegible] ಎಲ್ಲಾ ಸಿಗುತ್ತವೆ!

[illegible] 1928ನೇ [illegible]

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದು [illegible] ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ,

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

[illegible]

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ [illegible] ಪದಕಗಳು ದೊರೆತಿರುತ್ತವೆ.

[illegible] ರೂ. ೧.

[illegible] ಔಷಧ ಅಣೆ ೧೪.

[illegible]

[illegible] ಔಷಧ. [illegible] ೧೪

[illegible] ೧ ಬಾಟ್ಲಿಯಲ್ಲಿ ೧೦೦ [illegible]

[illegible] ರೂ. ೧—೭—೦. ರೂ. ೧—೮—೦. ೧—೧೩—೦.

[illegible] ರೂ. ೦—೬—೦

[illegible] ರೂ. ೦—೬—೦. LIBERAL DISCOUNT TO TRADE

[illegible]:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell ad, Bombay, No. 14.

ಶಾಲಾ ಹುಡುಗರಿಗೆ ಬೇಕಾದ

ಗೆರೆ ಹಾಕಿದ ಮತ್ತು ಹಾಕದ ಎಕ್ಸರಸ್ಯಾಜ ಪುಸ್ತಕಗಳೂ, ಕೋಪಿ ಪುಸ್ತಕಗಳೂ, ಮ್ಯಾಪು ಡ್ರೋಯಿಂಗ್ ಪುಸ್ತಕಗಳೂ, ಡ್ರೋಯಿಂಗ್ ಪುಸ್ತಕಗಳೂ, ಪೆನ್ಸಿಲು ಕಂಪಾಸ್ ಬಾಕ್ಸ್, ಶಾಯಿ ಕುಪ್ಪಿ ಮೊದಲಾದ ಸ್ಟೇಶನರಿ ಸಾಮಾನುಗಳೂ ಇವೆ.

ಲೆಜ್ಜರ್, ಜರ್ನಲ್, ಮತ್ತು ಕ್ಯಾಶ್ ಬುಕ್ಕುಗಳೂ ತರತರದ ಬ್ಯಾಂಡುಗಳಲ್ಲಿ ಮಾರಾಟಕ್ಕಿವೆ.

ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಾಮಾನುಗಳು ಯಾವಾಗಲೂ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಜನರಿಗೆ ಬೇಕಾದಂತೆ ಹಳೇ ಮತ್ತು ಹೊಸ ಪುಸ್ತಕಗಳಿಗೆ ಅಂದವಾದ ಬುಕ್ ಬ್ಯಾಂಡಿಂಗ್ ಕೆಲಸ ಕಡಿಮೆ ದರದಲ್ಲಿ ಮಾಡಲ್ಪಡುತ್ತದೆ.

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಬೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಬಿ. ಎನ್. ಮೋಟಾರ್ ಸರ್ವಿಸ್,

ಶಿವಮೊಗ್ಗಾ – ತೀರ್ಥಹಳ್ಳಿ – ಆಗುಂಬೆ.

(ದಕ್ಷಿಣ ಕನ್ನಡ ಜಿಲ್ಲಾ ಎಲ್ಲಾ ಕಡೆಗೂ ಸಿ. ಪಿ. ಸಿ. ಕಂಪೆನಿಯವರ ಸೀದಾ ಕನೆಕ್ಷನ್ ಇದೆ.)

ಈ ಸರ್ವಿಸ್ ಈ ವರೆಗೂ ಶಿವಮೊಗ್ಗಾದಿಂದ ಬೆಳಿಗ್ಗೆ ೯ ಘಂಟೆಗೆ ಹೊರಡುತ್ತಾ ಇದ್ದದು ಸರಿಯಷ್ಟೆ. ಪ್ರಯಾಣಿಕರ ಸೌಕರ್ಯಕ್ಕಾಗಿ ತಾ. ೧೫—೯—೨೯ನೇ ಇಸವಿಯಿಂದ ಶಿವಮೊಗ್ಗಾದಿಂದ ಬೆಳಿಗ್ಗೆ ೮ರ ಘಂಟೆಗೆ ಹೊರಡಲು ಏರ್ಪಾಡುಮಾಡಿದೆ.

ತೀರ್ಥಹಳ್ಳಿ – ಸಾಗರರಸ್ತೆ.

ಅನಂತಪುರ—ಸಾಗರಕ್ಕೆ 0—8—0. ತೀರ್ಥಹಳ್ಳಿ—ಸಾಗರಕ್ಕೆ ೨—೦—೦.

ಅರಗ, ಗುಡ್ಡೇಕೊಪ್ಪ, ಕೋಣಂದೂರು, ಕಾರಿಗಲ್, ಹುಂಚದಕಟ್ಟೆ, ರಿಪ್ಪನ್‌ಪೇಟೆ ಮತ್ತು ಅನಂತಪುರ ಮಾರ್ಗವಾಗಿ

ರಿಪ್ಪನ್‌ಪೇಟೆಯಲ್ಲಿ ಶಿವಮೊಗ್ಗಾಕ್ಕೆ ಹೋಗುವ ಸರ್ವಿಸ್ಸಿಗೆ ಆಯಾ ದಿವಸ ಕನೆಕ್ಷನ್ ಇದೆ.

ಈ ರಸ್ತೆಯಲ್ಲಿ ಹಳ್ಳಿಗಳು ಬೆಳೆಯಿಂದ ಕಳೆದ ಜೂನ್ ತಾ. ೮ರಿಂದ ಸರ್ವಿಸು ನಿಂತಿತ್ತು. ಪುನಹ ತಾರೀಕು ೭—೧೧—೨೯ನೇ ಇಸವಿಯಿಂದ ಪ್ರಾರಂಭವಾಗಿರುತ್ತದೆ.

ಬಿ. ನಾಗಾ ಭಟ್,

ಮಾಲೀಕ,

ಬಿ. ಎನ್. ಮೋಟಾರ್ ಸರ್ವಿಸ್, ತೀರ್ಥಹಳ್ಳಿ.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್: ಉಡುಪಿ, ದ. ಕ.

ನಮ್ಮಲ್ಲಿ ಘನವಾದ ಉತ್ತಮ ಪಾಕೆಟು, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಬೆಟ್ರೋಮ್ಯಾಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲೋಕು, ಟೈಮ್‌ಪೀಸು, ಗ್ರಾಮೋಫೋನು ಮತ್ತು ಪೆಟ್ರೋಮ್ಯಾಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ ದ. ಕ.

ಪಿ. ಸೂ.— ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಹಾಕಿಸಿ ಸ್ವಚ್ಛಮಾಡಿಸುವುದರಿಂದ ಸರಿಯಾದ ಸಮಯವು ದೊರಕುವುದು.

Liveliness-zip-pep-you get that all the time from an "Exide" because it is built into it.

Care and thought in the design—keen discrimination in the selection of material and the experience of thousands of users have made

Exide

THE LONG-LIFE BATTERY

The C. P. C. Co., Ltd.,

MANGALORE

[illegible]

ಅಥಘಾನ.

[illegible]

ಮುಂಬಾಯಿ ಮುಷ್ಕರ.

[illegible]

೫೦ ತಾಸುಗಳಲ್ಲಿ ಲಂಡನಿನಿಂದ ಕರಾಚಿಗೆ.

[illegible]

NOTICE.

"Applications are invited for the posts of Supervisors of Co-operative Societies under the South Kanara District Co-operative Council of Supervision Ltd., Mangalore, on a salary of Rs. 30 + 16 per mensem. Only those who have passed in the Co-operative Training Classes and who know Kanarese or Malayalam or both need apply.

Applications are also invited from candidates who are willing to undergo Co-operative Training course for Supervisors at Coimbatore at their own cost. Minimum educational qualification required is complete Secondary School Leaving Certificate.

Please apply with testimonials to the undersigned.

Mangalore,
10—4—29.

(Sd) N. N. Suvarna,
President.

ಕುಟಾರು.

ಕಳೆದ ಎಪ್ರಿಲ್ ೩. ೧೬ರಿಂದ ೨೩ರ ವರೆಗೆ ನಮ್ಮಲ್ಲಿ "ಶ್ರೀ ಭಾಗವತ ಸಪ್ತಾಹ"ವು ಪಂಡಿತ ಸಾಮಗ ಶ್ರೀನಿವಾಸಾಚಾರ್ಯರ ನೇತೃತ್ವದಿಂದ ಬಹಳ ವಿಜೃಂಭಣೆಯಿಂದ ಜರಗಿತು. ಶ್ರೀ ಭಾಗವತದೊಳಗಿರುವ ವಿಷಯಗಳನ್ನು ಪಂಡಿತ ಆಚಾರ್ಯರು ಎಲ್ಲರಿಗೂ ರಂಜನೆಯಾಗುವಂತೆ ಹೇಳಿ ಪ್ರತಿಯೊಬ್ಬನಲ್ಲಿಯೂ ಸನ್ಮಾರ್ಗಾಭಿಮಾನವನ್ನು ಹುಟ್ಟಿಸಿದ್ದರು. ಅದು ಪಾಮರರಿಗೂ ತಿಳಿಯುವಂತೆ ಅತಿ ಸುಲಭ ಶೈಲಿಯಲ್ಲಿ ಶ್ರೀ ಭಾಗವತಾರ್ಥವನ್ನು ಹೇಳುವುದ ಆಚಾರ್ಯರ ಮುಖ್ಯ ಮಹಾಗುಣ.

[illegible]

ಕೆ. ಬಾಲಕೃಷ್ಣರಾವ್, ಬಿ. ಎ.

ಕಾರ್ಯದರ್ಶಿ.

CHIKMAGALUR.

[illegible] ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) [illegible] ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, [illegible] ಮಾರ್ಗವಾಗಿ [illegible] 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ [illegible] ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ [illegible] ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ [illegible] ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, [illegible] 10-30ಕ್ಕೆ [illegible] 11-45ಕ್ಕೂ, [illegible] ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ [illegible] ಸೇರಿ, ಅಲ್ಲಿಂದ ಕೂಡಲೇ ಹೊರಟು [illegible] ಸ್ಟೇಶನ್ ಆದ ಧರ್ಮಸ್ಥಳ [illegible] 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, [illegible] ಗೋಕರ್ಣ, ಮಲಬಾರು, ಕನ್ನನೂರು ಪ್ರಾಂತಗಳಿಗೂ [illegible] ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ [illegible] 12 ಘಂಟೆಗೆ [illegible] 12-30ಕ್ಕೆ [illegible] ಸೇರಿ ಅಲ್ಲಿಂದ ಬಸ್ಸು ಹೊರಟು 2-30ಕ್ಕೆ [illegible] 4 ಘಂಟೆಗೆ ಮೂಡಿಗೆರೆಗೂ 5 ಘಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಸೇರಿ ಚಿಕ್ಕಮಗಳೂರಲ್ಲಿ [illegible] ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ [illegible] ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪೂರ್ ಗೋಕಾಕ್, ಬೆಳಗಾಂವ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೇಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ವರ್ತಮಾನಕ್ಕೆ ಮೇಲಿನ ವಿಳಾಸಕ್ಕೆ ಮ್ಯಾನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜಾನ್ ಸಾಹೇಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಿರುವವರು ಪ್ರತಿದಿನವೂ ಮಂಗಳೂರಿನಿಂದ [illegible] ಮಾರ್ಗವಾಗಿಯೂ [illegible] ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲುವಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನ ಬಸ್ಸುಗಳು [illegible] ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ,
ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಕಾರ್ಕಳ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., Mangalore S. K.

[illegible]

ಯುವಕ ವಿದ್ಯಾರ್ಥಿಯ ಲಕ್ಷ್ಯಕ್ಕೆ [illegible]

ದೇಹದ ಆರೋಗ್ಯವೂ ಮಿದುಳಿನ ಬಲವೂ [illegible] ಯುವಕರಿಗೆ ವಿದ್ಯಾಭ್ಯಾಸವು ಬಹು ಸುಲಭಕರವಾಗಿರುವದು.

ಆದರೆ ದೇಹದ ಆರೋಗ್ಯವು [illegible] ಮಿದುಳಿನ ಬಲವು ಕುಂದಿರುವದು ಕಾಣಬರುವ [illegible] ಯುವಕರಿಗೆ ವಿದ್ಯಾಭ್ಯಾಸವು ಅತಿ ಕಷ್ಟಕರವಾಗಿದೆ. ಇಂಥಾ ಯುವಕರು ಸಹಾ ವಿದ್ಯಾಭ್ಯಾಸದಲ್ಲಿ ಮುಂದರಿಯಬೇಕಾದರೆ, ದೇಹವು ಆರೋಗ್ಯವುಳ್ಳದ್ದಾಗಿಯೂ ಮಿದುಳು ಶಕ್ತಿ ಸಂಪನ್ನವಾಗಿಯೂ ಇರಬೇಕು. [illegible] ಎಂಬ ಅಮೃತವು ಯುವಕರ ಆರೋಗ್ಯವನ್ನು ಕಾಪಾಡುವದಕ್ಕೂ, ಮಿದುಳಿನ ಶಕ್ತಿಯನ್ನು ಹೆಚ್ಚಿಸುವದಕ್ಕೂ ಅತಿ ಗುಣಕಾರಿಯಾಗಿದೆ.

ಕ್ರಯ 8 ಡಬ್ಬಿಗೆ ರೂ. 3—8—0.

(ಇದು ಒಂದು ತಿಂಗಳ ವರೆಗೆ ಸೇವಿಸಲಿಕ್ಕಾಗುವ 64 ಡೋಸುಗಳದು.)

ಮಿದುಳು ಯಾತರಿಂದ ತಂಪಾದೀತು?

ಪರೀಕ್ಷೆ ಕಾಲದಲ್ಲಿ ಅಹೋ ರಾತ್ರಿ ಹಗಲಿರುಳೆನ್ನದೆ ಬಹಳ [illegible] ಪ್ರಯಾಸದಿಂದ ಓದುವ ಯುವಕರ ತಲೆ ಮಿದುಳು ಬಹು ಬಿಸಿಯಾಗಿ ತಲೆ ಸಿಡಿತ, ತಲೆ ನೋವು, ದೃಷ್ಟಿಮಾಂದ್ಯ ಕಿವಿ, ಮೂಗು, ಹಲ್ಲುಗಳ ವಿವಿಧ ರೋಗಗಳು ಹುಟ್ಟುವವು. ಈ ಆಪತ್ತು ರೋಗಗಳು ಪರಿಹಾರ ವಾಗುವಂತೆಯೂ ಅಥವಾ ಅಂಥಾ ಆಪತ್ತು ರೋಗಗಳು ಹುಟ್ಟದಂತೆಯೂ [illegible] ತೈಲದ ಉಪಯೋಗವು ಬಹು ಗುಣಕಾರಿಯಾಗಿದೆ. ಬಹಳ ಹೊತ್ತು ಓದುವ ಅಥವಾ ಬುದ್ಧಿ ಕೆಲಸದ ಯುವಕರು ನಿತ್ಯ ರಾತ್ರಿ ತಲೆಗೆ ತೈಲವನ್ನು ಹಾಕಿಕೊಳ್ಳುವದರಿಂದಲೇ ತಲೆ ಮಿದುಳು ತಂಪಾಗಿಯೂ ಶಕ್ತಿಯುಳ್ಳದ್ದಾಗಿಯೂ ಮಾಡಿ ದೇಹವನ್ನು ಸಂತೋಷಪಡಿಸುವದು.

ಶೀತ ಕಾಲದಲ್ಲಿ ಮುಚ್ಚಿ ರೀತಿ ಅನುಸರಿಸುವದು, [illegible] ಯುವಕರ ಬುದ್ಧಿವಂತಿಕೆಯಾಗಿದೆ.

ಕ್ರಯ 5 ಡಬ್ಬಿಗೆ ರೂ. 3—12—0.

ವಿಶೇಷ ವರ್ತಮಾನ, ಬೇರೆ ಎಲ್ಲಾ ಮದ್ದುಗಳ ವಿವರಕ್ಕೂ, [illegible] ಮತ್ತು ಹೊಮಿಯೋಪತಿ ಮದ್ದುಗಳಿಗೂ ಸಮಾಚಾರ [illegible] ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಾಲೇರಿಯಾನ ಕಂಪೆನಿ,

ಮಂಗಳೂರು.

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ಪೇರಳೆ, ಚಿಕ್ಕಳ, ದ್ರಾಕ್ಷೆ, ಅಂಜೂರ, ದಾಳಿಂಬೆ, ಪಕ್ಕೀರಾಳೆ ಮುಂತಾದ ಕಸಿಗಿಡಗಳೂ ಸಿಗುವವು. ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಬೇಗನೆ ಫಲಬಿಡುವವು. ಬೆಂಗಳೂರು, ಸೇಲಂ ಕಸಿಗಳು ನಮ್ಮ ಕಡೆಗೂ ಒಗ್ಗದೆ ಸರಿಯಾಗಿ ಫಲಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು [illegible] ಯಾರ್ಡಿನವರೆಗೆ ದೊರೆಯುವವು.

ಕೆ. ಮಂಜಣ್ಣ ಶೆಟ್ಟಿ ದಿ. ಕೆನರಾ ನರ್ಸರಿ, [illegible] 13. 0. 23	C/o	ಕೆ. ವಾಮನ ಶೆಣೈ ಶಾರದಾ ಫಾರ್ಮಸಿ, [illegible], ಮಂಗಳೂರು ದ. ಕ.

THE COMMONWEALTH ASSURANCE CO., LIMITED, POONA CITY.

ದಿ ಕೋಮನ್‌ವೆಲ್ತ್ ಎಸ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

1 ಕಡಿಮೆ ದರದಲ್ಲಿ ವಿಮೆಯ ಲಾಭದಾಯಕವಾದ ಮತ್ತು ಅತ್ಯುತ್ತಮವಾದ ಸೌಕರ್ಯಗಳನ್ನು ಒದಗಿಸುವಂಥ ಒಂದೇ ಒಂದು ಹಿಂದೀಯ ಜೀವವಿಮೆ ಕಂಪೆನಿಯು.

2 ಅನುಭವಶಾಲಿ, ಪ್ರತಿಷ್ಠಿತರೂ ಆದ ಡ್ಯಾರೆಕ್ಟರರು.

3 ಕುಂಟಾ ಅನುಭವದ ವ್ಯವಸ್ಥಾಪಕ, ವಿಶ್ವಾಸದ ಮತ್ತು ಸೌಹಾರ್ದದ ಆಡಳಿತ.

ಹಿಂದೀಯ ಕಂಪೆನಿಗಳಲ್ಲಿಯೇ ವಿಮೆ ಮಾಡುವದು ನಿಮ್ಮ ಕರ್ತವ್ಯವಾಗಿರುತ್ತದೆ.

ಬೇಕಾಗಿರುವರು.

[illegible] ಕರಾರುಗಳ ಮೇಲೆ ಈ ಕಂಪೆನಿಯ ಬಗ್ಗೆ ವಿಮೆ [illegible] ಕೆಲಸಗಾರರು ಬೇಕಾಗಿದ್ದಾರೆ. [illegible]

[illegible] ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎನ್. [illegible] ಶೆಟ್ಟಿ. ಬಿ. [illegible] ದೇಶಪಾಂಡೆ

[illegible]

ಗುಪ್ತವಾದ ವಿಷಯ!! ೨೪೦ ಪೇಜುಗಳು ಇವೆ

[ನಾವು ತಿಳಿಸಿರುವಂತೆ ಇಲ್ಲದಿದ್ದರೆ ವಾಪಸು ತೆಗೆದುಕೊಳ್ಳುವೆವು.]

ಸ್ತ್ರೀ ಪುರುಷ ಪ್ರೀತಿಯ ಮರ್ಮಗಳನ್ನು ಚಿತ್ರಪಟಗಳ ಸಹಿತ ಇದ್ದದ್ದನ್ನು ಇದ್ದಹಾಗೆ ತಿಳಿಸುವ

ಸ್ತ್ರೀದಾಂಪತ್ಯ ರಹಸ್ಯವೆಂಬ ಮರ್ಮಶಾಸ್ತ್ರ.

ಕ್ರಯ ರೂ. ೧-೪-೦

ಈ ಪುಸ್ತಕವು ಫ್ರೆಂಚ್, ಹಿಂದೂಸ್ಥಾನಿ, ಭಾಷೆಗಳಲ್ಲಿ ಬಹುಕಾಲದಿಂದ ಗುಪ್ತವಾಗಿತ್ತು. ಈಗ ನಾವು ಬಹು ಪ್ರಯಾಸದಿಂದ ಸಂಪಾದಿಸಿ ಎಲ್ಲರಿಗೂ ವಿವರವಾಗಿ ತಿಳಿಯುವಂತೆ ಸುಲಭ ಶೈಲಿಯ ಕನ್ನಡ ಭಾಷೆಯಲ್ಲಿ ಭಾಷಾಂತರಿಸಿ, ಫೋಟೋಗಳ ಸಹಿತ ಥಳಥಳಿಸುವ ಗ್ಲೇಜು ಕಾಗದದಲ್ಲಿ ಅಂದವಾಗಿ ಮುದ್ರಿಸಿರುತ್ತೇವೆ. ಈ ಪುಸ್ತಕದಲ್ಲಿ ಸ್ತ್ರೀ ಪುರುಷರಿಗೆ ಬೇಕಾದ ಎಲ್ಲಾ ಮರ್ಮ ರಹಸ್ಯಗಳು, ಪುರುಷರು ಸ್ತ್ರೀಯರಲ್ಲಿ ನಡೆದುಕೊಳ್ಳಬೇಕಾದ ಬಗೆ, ಸ್ತ್ರೀಪುರುಷರ ಜಾತಿಯ ಲಕ್ಷಣಗಳು, ಸ್ತ್ರೀಯರಿಗೆ ಬೇಕಾದ ಅನೇಕ ಗುಪ್ತ ವಿಷಯಗಳು, ಸಂಭೋಗದಕಾಲ ಗರ್ಭ ಧರಿಸುವುದು, ಗರ್ಭನಿಂತು ಹೋಗುವದು, ಸಂಭೋಗದಿಂದಾಗುವ ಸಂತೋಷ, ಜನನೇಂದ್ರಿಯಗಳ ವರ್ಣನೆ, ಹಸ್ತಪ್ರಯೋಗದಿಂದಾಗುವ ಹಾನಿ, ಗರ್ಭಿಣಿಗೆ ಬೇಕಾದ ಅನೇಕಕರ್ಮ ನಿಯಮಗಳು, ಶಿಶುಉತ್ಪತ್ತಿವಿಧ, ಗುಪ್ತ ರೋಗಗಳ ಚಿಕಿತ್ಸೆ, ಶಯನಗೃಹದಾರಹಸ್ಯನಿಯಮಗಳು, ಮಾನವ ಶರೀರದ ಮರ್ಮಗಳ ವಿವರ, ನಪುಂಸಕತ್ವಕ್ಕೆ ಚಿಕಿತ್ಸೆ, ಸ್ತ್ರೀಯರ ಗರ್ಭ ರಹಸ್ಯ, ಇನ್ನು ಸ್ತ್ರೀ ಪುರುಷರುಗಳಿಗೆ ಬೇಕಾದ ಲೀಲಾರಹಸ್ಯಗಳು ಚಿತ್ರಪಟಗಳ ಸಹಿತ ಕೊಟ್ಟಾಗಿದೆ.

ಕ್ರಯ ಪುಸ್ತಕಗಳ್ಕೆ ೧-೪-೦

ವಿಳಾಸ:—

ಕೆ. ನಾಧಮುನಿ ಅಂಡ್ ಸನ್,
೧೬೮ ಚೈನಾ ಬಜಾರ್, ಮದರಾಸು.

K. Nadhamuni & Son,
168. China Bazaar
Madras.

ಶಿಶುವಿಹೀನರಾದ ಸ್ತ್ರೀಯರಿಗೆ ಒಳ್ಳೆಯ ವಾರ್ತೆ.

ಕನ್ನಡಿ ಎನ್ನುವ ಮಕ್ಕಳನ್ನು ಪಡೆದು ಅವುಗಳನ್ನು ಪ್ರೀತಿಯಿಂದ ಮುದ್ದಾಡಬೇಕೆನ್ನುವ ಅಸಂಖ್ಯಾತ ಶಿಶುವಿಹೀನರಾದ ಸ್ತ್ರೀಯರಿಗೆ "ಫೆಲೂನಾ" ಎಂಬ ಒಂದೇ ಶಬ್ದದಿಂದ ಅತ್ಯಂತ ಸಂತೋಷವುಂಟಾಗುವುದು.

ಈ ಪ್ರಸಿದ್ಧವಾದ ಔಷಧಿಯು ಸ್ತ್ರೀಯರ ಶಾರೀರಿಕ ದೋಷಗಳನ್ನು ಹೋಗಲಾಡಿಸುವದು. ಪ್ರತಿಯೊಬ್ಬ ಸ್ತ್ರೀಯು ಬಹಳವಾಗಿ ಅಪೇಕ್ಷಿಸುವಂತಹುದನ್ನು ಪಡೆಯಲಾಗದಂತೆ ಮಾಡುವ ಇಂದ್ರಿಯ ದೋಷಗಳನ್ನು ಹೋಗಲಾಡಿಸಲು ಶಕ್ಯವಾದಂತಹ ರುಚಿಯುಳ್ಳ ಮತ್ತು ವೈಜ್ಞಾನಿಕವಾದ ರೀತಿಯಲ್ಲಿ ತಯಾರಿಸಲ್ಪಟ್ಟ ಔಷಧಿಯು.

ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ.

ಹೆಂಗುಸರ ಆರೋಗ್ಯವನ್ನು ಸರಿಪಡಿಸಿ, ದೀರ್ಘಕಾಲದ ಗಾಯವನ್ನು ಕಳೆಯಲು ಅನುಕೂಲಿಸುವುದು. ಶಕ್ತಿ ಹೀನತೆಯೇ ಎಲ್ಲ ದೋಷಗಳ ಮೂಲ ಕಾರಣವಾಗಿದ್ದರೂ, ಶಕ್ತಿವರ್ಧಕವಾದ ಫೆಲೂನಾ ಮಾತ್ರೆಗಳು ಪ್ರತಿ ಅಂಗಾಂಗಗಳನ್ನು ಬಲಪಡಿಸಿ ಬಲಪಡಿಸಿ ಶರೀರದೊಳಗೆ ಉತ್ಸಾಹವನ್ನೂ ಹೊಸ ಶಕ್ತಿಯನ್ನೂ ಉಂಟುಮಾಡುವವು. ತಲೆನೋವು, ಸೊಂಟನೋವು, ಸಂದುನೋವು, ರಕ್ತಹೀನತೆ, ಆಲಸ್ಯ ಮೊದಲಾದವುಗಳು ಸಂಪೂರ್ಣ ತೊಲಗುವವೆಂದೂ ಶಕ್ತಿಯು ಅನುಭವವಾಗುವವೆಂದೂ ಕಂಡುಬಂದಿದೆ. ರಕ್ತಕ್ಕೆ ಈ ಮಾತ್ರೆಗಳಿಂದ ಆಹಾರವು ಕೊಡಲ್ಪಟ್ಟು ಉತ್ಸಾಹವು ಹೆಚ್ಚುವದು. ರೋಗಗಳು ಸರಿಯಾಗುವವು. ರಸವನ್ನುಂಟುಮಾಡುವ ಇಂದ್ರಿಯಗಳು ಸರಿಯಾಗಿ ರಸವನ್ನುಂಟುಮಾಡುವವು. ಆಹಾರವು ಜೀರ್ಣಿಸಲ್ಪಟ್ಟು, ಮಲವು ಸರಿಯಾಗಿ ವಿಸರ್ಜನೆಯಾಗುವದು. ಫೆಲೂನಾ ಮಾತ್ರೆಗಳು ಹೆಂಗಸರಿಗೆ ಈ ರೀತಿ ಮಾಡಲು ಇದು ವರೆಗೆ ತಪ್ಪಿರುವದಿಲ್ಲ. ಇಂತಹ ಆರೋಗ್ಯದ ಸಂಪಾದನೆಯಿಂದ ಶಕ್ತಿವಂತ ಸ್ತ್ರೀಯರಿಗೆ ಸುಲಭವಾದ ಮಾತೃತ್ವವನ್ನು ತಾನಾಗಿಯೇ ದೊರಕಿಸಿಕೊಳ್ಳಬಹುದು. ನಿಮಗೆ ಮಕ್ಕಳಿಲ್ಲವೇ?

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್‍ಸಿನಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಕೆಳಗೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಪಟ್ಟಿಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. ೭-೪-೦.

ದಿ ರಿಪ್ರಸೆಂಟೇಟಿವ್,
ಪೋಸ್ಟ್ ಬಾಕ್ಸ್ 720, ಮುಂಬಯಿ.

ದಾದಾ ಎಂಡ್ ಕೋ.,
260 ಚೈನಾ ಬಜಾರ್ ರೋಡು, ಮದರಾಸ್.

8A

ಹಿಂದೂಸ್ಥಾನೀ ಸೇವಾದಳದ ಶಿಕ್ಷಣ ಶಿಬಿರ.

ತುಮಕೂರು (ಮೈಸೂರು ಸಂಸ್ಥಾನ)

ಹಿಂದೂಸ್ಥಾನೀ ಸೇವಾದಳದ ಕರ್ನಾಟಕ ಶಾಖೆಯ ಶಾರೀರಿಕ ಶಿಕ್ಷಣ ಶಿಬಿರವು ಈ ಸಾರಿ ತುಮಕೂರಿನಲ್ಲಿಯೇ ೧ನೆಯ ತಾರೀಖಿನಿಂದ ೩೧ನೇ ತಾರೀಖಿನ ವರೆಗೆ ನಡೆಯುವದು. ಶ್ರೀಯುತರಾದ ಕೆ. ರಂಗಾಯ್ಯಂಗಾರ್, ಸೆಟ್ಲರ ಟಿ. ಸುಬ್ರಮಣ್ಯಂ ಇವರಿಂದ ಕೂಡಿದ ಒಂದು ಸ್ಥಳೀಯ ಶಿಬಿರ ವ್ಯವಸ್ಥಾಪಕ ಮಂಡಳವು ಸ್ಥಾಪಿಸಲ್ಪಟ್ಟಿದೆ.

ಈ ಶಿಬಿರದಲ್ಲಿ ಲಾಠಿ, ಬೇತ್ತು, ಭಾಲಾ, ಜಂಬಿಯಾ, [illegible], ಕುಸ್ತಿ, ಮಲ್ಲಖಂಬ, ನಮಸ್ಕಾರ ಯೋಗಾಸನ ಮೊದಲಾದವುಗಳಲ್ಲಿ ಶಾರೀರಕ ಶಿಕ್ಷಣವೂ, ಬ್ರಹ್ಮಚರ್ಯ, ಹಿಂದೂಸ್ಥಾನದ ಇತಿಹಾಸ, ಕಾಂಗ್ರೆಸದ ಇತಿಹಾಸ, ನಾಗರೀಕ ಶಾಸ್ತ್ರ, ಪ್ರಥಮ ಚಿಕಿತ್ಸೆ ಮೊದಲಾದವುಗಳಲ್ಲಿ ಬೌದ್ಧಿಕ ಶಿಕ್ಷಣವೂ ಕೊಡಲ್ಪಡುವದು.

(೧) ಶಿಬಿರಕ್ಕೆ ಬರತಕ್ಕವರು ಕೆಳಗೆ ಕಾಣಿಸಿದ ಸಾಮಾನುಗಳನ್ನು ತರತಕ್ಕದ್ದು.

(ಅ) ಹಾಸಿಗೆ, ಹಾಸಿಗೆ ಹೊದ್ದಿಗೆ ಉಡಿಗೆ ತೊಡಿಗೆಗಳು (ಕೇವಲ ಅವಶ್ಯವಾದಷ್ಟು ಮಾತ್ರ ತರಬೇಕು.)

(ಆ) ಊಟದ ತಟ್ಟೆ ಮತ್ತು ಕುಡಿಯುವ ಪಾತ್ರೆ.

(ಇ) ಖಾಕಿ ಸಮವಸ್ತ್ರ(Uniforms)ಗಳು.

(I) ಟೋಪಿ.

(II) ಬನಿಯನ್ (ಭುಜಪಟ್ಟಿ) ಎರಡು ಕಿಸೆಗಳಿರಬೇಕು. ಕಾಲರ್ ಇರಕೂಡದು.

(III) ಅರ್ಧ ಚಲ್ಲಣ.

(IV) ಕಾಚ.

(೨) ಶಿಬಿರ ಸಂಬಂಧದ ಎಲ್ಲಾ ಪತ್ರವ್ಯವಹಾರವನ್ನು ಶ್ರೀ ಕೆ. ರಂಗಾಯ್ಯಂಗಾರ ಬಿ. ಎ. ಎಲ್. ಎಲ್. ಬಿ. ಅಡ್ವೋಕೇಟ ತುಮಕೂರ ಇವರೊಡನೆಯೇ ನಡೆಸತಕ್ಕದ್ದು. ಮತ್ತು ಶಿಬಿರಕ್ಕೆ ಬರತಕ್ಕವರು ತಮ್ಮ ಅರ್ಜಿಗಳನ್ನು ಶಿಬಿರದ ಖರ್ಚಿನ ಸಲುವಾಗಿ ೫೦ ರೂಪಾಯಿಗಳನ್ನು ಶ್ರೀ ರಂಗಾಯ್ಯಂಗಾರರಿಗೆ ೨೦-೪-'೩೯ರೊಳಗೆ ಮುಟ್ಟುವಂತೆ ಕಳುಹಿಸತಕ್ಕದ್ದು.

(೩) ಶಿಬಿರಕ್ಕೆ ಬರತಕ್ಕವರು ತುಮಕೂರಿಗೆ ತಾ. ೩೦-೪-'೩೯ರ ರಾತ್ರಿಗೆ ಮೊದಲು ಬರಬೇಕಾಗುವದು.

(೪) ಶಿಬಿರದ ಮೂಲಕ ಉತ್ತರವನ್ನು ಬಯಸುವವರು ಅದರ ಖರ್ಚನ್ನು ಮೊದಲೇ ಕಳುಹಿಸಬೇಕು.

(೫) ಶಿಬಿರಕ್ಕೆ ಬರಲಿಚ್ಛಿಸುವವರು ಶಿಬಿರದ ವ್ಯಾಯಾಮವನ್ನು ಸಹಿಸಲು ಸಮರ್ಥರಾಗುವಂತೆ ಈಗಿನಿಂದ ದಿನಾಲುದಿನ ವ್ಯಾಯಾಮವನ್ನು ಮಾಡುತ್ತಿರಬೇಕು.

ಮೇ ೧ನೇ ಶಿಬಿರದ ಪ್ರಾರಂಭೋತ್ಸವವು ಶ್ರೀ ಶ್ರೀನಿವಾಸ ರಾವ ಕೌಜಲಗಿ ಬಿಜಾಪುರ ಇವರ ಅಧ್ಯಕ್ಷತೆಯಲ್ಲಿ ನಡೆಯುವದು.

ಹುಬ್ಬಳ್ಳಿ, ೧೫-೪-'೩೯

ನಾ. ಸು. ಹರ್ಡೀಕರ,
ಕಾರ್ಯದರ್ಶಿ,
ಹಿಂದೂಸ್ಥಾನೀ ಸೇವಾದಲ.

ಬೆಳಗಾಂವಿಯಲ್ಲಿ ಇತಿಹಾಸ ಪ್ರದರ್ಶನ.

ಕರ್ನಾಟಕ ಇತಿಹಾಸ ಭಕ್ತರಿಗೆ ವಿನಂತಿ.

ಬೆಳಗಾಂವಿಯಲ್ಲಿ ಇದೇ ಮೇ ತಿಂಗಳ ಕಡೇ ವಾರದಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನವೂ ಕರ್ನಾಟಕಕ್ಕೆ ಸಂಬಂಧಿಸಿದ ಬೇರೆ ಪರಿಷತ್ತುಗಳೂ ಕೂಡುವವೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಆ ಕಾಲಕ್ಕೆ ಒಂದು ಇತಿಹಾಸ ಸಭೆಯನ್ನೂ ಇತಿಹಾಸ ಪ್ರದರ್ಶನವನ್ನೂ ಏರ್ಪಡಿಸಬೇಕೆಂದು ಗೊತ್ತಾಗಿದೆ.

ಇತಿಹಾಸ ಸಭೆಯಲ್ಲಿ ಕರ್ನಾಟಕದ ಇತಿಹಾಸದ ವಿಷಯಕ್ಕೆ ನಿಬಂಧಗಳು ಓದಲ್ಪಡುವವು. ಪ್ರದರ್ಶನದಲ್ಲಿ ಶಿಲ್ಪಗಳ (ಶಿಲಾಲೇಖ)ಗಳ ಮಸ್ತಕಗಳು, ನಾಣ್ಯಗಳು, ಕೈಬರಹಗಳು, ಫಲಕಗಳು, ಐತಿಹಾಸಿಕ ಸ್ಥಳಗಳ ಮತ್ತು ವ್ಯಕ್ತಿಗಳ ಭಾವಚಿತ್ರಗಳು ಮತ್ತು ಬೇರೆ ಐತಿಹಾಸಿಕ ವಸ್ತುಗಳು ಸಂಗ್ರಹಿಸಲ್ಪಡುವವು.

ಕಾರಣ ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ವಸ್ತುಗಳೇನಾದರೂ ಯಾರ ಕಡೆಗೂ ಇದ್ದರೆ ಅವನ್ನು ನಮ್ಮ ಕಡೆಗೆ ಪ್ರದರ್ಶನದಲ್ಲಿ ಉಪಯೋಗಿಸುವದಕ್ಕಾಗಿ ಕಳಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ. ಅವನ್ನು ಪ್ರದರ್ಶನ ಮುಗಿದ ನಂತರ ಸುರಕ್ಷಿತವಾಗಿ ಮುಟ್ಟಿಸುವ ಹೊಣೆಯನ್ನು ನಾವು ಹೊರುವೆವು.

ಅದರಂತೆ ಇತಿಹಾಸ ಸಭೆಯಲ್ಲಿ ಓದಲು ನಿಬಂಧವನ್ನು ಇತಿಹಾಸ ಸಂಶೋಧಕರು ಬರೆಯಬೇಕೆಂದು ಬಿನ್ನವಿಸುತ್ತೇವೆ.

ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಗ್ರಂಥಗಳ ಪಟ್ಟಿಯೊಂದನ್ನು ಪ್ರಸಿದ್ಧಿಸುವ ವಿಚಾರವಿದೆ. ತಮಗೆ ಗೊತ್ತಿದ್ದ ಗ್ರಂಥಗಳ ಹೆಸರು, ಗ್ರಂಥಕಾರರ ಹೆಸರು, ಗ್ರಂಥಗಳು ಪ್ರಸಿದ್ಧವಾದ ಮಿತಿಯೊಡನೆ ತಿಳಿಸಬೇಕು. ಅಂತಹ ಗ್ರಂಥಗಳೇನಾದರೂ ತಮ್ಮ ಕಡೆಗೆ ಇದ್ದರೆ ಇತಿಹಾಸ ಭಕ್ತರು ಅವುಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಬೇಕೆಂದು ಬಿನ್ನವಿಸುತ್ತೇವೆ.

ಕರ್ನಾಟಕ ಇತಿಹಾಸದ ಅಭಿಮಾನಿಗಳೆಲ್ಲರೂ ಮೇಲೆ ಬರೆದ ವಿಷಯಗಳಲ್ಲಿ ತಮಗೆ ಶಕ್ಯವಿದ್ದವುಗಳನ್ನು ಸ್ವೀಕರಿಸಿ ದಯಮಾಡಿ ಶೀಘ್ರವೇ ನಮ್ಮ ಕಡೆಗೆ ಪತ್ರ ಬರೆದು ತಿಳಿಸಬೇಕೆಂದು ಬಿನ್ನವಿಸುವ,

ಕನ್ನಡಿಗರ ನಮ್ರ ಸೇವಕರಾದ,
ರಾಜಪುರೋಹಿತ ನಾರಾಯಣರಾಯರು,
ಸಾಲಿ ರಾಮಚಂದ್ರರಾಯರು,
ದತ್ತಾತ್ರೇಯ ಕರಮರಕರ,
ಕಾರ್ಯದರ್ಶಿಗಳು.

ವಿ ಸೂ. ಪತ್ರವ್ಯವಹಾರವನ್ನು ಕಾರ್ಯದರ್ಶಿ, ಕರ್ನಾಟಕ ಇತಿಹಾಸ ಮಂಡಳ ಧಾರವಾಡ ಈ ವಿಳಾಸಕ್ಕೆ ಬರೆಯಬೇಕು.